ಸಮಗ್ರ ದಾಸ ಸಾಹಿತ್ಯ

ಸಂಪುಟ : ೧೦ - ಭಾಗ ೨



ಶ್ರೀ ವಿಜಯದಾಸರ ಸುಳಾದಿಗಳು
(ಆತ್ಮನಿವೇದನೆ)

ಸಮಗ್ರ ದಾಸ ಸಾಹಿತ್ಯ

ಸಂಪುಟ : ೧೦

ಭಾಗ - ೨

ಶ್ರೀ ವಿಜಯದಾಸರ ಸುಳಾದಿಗಳು

ಆತ್ಮನಿವೇದನೆ

ಸಂಪಾದಕರು

ಡಾ. ಕೆ. ಗೋಕುಲನಾಥ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA SAMPUTA - 10 Part- 2 :
Sri Vijayadasara Suladigalu - Athmanivedane Edited by Dr. K.Gokulnath and Published by Sri. Y.K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 88 + ೫೨೨
© ಕರ್ನಾಟಕ ಸರ್ಕಾರ

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿದೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ವಿಷಯ		ಪುಟ
೧. ಮುನ್ನುಡಿ		5
೨. ಎರಡು ಮಾತು		7
೩. ಯೋಜನೆಯ ಕುರಿತು		9
೪. ಪ್ರಕಾಶಕರ ಮಾತು		11
೫. ಸಂಪಾದಕ ಮಂಡಳಿಯ ನುಡಿ		13
೬. ಪ್ರಸ್ತಾವನೆ		23
೭. ಸುಳಾದಿಗಳ ಕ್ರಮಸೂಚಿ		47
೮. ಸುಳಾದಿಗಳು (ಆತ್ಮನಿವೇದನೆ)		೩–೪೫೧
೧. ಭಕ್ತ್ಯಾತ್ಮಕ ಸುಳಾದಿಗಳು	*೩–೨೩೬*	
೨. ನಿವೇದನಾತ್ಮಕ ಸುಳಾದಿಗಳು	*೨೩೭–೪೫೧*	
೯. ಅನುಬಂಧಗಳು		
೧. ಕಠಿಣಶಬ್ದಗಳ ಅರ್ಥ	*೪೫೫–೪೬೨*	
೨. ಟಿಪ್ಪಣಿಗಳು	*೪೬೩–೫೧೪*	
೩. ಸುಳಾದಿಗಳ ಅಕಾರಾದಿ	*೫೧೫–೫೨೧*	
೧೦. ಸಹಾಯಕ ಸಾಹಿತ್ಯ		೫೨೨

ಪ್ರಸ್ತಾವನೆ

ಸಮಗ್ರ ಹರಿದಾಸ ಸಾಹಿತ್ಯ ಪ್ರಕಟನೆಯ ಯೋಜನೆಯೊಂದನ್ನು ಸರ್ಕಾರದ ಮಂಜೂರಾತಿಗಾಗಿ ಹರಿದಾಸ ಸಾಹಿತ್ಯಾಸಕ್ತರು ಕಳುಹಿಸಿರುವ ಸಂಗತಿ ತಿಳಿದಾಗ ಆಶ್ಚರ್ಯ – ಆನಂದಗಳು ಒಮ್ಮೆಲೇ ಉಂಟಾದವು. ದಾಸ ಸಾಹಿತ್ಯಾಭಿಮಾನಿಗಳ ಸತತ ಪ್ರಯತ್ನದ ಫಲವಾಗಿ ಈ ಯೋಜನೆಗೆ ಮಂಜೂರಾತಿ ದೊರೆತು ನನಗೆ ವಿಜಯದಾಸರ ಸುಳಾದಿಗಳನ್ನು ಸಂಪಾದಿಸಿ ಕೊಡುವ ಜವಾಬ್ದಾರಿಯನ್ನು ವಹಿಸಿದಾಗ ಒಂದು ಕಡೆ ಆನಂದ ಮತ್ತೊಂದು ಕಡೆ ಈ ಕಾರ್ಯವನ್ನು ಸಕಾಲದಲ್ಲಿ ಮಾಡಲು ಸಾಧ್ಯವಾಗದೆಂಬ ಅಂಜಿಕೆ ಉಂಟಾದರೂ ನಾನು ವಿಶೇಷ ಅಧ್ಯಯನಕ್ಕಾಗಿ ವಿಜಯದಾಸರ ಜೀವನ ಮತ್ತು ಕೃತಿಗಳನ್ನು ಆರಿಸಿಕೊಂಡ ಕಾರಣದಿಂದಲೂ ವೈಯಕ್ತಿಕವಾಗಿ ದಾಸ ಸಾಹಿತ್ಯವನ್ನು ಓದುವುದರಲ್ಲಿಯೂ, ಅಧ್ಯಯನ ಮಾಡುವುದರಲ್ಲಿಯೂ ವಿಶೇಷ ಸುಖವೊಂದನ್ನು ಅನುಭವಿಸುವ ಚೈತನ್ಯವಿರುವುದರಿಂದಲೂ ಈ ಕಾರ್ಯಕ್ಕೆ ಒಪ್ಪಿಗೆಯನ್ನು ಕೊಟ್ಟು ಇದೀಗ ವಿಜಯದಾಸರ ಸುಳಾದಿಗಳ ಎರಡನೆಯ ಸಂಪುಟವಾದ ಆತ್ಮನಿವೇದನೆಯನ್ನು ಓದುಗರ ಕೈಗಿಡುತ್ತಿರುವುದಕ್ಕಾಗಿ ಹರ್ಷಿಸುತ್ತಿದ್ದೇನೆ.

ಹರಿದಾಸ ಸಾಹಿತ್ಯ ವಲಯದಲ್ಲಿ ವಿಜಯದಾಸರನ್ನು ಸುಳಾದಿದಾಸರು ಎಂದೇ ಕರೆಯುತ್ತಾರೆ. ಏಕೆಂದರೆ ಇವರು ರಚಿಸಿದಷ್ಟು ಸಂಖ್ಯೆಯಲ್ಲಿ ಸುಳಾದಿಗಳನ್ನು ಇವರ ಹಿಂದಿನ ಅಥವಾ ಮುಂದಿನ ಹರಿದಾಸರು ರಚಿಸಿಲ್ಲ. ಸುಳಾದಿ ಎಂಬುದು ಸಂಗೀತದ ಪಾರಿಭಾಷಿಕ ಶಬ್ದ. ಇದನ್ನು ತಾಳಮಾಲಿಕೆ ಎನ್ನಬಹುದು. ಸಾಮಾನ್ಯವಾಗಿ ಐದು ವಿವಿಧ ತಾಳಗಳಲ್ಲಿ ಒಂದೊಂದು ನುಡಿ ರಚನೆಯಾಗಿ ಕೊನೆಯಲ್ಲಿ ಎರಡು ಸಾಲುಗಳ ಜತೆ / ಜೊತೆ ಎಂಬುದಿರುತ್ತದೆ.

ಪ್ರತಿಯೊಂದು ನುಡಿಯು ಕೊನೆಗೂ ಹರಿದಾಸರ ಅಂಕಿತವಿರುತ್ತದೆ. ಸಾಮಾನ್ಯವಾಗಿ ಐದು ನುಡಿಗಳಿರುವುದನ್ನು ಕಾಣಬಹುದಾದರೂ ಏಳು, ಒಂಭತ್ತು, ಹನ್ನೆರಡು ನುಡಿಗಳಿರುವ ಸುಳಾದಿಗಳೂ ಉಂಟು. ಏಳು ನುಡಿಗಳನ್ನು ಮೀರಿದ ಸಂದರ್ಭದಲ್ಲಿ ತಾಳಗಳು ಪುನರಾವೃತ್ತಿಗೊಳ್ಳುತ್ತವೆ. ಈ ಎಲ್ಲ ನುಡಿಗಳನ್ನು ಒಂದೇ ರಾಗದಲ್ಲಿ ಹಾಡಬೇಕು. ಸಾಮಾನ್ಯವಾಗಿ ರಾಗ ತಾಳಗಳ ನಿರ್ದೇಶನ ಉಂಟು (ಭಗವಂತನು) ಸುಳಿದರೆ ಸುಳಾದಿ ; ಭಗವಂತನನ್ನು ಕಾಣಲು ಸುಳುವಾದ (ಸುಲಭವಾದ) ಹಾದಿಯೇ ಸುಳಾದಿ ಎಂಬುದಾಗಿ ಭಾವುಕರು ಹೇಳುವುದಾದರೂ ಸುಳಾದಿ ಶಬ್ದದ ಮೂಲ ರೂಪ ಸೂಡಾದಿ ಎಂದೆನ್ನಬಹುದು. ಹರಿದಾಸರು ಕೀರ್ತನೆಯ ಮೂಲಕ ಭಗವದ್ವಿಚಾರಗಳನ್ನು ಸರಳವಾಗಿ ತಿಳಿಸಿರುವುದಾದರೆ ಸುಳಾದಿಯ ಮೂಲಕ ಪ್ರೌಢಿಮೆಯನ್ನು ಮೆರೆದಿರುವರು. ಸುಳಾದಿಗಳು ಗಾತ್ರದ ದೃಷ್ಟಿಯಿಂದ ಹಿರಿದಾದ ಕಾರಣ ನೆನಪಿನಲ್ಲಿ ಸುಲಭವಾಗಿ ಉಳಿಯುವುದಿಲ್ಲ. ಕಥೆ, ತತ್ವ, ಪ್ರಮೇಯ, ಸಂಸ್ಕೃತದ ಉದ್ಧರಣೆಗಳು ಸುಳಾದಿಯಲ್ಲುಂಟು. ಗೇಯತೆಯ ಕೊರತೆಯನ್ನು ಗದ್ಯತೆಯ ಮೇಲ್ಮೆಯನ್ನು ಸುಳಾದಿಯಲ್ಲಿ ಗುರುತಿಸಬಹುದಾಗಿದೆ. ಆದರೂ ಇವು ಸಂಗೀತ ಬದ್ಧ ರಚನೆಗಳೇ ಆಗಿವೆ. ಸುಳಾದಿಗಳಲ್ಲಿ ಆದಿ ಪ್ರಾಸವನ್ನು ರಕ್ಷಿಸಲಾಗಿದೆ. ಇದು ನುಡಿ ಬದಲಾದಂತೆ ಬದಲಾಗುತ್ತದೆ.

ವಿಜಯದಾಸರಿಂದ ರಚನೆಗೊಂಡ ಐದುನೂರಕ್ಕೂ ಅಧಿಕ ಸುಳಾದಿಗಳು ದೊರೆತಿದ್ದು ಸಾಮಾನ್ಯವಾಗಿ ಸುಳಾದಿಯ ಗಾತ್ರ ಮೂರು ಪುಟಗಳಿಂದ ಆರು ಪುಟಗಳಿರುವುದರಿಂದ ಇದನ್ನು ಒಂದೇ ಸಂಪುಟದಲ್ಲಿ ಕೊಡುವುದು ಅಸಾಧ್ಯ ಕಾರ್ಯವೆನಿಸಿದ ನಿಮಿತ್ತ ವಿಷಯಾನುಸಾರ ನಾಲ್ಕು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸುವುದು ಉಚಿತವೆನಿಸಿತು. ಈ ಸಂಗತಿಯನ್ನು ಸಮಗ್ರ ದಾಸ ವಾಙ್ಮಯ ಯೋಜನೆ ಪ್ರಕಟನೆ ಕಾರ್ಯನಿರ್ವಾಹಕ ಸಂಪಾದಕರಾದ ಡಾ॥ ಟಿ.ಎನ್. ನಾಗರತ್ನ ಅವರಿಗೆ ತಿಳಿಸಿದಾಗ ಅವರು ಸಮಿತಿಯ ಮುಂದೆ ಈ ವಿಷಯವನ್ನಿಟ್ಟು ಒಪ್ಪಿಗೆ ಸೂಚಿಸಿರುವರು. ಇದರ ಫಲವಾಗಿ ಈ ಎರಡನೆಯ ಸಂಪುಟದಲ್ಲಿ ವಿಜಯದಾಸರ ಸುಳಾದಿಗಳಲ್ಲಿ ಆತ್ಮನಿವೇದನಾತ್ಮಕ ಅಂಶಗಳಿರುವ ಸುಳಾದಿಗಳನ್ನು ಸಂಗ್ರಹಿಸಿ ಒಟ್ಟು ಒಂದು ನೂರಾ ಅರವತ್ತೆರಡು ಸುಳಾದಿಗಳನ್ನು ಲಘು

ಟಿಪ್ಪಣಿಯೊಡನೆ ಸಂಗ್ರಹಿಸಲಾಗಿದೆ. ಈ ಸುಳಾದಿಗಳನ್ನು ರಚಿಸಿದ ವಿಜಯದಾಸರ ಜೀವನ ಹಾಗೂ ಈ ಸುಳಾದಿಗಳ ಆಶಯವನ್ನು ತಿಳಿಯೋಣ.

ವಿಜಯದಾಸರ ಜೀವನ ಪರಿಚಯ

ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ಮಾನವಿ ಎಂಬ ತಾಲೂಕಿನ ಬಳಿ ಚೀಕಲಪರಿವಿ ಎಂಬ ಗ್ರಾಮ ಇಂದಿಗೂ ಉಂಟು. ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಶ್ರೀನಿವಾಸಪ್ಪ ಕೂಸಮ್ಮ ಎಂಬ ಬ್ರಾಹ್ಮಣ ಮನೆತನದ ಮಾಧ್ವ ದಂಪತಿಗಳು ಇಲ್ಲಿ ವಾಸವಾಗಿದ್ದರು. ಭಾರದ್ವಾಜಗೋತ್ರದ ಋಕ್ ಶಾಖೆಗೆ ಸೇರಿದ ಈ ವೈಷ್ಣವರು ಬಹು ಬಡವರಾದರೂ ಹರಿಭಕ್ತಿಗೆ ಇವರಲ್ಲಿ ಬಡತನ ವಿರಲಿಲ್ಲ. ಆದರೆ ಬಹುಕಾಲವಾದರೂ ಇವರಿಗೆ ಪುತ್ರಯೋಗ ಉಂಟಾಗದಿದ್ದುದರಿಂದ ಆ ಚಿಂತೆ ಅವರ ಮನಸ್ಸನ್ನು ಕಾಡುತ್ತಿತ್ತು. ಭಗವದ್ಭಕ್ತರಾಗಿ ಆಸ್ತಿಕರೆನಿಸಿಕೊಂಡ ಈ ದಂಪತಿಗಳು ಸತ್ಪುತ್ರನೊಬ್ಬನನ್ನು ಪಡೆಯಲೆಂದು ಗ್ರಾಮದ ಬಳಿಯಲ್ಲಿಯೇ ಹರಿಯುತ್ತಿದ್ದ ಮಂಗಲಕರವಾದ ತುಂಗಭದ್ರಾ ನದಿಯಲ್ಲಿ ಮಿಂದು ಅಲ್ಲಿಯೇ ಇದ್ದ ಅಶ್ವತ್ಥನಾರಸಿಂಹನ ಸೇವೆಯನ್ನು ಮಾಡಲಾರಂಭಿಸಿದರು. ಶ್ರೀ ನರಸಿಂಹನ ವರಪ್ರಸಾದದಿಂದ ಕೆಲಕಾಲದಲ್ಲಿ ಅವರು ಒಬ್ಬ ಮಗನನ್ನು ಶಾಲಿವಾಹನ ಶಕ ೧೬೦೪ನೆಯ ರುಧಿರೋದ್ಗಾರಿ ಸಂವತ್ಸರದಲ್ಲಿ ಪಡೆದರು. ಜನಿಸಿದ ಮಗು ಹರಿಭಕ್ತನಾಗಲೆಂದೇ ದಾಸಪ್ಪ ಎಂದು ನಾಮಕರಣ ಮಾಡಿದರು. ಈ ದಾಸಪ್ಪನೆ ಶ್ರೀ ವಿಜಯದಾಸರೆಂದು ಪ್ರಸಿದ್ಧಿಯಾದರು.

ಶ್ರೀ ವಿಜಯದಾಸರ ಕಾಲ ಕ್ರಿ.ಶ. ೧೬೮೭ ರಿಂದ ೧೭೫೫ ಎಂದು ಹೇಳುವವರುಂಟು.

ದಾಸಪ್ಪನ ಜನನದಿಂದ ತಾಯ್ತಂದೆಯರಿಗೆ ಮನಸ್ಸಂತೋಷವಾದರೂ ಅವರ ದಾರಿದ್ರ್ಯವೇನೂ ಬಗೆಹರಿಯಲಿಲ್ಲ. ದಿನ ಕಳೆದಂತೆ ಕಷ್ಟ ಹೆಚ್ಚಾದವು. ಸಂಸಾರ ದೊಡ್ಡದಾಗಿ ಹುಡುಗನಿಗೆ ವಿದ್ಯಾಭ್ಯಾಸವು ಸರಿಯಾಗಿ ದೊರೆಯಲಿಲ್ಲ. ಬಾಲಕನಾದ ದಾಸಪ್ಪ ಬೆಳೆದಂತೆ ಮನೆಯವರ ದಾರಿದ್ರ್ಯವೂ ಬೆಳೆಯಿತು. ಊರಿನಲ್ಲಿ ಇವರ ದಾರಿದ್ರ್ಯವನ್ನು ಕಂಡು ಜನರು ದಾಸಪ್ಪನನ್ನು ತಿರಸ್ಕಾರದಿಂದ

'ಕೂಸಿ ಮಗ ದಾಸ' ಎಂದು ಅವಹೇಳನೆ ಮಾಡಲಾರಂಭಿಸಿದರು. ಎಷ್ಟು ದುಡಿದರೂ ಹೊಟ್ಟೆ ತುಂಬುವಷ್ಟು ಊಟವಿರಲಿ, ಒಂದು ಸೌಟಿನ ತುಂಬ ಗಂಜಿಯೂ ದೊರೆಯದಂತಹ ಪರಿಸ್ಥಿತಿ ಉಂಟಾಯಿತು. ಸಂಜೆತನಕವಿದ್ದು ಸಣ್ಣ ಸೌಟಿನ ತುಂಬಾ ಗಂಜಿ ಕಾಣದೆ ಬಳಲಿದೆನೋ ಎಂದು ವಿಜಯದಾಸರು ತಮ್ಮ ಹಿಂದಿನ ಪರಿಸ್ಥಿತಿಯನ್ನು ಒಂದು ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಜೀವನದ ಆರ್ಥಿಕಸ್ಥಿತಿ ಇಷ್ಟು ಮುಗ್ಗಟ್ಟಿನಲ್ಲಿದ್ದರೂ ಕಾಲಕಾಲಕ್ಕೆ ಮಾಡಬೇಕಾದ ಧಾರ್ಮಿಕ ವಿಧಿಗಳನ್ನು ನೆರವೇರಿಸುವುದು ಪ್ರಾಚೀನ ಭಾರತೀಯರ ಸಂಪ್ರದಾಯ ವಾಗಿದ್ದುದರಿಂದ ಯೋಗ್ಯ ವಯಸ್ಸಿನಲ್ಲಿ ಬ್ರಹ್ಮೋಪದೇಶವೂ, ಅನಂತರ ಕೆಲವು ವರ್ಷಗಳಲ್ಲಿ ಅರಳಮ್ಮ ಎಂಬ ಬಾಲಕಿಯೊಡನೆ ದಾಸಪ್ಪನ ವಿವಾಹವೂ ಆಯಿತು. ಆದರೆ ದಾರಿದ್ರ್ಯಕ್ಕೆ ವಿವಾಹ ಎಂದು ತಾನೆ ಮದ್ದಾದೀತು?

ಇದರಿಂದ ದಾರಿದ್ರ್ಯ ಅಧಿಕವಾಯಿತೇ ವಿನಾ ಪರಿಹಾರವಾಗಲಿಲ್ಲ. ಸಂಸಾರವನ್ನು ನೀಗಲಾರದೆಯೋ ಏನೋ ದಾಸಪ್ಪ ಮನೆಯಲ್ಲಿ ಯಾರಿಗೂ ತಿಳಿಸದೆ ತಂದೆ–ತಾಯಿಗಳನ್ನೂ ಕೈಹಿಡಿದ ಪತ್ನಿಯನ್ನೂ ಬಿಟ್ಟು ಮನ ಬಂದಲ್ಲಿಗೆ ತನ್ನ ಹದಿನಾರನೆಯ ವಯಸ್ಸಿನಲ್ಲಿ ಹೊರಟು ಹೋದನು. ಗೊತ್ತು ಗುರಿಗಳಿಲ್ಲದೆ ಮನೆ ಬಿಟ್ಟು ಹೊರಟ ದಾಸಪ್ಪನ ಕಾಲು ಸಂಸ್ಕಾರ ವಶದಿಂದ ತೀರ್ಥ–ಯಾತ್ರಾಟನೆಯ ಕಡೆ ಓಲೈಸಿತು. ಆದರೆ ದುರದೃಷ್ಟಕರವಾದ ಜೀವನವನ್ನು ಎದುರಿಸಬೇಕಾದವರು ಎಲ್ಲಿ ಹೋದರೇನು? ವಿಧಿ ಎಲ್ಲೆಲ್ಲಿಯೂ ಹಿಂಬಾಲಿಸಬಹುದು 'ಕಾಶಿಗೆ ಹೋದರೂ ಶನೀಶ್ವರ ಬಿಡ' ಎಂಬಂತೆ ದಾರಿಯಲ್ಲಿ ಕಳ್ಳರು ದಾಸಪ್ಪನ ಹತ್ತಿರವಿದ್ದ ವಸ್ತ್ರಗಳನ್ನೂ ಕೈಯಲಿದ್ದ ಪದಾರ್ಥಗಳನ್ನೂ ಬಿಡದೆ ಅಪಹರಿಸಿದರು. ಚೋರರಿಂದ ಇದ್ದ ಪದಾರ್ಥಗಳನ್ನೆಲ್ಲ ಕಳೆದುಕೊಂಡು ದಾಸಪ್ಪ ಭರತ ಖಂಡದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಭಕ್ತನ ವೇಷವನ್ನು ತಾಳಿ ಭಕ್ತರ ಗುಂಪೊಂದನ್ನು ಸೇರಿ ಅವರೊಡನೆ ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿದನು. ಆಗ ದಾಸಪ್ಪ ನೀಳವಾದ ಗಡ್ಡ ಮೀಸೆಗಳನ್ನು ಬಿಟ್ಟು ಜಟಾಧಾರಿಯಾಗಿ ನಾಲ್ಕುವರ್ಷಗಳ ಕಾಲ ಭಕ್ತರೊಡನೆ ಸಂಚರಿಸುತ್ತಾ ಕಾಲ ಕಳೆದನು.

ಪ್ರಪಂಚದಲ್ಲಿ ಅನೇಕರು ಭಕ್ತರ ವೇಷವನ್ನು ಹಾಕಿಕೊಂಡು ದೇವರ ಸ್ಮರಣೆಯನ್ನು ಮಾಡುತ್ತಾ, ಹಲವು ಕೃತಿಗಳನ್ನು ತಮ್ಮ ಮನಬಂದಂತೆ ಹಾಡುತ್ತಾ ಹಣವನ್ನು ಸಂಪಾದಿಸಿ ಅದನ್ನೇ ಜೀವನ ವೃತ್ತಿಯನ್ನಾಗಿಸಿಕೊಳ್ಳುವುದುಂಟು. ಅಂತಹವರಿಗೆ ದೇವರಲ್ಲಿ ಹೆಚ್ಚಿನ ಜ್ಞಾನವಾಗಲೀ, ಭಕ್ತಿಯಾಗಲೀ ಇರದೆ, ಕೇವಲ ಧನ ಸಂಪಾದನೆಯ ಮಾಧ್ಯಮವನ್ನಾಗಿ ಭಗವನ್ನಾಮಸ್ಮರಣೆ ಮಾಡುವುದು ದಿನನಿತ್ಯದ ಕಾರ್ಯವಾಗಿರುತ್ತದೆ. ದಾಸಪ್ಪನೂ ತಾನು ದಾಸನೆಂದು ಹೇಳಿಕೊಂಡು, ಕೇವಲ ಉದರಪೋಷಣೆಗಾಗಿಯೇ ಕಪಟವೇಷವನ್ನು ಹಾಕಿಕೊಂಡು ಧನ ಸಂಪಾದನೆಗಾಗಿ ಕಾಶಿ, ರಾಮೇಶ್ವರ ಯಾತ್ರೆ ಮಾಡಿದವರೆಂದು ಸುಳ್ಳು ಹೇಳಿ ಜೀವನ ಮಾಡಿದ ವಿಚಾರವನ್ನು ವಿಜಯದಾಸರಾದ ಮೇಲೆ ಶ್ರೀ ಹರಿಯ ಕೃಪೆಯಿಂದ ಮೈ ಪುಳಕಗೊಂಡಾಗ ಮರೆಮಾಚದೆ ಹೇಳಿಕೊಂಡಿರುವುದಲ್ಲದೆ ತಮ್ಮ ಹಿಂದಿನ ಜೀವನವನ್ನು ನೆನೆಸಿಕೊಂಡು ಅಂತಹ ಕಾರ್ಯ ನಡೆದುಹೋದುದಕ್ಕಾಗಿ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸಿದ್ದಾರೆ.

ಬಂದೆನೂ ಭವರೋಗ ಬಂಧನದೊಳಗೆ
ದಾಸನು ನಾನೆಂದು ಧರಣಿಯೊಳಗೆ ಮಾಯ
ವೇಷವನು ಧರಿಸಿ ವ್ಯವಹಾರ ಮಾಡುತ್ತ
ಕಾಸು ಕಾಸಿಗೆ ಕಾಲು ಸುಟ್ಟ ಬೆಕ್ಕಿನಂತೆ
ದೇಶದೊಳಗೆನ್ನ ಸರಕನು ತೋರುತ್ತಾ
ಕಾಶಿ ರಾಮೇಶ್ವರದ ಯಾತ್ರೆಗೆ ಪೋದ ವಿ
ಶೇಷರು ನಾವೆಂದು ಸಟೆಯ ಪೇಳಿ
ದೋಷಕ್ಕೆ ಗುರಿಯಾದೆ ವಿಜಯ ವಿಠ್ಠಲ ತಂದೆ
ನೀ ಸುಲಭನೆಂದು ಎಣಿಸದೆ ಗುಣಿಸದೆ

ದಾಸಪ್ಪ ಯಾತ್ರೆಯನ್ನು ಮುಗಿಸಿಕೊಂಡು ತನ್ನ ೨೦ನೆಯ ವಯಸ್ಸಿನಲ್ಲಿ ಚೀಕನಬರಿವಿಗೆ ಬಂದನು. ದಾಸಪ್ಪನ ಮನೆಯವರು ಅವರ ಗುರುತನ್ನು ಹಿಡಿದು ಮನೆಗೆ ಕರೆದುಕೊಂಡು ಹೋಗಿ ಸಂಸಾರದಲ್ಲಿ ಆಸಕ್ತನಾಗುವಂತೆ ಮಾಡಿದರೆಂದು ಶ್ರೀ ಕೇಶವವಿಠಲರು ತಿಳಿಸಿರುತ್ತಾರೆ.

ವಿಜಯರಾಯರ ಪಾದಕಮಲ ಭಜಿಸಲಾಕ್ಷಣ
ಗ್ವಿಜಯ ಮಾಡಿಸಿ ಜನರನ್ನು ಪೊರೆವನನುದಿನ,
ದಾಸಪ್ಪನೆಂಬ ನಾಮದಿಂದ ಕರೆಸುತ ಉದರ
ಗೋಸುಗದಿ ಪರರ ಬಳಿಯ ಆಶ್ರೈಸುತ
ಏಸು ಪರಿಯ ಬಡತನವು ಸೇಸಿ ದಣಿವುತ
ಕ್ಲೇಶಗೊಂಡು ಸುಲಿಸಿಕೊಂಡು ಕಾಶಿಗ್ಹೋಗುತ ೧

ವಾಸವಾಗಿ ಸನ್ಯಾಸಿ ವೇಷಧರಿಸುತ ನಿತ್ಯ
ಬ್ಯಾಸರದಲೆ ವ್ರತಗಳು ಉಪವಾಸ ಮಾಡುತ
ರಾಶಿ ರಾಶಿ ಜನರ ಕೂಡಿ ದೇಶ ಚರಿಸಿ ಮ್ಯಾಲೆ
ಕಾಶಿ ಬಿಟ್ಟು ಸೇತು ರಾಮೇಶನ್ನ ಹುಡುಕುತ್ತ ೨

ತಿರುಗಿ ತಿರುಗಿ ಚೀಕಲಾಪರಿಗೆ ಬಂದನು ಕಂಡು
ಗುರುತು ಹಿಡಿದು ಆ ಕ್ಷಣದಿ ಕರೆದು ಒಯ್ದರು
ಪರಮ ಸಂತೋಷದಿಂದ ಭರಿತರಾದರು ಮೈ
ನೆರೆದ ಶೋಭನಾದಿಗಳನು ತ್ವರಿತ ಮಾಡ್ದರು ೩

ಹೀಗೆ ತಮ್ಮ ಅರಿವಿಲ್ಲದಂತೆಯೇ ಮನೆಗೆ ಹಿಂದಿರುಗಿದ ದಾಸಪ್ಪನವರು ಶ್ರೀ ಹರಿಯ ಕೃಪೆಯಿಂದ ಹದಿನೆಂಟು ಗ್ರಾಮಗಳಿಗೆ "ಶಾನುಭೋಗರಾಗಿ" ನೇಮಕಗೊಂಡರು. ಆ ಕಾರ್ಯವನ್ನು ಹನ್ನೆರಡು ವರ್ಷಗಳ ಕಾಲ ಯಶಸ್ವಿಯಿಂದ ನಿರ್ವಹಿಸಿ ಸಂಸಾರದಲ್ಲಿ ಆಸಕ್ತರಾಗಿ ನೆಮ್ಮದಿಯ ಜೀವನವನ್ನು ಅವರು ನಡೆಸಿದರು. ಉದ್ಯೋಗಜೀವನ ಕೆಲ ಕಾಲ ಚೆನ್ನಾಗಿ ನಡೆಯಿತಾದರೂ ಆ ಕಾರ್ಯದಲ್ಲಿ ಏಳು ಬೀಳುಗಳನ್ನು ಅನುಭವಿಸುವ ಕಾಲ ಬಂದಿತು. ಸರ್ಕಾರದ ಹಣದ ಲೆಕ್ಕ ತಪ್ಪಿದ ಆಪಾದನೆ ಒಮ್ಮೆ ದಾಸಪ್ಪನ ಮೇಲೆ ಎರಗಿತು. ಆ ಹೊತ್ತಿಗೆ ಅವರ ತಂದೆಯವರು ನಿಧನರಾದುದರಿಂದ ಸಂಸಾರದ ಜವಾಬ್ದಾರಿ ಎಲ್ಲವೂ ದಾಸಪ್ಪನ ಮೇಲೆಯೇ ಒರಗಿತ್ತು. ಆರ್ಥಿಕ ಮುಗ್ಗಟ್ಟಿನಿಂದಲೂ ಮಾನಸಿಕ ಅಶಾಂತಿಯಿಂದಲೂ, ಜೀವನವನ್ನು ಎದುರಿಸುವ ಸಾಮರ್ಥ್ಯವನ್ನು ಅವರು ಕಳೆದುಕೊಂಡಾಗ ಅಪವಾದ ಅವಮಾನಗಳನ್ನು ಹೊತ್ತು ಬಾಳಲಸಾಧ್ಯವಾಗಿ

ಒಂದು ತುತ್ತನ್ನಕ್ಕಾಗಿ ಯಾಚಿಸಿದಾಗ ಅದು ದೊರಕದಿರಲು ಬೇಡುವವರಿ-ಗಾಗಬಹುದಾದ ದುಃಖವನ್ನು ಯಾವ ಮಾತಿಗಳಲ್ಲಿ ತಾನೆ ವಿವರಿಸಲು ಸಾಧ್ಯ! ಜ್ಞಾನವಿದ್ದರೇನು ? ಭಕ್ತಿಯಿದ್ದರೇನು ? ಶ್ರೀಮಂತ ಜೀವನವನ್ನು ನಡೆಸುವ ಸುಯೋಗ ಒದಗದಿದ್ದರೂ ಹುಟ್ಟಿದ ಮನುಷ್ಯನಿಗೆ ಪ್ರತಿದಿನವೂ ಅತ್ಯಗತ್ಯವಾದ ಒಂದು ಹೊತ್ತಿನ ಊಟವು ದೊರೆಯದಿದ್ದರೆ ಮನುಷ್ಯನ ಸ್ಥೈರಣೆ ಮಿತಿ ಮೀರದಿರುವುದೆ? ಅಂತಹ ಪರಿಸ್ಥಿತಿಯಲ್ಲಿ ಮನುಷ್ಯ ತಾನು ಮಾಡ-ಬಹುದಾದಂತಹ ಕಾರ್ಯ ಸರಿಯೇ? ತಪ್ಪೇ? ಎಂದು ಯೋಚಿಸುವ ಶಕ್ತಿಯನ್ನು ಸ್ಥೈರಣೆಯನ್ನೂ ಕಳೆದುಕೊಳ್ಳಬಹುದು. ಎಲ್ಲ ಮಹಾಪಾತಕಗಳಿಗಿಂತಲೂ ಹಿರಿಯಪಾತಕವೆಂದೆನಿಸಿಕೊಂಡಿರುವ ಆತ್ಮಹತ್ಯೆಯ ಕಡೆಗೂ ಮನುಷ್ಯನ ಮನಸ್ಸು ಆಗ ಒಲೈಸಬಹುದು. ಅಂತಹ ದಾರಿದ್ರ್ಯ ಲೋಕದ ಯಾವ ಮಾನವನಿಗೂ ಬರದಿರಲೆಂದು.

ಇರಬಾರದು ಬಡವ ಜಗತ್ತಿನೊಳಗೆ
ಪರದೇಶ ಮಾನವಗೆ ದಿಕ್ಕು ಮತ್ತಾವನೋ?

ಎಂಬ ಕೃತಿಯನ್ನು ಅವರ ಹೃದಯ ಹಾಡಿತು. ಶ್ರೀಮಂತರೆಂದು-ರಾಜರೆಂದು ಅವರಲ್ಲಿ ಬಡವ ಬೇಡಲು ಹೋದರೆ ಸಿಗಬಹುದಾದುದೇನು? ಪೊಡವಿಪತಿ ದೃಷ್ಟಿಗಳು ಒಳ್ಳೆದಲ್ಲವೆಂದು ಬಿಡದೆ ಜನ ಹೇಳುವುದು ಸಿದ್ಧವಯ್ಯ ಎಂಬ ಮಾತಿನ ಸತ್ಯ ಅನುಭವಕ್ಕೆ ಬರಬಹುದು. ಅಲ್ಲದೆ ಮರಳಿ ಮಾತಾಡಿದರೆ ಅಪರಾಧ ಹೊರಿಸುವರಾದುದರಿಂದ ಬೇಡುವುದಾದರೆ ಶ್ರೀ ಹರಿಯೊಬ್ಬನನ್ನು ಮಾತ್ರ ಬೇಡಬೇಕೆಂದು ದಾಸರು ಹೇಳುತ್ತಾರೆ.

ಲೋಕದ ಬಡ ಮನಸ್ಸಿನ ಶ್ರೀಮಂತ ಮನುಜರನ್ನೂ ಅವರ ಕ್ರಿಯೆಗಳನ್ನೂ ಶ್ರೀಹರಿಯು ಗುಣವೈಲಕ್ಷಣ್ಯಗಳೊಡನೆ ಹೋಲಿಸಿ ಆಯಾ ಜೀವರ ಕರ್ಮಾನುಸಾರವಾಗಿ ಪ್ರತಿಯೊಂದು ಫಲವನ್ನು ಅವರವರಿಗೆ ನಿರ್ವಂಚನೆಯಾಗಿ ಕೊಡುವ ನ್ಯಾಯಮೂರ್ತಿಯಾದ ಶ್ರೀ ಹರಿಯ ರೂಪ-ಕಾರ್ಯಗಳು ಮನಸ್ಸಿನಲ್ಲಿ ಸುಳಿದು ಇತರರನ್ನು ಬೇಡಿ ಅವಮಾನ ಹೊಂದುವುದಕ್ಕಿಂತ ಲೋಕೇಶ್ವರನ್ನು

ಕೊಂಡಾಡಿ ಅವರ ಕೃಪೆ ಹೊಂದುವುದು ಲೋಕದ ಎಲ್ಲ ಸಂಪತ್ತಿಗಿಂತಲೂ ಅಧಿಕವೆಂದು ತಿಳಿದು. ಆ ದೇವ ದೇವೋತ್ತಮನನ್ನು ಕೊಂಡಾಡುತ್ತಾ ಸರ್ವಜೀವರಲ್ಲಿಯೂ ಸರ್ವಕಾಲಗಳಲ್ಲಿಯೂ ವ್ಯಾಪ್ತನಾಗಿ ಕೊಡುವ-ಕೊಂಬುವ ಎರಡೂ ಶ್ರೀಹರಿಯ ಕ್ರಿಯೆಗಳೇ ಎಂಬ ಅನುಸಂಧಾನದಿಂದ ಶ್ರೀಹರಿಯ ಲೀಲೆಯನ್ನು ಆನಂದಬಾಷ್ಪ ಲೋಚನರಾಗಿ ದಾಸರು ಕೊಂಡಾಡಿದರು. ಜೊತೆಗೆ ಸಾಮಾನ್ಯ ಜನರ ರೀತಿ-ನೀತಿಗಳನ್ನು ವಿಮರ್ಶಿಸಿದರು.

ಕೊಡುವವನು ನೀನು ಕೊಂಬುವವನು ನಾನು
ಬಡಮನದ ಮನುಜರನ ಬೇಡಿದರೇನುಂಟು ಪ

ಹದಿನಾರು ಪಲ್ಲುಗಳ ತೆರೆದು ಆಲ್ಪರಿದರೆ
ಇದು ಸಮಯವಲ್ಲೆಂದು ಪೇಳುವನೊ
ಮದನ ಕೇಳಿಗೆ ನೂರು ಒಂದು ಮಾಡಿ ನೋಡುವನು
ಮದಡ ಮನುಜ ಎನಗೆ ಏನು ಕೊಡುವನೊ ಹರಿಯೆ ೧
ಗತಿಯಿಲ್ಲವೆಂದು ನಾನಾ ಪ್ರಕಾರದಿಂದ
ಮತಿಗೆಟ್ಟು ಪೊಗಳಿದರೆ ಅವನು ತನ್ನ
ಸತಿಸುತರ ಕೇಳಬೇಕೆನುತ ಮುಖದಿರುಹುವನು
ಅತಿ ದುರುಳ ಮತ್ತೇನು ಕೊಡುವನೊ ಹರಿಯೆ ೨

ಹೀನವೃತ್ತಿ ಜನರ ಆಶೆಯನು ಮಾಡುವರು
ಗಾಣದೆತ್ತು ತಿರುಗಿ ಬಳಲಿದಂತೆ
ಭಾನು ಕೋಟಿ ತೇಜ ವಿಜಯವಿಠಲರೇಯ
ನೀನಲ್ಲದನ್ಯತ್ತ ಕೊಡುವ ಕೊಂಬುವರುಂಟೆ ೩

ಪ್ರಾಪಂಚಿಕ ಜೀವನದಲ್ಲಿ ಎಷ್ಟೆ ಕಷ್ಟಗಳಿದ್ದರೂ. ಅವುಗಳನ್ನು ಕಡೆಗಣಿಸಿ ಪರಮಾತ್ಮನ ದರ್ಶನಕ್ಕಾಗಿ ಹಂಬಲಿಸುವವರೇ ಭಕ್ತರು. ಮಾನವ ಜನ್ಮದಲ್ಲಿ ಮಾತ್ರ ಭಕ್ತಿ ಸಾಧನೆಗೆ ಅವಕಾಶವಿರುವುದನ್ನರಿತ ದಾಸರು ಅದಕ್ಕಾಗಿ ಜೀವನದ ಪ್ರತಿ ನಿಮಿಷವನ್ನೂ ವ್ಯಯ ಮಾಡುತ್ತಿದ್ದರು.

ಆರಾದರು ಛೀ ಎನಲಿ ಆರಾದರೂ ಥೂ ಎನಲಿ
ಆರಾದರು ಹಳಿಯಲಿ ಆರಾದರೂ ಮುಳಿಯಲಿ
ಆರಾದರು ಬೈಯಲಿ ಆರಾದರೂ ನಿಂದಿಸಲಿ
ಆರಾದರುಪೇಕ್ಷಿಸಲಿ ಆರಾದರಾಡಿ ಕೊಳಲಿ
ಪ್ರೇರಕ ಸರ್ವರಿಗೆ ವಿಜಯ ವಿಠಲ

ಎಂದು ಚಿಂತಿಸಿ ನಾನು ನಿನ್ನ ಸೇವಕ ಏನಾದರೂ ಬರಲಿ ನಿನ್ನ ಬಿಡುವೆನೆ ರಂಗಾ ಎಂದು ಪ್ರತಿಜ್ಞೆ ಮಾಡಿದರು. ವಿಜಯದಾಸರ ದೃಷ್ಟಿ ನಿರಂತರವೂ ತತ್ತ್ವಜ್ಞಾನಾಭಿಮುಖವಾಗಿರುತ್ತಿತ್ತು. ದಿನಗಳುರುಳಿದಂತೆ ವೇದ, ಉಪನಿಷತ್ತು, ಪುರಾಣ ಮೊದಲಾದ ಶಾಸ್ತ್ರಗ್ರಂಥಗಳಲ್ಲಿ ಉಕ್ತವಾಗಿರುವ ಶ್ರೀ ಹರಿಯ ವಿಶೇಷ ಮಹಿಮಾತಿಶಯಗಳನ್ನು ತಿಳಿದು ಭಕ್ತಿ ಭಾವ ಪರವಶರಾಗುತ್ತಿದ್ದರು. ಆಗ ಆನಂದೋದ್ರೇಕದಿಂದ ಮೈಮರೆತು ಶ್ರೀಹರಿಯನ್ನು ಕುರಿತು ಹಾಡಿದ ಕೃತಿಗಳ ಸಂಖ್ಯೆ ಎಷ್ಟೆಂದು ಬಲ್ಲವರಾರು? ಆ ಸ್ತೋತ್ರವಾಹಿನಿ ಓತ ಪ್ರೋತವಾಗಿ ಹರಿಯುತ್ತಿತ್ತು. ಅಂತಹ ಸ್ತೋತ್ರಗಳನ್ನು ಕೇಳಿದ ಸುತ್ತಮುತ್ತಲಿನ ಭಕ್ತ ಜನ ಸಮೂಹ ದಾಸರ ವಾಕ್ಚಾತುರ್ಯತೆಗೆ ಬೆರಗಾಗುತ್ತಿದ್ದರು. ವಿಜಯದಾಸರಿಗೆ ಶ್ರೀ ಹರಿಯ ಕರುಣೆ ಅಪಾರವಾಗಿರುವುದಾಗಿ ಜನತೆ ಅಂತಹ ಸಂದರ್ಭಗಳಲ್ಲಿ ಭಾವಿಸುತ್ತಿದ್ದರು. ಕೂಸಿ ಮಗ ದಾಸ ಎಂದು ಉದಾಸೀನದಿಂದ ಕರೆಯುತ್ತಿದ್ದ ಜನರೂ ವಿಶೇಷವಾದ ಗೌರವವನ್ನು ತೋರಿಸಲಾರಂಭಿಸಿದರು. ಅನೇಕರು ಇವರ ಶಿಷ್ಯರಾಗಿ ಆಶೀರ್ವಾದಗಳನ್ನು ಪಡೆದರು. ಕಾಲ ಕಳೆದಂತೆ ಶ್ರೀಮಂತ ವರ್ಗ ವಿಜಯದಾಸರನ್ನ ಅಸಾಮಾನ್ಯ ವ್ಯಕ್ತಿ ಎಂದು ಪರಿಗಣಿಸಿ ಗೌರವಾದರಗಳನ್ನು ತೋರಿಸಿ ಅಂತಹವರ ಮನಸ್ಸಂತೋಷಪಡಿಸಿ ತಾವು ಧನ್ಯರಾಗಲು ಅವಕಾಶವನ್ನು ಕಾಯುತ್ತಿದ್ದರು.

ಏಕಾಕಿಯಾಗಿ ತಿರುಗುತ್ತಿದ್ದ ದಾಸಪ್ಪ ವಿಜಯವಿಠಲನ ಕರುಣೆಯಿಂದ ಶಿಷ್ಯವರ್ಗದೊಡನೆ ವಿಜೃಂಭಣೆಯಿಂದ ಸಂಚರಿಸುತ್ತಾ, ಹಿರಿಯ ಗುರುಪೀಠವನ್ನೇರಿ ನಾಡಿನ ಜನರ ಅಜ್ಞಾನಾಂಧಕಾರವನ್ನು ಪರಿಹರಿಸುತ್ತಾ ಪ್ರಸಿದ್ಧರಾಗಿ ಬೆಳಗಿದರು. ಒಂದು ಹೊತ್ತಿನ ಭೋಜನಕ್ಕೆ ಕಷ್ಟವಾಗುತ್ತಿದ್ದವರಿಗೆ ಶ್ರೀ ಹರಿಯ ಕೃಪೆಯಾದ ಬಳಿಕ ಅನೇಕರಿಗೆ ಮೃಷ್ಟಾನ್ನ ಭೋಜನ ಮಾಡಿಸುವಂತಹ ಶಕ್ತಿಯನ್ನು

ಪಡೆಯುವಂತಾಯಿತು. ಮನೆ ಮನೆಗಳನ್ನು ತಿರುಗಿ, ಕಷ್ಟಪಟ್ಟು ದುಡಿದರೂ, ನಾಲ್ಕು ಕಾಸು ಕೈಗೆಟುಕದ ಕಾಲ ಮಾಯವಾಗಿ ದಾಸರಿದ್ದಲ್ಲಿಗೇ ದ್ರವ್ಯ ಪ್ರಾಪ್ತಿಯಾಗುವ ಯೋಗ ಒದಗಿ ಬಂದಿತು. ಜೀರ್ಣ ಮಲಿನ ವಸ್ತ್ರ ದೊರೆಯದ ಸ್ಥಿತಿ ಮರೆಯಾಗಿ ನಯವಾದ ಶುಭ್ರ ರೇಷ್ಮೆ ವಸ್ತ್ರಗಳನ್ನುಟ್ಟು ಶೋಭಿಸಿದರು. ಸಂಜೆ ತನಕ ಕೆಲಸ ಮಾಡಿ ಸಣ್ಣ ಸೌಟಿನ ತುಂಬ ಗಂಜಿ ಕಾಣದವರು ಕಾಲಕಾಲಕ್ಕೆ ಪ್ರತಿ ದಿನವೂ ಭಕ್ಷ್ಯ ಭೋಜ್ಯಗಳ ಭೋಜನವನ್ನು ಸವಿಯುವ ಸೌಭಾಗ್ಯವನ್ನು ಪಡೆದರು. ಆದರೆ ಜೀವನದಲ್ಲಾದ ಈ ಗಮನಾರ್ಹವಾದ ಬದಲಾವಣೆಯಿಂದ ವಿಜಯದಾಸರಿಗೆ ಅಹಂಕಾರ ಬರಲಿಲ್ಲ. ಎಲ್ಲವೂ ತಮ್ಮ ಕಾವ್ಯಶಕ್ತಿಯಿಂದ ಎಂದು ಗರ್ವಕ್ಕೊಳಗಾಗಲಿಲ್ಲ, ಅರಿಷಡ್ವರ್ಗಗಳನ್ನು ಜಯಿಸಿದ್ದ ದಾಸರು ಎಲ್ಲವೂ ಶ್ರೀ ಕೃಪೆಯೆಂದೇ ಭಾವಿಸಿ ತಮ್ಮ ಹಿಂದಿನ ಜೀವನವನ್ನು ಸಿಂಹಾವಲೋಕನ ಮಾಡಿಕೊಂಡು ಶ್ರೀ ಹರಿಯ ವಿಚಿತ್ರ ಮಹಿಮೆ-ಕೃಪೆಗೆ ತಲೆದೂಗಿ ವಿಸ್ಮಯ ಮೂಕರಾದರು. ದೃಢವಾದ ತತ್ವಜ್ಞಾನದಿಂದುದಯಿಸಿದ ಭಕ್ತಿಯಿಂದ ಶ್ರೀ ಹರಿಯ ಅಗಾಧ ಶಕ್ತಿಯನ್ನು ಕೊಂಡಾಡಿ ತಮ್ಮ ಅಸ್ವಾತಂತ್ರ್ಯವನ್ನು ಅರಿತುಕೊಂಡು ಹೀಗೆ ಹಾಡಿದರು.

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು
ಮನ್ನಿಸುವರೋ ಮಹರಾಯ
ಎನ್ನ ಪುಣ್ಯಗಳಿಂದ ಈ ಪರಿಯುಂಟೇನೊ
ನಿನ್ನದೆ ಸಕಲ ಸಂಪತ್ತು
ಒಬ್ಬ ಹೆಂಗಸಿಗೆ ಹೊಟ್ಟೆಗೆ ಹಾಕುವುದಕಿನ್ನು
ತಬ್ಬಿಬ್ಬುಗೊಂಡೆನೊ ಹಿಂದೆ
ನಿಬ್ಬರದಿಂದಲಿ ಸರ್ವರ ಕೊಡುಂಬೊ
ಹಬ್ಬವನುಣಿಸುವಿ ಹರಿಯೆ ೧

ಸಂಜೆತನಕವಿದ್ದು ಸಣ್ಣಸೌಟಿನ ತುಂಬ
ಗಂಜಿ ಕಾಣದೆ ಬಳಲಿದೆನೊ
ವ್ಯಂಜನ ಮೊದಲಾದ ನಾನಾ ರಸಂಗಳ
ಭುಂಜಿಸುವುದು ಮತ್ತೇನೊ ೨

ಜೀರ್ಣ ಮಲಿನ ವಸ್ತ್ರ ಕಾಣದ ನರನಿಗೆ
ಊರ್ಣ ವಿಚಿತ್ರ ಸುವಸನ
ವರ್ಣ ವರ್ಣದಿಂದ ಬಾಹೋದದೇನೂ ಸಂ-
ಪೂರ್ಣ ಗುಣಾರ್ಣವ ದೇವ ೩

ನಿಚೋಚ್ಚ ತಿಳಿಯದೆ ಸರ್ವರ ಚರಣಕ್ಕೆ
ಚಾಚಿದೆ ನೊಸಲ ಹಸ್ತಗಳ
ಯೋಚಿಸಿ ನೋಡಲು ಸೋಜಿಗವಾಗಿದೆ
ವಾಚಕ್ಕೆ ನಿಲುಕದು ಹರಿಯೆ ೪

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ
ಮೆದ್ದೆನೆಂದರೆ ಈಯೆಗಾಣೆ
ಈ ಧರೆಯೊಳಗೆ ಸತ್ಪಾತ್ರರ ಕೊಡುಂಬೊ
ಪದ್ಧತಿ ನೋಡೊ ಪುಣ್ಯಾತ್ಮ ೫

ಮನೆಮನೆ ತಿರಿದರು ಕಾಸು ಪುಟ್ಟದೆ ಸು-
ಮ್ಮನೆ ಚಾಲ್ವರಿದು ಬಳಲಿದೆನೊ
ಹಣ ಹೊನ್ನು ದ್ರವ್ಯಂಗಳಿದ್ದಲ್ಲಿಗೆ ತನಗೆ
ತಾನೆ ಪ್ರಾಪ್ತಿ ನೋಡೂ ಜೀಯಾ ೬

ವೈದಿಕ ಪದವಿಯನೀವಗೆ ಲೌಕಿಕ
ಐದಿಸುವುದೆ ಬಹು ಖ್ಯಾತೆ
ಮೈದುನಗೊಲಿದ ಶ್ರೀ ವಿಜಯ ವಿಠಲ ನಿನ್ನ
ಪಾದಸಾಕ್ಷಿಯನುಭವವೊ ೭

ಸದ್ಗುರುಗಳಿಂದ ಒಮ್ಮೆ ಉಪದೇಶವನ್ನು ಪಡೆದ ಶಿಷ್ಯನು ಸಾಮಾನ್ಯವಾಗಿ ಎಂದಿಗೂ ಸಾಧನೆಯ ದಿವ್ಯ ಮಾರ್ಗದಿಂದ ವಿಚಲಿತನಾಗುವುದಿಲ್ಲ. ಸುಖ-ದು:ಖಗಳೆರಡೂ ಶ್ರೀ ಹರಿಯ ಕೃಪೆಯೆಂದು ತಿಳಿದು ಅವನು ಜೀವನದ ಪ್ರತಿ ನಿಮಿಷದಲ್ಲಿಯೂ ಪುಣ್ಯಸಂಚಯ ಮಾಡುತ್ತಿರುತ್ತಾನೆ. ಅಪರೋಕ್ಷ ಜ್ಞಾನಿಗಳೂ,

ವೇಣುಗೋಪಾಲ ವಿಠ್ಠಲರೇಯಾ
ನಿನ್ನ ಪದರೇಣು ನಂಬಿದ ಮಾನವ
ಏನೊ ಅರಿಯದಲಿಪ್ಪ ನೀನೊಂದು ಕರುಣದಲಿ
ಜ್ಞಾನ ಭಕುತಿಯ ಕೊಡುವದೂ ಸ್ವಾಮಿ ಪ

ಪರದೈವ ನೀನೆಂದು ಮೂಢತ್ವತನದಲ್ಲಿ
ಪರಿಪೂರ್ಣವಾಗಿ ನಿರುತಾ ನೆರೆ ನಂಬಿದೆನು ನಾ
ನಾ ಪ್ರಕಾರದಲಿ ಸ್ಮರಣೆ ಮಾಡುತ ಮನದಲಿ
ತರತಮ್ಯ ಭಾವದಲಿ ಮಾರ್ಗವನೆ ತೋರಿ ವಿ
ಸ್ತರ ಮಾಡು ಇವನ ಕೀರ್ತಿ
ಕರುಣಾಕರನೆ ನಿನ್ನೆ ಮಾಡಿ ಹೊಕ್ಕ ಶರಣನ್ನ
ಕರಪಿಡಿದು ಪಾಲಿಸುವದು ಸ್ವಾಮಿ ೧

ಲೌಕಿಕವೆಲ್ಲ ಇವಗೆ ವೈದಿಕವೆಂದೆನಿಸಿ
ಸಾಕುವುದು ಸಾಕಾರನೆ
ನೂಕು ದುರುಳರಿಂದ ಬಂದ ವಿಪತ್ತುಗಳ
ತಾಕಗೊಡದಂತೆ ವೇಗ
ಬೇಕು ಬೇಕೆಂದೆನುತ ಪೊಗಳುವವನಿಗೆ ಶುಭ
ವಾಕು ನೇಮಿಸು ಸಂತತ
ನಾಕ ಜನ ಬಲವಾಗಿ ರಕ್ಷಿಸಲಿ ಸುರತರುವೆ
ಶ್ರೀ ಕಾಂತ ನಿನ್ನಿಂದಲಿ ಸ್ವಾಮಿ ೨

ಓರ್ವನ ಪೆಸರುಗೊಂಡು ಪೇಳಲೇತಕೆ ಇನ್ನು
ಸರ್ವರನು ವಿಧದಲಿ
ಊರ್ವಿಯೊಳಗಿಟ್ಟು ಉದ್ಧರಿಸು ಉರುಕಾಲ
ನಿರ್ವ್ಯಾಜದವನ ಮಾಡಿ
ಸರ್ವರಗೋಸುಗ ನಾನು ತುತಿಸಿ ಯೋಗ್ಯರಿಗೆ
ಸರ್ವಾಧಾರ ಸಿರಿ ವಿಜಯವಿಠ್ಠಲ ನಿನ್ನ
ಶರ್ವ ತುತಿಸಿ ಕಾಣ ನಾನೊಬ್ಬ ಪೊಗಳುವೆನೆ ೩

ಎಂಬ ಮೂರು ನುಡಿಗಳ ಕೃತಿಯೊಂದನ್ನು ರಚಿಸಿ ಶಿಷ್ಯನಿಗೆ ಉಪದೇಶಿಸಿದರು.

ವಿಜಯದಾಸರು ತಮ್ಮ ಗುರುಗಳಾದ ಪುರಂದರದಾಸರ ಆರಾಧನಾ ಮಹೋತ್ಸವವನ್ನು ಪ್ರತಿವರ್ಷವೂ ಹಂಪೆಯಲ್ಲಿ ವಿಜೃಂಭಣೆಯಿಂದ ನಡೆಯಿಸುತ್ತಿದ್ದರು. ಆ ಮಹಾಸಮಾರಾಧನೆಗೆ ಪತಿವಿಹೀನೆಯಾದ ಹೆಂಗಸೊಬ್ಬಳು ದಾರಿದ್ರ್ಯದಿಂದ ಬಳಲಿ ಅನ್ನ ನೀರು ಕಾಣದೆ ತೃಪ್ತಿಕರವಾದ ಭೋಜನ ಮಾಡಲು ಆಗಮಿಸಿದ್ದಳು. ಅವಳ ಜೊತೆಗೆ ಒಂದು ವರ್ಷ ದಾಟಿದ ಒಂದು ಗಂಡು ಮಗುವಿತ್ತು. ಆ ಮಗುವಿಗೆ ಮೈಯೆಲ್ಲಾ ಕಜ್ಜಿಯಾಗಿದ್ದುದರಿಂದ ಎಲ್ಲರೂ ಅಸಹ್ಯ ಪಟ್ಟು ಆ ತಾಯಿ-ಮಕ್ಕಳನ್ನು ದೂಷಿಸುತ್ತಿದ್ದರು. ಎಲ್ಲಿ ಹೋದರೂ ತಾತ್ಸಾರ-ಅವಮಾನಗಳನ್ನು ಅನುಭವಿಸುತ್ತಿದ್ದ ಆಕೆಗೆ ಅಲ್ಲಿಯೂ ಅವಮಾನವೇ ಆಯಿತು. ಆಗ ಜೀವನದಲ್ಲಿ ಬೇಸರವುಂಟಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಬೆಳಗಿನ ಝಾವದಲ್ಲಿಯೇ ತುಂಗಭದ್ರೆಯ ಬಳಿ ಬಂದಾಗ ವಿಜಯದಾಸರು ಬೆಳಗಿನ ಆಹ್ನೀಕಕ್ಕಾಗಿ ಆಗಮಿಸಿದರು. ಆಕೆಯ ಪ್ರಯತ್ನವನ್ನು ಕಂಡು ಅವಳ ದು:ಖವನ್ನರಿತು ಸಮಾಧಾನ ಪಡಿಸಿ ಆ ಮಗುವನ್ನು ತಾವು ಸಾಕುವುದಾಗಿ ಹೇಳಿ ಪಡೆದುಕೊಂಡರು. ಆ ಅಬಲೆಯನ್ನು ತಂಗಿ ಎಂದೇ ಭಾವಿಸಿ ಆಶ್ರಯ ನೀಡಿ ಉಪಕರಿಸಿದರು. ಆ ಮಗುವನ್ನು ಪವಿತ್ರವಾದ ತುಂಗಭದ್ರಾ ನದಿಯ ಸ್ನಾನ ಮಾಡಿಸಿ,

ಇವನ ಪಾಲಿಸಿದರೆ ಎನಗೆ ಪುಣ್ಯ
ಅವನಿಯೊಳಗೆಂದೆಂದಿಗೂ ನಾನೆ ಧನ್ಯ ಪ

ನಟ್ಟ ಮುಳ್ಳು ಕಿತ್ತಿ ಬಟ್ಟಂತೆ ಮಾಡೊ
ಘಟ್ಯಾಗಿ ಭಕುತನ್ನ ಕಾಪಾಡೊ ೧

ಸಾಧನ ಪ್ರಾಣಿಗಳಿರಬೇಕು
ಆದರದಿಂದ ಕೇಳೆನ್ನ ವಾಕು ೨

ಭಜಿಪರ ಭಾಗ್ಯೋದಯ ನಿಧಿಯೆ
ವಿಜಯವಿಠಲ ಕೇಳೆನ್ನ ದೊರೆಯೆ ೩

ಎಂದು ದೇವರನ್ನು ಪ್ರಾರ್ಥಿಸಿ ಮೋಹನನೆಂದು ಹೆಸರಿಟ್ಟು ಸಾಕಿ ಸಲಹಿದರು. ಮೋಹನ ಬೆಳೆದು ದೊಡ್ಡವನಾದ ಮೇಲೆ ಸಕಲ ಶೃತಿ ಸ್ಮೃತಿಗಳ ತತ್ತ್ವಾರ್ಥಗಳನ್ನು ಅವನಿಗೆ ತಿಳಿಸಿ "ಮೋಹನ ವಿಠಲ" ಎಂದು ಅಂಕಿತೋಪದೇಶ ಮಾಡಿದರು.

ಪಾಹಿ ಮೋಹನವಿಠಲ ಪರಮ ಕರುಣಾ ಜಲಧಿ
ಮಹದಾದಿ ದೇವ ವಂದ್ಯ
ಮೋಹ ಪಾಶವ ಬಿಡಿಸಿ ನಂಬಿದವನಿಗೆ ಒಲಿದು
ರಹಸ್ಯ ಮತಿಕೊಡುವದು ಸ್ವಾಮಿ ಪ

ಎಂದು ಅಂಕಿತ ಪದವನ್ನು ಮಾಡಿ ಶ್ರೀ ಮೋಹನದಾಸರನ್ನು ಆಶೀರ್ವದಿಸುವುದರೊಡನೆ ಜೀವನದಲ್ಲಿ ಹರಿದಾಸನಾಗಿ ಬಾಳುವವರ ಗುರಿ ಹೇಗಿರಬೇಕೆಂಬುದನ್ನು ತಿಳಿಸುವ ಸಲುವಾಗಿ ಆ ಸಾಕು ಪುತ್ರನ ಮೇಲೆ ತುಂಬ ಅಭಿಮಾನದಿಂದ "ಚಿರಂಜೀವಿಯಾಗಿರೆಲೊ ಚಿನ್ನ ನೀನು" ಎಂದು ಹರಿಸಿದರು.

ಶ್ರೀ ವಿಜಯದಾಸರು ಬಹು ಉದಾರಿಗಳಾಗಿದ್ದರೆಂದು ಈ ಮೇಲಿನ ಕಥೆಯಿಂದ ತಿಳಿದು ಬರುತ್ತದೆ. ಕಷ್ಟಪಡುವವರನ್ನು ಕಂಡು ಮರುಗಿ ಯಾವ ಸಹಾಯವನ್ನು ಮಾಡದೆ ಮುಂದೆ ಹೋಗುವಂತಹ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಮೋಹನ ದಾಸರನ್ನು ತಮ್ಮ ಪುತ್ರರೆಂದೇ ಭಾವಿಸಿ ನೀತಿಯುತವಾದ ಆದರ್ಶ ಜೀವನ ನಡೆಸುವಂತೆ ಮಾರ್ಗದರ್ಶಕರಾದರು. ಅವರ ದೃಷ್ಟಿಗೆ ಮೇಲಿನ ಕೃತಿಯೇ ಸಾಕ್ಷಿಯಾಗಿದೆ. ಮೋಹನದಾಸರು ಕೃತಜ್ಞತೆಯಿಂದ ವಿಜಯದಾಸರು ಮಾಡಿದ ಉಪಕಾರವನ್ನು ಹೀಗೆ ನೆನದಿದ್ದಾರೆ.

ನಿನ್ನ ಪಾದವ ನಂಬಿ ಅನ್ಯರಾಶ್ರಯವೇಕೋ
ಚನ್ನಗುರು ವಿಜಯರಾಯ ಪ

ಇನ್ನೇನು ಇನ್ನೇನು ಎನ್ನ ಕುಲಕೋಟಿ ಪಾ
ವನ್ನವಾದುದು ನಿಶ್ಚಯಸ್ವಾಮಿ ಅಪ

ವ್ಯಾಸರಾಯರ ಗುಹೆಯೊಳಗೆ ನವ ಸ
ನ್ಯಾಸಿಗಳ ಸಮಕ್ಷಮದಲ್ಲಿ ಎನ್ನ

ದಾಸನಾಗೆನುತ ನೀ ಪೇಳ್ದೆ ! ನಮ್ಮ
ಶ್ರೀಶ ಸರ್ವೋತ್ತಮನಹುದೆಂದು ಒರೆದು
ತೋಷದಿಂದೆನ್ನ ಪೊರೆದೆ ಸ್ವಾಮಿ

ಈಗಿನ ನವ ಬೃಂದಾವನ ಎಂಬ ಹಂಪೆಯ ಬಳಿಯಿರುವ ಊರಿನಲ್ಲಿ ಈ ಘಟನೆ ನಡೆಯಿತೆಂದು ಮೇಲಿನ ಕೃತಿಯಿಂದ ತಿಳಿಯುತ್ತದೆ. ಮೋಹನದಾಸರು ದೊಡ್ಡವರಾದ ಮೇಲೆ ಮುಂಜಿ ಮದುವೆಯನ್ನು ವಿಜಯದಾಸರು ನಡೆಸಿದರು. ಅಲ್ಲಿ ಒಮ್ಮೆ ಮೋಹನದಾಸರಿಗೆ ಅಪಮೃತ್ಯು ಒದಗಿದಾಗ ಪರಿಹರಿಸಿದರೆಂದು ಐತಿಹ್ಯವಿದೆ.

ಶ್ರೀ ವಿಜಯದಾಸರ ಜೀವನದಲ್ಲಿ ನಡೆದ ಮಹಿಮೆಗಳು ಅನೇಕವಾಗಿವೆ. ಅವರ ಬಳಿ ಶ್ರೀ ಹರಿಯು ವಿವಿಧ ರೂಪಗಳಲ್ಲಿ ಬಂದು ಅವರ ಮನ: ಪರಿಪಾಕವನ್ನೂ, ನಿಷ್ಠೆಯನ್ನೂ ಪರೀಕ್ಷಿಸಿ ಅನಂತರ ತನ್ನ ದರ್ಶನವನ್ನಿತ್ತು, ಅವರ ತಪ್ಪುಗಳನ್ನು ತಿದ್ದಿ ಸಂತೋಷ ಪಡಿಸಿರುವುದುಂಟು. ಕಂಡಂತೆ ಕಾಣಿ ಮಾಯವಾದಾಗ ಭಕ್ತನು ಮೊರೆಯಿಡುವ ಸಂಕೀರ್ತನೆಯ ಪರಿಯನ್ನು ಕೇಳಿ ಶ್ರೀ ಹರಿಯು ಆಶೀರ್ವದಿಸಿರುವುದುಂಟು. ದಾಸರು ಸಮಸ್ತ ಭಾರತದ ಪುಣ್ಯಕ್ಷೇತ್ರಗಳ ಸಂದರ್ಶನ ಸಮಾರಂಭಗಳಲ್ಲಿ ತೋರಿದ ಪವಾಡಗಳು ವಿಪುಲವಾದರೂ ಅವರ ಕೃತಿಗಳ ಆಧಾರದಿಂದ ಖಚಿತವೆನಿಸುವ ಮಹಿಮಾತಿಶಯಗಳು ವಿರಳವಾಗಿದೆ. ಅಂತಹ ಕೆಲವು ಐತಿಹಾಸಿಕ ಘಟನೆಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಶ್ರೀ ವಿಜಯದಾಸರು ದಕ್ಷಿಣ ಭಾರತದ ಮನ್ನಾರ್‌ಗೆ ಶ್ರೀ ಕೃಷ್ಣನ ಸಂದರ್ಶನಕ್ಕಾಗಿ ಒಮ್ಮೆ ಹೋಗಿದ್ದರು. ಶ್ರೀಕೃಷ್ಣನ ಮೂರ್ತಿಯಲ್ಲಿ ಸೂಸುವ ಮುಗ್ಧತೆ ಗಾಂಭೀರ್ಯ, ಭಕ್ತಿ ವಾತ್ಸಲ್ಯಗಳು ಸಾಮಾನ್ಯ ಜನರನ್ನೆ ಆಕರ್ಷಿಸುವುದೆಂದ ಮೇಲೆ ಭಕ್ತರ ಹೃದಯ ಆ ಮೂರ್ತಿಯನ್ನು ಕಾಣಲೆಂದು ಹೇಗೆ ಹಂಬಲಿಸಿರಬೇಕು? ವಿಜಯದಾಸರು ಮನ್ನಾರ್‌ನಲ್ಲಿ ಒಂದು ದಿನ ಪ್ರಾತಃ-ಕಾಲ ಅಲ್ಲಿನ ಹರಿದ್ರಾ ನದಿಯಲ್ಲಿ ಸ್ನಾನ ಮಾಡಿ ಶುಚಿರ್ಭೂತರಾಗಿ ಶ್ರೀ ಕೃಷ್ಣನ

ದರ್ಶನಕ್ಕಾಗಿ ಹೊರಟಿದ್ದರು. ದಾರಿಯಲ್ಲಿ ಆರೇಳು ವರ್ಷದ ಬಾಲಕನೊಬ್ಬ ಮಡಿಯಲ್ಲಿ ಹೊರಟಿದ್ದ ದಾಸರನ್ನು ನೋಡಿ ನೀರು ಚಿಮುಕಿಸಿದ. ವಿಜಯದಾಸರು ತಾವು ಅಪವಿತ್ರವಾದುದಾಗಿ ಭಾವಿಸಿ ಪುನಃ ಸ್ನಾನಮಾಡಿ ಬಂದರು. ಪುನಃ ಅದೇ ಹುಡುಗ; ಅದೇ ನಗು, ಅದೇ ಚೇಷ್ಟೆ; ಈ ರೀತಿ ಆರೇಳು ಸಲ ಚೇಷ್ಟೆ ಮಾಡಿದರೂ ಕೋಪಗೊಳ್ಳದ ದಾಸರು ಎಂಟನೆ ಬಾರಿ ಕೋಪಗೊಂಡರು. ಆಗ ಆ ಹುಡುಗ ಬಾಯಿಯಲ್ಲಿ ನೀರು ತುಂಬಿಕೊಂಡು ದಾಸರ ಮೇಲೆ ಉಗುಳಿದನಂತೆ! ತಕ್ಷಣವೇ ಅಪಾಕೃತನ ಉಚ್ಛಿಷ್ಟದಿಂದ ಅಜ್ಞಾನ ಮಾಯವಾಗಿ ಆ ಬಾಲಕ ಶ್ರೀ ಕೃಷ್ಣನೆಂದೇ ತಿಳಿದರು. ನಂದಗೋಕುಲದಲ್ಲಿ ಶ್ರೀ ಕೃಷ್ಣನು ಆಡಿದ ಆಟಗಳು ದಾಸರ ಮನಸ್ಸಿನಲ್ಲಿ ಮಿಂಚಿನಂತೆ ಸುಳಿಯಿತು. ಹುಡುಗನಲ್ಲಿ ಭಕ್ತಿ ಉಕ್ಕೇರಿ ಆ ಗುಂಗುರು ಕೂದಲಿನ ದುಂಡು ಮುಖದ ನೀಲ ಮೇಘ ಶ್ಯಾಮನನ್ನು ಶ್ರೀ ಕೃಷ್ಣನೆಂದು ತಿಳಿದಾ ಕ್ಷಣವೇ ಆ ಹುಡುಗ ಮಾಯವಾದ. ವಿಜಯದಾಸರಿಗಾದ ವಿರಹ ಹೇಳಬಲ್ಲವರಾರು? ಶ್ರೀ ಕೃಷ್ಣನನ್ನು ಮಾತನಾಡಿಸಲೆಂದು ಗರ್ಭಾಂಗಣದ ಮೂರ್ತಿಯನ್ನು.

ಮಾತನ್ನಾಡೊ ಮನ್ನಾರಿ ಕೃಷ್ಣ ಮಾತನ್ನಾಡೈ
ದಾತನು ನೀನೆಂದು ಬಯಸಿ ಬಂದೆ ಮಾತನಾಡೈ

ಎಂದು ಆ ದಿನದ ಕೃಷ್ಣನ ಉಡಿಗೆಯನ್ನು ವರ್ಣಿಸುತಾ 'ಮಾತನಾಡು' ಎಂದರು ಆದರೆ ಅಂದು ಕೃಷ್ಣ ಮೌನಿಯಾದನೇಕೊ?

ಹರಿದಾಸರಿಗೂ ತಿರುಪತಿಯ ವೆಂಕಟೇಶನಿಗೂ ಬಹು ನಿಕಟವಾದ ಸಂಬಂಧವಿರುವುದನ್ನು ಕಾಣುತ್ತೇವೆ. ಭರತ ಖಂಡದಲ್ಲಿ ಶ್ರೀ ಹರಿಯ ಅನೇಕ ದೇವಾಲಯಗಳಿದ್ದರೂ ತಿರುಪತಿಯ ವೆಂಕಟೇಶನ ಮಹಿಮೆ ಅಗಾಧವಾದುದು. ತಿರುಪತಿ, ಪಂಡರಪುರ– ಉಡುಪಿ ಕ್ಷೇತ್ರಗಳ ಸಂದರ್ಶನವನ್ನು ಅದೆಷ್ಟು ಬಾರಿ ಹರಿದಾಸರು ಮಾಡುತ್ತಿದ್ದರೊ ಹೇಳಲಸಾಧ್ಯ. ಈ ಮೂರ್ತಿಗಳನ್ನು ಕುರಿತು ನೂರಾರು ಕೃತಿಗಳನ್ನು ಒಬ್ಬೊಬ್ಬ ಹರಿದಾಸರೂ ಹಾಡಿರುವುದರಿಂದ. ಈ ಕ್ಷೇತ್ರಗಳ ಸಂದರ್ಶನ ಕಾರ್ಯಕ್ರಮ ನಿಯಮವಾಗಿದ್ದಿತೆಂದೆನಿಸುತ್ತದೆ. ಅಂತಹ

ಸಂಧರ್ಭಗಳಲ್ಲಿ ಹರಿದಾಸರು ತಮಗಾದ ಅನುಭವವನ್ನು ರಸವತ್ತಾಗಿ ವರ್ಣಿಸಿದ್ದಾರೆ. ಹರಿದಾಸರು ರಚಿಸಿರುವ ಇಂತಹ ಕೃತಿಗಳು ಐತಿಹಾಸಿಕ ದೃಷ್ಟಿಯಿಂದ ಪ್ರಾಮುಖ್ಯವಾಗಿದೆ. ಆದರೆ ಹರಿದಾಸರೊಡನಿದ್ದ ಶಿಷ್ಯರು ಆಯಾ ಸಂದರ್ಭಗಳಲ್ಲಿ ಆ ಕೃತಿಗಳನ್ನು ಬರೆದಿಡುವುದರೂಡನೆ ಘಟನೆಗಳನ್ನೂ ಗುರುತಿಸಿದ್ದರೆ ಹರಿದಾಸರ ಕೃತಿಗಳ – ಜೀವನ ವಿಮರ್ಶೆಗೂ ಹೆಚ್ಚು ಸಹಾಯವಾಗುತ್ತಿದ್ದಿತಲ್ಲದೆ ಗ್ರಂಥ ಪಾಠವೂ ಪರಿಶುಧ್ಧ ಉಳಿಯುತ್ತಿತ್ತು. ನಕಲು ಕೃತಿಗಳ ಜೋಡಣೆಗೆ ಅವಕಾಶವಿರುತ್ತಿರಲಿಲ್ಲ. ಆದರೆ ಇಂತಹ ಕಾರ್ಯ ನಡೆಯದಿರುವುದರಿಂದ ಹರಿದಾಸರ ಜೇವನದಲ್ಲಿ ನಡೆದಿರುವ ಪವಾಡಗಳನ್ನೇ ಪ್ರಶ್ನಿಸುವಂತಾಗಿದೆ. ಆದರೂ ಕೆಲವು ಹರಿದಾಸರ ಕೃತಿಗಳೂಡನೆ ಅವರ ಜೀವನದ ಪವಾಡವೂ ಪ್ರಸಿದ್ಧಿಯಾಗಿ ಅದರ ಸುಳಿವನ್ನು ಸ್ಪಷ್ಟವಾಗಿ ಅವರ ಕೆಲವು ಕೃತಿಗಳಲ್ಲಿ ಕಾಣಬಹುದು. ವಿಜಯದಾಸರ ಜೀವನದಲ್ಲಿ ನಡೆದಂತಹ ಪವಾಡಗಳಲ್ಲಿ ತಿರುಪತಿಯ ಕೆಲವು ಘಟನೆಗಳು ತುಂಬಾ ಸ್ವಾರಸ್ಯವಾಗಿವೆ.

ಒಮ್ಮೆ ವಿಜಯದಾಸರು ತಿರುಪತಿಗೆ ಬ್ರಹ್ಮೋತ್ಸವಕ್ಕೆ ಹೋಗಿದ್ದರು. ಆಗ ಭಕ್ತರ ನುಗ್ಗಾಟ ಕೇಳಬೇಕೆ? ಅತಿ ದೂರದಿಂದ ಬಂದ ವಿಜಯದಾಸರಿಗೆ ಗರ್ಭಾಂಗಣದಲ್ಲಿದ್ದ ಶ್ರೀನಿವಾಸನ ದರ್ಶನಯೋಗ ಲಭಿಸಲಿಲ್ಲ. ಎಲ್ಲಿ ನೋಡಿದರೂ ಭಕ್ತರ ಸಂದಣಿಯೇ ಇತ್ತು. ವಿಜಯದಾಸರಿಗೆ ದರುಶನ ಸಿಗಲಿಲ್ಲವೆಂಬ ಶೋಕಭಾವ ಸ್ಥಾಯಿಯಾಗುವುದರ ಬದಲು ಭಕ್ತಿಯ ಹೆಚ್ಚಳದಿಂದ ದೇವರಲ್ಲಿದ್ದ ಸಲುಗೆಯಿಂದ ಕ್ರೋಧ ಸ್ಥಾಯಿಯಾಗಿ ರೌದ್ರ ರಸಭರಿತವಾದ ಕೃತಿ ಅವರಿಂದ ರಚನೆಯಾಯಿತು.

ನಿನ್ನ ದರುಶನಕೆ ಬಂದವನಲ್ಲವೊ ದೇವ
ಪುಣ್ಯವಂತರ ದಿವ್ಯ ಚರಣ ನೋಡಲಿ ಬಂದೆ
ಎಲ್ಲೆಲ್ಲಿಯೂ ನಿನ್ನ ವ್ಯಾಪ್ತಿ ತಾನಾಗಿರಲು
ಇಲ್ಲಿಗೇ ಬರುವ ಕಾರಣವ್ಯಾವುದೋ
ಸೊಲ್ಲಿಗೆ ಸ್ತಂಭದಲಿ ತೋರಿದ ಮಹಾ ಮಹಿಮ
ಎಲ್ಲಿಲ್ಲವೋ ನೀನು ಬಲ್ಲ ಭಕುತರಿಗೆ? ೧

ಕರೆವಾಗಲೆ ಓಡಿ ಬಂದೊದಗುವ್ರೋ ದೇವ
ಮರಳಿ ಗಾವುದವೆಣಿಸಿ ಬರಲ್ಯಾತಕೊ
ನೆರೆ ನಂಬಿದವರಿಗಾವಲ್ಲಿಯಾದರೆ ಏನೂ
ಅರಿತವರ ಮನದಲ್ಲಿ ನಿಂದಾಡುವ ಚೆಲ್ವ ೨

ಧ್ಯಾನಕ್ಕೆ ಸಿಲುಕುವ ನಿನ್ನ ಕಾಣಲಿಬಹುದು
ಜ್ಞಾನಿಗಳು ಎಂದು ಬರುವರೊ ಅಲ್ಲಿಗೆ
ಅನಂತ ಜನುಮದಲಿ ಜಪತಪ ವ್ರತ ಹೋಮ
ಏನು ಮಾಡಿದರಿಷ್ಟು ಜನ ಕೂಡುವುದೊ ದೇವ ೩

ಕಠಿಣವು ನಿನ್ನ ಭಕ್ತರ ದರುಶನ ಲಾಭ
ಸಟೆಯಲ್ಲ ವೇದಗಳು ಸಾರುತಿದೆಕೋ
ವಟುವೆ ಮೊದಲಾದ ವೈಷ್ಣವರಂಘ್ರಿಗಳು ಲವ
ತೃಟೆಯಾದರೊ ಸೋಂಕಲದು ಗತಿಗೆ ದಾರಿ ೪

ನೀನಿದ್ದ ಸ್ಥಾನದಲಿ ಸರ್ವ ಪುಣ್ಯಕ್ಷೇತ್ರ
ನೀನಿದ್ದ ಸ್ಥಾನದಲಿ ಸಕಲ ತೀರ್ಥ
ನೀನಿದ್ದ ಸ್ಥಾನದಲಿ ಸಮಸ್ತ ತಾತ್ವಿಕರು
ನಾನಿತ್ತ ಬಂದದ್ದು ನಿನಗೆ ತಿಳಿಯದೆ ಸ್ವಾಮಿ ೫

ಇದನೆ ಲಾಲಿಸು ಜೀಯ ನಿನ್ನದೊಂದೆ ಮೂರ್ತಿ
ನಿದರುಶನವಲ್ಲದೆ ಮಿಗಿಲಾವುದೋ
ಪದೆಪದೆಗೆ ಮಧ್ವಮತ ಪೊಂದಿದ ಸುಜನರ
ಹೃದಯದಲಿ ಒಂದೊಂದು ಪರಿ ನಿನ್ನ ರೂಪಗಳು ೬

ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ
ನೆಲೆಗಾಣೆ ನೆಲೆಗಾಣೆ ನರೆ ಹೊರೆಯಲಿ
ಒಲಿದು ಭಕ್ತರಿಗಾಗಿ ಮದುವೆ ಹವಣಿಸಿಕೊಂಡೆ
ಒಲಿದು ದೇವರ ದೇವ ವಿಜಯವಿಠಲರೇಯ ೭

ವೆಂಕಟೇಶನ ದರ್ಶನ ಲಭಿಸಲಿಲ್ಲವೆಂದು ಅಸಮಾಧಾನದಿಂದ ನಿನ್ನ ದರುಶನಕೆ ಬಂದವನಲ್ಲ ಎಂದು ವ್ಯಂಗ್ಯವಾಗಿ ನಿಂದಾಸ್ತುತಿ ರೂಪವಾಗಿ ಹಾಡಲಾರಂಭಿಸಿದರೂ ಆ ಕ್ರೋದ ಕೇವಲ ಮೊದಲ ನಾಲ್ಕು ನುಡಿಗಳಲ್ಲಿ ಹರಿದು ಭಕ್ತಿ ಹೆಚ್ಚಾದಂತೆ ಕ್ರೋಧ ಮಾಯವಾಗಿ, ಶೋಕಸ್ಥಾಯಿಯಾಗಿ ಪಲ್ಲಟಿಸಿ ನಿನ್ನದೊಂದೆ ಮೂರ್ತಿ ನಿದರುಶನವಲ್ಲದೆ ಮಿಗಿಲಾವುದೋ ಎಂದು ಕೊನೆಯ ಮೂರು ನುಡಿಗಳಲ್ಲಿ ಶ್ರೀ ಹರಿಯ ಸ್ತೋತ್ರ ಕರುಣಾರಸ ಪೂರಿತವಾಗಿ ಹರಿದಿರುವುದು ಶ್ರೀ ವಿಜಯದಾಸರ ಭಕ್ತಿಯ ದ್ಯೋತಕವಾಗಿದೆ. ಆದರೆ ದಾಸರ ಸ್ತೋತ್ರಗಳಿಗೆ ಉತ್ತರವಾಗಿ ವೆಂಕಟೇಶ ತಕ್ಷಣ ತನ್ನ ದರುಶನ ನೀಡಲಿಲ್ಲ ! ಭಕ್ತನ ವ್ಯಂಗ್ಯ ನುಡಿಗಳನ್ನು ಮತ್ತಷ್ಟು ಕೇಳಬೇಕೆನಿಸಿತೇನೋ? ಎರಡು ಮೂರು ದಿನಗಳಾದರೂ ದೇವರದರ್ಶನವಿಲ್ಲದೆ ದಾಸರಿಗೆ ದಿಕ್ಕು ತೋಚದಂತಾಯಿತು. ಆಗ ದೇವಾಲಯದ ಹೊರಪ್ರಾಕಾರದ ಒಳಾಂಗಣದಲ್ಲಿದ್ದಾಗ ವೆಂಕಟೇಶನ ವ್ಯಾಪಾರವನ್ನು ನೋಡಿದರು. ಅವರಿಗೆ ನಗು ಬಂದಿತು. ಆಗ ವೆಂಕಟೇಶನಿಗೆ ಹೀಗೆ ಮಂಗಳ ಹಾಡಿದರಂತೆ.

ಜಯಮಂಗಳಂ ನಿತ್ಯ ಶುಭ ಮಂಗಳಂ
ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆಸಿಕೊಂಬ
ಇಲ್ಲ ತನಗೆಂದು ಸುಳ್ಳು ಮಾತಾನಾಡಿದರೆ
ಎಲ್ಲವನು ಕಸುಕೊಂಬ ಕಳ್ಳ ದೊರೆಗೆ ೧

ತನ್ನ ನೋಡುವನೆಂದು ಮುನ್ನರ್ಗಾವುದ ಬಂದು
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ
ಪೊನ್ನು ಹಣ ಕಸುಕೊಂಡು ತನ್ನ ದರುಶನ ಕೊಡವೆ
ಬೆನ್ನೊಡೆಯ ಹೊಡೆಸುವ ಅನ್ಯಾಯಕಾರಿಗೆ ೨

ಗಿಡ್ಡ ಹಾರುವನಾಗಿ ಶೆರಗೊಡ್ಡಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯ ನೀಡಿ

ಅಡ್ಡ ಬಿದ್ದ ದಾಸರಿಗೆ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಸಿರಿ ವಿಜಯವಿಠಲಗೇ ೩

ಮಂಗಳ ಹಾಡಿದ ಮೇಲೆ ತಾನೆ ಪ್ರಸಾದ ವಿನಿಯೋಗ? ವಿಜಯದಾಸರಿಗೆ ವೆಂಕಟೇಶನ ದರ್ಶನ ಲಾಭವಾಯಿತು. ಆಗ ತಾವು ಜಗದಾಧಿಪತಿಯನ್ನು ಕುರಿತು ಹಿಂದೆ ಆಡಿದ ಸಥೆ ನುಡಿಗಳಿಗಾಗಿ ಮರುಗಿದರು. ಶ್ರೀ ಹರಿಯ ಸಾಕ್ಷಾತ್ ದರ್ಶನವಾದ ಸಂತೋಷ ಅಪರೋಕ್ಷ ಜ್ಞಾನಿಗಳಾದುದರಿಂದ ದಾಸರಿಗೆ ಲಭಿಸಿ ಆನಂದ ಪರವಶರಾದರು.

ನಿನ್ನ ನೋಡಲಿ ಬಂದೆ ನಿತ್ಯ ತೃಪ್ತ
ಅನ್ಯರಿಂದಲಿ ಎನಗೆ ಏನು ಪ್ರಯೋಜನವೋ ಪ

ದರುಶನಕೆ ಬಂದವ ನಾನಲ್ಲೆಂದು ನಾನಂದು
ಹರಿ ನಿನಗೆ ನುಡಿದದ್ದು ಮನಸ್ಸಿನೊಳಗೆ
ಇರುತಿಪ್ಪದೇನಯ್ಯಾ ಬಿನ್ನಪವ ಲಾಲಿಸು
ಶರಣ ಜನರ ಅಭಿಪ್ರಾಯವೊಂದು ಬಗೆ ಇಪ್ಪದು ೧

ನಿರುತ ವ್ಯಾಪ್ತತ್ವ ಕರುಣತ್ವ ಅಣುಮಹತ್ತು
ಸರುವ ಚೇತನ ಜಡ ಮತ್ತೆ ಮತ್ತೆ
ಪರಿ ಪರಿಯಿಂದಲಿ ನಿನ್ನಲಿ ಉಂಟು ನಿನ್ನ
ವರ ಮೂರ್ತಿಗಳ ಪೇಳಿದೆ ಇದಷ್ಟು ವಿನಯದಲಿ ೨

ಧ್ಯಾನಕ್ಕೆ ನೀನು ಪ್ರಧಾನನೆಂದು ನುಡಿದೆ
ಆನಂದಮತಿ ಕೊಡವ ಅಪ್ರಮೇಯ
ಕ್ಷೋಣಿ ಜನಕ್ಕಿಂತ ದ್ವಾರದವರು ವೆಗ್ಗಳವಾಗೆ
ಏನೆಂಬೆ ತಿರುವೆಂಗಳೇಶ ನಿನ್ನಾಟಕ್ಕೆ ೩

ಮಿಕ್ಕ ಮಂದ ಜನಕೆ ನಿನ್ನ ಭಕುತರ ಮೇಲೆ
ಭಕುತಿ ಪುಟ್ಟುವುದಕ್ಕೆ ನಾಪೇಳಿದ್ದು

ಅಕಟಕಟ ನಿನ್ನ ದೊರೆತನಕೆ ಏನೆಂಬೆ
ತಕ್ಕ ಮಾತುಗಳೇನೊ ಆಲೋಚಿಸಿ ನೋಡೆ ೪

ಹೊನ್ನು ಹಣ ತೂಗಬೇಕಾದರೆ ಮೊದಲಿಗೆ
ಚಿನ್ನ ಹಾಕುವರೇನೊ ಚಿನ್ಮಯ ರೂಪ
ಮುನ್ನ ನಿನ್ನವರ ದರುಶನವಾದ ಮೇಲೆ ಪಾ
ವನ್ನ ಶರೀರನೆ ನಿನ್ನ ಕಾಂಬುವದುಚಿತ ೫

ಜರೆ ಮರಣ ರಹಿತ ಸುಜನರ ಪರಿಪಾಲಾ ನಿ
ರ್ಜರ ಗಣಕೆ ನಿತ್ಯ ವಜ್ರ ಪಂಜರಾ
ಜರೆಗೆ ವರವಿತ್ತ ದನುಜರ ವಂಶನಾಶಾ ನಿ
ರ್ಜರ ನದಿ ಜನಕಾಂಬುಜ ರವಿನಯನ ದೇವಾ ೬

ಸ್ಥೂಲ ಮತಿಯಿಂದ ಪೇಳಿದೆನೆಂದು ಚೆನ್ನಾಗಿ
ಲಾಲಿಸು ಲಲಿತಾಂಗಿ ಲಕುಮಿ ರಮಣಾ
ನೀಲಗಿರಿ ನಿವಾಸ ವಿಜಯ ವಿಠಲ ವೆಂಕಟ
ವಾಲಗವ ಕೈಕೊಳ್ಳೊ ಯೋಗ್ಯತವನಿತು ೭

ಪರಮಾತ್ಮನನ್ನು ಹೀಗೆ ಪ್ರಾರ್ಥಿಸಿ ಹಿಂದೆ ಆಡಿದ ಮಾತುಗಳನ್ನು ಕ್ಷಮಿಸಬೇಕೆಂದು ನಮಿಸಿದರು. ನಿನ್ನ ದರುಶನಕೆ ಬಂದವನಲ್ಲ' ಎಂಬ ಕೃತಿಯಲ್ಲಿ ತಾವಾಡಿದ ಪ್ರತಿಯೊಂದು ಮಾತಿಗೆ ದಾಸರು 'ನಿನ್ನ ದರುಶನಕೆ ಬಂದವನೊ' ಎಂಬ ಕೃತಿಯಲ್ಲಿ ಉತ್ತರಿಸಿರುವ ಪರಿ ಎಷ್ಟು ಭಯಭಕ್ತಿ ಪೂರಿತವಾಗಿದೆ ಎಂಬುದನ್ನು ವಾಚಕರು ಗಮನಿಸಬೇಕು. 'ನಿನ್ನ ದರುಶನಕೆ ಬಂದವಲ್ಲ' ಎಂಬ ಕೃತಿಯಲ್ಲಿ ಆಡಿದ ಮಾತನ್ನು ಸ್ಥೂಲಮತಿಯಿಂದ ಪೇಳಿದೆ 'ಮಿಕ್ಕ ಮಂದ ಜನಕೆ ನಿನ್ನ ಭಕುತರ ಮೇಲೆ ಭಕುತಿ ಪುಟ್ಟುವುದಕೆ ನಾ ಪೇಳಿದ್ದು' ಎಂದು ಪ್ರಾರ್ಥಿಸಿ 'ವೆಂಕಟ ವಾಲಗ ಕೈಕೊಳ್ಳೊ' ಎಂದು ಅನನ್ಯವಾಗಿ ಭಜಿಸಿರುವುದು ಈ ಎರಡು ಕೃತಿಗಳಲ್ಲಿನ ಸಂಬಂಧವನ್ನು ಚೆನ್ನಾಗಿ ತೋರಿಸುತ್ತದೆ.

ಶ್ರೀ ವೆಂಕಟೇಶನ ದರ್ಶನದಿಂದ ಸಮಾಧಾನ ಮನಸ್ಸಿಗಾದುದರಿಂದ ವಿಜಯದಾಸರು ಬ್ರಹ್ಮೋತ್ಸವದ ದಿನ ದೇವಾಲಯದ ಆವರಣದಲ್ಲಿಯೇ

ಧ್ಯಾನಾಸಕ್ತರಾದರು. ಶ್ರೀ ಹರಿಯನ್ನು ಹೃದಯ ಕಮಲದಲ್ಲಿ ಕಂಡು ಧ್ಯಾನಾಸಕ್ತರಾದುದರಿಂದ ಅವರು ಎಷ್ಟು ಹೊತ್ತು ಧ್ಯಾನಿಸುತ್ತಾ ಕುಳಿತರೆಂಬುದು ಅವರಿಗರಿವಾಗಲಿಲ್ಲ. ಆದರೆ ಆ ದಿನ ಬ್ರಹ್ಮೋತ್ಸವವಾದುದರಿಂದ ಹೊರಗೆ ಬ್ರಹ್ಮರಥದಲ್ಲಿ ಸನ್ನಿಹಿತನಾಗಿದ್ದ ಲಕ್ಷ್ಮೀವೆಂಕಟೇಶನನ್ನು ಮೆರವಣಿಗೆಯಲ್ಲಿ ಕರಿದೊಯ್ಯಲು ಸಹಸ್ರಾರು ಭಕ್ತರು ಸಿದ್ಧರಾಗಿ ಭಕ್ತಿಯಿಂದ ಬ್ರಹ್ಮರಥವನ್ನು ಎಳೆಯಲು ಯತ್ನಸಿದರೂ ರಥ ಒಂದಡಿ ಮುಂದೆ ಬರಲಿಲ್ಲ. ಶ್ರೀ ಹರಿಯು ಭಕ್ತವತ್ಸಲನಲ್ಲವೇ? ವಿಜಯದಾಸರ ಭಕ್ತಿಯನ್ನು ತಾಳ್ಮೆಯನ್ನೂ ಹಿಂದಿನ ದಿನಗಳಲ್ಲಿ ಪರೀಕ್ಷಸಿದ್ದ ಶ್ರೀ ಹರಿ ಅಂದು ವಿಜಯದಾಸರ ಸ್ತೋತ್ರದಿಂದ ಮಾತ್ರ ಮುಂದೆ ಬರಲು ರಥ ಅಲುಗದಂತೆ ಕುಳಿತಿದ್ದನಂತೆ !

ವಿಜಯದಾಸರ ಹೃದಯದಲ್ಲಿ ಬಿಂಬ ಮೂರ್ತಿ ಅದೃಶ್ಯವಾದ ಮೇಲೆ ಹೊರಬಂದು.

ಸಾಗಿ ಬಾರಯ್ಯ ನೀನು ಗೋವಿಂದ ವೆಂಕಟ ಪ

ಸಾಗಿ ಬಾರಯ್ಯ ಭವರೋಗದ ವೈದ್ಯನೆ
ಬಾಗುವೆ ನಿನಗೆ ಚೆನ್ನಾಗಿ ತುತಿಪೆನಿಂದು
ಭಾಗಿರಥಿ ಪಿತ ಭಾಗವತರ ಸಂ
ಯೋಗ ರಂಗ ಉರಗಗಿರಿ ವೆಂಕಟ ಅ.ಪ.

ರಥದ ಮಧ್ಯದಲಿಪ್ಪನೆ ರಥಾಂಡಜ ವಾಹನನೆ
ರಥಾಂಗ ಪಾಣಿಯೆ ದಶರಥ ನೃಪ ಬಾಲ
ಪಾರ್ಥಗೆ ಒಲಿದವನ ರಥವ ನಡೆಸಿ ಅತಿ
ರಥ ಮಹರಥರ ವಿರಥರ ಮಾಡಿ ಗೆಲಿಸಿದೆ
ಪ್ರಥಮ ದೈವವೆ ಮನ್ಮಥಪಿತ ದೈತ್ಯರ
ಮಥನ ಭಕ್ತರ ಮನೋರಥನೆ ತಾರಾ
ಪಥವರ್ಣನೆ ತವಕಥಾಶ್ರವಣದಲಿ ಸು
ಪಥವ ತೋರಿಸು ಪ್ರಥಮಾಂಗದೊಡೆಯ ೧

ನಿಲ್ಲದೆ ಬರುವುದು ಪುಲ್ಲಲೋಚನ ಸಿರಿ
ವಲ್ಲಭ ಸರ್ವರಿಗು ಬಲ್ಲಿದನೆ ಅ ಪ್ರತಿ
ಮಲ್ಲ ಮುರ ವಿರೋಧಿ ಮೆಲ್ಲ ಮೆಲ್ಲನೇ ಪಾದ
ಪಲ್ಲವ ತೋರುತ್ತ ಎಲ್ಲಾ ಕಾಲದಿ ನಮ್ಮ
ನೆಲ್ಲರುದ್ಧರಿಪುದು ಎಲ್ಲಿ ನಿನಗೆ ಸರಿ
ಯಿಲ್ಲವೂ ನೋಡಲು ಸಲ್ಲುವುದೋ ಬಿರು
ದಲ್ಲಿಗಲ್ಲಿಗೆ ಗುಣ ಬಲ್ಲವರಾರಿನ್ನು
ನೆಲ್ಲಕಟ್ಟು ಕೊನೆಯಲ್ಲಪ್ಪ ವಿಶ್ವ ೨

ಬೊಮ್ಮ ಮೊದಲು ಮನುಜೋತ್ತಮರು ಕಡೆಯಾಗಿ
ನಿಮ್ಮದಾಸರು ಅವರ ಸಮ್ಮಂಧಿಗಳ ಪಾದ
ನೆಮ್ಮಿ ಕೊಂಡಿಪ್ಪಂಥಧಮ್ಮನು ನಾ ಸರ್ವೋ
ತ್ತುಮ್ಮನೇಕ ಗುಣ ಮಹಿಮ್ಮ ವಿಭೂಷಿತ
ರಮ್ಮೆ ಧರಣಿ ದೇವಿ ಇಮ್ಮಹಿಷೇರ ಕೂಡಿ
ಸಮ್ಮುಖನಾಗುತ ಸುಮ್ಮನೆ ಬಾಬಾ
ಹಿಮ್ಮೆಟ್ಟದೆ ಸಿರಿ ವಿಜಯ ವಿಠಲ ಅನು
ಪಮ್ಮ ಚರಿತ ಪರಬೊಮ್ಮ ತಿರುಮಲೇಶ ೩

ಎಂದು ಹಾಡಿದಾಗ ವೆಂಕಟೇಶ ಇಮ್ಮಹಿಷೇರ ಕೂಡಿ ಸಮ್ಮುಖನಾಗುತ ರಥದಲ್ಲಿ ವೇಗವಾಗಿ ನಡೆದು ಬಂದನಂತೆ.

ಆದವಾನಿಯ ದಿವಾನರಾಗಿದ್ದ ತಿಮ್ಮಣ್ಣನು ವಿಜಯದಾಸರ ಶಿಷ್ಯನಾದ ಮೇಲೆ ದಾಸರು ಹೆಚ್ಚು ಕಾಲ ಆದವಾನಿಯಲ್ಲಿಯೇ ಕಳೆಯುತ್ತಿದ್ದರೆನಿಸುತ್ತದೆ. ಆಗ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸುರಕಲ್ಲಿನ ಭಾಗಣ್ಣ ಗಾಯತ್ರಿ ಮಂತ್ರದ ಪುನಶ್ಚರಣೆಯಿಂದ ಭೂತ ಭವಿಷ್ಯತ್ ಜ್ಞಾನವನ್ನು ಸಂಪಾದಿಸಿ ಪ್ರಸಿದ್ಧ ಜ್ಯೋತಿಶಾಸ್ತ್ರಜ್ಞರಾಗಿದ್ದರು. ಅಲ್ಲದೆ ' ವೆಂಕಟಕೃಷ್ಣ ' ಎಂಬ ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸುತ್ತಿದ್ದರು. ಒಮ್ಮೆ ವಿಜಯದಾಸರ ಭೇಟಿ ಭಾಗಣ್ಣನವರಿಗೆ

ಯಾದಗಿರಿಯಲ್ಲಿ ಲಭಿಸಿದಾಗ ಭಾಗಣ್ಣನವರು ವಿಜಯದಾಸರ ಶಿಷ್ಯರಾಗಲು ಅಪೇಕ್ಷಿಸಿದರು. ವಿಜಯದಾಸರ 'ಗೋಪಾಲವಿಠಲ' ಎಂದು ಅಂಕಿತೋಪದೇಶವನ್ನು ಮಾಡಿದರು. ಭಾಗಣ್ಣನವರಿಗೆ ವಿಜಯದಾಸರು ಕ್ಷಯ ಸಂವತ್ಸರದ ಮಾರ್ಗಶಿರ ಶುದ್ಧತ್ರಯೋದಶಿ ಶುಕ್ರವಾರ ಅಶ್ವಿನಿ ನಕ್ಷತ್ರದಲ್ಲಿ ಅಂಕಿತೋಪದೇಶವನ್ನು ಮಾಡಿದರೆಂದು ಚಿಪ್ಪಗಿರಿಯ ವಿಜಯದಾಸರ ಕೃತಿಗಳಲ್ಲಿನ ಪುಸ್ತಕದಲ್ಲಿ ಗೋಪಾಲವಿಠಲರಿಗುಪದೇಶಿಸಿದ ಅಂಕಿತ ಪದದ ಮೇಲೆ ಬರೆದಿರುವುದರಿಂದ ಕ್ರಿ.ಶ.೧೭೪೬ ರಲ್ಲಿ ಭಾಗಣ್ಣನವರಿಗೆ ಅಂಕಿತವಾಯಿತೆಂದು ಹೇಳಬಹುದು.

ಗೋಪಾಲವಿಠಲ ನಿನ್ನ ಪೂಜೆ ಮಾಡುವೆನು
ಕಾಪಾಡು ಈ ಮಾತನು
ಅಪಾರ ಜನುಮದಲ್ಲಿ ಕೂಡಿದವನ ಮೇಲೆ
ನೀ ಪ್ರೀತಿಯನು ಮಾಡಿ ನಿಜದಾಸರೊಳಗಿಡು ಪ

ಶ್ರುತಿ ಶಾಸ್ತ್ರ ಪುರಾಣ ಮಿಕ್ಕಾದ ಗ್ರಂಥಗಳ
ಸತತ ಅಭ್ಯಾಸ ಮಾಡಿ
ಮಿತಿ ಇಲ್ಲದಲೆ ತೀರ್ಥಯಾತ್ರೆ ದಾನ ನಾನಾ
ವ್ರತಗಳನು ಬಿಡದೆ ಮಾಡಿ
ಮತಿಯಲ್ಲಿ ನಿಂದು ಮಹಾಸ್ತೋತ್ರಗಳ ಗೈದು ಉ
ನ್ನತ ತಪಸುಗಳ ಮಾಡಿ
ಹಿತ ಪುಣ್ಯದಿಂದವಗೆ ಉಪದೇಶ ಮಾಡಿದೆನೋ
ಚ್ಯುತ ದೂರ ನಿನ್ನ ಕರುಣಾಸಕೆ ಎಣೆಗಾಣೆ ೧

ಅಂಕಿತ ನಾನಿತ್ತೆ ನಿನ್ನ ಪ್ರೇರಣೆಯಿಂದ
ಕಿಂಕರಗೆ ಲೌಕಿಕ ಡೊಂಕ ನಡತಿಯ ಬಿಡಿಸಿ
ಜನುಮ ಜನುಮದಲ್ಲಿದ್ದ

ಪಂಕನಿಕರವ ತೊಲಗಿಸಿ ಶಂಕೆ ಪುಟ್ಟದಂತೆ
ಕಾವ್ಯಗಳ ಪೇಳಿಪದು
ಸಂಕಟಗಳಟ್ಟಿಧಾಗೆ ವೆಂಕಟಕೃಷ್ಣನು ನೀನೆ
ವಿಜಯವಿಠಲ ಇಂದು
ಅಂಕುರವು ಫಲಿಸಿ ಫಲಪ್ರಾಪ್ತಿಯಾಗಲಿ ೨

ಎಂಬ ಮೂರು ನುಡಿಗಳ ಅಂಕಿತ ಪದವನ್ನು ರಚಿಸಿ ಉಪದೇಶಿಸಿದರು. ಭಾಗಣ್ಣನವರಿಗೆ ವಿಜಯದಾಸರು ಯಾದಗಿರಿ ಎಂಬ ನರಸಿಂಹ ಕ್ಷೇತ್ರದಲ್ಲಿ ಅಂಕಿತ ಪ್ರದಾನ ಮಾಡಿದರೆಂದು ತಂದೆ ಗೋಪಾಲ ವಿಠಲರು ತಿಳಿಸಿದ್ಧಾರೆ.

ಧಾತ್ರಿಯೊಳು ಯಾದವಗಿರಿಯ ಸತ್ಪಾತ್ರ ತಿಮ್ಮಣ್ಣನೆಂಬನಾ
ತೀರ್ಥಯಾತ್ರೆಯ ನೆವದಿಂದಾ ಕ್ಷೇತ್ರದಲಿ ವಾಸ ಮಾಡ್ದನಾ
ವೆಂಕಟಕೃಷ್ಣೆಂದು ಪದಗಳಿಗಂಕಿತವು ನೀಡುತಲಿರೆ
ವೆಂಕಟೇಶನ ದಾಸವರ್ಯರು ಸೋಂಕಿ ವಿಜಯದಿಂ ಬರುತಿರೆ
ದಾಸವರ್ಯರು ಕಂಡು ಇವರಿಗುಪದೇಶವನು ಕೊಡಲಾಕ್ಷಣಾ
ಏಸು ಜನ್ಮದ ಸುಕೃತವೆನುತಲಿ ಲೇಸು ಲೇಸೆಂದು ಮೆರೆದನಾ

ಭಾಗಣ್ಣನವರು ಅಂಕಿತ ಪಡೆದ ಮೇಲೆ ಗೋಪಾಲದಾಸರೆಂದು ಪ್ರಸಿದ್ಧರಾದರು.

ಶ್ರುತಿ ಶಾಸ್ತ್ರ ಪುರಾಣ ಮಿಕ್ಕಾದ ಗ್ರಂಥಗಳ ಸತತ ಅಭ್ಯಾಸ ಮಾಡಿ ಎಂದು ವಿಜಯದಾಸರು ಸಂಸ್ಕೃತ ತತ್ವಶಾಸ್ತ್ರಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ವಿಜಯದಾಸರು ಬಾಲ್ಯದಲ್ಲಿಯೇ ತಮ್ಮ ತಂದೆಯವರಿಂದ ಸಂಸ್ಕೃತ ಅಭ್ಯಾಸವನ್ನು ಮಾಡಿದ್ದು ಹರಿದಾಸರಾದ ಮೇಲೆ ವೇದೋಪನಿಷತ್ತುಗಳ ಅಧ್ಯಯನವನ್ನು ಆಸಕ್ತಿಯಿಂದ ಮಾಡಿರಬಹುದೆನ್ನಿಸುತ್ತದೆ. ಶ್ರೀ ವಿಜಯದಾಸರು ಕೇವಲ ಮಧ್ವ ತತ್ವವನ್ನು ಕನ್ನಡ ಭಾಷೆಯಲ್ಲಿ ತಿಳಿದ ವ್ಯಕ್ತಿಗಳಷ್ಟೇ ಆಗಿರದೆ, ಮಾಧ್ವಯತಿ ಪರಂಪರೆಯಲ್ಲಿ ಬಂದ ಅನೇಕ

ಪೀಠಾಧಿಪತಿಗಳ ನೇತೃತ್ವದಲ್ಲಿ ಅಧ್ಯಯನ ಮಾಡಿದ ಪಂಡಿತರು ಹೇಗೆ ಸಿದ್ಧಾಂತವನ್ನು ನ್ಯಾಯ, ತರ್ಕ, ಮೀಮಾಂಸಾದಿಗಳೊಡನೆ ಸಂಸ್ಕೃತದಲ್ಲಿಯೇ ವಾಗ್ವಾದಗಳನ್ನು ಪ್ರತಿವಾದಿಗಳೊಡನೆ ನಡೆಸಿ ಜಯದುಂದುಭಿಯನ್ನು ಮೊಳಗಿಸುತ್ತಿದ್ದರೋ ಅಂತೆಯೇ ವಿಜಯದಾಸರು ಸಿದ್ಧಾಂತವನ್ನು ಕರತಲಾಮಲಕವನ್ನಾಗಿಸಿಕೊಂಡು ಪ್ರತಿವಾದಿಗಳನ್ನು ಜಯಿಸುವ ಸಾಮರ್ಥ್ಯವನ್ನು ಪಡೆದಿದ್ದ ಮೇಧಾವಿಗಳಾಗಿದ್ದರು. ರಾಮಾಶಾಸ್ತ್ರಿ ಎಂಬ ಅದ್ವೈತ ತತ್ವ ಪಂಡಿತರೊಡನೆ ಯುಕ್ತಿ-ಯುಕ್ತವಾಗಿ ವಿಜಯದಾಸರು ವಾದಿಸಿ ಅವರನ್ನು ನಿರುತ್ತರರನ್ನಾಗಿ ಮಾಡಿದಾಗ ಅವರು ವಿಜಯದಾಸರ ಶಿಷ್ಯರಾದರಂತೆ.

ಶ್ರೀ ವಿಜಯದಾಸರಿಗಿದ್ದ ತಪೋಬಲ ಅಗಮ್ಯವಾದುದು. ಶಿಷ್ಯರ ಹಾಗೂ ದುಃಖಿತ ಜನರನ್ನು ಕಂಡಾಗ ಅವರು ಉದಾರಿಗಳಾಗಿ ಅನೇಕ ರೀತಿಯಿಂದ ಅವರಿಗೆ ಉಪಕರಿಸುತ್ತಿದ್ದರು. ಅವರ ಉದಾರವಾದ ಕೊಡುಗೆಯಲ್ಲಿ ಆಯುರ್ದಾನವೂ ಸೇರಿದೆ. ತಮ್ಮ ಆಯಸ್ಸಿನ ಕೆಲವು ವರ್ಷಗಳನ್ನು ಅನೇಕರಿಗೆ ದಾನ ಮಾಡುವ ಶಕ್ತಿ ಅವರಿಗಿದ್ದುದರಿಂದ ಅವರೊಬ್ಬ ಮಹಿಮೋಪೇತ ವ್ಯಕ್ತಿಗಳೆಂದು ಪ್ರಸಿದ್ಧರಾಗಿದ್ದಾರೆ.

ಅನೇಕ ಭಕ್ತರಿಗೆ ಬಂದ ಕಷ್ಟ ಪರಂಪರೆಯನ್ನು ನೋಡಿ ವಿಜಯದಾಸರ ಮನಸ್ಸು ಕರಗಿ ಅವರನ್ನು ಅಂತಹ ಕುತ್ತುಗಳಿಂದ ದೂರ ಮಾಡುವ ಪ್ರಯತ್ನದಲ್ಲಿ ಸಫಲರಾದ ವಿಜಯದಾಸರು ಎಲ್ಲವೂ ಶ್ರೀ ಹರಿಯ ಅನುಗ್ರಹವೇ ಎಂದು ತಿಳಿದು ಸಂತೋಷದಿಂದಿದ್ದರು. ಸತ್ಪುರುಷರ ಲಕ್ಷಣವೇ ಹೀಗೆ 'ಪರೋಪಕಾರಾರ್ಥಮಿದಂ ಶರೀರಂ' ಎಂದು ಅವರ ಭಾವನೆ. ಇಂತಹ ಭಕ್ತರ ಹೃದಯದ ಪರಿಪಕ್ವತೆಯನ್ನು ಆ ದೈವವು ಪರೀಕ್ಷಿಸುವ ರೀತಿಯೂ ಒಮ್ಮೊಮ್ಮೆ ಭಯಂಕರವಾಗಿರುವುದುಂಟು. ಆ ಭಕ್ತನ ಭಕ್ತಿಯ ಎತ್ತರವನ್ನು ಪರೀಕ್ಷಿಸಲು ದೇವರು ಭಕ್ತನಿಗೆ ಬಡತನವನ್ನೊಮ್ಮೆ ನೀಡಿ, ಸಿರಿವಂತಿಕೆಯವನ್ನು ಮತ್ತೊಮ್ಮೆ ಕರುಣಿಸಿ, ಕೊಟ್ಟದ್ದನ್ನು ಅಪಹರಿಸಿ ಲೋಕದಲ್ಲಿ ಲೋಗರನ್ನಾಗಿ ಮಾಡಿ ಬಂಧು ಬಾಂಧವರನ್ನಗಲಿಸಿ ನಿರಾಶ್ರಿತ ವ್ಯಕ್ತಿಯನ್ನಾಗಿ ಮಾಡಿ ಆ ಭಕ್ತ ಹೃದಯದ ಪರಿಪಕ್ವತೆಯನ್ನು ಅಳೆಯುತ್ತಾನೆ. ಈ ಯಾವ ಪರೀಕ್ಷೆಗಳಲ್ಲಿಯೂ ಸೋಲದೆ

ದೃಢ ಚಿತ್ತನಾಗಿ ಪರಮಾತ್ಮನಲ್ಲಿ ಭಕ್ತಿಯನ್ನು ಒಂದೇ ರೀತಿಯಾಗಿ ತೋರುವವನೆ ನಿಜವಾದ ಭಕ್ತನಲ್ಲವೆ? ಅಪರಂಜಿ ಬಂಗಾರ ಪುಟಕ್ಕಿಟ್ಟಾಗ ತನ್ನ ಕೊಳೆಯೆಲ್ಲವನ್ನು ಕಳೆದುಕೊಂಡು ಪ್ರಜ್ವಲಿಸುವಂತೆ ಆ ದೇವರ ಪರೀಕ್ಷೆಗಳಿಂದ ಭಕ್ತನು ತನ್ನ ಪಾಪಗಳಿಂದ ವಿಮುಕ್ತನಾಗಿ ಪುಣ್ಯಪುಂಜನಾಗಿ ಬೆಳಗುತ್ತಾನೆ. ಇಂತಹ ಪ್ರಸಂಗ ವಿಜಯದಾಸರ ಜೀವನದಲ್ಲಿಯು ನಡೆಯಿತು. ಶೇಷಗಿರಿ ತಂದೆ ನಡೆದ ಹಾದಿಯಲ್ಲಿ ಅವರ ಮನಸ್ಸಿಗನುಗುಣವಾಗಿ ನಡೆಯುತ್ತಾ ಹರಿದಾಸನೆನಿಸಿಕೊಂಡಿದ್ದನು. ಇದರಿಂದ ವಿಜಯದಾಸರಿಗೂ ಅಪಾರವಾದ ಸಂತೋಷವಿತ್ತು. ತಂದೆಯ ಮನಸ್ಸಿನಂತೆ ನಡೆಯುವ ಪುತ್ರನಿಂದ ಯಾವ ತಂದೆಗೆ ತಾನೆ ತೃಪ್ತಿಯಿರುವುದಿಲ್ಲ. ಆದರೆ ಇಂತಹ ಶೇಷಗಿರಿ ಕ್ರಿ.ಶ.೧೭೫೧ರಲ್ಲಿ ಮೃತ್ಯುವಿಗೀಡಾದನು.

ಹೋದ್ಯಾ ಶೇಷಗಿರಿದಾಸ ಸುಲಭ ಹಾದಿಯನು ಮೆಟ್ಟಿ ನಮ್ಮನ್ನು ಭವಾಬ್ಧಿಯೊಳಿಟ್ಟು ಎಂದು ದುಃಖವಾದಾಗ

ಶೋಕ ಯಾತಕೆಮನವೆ ನಿನಗೆ ಇಂದು
ಈ ಕುಮಾರನು ನಿಜಗತಿಯ ಕೊಡಿಸುವನೇ?
ಕಾಲಕ್ಕೆ ತಕ್ಕದ್ದು ಮಾಡಿಸುವ ಹರಿ ತಾನು
ಮೇಲು ಕೀಳಾಗಗೊಡದಲೆ ನಿತ್ಯ
ಚಿಂತೆ ಮಾಡುವುದ್ಯಾಕೆ ಮನವೆ ನೀನು
ಪಿಂತೆ ಎಸಗಿದ ಕರ್ಮ ಎಂದಿಗಾದರೂ ಬಿಡದು
ನೀನೇನು ಮಾಡಲಾಪಿಯೋ ಲಕುಮೇಶ
ನಾನೀಗ ಪಡೆದದ್ದು ಉಣದಲೆ ಪೋಗುವದೆ ಪ

ಲೋಕದೊಳಗೆ ನಿನ್ನ ಕೊಂಡಾಡಿ ಪ್ರತಿದಿನ
ಏಕ ಭಕುತಿಲಿ ಸರ್ವೋತ್ತಮಾನೆಂದು
ಏಕಾಂತ ಭಜಿಪ ಮನುಜಗಾದರು ಬರೆದ
ವಾಕು ತಪ್ಪುವುದೇನು ಅಜನು ನಿರ್ಣೈಸಿದಾ

ಎಂದು ದುಃಖಿಸಿದರು ಹೀಗೆ ನಾನಾ ವಿಧವಾಗಿ ಒತ್ತರಿಸಿ ಬರುತ್ತಿದ್ದ ದುಃಖವನ್ನು ತತ್ವಶಾಸ್ತ್ರಗಳ ಬಲದಿಂದ ತಾವು ಸಮಾಧಾನ ಮಾಡಿಕೊಂಡರಲ್ಲದೆ ತಮ್ಮ ಪತ್ನಿಯವರಿಗೂ ಅಂತಹ ಸಮಾಧಾನದ ಮಾತುಗಳನ್ನು ಹೇಳಿದರು. ಹಿಂದೆ ಯಾವುದೋ ಜನ್ಮದಲ್ಲಿ ಕಾಡಿನಲ್ಲಿದ್ದ ಬಾಲ ಮೃಗವೊಂದನ್ನು ತಾವು ಕೊಂದು ಯಮಪುರಿಗೆ ಕಳುಹಿದುದರಿಂದ ಶೇಷಗಿರಿಯನ್ನು ಕಳೆದುಕೊಳ್ಳಬೇಕಾಯಿತೆಂದು ವಿಜಯದಾಸರು ಒಂದು ಕೃತಿಯಲ್ಲಿ ಹೇಳಿದ್ದಾರೆ.

ಚಿಂತೆಯಾತಕೆ ನಿನಗೆ ಎಲೆ ಪ್ರೀಯಳೆ
ಸಂತತಾ ತಿಳುಹುವೆನು ಭಕುತಿಯಿಂದ ಕೇಳು ಪ

ಸಂತಾನವಿಲ್ಲೆಂದು ಈರ್ವರೂ ಚಿಂತಿಪುದ್ಯಾಕೆ
ಪಿಂತೆ ಕಾಂತಾರದಲಿ ಬಾಲ ಮೃಗನಾ
ಅಂತಕನ ಪುರಿಗೆ ಅಟ್ಟಿದ ದೋಷದಿಂದ ನಮ
ಗಿಂತು ತೋರಿತು ಗುಟ್ಟು ಪೇಳಬಾರದು ರಮಣಿ
ಈ ಜನ್ಮ ಬಂದದಕೆ ಇನ್ನಾದರೆಚ್ಚೆತ್ತು
ಮಾಜಿಕೊಂಡಿದ್ದ ಜನರಂತೆ ನಡೆದು
ಮೂಜಗತ್ಪತಿ ಸಿರಿ ವಿಜಯವಿಠಲನ ಸ
ರೋಜ ಚರಣವನು ಪೂಜಿಸುವೆನೊ ರಮಣಿ

ವಿಜಯದಾಸರು ಲೌಕಿಕ ಸಂಪಾದನೆಗಾಗಿ ಶ್ರೀ ಹರಿಯನ್ನು ಮೊರೆ ಹೊಕ್ಕವರಲ್ಲ. ಜೀವನದ ಕ್ಷಣಿಕತೆಯನ್ನು ದುಃಖ ಮಿಶ್ರಿತವಾದ ಸುಖ ಸ್ವರೂಪವನ್ನು ಅರಿತುಕೊಂಡು ಅವರು ಭವಬಂಧನದ ಸರಪಳಿಯನ್ನು ಕಳಚಿಕೊಳ್ಳಲೆಂದು ಉನ್ನತ ಭಕ್ತಿ ಭಿಕ್ಷುಗಳಾದ ಹರಿದಾಸರವರು. ಅಂತಹವರನ್ನು ಲಕ್ಷ್ಮೀ ವೆಂಕಟೇಶನು ಮತ್ತೊಮ್ಮೆ ಬೇರೊಂದು ಪರೀಕ್ಷೆಗೀಡು ಮಾಡಿದ ಪ್ರಸಂಗ ಬಹು ಸ್ವಾರಸ್ಯವಾಗಿದೆ.

ಚೀಕಲಪರಿವಿಯಲ್ಲಿದ್ದಾಗ ಒಂದು ದಿನ ವಿಜಯದಾಸರು ಪ್ರಾತಃ ಕಾಲದಲ್ಲಿ ಮನೆ ಬಿಟ್ಟು ಹೊರಗೆ ಹೋದವರು ಭೋಜನ ಸಮಯವಾದರೂ ಮನೆಗೆ ಹಿಂದಿರುಗಲಿಲ್ಲ. ಆಗ ಅವರ ಮನೆಗೆ ಮುತ್ತೈದೆಯೊಬ್ಬಳು ಬೆಳ್ಳಿಯ ತಟ್ಟೆಯಲ್ಲಿ

ಸೊಗಸಾದ ಷಡ್ರಸೋಪೇತವಾದ ನಾನಾ ವಿಧ ಭೋಜನ ಪದಾರ್ಥಗಳನ್ನು ಎಲೆ ಮುಚ್ಚಿ ತಂದು, ಬೆಳ್ಳಿಯ ತಂಬಿಗೆಯಲ್ಲಿ ಕೇಸರಿ ಬೆರಸಿದ ನೀರನ್ನಿಟ್ಟು ವಿಜಯದಾಸರು ತಮ್ಮ ಮನೆಗೆ ಭೋಜನಕ್ಕೆ ಒಪ್ಪಿಕೊಂಡವರು ಎಷ್ಟು ಹೊತ್ತಾದರೂ ಬಾರದಿದ್ದುದರಿಂದ ಮನೆಯವರು ಇವುಗಳನ್ನು ಕಳುಹಿಸಿದ್ದಾರೆಂದು ತಿಳಿಸಿ ಕೊಟ್ಟು ಅದೃಶ್ಯಳಾದಳಂತೆ. ಅನಂತರ ಮನೆಗೆ ವಿಜಯದಾಸರು ದಯ ಮಾಡಿದರು. ಮನೆಯೆಲ್ಲಾ ಪಚ್ಚ ಕರ್ಪೂರ ಕೇಸರಿ ಮತ್ತು ಹಸನಾದ ಘೃತದಿಂದ ಘಮಘಮಿಸುತಿತ್ತು. ಆಶ್ಚರ್ಯದಿಂದ ಮನೆಯಲ್ಲಿ ಕೇಳಿದಾಗ ಭೋಜನಕ್ಕೆ ಒಪ್ಪಿ ಮಾತುಕೊಟ್ಟು ಅನ್ಯರಿಗೆ ತೊಂದರೆ ಕೊಡುವುದು ಸರಿಯೆ ಎಂಬ ಪ್ರಶ್ನೆಯೇ ಬಂದಿತು. ಆದರೆ ಆ ದಿನ ವಿಜಯದಾಸರನ್ನು ಯಾರೂ ಭೋಜನಕ್ಕೆ ಆಹ್ವಾನಿಸಿರಲಿಲ್ಲವಂತೆ, ಶ್ರೀ ಹರಿ ಅನುಗ್ರಹಿಸಿದ ಭೋಜ್ಯ ವಸ್ತುಗಳನ್ನು ಭುಂಜಿಸಿ ಆನಂದಿಸಿದ ಮೇಲೆ ವಿಜಯದಾಸರಿಗೆ ತಮ್ಮ ಮನೆಗೆ ಸಾಕ್ಷಾತ್ ಸಂಪದಭಿಮಾನಿ, ಕ್ಷೀರಸಾಗರ ಕನ್ನಿಕೆಯಾದ ಲಕ್ಷ್ಮೀದೇವಿಯೇ ಬಂದಿರುವುದಾಗಿ ಭಾಸವಾಯಿತು. ಇದರಿಂದ ಉಂಟಾದ ಸಂತೋಷದೊಡನೆ ಆ ಭಕ್ತ ಹೃದಯಕ್ಕೆ ತಾಪವೂ ಆಯಿತು. ಆಗ ಭಾವಪರವಶರಾಗಿ.

ನೀನೊಲಿದುದಕ್ಕಿಹ ಸೌಖ್ಯವೆ ಇನ್ನು
ನಾನೊಲ್ಲೆ ನಾನೊಲ್ಲೆ ಸರ್ವೇಶ
ಮಾನಸದಲಿ ನಿತ್ಯ ನೆರನಂಬಿದಂಥ ಮಾನವನ ಕೂಡ
ಮಾನವಾಗಿಪ್ಪರೆ? ಪ

ಷಡುರಸ ನಾನಾ ಸುಭೋಜನ
ಬಿಡಿಸಯ್ಯ ದಾನವ ಭಂಜನ
ಒಡನೊಡನೆ ಮೊರೆಯಿಡುವೆನೊ ಕರುಣಿಸೊ
ಅಡಿಗಡಿಗಜ್ಞಾನ ಕೊಡದಂತೆ ಪ್ರತಿದಿನ
ಒಡಲಿಗೋಸುಗ ಪೊಡಮಟ್ಟು ನಿ
ನ್ನಡಿಗಳಿಗೆ ನಮಿಸದೆ ಕೇಳೆ

ನ್ನೊಡೆಯ ಧ್ಯಾನವ ಪಾಲಿಸಿ ಭವ
ದಡಿಯ ತಡೆಯಿಂದೆತ್ತಿ ನೋಳ್ಪುದು ೧

ಜನ ಜನರಿಂದ ಮನ್ನಣೆ ದೇವ
ಎನಗೆ ಹತ್ತದು ಕಾಣೊ ನಿನ್ನಾಣೆ
ಮನೋ ವಾಚ ಕಾಯದಲ್ಲಿನಿತು ಸಿದ್ಧವಿದೆ
ಅನುವಿಲ್ಲ ಯೋಚನೆ ಯಾತಕೆ ದೇವಾ
ಜನುಮದೊಳು ಸಾಧನವಿದಾಯಿತು
ಧನ ಕನಕ ವಾಹನಗಳಿಂದಲಿ
ಘನಗತಿಗೆ ಒಂದಿನ ಒಂದಾದರೂ
ಗುಣದಿ ನಿನ್ನಾರ್ಚನೆ ಮಾಡಲಿಲ್ಲ ೨

ಕಂಡ ಕಂಡಲ್ಲೆನ್ನ ತಿರುಗಿಸಿ
ಥಂಡ ಥಂಡದಿಂದ ಮರುಗಿಸಿ
ಮಂಡಲದೊಳು ನೀ ಚಂಡ ಕರ್ಮದೊಳಿಟ್ಟು
ಉಂಡುಂಡದಕೆಲ್ಲ ದಂಡಿಸುವರೇನೊ
ತೋಂಡ ನಾನೈ ತವಕದಿಂದಲಿ
ಖಂಡ ಮತಿಯನು ಕೊಡದೆ ಒಲಿದು
ಹಿಂಡು ಮುಕ್ತರ ಸಂಗವೀವುದು
ಗಂಡುಗಲಿ ಸಿರಿ ವಿಜಯವಿಠಲ

ಷಡುರಸ ನಾನಾ ಭೋಜನದಲ್ಲಿನ ಆಸಕ್ತಿ ನಿರಸನಕ್ಕಾಗಿ ಶ್ರೀ ಹರಿಯಲ್ಲಿ ನಿವೇದಿಸಿಕೊಂಡು ನೀನೊಲಿದುದಕ್ಕಿಹ ಸೌಖ್ಯವೆ ನಾನೊಲ್ಲೆ ನಾನೊಲ್ಲೆ ಸರ್ವೇಶ ಎಂದು ಹಾಡಿರುವುದು ವಿಜಯದಾಸರ ಜೀವನದ ಗುರಿ ಏನೆಂಬುದನ್ನು ಸ್ಪಷ್ಟಪಡಿಸುತ್ತದೆ.

ವಿಜಯದಾಸರು ಹೀಗೆ ಲೋಕದ ಜೀವನಕ್ಕೆ ಅಂಟಿಯೂ ಅಂಟದಂತಿದ್ದರು. ಸಾಧನೆಯ ದಿವ್ಯ ಮಾರ್ಗದಲ್ಲಿ ಸಾಗುತ್ತಾ ಕಾಲಕಾಲಕ್ಕೆ ಸ್ಫೂರ್ತಿ ಕುಡಿಯೊಡೆದಂತೆ

ಅನೇಕ ಕೃತಿಗಳನ್ನು ರಚಿಸಿ, ಕನ್ನಡಿಗರಿಗುಪಕರಿಸಿದರು. ಇವರು ರಚಿಸಿದ ಕೀರ್ತನೆಗಳಲ್ಲಿ ಐನೂರಕ್ಕೂ ಹೆಚ್ಚಾಗಿ ದೊರೆತಿವೆ. ಹರಿದಾಸ ಚತುಷ್ಟರಲ್ಲಿ ಎರಡನೆಯವರಾದ ಶ್ರೀ ವಿಜಯದಾಸರು ಉಳಿದ ಇಬ್ಬರು ಮಹನೀಯರಾದ ಶ್ರೀ ಗೋಪಾಲದಾಸರು ಹಾಗೂ ಶ್ರೀಜಗನ್ನಾಥದಾಸರಿಗೆ ಮಾರ್ಗದರ್ಶಕರಾದವರು. ಶ್ರೀ ಜಗನ್ನಾಥದಾಸರಿಗೆ ಗೋಪಾಲದಾಸರಿಂದ ನಲವತ್ತು ವರ್ಷಗಳ ಆಯುರ್ದಾನವನ್ನು ಮಾಡಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅಭೂತಪೂರ್ವವಾದ ಗ್ರಂಥವೆಂಬ ಪ್ರಶಸ್ತಿಗೆ ಪಾತ್ರವಾದ ಶ್ರೀ ಹರಿಕಥಾಮೃತಸಾರ ಎಂಬ ತತ್ವ ಶಾಸ್ತ್ರಗರ್ಭಿತವಾದ ಕಾವ್ಯವನ್ನು ರಚಿಸಲು ವಿಜಯದಾಸರು ನೆರವಾದರು. ಶ್ರೀ ಗೋಪಾಲದಾಸರಿಂದ ಶ್ರೀನಿವಾಸಾಚಾರ್ಯರಿಗೆ ಅಂಕಿತ ಕೊಡಿಸಿ, ವಿಜಯದಾಸರು ಆಶೀರ್ವದಿಸಿದ ಘಟನೆಯಿಂದ ದಾಸರ ವ್ಯಕ್ತಿತ್ವ, ವಿಶಾಲ ಹೃದಯ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಯ ಮಾನವಿ ಕ್ಷೇತ್ರದಲ್ಲಿ ಶ್ರೀ ನರಸಪ್ಪ ಲಕ್ಷ್ಮಿಬಾಯಿ ದಂಪತಿಗಳಿಗೆ ಶ್ರೀನಿವಾಸ ಎಂಬ ಪುತ್ರನಿದ್ದನು. ಚಿಕ್ಕಂದಿನಲ್ಲಿಯೇ ಮಂತ್ರಾಲಯದ ಶ್ರೀ ವರದೇಂದ್ರ ತೀರ್ಥ ಶ್ರೀ ಪಾದಂಗಳವರಲ್ಲಿ ವಿದ್ಯಾಭ್ಯಾಸ ಮಾಡಿದ ಶ್ರೀನಿವಾಸ ವೇದೋಪನಿಷತ್ತುಗಳ ರಹಸ್ಯವನ್ನು ಸತತ ಅಭ್ಯಾಸದಿಂದಲೂ ಪ್ರತಿಭೆಯಿಂದಲೂ ಅರಿತು ಗುರುಗಳ ಆಶೀರ್ವಾದಕ್ಕೆ ಪಾತ್ರನಾದನು. ವಿದ್ಯಾಭ್ಯಾಸವಾದ ಮೇಲೆ ಶ್ರೀ ಪಾದಂಗಳವರು ಸಂತೋಷದಿಂದ ಆಚಾರ್ಯ ಎಂಬ ಬಿರುದನ್ನಿತ್ತು ಆಶೀರ್ವದಿಸಿದರು. ಶ್ರೀನಿವಾಸಾಚಾರ್ಯರಾಗಿ ಮಾನವಿಗೆ ಬಂದ ಮೇಲೆ ಅನೇಕ ಶಿಷ್ಯರಿಗೆ ಪಾಠ ಹೇಳುತ್ತಾ ವಿದ್ವಾಂಸರೆಂಬ ಘನತೆಯಿಂದ ಸಂತೃಪ್ತ ಜೀವನವನ್ನು ನಡೆಸುತ್ತಿದ್ದರು. ಶ್ರೀನಿವಾಸಾಚಾರ್ಯರ ಸಂಸ್ಕೃತ ಪಾಂಡಿತ್ಯ ದಿನ ಕಳೆದಂತೆ ವರ್ಧಿಸುವುದರ ಜೊತೆಗೆ ಕನ್ನಡದಲ್ಲಿ ತತ್ವ ಶಾಸ್ತ್ರವನ್ನು ತಿಳಿಸುವ ಹರಿದಾಸರ ಗುಂಪಿನ ಮೇಲೆ ತಾತ್ಸಾರವು ಉಂಟಾಯಿತು. ಇವರ ತಾಯಿಯ ಸೋದರ ಸಂಬಂಧಿಯೇ ಆದ ಶ್ರೀ ವಿಜಯದಾಸರು ಮಾನವಿಗೆ ಬಂದಾಗ ಅಹಂಕಾರದಿಂದ ಬಂಧುವೊಬ್ಬರನ್ನು ಮಾತನಾಡಿಸುವುದಕ್ಕೂ ಆ ಸಂಸ್ಕೃತದ ವ್ಯಾಮೋಹ ಅಡ್ಡವಾಗಿ ನಿಂತಿತು. ಶ್ರೀನಿವಾಸಾಚಾರ್ಯರು ಮನಸ್ಸಿನಲ್ಲಿ ,

ದಾಸವೇಷವ ಧರಿಸಿ ಕೂಸಿ ಮಗ ನೀನು ಬಹು
ಮೋಸ ಪಡಿಸಿದೆ ಜನರ ಭಾಸ್ವದಪರೋಕ್ಷಿಯೆಂ
ದೇಸು ಬಗೆಯಾಯ್ತು ಕಲಿದೋಷ ಹಾ! ಹಾ!

ಎಂದು ಭಾವಿಸಿ ಕ್ಲೇಶಪಡಿಸಿದರಂತೆ 'ಇಂತು ಹರಿಕರಣ ಧೀಮಂತರನು ಬೈದ ಪರಿಣಾಮದಿಂದಲೋ ಏನೋ ಉದರಬೇನೆ ಆಚಾರ್ಯರಿಗೆ ಪ್ರಾಪ್ತವಾಗಿ ಹಾಸಿಗೆ ಹಿಡಿದು ಮಲಗಬೇಕಾಯಿತು

ಕಂಸಮರ್ದನ ದಾಸರಿಗೆ ಸಂಶಯದಿ ಎರಗದಲೆ ವಿದ್ವಾಂಸನೆಂದಹಂಕರಿಸೆ ಭವಗುಣದಿ ಬಂಧಿಸುವ ಎಂದು ಹರಿಕಥಾಮೃತ ಸಾರದಲ್ಲಿ ತಮ್ಮ ಜೀವನದ ಘಟನೆಯನ್ನೇ ಆಚಾರ್ಯರು ಧ್ವನಿಸಿರಬೇಕೆನಿಸುತ್ತದೆ . ಆ ಉದರಬೇನೆ ಯಾವ ಲೌಕಿಕ ವೈದ್ಯರಿಂದಲೂ ಹತೋಟಿಗೆ ಸಿಗದಿರಲು ಭವರೋಗ ವೈದ್ಯನನ್ನೆ ಶರಣು ಹೋದಾಗ ಶ್ರೀ ವಿಜಯದಾಸರನ್ನೇ ಶರಣು ಹೋಗಬೇಕೆಂದು ಸೂಚನೆಯಾಯಿತು. ವಿಧಿಯಿಲ್ಲದೆ ಚೀಕಲಪರಿವಿಯಲ್ಲಿದ್ದ ವಿಜಯದಾಸರಲ್ಲಿಗೆ ಬಂದು ನಮಸ್ಕರಿಸಿ ಕ್ಷಮೆಯನ್ನು ಕೇಳಿದಾಗ ಬಂಧುವನ್ನು ಪ್ರೀತಿಯಿಂದ ಮಾತಾನಾಡಿಸಿ ಅಭಯವಿತ್ತು, ಉತ್ತನೂರಿನ ಶ್ರೀ ಗೋಪಾಲದಾಸರಲ್ಲಿಗೆ ಹೋದರೆ ಗುಣವಾಗುವುದೆಂದು ವಿಜಯದಾಸರು ಆಶೀರ್ವದಿಸಿದರು. ಉತ್ತನೂರಿಗೆ ಹೋಗಿ ಗೋಪಾಲದಾಸರನ್ನು ಪ್ರಾರ್ಥಿಸಿದ ಮೇಲೆ, ವಿಜಯದಾಸರ ಅಪ್ಪಣೆಯಂತೆ.

ಎನ್ನ ಬಿನ್ನಪ ಕೇಳೊ ಧನ್ವಂತ್ರಿ ದಯಮಾಡೊ
ಸಣ್ಣವನು ಇವ ಕೇವಲ ಪ

ಬನ್ನ ಬಡಿಸುವ ರೋಗವನ್ನು ಮೋಚನ ಮಾಡಿ
ಚೆನ್ನಾಗಿ ಪಾಲಿಸುವುದು ಕರುಣಿ ಅ.ಪ

ಎಂದು ಗೋಪಾಲದಾಸರು ಕೃತಿಯನ್ನು ರಚಿಸಿ , ಶ್ರೀ ಹರಿಯನ್ನು ಪ್ರಾರ್ಥಿಸಿ ಧನ್ವಂತ್ರಿ ಮಂತ್ರ ಪೂರಿತವಾದ ಭಕ್ರಿಯನ್ನು ಶ್ರೀನಿವಾಸಾಚಾರ್ಯರಿಗೆ ನೀಡಿ ಉದರಬೇನೆಯನ್ನು ಹೋಗಲಾಡಿಸಿದರು. ಪಂಡರಪುರದ ವಿಠಲನ ದರ್ಶನಕ್ಕೆ

ಶ್ರೀನಿವಾಸಾಚಾರ್ಯರು ತೆರಳಿದಾಗ ಅಲ್ಲಿಯ ಚಂದ್ರಭಾಗ ನದಿಯಲ್ಲಿ ಮಿಂದಾಗ ತಲೆಯ ಮೇಲೆ 'ಜಗನ್ನಾಥ ವಿಠಲ' ಎಂಬ ಶಿಲಾಫಲಕ ದೊರೆತು ಶ್ರೀನಿವಾಸಾಚಾರ್ಯರು ಅಂದಿನಿಂದ ' ಶ್ರೀ ಜಗನ್ನಾಥ ದಾಸರೆಂದೇ' ಪ್ರಸಿದ್ಧಿಯಾದರು ಗೋಪಾಲದಾಸರನ್ನು ಗುರುಗಳೆಂದು ತೋರಿಸಿದ ಶ್ರೀ ವಿಜಯದಾಸರನ್ನು ಇನ್ನೊಂದು ಕೃತಿಯಲ್ಲಿ ಹೀಗೆ ನೆನಸಿದ್ದಾರೆ .

"...... ಘೋರ ವ್ಯಾಧಿಯ ನೋಡಿ ವಿಜ
ಯ ರಾಯ ಭೊರಿ ಕರುಣವ ಮಾಡಿ
ತೋರಿದವರಿವರೆ ಉದ್ಧಾರಕರೆಂದಂದಿ
ನಾರಭ್ಯ ತವಪಾದ ಸೇರಿದೆ ಸಲಹೆಂದು"

ವಿಜಯದಾಸರು ತಮ್ಮ ತಪೋಬಲವನ್ನು ಪರೋಪಕಾರಕ್ಕಾಗಿ ಉಪಯೋಗಿಸಿಕೋಂಡರೇ ವಿನಾ ಇತರರನ್ನು ಹಾಳು ಮಾಡಲು ಎಂದಿಗೂ ಪುಣ್ಯದ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲ. ಉಳಿದವರ ಸಂತೋಷವೇ ಅವರ ಜೀವನದ ಗುರಿಯಾಗಿತ್ತು. ಒಂದು ಸಲ ವಿಜಯದಾಸರ ಶಿಷ್ಯರಲ್ಲಿ ಕೆಲವರು ತೀರ್ಥಯಾತ್ರೆಗೆಂದು ಗುರುಗಳ ಅನುಜ್ಞೆಯನ್ನು ಪಡೆದು ಪಂಢರಪುರಕ್ಕೆ ಹೋಗಿದ್ದರು. ದಾಸರ ಜೊತೆಯಲ್ಲಿಯೇ ಉಳಿಯಬೇಕಾದ ಕೆಲವು ಶಿಷ್ಯರು ತಮಗೆ ವಿಠಲನ ದರ್ಶನ ಲಾಭವಿಲ್ಲೆಂದು ಮನಸ್ಸಿನಲ್ಲಿ ಆತಂಕ ಪಟ್ಟುಕೊಳ್ಳುತ್ತಿದ್ದರು. ಆದಿನ ದಾಸರು ಚೀಕನಪರಿವಿಯ ಅಶ್ವತ್ಥ ನರಸಿಂಹನ ಬಳಿಯಿದ್ದವರು, ತಮ್ಮ ಶಿಷ್ಯರ ಮನಸ್ಸಿನ ಚಿಂತೆಯನ್ನು ತಿಳಿದು ದೇವರ ಪೂಜೆ ಮಾಡುವ ಸಮಯದಲ್ಲಿ ತಮ್ಮ ಶಿಷ್ಯರಿಗೆ 'ಮುಸುಕು ಹಾಕಿ ಕೊಳ್ಳಿ' ಎಂದು ಹೇಳಿ ಕೆಲವು ನಿಮಿಷಗಳಾದ ಮೇಲೆ ಮುಸುಕು ತೆಗೆದು ದೇವರ ದರ್ಶನ ಮಾಡಿರಿ' ಎಂದು ಹೇಳಿದಾಗ ನರಸಿಂಹನ ಬದಲಾಗಿ ಶಿಷ್ಯರು ಪಾಂಡುರಂಗನನ್ನೇ ಕಂಡರಂತೆ. ಈ ಸಂಗತಿಯನ್ನು ಶ್ರೀ ಗೋಪಾಲದಾಸರು, ಅಂಗದ ಮುಸುಕು ತೆಗೆಯಲು ಕ್ಷೇತ್ರದಿ ಪಾಂಡುರಂಗನೋ ವಿಜಯರಾಯ ಎಂದು 'ಸ್ಮರಿಸುವೆ ನಾ ನಿಮ್ಮ ಚರಣಕಮಲ' ಎಂಬ ಕೃತಿಯಲ್ಲಿ ತಿಳಿಸಿರುವರು.

ರೀತಿಯಲ್ಲಿ ನ್ಯಾಯಸಂಧೆಯ ಪಂಡಿತರಾಗಿದ್ದ ಕಲ್ಲೂರು ಸುಬ್ಬಣ್ಣಾ ಚಾರ್ಯರ ಅಹಂಕಾರವನ್ನು ಮುರಿದು ಅವರ ಹೃದಯವನ್ನು ವಿಜಯದಾಸರು ನಿರ್ಮಲ ಮಾಡಿದರು.

ಒಂದು ದಿನ ಶ್ರೀ ಜಯತೀರ್ಥ ವಿರಚಿತ 'ಶ್ರೀ ಮನ್ನ್ಯಾಯಸುಧಾ' ಗ್ರಂಥದ ಮಂಗಳ ಮಹೋತ್ಸವ ವಿಜೃಂಭಣೆಯಿಂದ ನಡೆದಿತ್ತು. ಆದರೆ ಕಾರಣಾಂತರದಿಂದ 'ಮಂಡಿಗೆ' ಮಾಡುವ ಅಡಿಗೆಯವನು ಬರಲಿಲ್ಲವಂತೆ. ವಿಷಯ ತಿಳಿದ ವಿಜಯದಾಸರು ಅಡಿಗೆಯವನ ವೇಷಧರಿಸಿ ಅವನ ಕಾರ್ಯವನ್ನು ಪೂರೈಸಿ ಸುಧಾಶ್ರವಣಕ್ಕಾಗಿ ಆಗಮಿಸಿದರು. ಅನಂತರ ಸುಧಾಗ್ರಂಥದ ಕೆಲವು ವಾಕ್ಯಗಳ ಉಪದೇಶವನ್ನು ಮಾಡಬೇಕೆಂದು ಆಚಾರ್ಯರನ್ನು ಪ್ರಾರ್ಥಿಸಿದಾಗ ಆಚಾರ್ಯರು ಆಗ್ರಹಗೊಂಡರಂತೆ. ವಿಜಯದಾಸರು ಶಾಸ್ತ್ರಗ್ರಂಥಗಳನ್ನು ಗುರುಕುಲದಲ್ಲಿ ಸತತವಾಗಿ ಅಭ್ಯಾಸ ಮಾಡಿ ಅರಿತುಕೊಳ್ಳದೆ ಅಜ್ಞರಾದ ಕನ್ನಡ ಹರಿದಾಸರೆಂಬ ತಾತ್ಸಾರ ಅವರಲ್ಲಿದ್ದಿತೇನೋ? ಆಗ ದಾಸರು ಅಲ್ಲಿದ್ದ ಮೂರ್ಖನೊಬ್ಬನನ್ನು ಕರೆದು 'ಸುಧಾಗ್ರಂಥವನ್ನು ಅನುವಾದ ಮಾಡು ಎಂದಾಗ ಆ ವ್ಯಕ್ತಿ ತಲೆ ತಗ್ಗಿಸಿದ. ಆಗ ಅವನ ತಲೆಯ ಮೇಲೆ ವಿಜಯದಾಸರು ತಮ್ಮ ಅಮೃತ ಹಸ್ತವನ್ನಿಟ್ಟು 'ಆಚಾರ್ಯರಿಗೆ ಸುಧಾಗ್ರಂಥದಲ್ಲಿ ಅರ್ಥವಾಗದ ಸಮಸ್ಯೆಗಳನ್ನು ತಿಳಿಸಿ ಉತ್ತರಗಳನ್ನು ಹೇಳು ಎಂದು ಆಶೀರ್ವಾದಿಸಿದರು. ಮೂಕನೂ, ಮೂರ್ಖನೂ ಎನಿಸಿದ್ದ ಆ ಪರಿಚಾರಕ ಕಲ್ಲೂರು ಸುಬ್ಬಣ್ಣಾಚಾರ್ಯರ ಮನಸಿಲ್ಲಿದ್ದ ವಿವಿಧ ಸಮಸ್ಯೆಗಳನ್ನು ಉದಾಹರಿಸಿ ಸಮರ್ಪಕವಾದ ಉತ್ತರಗಳನ್ನು ಜನಸ್ತೋಮಕ್ಕೆ ಸುಲಲಿತವಾಗಿ ವಿವರಿಸಿದನು. ಆತನ ವಾಗ್ವೈಖರಿಯನ್ನು ಕೇಳಿ ಸಭೆ ಅಚ್ಚರಿಪಟ್ಟಿತು. ಆಚಾರ್ಯರು ವಿಜಯದಾಸರ ತಪೋಶಕ್ತಿಗೆ ಬೆರಗಾದರು. ತಾವು ಮಾಡಿದ್ದು ಅಪಚಾರವೆಂದು ಅರಿವಾಯಿತು. ಶ್ರೀ ವಿಜಯದಾಸರನ್ನು ಕ್ಷಮೆ ಕೋರಿದಾಗ ಅವರ ತಪ್ಪುಗಳನ್ನು ಕ್ಷಮಿಸಿ ವಿಶ್ವಾಸವನ್ನು ತೋರಿದರು. 'ಶ್ರೀವ್ಯಾಸ ವಿಠಲ' ಎಂಬ ಅಂಕಿತವನ್ನು ಶ್ರೀ ವೇಣುಗೋಪಾಲ ವಿಠಲರ ಮೂಲಕ ಉಪದೇಶ ಪಡೆದ ಮೇಲೆ ವಿಜಯದಾಸರ ಉಪಕಾರವನ್ನು ಆಚಾರ್ಯರು ಕೃತಜ್ಞತೆಯಿಂದ ಹೀಗೆ ಕೊಂಡಾಡಿದ್ದಾರೆ.

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ
ದುರಿತ ತರಿದು ಪೊರೆವ ವಿಜಯಗುರುಗಳೆಂಬರ
ದಾಸರಾಯನಾ ದಯವ ಸೂಸಿ ಪಡೆದನಾ
ದೋಷರಹಿತನಾ ಸಂತೋಷ ಭರಿತನಾ
ಮೋದ ಭರಿತನಾ ಪಂಚಭೇದವರಿತನಾ
ಸಾದು ಚರಿತನಾ ಮನ ವಿಷಾದ ಮರೆತನಾ
ವೇದ ಓದಲು ಬರಿದೆ ವಾದ ಮಾಡಲು
ಹಾದಿಯಾಗದೋ ಬುಧರ ಪಾದ ನಂಬದೆ
ಇಂದಿರಾಪತಿ ಇವರ ಮುಂದೆ ಕುಣಿವನೋ
ಅಂದ ವಚನವಾ ಜನಕೆ ತಂದು ಕೊಡುವನೋ
ಸಟೆಯಿದಲ್ಲವೊ ವ್ಯಾಸವಿಠಲ ಬಲ್ಲನೊ
ಪಠಿಸಬಹುದಿದು ಕೇಳಿ ಕುಟಿಲ ರಹಿತರೋ

ವಿಜಯ ಕವಚವೆಂದು ಪ್ರಸಿದ್ಧವಾಗಿರುವ ಇಪ್ಪತ್ತೇಳು ನುಡಿಗಳನ್ನೊಳಗೊಂಡ ಈ ಸ್ತೋತ್ರದಲ್ಲಿ ವಿಜಯದಾಸರ ವ್ಯಕ್ತಿತ್ವವನ್ನು ಆಚಾರ್ಯರು ತಾವು ಕಂಡಂತೆ ಸೊಗಸಾಗಿ ಚಿತ್ರಿಸಿದ್ದಾರೆ. 'ಮನ ವಿಷಾದ ಮರೆತ ಮೋದ ಭರಿತ' ವ್ಯಕ್ತಿ ಎಂಬ ಮಾತು ಇಲ್ಲಿ ಉಚಿತವಾಗಿ ಬಂದಿದೆ. ಸಂಪ್ರದಾಯವನ್ನನುಸರಿಸಿ ವೇದಗಳನ್ನೋದಿ ವಾದಿಗಳೊಡನೆ ವಾದ ಮಾಡಿ ಜಯ ಹೊಂದಿ ಭರತ ಖಂಡದ ಪುಣ್ಯಕ್ಷೇತ್ರಗಳ ಸಂದರ್ಶನ, ನದಿಗಳ ಸ್ನಾನಗಳಿಂದ ಅಪರೋಕ್ಷ ಜ್ಞಾನವಾಗುವುದಿಲ್ಲ, ಯಾವ ಕಾರ್ಯವನ್ನೂ ಮಾಡಿದರೂ ಅನುಸಂಧಾನ ಮುಖ್ಯ. ಅರಿಷಡ್ವರ್ಗಗಳನ್ನು ಜಯಿಸಿ ಶ್ರೀ ಹರಿಯಲ್ಲಿ ಹರಿದಾಸರಲ್ಲಿ ಅನನ್ಯ ಭಕ್ತಿಯಿಂದ ಮಾಡುವ ಕರ್ಮಗಳಿಂದ ಮಾತ್ರ ಪೂರ್ಣಫಲ ಪ್ರಾಪ್ತಿ- ಎಂಬ ಸಂದೇಶವನ್ನು ಆಚಾರ್ಯರು ವ್ಯಾಸವಿಠಲರೆನಿಸಿದ ಮೇಲೆ ಹಾಡಿದ್ದಾರೆ. ಒಮ್ಮೆ ಗೋಪಾಲದಾಸರು ಶ್ರೀ ಕೃಷ್ಣನ ದರ್ಶನಕ್ಕಾಗಿ ಉಡುಪಿ ಕ್ಷೇತ್ರಕ್ಕೆ ಹೋಗಿ ಬರಲು ಗುರುಗಳನ್ನು ಅನುಮತಿ ಬೇಡಿದರು ಆಗ ಮಾರ್ಗ ಮಧ್ಯದಲ್ಲಿ

ಗೋಪಾಲದಾಸರಿಗೊದಗ ಬಹುದಾದ ತೊಂದರೆಯನ್ನು ತಿಳಿದು ವಿಜಯದಾಸರು, ಶಿಷ್ಯನನ್ನು ಕಾಪಾಡ ಬೇಕೆಂದು ಉಗಾಭೋಗವೊಂದನ್ನು ರಚಿಸಿ ಉಪದೇಶಿಸಿದರು.

ಒಂದು ಕೈಯಲ್ಲಿ ಖಡ್ಗ
ಒಂದು ಕೈಯಲ್ಲಿ ಹಲಿಗೆ ಅಂದವಾಗಿ
ಹಿಡಿದುಕೊಂಡು ದಿವರಾತ್ರಿಯಲಿ
ಬಂದು ಬದಿಯಲ್ಲಿ ನಿತ್ಯ ಬಾರಾಸನನಾಗಿ
ಹಿಂದು ಮುಂದುಪದ್ರವವಾಗದಂತೆ
ಇಂದಿರೇರಮಣ ಕಾಯುತ್ತಲಿರೆ ಎನಗಾವ
ಬಂಧಕಗಳು ಇಲ್ಲ ಧನ್ಯ ಧನ್ಯ
ಕಂದರ್ಪನಯ್ಯ ಸಿರಿ ವಿಜಯವಿಠಲರೇಯ ದೇವ
ಎಂದೆಂದಿಗಾಪತ್ತು ಬರಲೀಯನು

ಉಡುಪಿ ಕ್ಷೇತ್ರಕ್ಕೆ ಹೋಗುವ ಮಾರ್ಗದಲ್ಲಿ ಮಂಡಗದ್ದೆ ಎಂಬ ಚಿಕ್ಕ ಊರಿನಲ್ಲಿ ಭೀಮ ಎಂಬುವನು ತನ್ನ ಊರಿಗೆ ಬಂದ ಪಥಿಕರನ್ನು ಆದರದಿಂದ ಉಪಚರಿಸಿ ಅವರಲ್ಲಿನ ಹಣದ ವಿಚಾರವನ್ನು ಸೂಕ್ಷ್ಮವಾಗಿ ಅರಿತು, ಅವರು ಮುಂದಿನ ಊರನ್ನು ಸೇರುವುದರಲ್ಲಿ ವೇಷ ಮರೆಸಿಕೊಂಡು ದಾರಿಯಲ್ಲಿ ತನ್ನ ಪರಿವಾರದವರೊಡನೆ ಬಂದು ಪಥಿಕರ ಒಡವೆ ವಸ್ತುಗಳನ್ನು ಅಪಹರಿಸುವುದು ಅವನ ಉದ್ಯೋಗವಾಗಿತ್ತು. ಈ ಸರದಿ ಗೋಪಾಲದಾಸರಿಗೂ ಬಂದಿತು. ಮೂರು ಕಡೆ ಗೋಪಾಲದಾಸರ ವಸ್ತುಗಳನ್ನಪಹರಿಸಲು ಯತ್ನಿಸಿದಾಗ ಖಡ್ಗಪಾಣಿಯಾಗಿ ದಾಸರನ್ನು ಕಾಯುವ (ಶ್ರೀ ಹರಿ) ಯನ್ನು ಕಂಡ ಭೀಮ ಹೆದರಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಪ್ರಾರ್ಥಿಸಿದಾಗ ಅವನ ದುಷ್ಟ ನಡತೆ ಹೋಗುವಂತೆ ಉಪದೇಶಿಸಿದ ಉಗಾಭೋಗದ ಪುನಶ್ಚರಣೆಯಿಂದ ಗೋಪಾಲ ದಾಸರು ಗಂಡಾಂತರದಿಂದ ಪಾರಾದರೆಂದು ತಂದೆ ಗೋಪಾಲ ವಿಠಲರು ಹೇಳಿದ್ದಾರೆ.

ಉಡುಪಿ ಕೃಷ್ಣನ ದರುಶನಕೆ ಆಜ್ಞಾ
ಕೊಡಬೇಕೆನುತಲಿ ಕೇಳ್ದನು
ತಡವ್ಯಾಕೆನುತಲಿ ಸ್ತುತಿಯ ಮಾಡಿ
ಕೊಡುತ ಪೋಗಿ ಬಾರೆಂದನು
ಮಂಡಗದ್ದಿಯ ಕಳುಹಿದಾ
ಗಂಡಿತ್ರಯದಿ ಸುಲಿಯಲು ಸಿಗದಿರೆ
ಚಂಡ ನಮಿಸೆ ಉದ್ಧರಿಸಿದಾ

ಹೀಗೆ ವಿಜಯದಾಸರು ತಮ್ಮ ಹರಿದಾಸ ಜೀವನದಲ್ಲಿ ಅನೇಕರ ಉಪಕಾರಾರ್ಥವಾಗಿ ಶ್ರೀ ಹರಿಯನ್ನು ನಾನಾ ವಿಧವಾಗಿ ಸ್ತೋತ್ರ ಮಾಡುತ್ತಾ ಸಾಧನೆಯನ್ನು ಮಾಡಿಕೊಂಡು ಸಹಸ್ರಾರು ಕನ್ನಡ ಕೃತಿಗಳನ್ನು ರಚಿಸಿದರು. ಹರಿದಾಸರಾದ ಮೇಲೆ ಭರತಖಂಡದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಆಯಾ ಮೂರ್ತಿಗಳ ಮಹಾತ್ಮೆಯನ್ನು ಚಿತ್ರಿಸಿರುವುದರಿಂದ ಇವರ ಕೃತಿಗಳು ಪ್ರವಾಸ ಸಾಹಿತ್ಯವಾಗಿಯೂ ತೋರುತ್ತವೆ. ಈ ಮಧ್ವಸಿದ್ಧಾಂತದ ವಿಶದ ವಿವರಣೆಗಾಗಿ ಅವರಿಂದ ರಚಿತವಾದ ಅಸಂಖ್ಯ ಕೃತಿಗಳಲ್ಲಿ ಐನೂರಕ್ಕೂ ಮಿಕ್ಕಿದ ಸುಳಾದಿಗಳು ಇಂದು ದೊರೆತಿವೆ. ಇದರಿಂದ ವಿಜಯದಾಸರ ಜ್ಞಾನ ಎಷ್ಟು ವಿಶಾಲವೂ ಆಳವೂ ಆಗಿದ್ದಿತೆಂದು ತಿಳಿಯಬಹುದು. ಹರಿದಾಸ ಸಾಹಿತ್ಯದ ವಿಶಿಷ್ಟ ರೂಪಗಳಾದ ಕೀರ್ತನೆ, ಸುಳಾದಿ, ಉಗಾಭೋಗ ಎಂಬ ಮೂರು ರೂಪಗಳ ಕೃತಿಗಳನ್ನು ವಿಜಯದಾಸರು ರಚಿಸಿದ್ದಾರೆ.

ಶ್ರೀ ವಿಜಯದಾಸರು ತಮ್ಮ ಬಾಳಿನ ಕೊನೆಯ ಕಾಲದಲ್ಲಿ ಹುಟ್ಟಿದೂರನ್ನು ಬಿಟ್ಟು ಈಗಿನ ಆಂಧ್ರಪ್ರದೇಶ ರಾಜ್ಯದ ಗುಂತಕಲ್‌ಗೆ ಸುಮಾರು ನಾಲ್ಕು ಮೈಲಿ ದೂರವಿರುವ 'ಚಿಪ್ಪಗಿರಿ' ಎಂಬಲ್ಲಿಗೆ ಬಂದು ನೆಲೆಸಿದರು. ಈ ಗ್ರಾಮದಲ್ಲಿ ಭೋಗೇಶ್ವರ, ಪ್ರಸನ್ನ ವೆಂಕಟೇಶ, ಚನ್ನಕೇಶವ ದೇವಾಲಯಗಳಿವೆ. ಈ ದೇವಾಲಯಗಳನ್ನು ಜಕಣಾಚಾರಿ ಎಂಬ ಶಿಲ್ಪಿ ಕಡೆದು ಈ ಗ್ರಾಮದಲ್ಲಿಯೇ ಕೆಲಕಾಲ ವಾಸವಾಗಿದ್ದುದರಿಂದ ಈ ಗ್ರಾಮಕ್ಕೆ 'ಶಿಲ್ಪಗಿರಿ' ಎಂದೂ ಕಾಲ ಕ್ರಮೇಣ ಊರಿನ ಇಳಿಯುವ ಬಾವಿಗಳಲ್ಲಿ ನೀರು ಸಂಪೂರ್ಣ ಒಣಗಿ ಹೋಗಿ

ಚಿಲುಮೆಗಳನ್ನು ತೆಗೆದು ಚಿಪ್ಪಿನಲ್ಲಿ ಗೋಕಿ ತೆಗೆದುಕೊಳ್ಳುತ್ತಿದ್ದುದರಿಂದ 'ಚಿಪ್ಪಗಿರಿ' ಎಂಬ ಹೆಸರು ಬಂದಿತೆನ್ನುತ್ತಾರೆ. ಇಲ್ಲಿನ ದೇವಾಲಯಗಳಲ್ಲಿನ ಶಾಸನಗಳಿಂದ ಪ್ರಾಚೀನ ಕಾಲದಲ್ಲಿ ತೆಲುಗು-ಕನ್ನಡ ಎರಡು ಭಾಷೆಗಳು ಚೆನ್ನಾಗಿ ಬಳಕೆಯಲ್ಲಿದ್ದುದಾಗಿ ತಿಳಿದು ಬರುತ್ತದೆ. ಪ್ರಸನ್ನ ವೆಂಕಟೇಶ ದೇವಾಲಯಕ್ಕೆ ಶಾ. ಶಕ ವರ್ಷಂಗಳು ೧೪೫೦ನೆಯ ಸರ್ವಧಾರಿ ಸಂವತ್ಸರ ವೈ.ಬ. ೩೦ನೆಯ ಸೋಮವಾರ ಸೂರ್ಯಗ್ರಹಣ ಪುಣ್ಯಕಾಲದಲ್ಲಿ ಶ್ರೀ ಕೃಷ್ಣದೇವರಾಯನು ದಾನ ಮಾಡಿದ ಭೂಮಿಯ ವಿವರಣೆಯುಳ್ಳ ಶಾಸನ ಕನ್ನಡ ಭಾಷೆ ಲಿಪಿಯಲ್ಲಿದ್ದು ಈ ದೇವಾಲಯದಲ್ಲಿರುವುದನ್ನು ಕಾಣಬಹುದು. ಚೆನ್ನಕೇಶವ ದೇವಾಲಯಕ್ಕೆ ಶಾಲೀವಾಹನ ಶಕ ವರುಷಂಬಲ ೧೪೭೦ ಕ್ರಿ. ಸರಿಯುಗ (ಕ್ರಿ.ಶ. ೧೫೪೮) ನೇಟಿ ವಿಭವ ಸಂವತ್ಸರ ವೈ.ಶು. ೧೫ ರಂದು ನೀಡಿದ ದಾನ ಶಾಸನ ತೆಲುಗು ಭಾಷೆ ಮತ್ತು ತೆಲುಗು ಲಿಪಿಯಲ್ಲಿದೆ.

ಭಾಸ್ಕರ ಕ್ಷೇತ್ರವೆಂದು ಪ್ರಸಿದ್ಧಿಯಾಗಿರುವ ಚಿಪ್ಪಗಿರಿಯಲ್ಲಿ ವಿಜಯದಾಸರು ಇದ್ದಾಗ ಅಲ್ಲಿಯ ಚಂದಪ್ಪನೆಂಬ ಕುರುಬನೊಬ್ಬನ ಬಾವಿಯಲ್ಲಿದ್ದ ಶ್ರೀ ವೇಣುಗೋಪಾಲಕೃಷ್ಣ ವಿಗ್ರಹವನ್ನು ಅವನಿಂದಲೇ ತೆಗೆಯಿಸಿದಾಗ ದಾಸರ ಮೇಲೆ ಅವನಿಗೆ ಭಕ್ತಿಯುಂಟಾಗಿ ಅವನು ೨೦ ಎಕರೆ ಭೂಮಿಯನ್ನು ಒಂದು ಕೊಳಗ ಹಣವನ್ನೂ ದಾಸರಿಗೆ ದಾನ ಮಾಡಿದನೆಂದು ಹೇಳುತ್ತಾರೆ.

ಶ್ರೀ ವಿಜಯದಾಸರು 'ಶ್ರೀ ವೇಣುಗೋಪಾಲಕೃಷ್ಣ' ದೇವರ ಸುಂದರ ವಿಗ್ರಹವನ್ನು ವೃಕ್ಷದಡಿ ಸಣ್ಣಕಟ್ಟೆ ಕಟ್ಟಿ ಪ್ರತಿಷ್ಠಾಪನೆ ಮಾಡಿದರು ಎಂದು ಹೇಳಿದ ಲೇಖಕರೇ ಶ್ರೀ ಮೊದಲ್ ಕಲ್ ಶೇಷದಾಸರು (ಗುರು ವಿಜಯವಿಠಲರು) ವಿಜಯದಾಸರ ಕಟ್ಟೆಯ ಮೇಲೆ ದೊಡ್ಡ ವೃಂದಾವನ ತಾವೇ ಕಟ್ಟಿ ಅದರಲ್ಲಿ ಶ್ರೀ ಗೋಪಾಲ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿದರು ಎಂದು ಒಂದೇ ಪುಸ್ತಕದಲ್ಲಿ ತಿಳಿಸಿದ್ದಾರೆ. ಒಂದು ವಿಗ್ರಹಕ್ಕೆ ಒಂದೇ ಜಾಗದಲ್ಲಿ ಎರಡು ಸಲ ಪ್ರತಿಷ್ಠೆಯಾಗುವುದು ಹೇಗೆ ಸಾಧ್ಯ? ಶ್ರೀ ಗುರು ವಿಜಯವಿಠಲರು ಈ ಗುಡಿಯ ಜೀರ್ಣೋದ್ಧಾರ ಮಾಡಿರಬೇಕೆನಿಸುತ್ತದೆ.

ಶ್ರೀ ವಿಜಯದಾಸರಿಗೆ ದಾನವಾಗಿ ಬಂದ ಭೂಮಿಯಲ್ಲಿದ್ದ ಕೊಳ 'ವಿಜಯ ತೀರ್ಥ' ವೆಂದು ಪ್ರಸಿದ್ಧಿಯಾಗಿದೆ. ಏಕಾಂತದ ಬೀಡಾಗಿ, ತಪಸ್ವಿಗಳಿಗೆ ಶಾಂತವೂ ಪರಿಶುದ್ಧವೂ ಆದ ಭಾವನೆಯನ್ನುಂಟು ಮಾಡುವಂತಹ ಪವಿತ್ರವಾದ ಚಿಪ್ಪಗಿರಿಯಲ್ಲಿ ವಿಜಯದಾಸರು ಕ್ರಿ.ಶ. ೧೭೫೫ನೆಯ ಕಾರ್ತೀಕ ಶುದ್ಧ ದಶಮಿ ಗುರುವಾರ ವಿಜಯವಿಠಲನ ಪಾದವನ್ನು ನಿಶ್ಚಿಂತೆಯಿಂದ ಸೇರಿದರು.

ತೆರಳಿ ಪೋದರು ಸಿರಿಹರಿಯ ಪುರತೆ ಪ
ಕರಿರಾಜ ವರದನ್ನ ಸ್ಮರಿಸುತ್ತ ವಿಜಯದಾಸರು ಅ ಪ

ಯುವ ಸಂವತ್ಸರ ಕಾರ್ತೀಕ ಶುದ್ಧ
ಅವಿರುದ್ಧವಿಲ್ಲದಲೆ ಶುದ್ಧ ದಶಮೀ
ನವನಾಡಿ ಗುರುವಾರ ದಿವಿಜರ ಮೇಳದಲಿ
ಭಳಿ ಭಳಿ ನಗೆಮುಖದಿಂದ ಹರಿಚರಿತೆ ಪಾಡುತಲಿ ೧

ಅಪ್ಪ ತಿಮ್ಮಪ್ಪನಾ ಯಾತ್ರಿ ಮಾಡಿಕೊಂಡು
ಚಿಪ್ಪಗಿರಿಯೆಂಬ ಗ್ರಾಮದಲೆ
ಚಪ್ಪಾಳೆನಿಕ್ಕುತಲಿ ನಮ್ಮ ದಾಸರು ನೋಡೆ
ಸರ್ಪಶಯನ ಹಯವದನ ವಿಠಲ ಬಳಿಗೆ

ಎಂದು ವಿಜಯದಾಸರ ಸೋದರರಾದ ಹಯವದನ ವಿಠಲರು ಹೇಳಿದ್ದಾರೆ.

ಚಿಪ್ಪಗಿರಿಯಲ್ಲಿ ಶ್ರೀ ವಿಜಯದಾಸರ ದೇಹ ಅಗ್ನ್ಯಂತರ್ಗತ ಪರುಶುರಾಮಗೆ ಅರ್ಪಿಸಿದ ಸ್ಥಳದಲ್ಲಿ ಶ್ರೀ ಗೋಪಾಲದಾಸರು ಮೋಹನದಾಸರು ಮುಂತಾದವರೇ ಒಂದು ಕಟ್ಟೆ ಕಟ್ಟೆಸಿ ಪೂಜಾ ಮಾಡಹತ್ತಿದರು. ಕೆಲವರ್ಷದ ನಂತರ ಶ್ರೀ ಮೋಹನದಾಸರು ಚಿಪ್ಪಗಿರಿಯಲ್ಲೆ ಪರಲೋಕ ಯಾತ್ರೆಗೈದರು. ಆ ಜ್ಞಾನಿಗಳ ಪವಿತ್ರ ದೇಹವಾದರೂ ಅವರ ಆಜ್ಞೆಯಂತೆ ಶ್ರಿ ವಿಜಯರಾಯರ ಕಟ್ಟೆಯ ಸಮೀಪ ಪೂರ್ವ ಭಾಗದ ಸ್ಥಳದಲ್ಲಿಯೇ ಪರಶುರಾಮನಿಗೆ ಸಮರ್ಪಿಸಿದರು. ನಂತರ ಆ ಸ್ಥಳದಲ್ಲಿಯೇ ಶ್ರೀ ಮೋಹನದಾಸರ ಕಟ್ಟೆ ಕಟ್ಟಿಸಿದರು. ಎರಡು ಕಟ್ಟೆಗಳು ಕೂಡಿಸಿ ಕಟ್ಟೆಯ ಮೇಲೆ ಗುಡಿಯಾಯಿತು. ಎಂದು ಶ್ರೀ ಗೋರಬಾಳ

ಹನುಮಂತರಾಯರು ತಿಳಿಸಿರುವರು. ಆದರೆ ಈ ದಾಸರ ವಂಶೀಯರು ವಿಜಯದಾಸರ ದೇಹವನ್ನು ಅಗ್ನ್ಯಂತರ್ಗತ ಪರಶುರಾಮನಿಗೆ ಅರ್ಪಿಸಿದ ಸ್ಥಳದಲ್ಲಿ ಕಟ್ಟೆಯನ್ನು ಕಟ್ಟಿಲ್ಲವೆಂದೂ ವಿಜಯದಾಸರು ವೇಣು ಗೋಪಾಲ ಕೃಷ್ಣನ ವಿಗ್ರಹವನ್ನು ಈಗಿರುವ ಜಾಗದಲ್ಲಿ ಪ್ರತಿಷ್ಠಾಪಿಸಿ ಆ ಸ್ಥಳದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರೆಂದೂ ವಿಜಯದಾಸರು ಕುಳಿತು ಕೊಳ್ಳುತ್ತಿದ್ದ ಕಟ್ಟೆಗೆ 'ವಿಜಯ ದಾಸರ ಕಟ್ಟೆ' ಎಂದು ಕರೆಯುವರೆನ್ನುತ್ತಾರೆ.

ಚಿಪ್ಪಗಿರಿಯಲ್ಲಿ ಇಂದಿಗೂ ಪ್ರತಿವರ್ಷವೂ ಕಾರ್ತೀಕ ಮಾಸದ ಶುದ್ಧ ನವಮಿ, ದಶಮಿ, ಏಕಾದಶಿ ಮತ್ತು ದ್ವಾದಶಿ ದಿನಗಳಲ್ಲಿ ಶ್ರೀ ವಿಜಯದಾಸರ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ, ಈ ಸಂದರ್ಭದಲ್ಲಿ ವಿಜಯದಾಸರ ಪಲ್ಲಕ್ಕಿ ಉತ್ಸವ ಭಜನೆ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಅವರ ವಂಶೀಯರು ಶ್ರೀ ವಿಜಯದಾಸರು ಉಪಯೋಗಿಸುತ್ತಿದ್ದ ತಂಬೂರಿಯನ್ನು ಉತ್ಸವದಲ್ಲಿ ತೋರಿಸುತ್ತಾರೆ. ವಿಜಯದಾಸರ ಜನ್ಮಸ್ಥಳವಾದ ಚೀಕನಪರಿವಿಯಲ್ಲಿ ದಾಸರು ಉಪಯೋಗಿಸುತ್ತಿದ್ದ ಸಾಣೆಯಕಲ್ಲು ಹಾಗೂ ಚಿಟಿಕೆಗಳನ್ನು ಇಂದಿಗೂ ಕಾಣಬಹುದಾಗಿದೆ.

ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾಗಿರುವ ಶ್ರೀ ವಿಜಯದಾಸರು ಸಾಹಿತ್ಯ ದೃಷ್ಟಿಯಿಂದ ಬೆಲೆಯುಳ್ಳ, ತತ್ತ್ವ ಶಾಸ್ತ್ರ ದೃಷ್ಟಿಯಿಂದ ಅಮೂಲ್ಯವೆನಿಸುವಂತಹ ಪದ–ಸುಳಾದಿ ಹಾಗೂ ಉಗಾಭೋಗಗಳನ್ನು ರಚಿಸಿ ಮಹತ್ತರ ಕಾಣಿಕೆ ನೀಡಿದ್ದಾರೆ. ಇವರ ನಡೆ, ನುಡಿಗಳು ಆದರ್ಶವಾದುದು–ಅನುಸರಣೀಯವಾದುದು. ಇಂಥಹ ದಯಾಮಯ ಚೇತನವೇ ಲೋಕದಲ್ಲಿ ವಿರಳವೆನ್ನಬಹುದು. ಇಂತಹ ವಿರಳ ವ್ಯಕ್ತಿಗಳ ಗುಂಪಿಗೆ ಸೇರಿದ ಅನರ್ಘ್ಯ ರತ್ನಗಳಲ್ಲಿ ಒಂದು ರತ್ನ ಕನ್ನಡ ನಾಡಿನ ಭಾಗ್ಯೋದಯದಿಂದ ಒಲಿದು ಬಂದುದು ಕನ್ನಡಿಗರ ಪುಣ್ಯ ವಿಶೇಷವೆನ್ನಬಹುದು.

ಈ ಸಂಪುಟದ ಸುಳಾದಿಗಳನ್ನು ಭಕ್ತ್ಯಾತ್ಮದ ಸುಳಾದಿಗಳು ಹಾಗೂ ನಿವೇದನಾತ್ಮಕ ಸುಳಾದಿಗಳು ಎಂದು ಎರಡಾಗಿ ವಿಭಜಿಸಲಾಗಿದೆ. ಭಕ್ತ್ಯಾತ್ಮಕ

ಸುಳಾದಿಗಳೆಲ್ಲವೂ ವಿಜಯವಿಠಲನನ್ನು ಕುರಿತೇ ಇರುವುದರಿಂದ ಅವುಗಳನ್ನು ಅಕಾರಾದಿ ಕ್ರಮದಲ್ಲಿ ಜೋಡಿಸಲಾಗಿದೆ. ನಿವೇದನಾತ್ಮಕ ಸುಳಾದಿಗಳನ್ನು ಭಾಗವತ ಪುರಾಣದಲ್ಲಿ ಉಕ್ತವಾಗಿರುವಂತೆ ಶ್ರೀ ಹರಿಯ ಅವತಾರಗಳ ಕಾಲಾನುಕ್ರಮವನ್ನು ಅನುಸರಿಸಿ ಸುಳಾದಿಗಳನ್ನು ಜೋಡಿಸಲಾಗಿದ್ದು, ಇತರ ದೇವಾನುದೇವತೆಗಳನ್ನು ತಾರತಮ್ಯಾತ್ಮಕವಾಗಿ ಅವರೋಹಣ ಕ್ರಮದಲ್ಲಿ ಜೊಡಿಸಲಾಗಿದೆ.

ಆತ್ಮನಿವೇದನಾತ್ಮಕ ಸುಳಾದಿಗಳ ಬಗ್ಗೆ

ಶ್ರೀ ಪುರಂದರದಾಸರಿಂದ ಪ್ರೇರಣೆಯನ್ನು ಹೊಂದಿ ಹರಿದಾಸರೆನಿಸಿಕೊಂಡ ಶ್ರೀ ವಿಜಯದಾಸರು ಕ್ರಿ.ಶ. ಹದಿನೆಂಟನೆಯ ಶತಮಾನದಲ್ಲಿ ಬಾಳಿ ಬದುಕಿ ಸಾವಿರಾರು ಸಂಖ್ಯೆಯಲ್ಲಿ ಸುಳಾದಿ ಮತ್ತು ಪದಗಳನ್ನು ರಚಿಸುವುದರೊಡನೆ ಸ್ಥಗಿತ ಹೊಂದಿದ್ದ ಹರಿದಾಸ ಪರಂಪರೆಯನ್ನ ಮುಂದುವರಿಸಿದರು. ವಿಜಯದಾಸರು ಮುಂದುವರಿಸಿದ ಹರಿದಾಸ ಪರಂಪರೆ ಇಂದಿಗೂ ಮುಂದುವರಿಯುತ್ತಿರುವುದು ಉಲ್ಲೇಖಾರ್ಹ ಸಂಗತಿಯಾಗಿದೆ. ಅತ್ಯಧಿಕ ಸಂಖ್ಯೆಯಲ್ಲಿ ಸುಳಾದಿಗಳನ್ನು ರಚಿಸಿ ಸುಳಾದಿದಾಸರು ಎಂದೇ ಖ್ಯಾತರಾಗಿರುವ ಇವರ ಸುಳಾದಿ ರಚನೆಯಲ್ಲಿ ಆತ್ಮ ನಿವೇದನಾತ್ಮಕ ಸುಳಾದಿಗಳನ್ನು ಆರಿಸಿ ಈ ಸಂಪುಟವನ್ನು ತಯಾರಿಸಲಾಗಿದೆ. ಸಾಧಕನು ಭಗವಂತನ ದರ್ಶನ ಪುನರ್ದರ್ಶನಗಳಿಗಾಗಿ ಅನವರತವೂ ಪರಿತಪಿಸುವ ಅಂಶಗಳನ್ನು ಪ್ರಕಟಿಸುವ ಸಾಹಿತ್ಯವೇ ಆತ್ಮನಿವೇದನಾತ್ಮಕ ಸಾಹಿತ್ಯವೆನಿಸಿಕೊಳ್ಳುತ್ತದೆ. ಈ ಬಗೆಯ ರಚನೆಯಲ್ಲಿ ಭಗವಂತನ ಗುಣ ವಿಶೇಷಗಳನ್ನು ಹೊಗಳಿ ಅಂತಹ ದೈವದ ಸಾಕ್ಷಾತ್ಕಾರಕ್ಕಾಗಿ ಬೇಡಿಕೆಯನ್ನು ಮಂಡಿಸುವುದು ಒಂದು ಬಗೆಯ ರಚನೆ ಯಾದರೆ, ಭಗವಂತನ ಸ್ಮರಣೆ, ಪೂಜೆ, ಕೈಂಕರ್ಯ, ಚಿಂತನೆ, ಧ್ಯಾನ, ಉಪಾಸನೆಗಳಿಗಾಗಿ ಮನಸ್ಸು, ದೇಹ, ಪರಿಸರಗಳ ಸಹಕಾರ ದೊರಕದೆ ದುಃಖಿಸುವ ಅಂಶಗಳನ್ನು ಪ್ರಕಟಿಸುವ ಸಾಹಿತ್ಯ ಎರಡನೆಯ ಬಗೆಯದಾಗಿರುತ್ತದೆ. ಸಾಧಕನ ದೈವ ಸಾಕ್ಷಾತ್ಕಾರದ ಉತ್ಕಟ ಬಯಕೆಯನ್ನು ಈ ಎರಡನೆಯ ಬಗೆಯ ಸಾಹಿತ್ಯ ತುಂಬ ಚೆನ್ನಾಗಿ ಮನವರಿಕೆ ಮಾಡಿಕೊಡುತ್ತದೆ. ಸಾಂದರ್ಭಿಕವಾಗಿ ಅನೇಕ

ಪುರಾಣಗಳಲ್ಲಿರುವ ಭಕ್ತರ ಕಥೆಗಳು ಇಲ್ಲಿ ಪ್ರಸ್ತಾಪಿತವಾಗಿರುತ್ತದೆ. ಭಕ್ತಮಾರ್ಗದಲ್ಲಿ ಸಂಪೂರ್ಣ ಶರಣಾಗತಿಯು ಭಕ್ತಿಯ ಪರಮೋಚ್ಚ ಮಟ್ಟವನ್ನು ಸೂಚಿಸುವುದಾಗಿದ್ದು ಈ ಬಗೆಯ ಸುಳಾದಿಗಳನ್ನು ವಿಜಯದಾಸರ ಕೃತಿಸಮುದಾಯದಲ್ಲಿ ಸುಲಭವಾಗಿ ಗುರುತಿಸಬಹುದಾಗಿದೆ. ಆತ್ಮ ನಿವೇದನಾತ್ಮಕ ಸುಳಾದಿಗಳನ್ನು ಭಕ್ತ್ಯಾತ್ಮಕ ಮತ್ತು ನಿವೇದನಾತ್ಮಕ ಸುಳಾದಿಗಳೆಂದು ವಿಭಜಿಸಿ ಇಲ್ಲಿ ಸಂಗ್ರಹಿಸಿ ಸಂಪಾದಿಸಲಾಗಿದೆ.

ವಿಜಯದಾಸರ ರಚನೆಗಳಲ್ಲಿ ಆತ್ಮನಿವೇದನಾತ್ಮಕ ಸುಳಾದಿಗಳು ಇತರ ಸುಳಾದಿಗಳಿಗಿಂತ ಅರ್ಥ ಗ್ರಹಿಕೆಯ ದೃಷ್ಟಿಯಿಂದ ಸರಳವಾಗಿರುತ್ತದೆ. 'ಸರಳ ಭಾಷೆ ಉನ್ನತ ಚಿಂತನೆ' ಈ ಅಭಿವ್ಯಕ್ತಿಯಲ್ಲಿ ಎದ್ದು ಕಾಣುವ ಅಂಶವಾಗಿದೆ. ಇಲ್ಲಿ ಸಿದ್ಧಾಂತದ ಪಾರಿಭಾಷಿಕ ಪದ ಪ್ರಯೋಗಗಳು ವಿರಳವೆನ್ನ ಬಹುದು, ಬಳಸಿರುವ ಉಪಮೆಗಳು ಚಿತ್ತಾಕರ್ಷಕವಾಗಿರುತ್ತದೆ. ಭಕ್ತ ತನ್ನ ಮನಸ್ಸಿನ ದೋಷ ದೌರ್ಬಲ್ಯಗಳನ್ನು ಆತ್ಮನಿವೇದನಾತ್ಮಕ ಕೃತಿಗಳಲ್ಲಿ ನಿಸ್ಸಂಕೋಚವಾಗಿ ಹೇಳಿಕೊಂಡಿರುತ್ತಾನೆ. ತನ್ನದಲ್ಲದ ವಸ್ತುವನ್ನು ಬಯಸದಿರುವುದು ಸುಲಭವಲ್ಲ, ಒಂದೆಡೆ ಧರ್ಮಶಾಸ್ತ್ರಗಳ ಪರಿಜ್ಞಾನದಿಂದ ಅನ್ಯರ ವಸ್ತುಗಳನ್ನು ಕಬಳಿಸಬಾರದೆನಿಸಿದರೆ ಮತ್ತೊಂದೆಡೆ ಸುಖದ ಅಪೇಕ್ಷೆಯಿಂದ ಅನ್ಯರ ಹಣ ವಸ್ತುಗಳನ್ನು ಜೇಬಿಗಿಳಿಸುವ ಮನಸ್ಸಾಗುವುದನ್ನು ವಿಜಯದಾಸರು ಗುರುತಿಸಿ 'ಆಶೆಯೆಂಬೊ ಪಿಶಾಚಿ ಸೋಂಕಿದೆ ಆದಿಯಲ್ಲಿ ವಿಸೇಸುದೇಶ ಸುತ್ತೆ ತೊಲಗದಯ್ಯ\ ಕಾಸಿಗಾದರೂ ಪ್ರಾಣ ಒಪ್ಪಿಸುವೆನು\ ದೋಷ ಕಾಣದೆ ನಾನಾ ಬಗೆಯವರ ತುತಿಸಿ\ ಕ್ಲೇಶದಿಂದಲ್ಲಿ ಬಳಲಿ ಬರಿದಾಗುವೆ ಎನ್ನುತ್ತಾರೆ. ಭಗವಂತನ ನಾಮ ಸ್ಮರಣೆಯನ್ನು ಮಾಡಲು ಕಣ್ಮುಚ್ಚಿ ಕುಳಿತರೆ 'ಕಾಮವೆಗ್ಗಳಿಸಿತು\ ಕಪಟ ಘನವಾಯಿತು\ ತಾಮಸಂಗಳ ಬುಡ ಬಲ ಹೆಚ್ಚಿತು\ ನೇಮಂಗಳು ತಗ್ಗಿದವು\ ನಿಷ್ಠೆ ಬಯಲಾಯಿತು. ಈ ಮನಸು ಪಾಪ ಪುರುಷನ ಸೇರಿತು\ ನಿನ್ನ ನಾಮಕ್ಕೆ ಉಪಹತಿ ಬರುತಿದೆ ನೋಡೆ' ಎಂದು ದಾಸರು ಮೊರೆ ಇಡುತ್ತಾರೆ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು ಮನುಷ್ಯ ಹುಟ್ಟಿದಾಗಿನಿಂದ ಸಾಯುವವರೆಗೂ ಅವನ ಜೊತೆಯಲ್ಲಿ ಇರುವಂತಹದೇ

ಆಗಿದೆ. ಇದನ್ನು ಯಾರೊಬ್ಬರೂ ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವೇ ಇಲ್ಲವೆಂಬುದು ವಾಸ್ತವ ಸತ್ಯ. ಆದ್ದರಿಂದ ದಾಸರು ಈ ಆರು ಅರಿಷಡ್ವರ್ಗಗಳೂ ಭಗವಂತನ ಚಿಂತನೆಗೆ ಅನುವು ಮಾಡಲೆಂದು ಹಾರೈಸುತ್ತಾರೆ. 'ನಿನ್ನ ನೋಡುವಲ್ಲಿ ಕಾಮವೆ ಎನಗಿರಲಿ ನಿನ್ನ ಬಿಡೆನೆಂಬೊ ಲೋಭವೆ ಎನಗಿರಲಿ\ ನಿನ್ನ ಚರಣದಲ್ಲಿ ಮೋಹವೆ ಎನಗಿರಲಿ/ ನಿನ್ನ ನೆನೆಸುವಲ್ಲಿ ಮದವೆ ಎನಗಿರಲಿ/ ನಿನ್ನ ದ್ವೇಷರ ಕೂಡ ಕ್ರೋಧವೆ ಎನಗಿರಲಿ/ ನಿನ್ನ ಕೊಂಡಾಡುವರ ಸಂಗವೆ ಎನಗಿರಲಿ/ ನಿನ್ನವನೆಂದೆಂಬೊ ಕೀರುತಿ ಒಂದಿರಲಿ/ ನಿನ್ನ ಕೊಡಾಡುವ ಆಟ ಎನಗಿರಲಿ/ ನಿನ್ನ ಹಿತವಾದ ವಂಚನೆ ಎನಗಿರಲಿ/ ' ಎಂಬ ದಾಸರ ಮಾತುಗಳಲ್ಲಿ ಅವರ ಅಂತರಂಗದ ಅತ್ಯುನ್ನತ ಭಕ್ತಿ ಒಡೆದು ಕಾಣುತ್ತದೆ. ವಿಜಯದಾಸರು ಎಲ್ಲ ಕೆಟ್ಟತನಕ್ಕೂ ಅಹಂಕಾರವೇ ಕಾರಣವೆಂದು ಭಾವಿಸುತ್ತಾರೆ'. ಅಹಂಕಾರವೆಂಬೊ ಪಾಪಿಯ ಬೆನ್ನುಬಿದ್ದರೆ ಒಂದಿಷ್ಟು ಸುಖವಿಲ್ಲ, ದೃಢವಾದ ಅಹಂಕಾರ ಕಡಿದರೆ ಬಿಂಕದ ಬಿಡಿ ಪಾಪಗಳೆಲ್ಲ ಅಡಗುವುವುಎನ್ನುವುದು ವಿಜಯದಾಸರ ನಿಲುವಾಗಿತ್ತು.

ಮನಸ್ಸನ್ನು ಸಂಪೂರ್ಣವಾಗಿ ಭಗವಂತನ ಸ್ಮರಣೆ, ಪೂಜೆ, ಅರ್ಚನೆ, ವಂದನೆ, ಭಜನೆ ಇತ್ಯಾದಿಗಳ ಕಡೆಗೆ ತೊಡಗಿಸಿಕೊಳ್ಳುವುದೇ ಆತ್ಮ ನಿವೇದನೆ ಎನಿಸಿಕೊಳ್ಳುತ್ತದೆ. ಲೋಕ ಜೀವನದ ಪ್ರತಿಯೊಂದು ಕಾರ್ಯವೂ ಭಗವಂತನ ಪೂಜೆ ಎಂಬ ಅನುಸಂಧಾನದಿಂದ ವಿಜಯದಾಸರು ಜೀವಿಸುತ್ತಿದ್ದರು. 'ಇದು ನಿನಗೆ ಆರಾಧನೆ, ಇದು ನಿನಗೆ ಪೂಜೆಯು, ಇದು ನಿನಗೆ ಭಜನೆ, ಇದು ನಿನಗೆ ಅರ್ಚನೆ' ಎಂಬ ಅಭಯ ವಾಣಿಯಲ್ಲಿ ಈ ಅನುಸಂಧಾನ ದೃಷ್ಟಿಯುಂಟು. ದಾಸರ ಪ್ರಕಾರ ಭಗವಂತನ ಒಲುಮೆಯನ್ನು ಪಡೆಯುವುದು ತುಂಬ ಸುಲಭವಾದುದು. 'ಜಲಜನಾಭನ ಸೇವೆ ಬಹು ಸುಲಭ ಬಲು ಸುಲಭ ಕಲಿಯುಗದೊಳಗೆ' ಎಂಬುದು ಅವರ ಘೋಷಣೆ. ಭಗವನ್ನಾಮಸ್ಮರಣೆಯೇ ಬದುಕಿನ ಅತಿ ದೊಡ್ಡ ಭಾಗ್ಯವೆಂದು ವಿಜಯದಾಸರು ಭಾವಿಸುತ್ತಿದ್ದರು. 'ಈ ಭಾಗ್ಯವೆ ಸಾಕು ಇಹದಲ್ಲಿ ಇದ್ದನಿತು ಪರಮ ಭಾಗವತರೊಡನೆ ಕೂಡಿಸೆನ್ನಾಡಿಸೂ' ಎನ್ನುತ್ತಾರೆ.

ಅನ್ಯರ ಋಣವನ್ನು ಹೊಂದದಂತೆ ಮಾನವನು ಬದುಕುವುದು ಕಷ್ಟ. ಋಣವನ್ನು ಹೊತ್ತರೆ ಕೋಟಲೆ ತಪ್ಪಿದ್ದಲ್ಲ. 'ಆದ್ದರಿಂದ ಋಣದಿಂದ ಕಡೆ ಮಾಡು' ಎಂದು ದಾಸರು ಬೇಡುತ್ತಾರೆ. ಭಗವಂತನ ಕೃಪೆಯಾಗುವುದಾದರೆ ಬದುಕಿನ ಎಲ್ಲ ಬಗೆಯ ಕಷ್ಟಗಳನ್ನು ಎದುರಿಸಲು ಅವರು ಸಿದ್ಧರಂತೆ! 'ನಿನ್ನ ದಯವಿದ್ದರೆ ಅರಣ್ಯವಾಗಲಿ, ಪುರವಾಗಲಿ, ನಿನ್ನ ದಯವಿದ್ದರೆ ಗರಳವಾಗಲಿ ಸುಧೆಯಾಗಲಿ, ನಿನ್ನ ದಯವಿಲ್ಲದಿದ್ದ ಪುಣ್ಯವಾದರು ನಾನೊಲ್ಲೆ' ಎಂಬುದು ಅವರ ದೃಢ ನಿಲುವಾಗಿತ್ತು.

ವಿಜಯದಾಸರು ವಿರಳ ಸಂಖ್ಯೆಯಲ್ಲಿ ನಿಂದಾಸ್ತುತಿ ರೂಪವಾದ ಸುಳಾದಿಗಳನ್ನು ರಚಿಸಿದ್ದಾರೆ. ದೇವರು ತಮ್ಮನ್ನು ಯಾವುದೇ ಬಗೆಯಿಂದ ಹೆದರಿಸಿದರೂ ಭಗವಂತನಲ್ಲಿ ಭಕ್ತಿ ಮಾಡುವುದನ್ನು ನಿಲ್ಲಿಸುವುದಿಲ್ಲವೆಂಬ ವೀರ ಪ್ರತಿಜ್ಞೆ ಅವರದಾಗಿತ್ತು, ಕಣ್ಣಾ ಬಿಟ್ಟರೆ ಬಿಡೆನೊ, ಜಲವನ್ನ ಪೊಕ್ಕರೆ ಬಿಡೆನೊ, ಮಣ್ಣು ತೂರಿ ಕಿಡಿಯಾದರೆ ಬಿಡೆನೊ, ಸಣ್ಣನಾಗಿ ಹೆಣ್ಣು ತೊರೆದರೆ ಬಿಡೆನೊ, ಎಂಬ ಅವರ ಹೇಳಿಕೆಯಲ್ಲಿ ದಶಾವತಾರದ ಕಥೆ ಸೂಚ್ಯವಾಗಿ ಮೂಡಿ ಬರುವುದರೊಡನೆ ಅಚಲ ಭಕ್ತಿ ಪ್ರಕಟವಾಗಿದೆ.

ಎಂತಹ ಜ್ಞಾನ ಭಕ್ತಿ ವೈರಾಗ್ಯಗಳನ್ನು ಸಂಪಾದಿಸಿದರೂ ಹಣದ ಆಮಿಷದಿಂದ ಪಾರಾಗುವುದು ಬಲು ಕಷ್ಟವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಒಬ್ಬ ಸಾಧಕ ಹಲವು ಪುಣ್ಯಕರ್ಮಗಳನ್ನು ಮಾಡಿ ಭಕ್ತಾಗ್ರೇಸರನೆಂದು ಖ್ಯಾತಿಯನ್ನು ಪಡೆದ ಮೇಲೆ ಅಂತಹವರಿಗೆ ಅನ್ಯರು ನಮಸ್ಕರಿಸಿ ಪುಣ್ಯ ಭಾಗಿಗಳಾಗಲು ಬಯಸುವರು. ಆಗ ಹಣ ಕೊಟ್ಟವರನ್ನು ಬಾಯ್ತುಂಬ ಹರಸುವ ದೋಷ ಮನಸ್ಸಿಗಂಟದಿದ್ದರೆ ಆಶ್ಚರ್ಯವೆಂದು ವಿಜಯದಾಸರು ಒಂದೆಡೆ ಹೇಳುತ್ತಾರೆ. ಕೊಟ್ಟರೆ ಹರಸುವೆನು, ಕೊಡದಿದ್ದರೆ ಬಟ್ಟೆಟ್ಟು ಬಗಳುವಂಥ ಭ್ರಷ್ಟ ದಾಸನು ನಾನು, ಸೃಷ್ಟಿಯೊಳಗೆ ಬಹುಧನವಂತರ ಮನೆಯ ಮೆಟ್ಟು ಕಂಡರೆ ಬಿಡದಿಪ್ಪ ದಾಸ ನಾನು' ಎಂಬ ದಾಸರ ವಾಣಿಯಲ್ಲಿ ನೈಚ್ಯಾನುಸಂಧಾನದಿಂದಲೇ ಭಕ್ತಿಯ ಬೆಳವಣಿಗೆ ಎಂಬ ಸೂಚನೆ ಮಾರ್ಮಿಕವಾಗಿ

ಮೂಡಿ ಬಂದಿದೆ, ಪ್ರಪಂಚದಲ್ಲಿ ದಾಸರಾಗಲು ಹೊರಟ ಬಹುಮಂದಿ ಆಗುವುದು "ಆಭಾಸ ದಾಸ"ರೆಂದೇ ವಿಜಯದಾಸರು ಟೀಕಿಸುವರು.

ಬದುಕಿನ ಸಾರ್ಥಕತೆಯನ್ನು ವಿಜಯದಾಸರು ಹರಿಭಕ್ತಿಯಲ್ಲಿ ಗುರುತಿಸುತ್ತಾರೆ. ನಿನ್ನ ಭಕುತಿಯಿಲ್ಲದ ತನುವೆ ವಿಷದ ಮೊಟ್ಟೆ, ನಿನ್ನಾಂಕಿತವಿಲ್ಲದ ಕವಿತಾ ವಿಷಪೂರಿತಾ, ನಿನ್ನ ಪೊಂದದವರ ಕುಲಕೆ ನರಕದ ಬಟ್ಟೆ, ಎಂಬುದು ವಿಜಯದಾಸರ ನಿಲುವಾದುದರಿಂದ ಅವರು ದುರಿತರಾಶಿಯ ಬಿಡಿಸು, ದುಸ್ಸಂಗವನೆ ಕೆಡಿಸು, ನಿರುತ ನಿನ್ನವರೊಳಗೆ ಸುಖ ಬಡಿಸು, ಪರಮ ವಚನವ ನುಡಿಸು, ಸುಮಾರ್ಗದಲ್ಲಿ ನಡೆಸು, ಪರಮನ ಉಪದೇಶ ಕೊಡಿಸು, ಚರಣದಲ್ಲಿ ರತಿ ಇಡಿಸು, ನಾಮಾಮೃತವ ಕುಡಿಸು, ಸ್ಥಿರ ಭಕುತಿಯನು ಪಿಡಿಸು, ನಿರ್ಮಾಲ್ಯವನ್ನು ಮುಡಿಸು ವರ ಪ್ರಸಾದಕೆ ಮನ ಒಡಂಬಡಿಸು, ಎಂದು ಅನನ್ಯವಾಗಿ ವಿಜಯವಿಠಲನನ್ನು ಪ್ರಾರ್ಥಿಸಿದ್ದಾರೆ. ಭಗವಂತನ ಒಲುಮೆಗಾಗಿ ಹಗಲಿರುಳು ಒದ್ದಾಡಿದರೂ ಅವನ ಕೃಪೆಯಾಗಲಿಲ್ಲವೆಂದು ನಿರಾಶರಾಗದಿರುವುದು ವಿಜಯದಾಸರ ಉನ್ನತ ಭಕ್ತಿಗೆ ಸಾಕ್ಷಿಯಾಗಿದೆ. ದೂರವಿದ್ದರೆ ಬಿಡೆನೊ, ಅತಿ ದೂರವಾದರೆ ಬಿಡೆನೊ, ಸಾರೆ ನಿಲ್ಲದೆ ಕೆಲಸಾರೆನೆ ಬಿಡೆನೊ, ತೋರದಲಡಗಲು ಬಿಡೆನೊ, ಮಾರುತ್ತರ ಪೇಳದಿದ್ದರೆ ಬಿಡೆನೊ, ವಾರಿಧಿಯೊಳಗೆ ಸುತ್ತಲು ಬಿಡೆನೊ, ಎಂದು ಒಂದು ಕಡೆ ವೀರಭಕ್ತಿಯನ್ನು ಪ್ರಕಟಿಸಿ ಮತ್ತೊಂದು ಕಡೆ ಭಗವಂತನನ್ನು ನಂಬಿದ ಮೇಲೆ ತಮಗೆ ಯಾವ ಭಯ, ತೊಂದರೆಗಳೂ ಇಲ್ಲವೆಂದು ಸಮಾಧಾನವನ್ನು ಹೊಂದುತ್ತಾರೆ. ದೋಷ ಎನಗೆ ಉಂಟೆ, ಕ್ಲೇಶ ಎನಗೆ ಉಂಟೆ, ನಾಶ ಎನೆಗೆ ಉಂಟೆ ಮೊರೆ ಹೋಗಲು ನಿನ್ನ, ಎಂದು ಹೇಳಿ, 'ಪಾಪಾತ್ಮನ ಮಾಡು ಪುಣ್ಯವಂತನ ಮಾಡು, ದೀಪದವನ ಮಾಡು, ದೀನನ ಮಾಡು, ತಾಪಸಿಗನ ಮಾಡು, ತಾಪತ್ರಯದಿ ಸಂತಾಪದಲಿ ನರಕ ಕೂಪದೊಳಗೆ ಪೋಗಿಸು, ಕುತ್ಸಿತ ಫಲವನುಣಿಸು, ಸಮಸ್ತವು ನಿನದಲ್ಲವೇನೋ' ಎನ್ನುತ್ತಾರೆ.

ಭಗವಂತನ ವಿಚಾರವನ್ನು ತಿಳಿದಾಕ್ಷಣ ಭಕ್ತನಾದೆನೆಂದು ಭಾವಿಸುವುದು. ಮೊಳಕೈಗೆ ಬೆಲ್ಲವನ್ನು ಮೆತ್ತಿಕೊಂಡಾಕ್ಷಣ ನೆಕ್ಕಿ ತಿನ್ನ ಬಹುದೆಂಬ ಭ್ರಮೆಗೊಳಗಾದ

ಮರುಳನ ಪರಿಸ್ಥಿತಿ ಎಂದು ದಾಸರು ಹೇಳುತ್ತಾರೆ. ಏಕೆಂದರೆ ಮಾನವ ಹಸಿವು, ಬಾಯಾರಿಕೆ, ಆಯಾಸಾದಿಗಳಿಂದ ಬಳಲುವಾಗ ಭಗವಂತನ ಚಿಂತನೆ ಅಪಥ್ಯವಾಗಿ ಭಕ್ತಿಯ ಬೆಳವಣಿಗೆ ಕುಂಠಿತಗೊಳ್ಳುವುದೆಂದು ದಾಸರಾಯರು ಗುರುತಿಸುತ್ತಾರೆ. 'ಒಂದು ಘಳಿಗೆ ಗ್ರಾಸ ದೊರಕದಿದ್ದರೆ ಓಣಿ, ಸಂದಿ ಗೊಂದಿಯನು ಕೋಡಗದಂತಿರೆ ನಿಂದಿರದೆ ತಿರುಗುವ ಸ್ಥಿತಿಯುಂಟಾಗುವುದು ವಾಸ್ತವ ಸತ್ಯ. ವಿಜಯದಾಸರ ವಿಚಾರ ಲಹರಿಯಲ್ಲಿ ಚಿಂತನೆ ಇರುವುದನ್ನು ಗುರುತಿಸಬಹುದಾಗಿದೆ.

ವಿಜಯದಾಸರು ಭಗವಂತನ ಆರಾಧನೆ ಮಾಡಿದ್ದು ಲೌಕಿಕ ಬದುಕಿನ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕಲ್ಲ. ಅವರ ಸುಳಾದಿಗಳನ್ನು ಎಷ್ಟೇ ಸೂಕ್ಷ್ಮವಾಗಿ ಪರಾಮರ್ಶೆ ಮಾಡಿದರೂ ಅಲ್ಲಿ ಅವರು ಭಗವಂತನಲ್ಲಿ ಬೇಡಿಕೆಗಳನ್ನು ಮಂಡಿಸಿರುವುದಕ್ಕೆ ಒಂದು ಉದಾಹರಣೆಯೂ ದೊರಕುವುದಿಲ್ಲ. ಅವರು ಭಗವಂತನಲ್ಲಿ ಪ್ರಾರ್ಥಿಸಿದ್ದು ತಾಪತ್ರಯಂಗಳ ತಾಳುವಂತೆ ಪ್ರೇರಿಸಿ ಆಪತ್ತು ಕಾಲಕ್ಕೆ ಧೈರ್ಯವಿಯೋ, ಎಂದು. ಈ ಮಾನಸಿಕ ಶಕ್ತಿಯನ್ನು ಹರಿದಾಸ ಸಾಹಿತ್ಯ ಸಿದ್ಧಾಂತಗಳಿಂದ ಪ್ರತಿಯೊಬ್ಬರೂ ಪಡೆಯಬಹುದಾಗಿದೆ. ವಿಜಯದಾಸರ ವಿಚಾರ ಸರಣಿಯಲ್ಲಿ ಬದುಕಿಗೆ ಬೆನ್ನು ತೋರಿಸುವ ಅಂಶಗಳಿಲ್ಲ. ಎಲ್ಲ ಬಗೆಯ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ದಾಟುವ ಮನೋನಿಶ್ಚಯ ಅವರಲ್ಲಿದೆ ಇಂತಹ ಮೌಲ್ಯವುಳ್ಳ ಸಾಹಿತ್ಯ ಸಮಾಜ ಸುಧಾರಣೆಗೂ, ವ್ಯಕ್ತಿವಿಕಾಸಕ್ಕೆ ಅವಕಾಶವನ್ನುಂಟು ಮಾಡುತ್ತದೆ.

ಭಗವಂತನು ಭಕ್ತರಧೀನನಾಗಿರುವನೆಂಬುದನ್ನ ವಿಜಯದಾಸರು ಹಲವು ಸುಳಾದಿಗಳಲ್ಲಿ ವಿವರಿಸಿದ್ದಾರೆ. ಭಕ್ತರು ಮಾಡುವ ತಪ್ಪುಗಳನ್ನು ಭಗವಂತ ಕ್ಷಮಿಸುವನೆಂಬ ಭರವಸೆಯನ್ನು ದಾಸರು ನೀಡುತ್ತಾರೆ. ಆದ್ದರಿಂದಲೇ ಭಗವಂತನನ್ನು ಭಕ್ತವತ್ಸಲನೆಂದು ಕರೆಯುವರೆಂದು ಹೇಳುವ ವಿಜಯದಾಸರು 'ಭಕುತರಾಡಿದ್ದೇ ಆಟ, ಭಕುತರು ಮಾಡಿದ್ದೇ ಮಾಟ, ಭಕುತರು ನೋಡಿದ್ದೇ ನೋಟ, ಭಕುತರು ಕಾಡಿದ್ದೆ ಕಾಟ, ಭಕುತರು ಉಂಡಿದ್ದೆ ಊಟಾ, ಭಕುತರಿಗಾಗಿ

ಬಾಳುವ ದೈವವೇ, ಭಕುತಿ ಪಾಶಕೆ ಒಪ್ಪ ವಿಜಯ ವಿಠಲ ನಿನ್ನ ಭಕುತವತ್ಸಲ ತನಕೆ ನಮೋ ನಮೋ' ಎಂದಿದ್ದಾರೆ. ಆದ್ದರಿಂದ 'ಭಕುತರಿಗಾಪತ್ತು ಬರಲೀಸಾ, ಭಕುತರಿಗಪಮೃತ್ಯು ಬರಲೀಸಾ, ಭಕುತರಿಗೆ ಕ್ಲೇಶ ಬರಲೀಸಾ, ಭಕುತರಿಗೆ ಭಯ ಬರಲೀಸಾ, ಭಕುತರಿಗೆ ಪೀಡೆ ಬರಲೀಸಾ, ಭಕುತರ ಪಾಶಕೆ ಶಿಲ್ಕೆ ಬಂದೊದಗುವ ದೇವಾ' ಎಂಬ ಭರವಸೆ ವಿಜಯದಾಸರಿಗಿತ್ತು.

ಹರಿಭಕ್ತಿಯನ್ನು ಕೇವಲ ನಾಮ ಸ್ಮರಣೆಯಿಂದ ಸಾಧಿಸ ಬಹುದೆಂಬುದು ವಿಜಯದಾಸರ ಅಭಿಪ್ರಾಯವಾಗಿತ್ತು. ಹರಿನಾಮವೇ ಸ್ನಾನ, ಹರಿನಾಮವೇ ಧ್ಯಾನಾ, ಹರಿನಾಮವೇ ದಾನ, ಹರಿನಾಮವೇ ಗಾನ, ಹರಿನಾಮವೇ ಜ್ಞಾನ, ಹರಿನಾಮವೇ ಕ್ರತು, ಹರಿನಾಮವೇ ಸಕಲ ಸಾಧನ ಸಂಪತ್ತು, ಎಂದು ವಿಜಯದಾಸರು ಹೇಳಿರುವುದರೊಡನೆ, ಹರಿನಾಮ ಲಕ್ಷ್ಮಿ ಕಾಣೊ, ದಾರಿದ್ರ ಜನರಿಗೆ, ಹರಿನಾಮ ಬ್ರಹ್ಮ ಕಾಣೊ ಅಲ್ಪಾಯುಳ್ಳ ಜನಕೆ, ಹರಿನಾಮ ಪವನ ಕಾಣೊ, ದುರಿತ ಘತಾವಳಿಗೆ, ಹರಿನಾಮ ಗರುಡ ಕಾಣೊ ಕಾಲಾಖ್ಯ ಸರ್ಪಗಳಿಗೆ, ಹರಿಯೆಂದ ಮನುಜಗೆ ಹರುಷ ಪ್ರವಾಹವೆನ್ನ ಎಂದಿದ್ದಾರೆ.

ವಿಜಯದಾಸರ ಸುಳಾದಿಗಳು ಅಂತರ್ಮುಖತೆಯನ್ನುಂಟ್ಟು ಮಾಡುವ ಸತ್ವವನ್ನು ಪಡೆದಿರುವುದು. ಏಕೆಂದರೆ ದಾಸರು ಮನಸ್ಸಿನಲ್ಲಿ ದೋಷ ದೌರ್ಬಲ್ಯಗಳ ನಾನಾ ಮುಖಗಳನ್ನು ತಮ್ಮ ಸುಳಾದಿಗಳಲ್ಲಿ ನಿಸ್ಸಂಕೋಚವಾಗಿ ಪ್ರಕಾಶನ ಪಡಿಸಿದ್ದಾರೆ. ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳುವುದು ಸಾಮಾನ್ಯ ಕೆಲಸವಲ್ಲ. ಲೋಕದ ಸುಖದ ಸೆಳೆತಗಳಿಂದ ಅದು ಗಾಳಿಗೆ ಸಿಕ್ಕ ಗಾಳಿಪಟದಂತೆ ನ್ಯಾಯ, ಧರ್ಮ, ಸತ್ಯ ಮಾರ್ಗಗಳಿಂದ ಕ್ಷಣ ಕ್ಷಣವೂ ಪಕ್ಕಕ್ಕೆ ಸರಿಯುತ್ತಾ ಅನ್ಯಾಯ, ಅಧರ್ಮ, ಅಪಥ್ಯದ ದಾರಿಗೆ ನುಗ್ಗುತ್ತಿರುತ್ತದೆ. ಮತ್ತೆ ಮತ್ತೆ ಬುದ್ಧಿ ಎಂಬ ಕಡಿವಾಣವನ್ನು ಹಾಕಿ ಆ ಮನಸ್ಸನ್ನು ಋಜು ಮಾರ್ಗದಲ್ಲಿ ನಡೆಸಬೇಕಾಗುತ್ತದೆ.

ಮಾನವನ ಮನಸ್ಸನ್ನು ವಿಪರೀತ ಕಾಡುವುದು ಕೋಪ ; ತಾಳಿದವನು ಬಾಳಿಯಾನು ಎಂಬ ಗಾದೆಯಂತೆ ತಾಳ್ಮೆ ಬರಲು ಕೋಪಗೊಳ್ಳದ ಮಾನಸಿಕ

ಸ್ಥಿತಿ ಮುಂದುವರಿಯಬೇಕಾಗುತ್ತದೆ. ಆದ್ದರಿಂದ ವಿಜಯದಾಸರು ಭೂಪಾಲನಾಗುವುದು ಎಂದೆಂದಿಗೆ ಒಲ್ಲೆ ಕೋಪದ ಬೇರರಸಿ ಕಿತ್ತಿ ಕಡೆ ಮಾಡು, ತಾಪತ್ರಯಂಗಳ ತಾಳುವಂತೆ ಪ್ರೇರಿಸಿ, ಆಪತ್ತು ಕಾಲಕ್ಕೆ ಧೈರ್ಯವೀಯೊ ಎಂದು ಬೇಡಿದ್ದಾರೆ.

ವಿಜಯದಾಸರು ಅಂತರಂಗದ ದೋಷಗಳನ್ನು ವಿವರಿಸಲು ಸೂಕ್ತ ಉಪಮೆಗಳನ್ನು ಬಳಸುತ್ತಾರೆ. ಮನಸ್ಸಿನ ಚಾಂಚಲ್ಯವನ್ನು ಅವರು ವಿವರಿಸಲು ಮನಸ್ಸನ್ನು ತರಗೆಲೆಗೆ ಹೋಲಿಸುತ್ತಾರೆ. ಲೋಕದ ಆಕರ್ಷಣೆಗಳನ್ನು ಬಿರುಗಾಳಿಗೆ ಹೋಲಿಸುತ್ತಾರೆ. ಈ ಎರಡೂ ಹೋಲಿಕೆಗಳು ಅತ್ಯಂತ ಅರ್ಥ ಪೂರ್ಣವಾದವು. 'ಮನವೆಂಬ ತರಗೆಲೆ ದುರ್ವಾಸನೆ ಎಂಬ/ ಅನಿಲ ಬೀಸಲು ಹಾರಿ ಪೋಗುತಿದೆಕೋ/ ಎನಗೆ ಪಿಡಿವ ಶಕ್ತಿಯನು ಕಾಣೆ ಕಾಣೆನೋ ಕ್ಷಣವೊಂದರೊಳಗೆ ಕೋಟಿ ಕೋಟಿ ಯೋ/ ಜನ ಹಾರಿ ಹಾರಿ ಮನಸು ಸುತ್ತ ಸುತ್ತುತಲಿದೆ/ ಘನಮಹಿಮ ನಿನ್ನಂ ಘ್ರಿ ವನಜ ಯುಗಳ ಊರಿ/ ಮನವೆಂಬ ತರಗೆಲೆಯನು ಹಾರದಂತೆ ದಯ/ ವನು ಮಾಡು ನಿನಗೆ ವಂದನೆಗೈವೆ ಹರುಷದಲಿ/ ಎಂಬ ಸುಳಾದಿಯ ಭಾಗವು ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸುವುದು ಅದೆಷ್ಟು ಕಷ್ಟವೆಂಬುದನ್ನು ಮನವರಿಕೆ ಮಾಡಿ ಕೊಡುತ್ತದೆ.

ಶ್ರೀ ವಿಜಯದಾಸರ ಸುಳಾದಿಗಳ ಈ ಎರಡನೆಯ ಸಂಪುಟದಲ್ಲಿ ೧೬೨ ಸುಳಾದಿಗಳು ಸಮಾವೇಶಗೊಂಡಿದೆ. ವಿಷ್ಣುವಿನ ನಾನಾ ರೂಪಗಳ ಸ್ತೋತ್ರ ಸಾಹಿತ್ಯ ಇಲ್ಲಿ ಪ್ರಧಾನವಾಗಿದೆ. ದಶಾವತಾರಸ್ತುತಿಯೂ ಇದರಲ್ಲಿ ಸೇರಿದೆ. ಅಲ್ಲದೆ ಹನುಮ, ಭೀಮ, ಮಧ್ವಾಚಾರ್ಯರ ಸ್ತೋತ್ರಗಳು, ಜಯತೀರ್ಥರು, ವಾದಿರಾಜರು, ಪುರಂದರ ದಾಸರು ಮತ್ತು ಹರಿದಾಸರನ್ನು ಕುರಿತು ಸುಳಾದಿಗಳೂ ಇಲ್ಲಿ ಸಮಾವೇಶಗೊಂಡಿದ್ದು ಅವರೋಹಣ ಕ್ರಮದಲ್ಲಿ ಜೋಡಿಸಲಾಗಿದೆ.

ವಿಜಯದಾಸರ ಸುಳಾದಿಗಳನ್ನು ಸಮಗ್ರವಾಗಿ ಮೊದಲು ಪ್ರಕಟಿಸಿದವರು ಗೋರಬಾಳ ಶ್ರೀ ಹನುಮಂತರಾಯರು. ಅನಂತರ ಲಿಂಗಸುಗೂರಿನ ಶ್ರೀ

ಸೀಮಾಮಾ ಅವರು ಪುನರ್ಮುದ್ರಿಸಿದರು. ಇದೀಗ ಮೂರನೆಯ ಬಾರಿ ಹಿಂದಿನ ಆವೃತ್ತಿಗಳನ್ನು ಪರಿಶೀಲಿಸಿ ಸಾಧ್ಯವಾದ ಎಲ್ಲ ಸ್ಖಾಲಿತ್ಯಗಳನ್ನು ಸರಿಪಡಿಸಿ ಸಂಪಾದಿಸಿ ಪ್ರಕಟಿಸಲಾಗುತ್ತಿದೆ. ಸಮಗ್ರ ದಾಸವಾಙ್ಮಯ ಯೋಜನೆಯ ಸಂಪಾದಕ ಮಂಡಲಿಯು ಈ ಕೆಲಸವನ್ನು ನನಗೆ ವಹಿಸಿರುವುದಕ್ಕಾಗಿ ಸಮಿತಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕಾರ್ಯ ವಾಹಕ ಸಂಪಾದಕರಾದ ಡಾ॥ ಟಿ.ಎನ್. ನಾಗರತ್ನ ಅವರು ಮತ್ತೆ ಮತ್ತೆ ಸಂಪರ್ಕಿಸಿ ಆದಷ್ಟು ಶೀಘ್ರವಾಗಿ ಈ ಕೆಲಸ ತುಂಬ ಅಚ್ಚುಕಟ್ಟಾಗಿ ಆಗ ಬೇಕೆಂದು ಆಗಾಗ್ಗೆ ಒತ್ತಾಯಿಸಿದ ನಿಮಿತ್ತ ಈ ಕಾರ್ಯ ಈ ರೂಪವನ್ನು ಪಡೆಯಲು ಸಾಧ್ಯವಾಯಿತು. ಡಾ॥ ಟಿ.ಎನ್. ನಾಗರತ್ನ ಅವರಿಗೆ ನಾನು ಕೃತಜ್ಞ.

ವಿಜಯದಾಸರ ಸುಳಾದಿಗಳನ್ನು ಸಂಪಾದಿಸಿ ಕೊಡುವ ಗುರುತರ ಜವಾಬ್ದಾರಿಯನ್ನು ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀ ವೈ. ಕೆ. ಮುದ್ದುಕೃಷ್ಣ ಅವರಿಗೂ, ಕಾರ್ಯನಿರ್ವಾಹಕ ಸಂಪಾದಕರಾದ ಡಾ॥ ಟಿ.ಎನ್. ನಾಗರತ್ನ ಅವರಿಗೂ ಮತ್ತು ಸಮಗ್ರ ದಾಸವಾಙ್ಮಯ ಪ್ರಕಟನ ಯೋಜನಾ ಸಮಿತಿಗೂ ನನ್ನ ಕೃತಜ್ಞತೆಗಳು.

–ಡಾ. ಕೆ. ಗೋಕುಲನಾಥ

ಸುಳಾದಿಗಳ ಕ್ರಮಸೂಚಿ

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
	೧. ಭಕ್ತ್ಯಾತ್ಮಕ ಸುಳಾದಿಗಳು	
೧.	ಅಂಜುವೆವು ನಿನ್ನ ಕಪಟನಾಟಕ	೩
೨.	ಅಂದೆ ಹರಿಮೆರೆದರು	೭
೩.	ಅಪೇಕ್ಷೆ ಎನ್ನದಿದೆ	೯
೪.	ಅಬ್ಬಾಪಾರಿಗ ನಾನು	೧೨
೫.	ಆಟವಲ್ಲವು ಕಪಟನಾಟಕ	೧೭
೬.	ಆ ಮಹಾ ಎರಡು ವರ್ಣಾ ಸಂಧಿ	೨೦
೭.	ಇತರ ಸ್ತೋತ್ತರ ಮಾಡಿ	೨೩
೮.	ಇದನೆ ಬೇಡುವೆ	೨೫
೯.	ಇಂದು ಎನ್ನ ಮನೆಗೆ ಬಂದ	೨೯
೧೦.	ಇದು ನಿನಗೆ ಆರಾಧನೆ	೩೧
೧೧.	ಈ ಭಾಗ್ಯವೇ ಸಾಕು	೩೩
೧೨.	ಈ ಮಾಯಾ ಸಂಸಾರ	೩೬
೧೩.	ಈಸಲಾರೆನು ನಾನು	೩೮
೧೪.	ಋಣದಿಂದ ಕಡೆ ಮಾಡು	೪೦
೧೫.	ಎಂತು ಪೇಳಲಿ	೪೨

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೧೬.	ಎಂದಿಗೆ ಕೋಟಲೆ ತಪ್ಪುವುದೂ	೪೪
೧೭.	ಎಂದಿಗೆ ನಿನ್ನ ಪಾದ	೪೯
೧೮.	ಎಂದಿನಂತಿರದೆನ್ನ	೫೧
೧೯.	ಎನ್ನ ಮಾತಾ ಪಿತರು	೫೪
೨೦.	ಎರಗುವೆನಯ್ಯ ಎನ್ನ	೫೫
೨೧.	ಎಲ ಎಲ ಎಲ ಎಲ ಎಲ ಎಲವೊ	೫೭
೨೨.	ಏನು ಪೇಳಲಿ ಎನ್ನ	೫೯
೨೩.	ಕಂಡ ಕಂಡವರ ಮನೆಯ	೬೨
೨೪.	ಕಂಡ ಸ್ತ್ರೀಯರ ನೋಡಿ	೬೫
೨೫.	ಕಡಲೊಳಗದ್ದಿ ಮೇಲೆ ಶೈಲ	೬೮
೨೬.	ಕಣ್ಣು ಬಿಟ್ಟರೆ ಬಿಡೆನೊ	೭೧
೨೭.	ಕಮಲವಾದೆನೆ ನಿನ್ನ ಮುಖವ	೭೩
೨೮.	ಕರವಿಡಿದು ಪಾಲಿಪುದು	೭೬
೨೯.	ಕರ್ಮಠ ನಾನು ದೇವ	೭೮
೩೦.	ಕರವಿಡಿದೆತ್ತುವುದು	೮೧
೩೧.	ಕಾಮ ಕಡಿಮ್ಯಾಗದು	೮೩
೩೨.	ಕಾಮ ವೆಗ್ಗಳಿಸಿತು	೮೬
೩೩.	ಕಾಯಯ್ಯೋ ದೇವ	೮೯
೩೪.	ಕಾಲ ಬಿಡುವನೆ ಹರಿ	೯೧
೩೫.	ಕೊಡು ನಿನ್ನವರ ಸಂಗ	೯೩
೩೬.	ಚರಣವ ನಂಬಿದೆನೊ	೯೬
೩೭.	ಚರಣವ ಬಿಡೆನೊ	೯೮

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೩೮.	ಚಿಂತೆ ವೆಗ್ಗಳಿಸಿತು	೧೦೦
೩೯.	ಫಲವೆ ಎನ್ನದು ಇಂದು	೧೦೪
೪೦.	ಜನಿಸಿದೆನೊ, ಹಿಂದೆ	೧೦೭
೪೧.	ಜ್ಞಾನಿಯೆ ನಾನಲ್ಲ	೧೦೯
೪೨.	ತಾತ್ಸಾರ ಮಾಡುವೆ	೧೧೧
೪೩.	ದಯಮಾಡೊ ಎನ್ನೊಡೆಯಾ	೧೧೪
೪೪.	ದಾಸ ನಿನಗೆ ನಾನು	೧೧೭
೪೫.	ದಾಸನು ನಾನಲ್ಲ	೧೧೯
೪೬.	ದುರ್ಜನ ಶಿಖಾಮಣಿ ನಾನಯ್ಯ	೧೨೨
೪೭.	ದುರಿತ ರಾಶಿಯ ಬಿಡಿಸು	೧೨೫
೪೮.	ದೂರವಿದ್ದರೆ ಬಿಡೆನೊ	೧೨೬
೪೯.	ದೋಷ ಎನಗೆ ಉಂಟೆ	೧೨೯
೫೦.	ದೋಷರಾಶಿಯ ಕಳೆದಮಲನ	೧೩೧
೫೧.	ನಮ್ಮಪ್ಪ ನಮ್ಮೊಡಿಯಾ	೧೩೩
೫೨.	ನಾಡೊಳಗೆ ಎನಗೆ ಈಡಾದ	೧೩೬
೫೩.	ನ್ಯಾಯವ್ಯಾತಕೆ ದೇವ	೧೪೦
೫೪.	ನಿನ್ನ ಇಚ್ಛೆಯಿಂದ ಬಂದ	೧೪೩
೫೫.	ನೀ ಕೈಯ ಕೃಪೆಯಿಂದ ಪಿಡಿದರೆ	೧೪೬
೫೬.	ನೀ ಬಾರದಿರೆ ಈ ಕಳೇಬರ ವ್ಯರ್ಥ	೧೪೯
೫೭.	ಪರರಾಧೀನವಾದ ದ್ರವ್ಯಂಗಳ	೧೫೧
೫೮.	ಪಾದ ತೋರಿಸು ತೀರ್ಥಪಾದನೆ	೧೫೪
೫೯.	ಪಿಂಡಾಂಡದಿಂದ ಪೊರಗಾಗಿ	೧೫೬

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೬೦.	ಪೂಜೆ ಯಾವುದು ನಿನಗೆ	೧೫೮
೬೧.	ಪೂ ಬಾಡದಂತೆನ್ನ ಕ್ಷೋಭಿಯನು	೧೬೧
೬೨.	ಪೊರೆಯೊ ಕರುಣದಲೆನ್ನ	೧೬೩
೬೩.	ಬಂದೆನೊ ಎಲೊ ಹರಿ	೧೬೫
೬೪.	ಬಂದೆನೊ ಬಲು ತೊಳಲಿ	೧೬೯
೬೫.	ಬಂದೆನೊ ಭವರೋಗ ಬಂಧನ	೧೭೧
೬೬.	ಬಂಧು ನಿನಗೆ ಎನದೊಂದಾದರು ಪೂಜೆ	೧೭೪
೬೭.	ಬಳಲಿಪುದು ಸಲ್ಲ	೧೭೬
೬೮.	ಬಾ ಎನ್ನ ಭಾಗ್ಯನಿಧಿ	೧೮೦
೬೯.	ಬಾರದಿರೆ ನೋಡು ಈ ಶರೀರವ	೧೮೨
೭೦.	ಬಿಡದಹಂಕಾರ	೧೮೪
೭೧.	ಬೇಡುವೆನು ನಿನ್ನನಿದನೇ	೧೮೭
೭೨.	ಭವರೋಗ ಪರಿಹರಿಸೋ	೧೯೦
೭೩.	ಭೀತಿಗೊಳಿಪುದೇನೊ	೧೯೨
೭೪.	ಮಂಜು ಕಿವಿ ಕಣ್ಣು ಕವಿದಾವು	೧೯೬
೭೫.	ಮುಸರಿಯಾ ಕರಣಿ ವಸುಧಿಯೊಳಗೆ	೧೯೯
೭೬.	ಯಾಕೆ ಸೇರಿದೆ ಎನ್ನ ಸಾಕುವ ಭಾರಕರ್ತ	೨೦೧
೭೭.	ಯಾತರ ಶರಣನಯ್ಯ	೨೦೪
೭೮.	ಯಾತರಿಂದಲಿ ನಿನ ನಿಲಿಸಿಕೊಂಬೆನೊ	೨೦೬
೭೯.	ರಂಗ ನಿನ್ನ ಚರಣಂಗಳ ನಂಬಿದೆನೊ	೨೦೯
೮೦.	ವಂದ್ಯಾನೆಂದರೆ ನೀನಿಂದು	೨೧೧
೮೧.	ವ್ಯರ್ಥವಾಯಿತು ಜನನಾನರ್ಥ ಸಾಧನದಲಿ	೨೧೩

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೮೨.	ವಿಜಯವಿಠ್ಠಲನೆ ಗಜರಾಜ ವರದನೆ	೨೧೫
೮೩.	ಶರಣನಾಗುವೆ ಶರಣರ ಪರಿಪಾಲ	೨೧೭
೮೪.	ಸಾರಥಿಯಾಗಿ ಪಾರ್ಥ್ವದನಾಗಿ	೨೧೯
೮೫.	ಸಿಂಧುತನಯಳರಮಣ	೨೨೩
೮೬.	ಸಿಕ್ಕಿದೆ ಸಂಸಾರ ಸಿಕ್ಕಿನೊಳಗೆ	೨೨೫
೮೭.	ಸುಖದ ದೈವವೆಂದು	೨೨೭
೮೮.	ಸುತ್ತಿದೆ ಬಿಡದೆ ಈ ಮರ್ತ್ಯ	೨೨೯
೮೯.	ಸುಳಿದು ಸುಳಿಯೊ	೨೩೨
೯೦.	ಸೇರಿದೆನೊ ಬಂದು ಸಂಕಟದಲ್ಲಿ	೨೩೪

೨. ನಿವೇದನಾತ್ಮಕ ಸುಳಾದಿಗಳು

ವಿಜಯವಿಠ್ಠಲನ ಸ್ತೋತ್ರಗಳು

೯೧.	ಅಕಳಾಂಕ ಚರಿತಾ	೨೩೭
೯೨.	ಅಚ್ಯುತಾನಂತ ಕೃಷ್ಣ	೨೩೯
೯೩.	ಅನಾಥ ಬಂಧು ದೀನದಯಾಳು	೨೪೨
೯೪.	ಆವನ್ನ ದಯದಿಂದ ಈ ದೇಹ	೨೪೪
೯೫.	ಎಂಥಾದೊ ನಿನ್ನ ಮಹಿಮೆ	೨೪೭
೯೬.	ದೊರಕುವುದೆ ಹರಿನಾಮ	೨೫೦
೯೭.	ನಂಬಿದೆ ಎಲೊ ಹರಿ	೨೫೨
೯೮.	ನಿನ್ನ ನಾಮ ಪೀಯೂಷಾನ್ನವೊ	೨೫೪
೯೯.	ಪರಿಪೂರ್ಣ ಕಾಮ ವಿಸ್ತರ ಮಹಿಮ	೨೫೬

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೧೦೦.	ಪೂರ್ಣಗಣ್ಯಾ ಗುಣಾರ್ಣವ	೨೬೦
೧೦೧.	ಬಂದು ನಿಂದವನಾರು	೨೬೩
೧೦೨.	ಭಕ್ತರಿಗೋಸುಗ ನಿನ್ನ	೨೬೫
೧೦೩.	ಭಕುತರಿಗಾಪತ್ತು ಬರಲೀಸಾ	೨೬೭
೧೦೪.	ಮರುಳನ್ನ ಪರಿಹರಿಸೊ	೨೭೨
೧೦೫.	ರೋಗ ನಿವಾರಣವಾಗುವುದಿದು	೨೭೬
೧೦೬.	ಶ್ರೀವಲ್ಲಭ ನಿನ್ನ ಕಾವೊ	೨೭೮
೧೦೭.	ಸುಳಿಕುಮಾಯದ ನಡುಸುಳಿಯಿಂದ	೨೮೧
೧೦೮.	ಹಗರಣ ಮಾಡದಿರು ಹರಿಯೆ	೨೫೪
೧೦೯.	ಹರಿನಾಮ ಪ್ರಹ್ಲಾದನ್ನ ಮೊರೆ ಕೇಳಿ	೨೮೮
೧೧೦.	ಹರಿಯ ಬಿಡದಿರು ಸತ್ಯ	೨೯೧
೧೧೧.	ಹರಿನಾಮ ಲಕ್ಷ್ಮೀ ಕಾಣೋ	೨೯೪
೧೧೨.	ಹೆಜ್ಜೆ ಹೆಜ್ಜೆಗೆ ಒಮ್ಮೆ	೨೯೮
೧೧೩.	ವೆಗ್ಗಳವಲ್ಲವಯ್ಯಾ	೩೦೦
	ವರಾಹ ಸ್ತೋತ್ರ	
೧೧೪.	ಭೂವರಾಹ ಅವತಾರ ಶೃಂಗಾರ	೩೦೩
	ಕಪಿಲಾವತಾರ ಸ್ತೋತ್ರ	
೧೧೫.	ಉಪಜೀವ್ಯ ನಿಜಾನಂದ	೩೦೬
೧೧೬.	ಸಿದ್ಧಿದಾಯಕ ಶಿಷ್ಯಜನ ಪರಿಪಾಲ	೩೦೮

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
	ದತ್ತಾವತಾರ ಸ್ತೋತ್ರ	
೧೧೭.	ದತ್ತಾ ಯೋಗೀಶ	೩೧೧
	ಹಯಗ್ರೀವ ಸ್ತೋತ್ರ	
೧೧೮.	ಜಯಜಯ ಜಾಹ್ನವಿಜನಕ	೩೧೪
	ಋಷಭದೇವ ಸ್ತೋತ್ರ	
೧೧೯.	ಸೌಭಾಗ್ಯವಂತ ಜಯತು	೩೧೮
	ಧನ್ವಂತರೀ ಸ್ತೋತ್ರ	
೧೨೦.	ಆಯು ವೃದ್ಧಿಯಾಗೋದು	೩೨೧
	ನರಸಿಂಹ ಸ್ತೋತ್ರ	
೧೨೧.	ವೀರಸಿಂಹನೆ ನಾರಸಿಂಹನೆ	೩೨೪
೧೨೨.	ರುದ್ರಾಂತರ್ಗತ ನಾರಸಿಂಹ	೩೨೭
೧೨೩.	ಜಯ ಜಯವೆಂದು ಜಗದೋತ್ಪಾದಕ	೩೨೯
	ವಾಮನ – ತ್ರಿವಿಕ್ರಮ ಸ್ತೋತ್ರ	
೧೨೪.	ವಾಮನ ವಟು ಇಂದ್ರಾನುಜ	೩೩೩
	ಪರಶುರಾಮ ಸ್ತೋತ್ರ	
೧೨೫.	ಸತ್ಯವತಿ ಪುತ್ರ ದುರ್ಗಾಕಳತ್ರ	೩೩೭
	ಶ್ರೀರಾಮ ಸ್ತೋತ್ರ	
೧೨೬.	ರಾಜ ರಾಜ ರಮಣಿ ರಾಜಶೇಖರ	೩೪೦

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
೧೨೭.	ಸುತ್ತ ವಿರಜಾನದಿ	೩೪೩
೧೨೮.	ಮಧ್ವವಲ್ಲಭ ಜಯ	೩೪೭
೧೨೯.	ವಂದೆ ಮುಕುಂದ ಮುಚುಕುಂದ	೩೫೦
	ಶ್ರೀಕೃಷ್ಣ ಸ್ತೋತ್ರ	
೧೩೦.	ಅಂಜಿಸುವುದೇನೋ	೩೫೪
೧೩೧.	ಇಂದಿರಾಪತಿ ಬಂದಾ ಎನ್ನ	೩೫೭
೧೩೨.	ಕೃಷ್ಣಾ ಕಮಲನಾಭಾ	೩೬೦
೧೩೩.	ಕೈಯ ಬಿಡದಿರೊ ಹರಿಕೈಟಭಾಸುರ	೩೬೫
೧೩೪.	ಗೊಲ್ಲನಾದಕ್ಕಿದೇ ಗುಣಗಳ	೩೬೬
೧೩೫.	ತಡಿಯಾ ಕೊಡುವುದಿಂದು ಬಡೆಯಾ	೩೭೦
೧೩೬.	ನವ ರತುನದಿಂದ ಲೆಸೆವ	೩೭೩
೧೩೭.	ನೀ ಕಾಯದಿರೆ ಎನ್ನ ಕಾಯುವರಾರೊ	೩೭೫
೧೩೮.	ಬಿನ್ನಪ ಲಾಲಿಸಯ್ಯ ಭಕುತ	೩೭೮
೧೩೯.	ಬೆಳಗಪ್ಪಾ ಝೂವದಲಿ ಮಲಗಿ	೩೮೦
೧೪೦.	ಮುತ್ತು ನವರತ್ನ ಮಯ ಪವಳ	೩೮೪
೧೪೧.	ಸತತ ಬ್ರಹ್ಮಚಾರಿ ಎನಿಸಿಕೊಂಡು	೩೮೭
೧೪೨.	ಸದಾ ನಿನ್ನ ಭಕುತರ ಚರಣಕ್ಕೆ	೩೯೦
೧೪೩.	ಸ್ವರ್ಗತಿ ನಿರ್ಗತಿ ಸಕಲ ನಿಗಮ	೩೯೩
	ವೇದವ್ಯಾಸ ಸ್ತೋತ್ರ	
೧೪೪.	ಯತಿಗಳ ಶಿರೋರತುನಾ ಸತಿಯ	೩೯೫

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
	ಶ್ರೀನಿವಾಸ ಸ್ತೋತ್ರ	
೧೪೫.	ಸುಳಿದವನಾರೆನ್ನ ಕಣ್ಣ ಮುಂದೇ	೩೯೭
	ದುರ್ಗಾ ಸ್ತೋತ್ರ	
೧೪೬.	ದುರ್ಗಾ ದುರ್ಗೆಯೆ ಮಹದುಷ್ಟಜನ	೪೦೦
	ಲಕ್ಷ್ಮೀ ಸ್ತೋತ್ರ	
೧೪೭.	ಕಾಯೇ ಲಕುಮಿ ಕಾಯೊ ವಿಠ್ಠಲ	೪೦೪
	ವಾಯುದೇವರ ಸ್ತೋತ್ರ	
೧೪೮.	ಧಾತ್ರಿತ್ರಯಕೆ ಗುರು ಸೂತ್ರ ನಾಮಕ	೪೦೬
೧೪೯.	ಪ್ರಾಣ ಅಪಾನ ವ್ಯಾನ ಸಮಾನ	೪೦೯
	ಹನುಮಂತನ ಸ್ತೋತ್ರ	
೧೫೦.	ಜಲಜಸಂಭವ ಪಟ್ಟಕ್ಕೇರುವ ಗುರುವೆ	೪೧೨
೧೫೧.	ಕಡಗ ಕಂಕಣದಿಂದ ಶೋಭಿತವಾದ ಹಸ್ತ	೪೧೫
೧೫೨.	ಅಂದಿದೆ ಪೊಂಗೆಜ್ಜೆ ಬಿರುದಿನ	೪೧೭
೧೫೩.	ಕೋತಿಯಾದರೆ ಬಿಡೆನೋ	೪೨೩
	ಭೀಮಸೇನ ಸ್ತೋತ್ರ	
೧೫೪.	ಭೀಮಸೇನನೆ ಪೂರ್ಣಕಾಮವೆ	೪೨೬
	ಶ್ರೀಮಧ್ವಾಚಾರ್ಯರ ಸ್ತೋತ್ರ	
೧೫೫.	ಶ್ರೀ ಮಧ್ವಿಠಲ ಪಾದಾಂಬುಜ ಮಧುಪ	೪೨೯

ಸುಳಾದಿ ಸಂಖ್ಯೆ	ಸುಳಾದಿಯ ಮೊದಲ ಸಾಲು	ಪುಟ ಸಂಖ್ಯೆ
	ಶ್ರೀ ಜಯತೀರ್ಥರ ಸ್ತೋತ್ರ	
೧೫೬.	ಜಯರಾಯ ಜಯರಾಯ ಜಯದೇವಿ	೪೩೨
	ಶ್ರೀ ಪಾದರಾಯರ ಸ್ತೋತ್ರ	
೧೫೭.	ಶ್ರೀಪಾದರಾಯ ಗುರುವೆ	೪೩೫
	ಶ್ರೀ ವ್ಯಾಸರಾಯರ ಸ್ತೋತ್ರ	
೧೫೮.	ಒಂದು ದಿವಸ ನಾರಂದ ಮುನೀಶ್ವರ	೪೩೮
	ಶ್ರೀ ವಾದಿರಾಜರ ಸ್ತೋತ್ರ	
೧೫೯.	ಮಾಧವನಂಘ್ರಿ ನಿತ್ಯ ವೋದದಲ್ಲಿ	೪೪೦
	ಪುರಂದರ ದಾಸರ ಸ್ತೋತ್ರ	
೧೬೦.	ಗುರುಗಳೆಂದರೆ ಇವರೆ ಗುರುಗಳು	೪೪೩
೧೬೧.	ದಾಸರ ಮಹಿಮೆಗೆ ಅನಂದ ನಮೋ	೪೪೬
	ಹರಿದಾಸರ ಸ್ತೋತ್ರ	
೧೬೨.	ಯಾತರೊಳಗೆ ಗಣನೆ	೪೪೮

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಢೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು ; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಂದೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮುವ್ವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು), ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ ಎಂದು ಘೋಷಿಸಿದರು. ಅದರಂತೆ ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ.ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಶ್ರೀ ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಓದಲಾರದ ಕನ್ನಡ ಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ), ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೫ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೫ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದು ಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದು, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು*, ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು – ಎಂಬುದಾಗಿ ನಿರ್ಧರಿಸಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಆನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ' ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿದ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾ ನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರ ಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ, ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿಡಿ ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ವಿಜಯದಾಸರ ಸುಳಾದಿಗಳು
(ಆತ್ಮನಿವೇದನೆ)

೧. ಭಕ್ತ್ಯಾತ್ಮಕ ಸುಳಾದಿಗಳು

೧

ಧ್ರುವತಾಳ

ಅಂಜುವೆವು ನಿನ್ನ ಕಪಟನಾಟಕ ತನಕೆ !
ಅಂಜುವೆವು ನಿನ್ನ ಅದ್ಭುತ ಕರ್ಮಕ್ಕೆ !
ಅಂಜುವೆವು ನಿನ್ನ ಅಗಣಿತ ಗುಣಕ್ಕೆ !
ಅಂಜುವೆವು ನಿನ್ನ ಕಾಲಾಖ್ಯ ರೂಪಕ್ಕೆ !
ಅಂಜುವೆವು ಅಂಜಿ ಅಂ[ಜ]ಲಿಬೇಕು ನಿನ್ನ ಧೊರತನಕ್ಕೆ !
ಪ್ರಾಂಜಲಿ ಮುಗಿದು ನಮೋನಮೋಎಂಬೆ !
ಮುಂಜಿಯಾಗದ ಮುನ್ನ ಮಕ್ಕಳ ಪಡದೆ !
ಸಂಜೆಯಮಾಡಿ ಸೈಂಧವನ ಕೊಂದು !
ಅಂ[ಜ]ನೆಸುತ ಕೇತುವಿನ ಸಾಕಿದೆ !
ಅಂಜುವೆವು ನಿನ್ನ ಮರೆಮೋಸತನಕ್ಕೆ !
ಅಂಜನಾಭ ಖಂಡದೊಳು ಪುಟ್ಟಿಸಿ ಕರ್ಮ !
ಭುಂಜಿಸಿ ಹಲುಬುವಂತೆ ಎನ್ನ ಮಾಡಿದಿ !
ಕಂಜನಾಭನೆ ನಿನಗೇ ಎನಬಾರದು !
ಗಂಜಿಹಾಕುವೆನೆಂಬೊ ಗರ್ವಾವು ನಿನಗೆ !
ಅಂಜದಲೆ ನಿನಗೆ ನುಡಿದೆನಾದಡೆ ಅದ !
ಕಂಜಿಕೆ ನಿನಗೇನು ಲೇಶವಿಲ್ಲ !
ಗುಂಜಿದವರಿಗೆ ವಜ್ರಪಂಜರಾಗುವೆ !
ಕುಂಜರವರದ ಶ್ರೀ ವಿಜಯವಿಠ್ಠಲ, ಪ್ರಾ !
ಭಂಜನ್ನ ಪಾಪ ಜೀಮೂತಕ್ಕೆ ಅಜಿತಾ ೧

ಮಟ್ಟ ತಾಳ

ಒಂದು ಕರ್ಮವನ್ನು ತಂದು ನಮಗೆ ಹಚ್ಚಿ !
ಇಂದಿರೆ ರಮಣನೆ ಅಂದು ಸೃಜಿಸಿ ಜಗವ !
ಒಂದೊಂದು ಪರಿಯಲ್ಲಿ ಮುಂದುಗೆಡಿಸಿ ಭವದ !
ಸಿಂಧುವಿನೊಳಗಿಟ್ಟು ಪೊಂದಿಸಿದೆ ಹೀಗೆ !
ನೊಂದು ನೋವಾದರು ಅಂದೇ ಬಲ್ಲದಲೆ !
ಅಂದರೆ ನಿನಗರಿಂದೇನಾಗುವದೊ !
ತಂದೆ ತಂದೆಯ ತಂದೆ ವಿಜಯ ವಿಠ್ಠಲ ದೀನ !
ಬಂಧುವೆ ನಿನಗೊಮ್ಮೆ ಅಂದಾರೆ ಬಿಡುವ ೨

ರೂಪಕ ತಾಳ

ಏನಾಗುವದು ನಿನಗೆ ನಾನಂದ ನುಡಿಗಳು!
ಹಾನಿ ವೃದ್ಧಿಗಳಿಲ್ಲದ ಶ್ರೀ ನಾರಾಯಣ ಮೂರ್ತಿ
ಕೇಣಿಗೊಂಡಾನೀಚ ಮಾನವ ನಾನಯ್ಯ !
ಏನರ ಮನವೆನ್ನಾಧೀನವಲ್ಲವೆ ಕೇಳು !
ಭಾನುಕುಲೋದ್ಭವ ವಿಜಯ ವಿಠಲ ನಿನಗೆ !
ಏನೇನು ಅಂದರೆ, ಊನ ಆಗುವದೇನೊ ೩

ಝಂಪೆ ತಾಳ

ಕಡಿಮೆ ಆಯುಷವೆಂದು ನುಡಿವೆನೆಂದಾದರೆ!
ಕಡೆಯಾವದು ನಿನ್ನ ದಿವಸಗಳಿಗೆ !
ಕುಡಿಯಲಿ ನೀರು ದೊರಕಲಿ ಬ್ಯಾಡವೆಂಬೆನೆ !
ಪಡದೆ ನಿನ್ನುಂಗುಟದಲಿ ಗಂಗೆಯ !
ಒಡಲ ಕ್ಷುಧಿಯನ್ನು ವೆಗ್ಗಳಿಸಿದೆಂಬೆನೆ !
ಬಿಡದೆ ಎಂದಿಗೂ ನೀನು ನಿತ್ಯತೃಪ್ತ !

ಕಡು ದಾರಿದ್ರ್ಯ ನಾಗಿನ್ನಿರು ಪೋಗು ಎಂಬೆನೆ !
ಒಡನೆ ಇಪ್ಪಳು ಲಕುಮಿ ನಿನ್ನ ಗಲದೆ !
ಉಡಲಿ ವಸನವ ಕಾಣದಲೆ ಪೋಗು ಎಂಬೆನೆ !
ಕಡುರಮ್ಯವಾದ ಪೀತಾಂಬರವೊ !
ಬಡವನಲ್ಲ ನೀನು ವಿಜಯ ವಿಠ್ಠಲ ನಿನಗೆ !
ಎಡಬಿಡದೆ ನುಡಿದವನು ಅವನೆ ದಾರಿದ್ರ ೪

ತ್ರಿವಿಡಿ ತಾಳ

ಭೂಷಣವಿಲ್ಲದೆ ಪೋಗಲಿ ಏನೆಂಬೆನೆ !
ದೋಷರಹಿತ ಅಪ್ರಾಕೃತ ಭೂಷಣ !
ಲೇಸು ನಿನಗೆ ಆಗದೆ ಪೋಗಲೆಂಬೆನೆ !
ಲೇಸು ಕೊಡುವೆ ನೀನು ಬೊಮ್ಮಾದಿಗೆ !
ಈ ಸಂಸಾರ ಪಾಶದೊಳಗಿರು ಎಂಬೆನೆ !
ಏಸೇಸು ಸಂಸಾರಿಗಳನ ದಾಟಿಸುವೆ !
ಹಾಸಿಕೆಯಿಲ್ಲದೆ [ಹೋ]ಗಲಿ ಎಂಬೆನೆ !
ಶೇಷನೆ ನಿನಗಯ್ಯ ಘನ ಹಾಸಿಕೆ !
ದ್ವೇಷಿಗಳ ಕೈ[ಯ] ಸೋತು ಪೋಗೆಂಬೆನೆ
ನೀ ಸಮರ್ಥನು ಕಾಣೋನಿತ್ವದಲಿ !
ಪಾಶಧರಾರ್ಚಿತ, ವಿಜಯ ವಿಠ್ಠಲರೇಯ !
ಏಸುಪರಿ ಭಾಗ್ಯವಂತನು ನೀನಯ್ಯ ೫

ಅಟ್ಟತಾಳ

ದೊರೆತನ ನಿನಗೆ ಇಲ್ಲದೆ ಪೋಗಲಿಯೆಂಬನೆ !
ಅರಸನಾಗಿ ಸರ್ವರ ನೀನಂಜಿಸಿಕೊಂಬೆ !
ಭರದಿಂದಲೇರುವ ರಥ ಬ್ಯಾಡವೆಂಬೆನೆ !

ತಿರುಗುವ ಖಗರಾಜ ಈರೇಳು ಲೋಕದ !
ಪರಿವಾರಯಿಲ್ಲದೆ ಇರು ನಿನಗೆಂಬೆನೆ !
ಸುರರು ಮೊದಲಾದವರು ಸೇವಕರಯ್ಯ !
ಅರಮನಿ ನಿನಗಾಗಲಿ ಬೇಡವೆಂಬಿನೆ !
ಮಿರುಗುವ ತ್ರಿಧಾಮ ಜಗಕೆ ವಿರಹಿತ !
ತರಳ ಯವ್ವನ ಜರೆತನವಾಗಲಂಬೆನೆ !
ಪರಮಪುರುಷ ನಿನ್ನ ಜನನ ಮತ್ತಾವದೊ !
ಧರಾಧರ ವಿಜಯವಿಠಲನಿಗೆ ಮಂದರು !
ಅರಿಯಾದೆ ನುಡಿದು ಭವದೊಳಗಿಪ್ಪರು ೬

ಆದಿತಾಳ

ಕುಲಗೋತ್ರದಿಂದ ನಿನ್ನ ಕೆಲಸಾರು ಎಂಬಿನೆ !
ತಿಳಿಯಾದು ನಿನ್ನ ಕುಲಗೋತ್ರವೆನಗೆ !
ಚಲುವನಾಗದೆ ಪೋಗು ಚನ್ನಿಗನೆಂಬೆನೆ !
ಎಳೆ ನಖಕಾಂತಿಗೆ ಬೆಳಗುವದು ಲೋಕ !
ಛಳಿ ಘಾಳಿ ಬಿಸಿಲು ತಾಕಲಿ ನಿನಗೆಂಬೆನೆ !
ಒಳಗೆ ಹೊರಗೆ ನೀನೆ ಸರ್ವ ವ್ಯಾಪಕನು !
ಸೆಳೆವ ಮೃತ್ಯು ನಿನ್ನ ತಡಹಲಿ ಎಂಬೆನೆ !
ಬಲು ಮೃತ್ಯುಗಳ ನೀನೆ ತಲೆ ಮೆಟ್ಟಿ ಆಳುವೆ !
ಸುಲಭನೆ ನಿನಗೊಂದು ಅಂದೆನೆಂದರೆ ಕಾಣೆ !
ನೆಲೆಯಾವದು ನಿನ್ನ ಬಲವಂತ ತನಕ್ಕೆ !
ಕುಲದೇವ ಕಮಲೇಶ ವಿಜಯ ವಿಠ್ಠಲರೇಯ !
ಸಲಿಗೆಲಿ ನುಡಿದೇನು ಸಲಹುವ ದಾತಾರ ೭

ಜತೆ

ಸ್ತೋತ್ರ ರೂಪವಿದೆಂದು [ನಿ]ನ್ನ ಕೊಂಡಾಡಿದೆ !
ಮಿತ್ರನಾಗಿ ಕಾಯೊ ವಿಜಯ ವಿಠ್ಠಲ ಪ್ರಭುವೆ ೮

ಆದಿ ತಾಳ

ಚರಣದಂಗುಟದಲ್ಲಿ ಸೇರಿಸಿ !
ಪೊರೆವುದು ದಯದಿಂದ !
ಹಿರಿದಾಗಿ ಬಂದ ಪಾಪದ ರಾಶಿಯಾ!
ಹರಿಸುವುದು ಛಂದ !
ಕರುಣಾಕರ ಮುದ್ದು ವಿಜಯ ವಿಠಲನೆ !
ತ[ರ]ಳನ ಅಪರಾಧ ನಿರುತ ಎಣಿಸದೆ !
ಪರಿ ಪರಿಯಿಂದಲಿ ಪರಮಗತಿಗೆ ಒಯ್ಯೊ ೭

ಜತೆ

ಕೈಯ್ಯಾ ಬಿಡದಿರೊ ಎನ್ನ ಕೈಯ್ಯ ಬಿಡದಿರೊ ಹರಿ !
ಕೈಯ್ಯಾ ಬಿಡದೆ ಕಾಯೋ ಅಯ್ಯಾ ವಿಜಯ ವಿಠ್ಠಲ ೮

೩

ಧ್ರುವ ತಾಳ

ಅಪೇಕ್ಷೆ ಎನ್ನದಿದೆ ಮತ್ತೊಂದಾವುದು ಇಲ್ಲ !
ಅಪಾರ ಗುಣನಿಧಿ ಅವಧರಿಸೊ !
ಭೂಪಾಲನಾಗುವುದು ಎಂದಿಗೆಂದಿಗೆ ಬಲ್ಲೆ !
ಕೌಪೀನವಿರಲಿ ಎನಗೆ ಸಂತತದಲ್ಲಿ ಸ್ವಾಮಿ !
ಕೋಪಾವೆ ಬೇರರಸಿ ಕಿತ್ತ ಕಡೆಗೆ ಮಾಡು !
ಕಾಪಾಡು ಇದೆ ನಿನ್ನ ಬೇಡಿಕೊಂಬೆ !
ತಾಪತ್ರಯಂಗಳು ತಾಳುವಂತೆ ಪ್ರೇರಿಸಿ !
ಆಪತ್ತು ಕಾಲಕ್ಕೆ ಧೈರ್ಯವೀಯೊ !
ಅಪವರ್ಗವೆ ಒಲ್ಲೆ ಅನುದಿನ ನಿನ್ನ ನಖ !
ದೀಪದ ಬೆಳಗಿನಲ್ಲಿ ಲೋಲ್ಯಾಡಿಸೊ !
ಶ್ರೀ ಪರಮಾತ್ಮನೆ ನಿನ್ನಲ್ಲಿ ವಿಶ್ವಾಸ !

ವಾ ಪುಟ್ಟುವಂತೆ ಸದಮತಿ ಪಾಲಿಸೊ !
ಪಾಪ ಮಾರ್ಗಕ್ಕೆ ಎನ್ನ ಕೆಡಹಲಾಗದು ಚನ್ನ !
ಉಪಾಯ ನಿನ್ನದೊಂದೆ ನಾಮ ಗತಿಗೆ !
ಗೋಪಾಲ ಕೃಷ್ಣ ನಮ್ಮ ವಿಜಯ ವಿಠ್ಠಲ ನಾನಾ !
ರೂಪನೆ ಸರ್ವದ ಮನಸು ನಿನ್ನದಾಗಲಿ ೧

ಮಟ್ಟ ತಾಳ

ನಿನ್ನ ದಾಸರು ಪೊದ್ದವಸನ ಎನಗಾಗಲಿ !
ನಿನ್ನ ದಾಸರು ಉಂಡ ಎಂಜಲು ಎನಗಾಗಲಿ !
ನಿನ್ನ ದಾಸರ ಪಾದೋದಕವೆ ಎನಗಾಗಲಿ !
ನಿನ್ನ ದಾಸರು ಇಟ್ಟಾಭರಣವೆ ಎನಗಾಗಲಿ !
ನಿನ್ನ ದಾಸರು ಚರಿಸಿದ ಉತ್ತಮ ಭೂಮಿ !
ಪುಣ್ಯ ನಿಧಿಗಳೆಲ್ಲ ಎನಗಾಗಲಿ ದೇವ !
ನಿನ್ನ ದಾಸರು ಪೇಳಿದ್ದದೆ ಮಹ ಉಪದೇಶ !
ನಿನ್ನ ದಾಸರು ಕೇಳಿದ್ದದೆ ಎನಗೆ ಹರುಷ !
ನಿನ್ನ ದಾಸರ ಮಾತು ಸಕಲ ಶ್ರುತಿ ವಚನ !
ನಿನ್ನ ದಾಸರ ಲೀಲೆ ಎನಗೆ ಪುಷ್ಪದ ಮಾಲೆ !
ನಿನ್ನ ದಾಸರ ಕರುಣಾ ಎನಗೆ ವಜ್ರ ಕವಚ !
ನಿನ್ನ ದಾಸರ ಸಂದರುಶನವೆ ಲಾಭ !
ನಿನ್ನ ದಾಸರು ಕೀರ್ತಿ ಎನಗೆ ಪರಮ ಪೂರ್ತಿ !
ನಿನ್ನ ದಾಸರ ಸಂಗ ಮಹದುರಿತ ಭಂಗ !
ನಿನ್ನ ಭಕುತಿಗಿಂತ ನಿನ್ನ ದಾಸರ ಪಾದ !
ವನ್ನ ಓದಲಿ ಭಕುತಿ ಎನ್ನಗದು ಬಲು ಪ್ರೀತಿ !
ಮನ್ನಿಸು ಮೋಹನ್ನ ವಿಜಯ ವಿಠ್ಠಲ ಚನ್ನ !
ಇನ್ನು ಇದಲ್ಲದೆ ಪ್ರತಿ ಮಾತುಗಳಿಲ್ಲ ೨

ತ್ರಿವಿಡಿ ತಾಳ

ಅನುಭವವಾದ ಭಕುತಿ ಅನುಭವವಾದ ಜ್ಞಾನ !
ಅನುಭವವಾದ ವಿರಕುತಿ ಇತ್ತು !
ಅನುದಿನದಲಿ ನಿನ್ನ ದಾಸರ ದಾಸರ !
ಅನುಗ್ರಹದಲಿ ಇದ್ದು ಇರಳು ಹಗಲು !
ಅನುಚಿತ ಕರ್ಮದ ಹೊಳೆತ ಮರೆದು ಪದ !
ಅನುಮಾನ ತೀರ್ಥರ ಮತದವರ !
ಅನುಸರಿಸಿ ಪಂಚ ಭೇದವೆ ತಿಳಿದು ಆವಾಗ !
ಅನುಗುಣ್ಯನಾಗಿ ಸುಮಾರ್ಗವಿಡಿದು !
ಅನುಪತ್ಯ ಇದರೊಳು ಒಂದಕ್ಕಾದರೊ ಎನಗೆ !
ಅನುಮಾನವಾಗದಂತೀಯೊ ಮನಸು !
ಅನುಪಮ ಚರಿತ ಶ್ರೀ ವಿಜಯ ವಿಠ್ಠಲರೇಯ !
ಅನುಜನಾಗಿ ಸುರಪತಿಯ ಕಾಯಿದ ದೇವ ೩

ಅಟ್ಟತಾಳ

ಕರ ನಯನ ಕರ್ನ ಚರಣ ವದನನಾಸ !
ಮರಿಯಾದ ನಾಲಿಗೆ ತರುವಾಯ ನಾನಾ !
ಪರಿ ಪರಿ ಇಂದ್ರಿಯ ಚರಿಸು ವ್ಯಾಪಾರಾ !
ಪರಿ ಶುದ್ಧವಾಗಿ ಅಂತರ ಬಾಹಿರವೆಲ್ಲ !
ಹರಿ ನಿನ್ನ ಪರವಾಗಿ ಇರಲಿ ಕೊಂಕಾಗದೆ !
ದುರುಳ ತರುಳ ನಾನಾದರು ನೋಡಿ ದಯದಿಂದ !
ಕರದು ನಿನ್ನವರೊಳು ಇರತಕ್ಕವನ ಮಾಡು !
ಕರುಣಾಕರ ಮೂರ್ತಿ ವಿಜಯ ವಿಠ್ಠಲರೇಯ !
ಚಿರಕಾಲದಲ್ಲಿ ಇಂಥ ವರವನ್ನ ಪಾಲಿಸು ೪

ಆದಿತಾಳ

ಶಿಷ್ಟರ ಪಾಲಿಪುದು ದುಷ್ಟರ ಬಡಿವದು !
ಕಷ್ಟವಾದರು ಸಂತುಷ್ಟವಾಗಲಿ ಎನಗೆ !
ಎಷ್ಟು ಭಯ ಬಂದರು ನಿಷ್ಠೆ ನಿನ್ನಲ್ಲಿ ಮನ !
ಮುಟ್ಟಿದೊರಕಲಿ ಅರಿಷ್ಟ ದೂರಾಗಲಿ !
ಇಷ್ಟಾದ ತರುವಾಯ ಪಟ್ಟುವದಿದ್ದರೆ !
ಭ್ರಷ್ಟಮಿಥ್ಯ ಮತದವರ !
ಹೊಟ್ಟೆಯೊಳಗಿಡದಿರು !
ಕಷ್ಟದೊಳಗೆ ಎನ್ನ ಇಟ್ಟರೆ ಅದೆ ನಿತ್ಯ !
ಮೃಷ್ಟಾನ್ನ ಉಂಡಂತೆ !
ಹೃಷ್ಟ ತೋರುವುದಯ್ಯ !
ಸೃಷ್ಟಿಯೊಳಗೆ ನಾನು ಎಷ್ಟು ಕಾಲ ಉಳ್ಳರು !
ಮೆಟ್ಟಿಸದಿರು ಪಾಪದ ಬಟ್ಟೆ ಭಂಗವನು !
ಕೃಷ್ಣ ಮೂರುತಿ ವಿಜಯ ವಿಠಲ ವಿಶ್ವರೂಪ !
ಇಷ್ಟಾರ್ಥ ಕೊಡು ಅದೃಷ್ಟ ನಾಮಕ ಹರಿ ೫

ಜತೆ

ಮನೊ ವಾಚಾ ಕಾಯದಲ್ಲಿ ಕೃಷ್ಣನೆಂದೆಂಬೊ !
ನೆನವೆ ಎನಗೆ ಇರಲಿ ವಿಜಯ ವಿಠ್ಠಲರೇಯ ॥೬॥

೪

ಧ್ರುವತಾಳ

ಅಬ್ಜಾಪಾರಿಗ ನಾನು ಜೀವ ಕೋಟಿಗೊಳೊಳು ।
ಒಬ್ಬರಾಧಾರ ಕಾಣೆ ನಿನ್ನ ವಿನಹ ।
ಊರ್ಬಿಯೊಳಗೆ ಎನ್ನ ಪುಟ್ಟಿಸಿ ಬೆಳಿಸಿದ್ದಕ್ಕೆ ।
ತಬ್ಬಿಬ್ಬಿಯಿಲ್ಲವಯ್ಯ ಲೇಸೆನಿತು ।
ಅಬ್ಜುಜನಾಭನೆ ಮುನ್ನೆ ಬಿನ್ನಹ ಕೇಳು ।

ಅಬ್ಬರ ಹತ್ತದೆಂದು ಪೂರ್ವದಲ್ಲಿ ।
ಉಬ್ಬುವ ಮತಿಕೂಡದೆ ದೇಹಧಾರಕನಾಗಿ।
ರಬ್ಬಳಿಗೆ ಸೊಪ್ಪು ಹಾಕಿ ಮನಸು ।
ಹಬ್ಬಿಸಿ ನಿನ್ನ ಪಾದದಲಿ ರತಿಯಿಡಿಸಿ ।
ಅಬ್ಬಿದ ಜ್ಞಾನದಲ್ಲಿ ಪೊರೆ ಯೆಂದೆನೂ।
ನಿಬ್ಬಡಿಯಾದ ಇಹ ಸುಖವೆ ಒಲ್ಲೆನೆಂದು ।
ಅರ್ಭಕನಾಗಿ ಕೇಳಿಕೊಂಡಿರಲು ।
ಹಬ್ಬಾ ಉಣಿಸಿದಂತೆ ದಿನಪ್ರತಿ ದಿನಬಿಡದೆ ।
ಸಭ್ಯಾವಾಗಿ ಮಾಡಿಸುವ ಚರಿತೆ ।
ಒಬ್ಬಗೆ ತೋರುತಿದೆ ಎಲೊ ಸ್ವಾಮಿ ಕುರಿವೆಂದು ।
ಕೊಬ್ಬಲು ಕುರುಬಂಗೆ ಲಾಭವೆಂಬ
ಅಬ್ಬಗೆ ಹ್ಯಾಗೂ ಏನೊ ನಿರ್ಧರ ಮಾಡಲರಿಯೆ
ಉಬ್ಬಿಸಿ ಕೋಳಕ್ಕೆ ಹಾಕದಿರು
ಆರ್ಭಾಟವಾಗಿದ್ದ ಸಂಸಾರವೆಂದೆಂಬೊ
ಉಬ್ಬಲದೊಳುಬಿದ್ದು ಬಳಲಿ ತೊಳಲಿ
ಉಬ್ಬಸವನೆ ಬಿಟ್ಟು ಕಡಿಗೇಳುವನ್ನ ಮೇಲೆ
ಕಬ್ಬಿಣದ ಮೊಟ್ಟೆ ಹೇರಿದಂತೆ
ಆರ್ಭಟಿಸುವೆನಯ್ಯ ಇದರಿಂದ ಕಡೆಗಾಣೆ
ಒಬ್ಬರಾದರು ಧಡಿಗೆ ನಿಲಿಪಾರಿಲ್ಲ
ಹುಬ್ಬುಗಂಟಿಕ್ಕಿ ನೋಡಿ ಪಾಪಾತ್ಮನಿವನೆಂದು
ದಬ್ಬದಿರು ನರಕಕ್ಕೆ ಸರ್ವ ವ್ಯಾಪ್ತ
ಗಬ್ಬಿನವನಾನಲ್ಲ ದೈನ್ಯವೃತ್ತಿ ಉಳ್ಳವನೊ
ಮಬ್ಬು ಕವಿದಂತೆ ಮರೆಸದೀರು
ಅಬ್ಜಾಗರ್ಭನಯ್ಯ ವಿಜಯ ವಿಠ್ಠಲರೇಯ
ಶಬ್ದ ಗೋಚರ ಸರ್ವಸ್ವಾತಂತ್ರ ಸರ್ವೋತ್ತಮ ೧

ಮಟ್ಟತಾಳ

ಮನಸಿಗೆ ಬಂದಂತೆ ಉಣಿಸು ಸುಖವ ಬಡಿಸಿ
ಮನಸಿಜನಯ್ಯನೆ ಮನೆಗೆ ಪೋಗಿ ಪೋಗಿ
ಜನರ ನುತಿಸಿ ಅನುದಿನ ಪೊಟ್ಟೆಯ ಪೊರೆದು
ಘನತನದಲಿಯಿದ್ದನು ಇವನೆಂದು ಸಾ
ಧನ ಕಡಿಮೆಮಾಡಿ ಇನತನಯನ ಕೈಗೆ
ತನುವು ದಂಡಿಪುದಕೆ ಮೊನೆ ಮಾಡಿದರಿದು
ನಿನಗೇನು ಕೀರುತಿ ಏನೇನು ಬಾರದು ಕಾಣೊ
ಜನುಮ ರಹಿತ ನಿನ್ನನು ಮೊದಲಿಗೆ ಇದನುಬೇಡಿದವನಲ್ಲ
ಪ್ರಣತಜನ ಪಾಲ ವಿಜಯ ವಿಠ್ಠಲರೇಯ
ನಿನಗೆ ಕೇಳಿದದೇನು ಎನಗೆ ಕೊಡುವುದಿದೆ ೨

ತ್ರಿವಿಡಿ ತಾಳ

ನಿನ್ನ ಚಿತ್ತವೂ ಸ್ವಾಮಿ ನೆರೆನಂಬಿದ ನರನ
ಅನ್ಯಾಯ ಹೊರಿಸಿ ಅಪರಾಧಿಯೆಂದು
ಚೆನ್ನಲ್ಲಿ ಕಂಡಲ್ಲಿ ಬಾಯಿ ಸವಿಯವುಂಡು
ಟೊಣ್ಯನಾಗಿಪ್ಪೆನು ಠವಳಿ ಪೇಳಿ
ಪುಣ್ಯ ಕಾಲದಲಿ ಪರರ ಮನೆಯ
ಅನ್ನವ ತಿಂದು ಸೊಕ್ಕಿದವನೆಂದು ದೇವ ಕಾ
ರುಣ್ಯವ ತಪ್ಪದಿರು ಸರ್ವಕರ್ತ
ಮುನ್ನೆ ಎನ್ನಿಂದಾಡಿಸಿದ್ದು ಒಂದು ಪರಿ
ಇನ್ನು ಉಣಿಸುವುದು ರಸಭರಿತ
ನಿನ್ನದೆ ಮಹ ಕಪಟವಾಗಿ ತೋರುತಿದೆ
ಅನ್ಯಥಾ ಎನಗಾವ ದೋಷವಿಲ್ಲ
ಬಿನ್ನೈಸಿದಕಿಂತ ಅಧಿಕಾಪೇಕ್ಷಿಸದಿರೆ
ಉಣ್ಣೆಂದು ಕರ್ಮಗಳ ಉಣಿಸಬೇಕು
ಹಣ್ಣಿಗೆ ಅಡಿಗಂಟು ಜೋಳ ಬೇಡಿದರೆ ಬಹು

ಚಿನ್ನ ರಜತರತುನ ಕಟ್ಟಿ ಕೊಟ್ಟು
ಸಣ್ಣವರ ಕಳುಹೆ ಅವರವರ ದಾರಿದ್ರ
ಛಿನ್ನವಾಗಿ ಪೋದ ತೆರದಿ ಇಂದು
ಮನ್ನಿಸಿ ಮೃಷ್ಟಾನ್ನ ಉಣಿಸಿ ಉಭಯ ಕುಲಕೆ
ಸನ್ನುಮಾರ್ಗವ ತೋರುವ ಬಗೆ ಆವುದೊ
ಕಣ್ಣಿಲಿ ಮನಸಿನಲಿ ಇಲ್ಲದ ಉಪಚಾರ
ತನ್ನಿಂದ ತಾನೇವೆ ಪ್ರಾಪ್ತವಾಗೆ
ಎನ್ನಿಂದಾದದು ಅಲ್ಲ ಎಂದಿಗಾದರು ಕೇಳು
ನಿನ್ನ ಕ್ರೀಡಿಗೆ ಮಣಿದು ನಮಿಸುವೆನು
ಹಣ್ಣಾಗಿರಲು ಮನುಜ ಮಾಯಿಸಿಕೊಳದಲೆ
ಖಿನ್ನ ಬಡುವನೇನೊ ಕೆದರಿಕೊಂಡು
ಅನ್ನಿಗರಲಿ ಜ್ಞಾನದಿಂದ ತಿಳಿದು ನೀನೆ
ತನ್ನಲೊಡಿವೆ ಎಂದು ತಿಳಿದರಾಗೆ
ಸನ್ನುತಿಪೆನುಯಿದೆ ಮನನ ಹತ್ತಿತು ಕಾಣೊ
ಬೆನ್ನು ಕಾಣದವನ ವಾದರವೆ
ಅನ್ನೋದಕ ಕೊಟ್ಟು ನಮ್ಮನ್ನು ಸಾಕುವ
ಘನ್ನ ಭಾರಂಗಳು ನಿನ್ನದಾಗೆ
ಅನ್ನಂತ ಕಾಲಕ್ಕೆ ಜೀವ ರಾಶಿಗಳು ಅ
ರಣ್ಯದಲ್ಲಿದ್ದರೂ ತಪ್ಪದಿದಕೊ
ಅನಾಥ ಬಂಧುವೆ ಅವರವರ ಮಗನಾಗಿ
ಉಣ್ಣಿಸದೆ ಬಿಡದು ತುತ್ತು ಮಾಡಿ
ಅನಾದಿಯಿಂದಲಿ ಲೋಕದೊಳಗೆ ಬ್ರ
ಹ್ಮಣ್ಯ ದೇವನೆಂಬೂ ಬಿರಿದುವುಂಟು
ಗಣ್ಯ ವಿಲ್ಲದೆ ವೇದ ಸ್ಮೃತಿ ಶಾಸ್ತ್ರಾದಿಯಲ್ಲಿ
ನಿನ್ನ ಸ್ತುತಿಸುತಿವೆ ನಿತ್ಯದಲ್ಲಿ
ಶ್ರೀನಿಕೇತನ ಕೇಳು ನಮ್ಮ ಹಿರಿಯಾರಂದು
ರನ್ನದ ಬಡಿವಾಣವೈದನೆಂದು

ಇನ್ನಿತು ಆತನ್ನ ಸಮ್ಮಂಧಿಗಳೆಂದು
ನಿನ್ನಿಚ್ಛೆಯಲಿ ನಮಗೆ ಉಣಿಸುತಿಪ್ಪೆ
ಅನ್ನದಾತ ವಿಜಯ ವಿಠ್ಠಲರೇಯ
ಧನ್ಯರಹುದೊ ನಿನ್ನ ಭಜಿಸುವ ಭಕ್ತರು ೩

ಅಟ್ಟ ತಾಳ

ಮಾತಿಲಿ ಗುಕ್ಕಿಸಿ ನರಕದೊಳಗೆ ಹಾಕು
ಯಾತನೆ ಬಡಿಸು ಯಮಪುರದಲ್ಲಿಡು
ಭೂತ ಬೇತಾಳದ ಬಳಗಕ್ಕೆ ಒಪ್ಪಿಸು
ಪಾತಾಳಕ್ಕೆ ಅಟ್ಟು ಪತಿತರ ಕೂಡಿಸು
ಯಾತರ ಯಾತರ ಕಠಿಣಕ್ಕೆ ನೂಕಿಸು
ನಾ ತಳಮಳಗೊಳ್ಳೆ ನರಕಾರಿ ನರಕಾರಿ
ನೀ ತಂದೇ ನೀ ತಾಯಿ ನೀಸ್ವಾಮಿ ನೀ ಪ್ರೀಯ
ಭ್ರಾತನು ಬಾಂಧವ ನೀ ತಮ್ಮ ನೀ ಪುತ್ರ ನೀನೆ ಸರ್ವ ಬಗೆ
ಆತುಮದೊಳಗಿದ್ದು ಆದ್ಯಂತ ಕಾಲದಿ
ಚಾತುರ್ಯದಿಂದಲೆ ನಡಿಸುವ ಮಹಿಮನೆ
ನೀತವಲ್ಲವೊ ತಂದೆ ಧರ್ಮದಪ್ಪುವದು
ಜಾತ ರಹಿತ ನಿನ್ನ ದೊರೆತನವ ಕೇಳಿ
ಭೀತಿಗೊಂಬುವೆನಯ್ಯ ನಾ ತಡಹಲಾರೆ
ಗಾತುರ ನಿಲುವಂತೆ ಗಂಜಿಯ ಕುಡಿಸೆನ್ನ
ನೀ ತಂದು ದಿವ್ಯಾನ್ನ ಉಣಿಸುವೆ ಎನಮೇಲೆ
ಮಾತುಗಳಿಲ್ಲವು ಪದಾರ್ಥ ಮಾತುರ
ಮಾತುರ ಕಾಲವಾದರು ಸಥೆ ಎನಗಿಲ್ಲ
ಪಾತಕದವನೆಂದು ನುಡಿದಾದಲ್ಲದೆ ಕೀ
ರುತಿ ಬಾರದು ಭಕ್ತಜನವೆಲ್ಲ ಮೆಚ್ಚದು
ಖ್ಯಾತಿ ಮೂರುತಿ ನಮ್ಮ ವಿಜಯ ವಿಠ್ಠಲರೇಯ
ಯಾತಕೆ ಮಹಚಿಂತೆ ನಿನ್ನವನಾಗೆ ೪

ಆದಿತಾಳ

ಇಪ್ಪ ಅನುಭವಗಳೆಲ್ಲ ಆವಾವ ಕಾಲಕೆ ಬಿಡದೆ
ತಪ್ಪದೆಂದು ಎಂದು ಅಂದು ಪೇಳಿದ ಮಾತು
ಇಪ್ಪದು ಮನದೊಳಗದಕ್ಕೆ ಸಾಧನ ಮಾಡಿಸು
ತಪ್ಪು ಹೊರಿಸಿ ಪಾಪ ಕಟ್ಟಿ ಉಣಿಸುವ ಲೀಲೆ
ಒಪ್ಪಾರೂ ನಿನ್ನ ಭಕ್ತ ವತ್ಸಲತನಕೆಲ್ಲಿ
ಅಪಾರ ಕರ್ಮಂಗಳು ನಿನ್ನ ಸ್ಮರಣೆಯಿಂದ
ಹೊಪ್ಪಾದು ಎಂದು ಸರ್ವ ಮುನಿಮನುಗಳು ಕುಣಿದು
ಚಪ್ಪಾಳೆಯಿಕ್ಕುತ್ತ ಹಾರ್‍ಯಾಡುವರೈಯ್ಯ
ಕಪ್ಪು ಕಲ್ಮಷ ಉಂಟೆ ಚರಮದೇಹಿಗಳಿಗೆ
ಉಪ್ಪುಮರ್ದನಾಗುವುದು ಪ್ರಾರಬ್ಧವಿದ್ದರು
ಅಪ್ಪ ನಾನೆಷ್ಟು ನನ್ನ ಕರ್ಮವೆಂದರೆ ಎಷ್ಟು
ತಪ್ಪಿಸುವದು ಭವದ ಪಾಶಬದ್ಧವನು
ಸರ್ಪತಲ್ಪ ವಿಜಯ ವಿಠ್ಠಲ ನಿನ್ನ ಮನಕೆ
ಬಪ್ಪದೆ ಮಾಡುವದು ನಿನ್ನ ದಯಕ್ಕೆ ಪಾತ್ರ ೫

ಜತೆ

ಹೃದಯದೊಳಗೆ ನಿಂದು ಇಂತಾಡುವುದೇನು
ವಿಧಿ ನಿಷೇಧ ಉಂಟೆ ವಿಜಯ ವಿಠ್ಠಲ ಎನಗೆ ೬

೫

ಧ್ರುವತಾಳ

ಆಟವಲ್ಲವು ಕಪಟನಾಟಕ ಧಾರಕನೆ
ಕಾಟಿಕಾರು ಕ್ರೂರ ನೋಟದಿಂದ
ಪಾಟುಗೆಡಿಸಿ ಹೀನ ಕೋಟಲೆಯೊಳು ನೂಕಿ
ಬೂಟಕತನ ಮಾಯದಾಟಲೆಯೊಳು ನೂಕಿ
ಸೂಟಿಯಲ್ಲಿದ್ದ ಪುಣ್ಯ ಕೂಟವನಗಲಿಸಿ

ನೀಟಾಗದಂತೆ ಶುದ್ಧ ಮಾಟಕಾಯ
ಧಾಟೆಯ ಕೆಡಿಸಿ ತಮ್ಮಾಟವೆ ತೋರಿ ಪಾಪ
ಊಟವನುಣಿಸಿ ಚೆಲ್ಲಾಟವಾಡುತ್ತ
ಆಟಕವೆಂದರೆ ವಟದಲ್ಲಿ ಪರ ಕವಾಟದಲ್ಲಿ ಪರಕ
ವಾಟವನು ಕಾಯ್ದೆ ಕೋಟೆ ಬಂದಿಸಿ
ಹಾಟಕಾಂಬರಧಾರ ವಿಜಯ ವಿಠ್ಠಲರೇಯ
ನಾಟಿಸೊ ನಿನ್ನ ಪಾದಪೀಠದಲ್ಲೆನ್ನ ಮನಸು ೧

ಮಟ್ಟತಾಳ

ಕಂಗಳಿಂದಲಿ ಪರಾಂಗನೆಯರ ನೋಡಿ
ಅಂಗಸಂಗವ ಬಯಸಿ ಕಂಗಳ ನಾನಾದೆ
ಕಂಗಳಿನಲಿ ಪತಂಗನೊಳಗೆ ಇದ್ದ
ಮಂಗಳ ಮೂರ್ತಿ ಶೃಂಗ ವಿಜಯವಿಠಲ
ಹಿಂಗಿಸುವದೂ ಈ ಭಂಗಗಿಕ್ಕುವ ಪಾಪ
ಶೃಂಗಾರದೇವನಂಘ್ರಿಗಳ ತೋರಿ ೨

ರೂಪಕತಾಳ

ದುರ್ಜನರಾವರ್ತಿ ದೂರಾಗಿ ನಿಲ್ಲದಲೆ
ಅಬ್ಜವಾಗಿ ಕುಳಿತು ತಿಳಿವಿಕೆಯ
ಎಜ್ಜಾದಲ್ಲಿ ಪೊಕ್ಕು ಭೇದಿಸುವ ದುರಾವರ್ತಿ
ವಜ್ಜರ ಲೇಪವಾಗಿ ವ್ಯಾಪಿಸೀಗ
ವಜ್ಜವಾಗಿ ಪಾಪವೆಂಬೊ ಭವಾಬ್ಧಿಯಲ್ಲಿ
ಮಜ್ಜನದಿ ನಾ ಬಲು ಮಂದನಾಗಿ
ಮೂಜ್ಜಗದೊಡಿಯ ಶ್ರೀವಿಜಯ ವಿಜಯವಿಠ್ಠಲ ಎನಗೆ
ಸಜ್ಜನ ಸಂಗಯಿತ್ತು ದುರವಾರ್ತಿ ಬಿಡಿಸೊ ೩

ಝಂಪಿತಾಳ

ನಾಶಿಕದಲ್ಲಿ ದುರ್ವಾಸನೆಯ ಬಿಡದಲೆ
ಹೇಸದೆ ನಾನಾ ಪದಾರ್ಥವ
ಹೇಸಿಕೆಯೆಂದು ಹಿಂದಕ್ಕೆ ಪೋಗದೆ ನಿತ್ಯ
ರೋಸಿಕೆ ಪುಟ್ಟಿಸಿಕೊಳದೆ ನಾನು
ಲೇಸು ಲೇಸೆಂದು ನಿನಗರ್ಪಿಸದ ಪರಿಮಳ
ವಾಸನಾಘ್ರಾಣಿಸುವೆ ವಾಸರದಲ್ಲಿ
ವಾಸುದೇವರಂಗ ವಿಜಯವಿಠ್ಠಲ ನಿನ್ನ
ಲೇಸಾದ ಪಾದಾಬ್ಜ ವಾಸನಿಯನೀಯೊ ೪

ತ್ರಿವಿಡಿತಾಳ

ನಾಲಿಗೆ ರುಚಿ ಇನ್ನು ತಗ್ಗದು ತಗ್ಗದು
ಮೇಲಾದ ಪರಿ ಪಕ್ವ ಬಯಸುತಿಪ್ಪೆ
ಕಾಲವರಿತು ಹೊರೆಯದಿದ್ದರೆ ನಾನಾಕ
ಹಾಳ ಹರಟೆ ಯೋಚನೆ ಮಾಡಿ ಮರುಗುವೆನು
ಲಾಲಿಸು ಮನ ದುಸ್ಸಹ ಪಿಡಿಯಲಾರೆ
ಶ್ರೀಲೋಲ ಶ್ರೀಮದನಂತ ವಿಜಯವಿಠ್ಠಲ
ಪಾಲಿಸು ನಿನ್ನ ಭಕ್ತನ್ನ ಶೇಷವ ಕೊಟ್ಟು ೫

ಅಟ್ಟತಾಳ

ತ್ವಕುವೆಂದೆಂಬ ಕಕುಲಾತಿಯ ತೊರೆಯದೆ
ಸಕಲ ಭೋಗಕೆ ನಾನಕಟ ಕೆಟ್ಟೆನಯ್ಯ
ಸುಖವೆಂಬೋದ ಕಾಣೆ ಭಕುತಿ ಮಾರ್ಗ ಇಲ್ಲ
ದುಃಖವಲ್ಲದೆ ಲೇಸ ಮುಕುತಿಗೆ ಮತಿ ಇಲ್ಲ
ರುಕುಮಿಣಿಪತಿ ಶ್ರೀ ವಿಜಯ ವಿಠ್ಠಲ ಇಂಥ
ಆಕಾರವ ನಿಲ್ಲಸಯ್ಯ ಸಕಲ ಸುರರೊಡೆಯ ೬

ಆದಿತಾಳ

ಮನವೆ ಕಾರಣವಯ್ಯ ಇನಿತು ದುರ್ವ್ಯಸನಕ್ಕೆ
ಅನುಮಾನವಿಲ್ಲವಿದೆ ಎನಗೆ ನಿಶ್ಚಯ ಕಾಣೊ
ಮನತನು ಪಾಲಿಸುವ ಘನವು ನಿನ್ನದು ದೇವ
ಮುನಿವಂದ್ಯ ಮಹಕೃಪಾವನಧಿ ವಿಜಯ ವಿಠ್ಠಲ ೭

ಜತೆ

ಮನಸ ನಿಲಿಸಿ ಸಕಲ ಇಂದ್ರಿಯಗಳ ಕಾಪಾಡು
ಮನಸಿಜನಯ್ಯನೆ ವಿಜಯ ವಿಠ್ಠಲರೇಯ ೮

೬

ಧ್ರುವತಾಳ

ಆ ಮಹಾ ಎರಡು ವರ್ಣಾಸಂಧಿ ಕಾಲಾದನಿತು
ಭೂಮಿಯೊಳಗೆಯಿದ್ದು, ಸಾಧನ ಕೈಕೊಂಡು
ನೇಮ ನಿತ್ಯವೆ ಮಾಡಿ ಪಾರಾಗುವೆನೆಂಬ ನಿ
ಸ್ಸೀಮರ ಕಾಣೆನೊ, ಅರಸಿ ನೋಡೆ
ಸ್ವಾಮಿ ನಿನ್ನ ಕರುಣ ತಡವಾದರೆ, ಪಿ–
ತಾಮಹ ಕಾಮಾರಿ ಇಂದ್ರಾದ್ಯರು
ಆ ಮೃತ್ಯು ಮೊದಲಾದ ಪರಿ ಪರಿ ಮಾರಿಗಳು
ರೋಮ ರೋಮದಲ್ಲಿ ಕಾದಿಪ್ಪರು
ಆ ಮಹಾ ಎರಡು ವರಣಾ
ಆ ಮಾತು ಲೋಕದಲ್ಲಿ ಸಾಧನ ಮಾಳ್ಪೆನೆಂಬ
ಆ ಮನುಜಾಗೇನೆಂಬೆ ಮರುಳಾತನವೊ
ಕಾಮಜನಕ ನಿನ್ನ ಕರುಣವಾಗದೆ ಲೇಶ
ತಾಮಸ ಗುಣವೃತ್ತಿ ಪೋಗದದಕೊ
ನಾ ಮೊರೆ ಇಡುವೆನು ನಾನಾ ಕರ್ಮದಿಂದ
ಪಾಮರ ಬುದ್ಧಿಯ ಬಿಡದೂ ಜೀಯಾ

ನೀ ಮಾಡಿದ ಮಾರ್ಯಾದೆ ಇಂತು ಇಪ್ಪದೊ ಸದ್ವಾ-
ಖ್ಯಾಮನೆ ತಿಳಿಯದು, ಬೇಡಿಕೊಂಬೆ
ಸಮಸ್ತ ಬಗೆಯಿಂದ ಬಿನ್ನಹ ಕೇಳೂ ಪರಿ-
ಣಾಮಕ್ಕೆ ನಿನ್ನ ನಾಲಿಗೆ ತುದಿಯಿಂದಲಿ
ಶ್ರೀ ಮನೋಹರ ಕೃಷ್ಣ ಕಾಲನಿಯಾಮಕ
ಆ ಮಹ ಸರ್ವತಂತ್ರ ಸ್ವಾತಂತ್ರ ಸುಗುಣ
ರಾಮ ಜ್ಞಾನಾನಂದ ಕಾಯಾ ಪ್ರಣತಾರ್ತಿಹರ
ಭೂಮಿರುಹ ಭುಜಗತಲ್ಪ ಸರ್ವದಾ ತ್ರಿ
ಧಾಮ ದಾಮೋದರ ನಾರಾಯಣ
ನಾಮವೆ ಒದಗಲಿ ಮತ್ತೊಂದು ವಿಷಯಕ್ಕೆ
ಈ ಮನಸು ಒಯ್ಯದಿರು ವೈಕುಂಠನೇ
ಕಾಮಿಸುವೆನು ನಾನು ಇದಕೆ ಅನುಗಾಲ
ಭೀಮವಾದ ವಾರಿಧಿ ದಾಟಿಸಯ್ಯ
ಸಾಮಗಾಯನ ಲೋಲ ವಿಜಯ ವಿಠ್ಠಲ ನಿನ್ನ
ನಾಮವೆ ಎನಗೆ ಮಹಜೀವನ ಓದನ ೧

ಮಟ್ಟತಾಳ

ಇದನೆ ಬೇಡುವೆನಯ್ಯಾ ಪದುಮನಾಭನೆ ನಿನ್ನ
ಪದಗಳ ಭಜಿಸುವ ಪದುಮ ಗರ್ಭಾದಿಗಳ
ಅಧಿಕವರ ತಿಳಿದು ಹೃದಯದಲ್ಲಿ ನಿಲಿಸಿ
ವಿಧಿಪೂರ್ವಕದಿಂದ ಮುದದಿ ನಿಮ್ಮ ನಾಮ
ಸುಧೆಯನು ಎನ್ನ ನಾಲಿಗೆ
ತುದಿಯಲಿ ಸವಿಸವಿದು ಸದಮಲನಾಗುವೆನು
ಮದನ ಗಂಗಾಜನಕ ಇದನೆ ಪಾಲಿಸಯ್ಯ
ಇದಕಿಂತಲಿ ಒಂದು ಅಧಿಕ ಸಾಧನ ಕಾಣೆ
ಇದನೆ ಪಾಲಿಸಯ್ಯ ಇದನೆ ಕರುಣಿಸಯ್ಯ
ಮದಮತ್ಸರ ಹಾರಿ ವಿಜಯ ವಿಠ್ಠಲ, ಸಂ-
ಪದವಿಗೆ ಇದೆ ಮೊದಲು, ನಿರ್ಮಳ ಮಾರ್ಗ ೨

ತ್ರಿವಿಡಿತಾಳ

ಆವಾವ ದೇಶದಲಿ ಆವಾವ ಕಾಲದಲಿ
ಆವಾವ ಗುಣದಿಂದ ಆವಾವ ಬಗೆ ಮಾಳ್ಪ
ಆವಾವಲ್ಲಿ ಜನನ ಮತ್ತಾವವಲ್ಲಿ ಮರಣ
ಆವಾವಲ್ಲಿ ನೀನು ನಿರ್ಮಾಣ ಮಾಡಿದರೆ
ಆವಾವ ಪರಿಯಿಂದ ತಪ್ಪಿಸಿಕೊಳಬಹುದೆ
ದೇವ ನೀನೆ ಬಲ್ಲ್ಯೋ ಕಾಲಕರ್ಮ
ಕಾವ ಕೊಲ್ಲುವ, ಅಚಿಂತ್ಯಾದ್ಭುತ ಶಕ್ತ, ಸಂ
ಜೀವ ಜೀವರ ಒಡೆಯ, ಜಾತರಹಿತ
ಗೋವ ಕಾಯಿದ ನಮ್ಮ ವಿಜಯ ವಿಠ್ಠಲ ಎನ್ನ
ಭಾವದಲ್ಲಿ ಇದ್ದು, ಬೇಡಿದರ್ಥವ ಕೊಡೂ

ಅಟ್ಟತಾಳ

ಕೆಲವರಿಗೆ ಮನೆಯಲ್ಲಿ ಕೆಲವರಿಗೆ ಧನದಲ್ಲಿ
ಕೆಲವರಿಗೆ ತುರಗವಾಹನದಲ್ಲಿ ಭೂಮಿಯಲಿ
ಕೆಲವರಿಗೆ ವನತಟಾಕದಲ್ಲಿ ಮನೆಯಲ್ಲಿ
ಕೆಲವರಿಗೆ ವನಿತೆ ನಂದನರಲ್ಲಿ ನಾನಾ ಭೋಜನದಲ್ಲಿ
ನಿಲಿಸಿ ಸಂಚಾರ ಮಾಡಿಸುವೆ, ಪುಣ್ಯ ಶ್ಲೋಕ
ಒಲಿದು ಕೇಳಯ್ಯ ಎನಗೆ ನಿನ್ನ ನಾಮ ವೆ
ಗ್ಗಳವಾಗಿ ಆವಾವ ಕರ್ಮ, ತೋರದ ಹಾಗೆ
ನೆಲೆಯಾಗಿ ಇರಲಿ ನಾಲಿಗೆ ತುದಿಯಿಂದಲಿ
ಘಳಿಗೆಯೊಳಗೆ ಅಪಾರ ನರಕದಲಿ
ಬಳಲುತ ಕರ್ಮ ಮಾಡುವ ಕಾಲಕ್ಕಾದರು
ಒಳಗೆ ನಿನ್ನ ನಾಮ ಮರೆಯದಂತಿರಲಿ
ಬಲವಂತ ವಿಜಯ ವಿಠಲರೇಯ ಮ–
ತ್ಕುಲ ದೈವವೆ, ಎನಗೆಂತು ದೊರಕುವುದೊ ೪

ಆದಿತಾಳ

ನರಕಂಠೀರವ ನಾರೆಯಣ
ನರೋತ್ತುಮ ಪತಿ ನರ ಪರಿಯಂಕ
ನರನ ಕೂಡ ಇಚ್ಛೆಗನೆ ನರನಾಥ ನಾರಾಯಣ
ನರನಟನೆ ತೋರಿದೆ, ನರಕಾರಿ
ನರಪಶುವಂದ್ಯ ನಾ ಪಶುವಯ್ಯ
ನರಸಖ ನರೇಯ ನರೋರುಗ
ಸುರನುತ ವಿಜಯ ವಿಠ್ಠಲ ನಿನ್ನ
ಅರಮನೆ ಸೇರುವ ಮನವೀಯೊ ಒಲಿದು ೫

ಜತೆ

ಮರವೆ ಕೊಡಲಾಗದು, ಮರಣಕಾಲಕ್ಕೆ ನಿನ್ನ
ಸ್ಮರಣೆ ಚಿತ್ತದಲಿರಲಿ, ವಿಜಯ ವಿಠ್ಠಲ ವ್ಯಾಪ್ತ ೬

೭

ಧ್ರುವತಾಳ

ಇತರ ಸ್ತೋತ್ರರ ಮಾಡಿ ಅವರಂಗಣದ ಮುಂದೆ
ಸತತ ಕಾಯಿದು ಒಂದಡಿ ತೊಲಗದೆ
ಪ್ರತಿ ಪ್ರತಿ ಉತ್ತರ ಲಾಲಿಸಿ ಕವಿಯಿಂದ
ರತುನಾದಂತೆ ಮಾತು ಮನದಲಿಟ್ಟು
ಮತಿಹೀನನಾಗಿ ಅನ್ಯರ ಬಳಿಯಲ್ಲಿ ನಿಂದು
ಪ್ರತಿದಿನದಲ್ಲಿ ದ್ರವ್ಯವ ಗಳಿಸಿ
ಅತಿಶಯವಾಗಿ ಕೂಡಲಿಟ್ಟು ಕುಲಸಹಿತ
ಶತಕಲ್ಪ ಬದುಕುವ ಬಾಳಿಕೇನೊ
ಚ್ಯುತಿದೂರ ವಿಜಯ ವಿಠ್ಠಲ ಪರಮ ಪಾವನ್ನ
ನುತಿಸಿ ಬೇಡುವೆ ನಿನ್ನ ಪದಸೇವೆ ಕೆಲಕಾಲ ೧

ಮಟ್ಟತಾಳ

ತನ್ನಿಚ್ಛೆಯಲಿ ತಾನನ್ಯರ ಹಾರೈಸ
ದಿನ್ನಿದ್ದರೆ ಒಂದು ಸುಣ್ಣದೆಲೆ ಪ್ರಾಪ್ತಿ
ಅನ್ನಂತ ಜನುಮಕ್ಕೆ ಎನಗದೆ ಸಾಕು
ಅನ್ಯಥಾ ಸೌಭಾಗ್ಯವನ್ನು ಒಲ್ಲೆನು ಸಂ
ಪನ್ನ ಗುಣಾರ್ಣವ ವಿಜಯ ವಿಠ್ಠಲ ವ್ಯಾಸ
ಮುನ್ನಿಗೊಲಿದ ಪ್ರಸನ್ನ ಪ್ರಣವ ಮೂರ್ತಿ ೨

ತ್ರಿವಿಡಿ ತಾಳ

ಭಕುತರಿಚ್ಛೆಯ ಕಾಮಧೇನು ನಿನ್ನಯ ನೆನವೆ
ಮುಕುತೆ ಪಥಕೆ ದಾರಿಗಿದೆ ಪೈಣ ಗತಿಗೆ ಕಟ್ಟಿದ ಬುತ್ತಿ
ಯುಕುತವಾಗಿರಲಿಕ್ಕೆ ವೇದದಲಿ ನಿತ್ಯ
ಸಕುತನಾಗದೆ ನಾನು ಹಗಲಿರಳು
ಭುಕುತಿಗೋಸುಗ ಪೋಗಿ ನಿಲವಿಲ್ಲದೆ ದು
ರುಕುತಿಯಲಿ ಕಾಲವ ಕಳದೆನಯ್ಯ
ಕಕುಲಾತಿ ಬಿಡದು ಈ ಕಾಯದೊಳುಳ್ಳನಕ
ತ್ವಕುವಾದಿಗಳ ದುರ್ವ್ಯಾಪಾರದಲ್ಲಿ
ಅಕಟ ನೀನೊಬ್ಬ ಬಲ್ಲವನೆಂದು ಪೇಳಿದೆ
ಸಕಲ ಸುರರ ಧೊರಿಯೆ ಲಾಲಿಪುದು
ಸುಖಸಾಂದ್ರ ವಿಜಯ ವಿಠ್ಠಲ ಸುಗುಣಮಲ್ಲ
ರುಕುಮಿಣಿಪತಿ ನಿನ್ನ ನಂಬಿದವನೊ ನಾನು ೩

ಅಟ್ಟತಾಳ

ನಿದ್ರೆಯೊಳಾದರು ಯದೃಚ್ಛಾಲಾಭವ
ಪೊದ್ದಿದ್ದರೆನಗದು ಅದ್ರಿ ಸಮಾನವೊ
ಇದ್ದಲ್ಲಿ ನಭದಿಂದ ಮೂರ್ಧ್ನಿ ಪರಿಯಂತ

ಮುದ್ದಿ ಮುದ್ದಿ ಹೇಮ ಬಿದ್ದರೆ ಅವು ಎಲ್ಲ
ಇದ್ದಲಿಯಾಗಲಿ ಬಿದ್ದ– ಕ್ಷಣದಲ್ಲಿ
ಅದ್ವೈತ ಮಹಿಮನೆ ವಿಜಯ ವಿಠ್ಠಲ ಕರು
ಣಾಬ್ಧಿಯೆ ನಿನ್ನಯ ಹೊದ್ದಿಪ್ಪುದೇ ಸಾಕು ೪

ಆದಿತಾಳ

ಹಂದರಕೆ ಬಳ್ಳಿಕುಡಿ ಛಂದದಿಂದ ಹಬ್ಬಿದರೆ
ಹಿಂದಕ್ಕೆ ಎಳೆದರೆ ತನ್ನಿಂದ ತಾನೆ ಬಪ್ಪದೇನೊ
ಇಂದಿರೆ ರಮಣ ನಿನ್ನ ದ್ವಂದ್ವ ಚರಣಕ್ಕೆ ಮನ
ನಂದವಾಗಿ ಹಬ್ಬಲು ಮತ್ತೊಂದು ಕಡೆಗೆ ಪೋಗಬಲ್ಲುದೆ
ಎಂದೆಂದಿಗೆ ದುರುಳರ ವಂದಿಸಿ ಬೇಡುವ ವಾಕು
ಕುಂದಲಿ ನಿನ್ನಯ ನಾಮ ಪೊಂದಲಿ ಜಿಹ್ವಾಗ್ರದಲಿ
ನಂದ ಮೂರ್ತಿ ವಿಜಯ ವಿಠ್ಠಲ ವಂದಿಸುವೆ ನಿತ್ಯದಯ–
ಸಿಂಧುವೆ ಆಶಾಭವ ಬಂಧನವ ಪರಿಹರಿಸೋ ೫

ಜತೆ

ಪರರ ಸ್ತೋತ್ರವ ಮಾಡಿ ಉದರ ಪೊರೆವುದರಿಂದ
ಪರಗತಿಯಾಗದು ವಿಜಯ ವಿಠ್ಠಲ ಎನಗೆ ೬

೮

ಧ್ರುವತಾಳ

ಇದನೆ ಬೇಡುವೆ ಇಂದು ಕರವ ಮುಗಿದು ನಿಂದು
ಯದುಕುಲೋತ್ತಮ ಪೂರ್ಣ ವಿಧುವದನ ಗುಣ
ಉದಧಿ ಉರಗಶಯ್ಯ ಕಮಲಸಂಭವನಯ್ಯ
ಪದೋಪದಿಗೆ ಇಂಥ ಮನಸೆ ಕೊಡು
ಸದಮಲವಾದ ಮಧ್ವಮತ ಪೊಂದಿದ ದಾಸರ
ಹೃದಯರ ಪಾಲಿಸುವುದು ಬಿಡದೆ
ಬದುಕುವ ಆಯುದೊಳು ಒಂದು ಘಳಿಗೆ ನಿನ್ನ

ಪದವ ನಂಬಿದ ನರನ ಭಾಗ್ಯವೇ ಭಾಗ್ಯ
ತುದಿಮೊದಲು ಎಣಿಸಿದರೆ ನೆಲೆಗಾಣದಲಿಪ್ಪದು
ತ್ರಿದಶರು ಭರತ ವರುಷದಲ್ಲಿ ಬಂದು
ಉದುಭವಿಸಿ ನಿನ್ನ ಪ್ರೀತಿ ಸಂಪಾದಿಸಿ
ಪದವಿಗೈಯ್ದುವೆಂದು ಮನ ಮಾಳ್ಪರು
ಇದೆ ಇದೆ ಮಹಸೌಖ್ಯ ನಿನ್ನ ಭಕುತಿಯೇ ಭಕುತಿ
ಹದುಳವಲ್ಲದೆ ಎಂದಿಗೆ ಕೇಡಿಲ್ಲ
ಅದುಭೂತ ಮಹಿಮನೆ ಈ ಕಲಿಯುಗದಲ್ಲಿ
ಮುದದಿಂದ ಉತ್ತುಮರು ಇಪ್ಪದುಂಟು
ಮೃದುಮತಿ ಪುಟ್ಟಿದು ಕಲಿ ಪ್ರವಿಷ್ಟಾ
ಇದನೇ ನೀ ಪರಿಹರಿಸು, ಎನಗನಂತ ಕಾಲಕ್ಕೆ
ನಿಧಿಯೇ ಸತ್ಯಾ ಮತ್ತೊಂದಾವದೊಲ್ಲೆ
ಸುದರುಶನಪಾಣಿ ವಿಜಯವಿಠ್ಠಲರೇಯ
ವಿಧಿ ಬರೆದಾ ಫಣಿಲಿಪಿಗೆ ನೀನೆ ಕರ್ತ ೧

ಮಟ್ಟತಾಳ

ಉತ್ತಮರಪರಾಧ ಮಾಡಿದ ಕಾಲಕ್ಕು
ಚಿತ್ತದಲಿ ಇಡದೆ, ಛಿದ್ರವ ಎಣಿಸದೆ
ಪೆತ್ತ ಜನಕನಂತೆ ಪರಮ ಸ್ನೇಹದಿಂದ
ಹತ್ತಿದ ಪಾಪಗಳು ಹತಮಾಡು ಬಿಡದೆ
ಹತ್ತರ ವಿಷಯಕ್ಕೆ ಉಣದೆ ತೊಲಗದೆಂಬ
ಉತ್ತರವುಳ್ಳರೆ ಉಚಿತಾರ್ಥವೆ ನಿನ್ನ
ಅತ್ತ ಮನಸು ಇದ್ದ ಭಕ್ತರಿಗೆ ನರಕ
ಹತ್ತದು ಹತ್ತದಯ್ಯ ಸಾವಿರಕಿದೆ ಮಾತು
ಚಿತ್ತಜಪಿತ ನೀನೆ ಸುಮ್ಮನಾಗಿದ್ದರು
ಎತ್ತಲಾದರು ನಿನ್ನ ದಿವ್ಯ ನಾಮವೆ ಒಂದಾ
ವರ್ತಿಲಿ ಸ್ಮರಿಸಿದ್ದ ಸಂಸ್ಕಾರ ಬಲದಿಂದ
ಸುತ್ತಸುಳಿ ನರಕಾಗರ್ತದೊಳಿದ್ದರು

ಎತ್ತಿಕೊಂಡು ಬಂದು ಮ್ಯಾಲೆ ನಿಲ್ಲಿಸುವುದು
ಅತ್ಯಂತ ಬಂಧನವಾದರು ಹೂವಿನ ಸರಿಕವಾಲಿಯಂತೆ
ಅರ್ಥಿಯಾಗಿಪ್ಪದು ನಿನ್ನ ಒಲುಮೆ ಅವಗೆ
ಹತ್ತವತಾರ ಶ್ರೀ ವಿಜಯ ವಿಠ್ಠಲರೇಯ
ಆರ್ತವಾಗದು ಅವಗೆ ಅನಂತ ಜನುಮಕ್ಕೆ ೨

ತ್ರಿವಿಡಿ ತಾಳ

ಕಂದು ಬಲ್ಲೆ, ಜ್ಞಾನ ಕಟದು ಬಲ್ಲೇನಯ್ಯ
ಉಂಡದರ ಬಲ್ಲೆ ಉದಧಿಯೊಳಗೆ
ಹಿಂಡಿನೊಳಗೆ ಇದ್ದು ತುತ್ತು ಬ್ಯಾರೆ ಎಂದು
ಮಂಡಲದೊಳಗೆ ಪೇಳುವುದು ಸಿದ್ಧ
ಪುಂಡರೀಕಾಕ್ಷನೆ ನಿನಗಾಗದವರಿನ್ನು
ಮಂಡೆ ಕೆಳಗೆ ಮಾಡೆ ತಪ ಮಾಡಲು
ಪುಂಡರ ಕರದೊಯ್ದು ನೊಣದೊಡನೆ ಘೃತ
ಮಂಡಿಗೆ ಉಣಿಸಿದಂತೆ ಮಾಡುವಿ
ತಂಡ ತಂಡದ ವರವ ಅಜಭವಾದಿಗಳಿಂದ
ಲೆಂಡರಿಗೆ ಕೊಡಿಸಿ ನೀ ಪರಿಹರಿಸುವೆ
ಅಂಡಜವಾಹನ್ನ ನಿಜ ದೈತ್ಯವಂಶಕ್ಕೆ
ಕೆಂಡವಲ್ಲದೆ ನಿನ್ನ ಲೀಲೆಯೆಲ್ಲ
ಗಂಡುಗಲಿ ರಂಗ ವಿಜಯ ವಿಠ್ಠಲ ನಿನ್ನ
ಕಂಡ ದೈತ್ಯರಿಗೆಲ್ಲ ನಿತ್ಯ ತಮಸು ಕಾಣೊ ೩

ಅಟ್ಟತಾಳ

ಜ್ಞಾನಾವಲಂಬನ ಕರ್ಮಾವಲಂಬನ
ಮಾನವ ನಾನಲ್ಲ ಮಹಿಯೊಳಗೆ ಪುಟ್ಟಿ
ಆನಾವುದು ತಿಳಿಯೆ ಬಲುಮಂದ ಮತಿಯಿಂದ
ಹೀನ ಪ್ರವರ್ತಕ ಚರಿಸುವೆನಯ್ಯ
ಏನಾದರಾಗಲಿ ಸಜ್ಜನರ ವೃದ್ಧಿ
ಹಾನಿಗಳೆಲ್ಲ ನೀನೆ ವಹಿಸಿಕೊಂಡು

ಮಾಣದೆ ಅನುದಿನ ಪಾಲಿಸು ಎಂದು
ನಾನಿದನೆ ಬೇಡುವೆ ಎನಗಿದೆ ಸಾಧನ
ಕಾಣಿಸುತಿದೆ ಮತ್ತೊಂದಾವುದು ಇಲ್ಲ
ದಾನವರಿಗೆ ನಿತ್ಯ ಕಷ್ಟ ತರವೆ ಕೊಡು
ಜ್ಞಾನ ಮೂರುತಿ ದೇವ ವಿಜಯ ವಿಠ್ಠಲರೇಯ
ಅನಂತಕಾಲಕ್ಕೆ ಎನಗೆ ಇದು ಜಪ ೪

ಆದಿತಾಳ

ನೀನೆ ಪರದೈವವೆಂದು ಮಾನವರವಗುಣವ
ಎಣಿಸದಿರು ಅಥವಾ ಎಣಿಸುವದಿದ್ದಡೆ
ನಾನೆ ಪತಿಕರಿಸುವೆ ಹೀನಾಯಂಗಳು ಎಲ್ಲ
ಏನೆಂಬೆ ಇದರಿಂದ ನಾನಾ ಯೋನಿಗಳಲ್ಲಿ
ನಾ ನಿಲಿಸಿದ ಕಾಲಕ್ಕು ತಾನೆ ದೈವವೆಂಬೊ
ಮಾನವರೊಡನೆ ದುಮ್ಮಾನದಲ್ಲಿ ದ್ವೇಷ
ವನು ಮಾಡುವಂತೆ, ಜ್ಞಾನವೆ ಪೊಂದಿರಲಿ
ಗಾನ ಪೇಳುವರಿಗೆ ಪ್ರಾಣ ಪ್ರಕೃತಿರಹಿತ
ನಾನಿದೆ ಬೇಡುವೆ ಜ್ಞಾನವಿದರ ವಿನಹ
ಕಾಣಿಪುದಿಲ್ಲವೆಂದು ಕ್ಷೋಣಿಯೊಳಗೆ ಸಚೇ–
ತನರು ಪೇಳುವರು ನಾನ್ಯಾತರವನಲ್ಲ
ನೀನೇ ಸರ್ವಸ್ವತಂತ್ರ ನಾನು ಮಿಕ್ಕಾದವರು
ಹೀನಾಯವೆಸಗಿದರು ದಾನವರ ಪಾಲಿಗೆ ಧಾನ್ಯದಂತೆ
ನೀನುಣಿಸುವೆ ಬಿಡದೆ ತ್ರಾಣವಂತನೆ ನಿತ್ಯ
ಆನಂದ ನಮಗೆಲ್ಲ ಅನಾಥಬಂಧುವೆ
ಧ್ಯಾನದಲ್ಲಿಗೆ ನಿಲುವ ವಿಜಯ ವಿಠ್ಠಲ ಸುರ–
ಧೇನುವೆ, ನೆನವವರ ಮಾನಸದಲ್ಲಿಗೆ ೫

ಜತೆ

ಸಾಧನ ಎನಗಿದೇ, ಇಂದಿರಾವಲ್ಲಭ
ಸಾಧುಗಳ ಪ್ರೀಯಾ, ವಿಜಯವಿಠಲರೇಯಾ ೬

೯

ಧ್ರುವತಾಳ

ಇಂದು ಎನ್ನ ಮನೆಗೆ ಬಂದ ಕಾರಣವೇನು
ಇಂದಿರಾರಮಣ ಗೋವಿಂದ ಕೃಷ್ಣ
ಸುಂದರ ವಿಗ್ರಹ ಮಂದರಧರ ಸುಖ
ಸಾಂದ್ರ ಗುಣಾರವಿಂದ ಚರಣ ಉ
ಪೇಂದ್ರ ಇಂದ್ರಾನುಜ ಕಂದರ್ಪಪಿತ ದಯ
ದಿಂ ದರುಶನವಿತ್ತ ವೃಂದಾವನ ಪ್ರೀಯ
ಒಂದೆ ದೈವಾವೆ ನಮ್ಮ ವಿಜಯ ವಿಠ್ಠಲರೇಯ ಪು–
ರಂದರ ಗೊಲಿದಂಥ ನಂದ ನಂದನ ರಂಗ ೧

ಮಟ್ಟತಾಳ

ಧ್ಯಾನ ಪೂರ್ವಕದಿಂದ ಜ್ಞಾನವಧಿಕರಾದ
ನೀನೆ ನೀನೆ ಎಂಬ ಶ್ರೀನಿವಾಸಾಚಾರ್ಯರ
ಮಾನಸದಲಿ ಪೊಳೆವ ಮಾನಿಸ ರೂಪನೇ
ಏನೆಂಬೆನೊ ನಿನ್ನ ನಾನಾ ವಿಗಡಕ್ಕೆ
ದಾನವಾಂತಕ ರಂಗ ವಿಜಯ ವಿಠ್ಠಲರೇಯ
ಜ್ಞಾನ ಪುಂಜರದಿಂದ ಹೀನಗೊಲಿದದೇನೊ ೨

ತ್ರಿವಿಡಿ ತಾಳ

ಅಭಿಷೇಕದ ಉತ್ತಮ ಮನ್ನಣೆಯಲ್ಲ
ಆಭರಣ ವಸನ ಗಂಧಾಕ್ಷತೆ ಮೊದಲಿಲ್ಲ
ಶೋಭನವಾದ ಕುಸುಮ ತುಲಸಿಗಳಿಲ್ಲ
ಸೌಭಾಗ್ಯವಾದ ಧೂಪಾದಿ ಓದನವಿಲ್ಲ
ಆಭಕ್ಷ ಪಾಯಸ ಪರಿಪಡಿಗಳಿಲ್ಲ
ಅಭಿವಂದನೆ ಸರ್ವ ಪೂಜಾ ಲಕ್ಷಣವಿಲ್ಲ

ಕುಭವಾದಲ್ಲಿನಾ ಲೋಭಿಯ ಸೇರಲು
ಲಾಭವೇನು ಪೇಳು ಜಯ ಜಯನೇ
ಶ್ರೀ ಭೂರಣ ನಮ್ಮ ವಿಜಯ ವಿಠ್ಠಲ ನಿನ್ನ
ಸ್ವಭಾವ ಈ ಪರಿ ನಿನಗೆ ಪೇಳುವರಾರೊ ೩

ಅಟ್ಟತಾಳ

ಕಾಲ ಕಾಲಕೆ ಸ್ತೋತ್ರ ಕಾಲಕಾಲಕೆ ಧೂಪ
ಕಾಲ ಕಾಲಕೆ ದೀಪ ಕಾಲ ಕಾಲಕೆ ಎಡೆ
ಕಾಲ ಕಾಲಕೆ ಪ್ರೀತಿ ಕಾಲ ಕಾಲಕೆ ಇರಲು
ಹಾಲು ಸಾಗರ ಬಿಟ್ಟು ಆ ಲವಣಾಬ್ಧಿಲಿ
ಆಲಯ ಬಿಗಿದವನೋಲು ಮಾಡಿದೆ ದೇವ
ವ್ಯಾಳಿ ವ್ಯಾಳಿಗೆ ಕೃಪಾಳಿನ ಕೈಯಿಂದ
ವಾಲಗವನು ಬಿಟ್ಟು ಕೀಳು ಮಾನವಗೊಲಿದೆ
ಆಳು ಚನ್ನಾಗಿ ಇನ್ನಾಳು ವಿಜಯ ವಿಠ
ಲಾ ಲೋಕದೊಳಗೆ ನಿನ್ನಾಳಿನಾಳಿನ ತೊತ್ತು ೪

ಆದಿತಾಳ

ಉದ್ಧರಿಸುವುದು ಜೀಯ ಶುದ್ಧ ಮಂದ ಮತಿಯನು
ಪೊದ್ದಿಕೊಂಡು ನಿರುತದಲ್ಲಿ ಒದ್ದು ಸಕಲದುರಿತವನ್ನು
ಇದ್ದು ಇಲ್ಲದಂತೆ ಮಾಡೊ ಸಿದ್ಧಾರ್ಥವ ಈ ಮಾತ
ಮುದ್ದುಲಕುಮಿ ರಮಣಾನೆ ಮಿದ್ದು ಮನವ ಸರಳ ಮಾಡೊ
ಶುದ್ಧಕಾಯ ವಿಜಯ ವಿಠ್ಠಲ
ಬುದ್ಧಿ ಪಲ್ಲಟವಾಗದಂತೆ ತಿದ್ದಿ ಅಂತರಂಗದಲ್ಲಿ
ಇದ್ದು ಸಂತೋಷವನೆ ಪಡಿಸೊ ೫

ಜತೆ

ಮೆಚ್ಚಿ ನೆಚ್ಚಿಸಲಾರೆ ಅರ್ಚಿಸಿ ಒಲಿಸಲಾರೆ
ನಿಚ್ಚ ನೀನೆ ಪೊರಿಯೊ ವಿಜಯ ವಿಠ್ಠಲ ಹರಿಯೆ ೬

೧೦

ಧ್ರುವತಾಳ

ಇದು ನಿನಗೆ ಆರಾಧನೆ ಇದು ನಿನಗೆ ಪೂಜೆಯೆ
ಇದು ನಿನಗೆ ಭಜನಿಯೆ ಇದು ನಿನಗೆ ಅರ್ಚನೆ
ಇದು ನಿನಗೆ ವಂದನೆ ಇದು ನಿನಗುಪಚಾರ
ಇದರಿಂದ ನಿನಗಿಂದು ಅಧಿಕ ಮನ್ನಣೆ ಬಂದು
ಇದು ಏನು ಆದಾನಾದಿ ಕರ್ತ ಕಾರ್ಯ
ಮುದದಿಂದ ವಿದುರನ್ನ ಸದನದಲಿ ಬಂದು ಕಂಡತಿ
ಮೆದಿಯೆ ಪಾಲಿಗೆ ಕ್ಷುಧಿಯ ಕಳದು ಮಹ
ಉದಧಿಯ ಮಾಡಿ ತೋರಿದ ಭಕ್ತರ ಪ್ರೀಯ
ಮೊದಲಿಗೆ ಪದುಮಸದ ವಿಧಿ ಶಿವ ಉಳಿದವರು
ಸದಮಲತೃಪ್ತನೆಂದು ಪದೋಪದಿಗೆ ಪೊಗಳೆ
ಹೃದಯದೊಳಗಾನಂದ ಉದಧಿ ತರಂಗದಲ್ಲಿ
ಕದಲಲಾರದೆ ಮೋದದಲಿ ಈಸುತಿಪ್ಪದು
ಉದರಗೋಸುಗ ಎರಡು ಪದಗಳ ಪೇಳಿಕೊಂಡು
ಬದುಕುವ ಮನುಜ ಇತ್ತಲದರಿಂದಲೇನಾಹುದೊ
ಪದುಮಗರ್ಭನ ಪೆತ್ತ ವಿಜಯ ವಿಠ್ಠಲರೇಯ
ಉದಧಿಯನು ಮಥಿಸಿ ಸುಧೆಯ ನೆರದ ದೇವ ೧

ಮಟ್ಟತಾಳ

ಜಲಜನಾಭನ ಸೇವೆ ಬಲು ಸುಲಭಾ ಬಲು ಸುಲಭ
ಕಲಿಯುಗದೊಳಗೆಂದು ತಿಳಿದು ಸಜ್ಜನರು
ತಿಳಿದು ಪೇಳಲು ಅದೆ ನಿಜವೆಂದು
ಸಲೆ ನಂಬಿದೆನಯ್ಯ ಸಲೆ ನಂಬಿದೆನಯ್ಯ
ಜಲ ತುಲಸಿ ನಾಮಾವಳಿ ಹರಿವಾಸರ

ಹಲವು ಬಗೆಯಿಂದ ತಿಳಿದು ಮಾಡಲು ಮಹ
ಫಲವಾಹುದು ಗತಿಗೆ ಅಳಿಯದು ಸತ್ಪುಣ್ಯ
ನಿಲವರವಕ್ಕುವದು ಒಲಿಸಿದವರ ಮುಂದೆ
ಸುಳಿವ ವಿಜಯವಿಠ್ಠಲ ಬಳಲಿಸುವ ಭವದ
ಸುಳಿಯಿಂದಲಿ ತೆಗಿಯೊ ೨

ತ್ರಿವಿಡಿ ತಾಳ

ಜಲದೊಳಗೆ ಭಾಂಡವ ಮುಳುಗಿಸಿ ಬರಿ ಕೈಯ್ಯಾ
ಜಲ ಪೋಗಿ ಬರಿದೆನಿಸೇವುದೇನೊ ಎಂದಿಗೂ
ಜಲಜನಾಭನೆ ನಿನ್ನ ಚೆಲುವ ಚರಣವ ಹಂ
ಬಲಮಾಡಿ ಕೆಲಕಾಲ ನಂಬೀದ ಮನುಜಂಗೆ
ಅಳಿಯಬಲ್ಲದೆ ಜ್ಞಾನ ದಿನ ಪ್ರತಿ ದಿನದಲ್ಲಿ
ಬೆಳೆವುದು ಒಂದಕ್ಕೊನಂತ ವೆಗ್ಗಳವಾಗಿ
ತೊಲಗದೆ ಇಹುದೊ ಪೊಂದಿ ಪ್ರಕಾಶಿಸುತ
ಬೆಳಗುವಂದರೆ ತರಲು ಹಲವು ದ್ರವ್ಯಗಳು ಕಂ
ಗಳಿಗೆ ತೋರಿದಂತೆ ನಿನ್ನ ಕರುಣರಸ
ಪ್ರಳಯರಹಿತ ನಮ್ಮ ವಿಜಯ ವಿಠ್ಠಲ ಎನಗೇ
ಸುಲಭ ಸೇವೆಯಿದು ಇದನೊಂದು ಪಾಲಿಸೂ ೩

ಅಟ್ಟತಾಳ

ನಿನ್ನವನೆನಿಪರು ಎರೆದು ನಿರ್ಮಳ ತೀರ್ಥ
ನಿನ್ನವರು ನಿನಗಿತ್ತ ಕುಸುಮ ತುಲಸಿ
ನಿನ್ನವರೆನಿಪರು ಎತ್ತಿದ ಧೂಪವು
ನಿನ್ನವರು ನಿನಗಿತ್ತ ಸರುವನ್ನ
ನಿನ್ನವರು ನಿನಗೆತ್ತಿದ ಆರತಿ
ನಿನ್ನವರು ನಿನಗೆ ಮಾಡಿದ ಪೂಜೆ

ಕಣ್ಣಿನಿಂದಲಿ ನೋಡಿ ಸಂತೋಷಬಟ್ಟು ಪಾ
ವನ್ನನಾಗುವಂತೆ ಕರುಣಿಸು ದೇವೇಶ
ಪನ್ನಗ ಶಯನ ಶ್ರೀ ವಿಜಯ ವಿಠ್ಠಲರೇಯ
ಎನ್ನ ಸಾಧನ ಇನಿತಲ್ಲದೆ ಮಿಗಿಲಿಲ್ಲ ೪

ಆದಿತಾಳ

ಒಂದು ದಿವಸದೊಳಗೆ ಮಂದಮತಿ ನಾನು
ಬಂದು ಜಲ ತುಲಸಿ ತಂದು ಏರಿಸಿ ಗೋ
ವಿಂದ ನಿನ್ನ ದಿವಸಾನಂದವಾಗಿ ಚರಿಸಾ
ಲಿಂದವಾಗಿದನೆ ಬೇಕೆಂದು ಕೈ ಕೊಳುತ ಭವ
ಬಂಧನ ಪರಿಹರಿಸಿ
ಒಂದಕ್ಕೊಂದು ಅಧಿಕವೆನಿಸಲಿಬೇಕು
ತಂದೆ ನಿನ್ನಯ ಪಾದ ದ್ವಂದ್ವ ಸ್ಮರಣೆಯಿತ್ತು
ಮಂದರಧರದೇವ ವಿಜಯ ವಿಠ್ಠಲ ನೀನೆ
ಬಂದು ಬಾಂಧವನಾಗೆ ಸಂದೇಹ ಪರಿಹಾರ ೫

ಜತೆ

ಉತ್ತಮರ ಕೂಡಾಡುವ ಮತಿಯಿತ್ತು
ಉತ್ತಮಗತಿ ಈಯೊ ವಿಜಯ ವಿಠ್ಠಲರೇಯ ೬

೧೧

ಝಂಪಿತಾಳ

ಈ ಭಾಗ್ಯವೇ ಸಾಕು ಇಹದಲ್ಲಿ ಇದ್ದನಿತು
ಸೌಭಾಗ್ಯವಲ್ಲವೆ ಸರಸಿಜಾಕ್ಷ
ಕುಭಾವ ಬಿಟ್ಟು ನಿನ್ನ ಚರಣ ಕಮಲವನ್ನು

ಲೋಭವಾಗದಂತೆ ಎನ್ನ ಮನಸು
ನಾಭಿಯಿಂದಲಿ ಏಕಭಕುತಿ ಮಾರ್ಗವ ಪಿಡಿದು
ಲಾಭವಾಗಲಿ ಬಿಡದೆ ನಿರುತಾರ್ಚನೆ
ಶ್ರೀ ಭಾಗೀರಥಿ ಜನಕ ವಿಜಯ ವಿಠ್ಠಲ ಪರ–
ಮ ಭಾಗವತರೊಡನೆ, ಕೂಡಿಸೆನ್ನಾಡಿಸೂ ೧

ಮಟ್ಟತಾಳ

ಇಡುವುದು ತೊಡುವುದು ನಡಿನುಡಿಗೆ ಹಿಗ್ಗಿ
ಒಡನೆ ಒಡನೆ ಸುಖ ಬಡುವುದು ವಿಷಯಂಗ
ಳಡಿಗಡಿಗೆ ನೋಡಿ, ಒಡವೆ ಸಕಲ ವಸ್ತ
ಕೊಡುವ ತೊಡೆವ ಸೊಬಗು, ಸದಾ ಎನಗಿವು, ಒಂ–
ದಡಿಯೊಳಗಿದ್ದರು, ನಡೆಯದು ಎನ್ನೊಡೆಯ
ಪಡೆದೆ ಮಾದಲಾದವರು ಕಡೆಗಾಣಲಿಲ್ಲ
ಪೊಡವಿಗೆ ನಾನಾ ಗಿಡದ ತೊಪ್ಪಲು, ಫಣಿಯ
ಪೆಡೆಯ ತುಳಿದ ದೇವ ವಿಜಯ ವಿಠ್ಠಲ ಜೀವ
ದೊಡೆಯನೆ ಕೊಡದಿರು ಗಡ ಅಹಂಕಾರವನು ೨

ತ್ರಿವಿಡಿ ತಾಳ

ಉತ್ತಮ ತೀರಥ ಯಾತ್ರೆ ಮಾಡುವುದೆ ಭಾಗ್ಯ
ಉತ್ತಮ ಶ್ರವಣ ಜನ್ಯವಾಗುವದೇ ಭಾಗ್ಯ
ಉತ್ತಮ ವಿಧಿಯಲ್ಲಿ ವಾಸವಾಗೋದೆ ಭಾಗ್ಯ
ಉತ್ತಮ ಸಂಗತಿಯಲಿಪ್ಪದೆ ಬಲು ಭಾಗ್ಯ
ಉತ್ತಮ ದಿನಗಳಲಿ ದಾನಧರ್ಮವೆ ಭಾಗ್ಯ
ಉತ್ತಮ ತಾನಾಗಿ ಸಂಚರಿಸುವುದೆ ಭಾಗ್ಯ
ಉತ್ತಮ ಸ್ಥಳಂಗಳಲಿ ಕಾಯ ಬಿಡುವುದೆ ಭಾಗ್ಯ
ಉತ್ತಮ ಶ್ಲೋಕ ನಮ್ಮ ವಿಜಯ ವಿಠ್ಠಲರೇಯ
ಉತ್ತಮನು ಮಾಳ್ಪದೋ ಎನಗೆ ಮಹ ಭಾಗ್ಯ ೩

ಅಟ್ಟತಾಳ

ಪರರ ಬಾಗಿಲೊಳು ಪರಿಚಾರಕನಾಗಿ ಸಾ
ಸಿರ ಬಾರಿ ಒರಲಿ ಕಂಡವರಿಗೆ
ಶಿರಬಾಗಿ ಮರಿಯಾದೆ ಇಲ್ಲದೆ ತಿರುಗಿ
ತಿರಿದು ಹಗಲಿರುಳು ಬಿಡದೆ, ಅವ–
ರರಿದಂತೆ ಅವಸರ ಪರಿ–
ಪರಿಯಿಂದಲಿ ಮಾಡಿ ಈ ಪೊಟ್ಟೆಯ
ಪೊರೆವ ಕಾರಣವಿತ್ತವ ತಂದು ಬದುಕುವು
ದಕಿಂತ, ಸುಮ್ಮನೆ ಮರಣವೆ ಲೇಸಯ್ಯ
ಪರಮಾತ್ಮ ವಿಜಯ ವಿಠ್ಠಲರೇಯ ನಿನ್ನ ಪೆ
ಸರ, ಪೊಗಳುವ ದಾಸರ ಮನೆ ಮುಂದೀಗ
ಬರಿದೆ ಇಪ್ಪದು ಭಾಗ್ಯ ಬರಿದೆ ಇಪ್ಪದು ಭಾಗ್ಯ ೪

ಆದಿತಾಳ

ಅನಂತ ಜನುಮದೊಳೊಂದೆ ಜನುಮದಲ್ಲಿ
ಅನಂತ ಯುಗದೊಳೊಂದೆ ಯುಗದಲ್ಲಿ
ಅನಂತ ದಿನದೊಳಗೊಂದೆ ದಿನದಲ್ಲಿ
ಅನಂತ ಘಳಿಗೆಯೊಳೊಂದೆ ಘಳಿಗೆಯಲ್ಲಿ
ಅನಂತ ಕಾಲದೊಳೊಂದೆ ಕಾಲದಲ್ಲಿ
ಘನ್ನಭಾಗ್ಯನಾಗಿ ಒಂದಡಿ ಸುಖ ಬಡುವ
ಬಿನ್ನಣವನು ನಾನಿನ್ನು ಬಲ್ಲೆನೂ ರಂಗ
ನಿನ್ನ ಸ್ಮರಣೆಯಲ್ಲಿ ಚನ್ನಾಗಿ ರತಿ ಇಡಿಸೊ
ಪನ್ನಗಶಯನ ಶ್ರೀ ವಿಜಯ ವಿಠ್ಠಲರೇಯ
ಎನ್ನ ಸಾಕುವ ಪ್ರಸನ್ನ ಮೂರುತಿ ಕೇಳೊ ೫

ಜತೆ

ದಯ ಮಾಡೋ ಎನ್ನೊಡೆಯಾ, ದಾಸನೆಂಬುವುದು ನಿ–
ಶ್ಚಯವಾಗಿ ನಿರುತಾ, ವಿಜಯ ವಿಠ್ಠಲ ಎನಗೆ ೬

೧೨

ಧ್ರುವತಾಳ

ಈ ಮಾಯಾ ಸಂಸಾರ, ಆರಾಮದೊಳಗೆ ಬಂದು
ಕಾಮವೆಂಬೊ ಪೆಬ್ಬುಲಿ ಗಂಟಲ ಪಿಡೆದೆದೆ
ತಾಮಸವೆಂಬೊ ಕಾವಳ ಸುತ್ತಿ ದಶದಿಕ್ಕು
ಭೂಮಿಯೋಮಾದಲ್ಲಿ ಎತ್ತ ತಿನಿಸುತಿದೆ
ಈ ಮನವೆಂಬೊದು ಅತಿ ಚೋರನು ತನ್ನ
ಸೀಮೆಯೊಳಗೆ ಬಂದನೆಂದು ನಲಿಯುತಿದೆ
ಭೀಮ ಕರ್ಮದ ಗಣ ಸುತ್ತುಮುತ್ತಲು ಕವಿದು
ವಾಮ ದಿಕ್ಕಿಲಿ ಕ್ರೂರ ಶಬ್ಧ ಪೆಚ್ಚುತಲಿದೆ
ಸ್ವಾಮಿ ಎನಗೀ ಪರಿ ಸಂಕಟ ಹೆಚ್ಚಿತು
ವೈಮನನಾದೆ, ವೈಕುಂಠ ರಮಣನೆ
ಕಾಮಿತಪ್ರದ ನಮ್ಮ ವಿಜಯ ವಿಠ್ಠಲ ನಿನ್ನ
ನಾಮಧಾರಿಗೆ ಇಂದು ವಿರೋಧವಾಗಬಹುದೆ ೧

ಮಟ್ಟತಾಳ

ಅಂಜದಿರಿಂದೆನ್ನ ಮುಂಜೆರಗನು ಪಿಡಿದು
ಅಂಜಿಸುವ ಖಳಗಂಜಿ ಕಡೆಗೆ ಹಾಕೊ
ಪಂಜರದರಗಿಳಿಯಾ, ಮಂಜೀರನಾ ಕಯ್ಯ
ಭಂಜನಿಗಾದಂತೆ, ಜಂಝುರ ನಾನಾದೆ
ಆಂಜನೇಯನ ಗುರುವೆ ವಿಜಯ ವಿಠ್ಠಲ ಧ-
ನಂಜಯನ ಪ್ರೀಯ ಮಂಜರ ಪ್ರಕಾಶ ೨

ತ್ರಿವಿಡಿ ತಾಳ

ಸುತ್ತ ಬಲಿಯ ಬಿದ್ದು ಸುಡುತ ಬರುವ ದಾವಾ
ಎತ್ತ ಓಡಿದರು ದುರ್ಭಯವೊ ಬೆನ್ನ
ಹತ್ತಿ ಬರುವ ಶ್ವಾನ ನಿಲವಿಲ್ಲದಲೆ ಬಾ

ಗುಣದಿಂದಲಿ ವಿಷ್ಣುವಿನ ಚರಣದಲಿ ಪಿಂಡವನಿಡಲವರ
ಋಣ ಮೋಚನವು, ಮನೋಭೀಷ್ಟ ಸಲ್ಲುವುದು
ಕನಕಾಂಗದ ನಾಮ ವಿಜಯ ವಿಠ್ಠಲ ಸ್ವಾಮಿ
ಪುನೀತನ ಮಾಡುವುದೀ ಋಣದಿಂದಲಿ ಎನ್ನ ೨

ತ್ರಿವಿಡಿ ತಾಳ

ಋಷಿಗಳ ಋಣ ಪೂರ್ವಾಶ್ರಮದಲ್ಲಿ ಪರಿಹಾರ ತ್ರಿ
ದಶಾಗಳ ಋಣ ಮೇಧಾದಿಗಳ ಮಾಡಿ
ಅಸು ಸಂಬಂಧಿಗಳ ಋಣ ಗೃಹಸ್ಥಾಶ್ರಮದಲ್ಲಿ
ಪುಶಿಯಲ್ಲ ತಿದ್ದಿ ಪೋಗುವುದೆ ಸಿದ್ಧ
ವಸುಧಿಯೆಲ್ಲ ತಿರುಗಿದರೆ ಪೋಗದಯ್ಯ
ಪಸುಪಾಲಾ ವಿಧೇಯಾತ್ಮ ವಿಜಯ ವಿಠ್ಠಲ ರಂಗ
ಬಸುರೊಳು ಪೋಗಲಿದು, ಬೆರಸದೆ ಬಿಡದಯ್ಯ ೩

ಅಟ್ಟತಾಳ

ಕೊಂಡ ಋಣವನ್ನು ಕೊಡದಿದ್ದವಗಿನ್ನು
ಮಂಡಲದೊಳಗೆ ಶುಚಿಯಿಲ್ಲವೆಂಬೋರು
ಮಂಡೆ ಬೋಳಾಗಿ ಕಮಂಡಲವನ್ನೆ ಪಿಡಿದು
ಥಂಡ ಥಂಡದ ತಪ ಮಾಡಲೇನು
ಕಂಡ ಕಂಡಲ್ಲಿ ತಿರುಗಿ ಋಣಸ್ಥನ
ತೊಂಡನಾಗಿದ್ದು ದುಡಿಯಲಿಬೇಕು
ಕುಂಡಲಿಶಯನ ಶ್ರೀ ವಿಜಯ ವಿಠ್ಠಲರೇಯ
ದಂಡವಾಯಿತು ನಿನ್ನ ಕೊಂಡಾಡಿದ ಕೀರ್ತಿ ೪

ಆದಿತಾಳ

ಋಣ ಶುದ್ಧನ ಮಾಡಿದರೆ ನಿನಗೆ ಎನಗೆ, ಮಾ–
ತಿನ ತೊಡರುಗಳುಂಟು ಮನಸಿಜನಯ್ಯ ಕೇಳು
ತನು ಶುಚಿಯಿಲ್ಲ ಸಾಧನಕೆ ಮೊದಲೆ ಸಲ್ಲಾ–

ರ್ಚನೆ ಮಾಡುವುದೆಂತೊ, ಋಣ ಪುತ್ರಗೆ
ನೆನೆದವರ ಭವ ಋಣ ಕಳೆವದರಿದಲ್ಲ
ಗುಣ ಪೂರ್ಣ ಸುವರ್ಣ ವಿಜಯ ವಿಠ್ಠಲ ನಿನಗೆ
ಮಣಿದು ದೈನ್ಯವ ಬಡುವೆ ಋಣ ಮುಕ್ತನ ಮಾಡುವುದು ೫

ಜತೆ

ಋಣ ಪೋಗದಿರೆ ನಿನ್ನರ್ಚನೆಗೆ, ಧ್ಯಾನಕೆ ಸಲ್ಲೆ
ಅನಿರ್ದೆಶಾ ವಪುಷ ಶ್ರೀ ವಿಜಯ ವಿಠ್ಠಲರೇಯ ೬

೧೫

ಧ್ರುವ ತಾಳ

ಎಂತು ಪೇಳಲಿ ನೀನು ಅಂತರಂಗದೊಳಗೆ
ನಿಂತು ನಿರುತದಲ್ಲಿ ಚಿಂತಿಸುವ ಭಕ್ತರ
ಸಂತಾಪಗಳೋಡಿಸಿ ಸಂತರಿಸುವ ಮಹಿಮೆ
ಅಂತು ಕಂಡವರಾರು ಕಂತುವಿನ ಜನಕಾ
ನಂತ ಕಾಲದಲ್ಲಿ ಕಾಣೆ ಅಂತರಾತುಮ ಕೇಳು
ಭ್ರಾಂತ ಜನರು ನಿನ್ನ ಪಂಥ ಹಾರೈಸದಲೆ
ಅಂತಕನಲ್ಲೀಗ ಸಂತಪ್ತ ಬಡುವರು
ಯಂತ್ರ ವಾಹಕ ನಮ್ಮ ವಿಜಯ ವಿಠ್ಠಲ ನಿನಗೆ
ಸಂತರ್ಪಣೆಯಿಂದ ಫಲಾನಂತವಾಗುವುದಯ್ಯ ೧

ಮಟ್ಟ ತಾಳ

ನಿತ್ಯ ಮುಕ್ತಾಶ್ರಯನೇ ನಿತ್ಯತೃಪ್ತನೆ
ನಿತ್ಯಾನಂದನನೆ ನಿತ್ಯ ನಿರ್ಮಲನೆ
ನಿತ್ಯ ಪ್ರಕಾಶನನೆ ನಿತ್ಯ ವ್ಯಾಪಾರಕನೆ
ನಿತ್ಯ ವ್ಯಾಪಕ ದೇವನೆ ನಿತ್ಯ ಪ್ರೇರಕನೆ

ನಿತ್ಯ ಸ್ವರೂಪಕನೆ ನಿತ್ಯ ಉಪಜೀವಿಸುವವರಿಗೆ
ನಿತ್ಯ ಪದವಿನೀವ ನಿತ್ಯ ವಿಜಯ ವಿಠ್ಠಲ
ನಿತ್ಯ ನಿತ್ಯದಲ್ಲಿ ನಿತ್ಯ ನಿತ್ಯನು ನೀನೆ ೨

ತ್ರಿವಿಡಿ ತಾಳ

ಬಲ್ಲವರಾರು ನೀನೊಲಿದು ಬಪ್ಪವಾರ್ತೆ
ಬಲ್ಲಿದ ನಿನ್ನಿಚ್ಛೆಯಲಿ ಬಲವಾದರೆ
ಎಲ್ಲರೊಳೆದುರಿಲ್ಲ ಬಲ್ಲವನ
ಸೊಲ್ಲೆ ಪ್ರುತ್ಯರ್ಥವು ಹೊಲ್ಲಮನಸು ಪೋಗಿ
ಒಳ್ಳಿತಾಗುವದು ನಿಂದಲ್ಲೆ ಶುಭ ತೋರುವುದು
ಕಲ್ಲು ಹೃದಯರು ಮೃದುದಲ್ಲಿ ಮಾತಾಡುವರು
ಅಲ್ಲದವರು ಬಂದು ಬಿಲ್ಲಾಗಿ ಬಾಗುವರು
ಕೊಲ್ಲುವ ಮದಗಳು ನಿಲ್ಲುವದರಿಂದಾಗಿ
ಒಲ್ಲೆನೆಂದವರು ಸುತ್ತಲಿ ಪೋದಿಪ್ಪರು
ವಲ್ಲಭ ವಿಜಯ ವಿಠ್ಠಲ ನಿನ್ನಯ ಪಾದ
ಪಲ್ಲವ ನಂಬಲು ಎಲ್ಲ ಸಂತೋಷ ೩

ಅಟ್ಟತಾಳ

ದಿನಕೊಮ್ಮೆ ನಾಮವ ನೆನೆದವನ ಕುಲಾ
ಜನ ವಿನವಾಗಿ ರಂಗನಪುರ ಅನಂತಾ
ಸನ ಮೊದಲಾದಲ್ಲಿ ಅನುಮಾನವಿಲ್ಲದೆ
ತನುಮನಸಿನಂತೆ ಘನ ಮಹಿಮನ ಚ
ರಣವನ್ನು ಭಜಿಸುತ್ತ ಸನುರುಚಿಯಾಗಿ ಬಂ
ದನು ನ್ಯೂನವಾಗದೆ ಇನಿತಿಪ್ಪರೆಂದು
ಅನಿಮಿಷಗಣವವನಿಯಲ್ಲಿ ಪುಟ್ಟಿ ಸಾ
ಧನ ಮಾಳಿಪೆವೆಂದು ಮನ ಮಾಡುವರಯ್ಯ
ಗುಣನಿಧಿ ನಿನ್ನಯ ಕರುಣಾವಾವುದು ಕಾಣೋ

ಎಣೆಯಿಲ್ಲ ಎಣೆಯಿಲ್ಲ ಎಣಿಸದಿರೆನ್ನುತ
ಕ್ಷಣಕಾನಂತರೂಪ ವಿಜಯ ವಿಠ್ಠಲ ನಿ
ನ್ನನು ಪಾಡಿದವನು ಭಾಗ್ಯನು ಸೌಭಾಗ್ಯನೊ ೪

ಆದಿತಾಳ

ಒಡೆಯ ಎನ್ನ ಕಡಿಗೆ ಅಮೃತದೆಡೆಯ ನೀಡು
ತಡ ಮಾಡದೆ ಕಡೆಯವನೆಂದಿಡದೆ
ಕಡೆಗೆ ಒಡನೊಡನೆ ನುಡಿಯಂ ಪಾಲಿಸಿ
ಬಡುವ ದುಶ್ಚಿತ್ತ ಬಡದ ಹಾಗೆ ನಡಿಸಿಕೊಂಡು
ಅಡಿಗಡಿಗೆ ಪಡೆದ ಭಕ್ತಿ ಧೃಡವಾದ
ಎಡೆಗೆಡಿಗೆ ನಾಮ ರಸ ಕುಡಿದು ಭವದ
ಗಡಲಿಂದ ಒಡನೆ ಒಡನೆ ಎದ್ದು
ಸಡಗರದಿಂ ನಿನ್ನಡಿಗಳನು
ಪಿಡಿದು ಸುಖ ಬಡುವಂತೆ ನೋಡುವುದು
ಕಡುನೇಹ ಬಿಡದೆ ಮಾಡು ಮೃಡ
ನೊಡಿಯ ವಿಜಯ ವಿಠ್ಠಲ
ಪೊಡ ಮಡುವೆ ಪೊಡವಿ ರಮಣ
ಪೊಡವಿರಮಣ ನೋಡುವುದು ೬

ಜತೆ

ಆವುದು ನಾನೊಲ್ಲೆ ನಿನ್ನಯ ಪ್ರಸಾದವ
ನೀವುದು ವಿಜಯ ವಿಠ್ಠಲ ಲೋಕಪಾಲ ೭

೧೬

ಧ್ರುವತಾಳ

ಎಂದಿಗೆ ಕೋಟಲೆ ತಪ್ಪುವುದೊ ಎನ
ಗೆಂದಿಗೆ ಈ ಭಾರ ತಗ್ಗುವುದೊ
ಎಂದಿಗೀ ಕುಕರ್ಮ ತಗಲಾದೆ ತೊಲಗುವುದೂ
ಎಂದಿಗೀ ಮನಸು ಏಕವಾಗವುದೊ

ಎಂದಿಗೆ ನಿನ್ನವರಲ್ಲಿ ನಿಜ ಭಕುತಿ
ಎಂದಿಗೆ ನಿಲ್ಲವುದೊ ನೆಲೆ ಆಹುದೊ
ಎಂದಿಗೆ ಜ್ಞಾನ ವೈರಾಗ್ಯ ಸಿದ್ಧಿಸುವುದೊ
ಎಂದಿಗೆ ನಿನ್ನ ಕಾಂಬ ಧ್ಯಾನವಹುದೋ
ಎಂದಿಗೆ ಎಂದಿಗೆ ಎಂದಿಗೆ ಸಂಚಿತಾಗಾಮಿ ನಾಶವಾಗುವುದೋ
ಎಂದೆಗೆಂದಿಗೆ ಪ್ರಾರಬ್ಧ ತೀರುವುದೊ
ಎಂದಿಗೆ ದುರುಳರ ಸಂಗ ಹಿಂದಾಗುವುದೊ
ಎಂದಿಗೆ ಈ ಜನುಮ ಹಿಂಗುವುದೊ
ಎಂದಿಗೆ ಮೇಲು ಮೇಲು ಸಾಧನವಾಗುವುದೊ
ಎಂದಿಗೆ ನಿನ್ನ ಕೂಡ ಮಾತಾಹದೊ
ಎಂದಿಗೆ ಲಿಂಗದೇಹ ದಗ್ಧಪಥವಾಗುವುದೊ
ಎಂದಿಗೆ ನಿನ್ನ ನಂದನಾದೊಳಗೆ
ಎಂದಿಗೆ ವಾಸವಾಗಿಯಿದ್ದೆನೊ ಉಪದೇಶ
ಎಂದಿಗೆ ಆಗುವದೊ ತರತಮ್ಯದಲ್ಲಿ
ಎಂದಿಗೆ ವಿರಜೆಯಲ್ಲಿ ಮುಣುಗುವೆನು ಬಂಧ
ಎಂದಿಗೆ ಪರಿಹಾರವಾಗುವುದೊ
ಎಂದಿಗೆ ಶ್ವೇತದ್ವೀಪ ಶಿಂಶುಮಾರನ ನಿಜ
ಎಂದಿಗೆ ಸಂದರುಶನ ಸಿದ್ಧಿಪದೊ
ಎಂದಿಗೆ ನಿನ್ನಯಿಚ್ಛೆ ಆವರ್ಕ ಕಡೆಗಾಗುವುದೊ
ಎಂದಿಗೆ ಆನಂದ ಭಕ್ತಿ ಅಭಿವ್ಯಕ್ತಿಯಾಹುದೊ
ಎಂದಿಗೆ ಮುಕ್ತರೊಡನೆ ಖ್ಯಾಳಮ್ಯಾಳಾಗುವುದೊ
ಎಂದಿಗೆ ಎನ್ನ ಯೋಗ್ಯತೆ ಸ್ಥಾನವೊ
ಎಂದಿಗೆಂದಿಗೆ ಅಯ್ಯ ಎಂದಿಗೆಂದಿಗೆ
ಎಂದಿಗೆಂದಿಗು ಬಲು ಸಾಧನ ಮಾಡಿದರು
ಎಂದಿಗಾದರೆ ನಿನ್ನ ಪೊಂದಲರಿಯೆ
ಅಂದಿಗಂದಿಗೆ ಜನುಮ ಬರುವುದಲ್ಲದೆ ಆ
ನಂದವಾಗುವುದೇನು ಸದ್ಗತಿಗೆ
ಎಂದಿಗಾದರು ಏನು ಸಕಲಕ್ಕು ನಿನ್ನ ಪ್ರಸಾ
ದೊಂದೆಯಲ್ಲದೆ ಮಿಕ್ಕ ಕರ್ಮ ಹೊಣೆಯೆ

ಇಂದೆ ಪ್ರಸಾದವಾದೆಡೆ ಕೇಳು ಪ್ರತಿ
ಬಂಧಕಗಳು ಅನೇಕವಿರಲು
ನಿಂದಿರದೆ ಪೋಪವು ನಿಶ್ಚಿತ ತತ್ವವಿದು
ಇಂದಿರೆ ವಲ್ಲಭ ಈಶನೊಡಿಯ
ಎಂದಿಗೆ ಕೋಟಲೆ ತಪ್ಪುವುದೊ
ವಂದಿಸುವೆ ಸ್ವಾಮಿ ವಿಜಯ ವಿಠ್ಠಲ ಎನಗೆ
ಎಂದಿಗೆ ಎನ್ನ ಮನೋರಥವಾಗುವುದೊ ೧

ಮಟ್ಟತಾಳ

ಬಿಡು ಬಿಡು ಹೃದ್ಗ್ರಂಥಿ ಸುಡುಸುಡು ಅಜ್ಞಾನ
ಹೊಡಿ ಹೊಡಿ ದಾನವರ ಹಿಡಿ ಹಿಡಿ ಹಸ್ತಗಳ
ಕೊಡು ಕೊಡು ಸತ್ಸಂಗ ಕಡಿ ಕಡಿ ಷಡ್ವರ್ಗ
ಇಡು ಇಡು ದೃಷ್ಟಿಯನು ಅಡಿಗಡಿಗೆ ಪೊಳೆದು
ಎಡೆಗೆಡೆಗೆ ಒಲಿದು ಒಡನೊಡನೆಯಿದ್ದು
ತಡೆತಡೆಯಾಗಿದ್ದ ಕಡು ಕಡಲಿಗೆ ಮಿಗಿಲು
ಮುಡಿ ಮುಡಿ ಭವದಿಂದ ಕಡೆ ಕಡೆಗೆ ತೆಗೆಯೊ
ಕಡೆಕಡೆಯುವನೆನೆದೆ ಪಡೆ ಪಡೆ ನಿನಗೆಲ್ಲ
ಪೊಡವಿಗೊಡೆಯ ನೀನೆ ನುಡಿ ನುಡಿಯವುದ್ಯಾಕೊ
ನಡ ನಡತಿ ಮ್ಯಾಲೆ ಧೃಡ ಧೃಡವಾಗಿಪ್ಪುದು
ಅಡಿಗಡಿಗೆ ಇಟ್ಟ ವಿಜಯ ವಿಠ್ಠಲರೇಯ
ತಡ ತಡ ಮಾಡದಲೆ ಬಿಡು ಬಿಡು ಹೃದ್ಗ್ರಂಥಿ ೨

ರೂಪಕತಾಳ

ಕರುವಿಗೋಸುಗ ತುರುಗಳಡಿವಿಯಿಂದ
ಭರದಿಂದಲಿ ಬಂದು ಕೊರಳಿಗೆ ಕಣ್ಣಿಯಾ
ಉರಲು ಬಿಗಿಸಿಕೊಂಡ ತೆರದಂತೆ ನಾನಾ ಆ
ಪರಿಯಾದೆನೊ ದೇವ ಕರುಣಾಸಾಗರನೇ
ಮೊರೆಕೇಳೊ ಮಹಾಮಹಿಮ ಶರಣನ್ನ ಪಾಲಿಸು

ಪರಮ ಸೌಖ್ಯದ ಮಾರ್ಗ ಅರುಹು ಮಾಡಯ್ಯ
ನಿರಯ ವಿದೂರ ನಮ್ಮ ವಿಜಯ ವಿಠ್ಠಲ ನಿನ್ನ
ಸ್ಮರಣೆಯಿತ್ತಲ್ಲದೆ ಮರಹೆ ಪೋಗದು ಕಾಣೊ ೩

ಝಂಪಿ ತಾಳ

ಪ್ರಸಿದ್ಧ ಉರಗ ದಂಷ್ಟ್ರವಾದ ಮಾನವನಿಗೆ
ವಿಷಬೇವು ತಿನಲಾಗಿ ಸೀಯಾಗಿಪ್ಪುದೋ
ಮುಸುಕಿಕ್ಕಿ ಮಲಗಿದರೆ ಪ್ರಾಂತ್ಯ ಭಾಗಕೆ ಅವಗೆ
ಕುಶಲತೆ ತಪ್ಪುವದು ನಂಜು ವ್ಯಾಪಿಸಿ
ವಸುಧಿಮೇಲೆ ಬಂದು ಜನಿಸಿದ ಮಾನವಗೆ
ಅಸಮ ಸಂಸಾರವೆಂಬ ವಲ್ಮೀಕದಿ
ವಸತಿಯಾಗಿದ್ದ ಕಾಲಾಖ್ಯವೆಂಬ ಸರ್ಪ
ಪಸರಿಸಿ ಕಚ್ಚಿರಲು ಇದರ ಒಳಗೆ
ಬೆಸನೆ ಕೇಳಲೊ ಜೀವ ವಿಷ ಪೋಲುವಂಥ
ವಿಷಯಗಳ ಸವಿದು ಸೀಯಾಗಿಪ್ಪವೊ
ನಸುನಗೆ ಈ ಕ್ಷಣಕೆ ದಿವಸ ಪೋದಂತೆ ಸಂ
ತಸ ಪೋಗುವುದು ಕಾಣೊ ಮುಂದೋರದೆ
ಅಸುರ ವೈರಿ ನಮ್ಮ ವಿಜಯ ವಿಠ್ಠಲರೇಯಾ
ವಶವಾಗಿ ನಿಂದೆ ಜಾಗರಮತಿ ತೊರೆದು ೪

ತ್ರಿವಿಡಿ ತಾಳ

ಸೂತ್ರ ಶಕುನಿಯಂತೆ ನಾನಾದೆನೊ ದೇವ
ಗಾತ್ರ ಸಾಕುವದಕ್ಕೆ ಕಂಡಲ್ಲಿ ಸಂಚರಿಸಿ
ಧಾತ್ರಿಯೊಳಗೆ ಬದುಕಿ ಅಲ್ಲಿಂದತ್ತಲೆಯಿದ್ದು
ಶ್ರೋತ್ರಾದಿಂದಲಿ ನಿನ್ನ ಗುಣ ಕಥೆಗಳ ಕೇಳಿ
ಸ್ತೋತ್ರವನ್ನೈದು ಉದ್ಧಾರನಾಗಿ ಸ
ತ್ಪಾತ್ರರ ಕೂಡಾಡಿ ಸುಖಿಸದಲೇ
ಮಿತ್ರರು ಎನಗೆಂದು ಸತಿಸಹೋದರ

ಪಿತೃ ಮಾತೃ ಗೋತ್ರಜರ ಪೊರೆವೆನೆಂಬ
ಮಂತ್ರವನ್ನೆ ತಾಳಿ ಬಂದು ಈ ಪರಿ ಶಿಲುಕಿ
ರಾತ್ರಿ ಹಗಲು ಬಳಲಿ ಬೆಂಡಾಹೆನೊ
ಚಿತ್ರ ವೈಚಿತ್ರಕ ಭವದೊಳಿಪ್ಪುದೆಂದು
ಗಾತ್ರದ ಹಿತವ ಮರೆದೆ ಮರುಳತನದಿ
ಸೂತ್ರಧಾರಿ ನಮ್ಮ ವಿಜಯ ವಿಠ್ಠಲರೇಯ
ಧಾತ್ರಿಯೊಳಗೆ ಬಂದು ಬರಿದೆ ಬಾಳಿದೆ ಬದುಕಿ ೫

ಅಟ್ಟತಾಳ

ಸತಿ ವಸ್ತ್ರ ಒಡವೆ ಬೇಡಿದರೆ ಇಲ್ಲವೆನೆ
ಗತಿ ಗಂಗಮ್ಮನ್ನ ಕೂಡಿತೆ ನಿನಗೆಂದು
ಪ್ರತಿ ಉತ್ತರವನು ಇತ್ತರೆ ಮನಸಿಗೆ
ಅತಿಶಯ ಸಂತೋಷ ಘನವಾಯಿತೆಂದು
ಮತಿಯಿಂದ ಮಾತಾಡಿ ಅನುಕೂಲಕೆ ಶಾ-
ಶ್ವತವಾಗಿಪ್ಪುದೆಂದು ದೈನ್ಯವಂತನಾಗಿ
ಚತುರತೆಯಿಂದಲಿ ಕಾಲವ ಕಳೆವ
ಪತಿತಂಗೆ ಆವ ಶೋಕವಾಗುವುದೊ
ಕ್ಷಿತಿಯೊಳು ನೀನು ಮಾಡಿತ್ತ ಉಪಕಾರಕೆ
ಕೃತಘ್ನನು ನಾನಾದೆ ಸ್ಮರಿಸಿಕೊಳ್ಳದಲೆ
ನತಜನಾಶ್ರಯ ನಮ್ಮ ವಿಜಯ ವಿಠ್ಠಲರೇಯ
ಮಿತಿಯಿಲ್ಲದೆ ಸೃಜಿತನಾದೆ ಭವದಿ ೬

ಆದಿತಾಳ

ಎಚ್ಚರವಾಗದೆ ಭವವೆ ತಾರಕವೆಂದು
ನಿಚ್ಚದಲ್ಲಿ ಮುಳುಗಿ ಮುಂಗಾಣದಿಪ್ಪೆನಯ್ಯಾ
ಚಚ್ಚರದಲಿ ಹಸಿದು ಅರಣ್ಯವನೆ ತಿರುಗಿ
ಕಿಚ್ಚು ನುಂಗಿಕ್ಷುಧೆ ಬಾಧೆ ಕಳೆವೆನೆಂಬ

ಅಚ್ಚ ಮೂರ್ಖನಂತೆ ನಾನಾದೆ ಎಲೊ ದೇವ
ನೆಚ್ಚಿದೆ ಸಂಸಾರ ಗತಿಗೆ ಸಾಧನವೆಂದು
ಅಚ್ಯುತ ಮಹಕರುಣಿ ಇದನೆ ತಪ್ಪಿಸಿ ಎನ್ನ
ನಿಶ್ಚಲ ವೃತ್ತಿಯಲ್ಲಿ ಬಾಳುವಂತೆ ಮಾಡು
ನೆಚ್ಚಿದವರ ಪ್ರಾಣ ವಿಜಯ ವಿಠ್ಠಲ ನಿನ್ನ
ಮೆಚ್ಚುಮಾಡುವುದಕ್ಕೆ ಒಂದು ಕರ್ಮವೆ ಕಾಣೆ ೭

ಜತೆ

ದೇವಾದಿ ದೇವನೆ ದಯ ಮಾಡೋ ದಾಸಗೆ
ನೀ ಒಲಿಯೊ ವೇಗ ವಿಜಯ ವಿಠ್ಠಲ ಸ್ವಾಮಿ ೮

೧೭

ಧ್ರುವತಾಳ

ಎಂದಿಗೆ ನಿನ್ನ ಪಾದ ಎಂದಿಗೆ ಬಂದು ಕಾಂಬೆ
ಎಂದಿಗೆ ಸತುಕರ್ಮ ಎಂದಿಗೆ ನಿನಗೆಂಬೆ
ಎಂದಿಗೆ ಮನ ದೈವ ಎಂದಿಗೆ ನೀನೆ ಎಂಬೆ
ಎಂದಿಗೆ ನಿನ್ನ ನಾಮ ಎಂದಿಗೆ ಸವಿಸವಿದುಂಬೆ
ಎಂದಿಗೆ ನಿನ್ನೋಲಗ ಎಂದಿಗೆ ನೆರೆಗೊಂಬೆ
ಎಂದಿಗೆ ವೈಕುಂಠ ಎಂದಿಗೆ ಸೂರೆಗೊಂಬೆ
ಎಂದಿಗೆ ಎಂದಿಗೆ ಅಂದಿಗೆ ಅಂದಿಗೆ ಅಂದಿಗೆ ನಿನ್ನಯ
ಸುಂದರವಾದ ಮಂದಿರ ಸುತ್ತ ಕಾಲಂದಿಗೆ
ಅಂದಿಗೆ ಅಂದಿ ಅಂದಿಗೆಯಂ ಧರಿಸಿ
ತಂದ ತಂದಾನಂತನೆಂದು ಕುಣಿವೆನೊ
ಅಂದೇ ಇಂದೆ ಮುಂದೇನೆಂದು ತೋರದು
ಅಂದವಾದ ಒಂದು ಸೊಲ್ಲು ಪಾಲಿಸು
ಒಂದೆ ದೈವ ಅಮೋಘ ವಿಜಯವಿಠ್ಠಲ ನೀನೆ
ಎಂದಿಗೆ ಎನ್ನೊಳು ನಿಂದಾಡುವುದ ಕಾಂಬೆ ೧

ಮಟ್ಟತಾಳ

ದಾರಿದ್ರನಿಗೆ ಚಿಂತಾರತುನ ಬಂದು
ಸೇರಿದಂತೆ ಎನಗೆ ಸೇರಿದೆ ವಶವಾಗಿ
ವೈರಾಗ್ಯ ರತುನ ಚಾರುತನದಲ್ಲಿ
ಆರಿಗೆ ನಿಲುಕದ ಮೂರುತಿ ನಿನ್ನಿಂದ
ಕಾರ್ಯ ಕಾರಣ ಗುಹ್ಯ ವಿಜಯವಿಠ್ಠಲ ನಿನ್ನ
ವರಡಿಯಲ್ಲಿ ಎನ್ನ ಸೇರಿಸಿ ಸುಖವೀಯೊ ೨

ತ್ರಿವಿಡಿ ತಾಳ

ರಿಕುತಗೆ ಸುರಮಣಿ ಹಸ್ತ ಪ್ರಾಪುತವಾಗೆ
ದಕುವುದೆಂತೊ ಬಲು ನಿರ್ಭಾಗ್ಯನಿಗೆ
ತ್ವಕುವೇಂದ್ರಿ ಮೊದಲಾದ ಶಕುತಾ ಚೋರರು ಅಂ-
ಬಕ ಚಿತ್ರಾಂಬಕ ಮಾಯಾ ಮರಳೆ ಮಾಡಿ
ಪಿಕನಾಸಿ ಮನಕೆ ಅಧಿಕನೆಂದೆನಿಸಿ ಮುಂ-
ದಕೆ ಬಾರದಂತೆ ಹಿಂದಕೆ ಮಾಳ್ಪರು
ರುಕುಮಿಣಿ ಪತಿ "ತೇಜೋವಶ" ವಿಜಯವಿಠ್ಠಲ
ಸುಖವೇನೊ ಬಂದಕಾಲಕೆ ಫಲಾರ್ಚನೆಗಳು ೩

ಅಟ್ಟತಾಳ

ಪರಿಪರಿ ಬಗೆಯಿಂದ ಹಿರಿದಾಗಿ ಬಲುಕಾಲ
ಗಿರಿ ನಗರಿ ಆಗರವೆಲ್ಲ ಶೋಧಿಸಿ
ಹರಿ ಶಾರ್ದೂಲ ಸೂಕರ ಮೃಗಗಳ ಬಿಟ್ಟು
ಸರಿಕಿನೊಳಗೆ ಇದ್ದ ಕಿರಿ ಮೂಷಕನ ಪಂ-
ಜರದಲ್ಲಿ ಇಟ್ಟು ಉದ್ಧರಿಸಿದಂತೆ ಆ
ದರಿಸಿದ ಸತುಕರ್ಮ ಬರಿದಾಗೋದೆಂದು
ಇರುಳು ಹಗಲು ಚಿಂತಾತುರ ಮಾಯವಾಗಿದೆ
ಸಿರಿಧರ ಆತ್ಮವಿತೆ ವಿಜಯವಿಠ್ಠಲ
ತರಹರಿಸಲಾರೆ ದುರುಳರ ಸಂಗ ೪

ಆದಿತಾಳ

ಮದಮತ್ಸರವಳಿದು ಸಹೃದಯವಾಗಿ ನೀಚಸಂಗ
ಒದೆದು ಸುಕೃತ ವಾಸನೆ ಒದಗಿ ಬಾರದತನಕ
ಯದುಪತಿ ನಿನ್ನ ಪಾದ ಪದುಮವ ನೆರೆನಂಬಿ
ಬದುಕುವ ಮಾರ್ಗವಾವುದು ಕಾಣೆ ವೇದದೊಳು
ಮಧುಸೂದನ ನಾಯಕನೆ ವಿಜಯವಿಠ್ಠಲ ಎನ್ನ
ಎದೆಗುದಿ ಬಿಡಿಸೊ ನೆನಸದೆ ನೆನಪಾದಾಗ ೫

ಜತೆ

ಸ್ವಸ್ಥವಾಗದು ಮನ ನೀನೊಲಿಯದರಿಂದ
'ಶಕ್ತ' ವಿಜಯವಿಠ್ಠಲ ನಿನ್ನಂತರ ತಿಳಿಯದು ೬

೧೮

ಧ್ರುವತಾಳ

ಎಂದಿನಂತಿರದೆನ್ನ ಇರದಂಜಿಸುವುದೇನು
ಹಿಂದೆ ಹಂಗಿಸಿದದು ಅಂದೇ ಮರೆದ್ಯಾ
ಮುಂದೆ ಭಕ್ತರಿಂದ ಒಂದೊಂದು ನಿನ್ನ ಗುಣ
ವೃಂದಗಳೆಲ್ಲ ಬೇಕೆಂದು ಬಿಡದೇ
ನಿಂದಿಸಿಕೊಂಬುದಾನಂದವಾಗಿದೆ ಮು–
ಕುಂದ ನಿನಗಾರು ಎಂದೆಂಬೋದು
ಸಂದೇಹ ತೋರದೆ ಸಂದಿಗೊಂದಿಲಿ ಬೆಣ್ಣೆ
ತಿಂದು ಗೋಪಾಂಗನೆಯರಿಂದ ದೂರಾದುದು
ಅಂದು ಮಧುರಿಯೊಳು ಬಂಧನದಲ್ಲಿ ನಿನ್ನ
ತಂದೆ ತಾಯಿ ಪೆತ್ತುದು ಒಂದರಿಯೊ
ಮಂದಿರದಲ್ಲಿ ಶ್ವಾನ ಒಂದು ಬಿದ್ದಿರಲು ಬೇ–
ಕೆಂದು ಬೊಗಳಾ ಕಲಿಸಿದಂದದಲ್ಲಿ

ಇಂದೆನ್ನಲ್ಲಿ ನೀನು ಪೊಂದಿ ಸುಮ್ಮನಿರದೆ
ಮಂದ ಮತಿಗೆ ಬಲ್ಪಿಂದ ಕೆರಳಿಸದೆ
ತಂದೆ ತತ್ವವಿದೆ ವಿಜಯವಿಠ್ಠಲ ನಿನ
ಗೊಂದಿಸಿ ಸ್ತುತಿಸಲು ಕಣ್ದೆರೆಯದೇನು? ೧

ಮಟ್ಟತಾಳ

ಆರ ಮಗನು ನೀನು ಆರ ಕುಲದವನೊ
ಆರೆಂಜಲನುಂಡು ಆರಲ್ಲಿ ಬೆಳದ್ಯೊ
ಮೀರಿ ನಡೆ ವ ಉರಿ ಆರ ಕೈವಶವೊ
ಆರೊಸ್ತವು ನೀನು ಆರಿಗೆ ದಕ್ಕದ ಆರಾರ ಮೂರುತಿ
ಆರಾದರೆ ನಿನ್ನ ಅರಿಯದವರೆ ಇಲ್ಲ
ಆರೆಂಜಲನುಂಡು ಆರ ಮೈಲಿಗೆ ಪೊದ್ಯೊ
ಉರಿ ಮಾರಿ ದೈವದ ಗಂಡ ಆರಲ್ಲಿ ಬೆಳೆದ್ಯೊ ಮೀರಿ ನಡೆವ
ಧೀರ ಪ್ರಣವ ನಾಮ ವಿಜಯವಿಠ್ಠಲರೇಯ
ಆರನೆ ಸೇವಿಸಿದ್ಯೊ ಆರಿಂದಲಿ ಸುಖವೊ ೨

ತ್ರಿವಿಡಿ ತಾಳ

ತಿದ್ದುವುದೆನ್ನ ಮನದ ಡೊಂಕ ಚೆನ್ನಾಗಿ
ತಿದ್ದದಿದ್ದೆಡೆ ನೋಡು ತಿರುಮಲೇಶ
ಉದ್ದಂಡತನದಲ್ಲಿ ಮನೆ ಮನೆ ನೆಲವಡರಿ
ಕದ್ದು ಕೀರ್ತಿಯ ಮೆರೆದು ಕರಡಿಯ ಸುತೆಗೆ
ಮುದ್ದು ಕೊಟ್ಟದ್ದು ಮ್ಯಾಲೆ ಅತ್ತಿಯ ನೆರೆದದ್ದು
ಅದ್ರಿ ಕೆಳಗೆ ಹೋಗಿ ಅಡ್ಡಾಗಿದ್ದುದು
ಸದ್ದಾಗದಂತೆ ಪಾದರಕೆ ಶೇಖರನಾಗಿ
ಎದ್ದು ಪೋಗಿ ಪರರ ವ್ರತವಳಿದದು
ಸುದ್ದಿ ಎಂತಿರಲಿ ಮೊನ್ನೆ ದಾಸರ ಬಳಿಯ

ತದ್ದಿನಾದನ್ನವ ಉಣಲಿಲ್ಲವೇ
ಅದ್ರೀಶ ನಾಮ ಶ್ರೀ ವಿಜಯವಿಠ್ಠಲ ಎನ್ನ
ತಿದ್ದು ಭವರೋಗಕ್ಕೆ ಮದ್ದು ನಿನ್ನ ನಾಮ ೩

ಅಟ್ಟತಾಳ

ಚಿಂತೆ ನಿನಗೊಂದು ಇಲ್ಲವೆಂದರೆ ಏನು
ಚಿಂತೆ ನಿನಗುಂಟು ಭಕುತ ಜನರೊಮ್ಮೆ
ಚಿಂತಿಸಿದರೆ ಇನ್ನೇನು ಕೊಡಲಿ ಎಂದು
ಮುಂದೆ ನಿನ್ನ ಮಹಿಮೆ ಅರಿದರು ಎಂಬೋದು
ನಿಂತಲ್ಲಿ ನಿಲಗೊಡರೆನ್ನ ಕೂಗುವರೆಂದು
ಸಂತತ ಅವರ ಹಂಗಿಗನಾದೆನೆಂಬೋದು
ಇಂತು ಚಿಂತೆಗಳಿರೆ ನಿನಗೀಗ ಮರೆದು ಆ
ದ್ಯಂತ ಮಧ್ಯರಹಿತೆನ್ನ ಬಿಡುವುದೇನೊ
ಚಿಂತಾಯಕ ಧಾತ್ರ ವಿಜಯವಿಠ್ಠಲ ನಿನ್ನ
ಅಂತು ಬಲ್ಲವರಿಲ್ಲ ಸಂತತ ರಮಣ ೪

ಆದಿತಾಳ

ಆದಿ ದೈವವೆ ಕೇಳು ಪಾಪವ ಹಾದಿ ಮೆಟ್ಟಿದಂತೆ ಎನಗೆ
ಸಾಧು ಮಾರ್ಗ ತೋರಿಪುದು ಆದರದಿಂದಲಿ ಪೊರೆದು
ನೀ ದೂರಾಗದೆ ನಿತ್ಯ ಪಾದವನ್ನು ತೋರು ಸನ
ಕಾದಿಗಳ ವಂದ್ಯ ಜಗದಾದಿ ಕರ್ತ ಪುಣ್ಯತೀರ್ಥ
ಪಾದ ಏಕ ಪಾದ ನಾಮ ವಿಜಯವಿಠ್ಠಲರೇಯ
ಮೇಧಾಧಿ ಕರ್ಮಗಳಿಗೆ ಮೈದೋರದ ಬಲು ಕರುಣಿ ೫

ಜತೆ

ಅಚ್ಯುತ ನಿನ್ನ ಪಾದಕೆ ನಿಚ್ಚ ನಮಿಸುವೆನಯ್ಯ
ಅಚ್ಯುತ ಧ್ಯಾನವನೀಯೊ ಅಚ್ಯುತ ವಿಜಯವಿಠ್ಠಲ ೬

೧೯

ಧ್ರುವತಾಳ

ಎನ್ನ ಮಾತಾಪಿತರು ನಿನ್ನ ಸೇವಕರಯ್ಯ
ಎನ್ನ ಅನುಜಾಗ್ರಜರು ನಿನ್ನ ಸೇವಕರಯ್ಯ
ಎನ್ನ ಸತಿಸುತರು ನಿನ್ನ ಸೇವಕರಯ್ಯ
ಎನ್ನ ಬಾಂಧವರು ನಿನ್ನ ಸೇವಕರಯ್ಯ
ಎನ್ನ ಸುತ್ತಲವರು ನಿನ್ನ ಸೇವಕರಯ್ಯ
ಎನ್ನ ಪೊರೆದವರು ನಿನ್ನ ಸೇವಕರಯ್ಯ
ಎನ್ನ ಬಳಿಯ ಎಲ್ಲಾ ನಿನ್ನ ಅಧೀನವಯ್ಯ
ಯಾವದ್ದೇಹ ಪರಿಯಂತರದಲ್ಲಿ
ಜೀವಂತರಾಗಿರಲಿ ಧರ್ಮಗುಣದಲ್ಲಿ
ಯಾವಜ್ಜೀವರೊಡೆಯಾ ವಿಜಯ ವಿಠ್ಠಲಕ್ಷೋಭ್ಯಾ
ಯಾವತ್ತು ಎನ್ನಯ ಭಾರ ನಿನ್ನದಯ್ಯ ೧

ಮಟ್ಟತಾಳ

ಎನ್ನದು ಎನ್ನದು ಎನ್ನದು ಎಂಬುವುದು
ಇನ್ನು ಸಲಿಗೆ ಮಾತನ್ನಿತ್ತವರವರು
ಮನ್ನಿಸಿ ದಯ ಸಂಪನ್ನ ನೀನಾಗಿ
ಅನ್ನೋದಕವಿತ್ತು ಮನ್ನಿಸಿದಿ ನನ್ನನ್ನು
ಕನ್ಯಾಪತಿ ಪ್ರಸನ್ನ ವಿಜಯ ವಿಠ್ಠಲ
ಅನ್ನಂತ ಮೂರ್ತಿ ಎನ್ನಯ ಪರಣ ೧

ತ್ರಿವಿಡಿ ತಾಳ

ಪಶುಗಳ ಕಾವ ಸಣ್ಣ ಹಸುಮಕ್ಕಳ ನೆರದು
ಬೆಸದಾಡಿ ಪಿಮ್ಮಯ ಎಂದೆಂಬದು ಗಾದೆ
ವಸುಧಿಯೊಳಗೆ ಪುಟ್ಟಿಸಿದ ಕಾರಣ ಈ
ಅಸುಸಂಬಂಧಿಗಳೆಂದು ಉಸಿರಿದೇನೊ
ಬೆಸನ ಲಾಲಿಸು ವಿಚಾರಿಸು ಭಕ್ತಿಯನು ಕರು–

ಣಿಸುವದು ದೀನ ಬಾಂಧವ ಮಾಧವ
ವಸುರೇತಾ ವಿಜಯ ವಿಠ್ಠಲ ಜಗದ್ಧಾತಾ
ಬಸುರೊಳು ಪರೀಕ್ಷಿತನ ಮಸಿಯಾದೆ ಕಾಯ್ದೆ ೨

ಅಟ್ಟತಾಳ

ಗೋತ್ರೇಳು ನೂರೊಂದು ಕುಲದವರು
ಧಾತ್ರಿಯೊಳಗೆ ಗಾತ್ರವುಳ್ಳನಕ
ಪುತ್ರ ಪೌತ್ರ ಪಾರಂಪರ್ಯವಾಗಿ
ಮಿತ್ರ ಭಾವದಲ್ಲಿ ಭವರೋಗಗಳೆದು
ಚಿತ್ರ ವೇಗದಿಂದ ಕಾಯಲಿ ಬೇಕು
ಸ್ತೋತ್ರ ನಾಮಕ ಸಿರಿ ವಿಜಯ ವಿಠ್ಠಲ
ನ್ಯತ್ರದೊಳಿರಿಸದೆ ಕ್ಷೇತ್ರದಂತೆ ಸಾಕು ೩

ಆದಿತಾಳ

ದೇಹ ಗೇಹ ಸಂಬಂಧ ಮೋಹ ಮಮತೆಗಳೆಲ್ಲ
ಇಹಲೋಕದಲ್ಲಿ ಬಂದು ಚರಿಸುವ ಪರಿಯಂತೆ
ಇಹುದಯ್ಯ ತಪ್ಪದಲೆ ಏಸು ಬಗೆಯಿಂದ ತಿಳಿಯೆ
ಗುಹ್ಯನಾಮ ವಿಜಯ ವಿಠ್ಠಲ ಭಕ್ತರ ಓವಿಗನೆ
ಬಾಹ್ಯಾಂತರವ ಬಲ್ಲ ಬಲಿಗೊಲಿದ ಭವದೂರ ೪

ಜತೆ

ನೀನೊಲಿದು ಸ್ವತಂತ್ರವಿತ್ತಕಾರಣದಿಂದ
ನಾನೆ ಬೇಡಿಕೊಂಡೆ ಚಕ್ರಿ ವಿಜಯ ವಿಠ್ಠಲ ೫

೨೦

ಧ್ರುವತಾಳ

ಎರಗುವೆನಯ್ಯ ಎನ್ನ ಎರವು ಮಾಡದೆ ನಿನ್ನ
ಶರಣರೊಳಿಡುವುದು ಶರಣಾಗತಿಯೆ
ಕರಗಳ ಮುಗಿದು ಕಿಂಕರನೆಂದು ಬಾಗಿದರೆ

ಕರಿಯದಿಪ್ಪುದೇನೊ ಕರಿವರದ
ಕರಗದೆ ಮನವು ಮಕರ ಕುಂಡಲ ಧರನೆ
ತರುಳಾನು ನಾನು ನಿನಗೆ ತರ ತರಕ್ಕೆ
ತರಣಿಕುಲ ನಮ್ಮ ವಿಜಯ ವಿಠ್ಠಲ ಶ್ರೀ
ತರುಣೀಪಾ ಕೆಲಕಾಲ ಮರಿಯಾದೆ ನೋಡು ೧

ಮಟ್ಟತಾಳ

ಕಾಯಯ್ಯ ಎನ್ನ ಕಾಯಜನಯ್ಯನೆ
ಕಾಯ ನಿನ್ನದು ಕಾಣೊ ಕಾಯುವ ಬಿರಿದುಳ್ಳ
ವಾಯುಜ ವಂದಿತನೆ ವಿಜಯ ವಿಠ್ಠಲರೇಯ
ಕಾಯೊ ಕಾಯೋ ನೀ ಕಾಯೊ ಸುರರೊಡೆಯ ೨

ತ್ರಿವಿಡಿ ತಾಳ

ಬಿಡಿಸೊ ಬಿಡಿಸೊ ನಿನ್ನ ಅಡಿದಾವರೆಗಳು
ಇಡುವ ಹೆಜ್ಜೆಗಳಲ್ಲಿ ಹೊಡೆ ಮರುಳುವುದು
ಪಿಡಿಯೋ ಪಿಡಿಯೋ ಕರವ ಪೀಡಿಸುವ ದುರಿತ
ಕಡಿದು ಕಡೆಗೆ ನೂಕಿ ಬಡವನೆಂದು
ಒಡನೆ ಮಾತನಾಡು ವಿಜಯ ವಿಠ್ಠಲ ಎನ್ನ
ಕಡೆಯವನೆನ್ನದೆ ನುಡಿದು ಸುಖವ ಬಡಿಸೊ ೩

ಅಟ್ಟತಾಳ

ಬಲುದೂರ ನೋಡುವರೆ ಎಲೊ ದೇವ ನಿನಗೆ ವೆ
ಗ್ಗಳತನವಲ್ಲವೊ ಜಲಜಾಕ್ಷ ಜಗಷನು
ಅಳೆದ ಅಂಡಜರೂಢ ಸುಳಿದು ಎ
ನ್ನೊಳಗೆ ನಿಶ್ಚಲ ಭಕುತಿಯನಿತ್ತು
ಸಲಹಬೇಕಯ್ಯ ವಿಜಯ ವಿಠ್ಠಲರೇಯ
ಬಲು ದೂರ ನೋಡದೆ ಒಲಿದು ಉದ್ಧರಿಸೊ ೪

ಆದಿತಾಳ

ಇತ್ತ ಮುನ್ನಾದರು ಎನ್ನ
ಉತ್ತರವ ಕೇಳು ದೇ
ವೋತ್ತಮನೆ ಉತ್ತಮನೆ
ಸತ್ಯಭಾಮೆ ಮನೋಹರ
ಸುತ್ತ ತಿರುಗವರಂಗ ವಿಜಯ ವಿಠ್ಠಲ ನೀನೆ
ನಿತ್ಯದಲ್ಲಿ ಪ್ರೀತನಾಗಿ ನಿತ್ಯದಲ್ಲಿ ಪ್ರೀತನಾಗೊ ೫

ಜತೆ

ಶರಣೆಂದು ಪೊಕ್ಕರೆ ಕಾಯುವ ಬಿರಿದು ನಮ್ಮ
ಅರಸೆ ವಿಜಯ ವಿಠ್ಠಲನಲ್ಲಲ್ಲದೆ ಮತ್ತಿಲ್ಲ ೬

೨೧

ಝಂಪೆ ತಾಳ

ಎಲ ಎಲ ಎಲ ಎಲ ಎಲ ಎಲವೊ ಗೋವಳರಾಯನೆ
ಒಳ ಒಳ ಒಳ ಒಳ ಒಳ ಒಳಗೆ ಮಲನಾಗಿದ್ದು
ಸುಳಿ ಸುಳಿ ಸುಳಿ ಸುಳಿ ಸುಳಿ ಸುಳಿಗುರುಳು ನಿಲುವುತಲಿ
ಕಿಲಿ ಕಿಲಿ ಕಿಲಿ ಕಿಲಿ ಕಿಲಿ ಕಿಲಿಗಳು ಎಳೆನಗೆಯಲ್ಲಿ
ಸುಳಿ ಸುಳಿದು ಒಲಿದೊಲಿದು ಪೊಳ ಪೊಳದು ನಲಿ ನಲಿದು
ಕೆಲ ಕೆಲ ಕೆಲಕೆ ನಿಲುವುದೇನು
ಅಳಲಿ ಬಳಲಿದರೆ ಅನಾದಿ ನಿನಗೊಳ್ಳಿದೇನೊ
ಖಳರುಪಟಳವು ವೆಗ್ಗಳಿಸಿದೆ ಕಳದೆಳದೆಳದು
ಕೊಲೆ ಕೊಲೆಯ ಕೊಂದೆನ್ನ ಉಳಿಯಗೊಡರೂ
ಹಲವು ಮಾತೇನು ಫಲ ಹಲವಂಗದವನೆ
ಬಲಿಯೊಳಗೆ ಬಿದ್ದು ಹಲುಬುವದು ಬಿಡಿಸೊ
ತೊಲಗದಿರು ಮಹವೀರ್ಯ ವಿಜಯ ವಿಠ್ಠಲರೇಯ
ಸಲೆ ಸಲಹಬೇಕೊ ಮನ ನಿಲಿಸಿ ಕೆಲಕಾಲ ೧

ಮಟ್ಟತಾಳ

ಗತಿಯಿಲ್ಲದವರಿಗೆ ಗತಿಯು ನೀನೆ
ಮತಿ ಇಲ್ಲದವರಿಗೆ ಮತಿಯು ನೀನೆ
ಪತಿಯಿಲ್ಲದವರಿಗೆ ಪತಿಯು ನೀನೆ
ಸಥೆಯಿಲ್ಲದವರಿಗೆ ಸಥೆಯು ನೀನೆ
ಪ್ರತಿಯಿಲ್ಲದವರಿಗೆ ಪ್ರತಿಯು ನೀನೆ
ಕ್ಷಿತಿಯೊಳಗೆ ದೇವತೆಗಳು ಇನ್ನುಂಟೆ
ಧೃತಾತ್ಮನಾಮ ಸಿರಿ ವಿಜಯ ವಿಠ್ಠಲನೆ
ಪಥಗಾಣದ ಮಂದಮತಿಯಂದದಲಿಪ್ಪೆ ೨

ತ್ರಿವಿಡಿ ತಾಳ

ಬಾಣ ದಶಕಂಧರ ಒಂದೇ ರೂಪಿನಲ್ಲಿ
ಜಾಣ ಸಂಕುರುಷಣ ಮೂರ್ತಿ ವೇಗ
ಗೋಣ ತರಿಯಾಲೆಸೆಯೊ ನಿರುತ ಬಿಡದೆ ಖಳರು
ಮಾಣರು ನಿನ್ನ ಭೀಷಣಕಲ್ಲದೆ
ರಾಣಿವಾಸರದೊಳು ಶ್ವಾನ ಪೋಗಿ ಬಿದ್ದಂತೆ
ಧ್ಯಾನಾವಾಗಿದೆನಗೆ ಹಗಲಿರುಳು
ನೀನಡಗಿ ಪೋಗದೆ ಎನ್ನೊಳು ನೀನು ದು
ಗಾಣ ಗಂಟಲರಿಗೆ ವೈರಿಯಾಗೋ
ಮಾನಸಿಕವೆ ಸಲ್ಲ ಕೃತು ವಿಜಯವಿಠ್ಠಲ
ಏನಿವನೆಂದು ಸುಮ್ಮನೆ ಇರದೆ ದೇವ ೩

ಅಟ್ಟತಾಳ

ನೆಲೆಬಲ್ಲ ಕಳ್ಳರು ಜೀವದೊರಸೆ ಬಿಡರು
ನೆಲೆ ಬಲ್ಲರು ಎನ್ನ ಬಳಗಿದ್ದ ಖಳರು
ತುಳಿದಾಡುತಲಿರೆ ಕಂಡಲ್ಲಿ ನಿಲ್ಲದೆ
ಖಳ ಖಳ ನಗುತಲಿ ಕೈಯಾ ಹೊಯಿದು
ಕಳವಳಿಸಿ ಹೊಯಲಿಡುವೆನೊ ನಿನಗೆ
ಬಲು ಧೀರ ಸುವೀರ ವಿಜಯ ವಿಠ್ಠಲ ಕಾಯೊ ೪

ಆದಿತಾಳ

ಉಂಟು ಉಂಟು ನಿನ್ನ ಬಿರಿದು
ಎಂಟು ದಿಕ್ಕು ವಿದಿಕ್ಕಿನೊಳು
ಬಂಟರಿಗೆ ನೆಂಟನೆಂದು
ಘಂಟೆಯಂತೆ ಶ್ರುತಿ ಪೇಳೆ
ಎಂಟು ನೂರು ಮಡಿಯಾಗಿ
ಶುಂಠಿಗಿಂದ ಪೊಗಳ್ವೆ ನರ
ಕಂಠೀರವನೆ ನೇಹದಿಂದ
ಕುಂಟ ಜನರ ಬಿಡಿಸಿ ಎನ್ನ
ಕಂಟಕವ ಓಡಿಸು ವೈ-
ಕುಂಠಾಧೀಶ ವಿಜಯ ವಿಠ್ಠಲ
ಗಂಟು ಇಕ್ಕು ನಿನ್ನ ನಿಜ
ಬಂಟರು ಬಂಟರು ಕೂಡ ೫

ಜತೆ

ಎಲ್ಲ ಕಾಲದಲ್ಲಿ ಇದ್ದಂತೆ ಇದ್ದು ಹೀನ
ಖುಲ್ಲರ ಬಡಿಯೊ ಅಕ್ಷೋಭ್ಯ ವಿಜಯ ವಿಠ್ಠಲ ೬

೨೨

ಧ್ರುವತಾಳ

ಏನು ಪೇಳಲಿ ಎನ್ನ ಚರ್ಯವಿಧವನ್ನು
ದಾನವಿನೋದಿಯೇ ಧರಣೀಶನೆ
ಜ್ಞಾನ ಶೂನ್ಯನಾಗಿ ನಾನಾ ವಿಧದಿಂದ
ನಾನು ಪೂಜಿಸಿ ಮೆಚ್ಚನು ಪಡಿಯಲಾಪೆನೆ
ಕೋಣ ಮಾಳಿಗೆ ಮಣ್ಣಾನು ಪೊತ್ತು ಹಾಕಿ
ತಾನು ಭಕುತಿಲ್ಲದೇ ಬೇನೆ ಬಡುವಂತೆ
ಹೀನಮನದಲ್ಲಿ ಧ್ಯಾನವೆಂದೊಡನೆ ಸು

ಮ್ಮನೆ ಕುಳ್ಳಿರುವೆನು ಮೌನದಲ್ಲಿ
ಭೂನಾಥನಾಥ ಸ್ವಾಮಿ ವಿಜಯ ವಿಠ್ಠಲರೇಯ
ದೀನ ಮಾನವನಿಗೆ ಜ್ಞಾನ ವೆಂಬೋದೆಯಿಲ್ಲ ೧

ಮಟ್ಟತಾಳ

ಪುಣ್ಯವೆಂಬುದ ಕಾಣೆ ಪುಣ್ಯದ ಮಾರ್ಗಕ್ಕೆ
ಅನ್ಯಥ ಮನಸು ಮನ್ನೆ ನಿಂದಿರದಲ್ಲೋ
ಮಣ್ಣು ಬೊಂಬೆಗೆ ಮಜ್ಜನವೆ ಸಾಕ್ಷಿ
ಎನ್ನ ಪುಣ್ಯವೆಂಬುದಕ್ಕೆ ಘನ್ನ ಪಾಪಗಳೆಲ್ಲ
ಕಣ್ಣಿನಿಂದಲಿ ನೋಡಿ ಮಾಣದಲಾಪೇಕ್ಷಿಸುವೆ
ಸುಣ್ಣ ಕೆಸರು ಕ್ಷೀರವನ್ನು ಕಲಿಸಿದಂತೆ
ಎನ್ನ ಪುಣ್ಯವಯ್ಯ ರನ್ನ ವಿಜಯ ವಿಠ್ಠಲ
ನಿನ್ನ ಮೂರುತಿ ಧ್ಯಾನವನ್ನು ನೆಲೆಗಾಣೆ ೨

ತ್ರಿವಿಡಿ ತಾಳ

ಎರದ ಗಿಡಕೆ ಮುಳ್ಳು ಎರಡಾದರೆ ಒಂದು
ಸರಳವಾಗುವುದು ಒಂದು
ಸರಳವಾಗುವುದು ನೋಡೆ
ಎರಡರಲ್ಲೀ ಗುಣ ಪರೀಕ್ಷಿಯ ಮಾಡಲು
ದುರುಳತನವಲ್ಲದಲೆ ಮರಳೆ ಗುಣವಿಲ್ಲ
ನರಗುರಿಗನು ನಾನು ಪರಿ ಪರಿ ವಿಧದಿಂದಾಂ
ತರಿಯಲಿ ಧ್ಯಾನವಾಚರಿಸಲು ಪುಣ್ಯ ವೆಂ
ದರಿಯಲು ಮನಸು ನಿಂದಿರದೆ ಪರವಸ್ತಕೆ
ಎರಗಿ ಪಾಪದ ಕಡಿಗೆ ಪರಮ ಪ್ರೀತಿ ಬಡುವುದು
ದುರುಳ ಪಾಪವದು ದುರಿತವೆಂಬೊದೆ ಸಿದ್ಧ
ಧರಿಸಿದ ಪುಣ್ಯವೆ ನಿರಯವಾಗುವುದಯ್ಯ
ನರನ ಬೀಯನೆ ಕೇಳು ವಿಜಯ ವಿಠ್ಠಲ ಇದಕ್ಕೆ
ಕರುಣ ಮಾಡುವ ದೇವರ ದೇವನು ೩

ಅಟ್ಟತಾಳ

ಧ್ಯಾನ ಮಾಳಿಪೆನೆಂದು ಆನು ನಿಧಾನಿಸೆ
ದಾನವರಟ್ಟುಳಿ ಏನು ಪೇಳಲಿ ದೇವ
ನೀನೆ ಎನಗೆ ಕಾಮಧೇನುವಾಗಿರಲಿಕ್ಕೆ
ಹೀನರೊಡನೆ ನಿತ್ಯ ನಾನಿದ್ದು ಉಪಹತಿ
ಯಾನು ಬಡಬಹುದೆ
ಮೀನಾಂಕನಯ್ಯ ಶ್ರೀ ವಿಜಯ ವಿಠ್ಠಲರೇಯ
ಪ್ರಾಣ ನಿನ್ನದು ಕಾಣೊ ಜಾಣ ಜಗದೀಶ ೪

ಆದಿತಾಳ

ಎಲ್ಲಿ ತಿರುಗಿದರೇನು ಎಲ್ಲೆಲ್ಲಿ ಮಿಂದರೇನು
ಎಲ್ಲಿ ಓದಿಕೊಂಡರೇನು ಎಲ್ಲಿವಾದ ಮಾಡಲೇನು
ಎಲ್ಲ ಕಾಲದಲ್ಲಿ ನಿನ್ನಲ್ಲಿ ಮನಸು ಪೊಂದದಲೆ
ಇಲ್ಲವೊ ಕೈವಲ್ಯಮಾರ್ಗ
ಸಲ್ಲುವನಲ್ಲವೊ ಎಂದಿಗೆ
ಬಲ್ಲ ದೈವವೆ ಕೇಳು ಕಲ್ಲು ಮೇಲೆ ಮಹದೊಡ್ಡ
ಹೆಳ್ಳೆ ಬಿದ್ದು ಪೋದ ತೆರದಿ ಎಲ್ಲ ಕಾಲದಲ್ಲಿ ನಾನು
ನಿಲ್ಲದರ್ಚಿಸದಾ ದುರಿತ ತಲ್ಲಣಿಸಿ ಪುಡಿಯಾಗಲಿ
ಚೆಲ್ಲರ ದೈವದ ರಮಣ ವಿಜಯ ವಿಠ್ಠಲರೇಯ
ನೆಲೆಗೊಳಿಸು ನಿನ್ನ ಪಾದದಲ್ಲಿ ಸೇರಿಸಿ ಸರ್ವದಲ್ಲಿ ೫

ಜತೆ

ನಿನ್ನವನೆಂಬೋದೆ ನಿಜವಾಗಿ ಇದ್ದರೆ
ಚೆನ್ನಾಗಿ ಪಾಲಿಸು ವಿಜಯ ವಿಠ್ಠಲರೇಯ ೬

೨೩

ಝಂಪಿತಾಳ

ಕಂಡ ಕಂಡವರ ಮನೆಯ ದುಷ್ಟಾನ್ನವನು ಬಿಡದೆ
ಉಂಡು ಉಂಡು ಊರು ಸೂಕರನಂದದಿ
ಮಂಡೆಯನು ಬಲಿತು ಮಹಮದ ಸೊಕ್ಕಿ ನಿಲ್ಲದಲೆ
ಮಂಡಲವಾ ಚರಿಸುವಂತೆ ತಿರುಗುವೆ
ಚಂಡವೃತ್ತಿಯಿಂದ ಕಾಲವನು ಕಳೆದ ಉ
ದ್ದಂಡನಾಗಿ ಇಪ್ಪೆ ಧರ್ಮ ತೊರೆದು
ತಂಡ ತಂಡದ ಸುಖವಾಗಬೇಕೆಂದು ಮುಂ
ಕೊಂಡು ಮರುಗುವೆನು ಪುಣ್ಯವನು ಮಾಡದೆ
ಷಂಡಗೆ ಯೌವ್ವನದ ಸುಂದರಿ ದೊರಕಿದಂತೆ
ಬಂಡೆ ಮೇಲೆ ಸ್ವಾತಿ ವೃಷ್ಟಿ ಬಿಡದಾ
ಖಂಡವಾಗಿ ಸುರಿದು ಪೋದಂತೆ ಎನಗೆ ಕೋ
ದಂಡಪಾಣಿಯೆ ಕೇಳು ವಿಪ್ರಜನುಮ
ಗಂಡುಗಲಿ ವೈಷ್ಣವರ ಮತದಲ್ಲಿ ಬಂದರೂ
ದಂಡವಾಗಿದೆ ನೋಡು ವಿಚಾರಿಸೆ
ದಂಡಿ ದಂಡಣೆ ಮಾಡಿ ದಂಡಿಸುವ ಬಗೆ ಕೇಳಿ
ಭಂಡು ಮನ ನಿಲ್ಲದು ಒಂದೆಸೆಯಲ್ಲಿ
ದುಂಡು ಕುಚದ ಬಾಲೆಯರು ಹದಿನಾರು ಸಾವಿರ
ಹೆಂಡರನಾಳಿದನೆಂದು ನಿನ್ನ
ಕೊಂಡಾಡಿ ಲೊಕಗಳು ಪೇಳುವ ಬಗೆ ಎಂತೋ
ಮಂಡಲದೊಳಗೆನಗೆ ನಿಜ ತೋರದು
ಕುಂಡಲಿ ಶಯನ ಎನ್ನೊಬ್ಬನ ಮನಸು ಬಲು
ಅಂಡಲಿ ಪೋಗುವುದು ನಿಲಿಸಗಾಣೆ
ಹಿಂದು ಮಾತುಗಳ್ಯಾಕೆ ಆರಾದರನುಭವ
ಕಂಡದ್ದಲ್ಲದೆ ಒಪ್ಪಿಕೊಳರು ಜೀಯಾ
ಪುಂಢರೀಕ ವರದ ವಿಜಯ ವಿಠ್ಠಲ ನಿನ್ನ
ತೊಂಡ ನಾನಲ್ಲವೆ ಆವಾದ ಕಾಲಕ್ಕೆ ೧

ಮಟ್ಟತಾಳ

ಭೂಮಿಯೊಳಗೆ ಎನ್ನ ಪುಟ್ಟಿಸಿದ ವಿವಿಧ
ನೀ ಮೆರೆದೆಯೊ ಏನೋ ನೀಸ್ಸೀಮ ಮಹಿಮ
ಕಾಮುಕನಾಗಿವನು ಕಂಡದ್ದು ಅನುಭವಿಸಿ
ತಾಮಸತನದಲ್ಲಿ ಕೆಡಲೆಂಬೋ ಮನಸು
ಪಾಮರ ಮತಿ ಬಿಡಿಸಿ ನಾನಾ ಭೋಜನ ಕೊಟ್ಟು
ಯಾಮ ಯಾಮಕೆ ಪೊರೆವ ಆನಂದದ ಸೊಬಗು
ರೋಮ ರೋಮದಲಿ ಬೊಮ್ಮಾಂಡವಿಟ್ಟ ಸ್ವಾಮಿ ನಿ
ನ್ನಾ ಮಾಯಾ ಎನಗಾವುದು ತಿಳಿವು
ಶ್ರೀ ಮನೋಹರ ನಮ್ಮ ವಿಜಯ ವಿಠ್ಠಲ ನಿನ್ನ
ನಾಮಕೆ ಉಪಹತಿ ಬಾರದಂತೆ ಮಾಡು ೨

ತ್ರಿವಿಡಿ ತಾಳ

ಚಿತ್ತೈಸು ಚಿನ್ಮಯರೂಪ ಭಕ್ತರ ತಾಪ
ಕತ್ತರಿಸುವ ಕರುಣಿ ಕಂಜದಳ ನಯನ
ವಿತ್ತಾದಿಗಳು ನಿನ್ನ ಬೇಡಿಕೊಂಡವನಲ್ಲ
ಎತ್ತಲು ಬಿಡದೆನಗೆ ನಿತ್ಯ ಬೆನ್ನು
ಹತ್ತಿ ಕೊಂಡಿದೆ ನೋಡು ನಾನಾ ಪರಿಯಿಂದ
ಎತ್ತಿ ಹೊರಗೆ ಹಾಕೆ ಪೋಗದಯ್ಯಾ
ಕತ್ತಲೆಯೊಳಗಿರೆ ತನಗೆ ತಾನೆ ದಿವ್ಯ
ವತ್ತಿ ಹಚ್ಚಿಸಿದಂತೆ ಆಗುತಿದಕೊ
ಇತ್ತಲಾಗುವ ಕಾರ್ಯ ನಿನಗರುಹುವುದಿಲ್ಲೊ
ಅತ್ತಲೊಬ್ಬರ ಕೂಡ ಏಕಾಂತವೊ
ಬಿತ್ತಿದ ಬೆಳಸು ಉಂಡಂತೆ ಉಣಲಿ ಬೇಕು
ಸುತ್ತಿ ಸುತ್ತಿ ಬಿಡದೆ ಬಹುಕಾಲವೊ
ಹೊತ್ತೆ ಇದರಿಂದ ಪೋಗಾಡಿದೆನು ಲೇಶ

ಉತ್ತಮ ಮಾರ್ಗವ ಕಾಣದಾದೆ
ಉತ್ತಮ ಲಾಲಿಸು ಇಂಥ ಕರ್ಮ ಏಸಾ
ವರ್ತಿಲಿ ಉಂಟಯ್ಯ ತಿಳಿಯದೆನಗೆ
ಸತ್ಯ ಸಂಕಲ್ಪ ನೀನಹುದೊ ನೀ ಮಾಡಿದ್ದು
ಕಿರ್ತಿ ಬಿಸಾಟಲು ಪೋಗುವುದೆ
ನಿತ್ಯಾನಂದ ನಮ್ಮ ವಿಜಯ ವಿಠ್ಠಲ ನಿನ್ನ
ಭೃತ್ಯನಾದವನಿಗೆ ಭಯವಿಲ್ಲದಿರಬೇಕು ೩

ಅಟ್ಟತಾಳ

ನಿನ್ನ ಪಾದವನ್ನು ನಂಬಿದ ಮಾನವ
ಬನ್ನ ಬಡಲಿಬೇಕು ದಿನ ಪ್ರತಿದಿನದಲ್ಲಿ
ಅನ್ನ ಉದಕ ವಸ್ತ್ರ ಕಾಣದೆ ಇರಬೇಕು
ತನ್ನವರಿಂದ ಛೀ ಅನಿಸಿಕೊಳಲಿಬೇಕು
ಅನ್ಯರಿಂದಲಿ ನಿಂದಿತನಾಗಲಿ ಬೇಕು
ಮುನ್ನೆ ದೇಶಾಂತರ ಸಂಚರಿಸಲಿಬೇಕು
ಬೆನ್ನು ಬಿಡದಲೆ ರೋಗಗಳು ಹತ್ತಿರಬೇಕು
ಇನ್ನಿತಾದರೆ ನಿನ್ನ ಭಕ್ತಿ ದೊರಕುವುದು
ಎನ್ನ ಈ ಪರಿ ಮಾಡದೆಯಿಪ್ಪ ಬಗೆಯೇನು
ಇನ್ನು ಮುಂದೋರದು ಸುಖವೆ ಉಣ್ಣಿಸಿ ಪ್ರ
ಸನ್ನನಾಗದೆ ನರಕಕ್ಕೆ ಹಾಕುವ ಲೀಲ್ಯೊ
ನಿನ್ನ ಮಹಿಮೆ ನೀನೆ ಬಲ್ಲಿಯೊ ಭವದೂರ
ಚನ್ನ ಮಾರುತಿ ರಂಗ ವಿಜಯ ವಿಠ್ಠಲರೇಯ
ಮನ್ನಿಸು ಮುಂದಿನ ಬಿನ್ನಹ ಮಾಡುವೆ ೪

ಆದಿತಾಳ

ಆದರಾಗಲಿ ಎನಗೆ ಈ ಜನುಮದಲಿ ಇದೆ
ಮೋದ ಉಳ್ಳರೆ ತಪ್ಪದು ಕಾಣೊ ಪರಮಾತ್ಮ
ನೀ ದಯದಲಿ ಕೇಳು ಮುಂದೆ ಬಪ್ಪ ಜನುಮದಲಿ

ಭೇದವೆ ಕೊಡು ಕೊಡು ಕೊಡು ಕೊಟ್ಟು ನಿನ್ನ
ಪಾದದಲ್ಲಿ ಮನಸು ಎರಗುವಾನಂದವಿತ್ತು
ಸಾಧನ ಮಾಡಿಸು ಇದಕಿಂತಧಿಕವಾಗಿ
ಆದಿ ಮೂಲವೆ ನಿನ್ನ ಕ್ಲಪ್ತಿ ಎಂಥಾದು ಕಾಣೋ
ಭೇಧಜ್ಞಾನವೆ ಇರಲಿ ಎಂತಾದರಾಗಲಿ
ಶ್ರೀಧರ ಮಾಧವ ಮಧುಸೂದನ
ಈ ದೇಹ ದೇಹಿಯನ್ನು ಕರುಣದಿಂದಲಿ ನಿನ್ನ
ಪಾದೋದಕದಲಿ ತೊಯಿಸು ತೊಯಿಸಯ್ಯಾ
ಸಾಧು ಜನರ ಸಂಗ ಅಂತರಂಗದಲಿ ಕೊಟ್ಟು
ಬಾಧೆ ಪಡಿಸುತಿಪ್ಪ ಕ್ರೋಧರ ತೊಲಗಿಸು
ವೇದ ವೇದಾಂತದೊಡೆಯಾ ವಿಜಯ ವಿಠ್ಠಲರೇಯ
ಆರಾಧನೆ ಆಗಲಿ ಆವಾವ ಭೋಗವೆಲ್ಲ ೫

ಜತೆ

ಹಲವು ಮಾತೇನಯ್ಯಾ ನಿನ್ನಿಚ್ಛೆಯಲ್ಲದೆ
ಹಲುಬಿ ಫಲವಿಲ್ಲ ವಿಜಯ ವಿಠ್ಠಲರೇಯ ೬

೨೪

ಧ್ರುವ ತಾಳ

ಕಂಡ ಸ್ತ್ರೀಯರ ನೋಡಿ ಕಣ್ಣುಗಳು ಸವೆದವು
ಕೊಂಡಿಯನು ಕೇಳಿ ಕಿವಿಗಳು ಸವೆದವು
ಕೊಂಡ ದುರ್ಗಂಧದಲ್ಲಿ ನಾಸಗಳು ಸವೆದವು
ಉಂಡ ದುಷ್ಟಾನ್ನದಲಿ ಜಿಹ್ವೆಗಳು ಸವೆದವು
ಮಿಂಡೆಯರ ತಕ್ಕೈಸಿ ತ್ವಕು ಇಂದ್ರಿಯ ಸವೆದವು
ತಂಡ ತಂಡ ಜನುಮ ಜನುಮಾದಲೀಪರಿ
ಹಿಂಡು ಇಂದ್ರಿಯಂಗಳು ಸವೆದವು ಒಂದೊಂದು ಬಗೆ
ಭಂಡು ಮನ ಸವಿಯಲೊಲ್ಲದೊ ಲಕುಮೇಶ

ಕಂಡ ಕಂಡ ದೆಸೆಗೆ ನಿಲ್ಲದೆ ಓಡುವುದು
ಅಂಡಲಿದು ಜಿಗಿದು ಜಿಗಿದು ಚಿಗರೊಡೆದು
ಮಂಡಲ ವ್ಯಾಪಿಸಿ ಪೋದಲ್ಲೆ ಬೇರಿಳಿದು
ಗಂಡಗಲಿಯಾಗುತಿದೆ ಮಲಿನ ಮನಸು
ದಂಡಣೆ ಮಾಡುವನೆಂದು ನೋಡಿದಡೆ ಆಕಾಶ
ಮಂಡಲ ಮೀರುತಿದೆ ಹಾರುತಿದೆಕೊ
ಶುಂಡಾಲ ಸೊಂಡಿಲವ ತೂಗಿದಂತೆ ಮನಸು
ಕಂಡ ಕಂಡೆಡೆ ತೂಗುತಿದೆ ನಿಲವಿಲ್ಲದೆ
ಕುಂಡಲಿ ಶಯನ ಶ್ರೀ ವಿಜಯ ವಿಠ್ಠಲ ನಿನ್ನ
ಕೊಂಡಾಡೆನೆಂದಡೆ ವಿಷಯಂಗಳು ಬಿಡವು ೧

ಮಟ್ಟತಾಳ

ಧರೆ ಸವೆಯಿತು ಮೇರುಗಿರಿ ಸವೆಯಿತು ಮಹ
ಕರಿ ಮೊದಲಾದ ಸಂಚರ ಸವೆಯಿತು ಸರ್ವ
ಧರಣಿಯನು ಪೊತ್ತು ಉರಗರಾಜರ ದಿವ್ಯ
ಶಿರ ಸವೆಯಿತು ಸೂರ್ಯನ ವರರಥ ಸವೆಯಿತು ಅಂ
ಬರದಲಿ ಹಾರುವ ಗರುಡನ ಗರಿಗಳು
ಇರದೆ ಸವೆದವು ನಿರ್ಜರರ ಗಣ ಮಿಕ್ಕಾದ
ವರಗಾತ್ರಗಳೆಲ್ಲ ಪರಿ ಪರಿಯಿಂದಲಿ ಸವೆದವು ಸವೆದವಯ್ಯ
ಪರಮ ಪುರುಷ ನಮ್ಮ ವಿಜಯ ವಿಠ್ಠಲನ್ನ
ಮರುಳುಗೊಳಿಸುವ ಮನ ಸವಿಯದು ಕಾಣೊ ೨

ತ್ರಿವಿಡಿ ತಾಳ

ಕಾಲ ಪ್ರಕೃತಿಯೆಲ್ಲ ಸವೆದು ಪೋಯಿತು ನೋಡು
ಮೇಲಣ ಲೋಕಗಳು ಸವೆದವು ದಿನಂಪ್ರತಿ
ಏಳು ಶರಧಿ ಮಹ ಜಲ ಧಾರೆಯಿಂದಲಿ
ಏಳುವ ಮನಸಿನ ಚಿತ್ತ ವಿಷಯ
ಮ್ಯಾಲೆ ಮ್ಯಾಲೆ ಬರುವ ಹೊಯ್ಲಿನ ಆರ್ಭಟ
ಧಾಳಿ ಎಣಿಸಾಬಹುದೇ ಮನೊಧಾವಂತೆ

ಆಲಸ ಕಾಣೆನೊ ಪೋಗುವ ಗಮನಕ್ಕೆ
ಪೇಳೆನೆನಲು ಎಣಿಕೆ ದೊರಕದು
ಫಾಲದಲ್ಲಿ ಬರೆದ ಬರಹ ಮುಪ್ಪಾಯಿತು
ಶ್ರೀಲೋಲ ನಿನಂಘ್ರಿ ಭಜನೆ ಕಾಣೆ
ಮೂಲೋಕದೊಳಗಿದ್ದ ದುರ್ವಿಷಯಾಪೇಕ್ಷಿಸಿ
ಕಾಲನ್ನ ಪುರಕೆ ಮುಂದಾಗುತಿದಕೊ
ನೀಲ ಮೇಘಶ್ಯಾಮ ವಿಜಯ ವಿಠ್ಠಲ ನಿನ್ನ
ಆಳುತನವೆಂತೊ ಮನಶುದ್ಧಿಯಿಲ್ಲದಿರೆ ೩

ಅಟ್ಟತಾಳ

ಅರಮಾತ್ರ ಕಾಲದೊಳನಂತ ಯೋಜನ
ತಿರುಗುತಿದೆ ನೋಡು ನಾನಾ ದೇಹದಲ್ಲಿ
ಮರಳೆ ಮರಳೆ ವೃದ್ಧಿ ಅಭಿವೃದ್ಧಿಯಾಗುತ್ತ
ತೆರಳಿ ಪೋಗುವ ಮನಸಿನ ಕಾಲಾ ತಿಳಿಯಾದು
ನಿರುತ ಸ್ನಾನ ಸಂಧ್ಯೆ ಜಪತಪ ಮಿಗಿಲಾದ
ಪರಿಪರಿ ಕರ್ಮ ಚರಿಸಲು ಫಲವಿಲ್ಲ
ಬರಿದೆ ಎನಿಸುತಿದೆ ಆವಾವ ಕಾಲಕ್ಕೆ
ಪರಮ ಪುರುಷ ನಮ್ಮ ವಿಜಯ ವಿಠ್ಠಲ ನಿನ್ನ
ಚರಣದಲ್ಲಿ ಮನಸು ಎರಗದೊ ಲೇಶಮಾತ್ರ ೪

ಆದಿತಾಳ

ಸುತ್ತ ಕಾವಲಿ ಮಹ ನಿರ್ಬಂಧದೊಳು ಕ–
ಗ್ಗತ್ತಲೆ ಯಾಗಿದ್ದ ಅಂತಃಪುರದ ಮಧ್ಯ
ಹತ್ತು ದಿಕ್ಕಿನಲ್ಲಿ ಈಕ್ಷಿಸುವ ಸಂದಣಿ
ಹತ್ತಿಲಿ ಇರಲಾಗಿ ಅಲ್ಲಿದ್ದ ನಾರಿ ಪೋಗಿ
ನಿತ್ಯ ಉಪಪತಿಗಳ ಕೂಡ ಕ್ರೀಡಿಸುವಂತೆ ದೇವ
ತತ್ವೇಶರು ಸರ್ವದನಿತು ವಾಸವಾಗಿ
ಉತ್ತಮ ಗುಣದಲ್ಲಿ ಇರಲಾಗಿ ಎನ್ನ ಮನಸು

ಈತೆರದಲಿ ಪೋಗಿ ಹೊರಗೆ ಚರಿಸುತಿದೆ
ಹೊತ್ತು ಹೊತ್ತಿಗೆ ಇಂತು ಆಗುವದನಂತವೊ
ಅತಿಶಯವೇನೊ ನಿನ್ನ ಚರಣ ಸೇವೆ
ಸತ್ಯ ಸಂಕಲ್ಪ ಸಿರಿ ವಿಜಯ ವಿಠ್ಠಲ ಎನ್ನ
ಪೆತ್ತ ಜನಕ ನೀನೆ ಉದ್ಧಾರ ಮಾಡುವ ಜೀಯಾ ೫

ಜತೆ

ನಮಿಸಿ ಬೇಡುವೆ ಸತತ ಮನ ನಿರ್ಮಳ ಮಾಡು
ಮಮತೆಯ ಬಿಡಿಸು ಭವದಲ್ಲಿ ವಿಜಯ ವಿಠ್ಠಲ ೬

೨೫

ಧೃವತಾಳ

ಕಡಲೊಳಗದ್ದಿ ಮೇಲೆ ಶೈಲ ಹೇರಿದರೇನು
ಕಾಡುವ ಕಳ್ಳರಿಗೆನ್ನ ಒಪ್ಪಿಸಿ ಬಿಟ್ಟರೇನು
ಸುಡು ಸುಡುವ ಕಾಳ್ಗಿಚ್ಚಿನೊಳು ವೈದು ಹಾಕಿದರೇನು
ಬಿಡದೆ ಹೆಮ್ಮಾರಿಗೆ ಹರಿಯಾ ಮಾರಿದರೇನು
ಅಡವೀಗೆ ನೂಕಿ ಭಂಗ ಬಡಿಸಿದರೇನು
ಬಡಬಾಗ್ನಿ ಒಡಲೊಳು ತೆಗೆದು ಬಚ್ಚಿಟ್ಟರೇನು
ಕುಡುಗೋಲು ಕುಂಬಳಕಾಯಿ ನಿನ್ನಯ ಕೈಯ್ಯ
ಬಡದಾರೆ ಒಳಿತೇ ಸಾಕಿದರೆ ಲೇಸು
ಬಡವನು ನಾನಯ್ಯ ಬಲ್ಲಿದ ನಾನಲ್ಲ
ಬಿಡಿಸೊ ಬಿಡಿಸೊ ನಿನ್ನ ಚರಣ ಎನ್ನ ತಲೆ
ಹೊಡೆದ ಕಾಲಕೆ ಒಂದು ಅರಕ್ಷಣವಾದರೆ
ಹಿಡದಿದ್ದೇನೊ ಹಿಡಿದಿದ್ದೆ ಧೃಢವಾಗಿ ಮನದಲ್ಲಿ
ಕಡುಮುದ್ದು ಅನಿರುದ್ಧ ವಿಜಯ ವಿಠ್ಠಲನೆ
ಈ ನುಡಿ ಪೊಳ್ಳಾದರೆ ಕಡೆಗೆ ನಾಲಿಗುತ್ತರವೊ ೧

ಆದಿತಾಳ

ಪರಯ ಭಕ್ತರ ಸರಿ ನಾನಲ್ಲ ನಾನಲ್ಲ
ಥರವಲ್ಲ ಬರಿದೆ ಬಳಲಿಸಾದೆ ಪರಿಪರಿ ಭಯಂಗಳು
ಹರಿಬಿಟ್ಟು ಎನ್ನನು ಹಕ್ಕಲ ಗೈಸದೆ
ಪರಿಪಾಲನೆ ಮಾಡು ಎನ್ನ ಯೋಗ್ಯತವರಿತು
ಬರಮೂರು ದಿನ ಮಾತು ಅನುಗಾಲ ಎಂಬೋದು
ಮರಿಯದು ಕಾಣೋ ವಿಜಯ ವಿಠ್ಠಲ ವಿಠಲ ತಿಮ್ಮಾ ೫

ಜತೆ

ಎಂತಾದರೆ ನಿನ್ನ ಚರಣ ಸ್ಮರಣೆ ಬಿಡ
ದಂತೆ ಒಲಿಯೊ, ಪುರಂದರ ವಿಜಯ ವಿಠ್ಠಲ ತಿಮ್ಮಾ ೬

೨೭

ಧ್ರುವತಾಳ

ಕಮಲವಾದೆನೆ ನಿನ್ನ ಮುಖವ ಪೋಲಿಸುವರು
ಕಮಠವಾದೆನೆ ನಿನ್ನ ಕದಪು ಪೋಲಿಸುವರು
ಭ್ರಮರ ವಾದೆನೆ ನಿನ್ನ ಕುಂತಳ ಪೋಲಿಸುವರು
ಅಮಮ ಚಂಪಕವಾದೆನೆ ನಾಸಾ ಪೋಲಿಸುವರು
ದ್ರುಮವಾದೆನೆ ನಿನ್ನ ತುಟಿ ಕಾಂತಿ ಪೋಲಿಸುವರು
ಕಮಲವಾದೆನೆ ನಿನ್ನ ನಯನ ಪೋಲಿಸುವರು
ವಿಮಲ ಚಾಪವಾದೆನೆ ಪುಬ್ಬು ಪೋಲಿಸುವರು
ಕ್ರಿಮಿಯಾದೆನೆ ನಿನ್ನ ಉಪಾಯ ಪೋಲಿಸುವರು
ತ್ತುಮ ಶಂಖವಾದೆನೆ ಕಂಠ ಪೋಲಿಸುವರು
ನಿಮಿಷವಾದರು ಇಂಥ ದೇಹ ಧರಿಸಿ ಕಾಲ
ಕ್ರಮಣ ಮಾಡಲಿಲ್ಲ ಜನುಮ ಬರಿದೇ

ಭ್ರಮಣ ಬುದ್ಧಿಯಿಂದ ಹೊತ್ತು ಪೋಗಾಡಿದೆ ಆ
ತುಮನೆ ಬಿನ್ನಪ ಕೇಳು ಏನು ಗತಿಯೋ
ರಮೆಯರಸ ನಮ್ಮ ವಿಜಯ ವಿಠ್ಠಲ ರೇಯ
ರಮಣೀಯ ಮನುಜ ಜನುಮ ಪೊಂದಲಿಲ್ಲ ಒಂದಕ್ಕೆ ೧

ಮಟ್ಟತಾಳ

ಪರಿಘವಾದೆನೆ ನಿನ್ನ ತೋಳು ಪೋಲಿಸುವರು
ಮಿರಗುವ ಕುಂದ ಕುಟ್ಮಲವಾದನೆ ದಂತ ಪಂಕ್ತಿ ಪೋಲಿಸುವರು
ಕರಿಕರವಾದೆನೆ ಹಸ್ತ ಪೋಲಿಸುವರು
ವರಮಣಿಯಾದೆನೆ ನಖವ ಪೋಲಿಸುವರು
ಪರಮ ಪುರುಷದೇವ ವಿಜಯವಿಠ್ಠಲ ಇಂಥ
ನರಗಾತ್ರದಿಂದ ಬಂದು ಪೋಲಿಕೆ ಕಾಣೆ ೨

ತ್ರಿವಿಡಿ ತಾಳ

ತಳಿರಾದೆನೆ ನಿನ್ನಂಗ್ಯೆಯಾ ಪೋಲಿಸುವರು
ಗಿಳಿಯಾದೆನೆ ನಿನ್ನ ಮಾತು ಪೋಲಿಸುವರು ಕೋ
ಕಿಲವಾದೆನೆ ನಿನ್ನ ಸ್ವರವ ಪೋಲಿಸುವರು
ತಿಲಕವಾದೆನೆ ನಿನ್ನ ಕುಲದಿ ಪೋಲಿಸುವರು ಕ-
ದಳಿಪರ್ಣವಾದೆನೆ ಬೆನ್ನು ಪೋಲಿಸುವರು
ಬಲ ಮೂಲದೆನೆ ನಿನ್ನ ಗಂಧ ಪೋಲಿಸುವರು ನ-
ವಿಲು ಆದೆನೆ ನಿನ್ನ ಕುಣಿತ ಪೋಲಿಸುವರು
ಇಳಿಯೊಳು ಜನಿಸಿ ಈ ಪರಿಯಿದ್ದವೆಲ್ಲ ವೆ-
ಗ್ಗಳವಾಗಿ ನಿನ್ನ ದೇಹಕ್ಕೆ ಪೋಲಿಸುವರು
ಹಲವು ಬಗೆಯಿಂದ ನೋಡಿದರು ಮನುಜನ
ಹೊಳವು ಕಾಣೆನೊ ನಿನ್ನ ಪೋಲಿಕೆ ಮಾತು
ಬಲು ಮಂದ ಜೀವ ಜಡದ ಭಾಗ್ಯ ಇನಿತಯ್ಯ

ತಿಳಿದು ನೋಡಿದರು ಯಾತಕ್ಕೆ ಬಾರದು
ಕಲಿಕಲ್ಮಷ ನಾಕಾ ವಿಜಯವಿಠ್ಠಲ ನಿನ್ನ
ಕಳುವಿಗೆ ಪಾಲ್ಬೆಣ್ಣೆ ದಧಿಘೃತವಾಗಿದ್ದನೆ ೩

ಅಟ್ಟತಾಳ

ತೊಡೆ ಪೋಲಿಸುವರು ಕದಳಿಯ ಸ್ತಂಭಕೆ ಕ–
ನ್ನಡಿಯ ಪೋಲಿಸುವರು, ಜಾನು ಜಂಘೆಗಳ
ಬಿಡದೆ ಬತ್ತಳಿಕೆಯ ಪೋಲಿಸುವರು
ಒಡನೆ ಕೆಂದಾವರಿ ಕುಸುಮ ಪೋಲಿಸುವರು ಪಾದವ
ನಡೆದಾಡುವದು ಕಸ್ತೂರಿಮೃಗ ಪವ ತಳ–
ದೆಡೆಯಲ್ಲಿ, ರೇಖೆಯುಗಳೊಂದೊಂದಕ್ಕೆ ಪೆಸ
ರಿಡುವರು, ಧ್ವಜವಜ್ರಾಂಕುಶ ಪೋಲಿಸುವ ದೇವ
ಪೊಡವಿಯೊಳಗೆ ಪುಟ್ಟೆ ಸಾಧನವಿಲ್ಲದ
ಜಡದೇಹ ಯಾತಕ್ಕೆ ಪ್ರಯೋಜನ ಕಾಣೆ
ಮೃಡ ತಾತ ವಿಜಯವಿಠ್ಠಲರೇಯ ಕೇಳೊ ಎ–
ನ್ನೊಡೆಯನೆ ಬಹುಕಾಲ ಬದುಕಿದರೇನಯ್ಯ ೪

ಆದಿತಾಳ

ಲತೆ ಪಲ್ಲವಗಜ, ಗೋ ಗುಲಗಂಜಿ ಕೋಲು
ರತುನ ಕಂದುಕ ಭಗರಿ ಬಿಲ್ಲು ಭಂಡಿಗಾಲಿ
ಪ್ರತಿ ಪ್ರತಿಗೊಂಚಲ ಕುಸುಮ ಬಳಗದಿಂದ
ಕ್ಷಿತಿಯೊಳು ಮಿತ್ರರೊಡನಾಡುವಾಗಲಿ ಉ–
ತ್ಪತ್ತಿ ಮಾಡಿದ್ದೇನೋ ಎನಗೊಂದು ಅಂಥ ದೇಹ
ಪತಿತ ಪಾವನ ಎನ್ನ ಯೋಗ್ಯತೆ ಬಲ್ಲವನೆ
ಸ್ತುತಿಸಿ ಪೇಳುವುದೇನೋ ನರಜನ್ಮದಲ್ಲಿ ಒಂದು
ಹಿತ ಮಾಡಿಕೊಳ್ಳಲಿಲ್ಲ ಸಾಧನ ಸರ್ವದ

ಮತಿಹೀನನಾದೆ, ಮೇಲು ಮೇಲು ಅವಕೆ
ಇತರಾಲೋಚನೆಯಿಲ್ಲ, ಸುಕೃತವೇನೆಂಬೆನೆ
ಅತುಳ ಮೂರುತಿ ನಮ್ಮ ವಿಜಯವಿಠ್ಠಲರೇಯ
ಸತತ ನಿನ್ನ ದೇಹದಲ್ಲಿ ಇದ್ದಂತೆ ಇಪ್ಪವು ೫

ಜತೆ

ಹ್ಯಾಗಾದರೇನಯ್ಯ ನಿನ್ನಂಘ್ರಿ ಕಮಲಕ್ಕೆ
ಬಾಗುವಂತೆ ಮಾಡು ವಿಜಯ ವಿಠ್ಠಲರೇಯ ೬

೨೮

ಧ್ರುವತಾಳ

ಕರವಿಡಿದು ಪಾಲಿಪುದು ಕಿಂಕರರೊಳು ಪೊಂದಿಪುದು
ಪರಿಪೂರ್ಣ ಗುಣನಿಧಿ ಕರುಣಾಂಬುಧಿ
ಕರಿ ಮೊರೆಯಿಡಲು ಮಕರಿಯ ಸಂಹರಿಸಿ ಆ
ಕರಿಯ ಪರಿಪಾಲಿಸಿದ ಶ್ರುತಿ ವಿನೋದ
ಶರಧಿಯೊಳು ಪೋಗಿ ಪುತ್ರನ ತಂದು ಪಾರ್ಥನ
ಹರಣವನು ಕಾಯ್ದವರ ಸುಪ್ರಸಾದ
ಹರಣವುಳ್ಳನಕ ಅನ್ಯರಿಗೆ ಕರ ಮುಗಿದೊಂದು
ಶರಣೆಂದುದೆ ಎನ್ನ ಶಪಥ ಕಡಿಮೆ
ದುರುಳ ದೈವಗಳು ಮುನಿದುರವಣೆ ತಡದೆನ್ನ
ಶಿರ ತರಿದು ಮುಂದೆ ತಂದಿಟ್ಟರೇನು?
ಸರಕು ಮಾಡೆನೊ ಅವರಬ್ಬರದ ಭಯಂಕರಕೆ
ಮರುಗಿದರೆ ನಿನ್ನ ದಾಸನು ದಾಸನೆ
ಪರಮಾತ್ಮ ನಾಮ ಸಿರಿ ವಿಜಯ ವಿಠ್ಠಲ ನಿನ್ನ
ಶರಣನೆಂದೆನಿಸು ಎಂದಿಗಾದರು ಒಮ್ಮೆ ೧

ಮಟ್ಟತಾಳ

ಹಿಂಡು ಸೊಪ್ಪಿನ ದೈವ ಹಿಂಡು ಪೂಜಿಪುದೇನು
ಕಂಡರೆ ಫಲವಿಲ್ಲ ಕೊಂಡಾಡಲು ಸಲ್ಲ
ಕೆಂಡವನು ಕೊಂಡು ಮಂಡೆಯ ತುರಿಸಿದಂತೆ
ಮುಂಡ ದೇಹಕ್ಕೆ ತುಂಡು ಪೆಚ್ಚಿಸಿದಂತೆ
ಅಂಡಲಿದು ವ್ಯರ್ಥ ದಂಡವಾಗುವದಂಗ
ಚಂಡಣಿ ಬಂದೇವೆ ಉಂಡು ಉಟ್ಟರು ಇಲ್ಲ
ಚಂಡ ನಾಮಕಕೊಡಿಯಾ ವಿಜಯ ವಿಠ್ಠಲ ನಿನ್ನ
ಕಂಡ ಮಾತುರದಲ್ಲಿ ದಂಡಾಯುಧ ಬಾರಾ ೨

ತ್ರಿವಿಡಿ ತಾಳ

ಕೊಡು ಬೇಡಿದ ದೃಢ ಕೊಡಲಾರದಿರೆ ನಾನು
ಬಿಡೆನೊ ಬಿಡೆನೊ ಇನ್ನು ಭೀತಿಯಾತಕೊ ನಿನ್ನ
ತಡೆದು ಮುಂಜೆರಗನುವಿಡಿದು ಪೋಗಗೊಡೆ
ನುಡಿದೆನ್ನ ಒಡಂಬಡಿಸು ಇಲ್ಲದಿದ್ದರೆ ಸ್ವಾಮಿ
ಬಿಡುಕಟ್ಟಿದ ಬಿರಿದು ಕ್ಷುದ್ರದೇವತೆಗಳ
ಒಡೆಯಾನೆಂಬದು ಭಕ್ತರ ಪಾಲನೆಂಬೊದು
ನಡಿ ನಿನ್ನ ಅಡಿಗಳ ನೆನೆಸುವ ಉತ್ತುಮ
ರಡಿಯಲ್ಲಿ ಮುಡಿಯಾ ತೊಡರು ಪೇಳುವ
ಪೊಡವಿ ಪದಿನಾಲ್ಕಕ್ಕೆ ಒಡೆಯಾನು ನೀನೆಂದು
ತುಡುಕಿ ಹಾವನು ಮುಂಡಿಗಿ ಹಾಕುವೆ
ಕಡಲಶಯನ ಮಂತ್ರ ವಿಜಯ ವಿಠ್ಠಲ ಎನಗೆ
ಕೊಡತಕ್ಕದ್ದಲ್ಲದ ಅಧಿಕ ಬೇಡಿದರೇನು ೩

ಅಟ್ಟತಾಳ

ಪರದೈವ ಕೇಳವಧಾರುಪಕಾರವ
ಧರಿಸು ಬಿನ್ನಹವನ್ನು ಮ್ಯಾಲೊಂದು ತರುಳಗೆ
ಧರಣಿಯೊಳಗೆ ನಿನ್ನ ಸರಿಯಾದ ದೇವರ
ಕರೆದು ತೋರಿಸುವುದು ಅವರಲ್ಲಿಗೆ ಪೋಗಿ

ತಿರಿತಿಂಬೆ ಇಲ್ಲದಿದ್ದರೆ ದೇವ ನಿನ್ನಯ
ಪರಮ ಚರಿತೆಯುಳ್ಳ ತನಕ ಸಾಕುವುದು
ತರುವಾಯ ಆದದ್ದೆಲ್ಲಾಗಲಿ ಫಣಿಯಲ್ಲಿ
ಬರೆದ ಮಿತಿಗೆ ಏನಾದರು ಬರಲಿನ್ನು
ಧರಣಿಧರ ನಾಮ ವಿಜಯ ವಿಠ್ಠಲ ನಿನ್ನ
ಚರಣ ಸ್ಮರಣೆ ಬಿಡದೆ ಕರುಣಿಪುದೆನಗೆ ೪

ಆದಿತಾಳ

ನಖದ ದರುಶನ ಸಾಕು ಭಕುತಿ ಭಕುತಿ ಒಲ್ಲೆ
ಯುಕುತಿ ಒಲ್ಲೆ ಯುಕುತಿ ಒಲ್ಲೆ ಯುಕುತಿ ಒಲ್ಲೆ
ಮುಕುತಿ ಒಲ್ಲೆ ಮುಕುತಿ ಒಲ್ಲೆ ಮುಕುತಿ ಒಲ್ಲೆ
ಭಕುತಿ ಭಕುತಿ ಯುಕುತಿ ಮುಕುತಿ ಮಹ
ಭಕುತರಿಗೆ ಪಾಲಿಸಯ್ಯ ಸಕಲ ಕಾಲದಲ್ಲಿ ನಿನ್ನ
ನಖವ ನೋಡುವ ಮನವನಿತ್ತು
ಮುಕತನ್ನ ಮಾಡುವುದು ಸಕಲ ದುರಿತವ ಕಳೆದು
ಶಿಖಂಡಿ ನಾಮ ವಿಜಯ ವಿಠ್ಠಲ
ಸುಖವೆಂಬೋದಿದೆ ಸಾಕು ೫

ಜತೆ

ನಿನ್ನ ವಿನಾ ಕರುಣಿ ಇಲ್ಲ ಎನ್ನ ವಿನಾ ಪಾಪಿಯಿಲ್ಲ
ಇನ್ನು ವಿಚಾರವೇನು ಸತ್ಯ ವಿಜಯ ವಿಠ್ಠಲ ೬

೨೯

ಧ್ರುವತಾಳ

ಕರ್ಮಠ ನಾನು ದೇವ, ನಿರ್ಮಳನಾದ ನಿವರ್ತ
ಮರ್ಮ ಮಾರ್ಗವನು, ಸುಪೆರ್ಮೆಯಿಂದಲಿ ತಿಳಿಯೆ
ಧರ್ಮದಪ್ಪಿ ಬಾಳುವ ಚರ್ಮ ದೇಹದಲ್ಲಿ ದು–
ಷ್ಕರ್ಮಂಗಳೆಂಬೊ ವನಧಿ, ಉರ್ಮಿಯೊಳಗೆ ತಗಲಿ
ಚರ್ಮಗನಿಗೊಂದು ಕರ್ಮ ಮಾಡಲನೇಕ

ಕರ್ಮಗಳಟ್ಟ, ಅಕರ್ಮಕ್ಕೆ ಪೋಗಗೊಡದು, ನಿ
ರ್ನಿಮಿತ್ಯ ಬಲು ಕರ್ಮದ ಹೆಣ್ಣೆ ಕೊಂಡು
ದುರ್ಮತಿಗಳ ಕೈಯ್ಯ ಮರ್ಮದಲ್ಲಿ ನೊಂದೆ
ಕರ್ಮಸಾಕ್ಷಿ ವಂದ್ಯ ವಿಜಯ ವಿಠ್ಠಲ, ಸ
ತ್ಕರ್ಮವಾಚರಿಸದೆ, ನೂರ್ಮಡಿ ತಿರುಗಿದೆ ೧

ಮಟ್ಟತಾಳ

ನಮೋ ನಮೋ ಅನಂತಾನಂತ, ಪ
ರಮ್ಮ ಪುರುಷ ಪುರುಷೇಶ್ವರ
ರಮ್ಮೆಯರಸ ರಾಗಾದಿದೂರಾ
ತುಮ್ಮ ಅಪಾನಿರುತವಾಸ
ಗಮ್ಯಗೋಚರನೆ, ಅಪಾರಮ
ಹಿಮ್ಮ ಮಹಿಧರ ಧರ
ಹಮ್ಮಿನ ದೈವ ಅನಾದಿ, ಅನಾದಿ ಅನು
ಪಮ್ಮ ಚರಿತ ಪರಿ ಪರಿರೂಪ
ಬೊಮ್ಮಜನಕ ಭವ ಭಯದೂರ
ನಿಮ್ಮಿತ್ಯ ಬಂಧು ನಾಗಾರಿಗಮನ
ಸುಮ್ಮನಸರೊಡಿಯ ಸುಗುಣ ಪುರುಷೋ
ತ್ತುಮ್ಮ ತುರಂಗ ವದನ ಬಲು
ಸೌಮ್ಯವುಳ್ಳ ಸಾಕಾರ ಮೂರುತಿ
ರಮ್ಯ ನಾಮಾ ವಿಜಯ ವಿಠ್ಠಲ
ಖಮ್ಮಹಿಪತಿ ಕಾರುಣ್ಯವನಧಿ ೨

ತ್ರಿವಿಡಿತಾಳ

ನಿನ್ನ ಪೋಲುವವರಾರು ನೀರಜದಳನಯನ
ಎನ್ನನು ಬಿಡದಿರು ಬಿರಿದು ಬಲ್ಲೆ
ಮನ್ನಿಸಿ ಸಲಹಯ್ಯ ಮರಳೆ ಕರ್ಮದಿಂದ
ಸನ್ನು ಮಾರ್ಗವ ಕಾಣೋ ಬಹುಜನ್ಮದಿ
ನಿನ್ನಿಚ್ಛೆಯಿಲ್ಲದೇ, ಲಿಂಗ ಶರೀರವು

ಭಿನ್ನವಾಗದು ಕಾಣೊ ಅನಂತ ಕಾಲದಲ್ಲಿ
ಎನ್ನಾಧೀನವಲ್ಲ ಜ್ಞಾನ ಭಕ್ತಿ ವೈರಾಗ್ಯ
ಮಾನ್ಯ ದೇವತಿಯೆ ಲಾಲಿಸು ಮಾತನು
ಕಣ್ಣಿವೆ ಇಡುವ ಸ್ವತಂತ್ರ ಎನಗಿದ್ದರೆ
ನಿನ್ನ ಬಿಡುವೆನೇನೊ ಬಸವಳಿದು
ಇನ್ನು ತ್ರಿಭುವನಕ್ಕೆ ದೈವಾವುದಿಲ್ಲೆಂದು
ಪನ್ನಗನಾದರೂ ತುಳುಕುವೇನೊ
ಚನ್ನಾಗಿ ಪಾಲಿಸು ವಿಜಯ ವಿಠ್ಠಲ ಕರುಣಿ
ನಿನ್ನ ಕಾರುಣ್ಯವೇ ವಜ್ರ ಪಂಜರವು ೩

ಅಟ್ಟತಾಳ

ಪಿಡಿಯೊ, ಪಿಡಿಯೋ ಕೈಯ್ಯ, ನುಡಿಯೊ ನುಡಿಯೊ ಸೊಲ್ಲಾ
ಕೊಡು ಕೊಡು ಮುಕುತಿಯಾ ಕೊಡವಂಥ ಸನ್ಮಾರ್ಗ
ಬಿಡಿಸು ಬಿಡಿಸು ಭಂಗ ಬಡಿಸುವಹಂಕಾರ
ಕೆಡಿಸೋದು ಷಡ್ವರ್ಗ ಒಡನೆ ಕಾಡುವ ಮ–
ದಡ ಅಷ್ಟಮದಗಳು ಒಡಲೊಳು ಇಟ್ಟುಕೊಂಡು
ಬಡಿವಾರದಲ್ಲಿ ಕರ್ಮನಡಾವಳಿ ಮಾಡುವೆ
ಸಡಗರದ ದೈವ ವಿಜಯ ವಿಠ್ಠಲ ನಿನ್ನ
ಅಡಿಗಳ ಸ್ಮರಣೆಗೆ ಪಡಿಗಾಣೆ ಆವಲ್ಲಿ ೪

ಆದಿತಾಳ

ಚಕ್ರಿಯೇ ನಿನ್ನ ಪ್ರಜೆ ಸುಕೃತ ಮಾಡಿದವನು
ಸುಕೃತ ಪೇಳಲು ಆಕ್ರಮಿಸಿದ್ದ ಸರ್ವ
ವಕ್ರಂಗಳೆಲ್ಲ ಪಾದಕ್ರಮಗೆಟ್ಟು ಪಾದಕ್ರಾಂತವಾಗೋವು
ಶಕ್ರನು ಬಲ್ಲನಿದು ವಿಕ್ರಮದಲ್ಲಿ ಜ–
ಲಕ್ರೀಡೆ ಕರಿಯಾಡೆ ಆಕ್ರಮದಿಂದ ಬಂದು
ನಕ್ರ ಘೋರಿಸುತಿರೆ

ಚಕ್ರವಟ್ಟಿ ವೇಗ ನಕ್ರವ ಪರಿಹರಿಸಿ
ನಕ್ರಿಯಾ ನೀನೆ ಕಾಯ್ದು ಚಕ್ರವರ್ತಿಗಳೊಡೆಯ
ಅಕ್ರೂರವರದ ಸಿರಿ ವಿಜಯ ವಿಠ್ಠಲ ನಿನ್ನ
ಸಕೃಪೆ ಪಿಡಿದು ಜ್ಞಾನ ಕ್ರಿಯನಾಗಬೇಕು ೫

ಜತೆ

ಇನ್ನಾದರು ಎನ್ನ ಕರ್ಮ ಮಾರ್ಗವ ಬಿಡಿಸಿ
ನಿನ್ನ ಧ್ಯಾನವ ಕೊಡೊ ವಿಜಯ ವಿಠ್ಠಲರೇಯ ೬

೩೦

ಝಂಪೆ ತಾಳ

ಕರವಿಡಿದೆತ್ತುವುದು ಭವ ಕರದಮದೊಳಗಿಂದ
ಕರಕರೆ ಬಡಲಾರೆ ಕರುಣಾ ರತುನಾ
ಕರನೆ ನಿನ್ನಡಿಗಳಿಗೆ ಕರಮುಗಿದು ದುರಿತ ನಿ
ಕರಗಳೆಲ್ಲ ನಿರಾಕರಣ ಗೈಸೊ
ಕರೆದ ಮಾತನು ಪತಿ ಕರಿಸಿ ವೇಗದಿ ವಸೀ
ಕರನಾಗಿ ಮುಕುತಿಗೆ ಕರೆವ ದಾತ
ಕರದಿಂದ ಒಲಿದು ವಕ್ಕರ ಪರಿಹರಿಸಿ ಭೀ–
ಕರವ ತೊಲಗಿಸು ಶ್ರೀಕರ ಮೂರುತಿ ದಿವಾ
ಕರಕುಲಾಗ್ರಣಿರಾಮ ವಿಜಯ ವಿಠ್ಠಲ ಸಾ
ಕಾರನಾಗು ನಿತ್ಯ ಮಧುಕರನಂತೆ ಮನಕೆ ೧

ಮಟ್ಟತಾಳ

ತನು ನಿನ್ನಾಧೀನ ಮನವೆ ನಿನ್ನಾಧೀನ
ಜನನ ಮರಣ ಪಾರಣ ನಿನ್ನಾಧೀನ
ಅನುದಿನ ಮಾಳ್ಪ ಸಾಧನ ನಿನ್ನಾಧೀನ
ಕ್ಷಣ ಕ್ಷಣದಾಶ್ವಾಸದ ಯೋಚನೆ ನಿನ್ನಾಧೀನ
ಗುಣ ಗುಣ ವನ ನಿಧಿ ವಿಜಯ ವಿಠ್ಠಲರೇಯ
ಎನಗೊಲಿದಿಪ್ಪನೆ ಅಣೋರಣೆ ಮಹಮಹಿಮ ೨

ತ್ರಿವಿಡಿ ತಾಳ

ಹಾರಿ ಆಡಿದರೇನು ಹಸ್ತದಲ್ಲಿ ತಂ
ಬೂರಿ ಪಿಡಿದು ಮೀಟಿ ತಾಳ ಕಟ್ಟಿದರೇನು
ಮೋರೆ ಮೇಲು ಮಾಡಿ ಪಾಡಿ ಪೇಳಿದರೇನು
ತೋರಿ ಗುಣಗಳೆಲ್ಲ ತವಕೆ ಬಿದ್ದರೆ ಏನು
ತಾರಿಕೊಳುತ ಬಲುತಪವ ಗೈದರೆ ಏನು
ಶಾರೀರ ಬಳಲಿಸಿ ಶೋಕ ಪಡೆದರೇನು
ದೂರ ಯಾತ್ರಿ ತೀರ್ಥತಿರುಗಿ ಬಂದರೆ ಏನು
ಆರೊಡನಾಡಿದರೇನು ಮತ್ತೇನು
ನಾರಾಯಣನೆ ನಿನ್ನ ಸಾರದಲೆ ಸಂ
ಸಾರದ ಮಾರ್ಗ ನಿವರ್ತಿಯಿಲ್ಲ
ಈ ರೀತಿಯಲಿ ತಿಳಿಯದೆ ಮಂದನಾಗಿ ಪೋದೆ
ಮಾರಿಗಳ ಭೀತಿ ಎಣಿಸದಲೆ
ಚಾರು ಚರಿತ ನಮ್ಮ ವಿಜಯ ವಿಠ್ಠಲ ಎನ್ನ
ಭಾರ ವಹಿಸಿ ಕಾಯುವ ಕಾರುಣ್ಯಮೂರುತಿ ೩

ಅಟ್ಟತಾಳ

ಒಂದೆ ಜಲದ ಬಿಂದು ಒಂದೆ ತುಲಸಿ ದಳ
ಒಂದೆ ಚರುವನ್ನ ಮಂಗಳಾರ್ತಿ
ಒಂದೆ ಪ್ರದಕ್ಷಿಣೆ ಒಂದೆ ನಮಸ್ಕಾರ
ಒಂದೆ ಒಂದದರಿಂದ ಕುಂದದ ಮತಿಗಳ
ತಂದು ಕೊಡುವ ದಯಸಿಂಧು ನೀನಿರಲಿಕ್ಕೆ
ಮಂದಮಾನವ ಅನುಸಂಧಾನ ಅರಿಯದೆ
ಬಂದಾರು ಮಡಿಯಾಗಿ ತಂದು ಬಳಲುವೆ
ಸಿಂಧುಶಯನ ನಮ್ಮ ವಿಜಯ ವಿಠ್ಠಲರೇಯ
ಎಂದೆಂದಿಗೆ ನಾನು ಒಂದು ದಾರಿಯ ಕಾಣೆ ೪

ಆದಿತಾಳ

ಗತಿಯೇನು ತೋರದು ಶ್ರೀ
ಪತಿಯ ಪೋಗುವ ಸು
ಪಥದಲ್ಲಿ ನಾನೆಂತೀ
ಕ್ಷಿತಿ ಯೊಳಗಿರಬಹುದೆ
ಹಿತವಾಗಿ ಕಾಯ್ದು ಪೂ
ರತಿ ಮಾಡೊ ಮನೊಬಯಕೆ
ಯತಿಗಳ ಮನೋಹರ ವಿಜಯ ವಿಠ್ಠಲ ನಿ
ಶ್ಚಿತದಲ್ಲಿ ನೀನೆ ಒಲಿಯೊ ಕಥಾಪ್ರಸಂಗವನಿತ್ತು ೫

ಜತೆ

ಕೋಟಿಗಾದರು ನಿನ್ನ ನೆನವೆ ಭವಾಬ್ಧಿಯ
ದಾಟಿಸು ದಯದಿಂದ ವಿಜಯ ವಿಠ್ಠಲನಂದ ೬

೩೧

ಧ್ರುವತಾಳ

ಕಾಮ ಕಡಿಮ್ಯಾಗದು ಕ್ರೋಧ ಲೇಶ ತಗ್ಗದು
ನೇಮವಾಗೆ ಲೋಭ ಬಿಡದಿಪ್ಪುದು
ಆ ಮದವಡಗದು ಮತ್ಸರವಳಿಯದು
ವ್ಯಾಮೋಹ ಕೂಡಿಪ್ಪುದು ಎಲ್ಲಿದ್ದರು
ತಾಮಸಂಗಳಿದಕೆ ಬಲವಾಗಿ ನಿಂದಿಹವೊ
ಪಾಮರ ಬುದ್ಧಿ ಸಂಗತಿಯಾಗಿದೆ
ಸೀಮೆಗಾಣೆನು ನಾನು ಎಲ್ಲೆಲ್ಲಿ ತಿರುಗಿದರು
ಸ್ವಾಮಿ ನೀನೊಬ್ಬ ಬಲವಂತನೆಂದು
ನಾ ಮೊರೆ ಹೊಕ್ಕು ನಿನ್ನ ಮೊರೆಬಿದ್ದೆ ದೈನ್ಯದಲ್ಲಿ
ಈ ಮಾತು ನೀ ಮನ್ನಿಸದಿದ್ದಡೆನಗೆ
ಭೂಮಿಯೊಳಗೆ ಕಾವಾ ಕರುಣಿಯ ಕಾಣೆನಕಟ
ನಾಮ ನೆನದವಂಗೆ ಗತಿದಾಯಕ

ನೇಮ ನಿತ್ಯಗಳಿಲ್ಲ ಒಂದೊಂದು ಬಗೆ ಬಗೆ
ಪ್ರೇಮ ಪುಟ್ಟುವುದಯ್ಯ ದುರುಳ ವೃತ್ತಿಗೆ
ಸಮಸ್ತ ದುರ್ಜನರು ಒಂದಾಗಿ ತಮ್ಮ ತಮ್ಮ
ಧಾಮದಲ್ಲಿಗೆ ಒಯ್ದು ಕೆಡಿಸುವರೊ
ಈ ಮನ ನೀಚರೊಶವಾದ ಮೇಲೆ ಎನ್ನ
ನೇಮ ನಿತ್ಯಂಗಳಿಗೆ ನೆಲೆಗಾಣೆನೊ
ಸುಮಾರ್ಗವೆಂಬೋದೆಲ್ಲಿ ತೋರದೆ ಪಾಪದೊಳು
ನಾ ಮುಣುಗಿ ಇಪ್ಪೆನಯ್ಯಾ ಭವತಾರಕ
ನೀ ಮರೆದರೆ ಇನ್ನು ಅನಂತ ಜನುಮಕ್ಕೆ
ಕಾಮಕ್ರೋಧದಿಂದ ಕಡೆ ಬೀಳೆನೊ
ನಾಮದೊಡೆಯ ಸಿರಿ ವಿಜಯ ವಿಠ್ಠಲ ನಿನ್ನ
ಕೋಮಲಾಂಘ್ರಿಯ ಧ್ಯಾನ ಪಾಲಿಸು ಕರುಣದಲ್ಲಿ ೧

ಮಟ್ಟತಾಳ

ವಿಷಯಂಗಳಿಗೆ ಎನ್ನ ವಶಮಾಡಿ ನೀನು
ನಸುನಗುತಾ ಇನಿತು ಹಸಗೆಡೆಸುವುದು ಸಂ
ತಸವೇನೊ ಸ್ವಾಮಿ ವಸುಧಿಯೊಳಗೆ ಜೀವಿಸಲಾರೆ ರ
ಕ್ಕಸರ ಪ್ರೇರಣೆಯಿಂದ ಬೆಸಸುವುದೇನಿನ್ನು
ದೆಶೆಗೆಟ್ಟು ಮರುಗೀ ಘಸಣೆಗಾರದೆ ಸ್ತುತಿಸಿದೆನೊ ನಿಲ್ಲದಲೆ
ಪಶುವಿನಂದದಲಿ ಈ ಅಸುಮೆಂದೆನಿಸಿದರು?
ಕುಶಲ ಮತಿಯ ಕೊಡುವ ವಿಜಯ ವಿಠ್ಠಲ ನಿನ್ನಾ
ರ್ಚಿಸುವ ಬಗೆ ಜ್ಞಾನ ಪಾಲಿಸಿ ಕರುಣಿಸಬೇಕು ೨

ತ್ರಿವಿಡಿ ತಾಳ

ಯೋಗ ಯಾಗ ತ್ಯಾಗ ರಾಗ ಬೇಡುವುದಿಲ್ಲ
ಸಾಗರ ದ್ವೀಪಗಳು ಕೊಡು ಎಂದಾಡುವುದಿಲ್ಲ
ವೇಗದಿಂದಲಿ ಬಂದು ಸಾಕು ಎಂದೆನಲಿಲ್ಲ
ಅಗರ ಅಂಗಣ ವಾಜಿ ಕೊಡೆನಲಿಲ್ಲ

ಭೋಗದಾಶೆಯ ಮಾಡಿ ಭಾಗ್ಯಾಪೇಕ್ಷಿಸಲಿಲ್ಲ
ಲಾಗು ಮಾಡುವ ವಿದ್ಯ ಬಯಸಲಿಲ್ಲ
ಈಗಲೆನ್ನ ಬಿಡದೆ ಉದ್ಧರಿಸೆನೆಲಿಲ್ಲ
ಹಾಗ ಹೊನ್ನು ಹಣ ಬೇಡಲಿಲ್ಲ
ಭಾಗಾದೆಯಾಗಿ ಕಾಡುವ ಕಾಮಾದಿಗಳನ್ನು
ನೀಗುವುದೆಂದು ಪ್ರಾರ್ಥನೆ ಮಾಡಿದೆ
ಸಾಗರಶಯನನೇ ಇಂತು ಲಾಲಿಸದಿರೆ ಲೇ–
ಸಾಗಿ ನಿನ್ನ ನಾಮಾ ತುತಿಸಲ್ಯಾಕೆ
ಜೌಗು ಮಾಡದೆ ಇಂದೇ ನುಡಿದ ಬಿನ್ನಪವೆ ಚ
ನ್ನಾಗಿ ಕೇಳುವುದು ಬಲು ಕರುಣದಿಂದ
ಯೋಗಿ ಜನರ ಪ್ರೀಯ ವಿಜಯ ವಿಠ್ಠಲ ಎನ್ನ
ಆಗಾಮಿ ಸಂಚಿತ ಪ್ರಾರಬ್ಧಕ್ಕೆ ಯೋಚನೆ ೩

ಅಟ್ಟತಾಳ

ಗತಿಗೆ ಚಿಂತಿಪುದಿಲ್ಲ ಗತಿ ಪ್ರದಾತನೆ ಕೇಳು
ಖತಿಗೊಳಿಸುವ ದುರ್ಮತ ಸಮ್ಮಂಧವ ಕೀಳಿ
ಅತಿಶಯವಾದ ವಿಹಿತವುಳ್ಳ ಮತದಲ್ಲಿ
ಕ್ಷಿತಿ ಸುರರ ಜನನ ಸಂಗತಿಯಾಗಿ ಬಂದಿದೆ
ತತುವ ಮಾರ್ಗದ ಸುವ್ರತವನ್ನುದ್ಧರಿಸಿದ್ದು
ಪ್ರತಿಕೂಲವಾಗಿ ಸಂತತ ದುಷ್ಟರಲಿ ದು
ರಿತಕೊಳಗಾಗಿ ಜನಿತನಾಗುವೆನು ಅತಿ ಅ
ದ್ಭುತ ಭಯ ಎನಗಿದೆ ಪತಿತರ ದೆಶೆಯಿಂದ
ಹಿತ ನೀನೆ ವಿಜಯ ವಿಠ್ಠಲರೇಯ ನಮಗೆಲ್ಲ
ನತನಾಗಿ ನುತಿಸುವೆ ಚಿಂತಾರತುನವೆ ಕೊಡೊ ೪

ಆದಿತಾಳ

ಅರಿ ಅರಿ ಅರಿ ದ್ವಯವರ್ಗಗಳು
ಹರಿ ಹರಿ ಹರಿದಿಕ್ಕಿ ಕರಕರೆ ಕರಕರೆ ಮಾಳ್ಪವು

ಹರಿ ಹರಿ ಹರಿ ಹರೀ ನೀನೆಂದು
ಮೊರೆ ಮೊರೆ ಮೊರೆ ಹೊಕ್ಕೆ
ಪರಿ ಪರಿ ಪರಿ ಪರಿಬಗೆಯಿಂದ
ಸರ ಸರ ಸರ ಸರನೆ ಒಲಿದು
ಇರ ಇರ ಇರದಂತೆ ಅರಿಗಳು
ತರ ತರ ತರ ತರ ನಡಗಿಸಿ
ಅರೆ ಅರೆ ಅರೆ ಅರೆಮಾಡು ಓಡಿಸಿ
ಸುರನರೋರುಗ ನರ
ಗುರು ವಿಜಯ ವಿಠ್ಠಲರೇಯ ಎನಗೆ
ವರ ವರ ವರ ವರ ವರಗಳ ಕೊಡುವುದು ೫

ಜತೆ

ದುಷ್ಟಕಾಮಗಳ ಬಿಡಿಸದಿದ್ದರೆ ನೆಲೆಗಾಣೆ
ಧಿಟ್ಟಮೂರುತಿ ವಿಜಯ ವಿಠ್ಠಲ ಲೋಕೇಶ ೬

೩೨

ಧ್ರುವತಾಳ

ಕಾಮ ವೆಗ್ಗಳಿಸಿತು ಕಪಟ ಘನವಾಯಿತು
ತಾಮಸಂಗಳ ಬಲ ಹೆಚ್ಚಿತು
ನೇಮಂಗಳು ತಗ್ಗಿದವು ನಿಷ್ಠೆ ಬಯಲಾಯಿತು
ಈ ಮನಸು ಪಾಪ ಪುರುಷನ ಸೇರಿತು
ಯಾಮಿರವಾಯಿತು ಧರ್ಮ ಹಿಂದಾಯಿತು
ಆ ಮಹ ಸತ್ಯ ಗುಣ ಶೂನ್ಯವಾಯಿತು
ನಾ ಮುಂದಾರನ ಕಾಣೆನಕಟಕಟ ಏನು ಗತಿ
ನೀ ಮರೆದರೆ ಎನಗಾವ ತೆರನೊ
ಗ್ರಾಮಣಿ ನಾಮಾ ನಮ್ಮ ವಿಜಯ ವಿಠ್ಠಲ ನಿನ್ನ
ನಾಮಕ್ಕೆ ಉಪಹತಿ ಬರುತಿದೆ ನೋಡೊ ೧

ಮಟ್ಟತಾಳ

ಈರೈದು ಮ್ಯಾಲೊಂದು ಇಂದ್ರಿಯಗಳ ಕರ್ಮ
ಸೇರಗೊಡವು ಎನ್ನ ಪುಣ್ಯದ ದಾರಿಗೆ
ಗಾರು ಮಾಡುತಲಹರೆ ಮತಿ ಭ್ರಮಣನ ಮಾಡಿ
ಆರು ಮಂದಿ ಬೇರೆ ಅತಿಕ್ರೂರರು ಉಂಟು
ಹೋರುವಮಿತ ಮದ ಹಿತದವರಾರಿಲ್ಲ
ಸೂರೆ ಹೋಯಿತು ಪುಣ್ಯ ಮೀರಿತು ಎನ್ನೊಳ
ಯಾರೊಬ್ಬರ ಕಾಣೆ ಆರು ಎನ್ನವರಿಲ್ಲ
ಶೌರಿ ವಿಜಯ ವಿಠ್ಠಲ ವಾರವಾರಕೆ ನಿನ್ನ
ಕಾರುಣ್ಯದಳತಿಯಲಿ ಕಾಯಬೇಕಯ್ಯ ೨

ರೂಪಕ ತಾಳ

ದುರುಳರು ಕೋರಿದ ಪುರುಷಾರ್ಥವು ಈಗ
ಪರಿಪೂರ್ಣವಾಯಿತು ಅವರಿಗೆ ಹರಿಯೇ
ದುರುಳರು ಕೋರಿದ ಪುರುಷಾರ್ಥವು ಈಗ
ಇರುಗೊಡರು ಎನ್ನ ಕರವಿಡಿದು ತಮ್ಮ
ಅರಸಿಗೆ ಒಯ್ದು ಒಪ್ಪಿಸುವರು ಹರಿಯೆ
ದುರುಳರು ಕೋರಿದ ಪುರುಷಾರ್ಥವು ಈಗ
ಬಿರಿದು ಪರಿಪಾಲ ವಿಜಯ ವಿಠ್ಠಲ ಪೂರ್ಣ
ಶರಣರ ಪರರಿಗೆ ಕೊಡದಿರು ಹರಿಯೆ ೩

ಝಂಪೆ ತಾಳ

ರೋಮ ರೋಮಾದ್ಯಂತ ಗರಳ ಲೇಪನವಾಗಿ
ನಾಮವೇರಿತು ನೀಚ ನಾನಾ ವೃತ್ತಿಯಲಿ
ಪಾಮರ ನರನಾಗಿ ಪಾತಕದಲಿ ಬಿದ್ದು
ಕಾಮಾತುರದಲ್ಲಿ ಕಂಡಲ್ಲಿ ತಿರುಗಿದೆ
ಸೂಮಾರ್ಗವನು ಜರಿದು ಸಜ್ಜನರ ತೊರೆದು

ಭೀಮ ಭವಂಗಳು ತೊಲಗದಲೆ ಕಾಡುತಿವೆ
ಕ್ಷೇಮನಾಮನೆ ವಿಜಯ ವಿಠ್ಠಲನೆ ಕರುಣಿಸೊ ೪

ತ್ರಿವಿಡಿ ತಾಳ

ಮಾನುಷೋತ್ತಮ ಜನುಮ ಬಾಹೋದಕ್ಕೆ ಕೇಳು
ಅನಂತ ಪುಣ್ಯ ಸಾಧನವೆ ಬೇಕು
ಮೇಣು ಜನಿಸಿದರು ದೇಹವದು ಸ್ಥಿರವಲ್ಲ
ತಾನು ಅನಿತ್ಯವಾದರು ಮಹಫಲವನೀವುದು
ಜಾಣನೆ ತನು ವ್ಯರ್ಥವಾಗಿ ಪೋಗದಂತೆ ರಕ್ಷಿಸು
ಪ್ರಾಣ ತನುಮನದೊಡಿಯ ವಿಜಯ ವಿಠಲ ನಿಧಿ
ಮಾನುಷೋತ್ತಮ ಜನುಮ ಬಾಹೋದಕ್ಕೆ ಕೇಳು ೫

ಅಟ್ಟ ತಾಳ

ಸಕಲ ದುರುಳ ಮಹ ಇಂದ್ರಿಯಂಗಳ
ನಿಕರವು ನಿನ್ನ ವಶಗಳಲ್ಲವೇ?
ಮಕರತನವಾದ ಕಕ್ಕಸದ ಬಲೆಯೊಳು
ಸಿಕ್ಕಿ ನೋಡುವುದೇನು ಉಚಿತವೇನ್ಯೆ
ಮಕ್ಕಳಾಟಿಕೆ ಬೇಡ ತಿಮ್ಮಯ್ಯನೆ ಎನ್ನ
ಕಕುಲಾತೆ ಬಿಡಿಸೊ ಕಿಂಕರರೊಳಗಿಡಿಸೋ
ಭಕುತನಾಮಾ ನಮ್ಮ ವಿಜಯ ವಿಠ್ಠಲ ವಿ
ರಕುತಿಯ ಪಾಲಿಸು ಭಕುತಿಲಿ ನಿಲಿಸು

ಆದಿತಾಳ

ಏನಾದರೇನು ಇನ್ನು ಹಾನಿ ವೃದ್ಧಿಗಳಿಗೆ
ನೀನಲ್ಲದೆ ಗತಿಯಿಲ್ಲ ನಾನೀಗ ಸಟಿಯವನಲ್ಲ
ಹೀನಾಯವನು ಕಳೆದು ಜ್ಞಾನವನ್ನು ತೋರಿಸಿ
ನೀನೆಂಬುವುದು ತಿಳುಹಿ, ಆನಂದ ಮತಿ ಕೊಡುವುದು

ಸ್ಥಾಣುವೆ ನಾಮ ನಮ್ಮ ವಿಜಯ ವಿಠ್ಠಲರೇಯ
ಧೇನು ಭಕ್ತರಿಗೆ ನೀನಲ್ಲವೆ ಕರದುಂಬವ ನಾನಲ್ಲವೆ
ಧ್ಯಾನದಲ್ಲಿ ನಿಂದು, ಮಾನಸ ಪೂಜೆಯಲ್ಲಿ
ಆನಂದವಾಗಿ ಪೊಳೆವುದು, ಹೀನಮತಿಯ ಕಳೆವುದು ೭

ಜತೆ

ಕೀರ್ತಿ ಅಪಕೀರ್ತಿ, ನಿನ್ನದು ಕಾಣೊ ದೀಪುತ
ಮೂರ್ತಿ ವಿಜಯ ವಿಠ್ಠಲ ಎನ್ನಾಳುವ ಸ್ವಾಮಿ ೮

೩೩

ಧ್ರುವತಾಳ

ಕಾಯಯ್ಯೋ ದೇವ ಕರುಣಾಪಾಂಗದಲ್ಲಿ ಎನ್ನ
ಕಾಯವೆ ನಿನ್ನದಯ್ಯ ಕಾವನಯ್ಯ
ತಾಯಿ ಇಲ್ಲದ ತರುಳ ಬಾಯಿ ತೆರವ ತೆರ–
ನಾಯಿತಯ್ಯ ಜೀಯಾ ನರನ ಪ್ರೀಯಾ
ಮಾಯಾಸಾಗರ ಅಡ್ಡ ಹಾಯಗೊಡದು ಇದಕು–
ಪಾಯವನು ತೋರಯ್ಯ ಭಕ್ತ ಪ್ರೀಯಾ
ರಾಯ ರಾಯರ ಮಧ್ಯದಲ್ಲಿ ದಾಸರ ಪೊರೆವೊ
ಪಾಯೇತರ ಬಿರುದು ನಿನ್ನದಯ್ಯ
ಛಾಯಗಾರಿಕೆಯಿಂದ ದುಷ್ಟಗ್ರಹಗಳ ಸಮು
ದಾಯ ಪೀಡಿಸಿ ಭಯಾ ತೋರುತವೇನಯ್ಯ
ಓಯೆಂದು ಕರೆವೆ ಪರಕೀಯವ ನಾನಲ್ಲ
ಬಾ ಎಂದು ಪಿಡಿಯೊ ಕಯ್ಯಾ ತರಣಿಕಾಯ
ಶ್ರೀಯಜ್ಞಪತಿನಾಮಾ, ವಿಜಯ ವಿಠ್ಠಲರೇಯ
ನೋಯಾದಂತೆನಗೀಡು ನಿನ್ನ ಪಾದ ಛಾಯ ೧

ಮಟ್ಟತಾಳ

ಬಣಗು ಗ್ರಹಂಗಳೆನ್ನ ಸೆಣಿಸಿ ಒಮ್ಯಾದರು
ಮಣಿಸಲಾಪವೆ ನಿತ್ಯ ಹೆಣಗಾಡಿದರನ್ನ
ಕೊನೆಯ ನಾಲಿಗೆಯಿಂದ ಘಣಿತಲ್ಪನೆ ನಿನ್ನ
ಗುಣಕರ್ಮಭಿಧಾನ ನೆನಿಸಲು ಗ್ರಹಕುಲವೊ
ಕುಣಿ ಕುಣಿದಾಡೆವೊ ಮನೆಯ ಮೂರು ಸುತ್ತ
ಅನುದಿನ ನಿನ್ನ ದಾಸನು ದಾಸನ ಬಳಿಯ
ಅನಿರ್ದೇಶವಪು ನಾಮಾ ವಿಜಯ ವಿಠ್ಠಲನೊಲಿಯೆ
ಬಿನಗು ಬಲ್ಲಿದರಾಶಿ ಮುನಿದು ಮಾಡುವುದೇನೊ ೨

ತ್ರಿವಿಡಿತಾಳ

ಬಲವೆ ಬಲವೆ ನಿನ್ನ ಬಲ ಒಂದುಳ್ಳಾರೆ
ಕಲಿ ಮೊದಲಾದ ದುರುಳ ಗ್ರಹಗಳು ನಿತ್ಯ
ಬಲವೆ ಸಾಲದೆ ಪೋಗಿ ಬಲು ಶ್ರಮವಾದರು
ಅಳುಕೆನೊ ಈ ದೇಹ ಇಳಿಯೊಳಿಪ್ಪ ತನಕ
ಕಳವ ಮಾಡುವರಿಗೆ ಒಳಗೆ ನಿರೂಪಿಸಿ
ಹಲಬರರಿಯದಂತೆ ಉಳ್ಳ ನೃಪನ ತೆರದಿ
ಬಲು ಬಲ್ಲಿದ ಗ್ರಹಕುಲದಲ್ಲಿ ಒಳಗೆ ನಿಯಾಮಕನಾಗಿ
ಅಳಲಿಸಿ ಅವರಿಂದ, ನೆಲೆಯ ಇತ್ತೆನಿಸಿದ
ಕುಲದೈವ ಪ್ರಗ್ರಹ ವಿಜಯ ವಿಠ್ಠಲ ನೀನೆ
ನೆಲೆಯಾಗಿ ಗ್ರಹದಿಂದ ಕೊಲಿಸಲು ನಾನಂಜೆ ೩

ಅಟ್ಟತಾಳ

ಗ್ರಹಗಳ ಮ್ಯಾಲನುಗ್ರಹವ ಮಾಡದಲಿರು
ಮಹಿಯೊಳಗುಳ್ಳ ಗ್ರಹಾದಿಗಳೆನ್ನ ನಿ-
ಗ್ರಹ ಮಾಡಲಾಪವೆ, ಸಹವಾಸದಲಿಯಿದ್ದು
ಬಹುಕಾಲದಲಿಂದ ಗಹಗಹಿಸಿದರೆನ್ನ
ಮಹಾ ತೈಜಸ ನಾಮಾ ವಿಜಯ ವಿಠ್ಠಲ ನೀನೆ
ಗ್ರಹಗಳಿಗೆ ಪ್ರೇರಿಸಿ ಪರಿಹರಿಸುವೆ ಎನ್ನ ೪

ಆದಿತಾಳ

ಹರಿಣೀ ಬ್ಯಾಟೆಗಾರ ಮರೆಮಾಡಿಕೊಂಡು ಪೋಗಿ
ಗುರುತನೆ ತೋರದಂತೆ ಗುರಿ ಎಸೆದು ನೋಡುವವನ
ಪರಿಯಾಗಿ ಗ್ರಹಾಂತರ್ಯಾಮಿ ಇದ್ದು ಶ್ರಮ
ಹರಿ ಬಿಟ್ಟು ನೋಡಿ ನಗುವ ಪರಮ ಮಾಯದ ದೈವ
ಅರಿಯಾದವರೊ ದಿನಚರಿಯ, ಮಿಕ್ಕಾದ ಬಲ
ಬರಿದೆ ಸಾಲದು ಎಂದು ಮರುಳಾಗುವರು ಮನಸಿನಲ್ಲಿ
ಸುರಲೋಲ ಮಹಧೃತಿ ವಿಜಯ ವಿಠ್ಠಲ ಸಮ
ಸ್ತರ ಒಳಗೆ ಹೊರಗೆ ನೀನೀಪರಿ ವ್ಯಾಪಕನೆ ೫

ಜತೆ

ಏನಿದ್ದ ಪ್ರಾರಬ್ಧ ಉಣಿಸಿ ಕಡೆಗೆ ಕಾಯೊ
ಪ್ರಾಣದೊಲ್ಲಭ ನಾಮಾ ಎನ್ನ ಪ್ರಾಣ ವಿಜಯ ವಿಠ್ಠಲ ೬

೩೪

ಧ್ರುವತಾಳ

ಕಾಲ ಬಿಡುವನೆ ಹರಿ ಕಾಲಯವನ ವೈರಿ
ಕಾಲವೇನಿದೆ ಕಾಲವಿಲ್ಲ
ಕಾಲ ಕಾಲಕೆ ಕಲಿಕಾಲದೊಳಗೆ ನೀ ಸೋ–
ಕಲದರಿಂದ ಶೋಕಾಲಯ ಪರಿಹಾರ
ಕಾಲನ ಬಳಿಗಾನು ಕಾಲಂದಜಮಿಳನ
ಕಾಲ ಪಾಶವ ತೆಗೆದ ಕಾಲ ಪುರುಷ
ಕಾಲ ಕಾಲಕ್ಕೆ ಖಳ ಕಾಲನಾಗಿ ಬರಲು
ಕಾಲವರಿದೆ ಭಜಕಲೋಲ ದೇವ
ಕಾಲನಾಮಕ ತ್ರಿಕಾಲ ಪ್ರೇರಕ ಪಂ
ಕಾಲಯದೊಳು ಹಾಕಲಾಗದು ದೇಶ
ಕಾಲ ಪರಿಪೂರ್ಣ ವಿಜಯವಿಠ್ಠಲಂತ್ಯ
ಕಾಲಕ್ಕೆ ನಿನ್ನ ಸ್ಮರಣೆ ಕಾಲ ಕಳೆಯದೆ ನೀ ಈಯೊ ೧

ಮಟ್ಟತಾಳ

ಹರಿ ನಿನ್ನ ಶರಣ ವರ ವಚನಂಗಳು
ಧರಿಯೆಲ್ಲ ಕರಗಿದರು ಕರಗದ ಬಲವೇನು
ದುರಿತರಾಶಿ ಎಂಬೊ ಗಿರಿಯ ನಿಕರಕ್ಕೆ
ಸರಸವೆ ವಜ್ರದ ಮುರುಕಿನ ಕೊಡಲೀ
ಹರಿ ನಿನ್ನ ನಂಬಿದ ಶರಣರಿಗೆ, ಕಾಳೋರಗನು ಸೋಕಿದರೆ
ವರ ಸುಧೆಯಾಡುವುದು, ಶರಣರ ಪರಿಪಾಲ
ಶರಣ ರಕ್ಷಾಮಣಿ ವಿಜಯ ವಿಠ್ಠಲ ನಿನ್ನ
ಚರಣದುಂಗುಟ ನಖದ ದರುಶನ ಲಾಭವೊ ೨

ತ್ರಿವಿಡಿ ತಾಳ

ಸತ್ಯ ಸಂಕಲ್ಪ ವಿಷ್ಣು ವಿನಹಾ ಇಲ್ಲೆಂದು
ಸತ್ಯವಾಗಿ ತಿಳಿದು ನಿನ್ನ ಚರಣ
ಸತ್ಯಮಾಳ್ಪರ ಶುದ್ಧ ಭಕುತಾಪಾರರಿಗೆ
ಭೃತ್ಯ ಬಂದು ನೆಂಟತನ ಬಳಸಿ ಅವನ
ನಿತ್ಯವಾಶ್ರೈಸಿಕೊಂಡು ಇಪ್ಪುದಯ್ಯ
ಕಾತ್ಯಾಯಿನೀ ತನ್ನ ಗುರುವಿನಿಂದಲಿ ಕೇಳಿ
ಕೃತ್ಯರ್ಥಳಾದ ತೆರದಿ ನಾನು ಇಂದು
ಅತ್ಯಂತವಾಗಿ ನಿನ್ನವರಿಂದಲಿ ಕೇಳಿ
ಸತ್ಯವೆಂದರಿದು ಸೇರಿದೆ ನಿನ್ನಡಿ
ದೈತ್ಯರ ಮಹಯೋಗಿ ವಿಜಯ ವಿಠ್ಠಲರೇಯ
ಮುತ್ಯನ್ನ ಪಾಲಿಸಿದ, ಮೂಲ ಪುರುಷನೆ ೩

ಅಟ್ಟತಾಳ

ಹರಿಶರಣನಾಗಿ ಚರಿಸುವ ಮಾನವ
ಇರಲು ಕಾನನದೊಳು ಪುರವಾಗಿ ತೋರುವುದು
ಸುರಿವ ತರಿಗೆಂಡ ವರುಷವಾದರು ಪೂ
ವರುಷವಂದದಿ ಬಲು ಹರುಷವಾಗುವುದು

ಹರಿಶರಣರ ನಿರಾಕರಿಸಿದ ಮಾನವ
ಸುರಿವ ಪೂಮಳೆಯೊಳು ಇರಲು ದಹಿಸಿ ತನ್ನ
ಹರಣವಳಿಯೆ ಪೋಪ ಸ್ಥಿರವೆನ್ನಿ ಸ್ಥಿರವೆನ್ನಿ
ಶರಭಂಜ ಸೌಂವರ್ತಿ ವಿಜಯ ವಿಠ್ಠಲ ಕೀರ್ತಿ
ಪರನೆ ಎಂದಿಗಾದರು ನಿನ್ನ ಬಿಡೆನೊ ೪

ಆದಿತಾಳ

ನಿನ್ನ ಚರಣವನ್ನು ನೆನಸದವನ ದಿನ ದಿನದಲಿ
ಅನ್ಯ ರಿಪು ಆವನ್ನ ಮೊಗವನ್ನು ನೋಡೆ ಮಾತನ್ನಾಡೆ
ಎನ್ನ ವ್ರತ ಇನ್ನಿತುಂಟು ಅನ್ಯಥವನ್ಯತ್ರವಿಲ್ಲ
ರನ್ನ ಪಾದವನ್ನು ತೋರಿ ಚನ್ನಾಗಿಡು ಚನ್ನ ನಾಥ
ಸಣ್ಣ ಮನವನ್ನು ಕೊಡದೆ ಮನ್ನಿಸೆನ್ನ ನಾರಾಯಣ
ಘನ್ನ ನಾಮ ವಿಜಯ ವಿಠ್ಠಲಾ
ಪನ್ನಗಾಶನ್ನ ಗಮನ ೫

ಜತೆ

ನಿತ್ಯ ಕೃತು ನಿನ್ನಂಘ್ರಿ ಕಾಣುವಂತೆ ಮಾಡು
ಕೃತ ಕೃತ್ಯ ನಾಮ ವಿಜಯ ವಿಠ್ಠಲ ಪೊಳೆದು ೬

೩೫

ಧ್ರುವತಾಳ

ಕೊಡು ನಿನ್ನವರ ಸಂಗ ಕೆಡಿಸದಿರಲೊ ರಂಗ
ಪೊಡಮಡುವೆ ದುರಿತಭಂಗ ಕಡುಕಾರುಣ್ಯಾಪಾಂಗ
ಪಿಡಿ ಕರ ಮಂಗಳಾಂಗ ನುಡಿದವರಂತರಂಗ
ಬಿಡದೆ ಹೃದಯಾಬ್ಜ ಭಂಗ ಬಿಡಿ ಬೀಸದಲೆ ತುಂಗ
ಧೃಢವುಳ್ಳ ನರಶಿಂಗ ನಡೆಸು ಭಕ್ತಿ ತರಂಗ
ಎಡೆಗೆಡಿಸುವರ ಭಂಗ ತಡಿಗಡಿಯೊ ವಿಹಂಗ
ಮೃಡ ಸುರೇಶ ಅನಂಗರೊಡಲೊಳಗಿಪ್ಪ ಲಿಂಗ

ಕುಡಿಸು ಸುಧಾಪಿಶಂಗ ಉಡೆಗೆಯಲಿಪ್ಪರ ಧಾಂಗ
ಪಿಡಿದ ನಿತ್ಯ ನಿಸ್ಸಂಗ ಕಡುತೇಜಾ ಉತ್ತುಮಾಂಗ
ಒಡವಾರಿಗಂಗ ಸಂಗ ವಿಜಯ ವಿಠ್ಠಲ ರಂಗ
ಕೊಡು ನಿನ್ನವರ ಸಂಗ ಕೊಡು ನಿನ್ನ ವರ ಸಂಗ ೧

ಮಟ್ಟತಾಳ

ಸ್ನಾನವನು ಒಲ್ಲೇ ಮೌನವನು ಒಲ್ಲೇ
ಮಾನವನು ಒಲ್ಲೇ ದಾನವನು ಒಲ್ಲೇ
ಧ್ಯಾನವನು ಒಲ್ಲೇ ಗಾನವನು ಒಲ್ಲೇ
ನಾನಾ ಯಾಗ ಪುರಾಣಗಳು ಒಲ್ಲೇ
ಏನೇನು ಚರಿಸುವ ಶ್ರೇಣಿ ಕರ್ಮಂಗಳು
ನಾನೊಲ್ಲೆನು ಜೀಯಾ ಮಾನವೆ ಒಂದುಂಟು
ಶ್ರೀನಾಥನೆ ನಿನ್ನಾರ್ಚನೆ ಮಾಡುವಂಥ
ಜ್ಞಾನಿಗಳ ಪಾದರೇಣು ಎನಗೆ ಒಮ್ಮೆ
ಮಾಣದೆ ಸೋಕಿದರು ಅನಂತ ಜನುಮದ ಸಾ
ಧನ ಫಲವೆ ಎಂದು ಅನಂತ ಶೃತಿಯಲ್ಲಿ
ಈ ನುಡಿ ಸಿದ್ಧವಿದೆ ಸಿದ್ಧವಿದೆ ದೇವ
ಶ್ರೀನಿವಾಸ ವಿಜಯ ವಿಠ್ಠಲ ಇಂದೆ ನಿ
ರ್ವಾಣ ಕರುಣಿಸಲು ನಾನದು ಹಂಬಲಿಸೆ ೨

ತ್ರಿವಿಡಿ ತಾಳ

ಕ್ಷೇತುರ ಉತ್ತಮದಲ್ಲಿ ಜನಿಸಿ ನಿರ್ಮಳ ಕಾಲ
ಗೋತುರನಾಗಿ ಸತಿ ಅನುಕೂಲದಿ
ಪಾತಕರೊಳಗೆ ಇಪ್ಪ ಬಹುಕಾಲದಲಿ ತನ್ನ
ನೇತುರ ಕರ್ಣ ಶ್ರೋತುರ ನಾನಾಸರ್ವ
ಗಾತುರ ಹರಿ ಸೇವಿಗೆ ತಿಳಿದು ಒಪ್ಪಿಸುವ ಪ
ವೀತುರ ಮನಸಿನಲಿ ಇಪ್ಪ ಪಾಪ ರಾಶಿಯ
ಕಾತುರವಳಿದು ಕಂಡಕಡೆ ತಿರುಗದೆ
ಮಾತುರ ವ್ಯರ್ಥವೆನದೆ ಎಂದೆಂದಿಗೆ ದೇವ

ಮಾತುರಪಿತುರ ಭ್ರಾತ ನಾನಾಕುಲ ವರ್ಗ
ಮೃತರ ಪರಿವಾರ ಪರಮ ಮಂಗಳ ಪುತ್ರ ಕ
ಳಾತುರ ಈ ವಿಧವೆಲ್ಲ ಹರಿಯಿತ್ತದೆಂದರಿದು
ಸ್ತೋತುರ ಮಾಡುತ ಮುದದಿಂದ ಪ್ರತಿದಿನ
ಆತುರದಿಂದಲಿ ಕೂಗಿ ಭಕುತಿಯಿಂದ
ಪ್ರಾತುರದಿ ತೊರೆಯದೇ ಸುತ್ತಲಿದ್ದವರ ಪು
ನೀತರನೆ ಮಾಡುವ ಪೂರ್ಣವಾಗಿ
ಗೋತುರಧರ ನಮ್ಮ ವಿಜಯ ವಿಠ್ಠಲ ಅಣು
ಮಾತುರ ನಿನ್ನ ಬಿಡದವರ ಸಂಗವಾಗಲಿ ೩

ಅಟ್ಟತಾಳ

ಕ್ಷಣ ಒಂದರೊಳು ಗಣನೆ ಇಲ್ಲದ ತೀರ್ಥ
ಕ್ಷಣ ಒಂದರೊಳು ಗಣನೆ ಇಲ್ಲದ ಯಾತ್ರಿ
ಕ್ಷಣ ಒಂದರೊಳು ಗಣನೆ ಇಲ್ಲದ ದಾನ
ಕ್ಷಣ ಒಂದರೊಳು ಗಣನೆ ಇಲ್ಲದ ನಾನ
ಅನುಪಮವ್ರತಗಳು ತನಗೆ ತಾನೆ ಬಂದು
ಮನೋಹರವಾಗುವವು ಅನುದಿನ ಬಿಡದಲೆ
ಮನುಜನಾಭನೆ ನಿನ್ನ ನೆಚ್ಚಿದಾಳಿನ
ಮಿನಗುವ ಚರಣ ಕೊನೆ ಧೂಳಿ ಸೋಕಲಾ
ವನೆ ಬಲು ಧನ್ಯ ಬಲುಧನ್ಯನೋ
ಅನಿಮಿತ್ಯ ಬಂಧು ಶ್ರೀ ವಿಜಯ ವಿಠ್ಠಲ ನಿನ್ನ
ಮನಸಿಗೆ ಬಂದ ದಾಸ ಮಹಿಮೆಯಿಂತೊ ೪

ಆದಿತಾಳ

ಹಲವು ಅಪೇಕ್ಷಿಸಿ ಹಲುಬುವುದ್ಯಾತಕೆ
ಫಲ ಮುಂದಿರಲು ನಭ ತಳವ ಅರಿಸಿದಂತೆ
ಸುಲಭ ಸಾಧನ ತನ್ನ ಬಳಿಯಲ್ಲಿ ಇರಲಿಕ್ಕೆ
ನೆಲಗಾಣೆನೆಂದು ಗಾತ್ರ ಬಳಲಿಸಿ ಕೊಂಡು ವ್ಯರ್ಥ
ಅಳಲಿ ತೊಳಲಿ ನಿತ್ಯ ಕಳೆಗುಂದಿ ಪೋಗುವುದೆ

ತಿಳಿದು ಈ ಪರಿ ಹಂಬಲಗೊಂವುಬುವದೇನೊ
ನಿಲವರ ಪೇಳು ಎನ್ನಾಮಲ ಮನಸಿಗೆ ಇಂದು
ಬಲುಧಾವಂತಿ ಬಟ್ಟರು ಸಲುವದೆ ಗತಿಮಾರ್ಗ
ಚಲುವ ದೇವರ ದೇವ ವಿಜಯ ವಿಠ್ಠಲ ನಿನ್ನ
ನೆಲೆಬಲ್ಲವರ ಪಾದರಜ ಭವ ಹಾರ ೫

ಜತೆ

ಇದೆ ಇದೆ ಕರುಣಿಸು ಎನಗೆ ನಿರುತದಲ್ಲಿ
ಯದುಪತಿ ವಿಜಯ ವಿಠ್ಠಲರೇಯ ನೀನೊಲಿದು ೬

೩೬

ಧ್ರುವ ತಾಳ

ಚರಣವ ನಂಬಿದೆನೊ ನಂಬಿದವರ ಪ್ರಾಣ
ಕರುಣವ ಮಾಡಯ್ಯ ಕಲ್ಮಷ ಬಿಡಿಸಯ್ಯ
ಹರಣ ನಿನ್ನದು ಸ್ವಾಮಿ ಹಗಲಿರುಳು ಎನ್ನ
ಕರಣಶುದ್ಧನ ಮಾಡು ಕಮಲನಾಭಾ
ಮರಣಕಾಲಕೆ ಈ ಜಿಹ್ವಾಗ್ರದಲಿ ನಿನ್ನ
ಸ್ಮರಣೆಯೊಂದೊದಗಲಿ ಈ ಭಾಗ್ಯವೆ ಸಾಕು
ಚರಣವ ನಂಬಿದೆನೊ ತರಣಿಯುದ್ಭವಿಸಲು ತಿ
ಮಿರ ನಿಲ್ಲುವದೇನೊ? ಹರಿಣಾಂಕನುದಿನ ತಾಪವಿರಬಲ್ಲುದೆ?
ಗರುಣಾವಸ್ಥನಾರಿ ಪತಿಯ ಬಯಸುವುದು
ಧರಣಿಯೊಳಗೆ ಅಪಹಾಸವಹುದೇ?
ಕರುಣಾಕರ ಸರ್ವಾಭರಣ ಭೂಷಿತ ಭವ–
ತರಣ ತ್ರಾಹಿ ತ್ರಾಹಿ ತೇಜೋ ಮಯನೆ
ವರುಣನಾಮಕ ನಮ್ಮ ವಿಜಯ ವಿಠ್ಠಲ ನಿನ್ನಾ
ಚರಣೆ ಮಾಡುವ ಚಿತ್ತ ನಿರ್ಮಲಿನ ಮಾಡು ೧

ಮಟ್ಟತಾಳ

ಈ ಚರಣವ ಭಜಿಸಿ ಚತುರ ಮುಖಾದಿಗಳು
ಪ್ರಾಚೀನ ಕರ್ಮಕಳಕೊಂಡು ಭವದಾ
ಲೋಚನೆಯನು ಗೆದ್ದು ಸುಖಿಸುವರು ನೋಡು
ವಾಚ ಮಾತುರವಲ್ಲ ವೇದ ವೇದಾಂತದಲಿ
ಸೂಚನೆಯನು ಕೇಳಿ ಮೊರೆಹೊಕ್ಕೆನಯ್ಯ
ಕೀಚಕಾರಿ ಪ್ರೀಯ ವಿಜಯ ವಿಠ್ಠಲ ನಿನ್ನ
ಶ್ರೀ ಚರಣವ ತೋರಿಸಿ ಪ್ರಕೃತಿಯ ಬಿಡಿಸುವುದು ೨

ತ್ರಿವಿಡಿ ತಾಳ

ಅಪ್ರಾಕ್ಕತ ಚರಣ ಆತ್ಮ ಕಾಮಚರಣ
ಸ್ವಪ್ರಕಾಶ ಚರಣ ಸ್ವರತ ಚರಣ
ಸುಪ್ರಸನ್ನ ಚರಣ ಸದ್ಗುಣ ಗಣ ಚರಣ
ಕ್ಷಿಪ್ರವರದ ಚರಣ ಕ್ಷೇಮ ಚರಣ
ಸುಪ್ರಸಿದ್ಧ ಚರಣ ಸುಜನವಂದಿತ ಚರಣ
ಅಪ್ರಬುದ್ಧರ ಉದ್ಧರಿಸುವ ಚರಣ
ಸುಪ್ರಸಾದ ಚರಣ ಸುಮನೋಹರ ಚರಣ
ಅಪ್ರತೀಕಾಚರಣ ಅವತೀರ್ಣ ಚರಣ
ಅಪ್ರತಿಹತ ಚರಣ ಅಮಲ ಕೋಮಲ ಚರಣ
ಸುಪ್ರೀತ ಚರಣ ಸ್ವಾತಂತ್ರ ಚರಣ
ವಿಪ್ರಕುಲಾಗ್ರಣಿ ವಿಜಯ ವಿಠ್ಠಲ ನಾ
ನಾ ಪ್ರಕಾರದಲಿ ಎನ್ನ ಕಾವ ಚರಣ ೩

ಅಟ್ಟತಾಳ

ಆ ಹನುಮನ ನೋಡು ಅಂಬರೀಷನ ನೋಡು
ಪ್ರಾಹಲ್ಲಾದನ ನೋಡು ಪುಂಡರೀಕನ ನೋಡು
ಅಹಲ್ಯಾದೇವಿಯ ನೋಡು ಶುಕನ ನೋಡು ಶ್ವೇತ
ವಾಹನವ ನೋಡು ಧ್ರುವರಾಯನ ನೋಡು
ಮಹಿಪತಿ ಬಲಿ ನೋಡು ಗಂಗಾಸುತನ ನೋಡು

ಶ್ರೀಹರಿ ನಿನ್ನಯ ಶ್ರೀ ಚರಣ ವಾರಿ
ರೂಹ ನೆರೆನಂಬಿ ಭವ ಹಾರಿದರಯ್ಯ
ಅಹೋರಾತ್ರಿ ಎನಗಿದೆ ಗತಿಯೆಂದು ನಂಬಿದೆ
ಸ್ನೇಹ ಭಾವವಿತ್ತು ಭಕ್ತರೊಳಿಡು ನಿತ್ಯ
ಬಹುಲೀಲ ವಿಜಯ ವಿಠ್ಠಲರೇಯ ಇಂದು ಸ
ನ್ನಿಹಿತನಾಗಿ ನಿನ್ನ ಚರಣವ ತೋರಿಸು ೪

ಆದಿತಾಳ

ವ್ಯಾಪ್ತ ಚರಣ ದೀಪ್ತ ಚರಣ
ಆಪ್ತ ಚರಣ ಗುಪ್ತ ಚರಣ
ಪ್ರಾಪ್ತ ಚರಣ ನಿರ್ಲಿಪ್ತ ಚರಣ
ತೃಪ್ತ ಚರಣ ಕ್ಲುಪ್ತ ಚರಣ
ಶಪ್ತ ಚರಣ ಗೋಪ್ತ ಚರಣ
ಸುಪ್ತರಹಿತ ಚರಣ ಚರಣ ಈ ಚರಣ
ಜಪ್ತರ ಮನದಲ್ಲಿಪ್ಪ ಚರಣ
ಸಪ್ತ ಸಪ್ತ ಲೋಕೇಶ ವಿಜಯ ವಿಠ್ಠಲರೇಯ ಸಂ
ತಪ್ತ ಕಾಂಚನ ವರ್ಣ ಚರಣ ೫

ಜತೆ

ಅನಿಮಿತ್ತ ಬಂಧು ನಿನ್ನ ಚರಣವೆ ಗತಿ ಎನಗೆ
ಕೊನಿಗೆ ಧ್ಯಾನವ ಕೊಡೊ ವಿಜಯವಿಠ್ಠಲ ಮೂರ್ತಿ ೬

೩೭

ಧ್ರುವತಾಳ

ಚರಣವ ಬಿಡೆನೊ ಹರಿ ಚತುರ ಮೊಗದ ಧೊರಿ
ಪೊರಿಯೊ ಪರಿಪೂರ್ಣ ಭಕುತಿ ಕರುಣಿಸು ಶುಭಮತಿ
ಮರೆಯಾ ಬಿದ್ದವಗೆ ಶುದ್ಧ ಮರಿಯಾದೆ ಬಂದು ಕಾಣಿಸೊ
ಮರೆಯದೇ ನೀನಿರು ಸರಸಿಜ ಹೃದಯದಲ್ಲಿ

ಮರಿಗಳ ಮರೆಯೆ ನಾನು ಅರಿಯೇನೊ ಮತ್ತಾರನ್ನ
ಕರುಳ ಸಮ್ಮಂಧಿಗನಯ್ಯ ವರನರ ಕೇಸರಿಕಾಯ
ತರಳನ ರಕ್ಷಿಸಿದ ಪರಿ ಭರದಲ್ಲಿ ಕಾಯೊ ಮುರಾರಿ
ಪರೇಶ ಯಜ್ಞಾಂಗ ನಾಮ ವಿಜಯ ವಿಠ್ಠಲ ಸೋಮ ೧

ಮಟ್ಟತಾಳ

ಭೂಸುರ ಜನುಮ ಪಾಲಿಸಿದೆ ಎನ್ನೊಡೆಯಾ
ಈ ಶರೀರ ನಿನ್ನ ದಾಸರ ಪದಕೆ ಪಾಯಿ
ಪೋಸು ಮಾಡಿದರೂ ಋಣಾ ಸಲ್ಲಿಸುವೆನೆ?
ಕೇಶವ ನೀನುದ್ಧರಿಸುವ ಸೊಬಗು ವಾ
ಣೀಶಾದ್ಯರು ಎಣಿಸ ಬಲ್ಲರೇನು
ವಾಸುಕಿಶಯನ ಪ್ರಕಾಶ ವಿಜಯವಿಠ್ಠಲ
ನೀ ಸರುವೋತ್ತಮನು, ನಿ ಸರುವೋತ್ತಮನು ೨

ತ್ರಿವಿಡಿ ತಾಳ

ಒಂದೆ ಗುಣವೆ ನಿನ್ನದಾನಂತ ವಾಗಿವೆ
ಒಂದೊಂದರೊಳು ನೋಡಲಾನಂತವಾಗಿವೆ
ಎಂದಿಗೆಂದಿಗೆ ಅಂದುಳ್ಳ ಗುಣಗಳು
ಬಂದಾರಭ್ಯವಾನಂತರ ಪರಿಗಣಿಸಲು
ಹಿಂದೆ ಇಂದು ಮುಂದೆ ಪುಟ್ಟುವ ಜೀವನ
ಸಂದೋಹವೆಣಿಸಿ ಇಷ್ಟೆಂದು ಪೇಳಲಾರಾರೊ
ಅಂದವಗೊಲಿವ ಪ್ರಭುವೆ ವಿಜಯವಿಠ್ಠಲ
ತಂದೆಯಾಗಿ ಸಕಲಂದಾವನೀವೆ ೩

ಅಟ್ಟ ತಾಳ

ಎಂಥ ದಯವಂತ, ಎಂಥ ಬಲವಂತ
ಎಂಥ ಗುಣವಂತ ಎಂಥ ಕೀರ್ತಿವಂತ
ಎಂಥ ನಿಜವಂತ ಎಂಥಾ ಸ್ವಾತಂತ್ರ

ಎಂಥ ಸ್ವರೂಪವು ಎಂಥ ಮೋಹನವು
ಎಂಥವರೊಳಗಿದ್ದ ಎಂಥ ಪುರುಷನು
ಪಂಥಗಾರ ನಿನ್ನ ಪಂಥ ಬಲ್ಲವರಾರು ಅ–
ನಂತರೂಪ ಸಿರಿ ವಿಜಯ ವಿಠ್ಠಲ ಶೌರಿ ೪

ಆದಿತಾಳ

ನೀನು ಕೊಟ್ಟ ಪದವಿ ಕೃ
ಶಾನುನೇತ್ರ ತೆಗೆಯಬಲ್ಲನೆ
ಏನೆಂಬೆ ನಿನ್ನ ದೈವತನಾವನು
ನಾನವಲ್ಲಿ ಕಾಣೆ ಕಾಣೆ ದಶಾ
ಕೋಣೆ ವಿಕೋಣೆಯಲ್ಲಿ ಬಾಣ
ಜಾನವನ ಹರಣವನು ಹಾನಿ ಮಾಡಿದ ದಾನವಾರಿ
ದೀನಪಾಲ ವಿಜಯವಿಠ್ಠಲ ವೃಕ್ಷ
ಸ್ಥಾನವಾಗಿ ನೀನಿರಲು ನಾನು ನಿತ್ರಾಣನಾಗಲ್ಯಾಕೆ ೫

ಜತೆ

ಪಿಡಿದೆ ನಿನ್ನ ಚರಣಾ ಪೀಡಿಸುವ ಕರ್ಮಾ
ಕಡಿದು ಪಾಲಿಸುವುದು ನಿಧಿ ವಿಜಯ ವಿಠ್ಠಲ ಕರ್ತ ೬

೩೮

ಧ್ರುವತಾಳ

ಚಿಂತೆ ವೆಗ್ಗಳಿಸಿತು, ಚಿನ್ಮಾತುರ ಸಿರಿ
ಕಾಂತ ನಿನ್ನಯ ಪಾದಕ್ಕೆ ನಮೋ ನಮೋ
ಅಂತಿಕಾಂತಿಕವಾಗಿ, ಕಾಲಬಂದಿದೆ ನಾ–
ನೆಂತು ಉಸುರಲಿ ನೋಡಿ ನೋಡಿ
ಸಂತತ ಬಾಳಿದೆನೊ, ಜ್ಞಾನ ಭಕುತಿ ಮಂತ್ರ
ತಂತ್ರ ವೈರಾಗ್ಯ ಆಚಾರ ವಿಚಾರವ

ಒಲಿದು ತೆಗೆದುಕೊಂಡು ಭಕುತನಿಗೆ, ಬೆಂ-
ಬಳಿಯಲ್ಲಿ ಇತ್ತು ನಿತ್ಯ ಹೋಣಿಯಾದ ಮ್ಯಾಲೆ, ಕಂ-
ಗಳ ಮೂರುಳ್ಳವನು, ತಡಿಯಾಲಾಪನೆ
ತಲೆ ಕೆಳಗಾಗಿ ಹೊರಳಿದರೆ ಎಂದಿಗೆ ನೀನು
ಸಿಲಕುವನಲ್ಲ ಮೀರಿ ಶಿಲ್ಕಿದರೆ ಓಡಿ
ತೊಲಗುವನಲ್ಲೆಂದು ಸತತ ಅನಂತ ವೇದಾ
ವಳಿಗಳು ಕೂಗುತಿವೆ, ಸುಮ್ಮನಿರದೆ
ಕಲಿಯುಗದಲ್ಲಿ ನಿನ್ನ ನಾಮಾ ಬಂದೊದಗಿದರೆ
ಕಲಿ ಮೊದಲಾದ ಖಳರು ಓಡುವರೂ
ಜಲಜಲೋಚನ ನಮ್ಮ ವಿಜಯ ವಿಠ್ಠಲ ಕೃಷ್ಣ
ಹಲವು ಮಾತೇನು ನಿನ್ನ ಚರಣವ ಬಿಡೆನೊ, ಬಿಡೆನೊ ೧

ಮಟ್ಟತಾಳ

ನಿನ್ನ ನೋಡುವಲ್ಲಿ ಕಾಮವೆ ಎನಗಿರಲಿ
ನಿನ್ನ ಬಿಡೆನೆಂಬೊ, ಲೋಭವೆ ಎನಗಿರಲಿ
ನಿನ್ನ ಚರಣದಲ್ಲಿ ಮೋಹವೆ ಎನಗಿರಲಿ
ನಿನ್ನ ನೆನಸುವಲ್ಲಿ ಮದವೇ ಎನಗಿರಲಿ
ನಿನ್ನ ದ್ವೇಷರ ಕೂಡ ಕ್ರೋಧವೆ ಎನಗಿರಲಿ
ನಿನ್ನ ಕೊಂಡಾಡುವರ ಸಂಗವೆ ಎನಗಿರಲಿ
ನಿನ್ನವನೆಂದೆಂಬೊ, ಕೀರುತಿ ಒಂದಿರಲಿ
ನಿನ್ನ ಕೂಡಾಡುವ ಆಟವೆ ಎನಗಿರಲಿ
ನಿನ್ನ ಹಿತವಾದ ವಂಚನೆ ಎನಗಿರಲಿ
ನಿನ್ನ ಮೂರುತಿ ವಿಜಯ ವಿಠ್ಠಲ ಸಂಪನ್ನ ಪ್ರಸನ್ನ ೨

ತ್ರಿವಿಡಿತಾಳ

ಎತ್ತ ಪೋದರು ಅಂಜೆ ಸುತ್ತಲವರು ಮುನಿದು
ಹತ್ತಿಗರಿಯಾದರೆ ಅಂಜೆ ಅಂಜೆ
ಎತ್ತ ಪೋದರು ಅಂಜೆ ಪಾಪಗಿರಿಗೆ ಅಂಜೆ

ನಿತ್ಯ ಬರುವ ಲಾಭ ಬಾರದಿದ್ದರೆ, ಅಂಜೆ
ಮೃತ್ಯು ತಡೆದರಂಜೆ, ಮಹಾನರಕಕಂಜೆ?
ತುತ್ತು ಸಿಗದಿರೆ ಅಂಜೆ, ತೀವ್ರ ಘೋರಕೆ ಅಂಜೆ
ಚಿತ್ತಾದಲ್ಲಿ ನೀನು ವಾಸವಾಗಿರೆ ಸಾಕು
ಅತ್ಯಂತ ಪುಣ್ಯವಂತನು ನಾನಯ್ಯ
ಭೃತ್ಯರಂಗ ಸಂಗ ವಿಜಯ ವಿಠ್ಠಲರೇಯ
ಎತ್ತಲಾದರು ನಿನ್ನ ಧ್ಯಾನವೆ ಗತಿ ದಾರಿ ೩

ಅಟ್ಟತಾಳ

ಊರಿಂದ ಊರಿಗೆ ಪೋಗುವುದೇ ಲೀಲಿ
ದಾರಿ ಒಕ್ಕರು ವಲ್ಲದೆ ನೀಟು ಉಂಟೇ
ನಾರಾಯಣ ಎನ್ನ ಮನಸ್ಸು ಡೊಂಕಾದರೆ
ಸಾರವಾದ ನಿನ್ನ ಪದ ಸ್ಮರಣೆಯಿಂದ
ಚಾರುವಾಗುವದಯ್ಯ ಚಂಚಲವಿದ್ದರು
ಸೇರುವುದಲ್ಲದೆ ನಿನ್ನ ಬಳಿಗೆ ಬಂದು
ದಾರಿ ಒಕ್ಕರ ವಾಗೆ ಅದರ ಗುಣವೇನೂ
ಊರಿಂದ ಊರಿಗೆ ಹೋಗೋದೆ ಪುರುಷಾರ್ಥ
ಭಾರಿಭಾರಿಗೆ ನಿನ್ನ ನೆನಸುವ ಮಾನವಾ
ಪಾರ ಕರ್ಮಂಗಳು ಮಾಡೆ ಲೇಪನವಿಲ್ಲ
ಸೂರೆ ಭಕ್ತರಿಗೆ ವಿಜಯ ವಿಠ್ಠಲರೇಯ
ನೀರು ಹರಿದು ಡೊಂಕು ಸಾಗರ ಕೊಡೋದು ೪

ಆದಿತಾಳ

ಎಂಥಾದೊ ನಿನ್ನ ದಯ ಅಂತು ಬಲ್ಲವರಾರು
ಶಂತನ್ನನಂದ ನಾನು, ನಿಂತಾಡಿದ ಛಲವೆ
ಸಂತೋಷದಿಂದ ಸಲಿಸಿದ ದನು
ಶಾಂತಕ, ಜಗಧ್ಭರಿತ, ಅಚಿಂತ್ಯಾತ್ಮಕ ನಿತ್ಯ
ಅಂತರಂಗದಿ ನಿನ್ನ ಚಿತ್ತದಲ್ಲಿಟ್ಟವನು

ಎಂತೆಂತು ನುಡಿದಂತೆ ಪಂಥವೆ ಗೆಲಿಸುವೆ
ಚಿಂತಾಮಣಿ ಸರ್ವ ವಿಜಯ ವಿಠ್ಠಲರೇಯ ಏ
ಕಾಂತ ಭಕ್ತರೊಳು ನಿಂತಾಡುವ ಮಹಿಮೆ ೫

ಜತೆ

ಆವಾನುಪತ್ಯವರಿದರಾಗಲಿ ನೀನೆ
ಕಾವಾದೆ ಬಿಡದಿರು ವಿಜಯ ವಿಠ್ಠಲರೇಯ ೬

೪೦

ಝುಂಪೆತಾಳ

ಜನಿಸಿದೆನೊ, ಹಿಂದೆ ಕುಜನರ ಗರ್ಭದಲ್ಲಿ ಭೋ–
ಜನ ಮಾಡಿ ದುರುಳ ವಿಷಯಂಗಳಲ್ಲಿ ಭಾ–
ಜನೆಯಾಗಿ ನರಕಕ್ಕೆ ಯಾತನೆಬಟ್ಟು ರಾ–
ಜನ ಬುದ್ಧಿಯಲ್ಲಿ ಬಲು ಲೇಪನಾಗಿ
ಜನುಮ ಜನುಮ ಜನಿಸಿ, ಆರಂಶ ಪುಣ್ಯ ಸಂ–
ಜನಿಸಿತೊ ನಿನ್ನ ಕೃಪೆಯಿಂದ ನಾನು ದ್ವಿ–
ಜನಕುಲದಲ್ಲಿ ಬಂದೆ ಬಹುಕಾಲ ತಪದಲ್ಲಿ
ಜನುಮ ವಿಜಯ ವಿಠ್ಠಲ ನೀನೆ ಒಲಿದು ಸ–
ಜ್ಜನವೃತ್ತಿ ಪಾಲಿಸೆ ತಾಮಸಕೆ ಅಂಜೆ ಅಂ–
ಜನಾಸುತನ ಮುಂದೆ ಹಾರೊ ಗುಬ್ಬಿಗಳೇ ೧

ಮಟ್ಟತಾಳ

ನಾನು ನನ್ನದು ಎಂದು ನಾನು ನನ್ನದು ಇಂದು
ನಾನು ನನ್ನದು ತಂದು ನಾನು ನನ್ನದು ಬಂದು
ನಾನು ನನ್ನದು ವಸ್ತ ನಾನೆಂಬುದು ಬಿಡದೆ
ನಾನಿಂದಲಿ ಕೆಟ್ಟೆ ನಾನೆಂಬುದು ಬಿಡಿಸೊ
ನೀನೆ ವಿಜಯ ವಿಠ್ಠಲ ೨

ರೂಪಕತಾಳ

ಭೂರುಹದೊಳಗೆ ಪಾವಕ ಪುಟವಾಗಿ
ಬೇರರಸಿ ಆ ಮರ ದಹಿಸುವಂತೆ
ಕ್ರೂರವಾದ ಅಹಂಕಾರ ಗುಣ ಶ–
ರೀರದೊಳಗೆ ಪುಟ್ಟಿ ಎಡೆಗೆಡಿಸಿತಯ್ಯ
ಸೇರಗೊಡದೆ ಪುಣ್ಯದಾರಿಗೆ ಹಾಕದೆ
ವಾರ ವಾರದಲ್ಲಿ ಸುಡುತಲಿವೆ
ಭೂರಿದಕ್ಷಿಣ ನಾಮಾ ವಿಜಯ ವಿಠ್ಠಲ ನಿನ್ನ
ಕಾರುಣ್ಯ ಸೋನಿಯಗರದು ನೋಡೊ ೩

ಧ್ರುವತಾಳ

ಈ ದೇಹದಿಂದಲ್ಲಿ ಕ್ರೋಧವೆ ನಾಶನವು
ಈ ದೇಹದಿಂದಲ್ಲಿ ಸಾಧನ ಸಂಪತ್ತು
ಈ ದೇಹದಿಂದಲ್ಲಿ ಭೇದಾರ್ಥದ ಜ್ಞಾನ
ಈ ದೇಹದಲ್ಲಿ ಪೂರ್ಣ ಬೋಧರ ಮತವಿಡಿಯ
ಸಾಧಿಸುವಂತೆ ನೀ ದಯವನು ಹರಹಿ
ಊದೀರ್ಣ ವಿಜಯ ವಿಠ್ಠಲ ಭಕ್ತ ಕೃಪಾಳು
ಈ ದೇಹ ನಿನ್ನ ನಾಮದಿ ನಾದೊ ನಾದೊ ೪

ತ್ರಿವಿಡಿತಾಳ

ಕರೆದ ಮಾತಿಗೆ ನಿರಾಕರಿಸಿದರೆ ಬಾಯ
ಬೆರಳ ಬೊಬ್ಬಿಯಲಿ ನಿಷ್ಠುರವನೆಬ್ಬಿಸಿ ನಿನ್ನ
ಬರವ ಕಾಣುತಲೇವೆ ಭರದಿಂದ ಈಕ್ಷಿಸಿ
ಚರಣದಡಿಯ ಧೂಳಿ ಶಿರಸಾವಹಿಸಿಕೊಂಡು
ಹೊರಳಿ ಉರುಳಿ ಜನನ ಮರಣಗಳಿಯಾದೆ ತೊ–
ಡರು ಇಡಬಲ್ಲೆನೆ ತೊಂಡ ತೊತ್ತನಯ್ಯ
ಪರಿಗ್ರಹ ವಿಜಯವಿಠ್ಠಲ ನಿನ್ನ ನಂಬಿದೆ
ಪರಿಹರಿಸೊ ಮುಂದೆ ಜನನ ಪಾಶಗಳ ೫

ಅಟ್ಟತಾಳ

ಅಂದ ಬಯಕೆ ನೀನಿಂದು ಸಲ್ಲಿಸದಿರೆ
ಒಂದು ಅಡಿಗಳಿಟ್ಟು ಮುಂದಕ್ಕೆ ಪೋಗುವ
ನಂದವಾದರು ಕಣ್ಣಿನಿಂದಲಿ ನೋಡಿ
ಛಂದವ ಬಿಡುವೆನು ತಂದೆ ತಂದೆ ಗೋ–
ವಿಂದ ವಿಜಯವಿಠ್ಠಲೆಂದಿಗೆಂದಿಗೆ ನಿನ್ನ
ನಿಂದಿರಿಸಿ ಬಿಡೆ ಮಂದರ ಧರನೆ ೬

ಆದಿತಾಳ

ಉತ್ತಮ ಜನುಮಕ್ಕೆ ಬಂದೇನೊ ಎಲೆ ದೇವ
ಕತ್ತಲೆಯೊಳು ದಬ್ಬಿ ಕಷ್ಟವ ಬಡಿಸದೆ
ಚಿತ್ತಶುದ್ಧನ ಮಾಡೊ ಚಿರಕಾಲದಲ್ಲಿ ನಿನ್ನ
ಭೃತ್ಯನೆಂದೆನಿಸಯ್ಯ ವಿಜಯವಿಠ್ಠಲರೇಯ ೭

ಜತೆ

ಗಿರಿಯಾ ಶಿಖರದ ತುದಿಗೆ ಏರಿದೆನೊ ನಿನ್ನ ಮೃದು
ಕರವ ತಾರೊ ತಾರೊ ವಿಜಯವಿಠ್ಠಲರೇಯ ೮

೪೧

ಧ್ರುವತಾಳ

ಜ್ಞಾನಿಯೆ ನಾನಲ್ಲ ದಾನಿಯೆ ನಾನಲ್ಲ
ಸ್ನಾನ ಸಂಧ್ಯಾನದ ಮೌನಿಯೆ ನಾನಲ್ಲ
ನಾನಾ ಉತ್ತಮರ ಸ್ಥಾನದಲಿ ಪೋಗಿ
ನೀನಾಡಿದ ಕಥೆಯನರಿದವನಲ್ಲಾ
ಹೀನ ಯೋನಿಗಳೊಳು ನಾನು ಪ್ರಾಕೃತವಿಡಿದು
ಹಾನಿವೃದ್ಧಿಯ ನಡುವೆ ಬೇನೆಯವನಾಗಿ
ಏನೇನು ಸತ್ಕರ್ಮದಾಚಾರವನ್ನು ಬಿಟ್ಟ

ದೀನನು ನಾನಯ್ಯ ದೀನ ಬಂಧು
ಅನಂತ ಪ್ರದಿಪವರ್ನ ವಿಜಯ ವಿಠ
ಲಾನು ಮಾಡಿದ ಪುಣ್ಯ ಕಾಣೆನೊ ಎಳ್ಳಿನಿತೂ ೧

ಮಟ್ಟತಾಳ

ಪಾತಕದವ ನಾನು ಯಾತನೆಯವ ನಾನು
ಮಾತುಮಾತಿಗೆ ಧರ್ಮವ್ರತ ಮರೆದವನೊ ನಾನು
ಯಾತಕ್ಕೆ ಬಾರದ ಜಾತಿಹೀನನು ನಾನು
ಈ ತೆರದಲಿದ್ದವಗೆ ವಿಜಯವಿಠ್ಠಲ ಸ್ವಾಮಿ
ಪ್ರೀತಿಬಡುವಂಥಾ ನೀತಿಗಳೇನಯ್ಯ ೨

ತ್ರಿವಿಡಿತಾಳ

ಇಂಥ ಮಂದಮತಿಯ ಕರುಣಾಳುಗಳು ನೋಡಿ
ಸಂತರಿಸೀ ಬಲು ಸಂತೋಷವಾಗುವುದೇನೊ
ಚಿಂತಾಯಕ ನಿನ್ನ ನಂಬಿ ಬಿಡದೆ ಪಾದ
ಕ್ರಾಂತನಾದ ಶುದ್ಧ ಭಕ್ತರನ
ಎಂಥವರು ಕಂಡು ಸ್ನೇಹಿತರಾಗುವರು
ಎಂತು ಪೇಳಲಿ ನಿನ್ನ ಮಹಿಮೆಗಳ
ಅಂತಗಾಣೆನೊ ಎಲ್ಲಿ ವಿಜಯವಿಠ್ಠಲನೆ ನೀ
ಶಾಂತ ವೈಕುಂಠನೆ ವೈಷಮ್ಯವಿಲ್ಲದ ದೈವಾ ೩

ಅಟ್ಟತಾಳ

ದರಿದ್ರ ಕುರೂಪಿಯು ಅದುರುಷ್ಟ ವಶದಿಂದ
ಧಾರುಣಿಪತಿ ಕೈವಿಡಿದು ಮನ್ನಿಸಲು
ಧಾರುಣಿಯೊಳಗಿದ್ದ ನಾನಾ ಬಗೆಯವರು
ಊರು ಕೇರಿಯವರು ಮನ್ನಿಪರು
ಭೂರಮಣ ನಮ್ಮ ವಿಜಯವಿಠ್ಠಲ ನಿನ್ನ
ಸೇರಿದವರ ಭಾಗ್ಯವಾರು ಬಣ್ಣಿಪರೋ ೪

ಆದಿತಾಳ

ಸೋತ್ತುಮ ಮಿಕ್ಕಾದವರು ತುತಿಸಿ ವಂದನೆ ಗೈಯಲು
ನಿತ್ಯತೃಪ್ತಿ ನಿನಗೆನಿಸುತ್ತ ಎನ್ನವೆಣಿಸದಿರೋ
ಎತ್ತಿ ಕರ ಮುಗಿವೆ ಉತ್ತರೋತ್ತರಮಾಡು
ರತ್ನಗರ್ಭದೊಡಿಯ ವಿಜಯವಿಠ್ಠಲ ವಿಧಾತೃವಿನುತಾ ೫

ಜತೆ

ಎನಗಲ್ಲಾ ಎನಗಲ್ಲಾ ಆರುಮಾಡಿದ ಮಾನಾ
ನಿನಗೆಂದು ಒಡಂಬಡುವೆ ಈಶ ವಿಜಯವಿಠ್ಠಲಾ ೬

೪೨

ಧ್ರುವತಾಳ

ತಾತ್ಸಾರ ಮಾಡುವೆ ಎನಗಿಂತನೀಚರಲ್ಲಿ
ಮತ್ಸರಿಪೆನು ಎನ್ನ ಸಮಾನಿಕರ ಕೂಡ
ಉತ್ಸಾಹ ಜ್ಞಾನಿಗಳಿಗ ಪಮಾನವಾದರು
ಮತ್ ಶರೀರದಲ್ಲಿದ್ದ ಗುಣಗಳಿವೆ
ಸತ್‌ಸಂಗತಿಗೆ ಮನಸು ಎರಗದು ದುಷ್ಟ ಮ
ಹೋತ್ಸವಲ್ಲದೆ ಲೇಶ ಧರ್ಮವಿಲ್ಲ
ಜೋತ್ಸದೊಳಗೆ ಮಂದಸತ್ತಿಗೆ ನೆಳಲೀಲಿದ್ದು
ತತ್ಸಮಾನಾನಂತೆ ಎನ್ನ ಯುಕುತಿ
ವತ್ಸರದೊಳಗೊಂದು ದಿವಸವಾದರು ಭಕುತ
ವತ್ಸಲ ನಿನ್ನ ಚರಣಧ್ಯಾನ ಮಾಳ್ಪ
ತತ್ಸಮ್ಮಂದಿಗನಾಗಿ ಸಾಧು ಗೋವಿನ ಹಿಂದೆ
ವತ್ಸ ಪೋದಂತೆ ಪೋಗಿ ಸುಖಿಸಲಿಲ್ಲ
ವತ್ಸನಾಭಿ ಎಂಬೊ ಸಂಸಾರದಲ್ಲಿ ಬಿದ್ದು
ತತ್ ಸಮೀಪಕ್ಕೆ ಬಲು ದೂರಾಗುವೆ
ಮತ್ಸ್ಯವತಾರ ಹರಿ ವಿಜಯವಿಠ್ಠಲ ಪುಳ
ಕೋತ್ಸಹವಾಗುವಂತೆ ಪೊಳೆದು ಪಾಪವಳಿಯೊ ೧

ಮಟ್ಟತಾಳ

ಧ್ಯಾನ ಮಾಳಿಪೆನೆಂದು ಮೌನದಲ್ಲಿ ಕುಳಿತು
ಮಾನವರ ಮುಂದೆ ಏನೇನು ಸೋಜಿಗವ
ನಾನು ತೋರಿಸಿ ಕೊಳುತ ನಾನು ಎಂಬುದು ಬಿಡದೆ
ಹೀನ ವೃತ್ತಿಯಲ್ಲಿ ಮಾನವಾಧಮನಾದೆ
ಜ್ಞಾನ ಸುಧೃಡ ಭಕುತಿ ಆನಂದ ವಿರಕುತಿ
ಏನಾದರು ಲೇಶಾ ಕಾಣೆನು ಸರ್ವೇಶಾ
ನೀನೆ ಭಕುತರಾಧೀನವೆಂಬ ಬಿರಿದು
ನಾನಾ ಬಗೆಯಿಂದ ಕ್ಷೋಣಿಯೊಳಗೆ ಇಪ್ಪ
ದಾನುಬಲ್ಲೆನೊ ಸ್ವಾಮಿ ಸಾಣಿ ಪಿಡಿದಾಸುರಿಗೆ
ಅನಂತ ಕಲ್ಪದಲಿ ದಾಸವರ ಕುಲಕೆ ವಿಜಯವಿಠ್ಠಲ ನೀನೆ
ನಾನಪರಾಧಿಗನೊ ಎಣಿಸದಿರವಗುಣವ ೨

ತ್ರಿವಿಡಿ ತಾಳ

ಏಳು ಸಾಗರಕಧಿಕ ಭವಸಾಗರವೆಂಬುದು
ಆಳುದ್ದಗಲ ನೋಡೆ ಪರಿಮಿತಿ ತೋರದು
ಕೇಳುವುದಲ್ಲದೆ ಕಣ್ಣಿಗೆ ಕಾಣಿಸದು
ಹೇಳುವವರೆಲ್ಲ ದಾಟುವದರಿದು
ಬೀಳುವುದಕೆ ಕಿಂಚಿತು ತಡವಾಗದು
ಏಳುವುದಕೆ ಬಲು ದಿವಸ ಬೇಕು
ಆಲಿಸಿ ನೋಡಲು ಅತಿ ಸುಲಭವೆನಿಸುತಿದೆ
ಏಳಲವಲ್ಲವೊ ಗರ್ವವಿರೆ ಪಾ
ತಾಳಕದ್ದುವುದೈ ಸುಳಿಯೊಳಗಿಳುಹಿ
ತಾಳುವುದೆಂತು ನೀನೊಲಿಯದಿರೆ
ಹೋಳಲೆಯಿಂದ ಪೋಗುವದಲ್ಲ ಇದು ಹರಿ
ಗೋಲು ಹಾಕುವುದರಿಂದ ದಾಟುವುದಲ್ಲ
ಸಾಲ ತಿದ್ದುವುದಲ್ಲ ಕಂಡವರನ ಕಾಯ್ದು
ವಾಲಗ ಮಾಡಿ ಹೀಗಳವದಲ್ಲ
ಆಲೋಚನೆ ಮಾಡಿ ಕಳ ಕೊಂಬುವುದಲ್ಲ

ಆಳುತನ ಬಿಗಿವಿಡಿದು ಕೆಡುವುದಲ್ಲ
ಕೋಲಿಲ್ಲದ ಕೋತಿ ದಾಮಯಿಲ್ಲದ ಆವು
ಬಲು ಕಾಣೊ ಭವದ ಸುಖದುಃಖವು
ಚೇಳಿನಾ ಗಾದಿಗೆಯೊಳಗಿಳಿದಂತೆ ಹೀ
ಯಾಳಿಗೆಯಲ್ಲದೆ ಕಟ್ಟಕಡಿಗೆ
ಸೂಳೆ ಶೃಂಗಾರವೊ ಜರೆ ಬರಲವಳಿಗೆ
ಕಾಳೊಂದಾದರು ಕೊಟ್ಟು ಮನ್ನಿಪರೆ
ಕಾಲಗಾಣದ ಸಂಸಾರವೆ ಅನಿತ್ಯ
ನಾಳಿಗೆಂಬೊ ಚಿಂತೆ ತೊಲಗದಿದು
ಪಾಲಸಾಗರ ಶಾಯಿ ವಿಜಯವಿಠ್ಠಲ ನೀನೆ
ಆಳು ಮಾಡಿಕೊಳದೆ ಎನಗಾವ ಗತಿಯಿಲ್ಲ ೩

ಮಟ್ಟತಾಳ

ರತುನ ಬೆಲೆಯ ಹಾಕಿ ಪಲ್ಯವ ಕೊಂಡಂತೆ
ಗತಿಗೆ ಸಾಧನವಾದ ನಿನ್ನ ನಾಮಂಗಳು
ಕ್ಷಿತಿಯೊಳು ಶಾರೆ ತೌಡಿಗೆ ಬೀರಿ ಬಲು ಅನು
ಚಿತ ಕರ್ಮಂಗಳೆಲ್ಲ ಉಚಿತಹುದೆಂದು ನ
ಗುತ ಕಾಲ ಕಳೆವೆನೊ ಉದರಂಭರನಾಗಿ
ಮತಿಭ್ರಷ್ಟ ಮತಿಭ್ರಷ್ಟ ನಾನಯ್ಯ ನಾನಯ್ಯ
ಸತಿಯಿಲ್ಲದವನಿಗೆ ಮೊಮ್ಮಗನಿಹನೆಂದು
ಅತಿಶಯವಾಗಿ ಕೇಳಿದ ಮೂರ್ಖನಂದದಿ
ಕ್ಷಿತಿಯೊಳು ನಾನೊಬ್ಬ ಜ್ಞಾನ ಭಕುತಿ ವಿರ
ಕುತಿ ಯಿಲ್ಲದತಿ ಗತಿಯ ಕೇಳುವೆ ನೋಡು
ಕೃತಿ ಕಾರ್ಯನಾಗಿ ನಿನ್ನನು ಬೇಡಿದರೆ ಮು
ಕುತಿಗೆ ಮಾರ್ಗವೆ ಸರಿ ಅದು ಬಿಟ್ಟು ಧರ್ಮಕ್ಕೆ
ಪ್ರತಿಕೂಲವಾಗಿ ಸಜ್ಜನ ವೃತ್ತಿ ತೊರೆದು ಉ
ನ್ನತ ಕಾರ್ಯದಲ್ಲಿ ಸಂಚರಿಸದೆ ಮದದಲ್ಲಿ
ಪ್ರತಿಕಕ್ಷಿ ನಿನಗಿಲ್ಲ ವಿಜಯವಿಠ್ಠಲ ಶಾ
ಶ್ವತ ಮನದೊಡೆಯನೆ ನಿನ್ನವನೆಂತಾಹೆ ೪

ಆದಿತಾಳ

ಮನದ ಮಲಿನ ತೊಳೆಯದು
ಮನಸಿಜನಯ್ಯ ಕೇಳು
ತನುವೆ ನಿನ್ನದಾಗದೆ ಘನತೆ ಮತ್ತಾರದಲ್ಲಿ
ಇನಿತು ಮಾತಲ್ಲದೆ ಗುಣವ ನೋಡಿದರೇನು
ಫಣಿ ಸಂಚಾರವೆ ವಕ್ರ ಅನುದಿನವಾಗೆ ಪು
ತ್ತನು ಪೋಗುವಾಗಲು ನೆಟ್ಟಗೆ ಪೋಗಿ ಸೇರುವುದು
ಮನುಜ ನಾನು ವಿಷ ಪುಂಜನು ವಕ್ರ ನಡತೆಯವನು
ಬನಗು ಭವದ ಭವಣಿಯೊಳು ಚರಿಸುತಿಪ್ಪೆ
ಧನವೆ ಮೊದಲಾದ ಸೊಕ್ಕಿನಲಿ ತಿರುಗಿ ಕೆಟ್ಟೆ
ಕೊನೆಗೆ ನಿನ್ನ ಸ್ಮರಣೆಯಿಂದ ನಿನ್ನ ಪ
ಟ್ಟಣ ಸೇರುವುದಕ್ಕೆ ಕೊಂಕನು ಬಾರದಂತೆ ಮಾಡು
ಜನನ ಮರಣದೂರ ವಿಜಯವಿಠ್ಠಲ ಕೃಪಾ
ವನಧಿಯ ನಿನ್ನದೊಂದೆ ಅನುಗ್ರಹವಾಗಬೇಕು ೫

ಜತೆ

ಕರುಣಾಳು ವಿಜಯವಿಠ್ಠಲ ನಿನ್ನ ದಯವಾಗೆ
ಚರಣ ಹೊಳಿಯ ಗಾದೆವೈಭವೆಂಬೊವಾರಿಧಿ? ೬

೪೩

ಧ್ರುವತಾಳ

ದಯಮಾಡೊ ಎನ್ನೊಡೆಯಾ ದಾಸಿಗೊಲಿದು ಇಂದು
ಭಯವೆ ಪರಿಹರಿಸಿ ವೇಗದಿಂದಲಿ ಬಿಡದೆ
ಬಯಲಾಸೆಮಾಡಿ ಮುಂಗಾಣದೆ ಕಂಡ ಕಡೆಗೆ
ಪಯಣಗತಿಯಲ್ಲಿ ಪ್ರಯಾಸ ಬಡಲ್ಯಾಕೆ
ಅಯುತ ಅಪರಾಧಗಳು ಮಾನವರು ಎಸಗಿದರು
ಪಯೋನಿಧಿಸುತೆ ರಮಣ ನಿನ್ನ ನಾಮ
ತ್ರಯದಿಂದ ದೂರಾಗಿ ನಿರ್ಮಳದಲ್ಲಿ ನಿತ್ಯ
ಜಯಪ್ರದವಾಗುವುದು ಜಗವರಿಯೆ

ವಿಯದ್ಗಂಗೆ ಮೊದಲಾದ ನದ ನದಿಗಳಿಗೆ ಪೋಗಿ
ಮೀಯಬೇಕೆಂದು ಪೇಳುವ ಉಕ್ತಿಯು ನಿ
ಶ್ಚಯವಲ್ಲ ನಿನ್ನ ಶ್ರೀ ಪಾದಪದ್ಮದಲ್ಲೀಗ
ತ್ರಯಕೋಟಿ ಸಾರ್ಥಕ ತೀರ್ಥಂಗಳು ನಿರುತಾ
ಶ್ರಯವಾಗಿ ದೇವಗಣದೊಡನೆ ನಿ
ರಯದೂರನೆ ಕೇಳು ಮಹ ಸೋಜಿಗ
ವ್ಯಯವಾಗವೆ ಮಹಾತಾಪ ಜ್ವರ ವ್ಯಾಧಿಗಳು
ತ್ರಯ ಬಗೆಯಿಂದಟ್ಟಿದ ಮಾಯಾ
ಹುಯ್ಯಲಿಡುವೆ ನಿಂದು ಸೊಲ್ಲು ಲಾಲಿಸದಿರೆ ನಿ
ರ್ದಯವಂತನೆಂದು ಸರ್ವದ ದೂರುವೇ
ನಯನದಲಿ ನೋಡು ಉಡುಪಿಲಿ ಇತ್ತ ಮಾತನು ಹೃ
ದಯದೊಳಗೆ ಮರೆತಿಲ್ಲ ಎನಗೆ ಸ್ವಾಮಿ, ಉ
ದಯಾಸ್ತ ಮಾನ ತನಕ ಇದೇ ಸ್ಮರಿಸುತ್ತ
ಹಯದಂತೆ ಕುಣಿಕುಣಿದು ನಲಿದಾಡುವೇ
ಶ್ರೀಯರಸ ವಿಜಯವಿಠ್ಠಲ ಎಂದವಗೆ
ಜಯಂಗಳಲ್ಲದೆ ಪ್ರತಿ ಕೂಲವಲ್ಲ ೧

ಮಟ್ಟತಾಳ

ಈ ರೋಗವು ನಿನ್ನ ಮೂರು ನಾಮಗಳೊಮ್ಮೆ
ಸಾರಿದರೆ ಇರದೆ ಬೇರರಸಿ ಕಿತ್ತಿ
ಕ್ರೂರರ ಸಹಿತದಲಿ ದೂರಾಗಿ ಪೋಗುವುದು
ಆರಿಗೆ ಪೇಳದಲೆ ಹಾರವೀವುದು ನಮಗೆ
ಭಾರಕರ್ತನಾದ ವಿಜಯವಿಠ್ಠಲ ನಿನ್ನ
ಆರಾಧಿನರ್ಥ ಶರೀರಕೆ ಪೀಡೇ ೨

ತ್ರಿವಿಡಿತಾಳ

ಉಪೇಕ್ಷಾ ಮಾಡದಿರು ಉತ್ಕೃಷ್ಟ ಮಹಿಮನೆ
ಅಪೇಕ್ಷಾ ಎನೆಗುಂಟು ಅನುದಿನದಲ್ಲಿ
ಆಪನಾ ಯಾತ್ರಿಗೆ ಈರ್ವರನ ಕರೆದೊಯ್ದು

ಪಾಪ ಮುಕ್ತರ ಮಾಡು ಮುಂದೆ ಬರುವ
ಆಪತ್ತುಗಳ ತಡಿ ತಡ ಮಾಡದೆ ಜ್ಞಾನ
ದೀಪ ಪ್ರಕಾಶದಲಿ ಚರಿಸುವಂಥ
ಸುಪಂಥವೆ ಕೊಡು ಶುದ್ಧ ಮನಸು ಉಳ್ಳ
ತಾಪಸ ಸಜ್ಜನರ ಸಮೀಪವೀಯೋ
ಆಪಾದ ಮಸ್ತಕ ಪರಿಯಂತ ಭವವ್ಯಾಧಿ
ಲೇಪಿಸಿಕೊಂಡಿರೆ ನಿನ್ನ ನೆನಸಿ
ಪೋಪುದೆ ನಿಲ್ಲುವದೆ ಕಾಲಾ ಕ್ಲಪ್ತಿಯುಂಟೆ
ನೀ ಪಾಲಿಸದಿರೆ ಕಾಣೆ ಪರರಾ
ಆಪಾರ ಔಷಧ ನಾನಾ ಮಾತ್ರಿಗಳ್ಯಾಕೆ
ಮಾ ಪತಿ ನಿನ್ನ ನಾಮ ವ್ಯರ್ಥವೆ
ವ್ಯಾಪಾರ ನಿನಗಿದೆ ಎಲ್ಲೆಲ್ಲಿ ಇದ್ದರೂ
ಆಪನ್ನ ಜನರ ಸಾಕುವುದಲ್ಲದೆ
ಭೂ ಪಾರದೊಳಗೆ ಮತ್ತೊಂದು ಮಾತೆ ಇಲ್ಲ
ಕೋಪವಿಲ್ಲದ ದೈವಾ ದೀನ ಮಾತೆ ಇಲ್ಲ
ಚಾಪಧರಾಗ್ರಣಿ ವಿಜಯವಿಠ್ಠಲ ನಿನ್ನ
ರೂಪ ದೇಹದೊಳಿರೆ ಅನ್ಯ ಪ್ರತಿಮೆ ಪೂಜೆ ೩

ಅಟ್ಟತಾಳ

ಶ್ವಾನನ್ನ ಕೊಲಿಗೆ ಬಣ್ಣದ ಕೋಲು ಬೇಕೇನೊ
ಆನಂದ ಪದವೀವ ನಿನ್ನ ನಾಮಗಳೀ
ಬ್ಯಾನಿಗೆ ಬೇಕೇನೊ ಭಕ್ತರ ಮನೋರಥ
ಏನೆಂಬೆನಯ್ಯ ನಿನ್ನ ಭಕ್ತರ ಪಾದ
ಧ್ಯಾನದೊಳೊಮ್ಮೆಡೆ ತಿರುಗಿ ನೋಡದೆ ಪಲಾ
ಯಾನವಾಗೋದು ಬಲು ಕಾಲದ ರೋಗ
ಹಾನಿಯಾಗಿ ಪೋಗಿ ಹಿತವಕ್ಕು ಕಾಯಕ್ಕೆ
ಈ ನಿರಂತರ ಅನುಭವಿಸಿದ್ದು ಸಾಲದೆ
ನೀನೊಲಿದು ರೋಗ ಪೋಗುವ ಕಾರಣ
ನಾನು ತಿಳುಹಿದ ಕಾಲ ಕ್ಲಪ್ತಿ ನೋಡಿ

ನಾನೆ ತುತಿಸಿದೆ ಗುರುಗಳ ದಯದಿಂದ
ದಾನಪತಿ ವಂದ್ಯ ವಿಜಯವಿಠ್ಠಲ ಎನ್ನ
ಮಾನಸಾ ನುಡಿ ಕಾಯೊ ಮನ್ನಿಸಿ ಬಿಡದೆ ೪

ಆದಿತಾಳ

ಆಲಸ್ಯ ಮಾಡದಿರು ಅತಿದೂರಕೆ ಹಾಕಿ
ವ್ಯಾಳಿ ವ್ಯಾಳಿಗೆ ನಿನ್ನ ಚರಣ ಸೇವಿಗೆ ಅನು
ಕೂಲವಾಗಲಿ ಬೇಕು ನೀ ಮನಸು ಇತ್ತಾಗ
ಭೂಲೋಕದೊಳು ತಿಳಿದು ಸಾಧನ ಮಾಡುತ
ನಾಲಿಗೆಯಿಂದಲಿ ಹರಿ ಶರಣರ ಸ್ತೋತ್ರ
ವಾಲಯದಿ ಪಠಿಸುತ್ತ ಸುಖದಲ್ಲಿಪ್ಪಂತೆ ಮಾಡು
ಬಾಲ ಭಾಷೆಗಳೆಲ್ಲ ಮನಸಿಗೆ ತಾರದೆ
ಪಾಲಿಸಬೇಕು ಎನ್ನ ದೇಹ ಸಂಬಂಧವ
ಕಾಲಿಗೆ ಎರಗುವೆ ಕಠಿಣ ತನವೆ ಬಿಡು
ಬಾಳುವಂತೆ ಮಾಡಿ ಭಕ್ತಿ ಮಾರ್ಗವೆ ಇತ್ತು
ಮೂಲೋಕ ಪರಿಪಾಲಾ ವಿಜಯವಿಠ್ಠಲರೇಯ
ಆಳಾಗಿ ಎಲ್ಲರ ಅತಿ ಮೋಹದಲ್ಲಿ ಕಾವಾ ೫

ಜತೆ

ಅಟ್ಟಿದೆ ನಿನ್ನ ನಾಮಗಳಿಂದ ಮಹಾವ್ಯಾಧಿ
ವಿಠ್ಠಲ ವಿಠ್ಠಲ, ವಿಜಯವಿಠ್ಠಲ ಕರುಣೀ ೬

೪೪

ಧ್ರುವತಾಳ

ದಾಸ ಎನಗೆ ನಾನು ಲೇಸಿನವನೆಂದು
ಆಶೆಯಿಂದಲಿ ಗತಿ ಬೇಡಲಿಲ್ಲ
ದಾಸತನ ಎನಗೆಲ್ಲಿಹುದು ಶ್ರೀನಿ–
ವಾಸನೆ ಅನಂತ ಕಲ್ಪದಲ್ಲಿ
ದಾಸನು ನಾನಲ್ಲ ನಾನಾ ಸುಬುದ್ಧಿಯ

ನಾಶನ ಮಾಡಿಕೊಂಬ ದಾಸ ನಾನು
ದಾಸನೆನಿಸಿಕೊಂಡು ತಿರುಗುವ ಜನಕ್ಕೆ
ಲೇಸಾಗಿ ದಂಡಿಸಿ ಮೆದಿಯ ಬೇಕು
ಕೇಶವ ವಿಜಯವಿಠ್ಠಲನೆ ನಿನ್ನ ಮರೆದು
ಗ್ರಾಸಕ್ಕೆ ತಿರುಗುವ ಭಾಸಮಾನ ದಾಸ ೧

ಮಟ್ಟತಾಳ

ತಿರಕದಾಸ ನಾನು ಹರಕ ದಾಸ ನಾನು
ಕರಕರಿಯನು ಮಾಡಿ ಪರರ ಪೀಡಿಸಿ, ಉ–
ದರ ಪೊರೆವ ದಾಸನು ನಾನು, ಬರಿಯ ದಾಸ ನಾನು
ಅರಿಮರ್ದನ ಹರಿ ವಿಜಯವಿಠ್ಠಲ ನಿನ್ನ
ಪರಮ ಭಕ್ತನೆಂದು ತಿರಿದುಣ್ಣ ಮೆಚ್ಚಿದೆನು ೨

ತ್ರಿವಿಡಿ ತಾಳ

ಕೊಟ್ಟರೆ ಹರಸುವೆನು, ಕೊಡದಿದ್ದರೆ, ಬೆರ
ಳಿಟ್ಟು ಬಗಳುವಂಥ ಭ್ರಷ್ಟ ದಾಸನು ನಾನು
ಸೃಷ್ಟಿಯೊಳಗೆ ಬಹು ಧನವಂತರ ಮನೆಯ
ಮೆಟ್ಟು ಕಂಡರೆ ಬಿಡದಿಪ್ಪ ದಾಸ ನಾನು
ನಷ್ಟ ವಾಗಿದ್ದ ಉಚ್ಚಿಷ್ಟ ದಾಸನು ನಾನು
ದೃಷ್ಟಿಯಿಂದಲಿ ನೋಡೊ, ವಿಜಯವಿಠ್ಠಲ ಕೇಳೊ
ಎಷ್ಟೊ ಕಾಲದ ಪಾಪಿಷ್ಠ ದಾಸನು ನಾನು ೩

ಅಟ್ಟತಾಳ

ಕುರುಡ ದಾಸನು ನಾನು ಕುಂಟ ದಾಸನು ನಾನು
ಹುರಡಿಗೆ ಮಾಡುವ ಹುರಳಿಲ್ಲದ ದಾಸ
ಸರಿಯವರನು ಕಂಡು ಮರಗುವ ದಾಸನು
ಎರಡು ಕಡೆ ಕೆಟ್ಟ ಭರಡಿ ದಾಸನು ನಾನು
ನರಕಾರಿ ವಿಜಯವಿಠ್ಠಲರೇಯ ಪರರ ವಾ
ಗರಕೆ ಕರದಾರೆ ಹಿಗ್ಗುವ ದಾಸನು ನಾನು ೪

ಆದಿತಾಳ

ಹೀನ ದಾಸನು ನಾನು, ನೀಚ ದಾಸನು ನಾನು
ಹಾನಿವೃದ್ಧಿಗಳೆಲ್ಲ ತಿಳಿಯದ ದಾಸನು
ನಾನಾ ದುಷ್ಕರ್ಮ ಮಾಳ್ಪ ದಾಸನೊ ನಾನು
ಮಾನವಿಲ್ಲದೆ ಅಪಮಾನ ದಾಸ ನಾನು
ದಾನ ಧರ್ಮವಿಲ್ಲದ ಹೀನ ದಾಸನು ನಾನು
ಅನಂತ ಜನನಕ್ಕೆ ಹೊಲೆದಾಸನು ನಾನು
ಶ್ರೀನಿವಾಸ ತಿರುಮಲೇಶ ವಿಜಯವಿಠ್ಠಲ
ಬ್ಯಾನೆ ಇದ್ದಲ್ಲಿ ಬಿಡುವ ಬಕ್ಕದಾಸನು ನಾನು ೫

ಜತೆ

ಹೊಟ್ಟೆಕಿಚ್ಚಿನ ದಾಸ–ಹಲುಬಿ ಪೋಗುವ ದಾಸ
ದಟ್ಟದಾರಿದ್ರ ದಾಸನು ವಿಜಯವಿಠ್ಠಲರೇಯ ೬

೪೫

ಆದಿತಾಳ

ದಾಸನು ನಾನಲ್ಲ ದಾಸತ್ವ ಎನಗಿಲ್ಲ
ದೇಶದೊಳಗೆ ಆಭಾಸ ದಾಸ ನಾನು
ಹೇಸಿಕೆ ಒಡಲಿಗೆ ಗ್ರಾಸ ಪುಟ್ಟಿಪೆನೆಂದು
ಏಸೇಸು ಬಗೆಯಲ್ಲಿ ವೇಷ ಧರಿಸಿಕೊಂಡು
ಕಾಸಿಗಾಗಿ ಪರರ ವಾಸರದಲ್ಲಿಗೆ ಪೋಗಿ
ಆಶೆಯಲ್ಲಿ ವಾಸರವ ಕಳೆಯುವೆನೊ
ಕೂಸಿನ ಕರದೊಳಗಾಸಿಯ ತೋರಿಸಿ
ಭೂಷಣವೆಬ್ಬಿಸಿ, ಮೋಸಗೊಳಿಸುವಂತೆ
ಲೇಸಾಗಿ ಬಪ್ಪ ಪುಣ್ಯರಾಶಿಯ ಬಿಸಟುವರು
ಆಶಿಸುವೆ ಜ್ಞಾನ ಲೇಶವಿಲ್ಲದರಿಂದ
ಲೇಸು ಹೊಲ್ಲೆಂಗಳಿಗೆ ತಾ ಸುಮ್ಮನಿಪ್ಪುದು

ದೋಷ ಸುಕೃತವೆಂಬೊ ಆಶೆ ಪಂಥವ ತಿಳಿದು
ಗ್ರಾಸ ಮಾಡಿಕೊಂಡೆ ಮೀಸಲ ಸಂಪದವಿ-
ದೋಷವರ್ಜಿತ ನಮ್ಮ ವಿಜಯವಿಠ್ಠಲ ಎನ್ನ
ಆಶೆಯೆಂಬುದು ಘಂಟಾ ಘೋಷವಾಗುತಿದೆ ೧

ಮಟ್ಟತಾಳ

ಹಲವು ಯೋಚನೆ ಮಾಡಿ ಮಳೆ ಬಂದರೆ ಬ-
ರಲು ಜಲ ನಿಲಿಪೆನೆಂದು ಹಲಬರ ಕೂಡಿಟ್ಟು
ಇಳಿಯ ಅಗಲಕೆ ದೊಡ್ಡ ಮಳಲ ಕೆರಿಯ ಕಟ್ಟಿ
ಸಲೆ ನಲಿದು ಕಡೆಗೆ ಹಲುಬಿ ಪೋಗುವನಂತೆ
ಇಳಿಯೊಳು ನಾನೊಬ್ಬ ಬಲು ಮೂರ್ಖನು ದೇವ
ಸಲಿಗೆಯಿಂದಲಿ ಪೋಗಿ ಸುಳಿದು ಪರರ ಮನೆಯ
ಒಳಗೆ ಕುಳಿತು ಗಂಟಲು ಒಡೆವ ಸುದ್ದಿ ತಿಳಿಯದಲೇ ತವಕದಲಿ
ಬೆಳಗು ಕಳೆವೆ ಹಣವ ಘಳಿಸುವ ಸಂಭ್ರಮದಿ
ಕೊಳೆತ ಫಲಕೆ ಹೆಣಗಿ ತಲೆ ಒಡಕೊಂಡ ಬಾಲ-
ರೊಳಗೆ ವೆಗ್ಗಳ ಮೂರ್ಖನು ನಾನು
ಕಳಕಾಷ್ಟದೊಳಗೆ ನಿನ್ನಯ ಪಾದ ಪಾದ
ನಿಲಿಸಿಕೊಂಡು ನಿತ್ಯ ಒಲಿಸಿಕೊಳಲಿಲ್ಲ
ಸುಲಭ ಮಾರ್ಗವ ಬಿಟ್ಟು ವಿಜಯವಿಠ್ಠಲರೇಯ
ಕೆಲಕಾಲವು ತಿರುಗಿ ಮುಳವು ಮಾಡಿಕೊಂಡೆ ೨

ತ್ರಿವಿಡಿತಾಳ

ಪರರ ಒಡವೆಯನು ಹರಿ ನಿನ್ನ ಮುದಕ್ಕೆ
ತರದೇಳಿರಿಸಿಕೊಂಡು ಸರಸರನೇ ನೋಡಿ
ಕರವೆತ್ತಿ ಮುಗಿದು ನೀರೆರದು ಮುಸಕನಿಟ್ಟು
ಬೆರಳನೆಣಿಸಿ ಉಚ್ಚರಿಸುವೆ ಪಿಟಿ ಪಿಟಿ
ಎರಡು ತುಟಿಯ ಬಿಚ್ಚಿ ನರರಿಗೆ ತೋರಿಸುತ
ಮರಳು ಮಾಡುವೆ ಎನ್ನುದರ ಪೋಷಣೆಗೋಸುಗ

ಭರದಿಂದಂಗಡಿಯಿಟ್ಟು ಸರಕು ಮಾರುವನಂತೆ
ನೆರೆದವರಿಗೆ ಮಹ ಹರುಷ ಬಡಿಸಿ
ಕರೆದು ಕಾಗೆಯು ತನ್ನ ಪರಿವಾರಕ್ಕುಣಿಸುವಂತೆ
ತೆರವಿಲ್ಲದಲೆ ಸ್ತ್ರೀ ಸುತರ ಉಣಿಸುವೆನು
ಬರಿದೆ ಪೋಯಿತು ಜನ್ಮ ಹರಿ ನಿನ್ನಾರಾಧನೆ
ಪರಮ ಗುಪ್ತದಲ್ಲಿ ವಿಸ್ತರಿಸಲಿಲ್ಲ
ಧರೆಯೊಳು ನಾನೊಬ್ಬ ಹರಿದಾಸನೆನಿಸಿ ಅ
ನ್ಯರನು ಕೊಂಡಾಡಿದೆ ಇರುಳು ಹಗಲು
ಹರವಿದ ಭವದ ಶರಧಿಯೊಳಗೆ ಬಂದು
ಹರಳು ಹಾಕಿದರಿಂದ ಶರಧಿಗಾಗದು ಅಧಿಕ
ಕೊರತೆ ಎಂದಿಗೂ ಇಲ್ಲ
ಕಿರಿನಗಿಯಲಿ ಇಪ್ಪ ವಿಜಯವಿಠ್ಠಲರೇಯ
ಪರಿಪೂರ್ಣ ಕಾಮನಾದರೆ ಎನ್ನಿಂದೇನಾಹುದೊ ೩

ಅಟ್ಟತಾಳ

ಪ್ರೀತಿಯಿಂದಲಿ ಮಧುರಾನ್ನವ ಭುಂಜಿಸಿ
ಯಾತರಿಂದಲಿ ಕೈಯ ಬಾಯ ತೊಳೆದಂತೆ
ಆ ತೆರನಾಯಿತು ಎನ್ನ ದಾಸತನ
ಯಾತಕ್ಕೆ ಬಾರದು ಪುಣ್ಯವಂತನಾಗದೆ
ಭೂತಳದೊಳು ಪುಟ್ಟಿ ಪೊಟ್ಟಿಗೆ ತಿರುಗಿದೆ
ಪ್ರಾತರ ಕಾಲ ಅಸ್ತಮಾನ ಪರಿಯಂತೀ
ಭೀತಿ ಎಣಿಸಲಿಲ್ಲ ಮೈಲಿಗೆಯ ಮನ
ಭ್ರಾಂತಿ ಬಡಿಸಿ ಭಂಗ ಬಡಿಸುವುದು
ನೀತಿಯಿಂದ ವೈರಾಗ್ಯ ತೊಡಲಿಲ್ಲ
ಪೋತತನದಲ್ಲಿ ರಿಪುಗಳ ಕೊಂದ ಅ
ಜಾತ ವಿಜಯವಿಠ್ಠಲನಂತೆ ರೂಪ ೪

ಆದಿತಾಳ

ನೆರೆ ಹೊರೆ ಮನೆಯಲ್ಲಿ ಇರುತಿಪ್ಪ ಪದಾರ್ಥ
ತರಿಸಿ ತುತ್ತು ಮಾಡಿ ಹರಿ ನಿನ್ನ ಬಾಯೊಳು
ಇರಿಸಿ ಉಣಿಸಲಿಲ್ಲ ಬರಿದೆ ಡಂಬಕವಲ್ಲದೆ
ಪೊರೆವೆನೊ ಎನ್ನ ಪೊಟ್ಟೆ ಕರಕರಿಗಾರದೆ
ಹರಿ ನಿನ್ನ ಹೃದಯಾಂಬರದಲ್ಲಿ ನೋಡಿ ತಿಳಿದು
ಧರಿಸಲು ಸಕಲ ಪುಣ್ಯ ಬರುವುದು ತಡಿಯದೆ
ನರನು ವಾಸರ ದಣಿಯದೆ ತೋರದು ಏಕಾಂತದಲ್ಲಿ
ನಿರುತ ಈ ಪರಿಯಿಂದಾಚರಣೆ ಮಾಡಲು ವೇಗ
ಪೊರೆವ ಪ್ರತಿದಿನ ವಿಜಯವಿಠ್ಠಲರೇಯ ೫

ಜತೆ

ತನ್ನಲ್ಲಿ ಸರ್ವ ಅನುಕೂಲವಾಗಿದೆ
ಅನ್ಯರಾಶೆಯು ಸಲ್ಲ ವಿಜಯವಿಠ್ಠಲರೇಯ ೬

೪೬

ಝಂಪೆತಾಳ

ದುರ್ಜನ ಶಿಖಾಮಣಿ ನಾನಯ್ಯ ಎನ್ನಯ್ಯ
ಮೂರ್ಜಗದೊಳಗೆ ಮತ್ತಾರು ಇಲ್ಲ
ಮಜ್ಜನಾದಿಯ ತೊರೆದು ಮಹದುರುಳ ನಡತೆಯಲಿ
ಸಜ್ಜನರ ನಿಂದಿಸಿದೆ ಸತತ ಬಿಡದೆ
ಹೆಜ್ಜೆ ಹೆಜ್ಜೆಗೆ ಶತಾನಂತ ತಪ್ಪುಗಳನ್ನು
ಬೆಜ್ಜರಿಕೆ ಇಲ್ಲದಲೆ, ಆರ್ಜಿಸಿದೆನೊ
ದುರ್ಜೀವಿಗೆ ಇನಿತು ಪೊಂದಿರ್ದ ಪಾಪಗಳು
ಉಜ್ಜಿ ಬಿಡುವುದಕ್ಕೆ ಒಂದು ಉಂಟು
ದುರ್ಜಯ ವಿಜಯವಿಠ್ಠಲನೆ ನಿನ್ನ ನಾಮ
ವಜ್ರಾಂಗಿಯಾಗಿರಲು, ಪಾಪಗಿರಿಗಳು ಸೋಂಕೆ
ಯಜ್ಞಾ ಬೀಳುವುದೇನು ನಿರ್ಜರೇಶ ೧

ಮಟ್ಟತಾಳ

ನಿನ್ನವ ನಿನ್ನವನೊ, ಇನ್ನೇನಿನ್ನೇನೊ
ಎನ್ನನು ಎನ್ನನು ಮನ್ನಿಸು ಮನ್ನಿಸು
ಘನ್ನ ಪನ್ನಂಗನ್ನ ಕೆನ್ನಯ ತುಳಿದ ಪಾ
ವನ್ನ ವಿಜಯವಿಠ್ಠಲನ್ನಂತ ಗುಣಪೂರ್ಣ ಚನ್ನಪ್ರಸನ್ನ ೨

ರೂಪಕತಾಳ

ನಿನ್ನ ಭಕುತಿಲ್ಲದ ತನುವೆ ವಿಷದ ಮೊಟ್ಟೆ
ನಿನ್ನಾಂಕಿತವಿಲ್ಲದ ಕವಿತಾ ವಿಷಪೂರಿತಾ
ನಿನ್ನ ಕೊಂಡಾಡದ ಬಾಯಿ ಇಪ್ಪೇ ಕಾಯಿ
ನಿನ್ನ ಪೊಂದದವನ ಕುಲಕೆ ನರಕದ ಬಟ್ಟೆ
ನಿನ್ನನ್ನೆ ಬಿಡದಲಾವಾಗ ಪಾಡುವ ನರಗೆ
ಇನ್ನಿದರೊಳಗೆ ಕಿಂಚಿತು ಮಾತುರವುಂಟೆ
ಪನ್ನಿರಾಧಿಷ್ಟಾ ಶ್ರೀ ವಿಜಯವಿಠ್ಠಲರೇಯ
ನಿನ್ನ ಕರುಣವಾಗೆ ಎನಗಾವ ಭಯವೊ ೩

ಧ್ರುವತಾಳ

ದಾಸರ ಪಾದಧೂಳಿ ವಂಶಾದಲ್ಲುದುಭವಿಸಿ
ಆಸಿಯಿಂದುಳಿದರಯ್ಯ ನಿನ್ನಂಥವನ ನೋಡಿ
ಮೀಸಲ ತನುವ ಪಾಲಿಸಿದರೆ ಲೇಸೆ
ದೇಶದೊಳಗೆ ಅಪಹಾಸ ಮಾಡಿದರೊಳಿತೆ
ವಿಸೇಸು ಜನುಮಕ್ಕೆ ಈ ಶರೀರವು ನಿನ್ನ
ದಾಸರ ಮನಿ ಮುಂದೆ ಆ ಸಾರಮೇಯದ
ಕೂಸಿನಂತಿಪ್ಪುದು ಲೇಸುಹೊಲ್ಲೆಗಳು ಶ್ರೀ
ವಾಸ ವಿಜಯವಿಠ್ಠಲೇಶ ನಿನ್ನದು ಕಾಣೊ ೪

ತ್ರಿವಿಡಿತಾಳ

ಕುಬುಜೆ ಡೊಂಕನು ತಿದ್ದಿ ಅಬುಜ ಮುಖಿಳ ಮಾಡಿ
ಕಬರಿಯ ಪಿಡಿದವಳ, ಚುಬುಕಾಗ್ರವನು ಸವಿದೆ

ಇಭವರದ ನೀ ದಯಾಂಬುಧಿಯಾದರೆ ಅವ
ಶ್ವಬಚನಾದರೆ ಏನು, ನಭದವರ ಕೊಡುವ
ಕುಭಲೇಶಘ್ನ ಸಿರಿ ವಿಜಯವಿಠ್ಠಲ ಎನ್ನ
ಶುಭದ ಸಾರುತಿ ನೀನು ಅಭಿವಂದಿಸುವೆ ನಾನು ೫

ಅಟ್ಟತಾಳ

ಸತಿಯಳೊಬ್ಬಳ, ಪತಿಯು ಕರೆದು
ಸುತರ ಪಡೆದು, ಗತಿ ಕಾಣೆನಲು
ಪತಿಯ ಮಾತನು ಪತಿಕರಿಸಿ
ಸತತ ಪತಿವ್ರತೆ ಪಂಚರಿಸೆ
ಪತಿತ ದೋಷ ಗರತಿಗುಂಟೆ
ಮತಿಯನಿತ್ತು ಒಳಗೆ, ಆ
ಗತ ನೀನಾಗಿ ಪೇಳಿಸಿದೆ
ಕೃತಿಗೆ ದೋಷ ಉಂಟೆ, ಶ್ರೀ
ಪತಿಯ ನಾಮ ವಿಜಯವಿಠ್ಠಲ
ಹಿತವೆ ತೋರಿ ಸಕಲ, ಸ
ಮ್ಮತವೆಂದೆನಿಸು ಸಾಧುಗಳಿಗೆ
ಪ್ರತಿದಿನದಲಿ ನಮಿಪೆ ನಾನು ೬

ಆದಿತಾಳ

ಗೋಣಿಯನೊಪ್ಪಿಸಿಕೊಟ್ಟೆ ಏನು ಇದ್ದ ಸುಂಕವ
ನೀನೆ ನೋಡಿಕೊಳ್ಳು ಜಾಣಗೋವಳರಾಯ
ಪ್ರಾಣಮಾನವೆನ್ನು ನಿನ್ನಾಧೀನವನ್ನು ಮಾಡಿದೆ
ನಾನು ಯಾತರವನಲ್ಲ ಭಾನು ವಿಜಯವಿಠ್ಠಲ
ಏನಾದರು ನಿನ್ನಾಧೀನಕೆ ಬಳಗಾನು ೭

ಜತೆ

ವೃಕೋದರನೊಡೆಯಾ, ಉಣಿಸು ಸುಧಾರಸದೆಡೆಯಾ
ಕಾಕೋದರ ಶಯನ ಶ್ರೀ ವಿಜಯವಿಠ್ಠಲರೇಯ ೮

೪೭

ಧ್ರುವತಾಳ

ದುರಿತ ರಾಶಿಯ ಬಿಡಿಸು ದುಸ್ಸಂಗವನು ಕೆಡಿಸು
ನಿರುತ ನಿನ್ನವರೊಳಗೆ ಸುಖ ಪಡಿಸೊ
ಪರಮ ವಚನವ ನುಡಿಸು ಸುಮಾರ್ಗದಲ್ಲಿ ನಡೆಸು
ಪರಮ ರಹಸ್ಯ ಉಪದೇಶ ಕೊಡಿಸು
ಚರಣದಲ್ಲಿ ರತಿ ಇಡಿಸು ನಾಮಾಮೃತವ ಕುಡಿಸು
ಪರಿ ಪರಿ ಕ್ಲೇಶ ಬಂಧನವ ಕೆಡಿಸು
ಸ್ಥಿರ ಭಕುತಿಯನು ಪಿಡಿಸು ನಿರ್ಮಾಲ್ಯವನು ಮುಡಿಸು
ವರ ಪ್ರಸಾದಕೆ ಮನ ಒಡಂಬಡಿಸು
ಶರಣರಕ್ಷಕ ಶರ್ವ ವಿಜಯ ವಿಠ್ಠಲ ನಿನ್ನ
ಕರುಣ ಕವಚವ ತೊಡಿಸು ಜನನ ಎಡೆಗೆಡಿಸು ೧

ಮಟ್ಟತಾಳ

ಬಂದೆನೊ ಬಂದೆನೊ ನಿಂದೆನು ನಿಂದೆನೋ
ಸಂದಿದೆ ಸಂದಿದೆನೊ ಪೊಂದಿದೆ ಪೊಂದಿದೆನೊ
ಮುಂದೇನೊ ಮುಂದೆನೊ ಹಿಂದಿನ ಹಿಂದಿನ
ದ್ವಂದ್ವ ದುರಿತ, ಮಂದ ದ್ವಂದ್ವಗಳೋಡಿಸು
ಚಂದನ್ನಾ ಗತಿ, ವಿಜಯವಿಠ್ಠಲ ನಿನ್ನ
ದ್ವಂದ್ವ ಚರಣಾರವಿಂದವನು ನಿತ್ಯ
ಸಂದರುಶನ ಕೊಡು ಕಂದೆರದು ನೋಡು ೨

ತ್ರಿವಿಡಿತಾಳ

ಸಾಕು ಕುಜನುಮ ಹೇಸಿಕೆಯೊಳು ಬಂದು
ಶೋಕಾತಿಶಯದಲ್ಲಿ ಕಾಕನಾಗಿ
ಲೋಕದವರನವಲೋಕನ ಮಾಡುತ್ತ
ವಾಕು ಪೊಳ್ಳು ಮಾಡಿಕೊಂಡು ತಿರಿದೆ
ಲೋಕನಾಮ ಸ್ವಾಮಿ ವಿಜಯ ವಿಠ್ಠಲ ನಿನ್ನ
ಶ್ಲೋಕಾರ್ಥವನು ಕೇಳದಲೆ ಬರಿದಾದೆ ೩

ಅಟ್ಟತಾಳ

ನೊಂದು ನೊಂದು ನಾನು ಬೆಂದು ಬೆಂದು ನಾನು
ಒಂದೇ ಪ್ರಕಾರ ಬಂಧನದೊಳಗಾಗಿ
ಬಿಂದು ಮಾತುರ ಸುಖದಿಂದ ತೃಪ್ತಿಯನೀವ
ಒಂದಾದರು ನಾನೆಂಬೋ ದೇವರ ಕಾಣೆ
ಪೊಂದಿದೆ ನಾನೆತ್ತ ಪೋಗಲಾರದೆ ಹರಿ
ಚಂದ್ರಾಂಶು ನಾಮ ಶ್ರೀ ವಿಜಯವಿಠ್ಠಲ ಎನ್ನ
ನಿಂದರಿಸೊ ಇಲ್ಲಿ ಎಂದೆಂದು ಬಿಡದಲೆ ೪

ಆದಿತಾಳ

ನಾಯಿಗೆ ತಕ್ಕ ಹಲ್ಲಣ ಹಾಕಿ ಕಾಯಬೇಕು ಕರಿವರದ
ಆಯುಷ್ಯಾರ್ಧವಾಗಬಂತುಪಾಯವನ್ನು ತೋರಿಕೊಟ್ಟು
ಮಾಯಿಮದ ಗರ್ವ ಬಿಡಿಸಿ ದಾಯಿಗರಿಗೆ ತೋರಿಕೊಟ್ಟು
ಮಾಯದ ಗರ್ವ ಬಿಡಿಸಿ ದಾಯಿಗರಿಗೆ ಒಪ್ಪಿಸದಲೆ
ವಾಯು ವಾಹನ ವಿಜಯವಿಠ್ಠಲರೇಯ
ಸ್ಥಾಯವಾಗಿ ಪ್ರತಿದಿನ ಕಾಯಬೇಕು ಕರುಣಾದಲ್ಲಿ ೫

ಜತೆ

ಆಶೆಯಲ್ಲಿ ಬಂದು ಬಾಗಿಲ ಕಾಯ್ದೆನೊ
ಆ ಸಂಖ್ಯ ವಿಜಯವಿಠ್ಠಲ ದಾಸನೆನಿಸೊ ೬

೪೮

ಧ್ರುವತಾಳ

ದೂರವಿದ್ದರೆ ಬಿಡೆನೊ ಅತಿ ದೂರವಾದರೆ ಬಿಡೆನೊ
ಸಾರೆ ನಿಲ್ಲದೆ ಕೆಲಸಾರೆನೆ ಬಿಡೆನೊ
ತೋರದಲಡಗಲು ಪೋಗಲು ಬಿಡೆನೊ
ಮಾರುತ್ತರ ಪೇಳದಿದ್ದರೆ ಬಿಡೆನೊ
ವಾರಿಧಿಯೊಳಗೆ ಸುತ್ತಲು ಬಿಡೆನೊ
ಆರಿಗಾದರು ಪೇಳು ಆರ ನಾದರೆ ಕೇಳು

ಆರಾದರು ನಿನ್ನ ಕಾಯ್ವುವರುಂಟೆ
ಗಾರು ಮಾಡುವ ಸಂಸಾರ ಬಿಡಿಸದಿರೆ
ದೂರದೆ ಬಿಡುವೆನೆ ದೂರತರನೆ
ಆರಿಲ್ಲದವಗೆ ಬಡಿವಾರ ಘನವಾಗಿದೆ
ಆರಂಶದವನೊ ನೀನಾರ ಮಗನೊ
ದೂರವಾಸ ನಮ್ಮ ವಿಜಯ ವಿಠ್ಠಲರೇಯ
ಆರವನಾಗಿದ್ದಿ ಭಕುತರ ತೊರೆದು ೧

ಮಟ್ಟತಾಳ

ಕಣ್ಣು ಬಿಚ್ಚಲು ಬಿಡೆ ಕಲ್ಲಡಿಯಾ ಏರಿ
ಮಣ್ಣು ಕಚ್ಚಲು ಬಿಡೆ ಆಲ್ವರೆದರೆ ಬಿಡೆ
ಕಣ್ಣು ಚುಚ್ಚಲು ಬಿಡೆ ಕುಲನಳಿದು ಸಮರ
ಹಣ್ಣಿಕೊಂಡರೆ ಬಿಡೆ ಗೊಲ್ಲನೆಂದರೆ ಬಿಡೆ
ಉನ್ನತಾದರೆ ಬಿಡೆ ಅಲಗು ಕರದಿ ಪಿಡಿದು
ಎನ್ನನಂಜಿಸಿದರೆ ನಿನ್ನನಾ ಬಿಡೆನೊ
ಚನ್ನ ಮೂರುತಿ ತೋರೋ ಇನ್ನು ತೋರದಿರೆ
ಎನ್ನ ಸಹಿತ ಎನ್ನವರಲ್ಲಿ ಇರಸಲ್ಲ
ದಾನ್ನವನರಿಪು–ಸುಧನ್ವಿ ವಿಜಯ ವಿಠ್ಠಲ
ನಿನ್ನನೆ ಬಿಟ್ಟರೆ ಎನ್ನ ಜನನ ವ್ಯರ್ಥ ೨

ತ್ರಿವಿಡಿತಾಳ

ಷೋಡಶಾತ್ಮಕವಾದ ಲಿಂಗದೇಹ ಎನ್ನ
ಕಾಡುತಿದೆ ಬಿಡದಾನಾದಿಯಿಂದ
ನೋಡಿಕೊಳಲುದೇವ ನೀನಿತ್ತ ಸ್ವರೂಪ
ಆಡಲೇನದು ನಿರ್ಮಳವಾಗಿದೆ
ನಾಡೊಳು ಪರಿವ ನಿರ್ಮಲ ಜಲದೊಳು ಬಲು
ರಾಡಿಕೂಡಿ ಸಾಗಿ ಪೋಗುವಂತೆ
ನೋಡೋದಾಡುವುದು ಮಾತಾಡಿ ಕೇಳುವುದೆಲ್ಲ
ಪ್ರೌಢವಲ್ಲವೆಯಿನಿತು ಹೀನವಿಲ್ಲ

ಬೀಡಾಗಿದ್ದಲಿಂಗ ಕಾಯದಿಂದಲಿ ಎನಗೆ
ಕೇಡು ತೋರುವುದು ಅಜ್ಞಾನದಿಂದ
ನೋಡು ಹರೆ ಸಾರಿದೆ ವಿಷ್ಣು ವಿಜಯ ವಿಠ್ಠಲ
ಗಾಢಾಂಧಕಾರವ ಓಡಿಸಿ–ಪೊರೆಯೊ ೩

ಅಟ್ಟತಾಳ

ಆರಲ್ಲಿಗೆ ಪೋಗಿ ಅನುಗಾಲ ಬಿಡದಲೆ
ಸೇರುವಾನಂದವು ಮರಿಯದೆ ಪೇಳು
ಆರುಭಕ್ತರು ನಿನಗೆ ತೋರೆಲವೊ ರಂಗ
ವಾರಿಧಿ ತನುಜೆ ಮಿಕ್ಕವರಲ್ಲದೆ
ಆರಾಧಿಸುವವರಲ್ಲದೆ ಹಳಿಯಾರು
ಬ್ಯಾರೆ ಭಕ್ತರು ನಿನಗೊಬ್ಬರಿಲ್ಲ
ದೂರ ತಿಳಿದುಕೊ ಭಕ್ತರೆಲ್ಲ ಒಂದೆ
ತಾರತಮ್ಯದಿಂದ ಭಜಿಸುವರು
ಪಾರು ಮಾಡದರೆ ಎನ್ನ ಹಿರಿಯರಿಗೆ
ಸಾರಿ ಪೇಳುವೆನತಿ ಚೋರನೆಂದು
ದೂರಾರಿಘ್ನನಾಮ ವಿಜಯ ವಿಠ್ಠಲರೇಯ
ವಾರವಾರಕ್ಕೆ ವಿಚಾರವಿನ್ನಿಲ್ಲ ೪

ಆದಿತಾಳ

ಹಿಂದಿನ ಭಕ್ತರು ನಿನಗೆ ತಂದು ಕೊಟ್ಟರೇನು ಧನ
ಅಂದವರು ಜಪಿಸಿ ಜಪಿಸಿ
ತಂದೆಯಾದರು ನಿನಗೆ ಕಾಣೊ
ನಂದನಾನೀಗ ಭಕ್ತರ
ಬಂಧನವ ಪರಿಹರಿಸಿ
ಪೊಂದಿಸಿದೆ ಸಕಲ ಸುಖ
ಸಿಂಧುವಿನೊಳಗೆ ಇಟ್ಟು
ತಂದೆ ತಾಯಿ ಭಕ್ತರಲ್ಲದೆ
ತಂದೆ ತಾಯಿ ನಿನಗುಂಟೆ

ತಂದುಕೊ ನಾನಂದ ಮಾತು
ಎಂದಿಗೆ ಪುಶಿಯಲ್ಲವೊ
ಬಂಧು ಬಳಗ ಹಿಂದು ಮುಂದೆ
ವಂದಿಸುವ ಎನ್ನ ಸ
ಮ್ಮಂದಿಗಳು ಕೇಳು ನಿ
ನ್ನಿಂದ ಪುಟ್ಟಿದರಂದು
ಇಂದು ಮೊದಲಾಗಿಂದ ಜೀವ ವಿಜಯ ವಿಠ್ಠಲ
ಸಂದೇಹಗೊಳಿಸದೆ
ಮಂದ ಮತಿ ಬಿಡಿಸಿ ಕಾಯೊ ೫

ಜತೆ

ದೂರುವೆ ಬಿಡದೆ ಪೊರೆಯದಿದ್ದರೆ ಎನ್ನ
ದೂರ ನೋಡದೆ ಕಾಯೊ ತೃಪ್ತ ವಿಜಯ ವಿಠ್ಠಲ ೬

೪೯

ಧ್ರುವತಾಳ

ದೋಷ ಎನಗೆ ಉಂಟೆ ಕ್ಲೇಶ ಎನಗೆ ಉಂಟೆ
ನಾಶ ಎನಗೆ ಉಂಟೆ ಮೊರೆ ಹೊಗಲು ನಿನ್ನ
ಆಶೆ ಮಾಡಿದ ಮಾನಿಸನು ಭವಾಂಬುಧಿ
ಈಸುವದರಿದೇನೋ ಕ್ಲೇಶವನೆನಲಾಗಿ
ಸಾಸಿವಿ ಕಾಳ ಲಂಘಿಸಿದಂತಿಪ್ಪದು
ವಿಸೇಸು ಜನ್ಮದ ಸಂಸಾರ ಎಂಬುವುದು
ಕಾಸುವೀಸಾ ಸಂಪಾದಿಸಿಕೊಂಬೋದಲ್ಲ
ಕಾಸಾವೀಸಿಯಿಂದ ಘಾಸೆ ಬೀಳುವದಲ್ಲ
ಲೇಶವಾದರು ತಾಮಸ ಧಾವತಿ ಇಲ್ಲ
ನೀ ಸಲಹುವುದು ಮನಸು ಬಂದಲ್ಲಿ ಇಟ್ಟು
ಕ್ಲೇಶನಾಶನ ನಮ್ಮ ವಿಜಯ ವಿಠ್ಠಲ ತಿಮ್ಮ
ಭೂಷಣ ವಾರ್ತಿ ವಿಶೇಷ ನಿನ್ನದಲ್ಲದೆ ೧

ಮಟ್ಟತಾಳ

ಪಾಪಾತ್ಮನ ಮಾಡು ಪುಣ್ಯವಂತನ ಮಾಡು
ದೀಪದವನ ಮಾಡು ದೀನನರನ ಮಾಡು
ತಾಪಸಿಗನ ಮಾಡು ತಾಪತ್ರಯದಿ ಸಂ
ತಾಪದಲಿ ನರಕ ಕೂಪದೊಳಗೆ ಪೊಗಿಸು
ಕುಚ್ಛಿತ ಫಲವನುಣಿಸು
ಅಪವರ್ಗದಲಿ ಸಲ್ಲಾಪವನ್ನೆ ಬಡಿಸು
ಮಾಪತಿ ನಿನ್ನಯ ಪಾಲಿಗೆ ಬಂದವನೊ
ನಾ ಪೇಳುವುದೇನೋ ಅಪಾರ ಗುಣನಿಧಿ
ಪಾಪರಹಿತ ಪೂರ್ಣ ವಿಜಯ ವಿಠ್ಠಲರೇಯ
ನೋಡಿ ಸಮಸ್ತವು ನಿನದಲ್ಲವೇನೋ ೨

ತ್ರಿವಿಡಿತಾಳ

ಮಾನವಾವುದು ಅವಮಾನವಾವುದು ಎನಗೆ
ಜ್ಞಾನವಾವುದು ಅಜ್ಞಾನವಾವುದು ಎನಗೆ
ಸ್ಥಾನವಾವುದು ಎನಗಾ ಸ್ಥಾನಾವಾವುದು ಎನಗೆ
ಹಾನಿ ವೃದ್ಧಿಗಳೇನು ಹೀನಾ ಸನ್ಮಾನೇನು
ಕಾನನವೇನು ಗ್ರಾಮನುಗ್ರಾಮಗಳೇನು
ನೀನೊಲಿದು ನಿನ್ನಯ ಧ್ಯಾನವಿತ್ತವರಿಗೆ
ಆನಂದವಾದ ಸಾಧನವಲ್ಲದೆ ಮಿಗಿ
ಲಾನು ಚಿಂತಿಪುದೇನು ಶ್ರೀನಿವಾಸನೆ ಎನಗೆ
ನೀನೀಯಾದವನಿಗೆ ಆನೆ ಸಾಲು ಬಂದರೆ
ನಾನದ ನೋಡದೆ ಶ್ವಾನನ ಪರಿ ಎಂಬೆ
ಶ್ರೀನಿಧಿ ವಿಜಯ ವಿಠ್ಠಲ ಕರುಣಾಂಬುಧಿ
ನೀನಿತ್ತದೆ ಪಥ್ಯ ವಿಷ ಸುಧೆಯಾಗಲಿ ೩

ಅಟ್ಟತಾಳ

ಕರ್ಮವಾಗಲಿ ಸುಕರ್ಮವಾಗಲಿ ನೀನು
ನಿರ್ಮಾಣವನು ಮಾಡಿ ನಿರ್ಣೈಸಿದಲ್ಲಿಗೆ

ಧರ್ಮವೆ ಎನಗದು ಅನಂತ ಜನ್ಮಕ್ಕೆ
ದುರ್ಮತಿ ಎನಗಿಲ್ಲ ಸುರರಾ ದುರ್ಲಭನೆ
ಧರ್ಮ ಕೃತೇನಾಮ ವಿಜಯ ವಿಠ್ಠಲರೇಯ
ಚರ್ಮಪಾಲನಾದರೇನೋ ನಿನ್ನವನೋ ೪

ಆದಿತಾಳ

ಘನ್ನ ಪಾಪವಾದರು ಸತ್ಪುಣ್ಯ ಕಾಣೊ ಎನಗದು
ನಿನ್ನ ಪಾದ ಕಂಡ ಮೇಲೆ ಅನ್ಯಥ ಪ್ರಪಂಚ ಉಂಟೆ
ರನ್ನದೇವ ವಿಜಯ ವಿಠ್ಠಲ ಇನ್ನು ಸಂಶಯವು ಮಾಡೆ
ಎನ್ನ ಚಿಂತೆ ಅನುದಿನ ನಿನ್ನದಲ್ಲವೇನೊ ರಂಗ ೫

ಜತೆ

ಅರಸನೊಲಿದವನಿಗೆ ಎಂತಾದರೆ ಏನು
ಸರಸವಾಗಿಪ್ಪುದು ವಿಜಯ ವಿಠ್ಠಲರೇಯ ೬

೫೦

ಧ್ರುವತಾಳ

ದೋಷರಾಶಿಯ ಕಳೆದಮಲನ ಮಾಡುವುದೆನ್ನ
ಸಾಸಿರ ಪ್ರಣಾಮವನು ಮಾಡುವೆನೆಲೊ ರಂಗ
ಆಶೆಯಾ ಮುರಿಯಾದಿರು ಅತಿಬಡವ ನಾನೀಗ
ಏಸು ಕಾಲದಲಿಂದ ನಿನ್ನ ಪಾದ ಹಂಬಲಿಸಿ
ಈ ಶರೀರವ ಪೊತ್ತೆ ಇನ್ನು ದಯದಪ್ಪದಿರು
ವಾಸುದೇವ ನಾಮ ವಿಜಯ ವಿಠ್ಠಲ ನಿನ್ನ
ದಾಸರ ಪದ ಸನ್ನಿವಾಸದೊಳಿರಸಯ್ಯ ೧

ಮಟ್ಟತಾಳ

ನಿನ್ನ ಒಲಿಮೆಯಿಲ್ಲದ ಮಂತ್ರ
ನಿನ್ನ ಒಲಿಮೆಯಿಲ್ಲದ ಜ್ಞಾನ
ನಿನ್ನ ಒಲಿಮೆಯಿಲ್ಲದ ಭಕುತಿ

ನಿನ್ನ ಒಲಿಮೆಯಿಲ್ಲದ ಕ್ರಿಯೆ
ಯನ್ನು ಎಲ್ಲ ಮಾಡಲೇನು
ಕುನ್ನಿಯಮರಿಗೆ ರನ್ನದ ಉಡಿಗೆ
ಯನ್ನು ತೊಡಿಸಿದಂತೆ ಕಾಣಿರೊ
ಘನ್ನ ಪದವಿಯನೀಯಬಲ್ಲವೆ
ಚೆನ್ನಾಗಿರದೆ ಭಿನ್ನವಾಗೋವು
ಪುಣ್ಯನಾಮಾ ವಿಜಯ ವಿಠ್ಠಲ
ನಿನ್ನ ಒಲಿಮೆಯನ್ನು ಪಾಲಿಸಿ
ಇನ್ನು ಎನ್ನ ಮನ್ನಿಸುವುದು
ನಿನ್ನ ಒಲುಮೆಯನ್ನು ಪಾಲಿಸಿ
ಇನ್ನು ಎನ್ನ ಮನ್ನಿಸುವುದು ೨

ಝಂಪೆತಾಳ

ಹದಿನಾಲ್ಕು ವತ್ಸರ ಮೀರಲು ಒಂದು ಕ್ಷಣ
ಒದುಕಲು ದಶಾವರ ಜನುಮ ಬರುವುದಕ್ಕೆ
ಒದಗುವುದು ಕರ್ಮ ಏನೆಂದು ಉಸುರುವೆನಯ್ಯ
ಉದುಭವಿಸಿದವೇಸು ಉದಿಸುವುವು ಮುಂದೇಸು
ತುದಿ ಮೊದಲಿಲ್ಲವು ಎನ್ನಾಪರಾಧಕ್ಕೆ
ಇದಕೊಂದೆ ಮದ್ದು ನಿನ್ನಯ ನಾಮವು ತ್ರಿ
ಪದನಾಮ ನಮ್ಮ ವಿಜಯ ವಿಠ್ಠಲನೆ ಶ್ರುತಿತತಿನುತ
ಉದಕ ಮಾತ್ರದಲಿ ಪಾವನವ ಮಾಡೊ ೩

ಅಟ್ಟತಾಳ

ಪಾಪಕರ್ಮನು ನಾನು ಪಾಪಸಂಭವ ನಾನು
ಪಾಪಕಾಯ ನಾನು ಪಾಪಿಷ್ಠನು ನಾನು
ಪಾಪಿಗಳ ಸಂಗ ಪ್ರಾಪುತ ನರನಾನು
ಈ ಪರಿಯವಗುಣ ಶತ ಸಾವಿರವುಂಟು
ಅಪಾರ ಜಿತನಾಮ ವಿಜಯ ವಿಠ್ಠಲ ನಿನ್ನ
ಶ್ರೀಪಾದವನು ತೋರಿ ರೂಪ ಉದ್ಧರಿಪುದು ೪

ಗೂಡಿನೊಳಗೆ ಪಾಪ ಗೂಢವಾಗಿಪ್ಪುದು
ಕೂಡಿ ಹಾಕಿದರೆ ನೂರು ಮಡಿ ಮೇರುವಿಗೆ
ಆಡಲೇನದು ಎನ್ನ ಮೂಢ ವಿಧಿಗಳು
ಕಾಡಿಗೆ ಕಾಳ, ಬೆಳದಿಂಗಳಯ್ಯ
ನೀಡಿ ಕೈ ಚಾಪವ ಹೂಡಿ ಬಾಣವನೆಚ್ಚು
ಕಾಡುವ ಪಾಪದ ಗೂಡ ಕತ್ತರಿಸು
ಮೂಡಲಗಿರಿಸದನ ವಿಜಯ ವಿಠ್ಠಲ ಎನ್ನ
ಹೂಡಿ ನಿನ್ನವರೊಳು ಪಾಡು ಪಂಥವಬಿಡಿಸಿ ೧

ಮಟ್ಟತಾಳ

ಶಬ್ದಾದಿಗಳಲ್ಲಿ ಉಬ್ಬಿ ಉತ್ಸಹನಾಗಿ
ಮಬ್ಬು ಕವಿದಂತೆ ಗಬ್ಬು ದೇಹದಲ್ಲಿ
ಹಬ್ಬಿದ ಪಾಪದ ನಿಬ್ಬಡಿ ತಿಳಿಯದೆ
ಶಬ್ದ ಸಿಂಹಾಸನ ವಿಜಯ ವಿಠ್ಠಲ ನಿನ್ನ
ಶಬ್ದವನು ಬಿಟ್ಟು ಕೊಬ್ಬಿದವನಾದೆ ೨

ತ್ರಿವಿಡಿತಾಳ

ಕಾಷ್ಟಕ್ಕೆ ತೈಲವ ಪೂಸಿ ಪರಿಪರಿಯಲ್ಲಿ
ಕೋಷ್ಟದೊಳಗೆ ಮೆರೆಸಿ ಪ್ರೇಮದಿಂದ
ವಿಷ್ಣುಪದಿಯೊಳಗದ್ದಿ ತೆಗೆದರೆ ಏನು
ಪುಟ್ಟುವುದೇನದಕೆ, ಪ್ರತಿ ಪೆಸರು
ಭ್ರಷ್ಟ ಮಾನವ ನಾನು ಎಷ್ಟು ಮಾಡಿದರೇನು
ನಿಷ್ಟೆನಾಮ, ವಿಜಯ ವಿಠ್ಠಲ ಎನ್ನಂಗದ
ಕಿಟ್ಟವ ಕಳೆದು ಪುಟವ ಹಾಕಿಸುವರು ೩

ಅಟ್ಟತಾಳ

ಆಶೆಯೆಂಬುದು ಆಕಾಶಕ್ಕೆ ಮುಟ್ಟುತಿದೆ
ವಾಸುದೇವ ನಿನ್ನ ನೆನೆಸುವೆನೆಂದರೆ
ಬ್ಯಾಸರಿಕೆ ಪುಟ್ಟಿ ಬೈದುಕೊಂಬೆನಯ್ಯ

ಈ ಶರೀರವು ಎಲ್ಲಿ ಬಂತು ಎಂದು
ವಾಸುದೇವ ನಾಮ ವಿಜಯ ವಿಠ್ಠಲ ನಿನ್ನ
ವಾಸನೆ ಎಂದಾರು ಬೀಸುವುದೆ ಸರಿ ೪

ಆದಿತಾಳ

ಆವಕಾವ ಗೋವ, ಚಾಲವರಿದು ಕೂಗಿ ಶುದ್ಧ
ಲಾವಕರಟ್ಟುಳಿ ಬಿಡಿಸು, ದೇವ ದೇವ ದೇವ ನೀನೆ
ಪಾಲು ಉಳಿಯೆ ಚೆಲ್ಲಿ ಚಿನ್ನಾಟವಾಡುವುದಯ್ಯ
ಪಾಲಿಗಿಂದಧಿಕ ಶ್ರೀ ಹರಿ ನಿನ್ನ ನಾಮಗಳು
ಆಳಾಗಿ ಸವಿಯಲು ವಶವಾಗದೆ
ಕೇಳೊ ಎನ್ನ ಯೋಗ್ಯತದಷ್ಟು ಫಲಿಸಿತು
ಮೇಲಾಗಿದ್ದದ್ದೆಲ್ಲ ಧರಿಯೆಲ್ಲ ತುಂಬಿತು
ಬೋಳೈಪ ಬಲ್ಲನೆ ಹರಿವ ಪ್ರವಾಹವ
ಲಾಲಿಪದು ಎನ್ನ ಬಿನ್ನಪವ
ಕಾಳು ಕಾಣದಲಿದ್ದು ಬಳಲುವಂಥ ಒಂದು
ಕೋಳಿಯ ರಾಶಿಗೆ, ಕಾಯಲಿದೆ
ಆಳಿದವನ ಮಾತು ಮನ್ನಿಸಿ ಮತಿಯಿಂದ
ಕಾಲ ಘಳಿಗಿ ಸುಮ್ಮನೆ ಇಪ್ಪುದೆ
ಕಾಲಿನಿಂದಲಿ ಕೆದರಿ ತನ್ನ ಸುತ್ತಲು ಇದ್ದ
ಕೋಳಿಗೆ ತಿನಿಸದೇ ಬಿಡಬಲ್ಲದೆ
ಬಾಲ ಮತಿಯು ನಾನು ನಿನ್ನ ಗುಣಗಳೆಂಬೊ
ಸಾಲು ರಾಶಿಗಳಿರೆ ಅದರೊಳೊಂದು
ಆಳಾಗಿ ಇದ್ದು ನಿತ್ಯ ಕಾಯೆಂದಡೆ ಎನ್ನ
ನಾಲಿಗೆ ತಾ ಸುಮನಿಪ್ಪುದೆಂತೊ
ಊಳಿಗದವನಾದೆ ಇದಕಲ್ಲದೆ ಇತರ
ಆಲೋಚನೆಯಿಲ್ಲ ಮನದೊಳಗೆ
ನೀಲಮೇಘ ಶ್ಯಾಮ ವಿಜಯ ವಿಠ್ಠಲನೆ, ದ–
ಯಾಳೆ ಎನ್ನ ಫಾಲಲಿಪಿ ಇಂತುಂಟೆ ದೇವ ೩

ಅಟ್ಟತಾಳ

ವಾರಿಧಿಗೆ ಪೋಗಿ ವಾರಿದನು ಬೇಗ
ವಾರಿ ತುಂಬಿ ತಂದು ಧಾರುಣಿಯೊಳಗೆ ವಿ-
ಸ್ತಾರ ಮಳಿಯನು ಸಾರಿ ಸಾರಿಗೆ ಕರೆದರೆ ಬೇಸರತನವೆ
ಆರಿಗಾದರು ಪುಟ್ಟಿ ಸಾರಲಿ ಎಂಬುದು
ನಾರಾಯಣ ನಿನ್ನ ಚಾರು ನಾಮದರಸ
ಧಾರುಣಿಯೊಳು ನಾನು ಬೀರಿದರೆ ಕೆಲ
ಸಾರಿಗೆ ಸಾಕೆಂದು ಮೋರೆ ತಿರುವೋರೆ
ಆರಿಗಾದರು ಸಂಸಾರ ನಿವರ್ತಿಯಾ
ವಾರಿದಗೇನು ವಿಕಾರತನವುಂಟೆ?
ವಾರಿಜಪತಿ ನಮ್ಮ ವಿಜಯ ವಿಠ್ಠಲ ನಿನ್ನ
ದೂರಿದೆನೇನೊ ಉದ್ಧಾರನಾಗುವೆನೆಂದು ೪

ಆದಿತಾಳ

ಇದ್ದ ಗುಣಂಗಳೆ ಬುದ್ಧಿಗೆ ಪೊಳೆದಷ್ಟು
ಬದ್ಧವಾಗಲಿ ಅಪಶಬ್ಧವಾಗಲಿ ಇದೆ
ಸಿದ್ಧವಾಗಲಿ ಅಪ್ರಸಿದ್ಧವಾಗಲಿ ಪ್ರಮೇಯಾ
ಪದ್ಧತಿಗಳು ನುಡಿವೆ ಪೊದ್ದಿಕೊಂಡು ನಿನ್ನಂಘ್ರಿ
ಪದ್ಮವನನುದಿನ ಹೃದ್ವನಜದೊಳಗಿಟ್ಟು
ಶುದ್ಧಮತಿಯಲ್ಲಿ ಊರ್ಧ್ವಗತಿ ಬಯಸುವೆ
ನಿದ್ರಾರಹಿತ ದೇವ ವಿಜಯ ವಿಠ್ಠಲ ಜಗ
ದೋದ್ಧಾರ ನೀನೊಲಿಯದಿದ್ದರೆ ಗತಿಯಿಲ್ಲ ೫

ಜತೆ

ಈ ಕ್ಷಣದಲಿ ಏನು ಫಲಸಿದ್ಧ ಫಲವಯ್ಯ
ನಿಕ್ಷೇಪ ಅಹುದಯ್ಯಾ ವಿಜಯ ವಿಠ್ಠಲ ಎನಗೆ ೬

೫೨

ಧ್ರುವತಾಳ

ನ್ಯಾಯವ್ಯಾತಕೆ ದೇವ ಎನ್ನ ಕೂಡಲಿ ನಿನಗೆ
ಶ್ರೇಯಸ್ಸು ಬರುವುದೇನು ಇನಿತಾದರು
ಕಾಯೊ ಕರುಣದಿಂದ ಭವದಲ್ಲಿ ಬಲು ನೊಂದು
ಬಾಯಬಿಟ್ಟೆನಲ್ಲದೆ, ಮಲತವನೆ
ತಾಯಿ ತಂದೆ ನೀನೆ ಅನಂತ ಕಲ್ಪಕ್ಕೆ ಪರ–
ಕೀಯರ ಕಾಣೆನೋ, ನೋಡಲಾಗಿ
ನೋಯಕ್ಕೆ ಹಾಕದಿರು, ಶರಣು ಪೊಕ್ಕವನ್ನ, ತ್ರಿ–
ಕಾಯವ ಪೋಗುವಂತೆ ಮತಿಯ ಕೊಡೊ
ಮಾಯ ನಿನ್ನದಯ್ಯಾ ವಿಚಾರಿಸೆ
ಭೂವ್ಯೋಮ ಪಾತಾಳ ದಶದಿಕ್ಕು ಸರ್ವದ
ನೀಯಾಡಿಸಿದಂತೆ ನಿಲ್ಲದೆ ಚಲಿಪವು
ನಾಯಿ ಸಂಗಡ ಸಿಂಹ ಮತ್ಸರ ಮರೆದು, ಉ–
ಪಾಯದಿಂದಲಿ ತನ್ನ ಶಕ್ತಿತೋರೆ
ಪ್ರೀಯವಾಗಿ ಕೇಳೆ ಸಹ ಸಕಲವಾದೆ
ಶ್ರೀಯರಸನೆ ನಿನ್ನ ನಗೆ ಒಂದು ಬಗೆಯಾಗಿ
ಕಾಯಾದೊಳಗೆ ಎನಗೆ ತೋರುತಿದೆ
ವಾಯುವಂದಿತ ನಮ್ಮ ವಿಜಯ ವಿಠ್ಠಲ ನಿನ್ನ
ಕಾಯಕಾರ ಪೊಂದಿದವನೊ ನಾನು ೧

ಮಟ್ಟತಾಳ

ಬಿಡು ನಿನ್ನ ಬಿಂಕ ಭಕ್ತರೊಳಗೆ ಇದೆ
ನಡೆಯದು ನಾನಾ ಬಗೆಯಿಂದ ನೋಡಿದರು
ಬಿಡರು ನಿನ್ನ ಪಾದ ನಿತ್ಯದಲ್ಲಿ ಭಜಿಸಿ
ಅಡಿಗಡಿಗೆ ಕೂಗಿ ಸೊರಗಿ ಬೀಳುವರಯ್ಯ
ಒಡೆಯ ಬಿನ್ನಪ ಕೇಳೋ ಅವರ ಮನೋಧೈರ್ಯ

ಬಿಡಿ ಮಾತುಗಳಲ್ಲ ನೋವು ಬಂದರಾಗೆ
ತಡೆವರು ಭಯತೋರಿ, ಬಿರಿದನು ಕೊಂಡಾಡಿ
ದೃಢ ದೇವನೆ ನಮ್ಮ ವಿಜಯ ವಿಠ್ಠಲ ಎನ್ನ
ಕಡೆಯವನೆನ್ನದಿರು ಅವರ ದಾಸರ ದಾಸ ೨

ತ್ರಿವಿಡಿತಾಳ

ತೋರಿ ನುಡಿವುದೇನು ಬಲ್ಲ ಮಾತಿಗೆ ದೇವ
ಸಾರಿದಂತೆ ವರವ ಕೊಟ್ಟರೊಳಿತೇ
ಮೀರಿದರಾದಡೆ ನಿನಗೆ ಹರಕೆಯ ಕೊಡುವೆ
ಆರಾದರು ಏನು ಮೆಚ್ಚದಿರಲು
ಕಾರಣವಾಗುವುದು ಪೇಳುವೆ ನಿಜವಾಗಿ
ದೂರದಲೆ ನಿನ್ನ ತೊಲಗ ಬಿಡೆ
ಶಾರೀರವೆ ನಿಜ ಕಂಪಾಗಲಿ?
ಮೋರೆಯೆತ್ತದಂತೆ ವಾರಿಯೊಳಗೆ ಮುಣುಗೊ, ಗುಡಿ
ದಾರೆ ನಿನಗೆ ಮಣ್ಣೆ ಪ್ರಾಪ್ತವಾಗಲಿ
ಪೊರಗಾಗಿ–ಮೋರೆ ಸೊಟ್ಟಾಗಲಿ
ಸೇರಿ ಕಾಲವ ಕಳಿಯೊ ಪರರ ದ್ವಾರದಲಿ
ಧಾರುಣಿ ತ್ಯಾಗವಾಗಿ ನೀ ಪೋಗಯ್ಯ
ಅರಣ್ಯ ಪಾಲಾಗಿ ನಿಲ್ಲದೆ ಚಲಿಸುವುದು
ಜಾರ ಚೋರನಾಗು ತಿರುಗಿ ತಿರುಗಿ
ನಾರಿಯರ ಮುಂದೆ ಲಜ್ಜೆಗೇಡಿಗನಾಗು
ವೀರನಾಗೆಲೊ ಕಾಸು ದೊರೆಯದಲೆ
ಈ ರೀತಿಯಲಿ ನಿನಗೆ ಎಂದಿಗೆಂದಿಗೆ ತಪ್ಪದೆ
ವಾರವಾರಕೆ ಕರ್ಮ ಕಾಡುತಿರಲಿ
ಆರನ್ನ ಕಾಣದೇ ಪರದೇಶಿಯಾ ಇಂಥ
ಘೋರದೊಳಗೆಯಿಟ್ಟು ಬಳಲಿಸುವೆ
ಸಾರಿದವರ ನೆಂಟ ವಿಜಯ ವಿಠ್ಠಲ ನಿನ್ನ
ಕಾರುಣ್ಯತನವಿನ್ನು ಎಲ್ಲಿ ಪೋಯಿತೂ ದೇವ ೩

ಅಟ್ಟತಾಳ

ಲವತೃಟಿ ಕಳಕಾಷ್ಟಾ ಆವಾವ ಕಾಲಕ್ಕೆ
ಅವನಿಯೊಳಗೆ ನಾನೆ ಪುಟ್ಟಿ ಬಂದು ಈಗ
ಭವದಲ್ಲಿ ಇದ್ದು ಮಾಡುವ ಕರ್ಮಂಗಳು
ಶ್ರವಣದಿ ಎಸಗುವ ಚೇಷ್ಟೆ ಚೇಷ್ಟಯು
ಪವನೇಶ ನೀನೆ ಸಾಕ್ಷಿ ಭೂತನಾಗದೆ
ತವಕದಿಂದ೨ ನಾನೊಬ್ಬ ಮಾಡಿದರೇನು
ಕವಿಗಳು ನಿನಗೆ ಹೇಳುವ ಮಾತು ಕೇಳಲು
ನವನವ ಬಗೆಯೆಂದು ನಗದೆಯಿಪ್ಪರೆ ದೇವ
ರವಿತೇಜ ಆನಂದ ವಿಜಯ ವಿಠ್ಠಲರೇಯ
ತ್ರಿವಿಧಗುಣಂಗಳು ನಿನ್ನಾಧೀನವೊ ೪

ಆದಿತಾಳ

ಇದೆ ಸಾಕು ಎನಗೆ ಮತ್ತಿದಕೆ ವೆಗ್ಗಳ ಉಂಟೆ
ಪದೊಪದಿಗೆ ನಿನ್ನ ದಾಸನೆನಿಸಿಕೊಂಬೋದು
ಅದು ಪರಮ ಲಾಭವಯ್ಯ, ಅನಂತಾನಂತ ಜನುಮಕ್ಕೆ
ಒದಗಿ ಬಂದು ಪೆಸರು ಪೋಗುವುದನು ಪೇಳೋ
ಮುದದಿಂದ ಕರೆಸಿಕೊಂಡು ಹಿಂದಾಗಿ ಪೋದಕಾಲ
ಪದುಮನಾಭನೆ ನೀನು ತಿರುಗಿ ತರಿಸಲಾಪೊಎ ಯಾ
ಇದೇ ಧೈರ್ಯವಿಡಿದು ನಿನ್ನ ಕೊಂಡಾಡಿದೆನಯ್ಯ
ಪದವಿಲಿ ಸುಖಬಡುವ ಜ್ಞಾನವ ಕೊಡು ಜೀಯ
ಮದನ ಜನಕ ನಮ್ಮ ವಿಜಯ ವಿಠ್ಠಲರೇಯ
ಸದಮಲ ನಿನ್ನ ಪಾದ ನೆನೆಸುವ ಭಾಗ್ಯವನು ೫

ಜತೆ

ನಿನಗಂಜುವನಾರು ಮನಮುಟ್ಟಿದ ಮ್ಯಾಲೆ
ಘನಕೃಪಾವನಧಿ ಶ್ರೀ ವಿಜಯ ವಿಠ್ಠಲರೇಯ ೬

೫೪

ಧ್ರುವತಾಳ

ನಿನ್ನ ಇಚ್ಛೆಯಿಂದ ಬಂದ ನಾನಾ ಭೋಗಂಗಳು
ಘನ್ನವಾದರೂ ಪತಿಕರಿಸಬೇಕು
ಎನ್ನ ಸತಿಪುತ್ರರು ಸುತ್ತಣ ಪರಿವಾರ
ಅನ್ನಂತ ಕಾಲದಲ್ಲಿ ಬಳಿಯಲ್ಲಿ ಇದ್ದರು
ಎನ್ನವರಲ್ಲವೊ ಎಂದೆಂದಿಗೆ ಪ್ರ–
ಸನ್ನವದನ ಪಾವನ್ನ ಭಾಗ್ಯಸಂಪನ್ನ
ನಿನ್ನಾಧೀನದವರೊ ನಿನ್ನ ಸೂತ್ರದಲ್ಲಿ
ಚೆನ್ನಾಗಿ ತಿರುಗುವರು ನಾನಾ ಪ್ರಕಾರವಾಗಿ
ಮುನ್ನೆ ಮಂದಿರ ಪಶು ಬಗೆಬಗೆ ದ್ರವ್ಯಗಳು
ಉನ್ನತವಾಗಿರೆ ಮಮತೆಯ ಕಲ್ಪಿಸಿ
ಬಿನ್ನಣದಲಿ ಹಚ್ಚಿ ಹೇರಳವಾಗಿ ಇನಿತು
ಬಣ್ಣನೆ ತೋರಿಸುವುದು ಬಹುಕಾಲದಲ್ಲಿ ಮಾಯಾ
ಬಣ್ಣಕೆ ಏನೆಂಬೆ ಕುಶಲದ ಗತಿಯನ್ನು
ಎನ್ನದೆಂದರಿಷ್ಟೆ ಚಿಂತೆ ಮಾಡಲಿಬೇಕು
ಇನ್ನು ಸಂಶಯವಿಲ್ಲ ಮನೊವಾಕ್ಕಾಯದಲಿ
ನಿನ್ನ ಸರಿ ಬಂದಂತೆ ಮಾಡೊ ಮಹಮಹಿಮ
ನಿನ್ನಿಂದಾದದ್ದೆ ಸಕಲ ವ್ಯಾಪಾರ ಅಪಾರ
ಎನ್ನ ಸ್ವತಂತ್ರವೇನು ವಿಜಯ ವಿಠ್ಠಲರೇಯ
ನಿನ್ನ ಪಾದವೆ ಹೃದಯದೊಳಗೆ ನಿರುತ ೧

ಮಟ್ಟತಾಳ

ಒಬ್ಬರನ್ನೊಬ್ಬರಿಗೆ ವಶಮಾಡಿ ಮೋಹ
ಹಬ್ಬಿಸಿ ಹಗಲಿರುಳ ಅಬ್ಬರ ವೃತ್ತಿಯಲಿ
ಮಬ್ಬು ಕವಿಸಿ ಭವದ ಉಬ್ಬಲೊಳಗೆ ಹಾಕಿ
ಉಬ್ಬಸವ ಬಿಡಿಸಿ ಉಬ್ಬಿಡಿ ಕೊರಳಿಗೆ

ಕಬ್ಬಿಣ ಪಾಶದಲಿ, ಶಬ್ದಾದಿ ವಿಷಯ
ನಿಬ್ಬರ ಕರ್ಮದಲಿ ತಬ್ಬುಬ್ಬಿಗೊಳಿಸುತ
ಉರ್ಬಿಯೊಳಗೆ ಎನ್ನ ಇಬ್ಬಗೆ ಮಾಡುವುದು
ಹೆಬ್ಬಗೆತನವೇನೋ ಅಬ್ಜನಾಭ
ಅಬ್ಜಪಾಣಿ ನಮ್ಮ ವಿಜಯ ವಿಠ್ಠಲರೇಯ
ಅಬ್ಬಿದವರಿಗೆ ಪ್ರಾರಬ್ಧ ತೀರಿಸಿ ಬಿಡುವೆ ೨

ತ್ರಿವಿಡಿತಾಳ

ಎನ್ನ ಮೇಲಪರಾಧ ಲೇಶ ಮಾತುರ ಇಲ್ಲ
ಅನ್ಯಾಯದವನಲ್ಲ ನಾನು ದೇವ
ಇನ್ನು ಮಾತನು ಕೇಳು ನೆರದು ಜನರು ನಿತ್ಯ
ನಿನ್ನದಾಸದಾಸಿಯರು ನಿಜವೆಂಬೆನೋ
ನಿನ್ನ ಲೀಲೆ ಅಲ್ಲದೆ ಪ್ರತಿ ಕಾಣೆನೊ
ಧನ್ಯನ ಮಾಡಿ ಪೊರೆವನಾರು ಜಗದೊಳು
ಅನ್ಯಥವೆನಿಸ ನೋಡುವನಾವನಾರ್ಯೆ
ಕಣ್ಣಿಲಿ ಮನಸಿಲಿ ಕಾಣದ ಭೋಗಗಳು
ಅನ್ನಂತವಾಗಿ ಕೊರತೆಯಿಲ್ಲದೆ
ಉಣ್ಣಿಸಿ ಆನಂದ ಕೊಡುವ ವಿಚಿತ್ರವ
ಬಣ್ಣಿಸಿ ಪೇಳಲೊಶವೆ ನರರಿಗೆ
ಜನ್ಯಜ್ಞಾನವ ಕಳೆವ ವಿಜಯ ವಿಠ್ಠಲ ಪಂಚ–
ಜನ್ಯಗಲ್ಲದೆ ಕೇವಲತಿದಾಸರ ಪೊರಿದೆ ೩

ಅಟ್ಟತಾಳ

ಆರು ಮುಖ್ಯರೆ ಇಂದು ನೆರೆದ ಜನರೊಳು
ಆರಿಂದ ಈ ಭಾಗ್ಯ ದೊರಕಿಯಿಪ್ಪುದು ಕಾಣೊ
ಆರಿಂದ ಮಪಕೀರ್ತಿ ಬರುವುದು ಮೆರೆವುದು

ಆರು ಪುಣ್ಯಕೆ ಮುಖ್ಯರು ಮುದದಿಂದಲಿ
ಆರಾರೊ ಇದರೊಳು ಅತಿಶಯವಂತರೊ
ಆರಾದರೇನಯ್ಯ ಬಗೆ ಬಗೆ ಪರಿ ನಿನ್ನ
ಆರಾಧನೆ ನಡೆದರೆ ಸರಿಯಲ್ಲದೆ
ಧಾರುಣಿಯೊಳು ನಮ್ಮ ಉದರ ತುಂಬಿಕೊಂಡು
ಶರೀರ ರಕ್ಷಿಸಿ ಕೊಂಬ ತೆರದಲ್ಲಿ
ಊರೂರು ತಿರುಗಿದರೇನು ನಿನ್ನಯ
ಮೂರುತಿಯ ಧ್ಯಾನ ಮಾನದಲ್ಲಿದ್ದರೆ ಸಾಕು
ಭಾರಕರ್ತನಾದ ವಿಜಯ ವಿಠ್ಠಲರೇಯ
ಸಾರಿ ಸಾರಿಗೆ ನಿನ್ನ ಕರುಣವೆ ಘನಪದವಿ ೪

ಆದಿತಾಳ

ಹತ್ತದೆಂಬುದ್ಯಾತಕೆ, ಹರಿಯೆ ಲಾಲಿಸು ನಿನ್ನ
ಚಿತ್ತದಲ್ಲಿದ್ದುದೆ ಸಂಕಲ್ಪವಿದೆ ಸರಿ
ಹತ್ತುಜನರ ಕೂಡ ಚರಿಸಬೇಕೆಂಬೊ ಕರ್ಮ-
ಮತ್ತೆ ಮತ್ತೆ ಇರಲಿಕ್ಕೆ ಬರಿದೆ ಯೋಚಿಪದೇನು
ಎತ್ತ ಪೋದರೇನು ಬಿಡುವುದೆ, ಸಂಸ್ಕಾರ
ಹತ್ತಿಕೊಂಡಿಪ್ಪುದು ಮಹಜ್ಞಾನಿಗಾದರು
ಅತ್ಯಂತವಾಗಿ ಅನುಭವಿಸದೆ ಬಿಡದು
ಸತ್ಯಸಂಕಲ್ಪ ನಮ್ಮ ವಿಜಯ ವಿಠ್ಠಲ ನೀನೆ
ನಿತ್ಯದಲ್ಲಿ ನಡೆಸಿದಂತೆ ನಡೆಯಬೇಕು ೫

ಜತೆ

ಎಲ್ಲಿದ್ದರೇನಯ್ಯ ನಿನ್ನ ಕ್ಲಪ್ತಿಗೆ ಕಡಿಮೆ
ಎಳ್ಳಿನಿತೆಯಿಲ್ಲ ವಿಜಯ ವಿಠ್ಠಲರೇಯ ೬

೫೫

ಧ್ರುವತಾಳ

ನೀ ಕೈಯ ಕೃಪೆಯಿಂದ ಪಿಡಿದರೆ ತೊಲಗದೆ
ಲೋಕದೊಳಗೆ ನಿರ್ಭಾಗ್ಯರುಂಟೆ
ಸಾಕುವರನುದಿನ ಸರ್ವದೇವತೆಗಳೂ
ಬೇಕೆಂದು ಮುಂದೊಲಿದು ಪ್ರೀತಿಯಿಂದ
ಜೋಕೆ ಮಾಡುವರಯ್ಯ ಆವಾವಾಪತ್ತುಗಳಾ
ನೇಕವಾಗಿ ಬಂದರೆ ಬೆಂಬಿಡದೆ
ಶ್ರೀಕಾಂತ ನಿನ್ನಾಣೆ ಅಜ್ಞಾನ ಮೀರದ ದೈವವುಂಟೆ
ಲೌಕಿಕ ವೈದಿಕದಲ್ಲಿ ಕೂಡ
ಕಾಕುಲಾತಿಯಿಂದ ನಾನೆಂದು ಕೊಂಡಾಡುವ
ವ್ಯಾಕುಲದಿಂದಲಿ ಕಡೆ ಬೀಳನು
ನೀ ಕರುಣಿ ನೀನೆ ಸ್ವಾಮಿ ನೀನೆ ನಿಯಾಮಕ ನೀನೆ
ಸಾಕುವ ದಾತನೆಂದು ಮೊರೆಯಿಡಲು
ಬಾಕುಳಿಕನಾಗಿ ಬದಿಯಲ್ಲಿ ನಿಂತು ಬೀದಿಗೆ
ಹಾಕದಲೆ ರಕ್ಷಿಸುವ ಹರಿಯೇ
ಏಕಮನಸಿನಲ್ಲಿ ನೆರೆನಂಬಿ ನಂಬಿದವ
ವಾಕು ಪೇಳಿದ್ದದ್ದೆಲ್ಲ ಪುಶಿಯಾಗದು
ಶೋಕವೆಂಬೋದೆ ಕಾಣೆ ನಿಜಭಕ್ತನವನೆ ಪುಣ್ಯ
ಶ್ಲೋಕನಾಗಿಪ್ಪ ನಿನ್ನ ಪೊಂದಿ
ಕುಕರ್ಮ ನಾಶಾ ಸಿರಿ ವಿಜಯ ವಿಠ್ಠಲ ವಿ
ವೇಕ ಮೂರುತಿ ನಿನ್ನ ಕರುಣಾತನಕೇನಂಬೆ ೧

ಮಟ್ಟತಾಳ

ವನಧಿ ಪರ್ವತ ಗಗನ ಅನಲ ಧರಣಿ ವರುಷ
ಅನಿಲ ಉರಗ ವ್ಯಾಘ್ರ ಘನಕರಿ ಕಾದೆಣ್ಣೆ
ಮೊನೆ ಶಸ್ತ್ರಾಸ್ತ್ರಗಳು ವನ ನದಿ ಮಹನಂಜು
ಗಣನೆ ಇಲ್ಲದ ಭೂತ ದನುಜ ನಿಕರವೆಲ್ಲ

ಇನಿತಿನಿತರ ಬಾಧೆ ಕ್ಷಣ ಮಾತುರ ಬಿಡದೆ
ಎನಗೆ ತನಗೆ ಎಂದು ದಣಿಸಿದ ಕಾಲಕ್ಕೂ
ಮನೆ ಮಾಡದ ದೇವಗಣದವರು ನಿಂದು
ಅನುಮಾನ ಮಾಡದಲೆ ಅನಿಮಿತ್ತರಾಗಿ
ವನಜನಾಭನೆ ನಿನ್ನ ಅನುಕಂಪನದಿಂದ
ತನುರೂಹಗಳಿಗೆ ಯಾತನೆ ಯಾಗದಂತೆ
ವನ ಕಾಪಾಡುವರು ಗುಣ
ಗಣ ಸುಖಸಾಂದ್ರ ವಿಜಯ ವಿಠ್ಠಲರೇಯ
ನಿನಗೆ ನಮಿಸಿದವನ ತನುವೆ ಸರ್ವದ ಸುಖ ೨

ತ್ರಿವಿಡಿತಾಳ

ಗೇಣುದ್ದ ಜಲದೊಳು ಅದರ ಇಮ್ಮಡಿಯಾದ
ಮೀನು ಬಿದ್ದು ಬಲು ಸಂಕಟ ಬಡುವಂತೆ
ನಾನು ಈ ಭವದಲ್ಲಿ ಪೊಕ್ಕು ನೆಲೆಗಾಣದೆ
ಹೀನ ಮತಿಯಲ್ಲಿ ಬಳಲುವೆನು
ಏನೆಂಬೆನಯ್ಯ ಈ ಸಂಸಾರವೆಂಬೋದೆ
ಮೇಣು ಬಿಟ್ಟವನಲ್ಲ ಬಿಡದಿದ್ದವನಲ್ಲ
ಮೀನನಂತೆ ನಿತ್ಯ ತಳಮಳವು ಗೊಳುತಿದ್ದು
ಧ್ಯಾನ ಕಾಣದೆ ಪೋದೆ ನಿನ್ನ ಪದದ
ಜ್ಞಾನವಂತರು ನಿನ್ನ ಮೊರೆಪೊಕ್ಕು ಉಳಿದದ್ದು
ಆನಂದವಾಗಿ ನಾ ಕೇಳಿ ಕೇಳಿ
ಸ್ಥಾಣುವಿನಂದದಿ ನಾನು ಬಾಳಿದೆನೊ
ವಾಣಿಯರಸನಯ್ಯ ವಿಜಯ ವಿಠ್ಠಲ ಬಹು
ಮಾನವಾಗಬೇಕೆಂದು ತಿರುಗಿದೆ ನಿನ್ನ ಮರೆದು ೩

ಅಟ್ಟತಾಳ

ಅಡವಿ ಪಟ್ಟಣ ಕಂಡ ಗಿಡವೆ ಕಲ್ಪತರು
ಮಡುವುಗಳಮೃತಗಡಲವೆಂದೆನಿಪವು
ಖಡುಗ ಪೂವಿನ ಮಾಲೆ ಸಿಡಿಲು ರನ್ನದ ಕ

ನ್ನಡಿಯಾಗಿ ತೋರೋದು ತಡದ ಮಾರಿಗಳ ಸಂ
ಗಡಲೆ ಬಾಂಧವರಯ್ಯಾ ಕಡುಕೋಪದವ
ರೊಡನೆ ತಿರುಗುವರು ಕುಡಿದ ಗರಳ ಕಾ
ಲೆಡಿಸದು ಅನುದಿನ ನಡೆದ ನಡತಿ ಸುಖ
ಬಡಿಸುವದು ವೇಗ ಹಿಡದದ್ದೆಲ್ಲ ಸಾಧ್ಯ
ಪೊಡವಿಯೊಳಗೆ ಸುಧಾಗಡಲ ತಲ್ಪನೆ ನಿನ್ನ
ಅಡಿಗಡಿಗೆಲ್ಲೆಲ್ಲಿ ಬಿಡದೆ ಧೇನಿಸುವಂಥ
ದೃಢ ಭಕ್ತನಿಗೆ ಬಾಧೆ ಅಡಗಾಣಿಪದುಂಟೆ
ನುಡಿ ನುಡಿ ತಿಳಿದು ನಾ ಜಡವಾಗಿ ಭವವೆಂಬೊ
ಮಡುವಿನೊಳಗೆ ಬಿದ್ದು ಕಡೆಗಾಣದೆ ಪೋಪೆ
ಕಡುರಾಯ ವಿಜಯ ವಿಠ್ಠಲರೇಯ ಕರುಣಿಸು
ನಡತಿ ತಪ್ಪಿದ ಮಾನವ ನಾನು ಗತಿ ತೋರೋ ೪

ಆದಿತಾಳ

ನಿನ್ನ ಪೆಸರ್ಗೊಂಡರೆ ತತ್ತದಭಿಮಾನಿಗಳು
ಘನ್ನವಾಗಿ ಒಲಿದು ಅಲ್ಲಲ್ಲಿ ತಾವೆ ಇದ್ದು
ಬೆನ್ನು ಬಲವಾಗಿ ಲೇಶ ಮಾತುರವಂಗೆ
ಖಿನ್ನ ತೋರದಂತೆ ಸಂರಕ್ಷಿಸುವರು
ನಿನ್ನ ಧೊರೆತನದ ಭಯದಿಂದ ಸಮಸ್ತರು
ಅನ್ಯಥಾಗಗೊಡದೆ ಕಾದುಕೊಂಡಿಪ್ಪರು
ಇನ್ನೇನು ಪೇಳಲಿ ಇಂಥ ವೈಚಿತ್ರಕ್ಕೆ
ಎನ್ನಿಂದಾಗದು ಸ್ವಾಮಿ ಕರ ಮುಗಿದು ನಮೋ ಎಂಬೆ
ಘನ್ನ ಮೂರುತಿ ನಮ್ಮ ವಿಜಯ ವಿಠ್ಠಲರೇಯ
ನಿನ್ನ ನಂಬಿದವಗೆ ಕೇಡಿಲ್ಲ ಕೇಡಿಲ್ಲ ೫

ಜತೆ

ಇವನೆ ಭಾಗ್ಯವಂತ ಮೂರು ಲೋಕದೊಳಗೆ
ಕವಿಗಳ ಮನೋಹರ ವಿಜಯ ವಿಠ್ಠಲರೇಯ ೬

೫೬

ಧ್ರುವತಾಳ

ನೀ ಬಾರದಿರೆ ಈ ಕಳೇಬರ ವ್ಯರ್ಥ ನಾ
ನು ಬದುಕಿ ಪಡುವ ಲಾಭ ಮತ್ತಾವುದು
ಶೋಭನ ತರಣಿಸನ್ನಿಭಕೋಟಿಕಾಯ
ಸುಬಲ ನೀನು ದೀನಬಾಂಧವ ನೀನು
ಕುಬುದ್ಧಿಗನು ನಾನು ಲೋಭಿಗನು ನಾನು
ನೀ ಬಲ್ಲವನೆಂದು ಬಯಸಿದೆ ನಿನ್ನ
ಪ್ರಭಾವವನು ಕಾಯಿ ಬಳ್ಳಿಗೆ ಬ
ಲು ಭಾರವೇನು ರಂಗ ಶ್ರೀ ಭೂರಮಣಾಂಬುಜ
ನಾಭನೆ ನೀನು ಮೂರು ಭುವನದೊಳಗೆ
ಸೌಭಾಗ್ಯನಾಗಿ ಎನ್ನ ಅಭಾಗ್ಯನ್ನ ಮಾಡೋರೆ
ಬೀಭತ್ಸು ಪಾಲವಸ್ತಿ ವಿಜಯ ವಿಠ್ಠಲರೇಯ
ಶೋಭಿಸುವ ಪಾದ ಭಕುತಿಯನೀಯೊ ೧

ಮಟ್ಟತಾಳ

ಬೇಡೆನೊ ಬೇಡೆನೊ ಬ್ಯಾಸರಿಸಿ ನಿನ್ನ
ಕಾಡೆನೊ ಕಾಡೆನೊ ಕ್ರಮಗೆಡಿಸಿ ನಿನ್ನ
ಆಡೆನೊ ಆಡೆನೊ ಅವರಿವರ ಮುಂದೆ
ನೀಡೆನೊ ನೀಡೆನೊ ಅನ್ಯರಿಗೆ ಕೈಯ್ಯ
ನೋಡು ನೋಡುವುದು ಕಾಪಾಡು ದಯದಿಂದ
ಗೂಢ ಮಹಿಮ ಅಜನೆ ವಿಜಯ ವಿಠ್ಠಲರೇಯ
ಪಾಡುವೆನು ಕರವ ಜೋಡಿಸಿ ದೈನ್ಯದಲಿ ೨

ತ್ರಿವಿಡಿತಾಳ

ಎಂದಿಗಾದರೂ ನಿನ್ನ ಪೊಂದಿದ ಭಕುತರ
ವಂದಿಸುವರ ಬಾಯ ತೊಂಬಲನು ನಿತ್ಯ

ತಿಂದು ಕಾಲವ ಕಳೆವ ಕಂದ ಕಂದನೊ ನಾನು
ತೊಂದರೆ ಕೊಡದಿರೊ ಇಂದಿರಾರಮಣ
ಕುಂದು ನೋಡದೆ ಸರ್ವಸಹ ವಿಜಯ ವಿಠ್ಠಲ
ತಂದೆ ನೀನು ಎನಗೆ ಬಂದು ಪೊಳೆವುದು ೩

ಅಟ್ಟತಾಳ

ಅಪರೂಪ ನಿನ್ನ ಚರಣ ಸ್ಮರಣೆ ಎನಗೆ
ಅಪರೂಪ ನಿನ್ನ ಸಂದರುಶನ ಎನಗೆ
ಅಪರೂಪ ನಿನ್ನ ದಾಸರ ಸಂಗ ಎನಗೆ
ಅಪರೂಪ ಎಂದು ಬಯಸಿ ಬೇಡಿದೆ ನಿನ್ನ
ಅಪರೂಪ ಮೂರುತಿ ವಿಜಯ ವಿಠ್ಠಲ ಇಂದು
ಅಪರೂಪವಾಗಿ ಅಪಹಾಸಗೊಳಿಸದಿರೊ ೪

ಆದಿತಾಳ

ದುರ್ದೇಹವಲ್ಲ ಇದು ನಿರ್ದಯವಾಗದಿರು
ನಿರ್ಧಾರವಾಗಿ ನರಕಾರ್ದನ್ನ ಎನ್ನ ಮನಸು
ಮರ್ದಿಸಿ ನಿನ್ನ ಸೇವೆ ಸಾರ್ದು ಬದುಕುವಂತೆ ಮಾಡಿ
ನಿರ್ಧೂತ ಪಾಪವೆನಿಸು ದುರ್ದೆಸೆಯಲ್ಲಿಡದೆ
ಮರ್ಧರ ನಾಮದೇವ ವಿಜಯ ವಿಠ್ಠಲ
ನಿಮಿಷಾರ್ಧದಲ್ಯಾರು ನಿನ್ನ ಪೊದ್ದಿದವರಲ್ಲಿಡೊ ೫

ಜತೆ

ಭಕುತಿ ಮಾತುರ ಕೊಡೊ ಭವ ದುರಿತ ಹಾರಿ
ಶಕುತಾ ವಿಜಯ ವಿಠ್ಠಲ ಸತತ ಭಾಗ್ಯನಿಧಿ ೬

೫೭

ಧ್ರುವತಾಳ

ಪರರಾಧೀನವಾದ ದ್ರವ್ಯಂಗಳ ಬಯಸಿ
ಬರಿದೆದೆಗದಗಲಿ ನೋವಾನೋವೆ
ಕರಕೆ ಪ್ರಾಪುತವಾಗದಿರಲು ಕುದಿದು ಕುದಿದು
ಇರಳು ಹಗಲು ಕೋಪದಿ ತೋವಾ ತೋವೆ
ದೊರೆತರೆ ಲೋಭದಿಂದ ಮತ್ತಾರಿಗುಸುರದೆ
ಗುರಿಯಾದೆ ಬಿಚ್ಚಿಟ್ಟು ಸಾವಾಸಾವೆ
ಸರಿಯಾದಲಿದ್ದರು ಎನಗಾವ ದೇಶದಲ್ಲಿ
ಸರಿಯಿಲ್ಲವೆಂದೆನುತ ಜೀವಾ ಜೀವೆ
ಧರೆಯೊಳಗೆನಗಿಂದ ಬಡಿವಾರ ಕಂಡರೆ ಮ–
ತ್ಸರಿಸಿ ನಿಷ್ಠುರ ಮಾತ ನೀವೆ ಈವೆ
ಕರಣ ನಿರ್ಮಲವಿಲ್ಲದೆ ಡಂಭಕ ವೃತ್ತಿಯಲ್ಲಿ
ಚರಿಸಿ ಅಹಂಕೃತಿಯಲ್ಲಿ ಬೇವಾ ಬೇವೆ
ನರರೋತ್ತಮರ ಬಿಟ್ಟು ಪಾಮರ ಮಾನವರ
ಕರೆದು ಬೇಡದಿರಲು ಕಾವಾ ಕಾವೇ
ಪರಮ ಧರ್ಮದಲ್ಲೀಗ ಮನಸು ಮಾಡದಲೆ ವಿ
ಸ್ತರವಾಗಿ ವಿಘ್ನವ ಗೈವೆ ಗೈವೆ
ನಿರುತ ಸ್ವಧರ್ಮದಲ್ಲಿ ನಡೆ ಎಂದು ಬುದ್ಧಿ ಪೇಳೆ
ಗರುವಿಕೆಯಿಂದವರನು ಬೈವಾ ಬೈವೇ
ಗುರುಹಿರಿಯರ ಮನ್ನಿಸಿ ಎಳ್ಳನಿತತಾದರು
ಚರಿಸುವೆ ದುರಾಚಾರಾ ನಾನಾ ಕಾತುರದಲ್ಲಿ
ಹರಿ ಇಂಥ ದುಷ್ಕರ್ಮಿಗೆ ನಿನ್ನ ದರುಶನ ಧ್ಯಾನ
ಚಿರವಾಗಿ ಇಪ್ಪುದೆಂತೊ ವ್ಯಾಕುಲನಿಗೆ
ನಿರಯಕ್ಕೆ ಮಾರ್ಗ ಮಾಳ್ಪೆ ನಿನ್ನ ಜ್ಞಾನವೆಂಬೋದ ಕಾಣೆ
ದುರುಳಾರ ಸಂಗತಿಯಲ್ಲಿ ಉಬ್ಬಿ ನಡೆವೆ
ಗರುಡವಾಹನ್ನ ನಮ್ಮ ವಿಜಯ ವಿಠ್ಠಲ ನಿನ್ನ
ಚರಣ ಸಂದರುಶನದಲ್ಲಿ ಮನಮಾಡೆ ೧

ಮಟ್ಟತಾಳ

ನಾನೆ ಉತ್ತಮನೆಂಬೊ ಅಹಂಕಾರದಿಂದ
ಜ್ಞಾನಿಗಳ ನಿತ್ಯ ನಿಂದ್ಯ ಮಾಡುತಲಿಪ್ಪೆ
ಏನೆಂಬೆನು ಎನ್ನ ಸಜ್ಜನ ವೃತ್ತಿಯನು
ನೀನೆ ಬಲ್ಲದೆ ಸರಿ ಪೇಳುವ ಬಗೆಯಿಲ್ಲ
ಹೀನ ಬುದ್ಧಿಯ ಬಿಡದೆ ಹಿತವ ಚಿಂತಿಪೆನೆಂಬ
ದೀನರಾದವರಿಗೆ ಬೆರಗು ತೋರುವೆನಯ್ಯ
ಮಾನವಂತನಾದ ವಿಜಯ ವಿಠ್ಠಲರೇಯ
ಕಾಣಿಸಗೊಡೆ ಅನ್ಯರಿಗೆ ಮಾಡುವ ದೋಷ ೨

ತ್ರಿವಿಡಿತಾಳ

ಲೋಕಾಂತರದಲಿ ನಾನು ಕುಳಿತಾಗ ಬಾಯಿಲಿ
ಬೇಕಾದ ತತ್ವವ ವಿಸ್ತಾರವಾಗಿ
ವಾಕು ನಿಲವಿಲ್ಲದೆ ಕಂಡ ಜನರಿಗೆ ವಿ–
ವೇಕಿ ಎನಿಸಿಕೊಂಡೆ ಡಂಭದಿಂದ
ಏಕಾಂತವಾದಡೆ ಎನ್ನ ಮನಸು ಬಲು
ತಾಕುವುದು ಪೋಗಿ ಕಂಡಕಡಿಗೆ
ಕಾಕು ವೃತ್ತಿಯನ್ನು ನೆನದು ಸುತ್ತಲು ಜನರ
ನಾ ಕಾಣೆನೆಂದು ವಿಕಾರ ಮಾಳ್ಪೆ
ಲೋಕದೊಳಗೆ ಸರ್ವ ಠಾವಿಲಿ ಬಿಡದೆ ತಾ–
ತ್ವಿಕರು ಇಪ್ಪುದು ಮರೆದು ಇಂಥ
ವ್ಯಾಕುಲದಲಿ ನಡದೆ ಮುಂಗಾಣದೆ ಪುಣ್ಯವ
ಜೋಕೆ ಮಾಡಿಕೊಳ್ಳದೆ ಅಂಧತ್ವದಿ
ಲೋಕ ನಾಯಕ ನಮ್ಮ ವಿಜಯ ವಿಠ್ಠಲರೇಯ
ಪೋಕತನದ ಬುದ್ಧಿ ಬಿಡೆ ಅಂತರಂಗದಲ್ಲಿ ೩

ಅಟ್ಟತಾಳ

ಸುರಕ್ಷಿತವಾಗಿ ಮೃಷ್ಟಾನ್ನ ನೀನುಣಿಸಲು
ಪರಮ ಸುಖದಲ್ಲಿ ಬಾಳಿ ನಿನ್ನಂಘ್ರಿಯ
ಚರಣವ ಭಜಿಸುವ ಉತ್ತಮರ ಕೂಡ
ಬೆರಸಿ ನಿನ್ನ ನಾಮ ಗಾಯನ ಕಥೆಗಳ
ಪರಿಪರಿ ಬಗೆಯಲಿ ಕೊಂಡಾಡಿ ಪೊಂದಿದ
ದುರಿತಂಗಳೆಲ್ಲವ ನಾಶಗೈಸುತ್ತ
ಧರೆಯೊಳಗೀ ಮತಿಯಲಿ ಇರಲರಿಯದೆ ಇಂಥ
ದುರುಳ ನಡತೆಗಳ ಚರಿಸುವೆ ದಮ್ಮಯ್ಯ
ಕರುಣಿ ನೀನೊಲಿದು ಸಜ್ಜನ ಮಾರ್ಗಕೆ ಮನ
ತಿರುಗಿಸದಲೆ ನಾನು ಕಡೆ ಬೀಳುವದಿಲ್ಲ
ಶರಣ ವತ್ಸಲ ನಮ್ಮ ವಿಜಯ ವಿಠ್ಠಲರೇಯ
ಮೊರೆಯ ಲಾಲಿಸಿ ಮದಂಧಕಾರ ಕಳೀ ೪

ಆದಿತಾಳ

ಉದಯ ಕಾಲದಲೆದ್ದು ಅಸ್ತಮಾನತನಕ
ಇದೆ ಯೋಚನೆ ಅಲ್ಲದೆ ನಿನ್ನ ಧ್ಯಾನವೆ ಒಂದು
ಪದಮಾತುರವೆ ಇಲ್ಲ ಮನನಿರ್ಮಳ ಕಾಣೆ
ತುದಿಗೆ ಎಲ್ಲೆಲ್ಲಿ ಪೋಗಿ ವಾಸವಾಗುವೆನು
ಹೃದಯದೊಳಗೆ ನೀನೆ ಇದ್ದ ಮೇಲೀಪರಿ
ಚದರಿ ಪೋಗಲಿ ಬಹುದೆ ಮನಸು ದುರ ವೃತ್ತಿಗೆ
ಮದನ ಜನಕರಂಗ ವಿಜಯ ವಿಠ್ಠಲ ನಿನ್ನ
ಪದಗಳ ನಂಬಿಹೆನೊ ಪಾಪಕ್ಕೆ ಹಾಕದಿರು ೫

ಜತೆ

ಮನೋವ್ಯಾಪಾರ ನೋಡಲು ಬಲು ಕಠಿಣ
ಎನಗೆ ನಿಲ್ಲದು ದೇವ ವಿಜಯ ವಿಠ್ಠಲರೇಯ ೬

೫೮

ಧ್ರುವತಾಳ

ಪಾದ ತೋರಿಸು ತೀರ್ಥಪಾದನೆ ಎನಗಿಂದು
ಪಾಥೆಯಾಗಲಿ ಸಂಪದವಿಗೆ ಜ್ಞಾಪದಲ್ಲಿ ಇಡು ತಾ
ಪಾದಲ್ಲಿ ಬುದ್ಧಿ ಮಾಡೆ ಪದಾರ್ಥ ರೂ
ಪಾ ದಹಿಸುವುದೇ ಶಾಪಾದಲ್ಲಿ ಬಿದ್ದರು
ಪಾದಾ ಸತಿಯನ್ನು ಪಾದರಜದಲ್ಲಿ
ಪಾದಾದಲ್ಲಿ ಚಾಪಧಾರನೆ
ಪಾದದಳತೆಯಲ್ಲಿ ಪೋಪುದಯ್ಯ ಅಹಿಸ್ಯಾ-
ಪಾದಾದು ಕಳದೆ ಪಾದಾಬ್ಜನಲ್ಲಿ ಕ-
ಪ್ಪಾದು ಭವದ ಕೂಪದಲ್ಲಿಂದಲಿ ಬ-
ಪ್ಪಾದ ಬಿಡಿಸೊ ಶ್ರೀಪಾದಜ
ಪದ್ಮವ ತೋರೊ ವಿಜಯ ವಿಠ್ಠಲ ಗೋ
ಪಾದದನಿತು ತಂಪಾದ ನೆಳಲೀಯೊ ೧

ಮಟ್ಟತಾಳ

ಉತ್ತಮನೆಂದೆಂಬೊ ಪೆಸರಿಡಿಸಿಕೊಂಡು
ಸುತ್ತಿದೆ ಜಗದೊಳು ಉ ಮೊದಲೆ ಕಳದು
ಮತ್ತೆ ಉಳಿದ ಸಂಖ್ಯೆಯಿಂದಲಿ ಚರಿಸಿ ಉ-
ನ್ಮತ್ತ ನಾನಾದೆ ವೃತ್ರಾರಿವಿನುತ ವಿಜಯ ವಿಠ್ಠಲರೇಯಾ
ಹಿತ್ತಲೆಯೊಳಗೆ, ಕರ್ಗೊರ್ತಿ ಬೆಳೆದಂತೆ
ಮುತ್ತಿದ ಮನದಲ್ಲಿ ಪುರುಷಾರ್ಥವ ಮರೆದೆ ೨

ತ್ರಿವಿಡಿ ತಾಳ

ಮೊಳಕೈಯಿಗೆ ಬೆಲ್ಲ ಪಚ್ಚಿಕೊಂಡೀಗ
ನಿಲಕಿಸಿ ರುಚಿ ಕೊಂಬೆನೆಂದೆನುತ

ನಲಿದು ನಾಲಿಗೆಯಿಂದ ಸವಿದು ತಿಂದವನೆಂದು
ಇಳಿಯೊಳು ಬಲವನ್ನು ಪೇಳಿಕೊಂಡು
ಸುಳಿದಾಡಿ ಕಂಡಲ್ಲಿ ಹಳವಾರಿಯಾಗಿ ಹ –
ಕ್ಕಲವಾಗಿ ತಿರುಗಿದ ಮೂಢ ನಾನು
ಮಲ ಮೂರು ಪೋಗಗಳಿಯದೆ ನಿತ್ಯ ನಿ–
ಷ್ಫಲ ದಾಸನೆಂದು ವೆಗ್ಗಳ ಕೂಗಿದೆ
ಸುಲಭರ ಒಡೆಯಾ ಶ್ರೀ ವಿಜಯ ವಿಠ್ಠಲರೇಯ
ಹುಳವಿಗಂಜಿ ಹುತ್ತಿನೊಳು ಪೊಕ್ಕಂತಾದೆನೊ ೩

ಅಟ್ಟತಾಳ

ದೇಶವಾಳೆನೆಂಬೊ ಆಶಾ ಪೋಗದು ಶ್ರೀನಿ–
ವಾಸನೆ ನಿನ್ನಯ ದಾಸರಿಂದಲಿ ವಿಶೇಷದ್ವಯಾಕ್ಷರ
ಭೂಷಣವಾಗಿದ್ದಾ ದೇಶವ ಕೊಳದಲೆ
ಘಾಶಿಯಾದೆನೊ ದುರಾಶೆಯಿಂದಲಿ ನೊಂದು
ಕ್ಲೇಶವ ಬಡುತಲಿ ದೇಶಾವರದು ಭಾಗ್ಯ
ಕೋಳವಾರದು ಪರದೇಶಿಯಲ್ಲದೆ ತಾನಾ ಸಮಯದಲ್ಲಿ
ಕೋಶನಿಧಿ ನೀನೆ ವಿಜಯ ವಿಠ್ಠಲ ಎನ್ನ
ಪೋಷಿಸುವರ ಭರವಸೆ ಮತ್ತಾರದೊ ೪

ಆದಿತಾಳ

ಸುಲಭ ಭಾಗ್ಯವೆ ನಿನ್ನ ಸಲಿಲ ಪದವಲ್ಲದೆ
ಸುಲಭ ಎನಗೆ ಒಂದು ಕೆಲಕಾಲ ಕಾಣಿಸದು
ಸಲೆ ಹುಲ್ಲು ಕುಟೀರದೊಳಗೆ ಸಾಧು
ಎಳೆಧೇನು ಕಟ್ಟಿರಲು ಕುಲಸಹಿತ ಉಂಡು ಓ–
ಕಳಿಯಾಡಲೊಲ್ಲದಲೆ ಬಲು ಕಾನನದೊಳಗೆ
ಹುಲಿ ನಿಂದಿರಲು ಕೊರಳಿಗೆ ಕೈಯ್ಯನ್ನು ಹಾಕಿ
ಪಲುದೆರೆದು ಪೋದಂತೆ ಸುಲಭ ನೀನಿರಲಾಗಿ

ಕೆಲವು ದೈವಂಗಳೆಂಬೊ ಹಲವು ಕೊಂಬಿಗೆ ಹಾರಿ
ನೆಲಕುರುಳಿ ಹೊರಳಿದೆನೊ
ಚಲುವ ಲಕುಮಿನಲ್ಲ ವಿಜಯ ವಿಠ್ಠಲ ಎನ್ನ
ಬಳಲಿಕೆ ಪರಿಹರಿಸೊ ಅಳಲಿಕೆ ಪುಟ್ಟದಂತೆ ೫

ಜತೆ

ಪಾದವೆ ಎನಗೊಂದು ಪರಲೋಕಕ್ಕೆ ಸಾಧನ
ಪಾದಜ್ಯಾಲೋಚನ ವಿಜಯ ವಿಠ್ಠಲರೇಯ ೬

೫೯

ಝಂಪಿತಾಳ

ಪಿಂಡಾಂಡದಿಂದ ಪೊರಗಾಗಿ ಪೋಗಿ ಪುರುಷ
ಪಿಂಡಾಂಡದೊಳು ತ್ರಿಮಾಸ ವಾಸವಾಗಿ
ಭಂಡಾಟದಲ್ಲಿ ಜರಿದು ಶುಕ್ಲ ಶೋಣಿತವಾದ
ಭಾಂಡದೊಳಗೆ ಬಿದ್ದು ನವಮಾಸವಿದ್ದು
ಅಂಡಲೆದು ಮಜ್ಜಮಾಂಸ ಕೀವು ರಕ್ತದಲ್ಲಿ
ತಂಡ ತಂಡದ ಮಲಿನ ಮಲ ಭೋಜನ
ಉಂಡು ಪೂರ್ವದ ಭಾವವನುಭವಿಸಿ ಸರಸರನೆ
ಮಂಡಲ ತಿಳಿದು ಸಿಗದಳಲಿ ವಿಜಯ ವಿಠ್ಠಲ
ದಂಡವಾಯಿತು ನಿನ್ನ ಕೊಂಡಾಡದಲೆ ಮನ ೧

ಮಟ್ಟತಾಳ

ತರುಣ ನೆನಸಿಕೊಂಡು ಚರಿಸದೆ ಹತ್ತೆಂಟು
ವರುಷದ ಪರಿಯಂತ ಹಿರಿಯರ ಸಹಿತದಿಂದ
ಜರಿದೆನು ಆಮೇಲೆ ಗುರುಹಿರಿಯರನ್ನ

ದುರುಳ ಮತಿಯಲ್ಲಿ ಭರದ ಯವ್ವನನಾಗಿ
ಮರೆವೆನು ಧರೆಯೊಳು ಸರಿಯಾರು ಎಂದು
ಶರಭ ವಿಜಯ ವಿಠ್ಠಲ ಮರೆದೆನೊ ಧರ್ಮವನು
ಪರಗತಿ ಬಯಸದೆ ಮರದೆನೊ ಧರ್ಮವನು ೨

ತ್ರಿವಿಡಿತಾಳ

ಮಡದಿ ಮಕ್ಕಳಿಗಾಗಿ ಅಡವಿ ಗಿಡವನು ತುಕ್ಕಿ
ಒಡನೆ ಪರರಿಂದ ಕೆಡನುಡಿಸಿಕೊಂಡು
ಬಿಡದೆ ಪೀಡಿತನಾಗಿ ಪೀಡೆಯಂತೆ ಹತ್ತಿ
ಕೊಡದಲೆ ಪೋಗೆನೆಂಬೆ ದೈನ್ಯದಿ
ಸಡಗರದಲಿ ಶರಗುವಿಡಿದು ಬೇಡಿಕೊಂಡು
ಪಡಿಯಾ ತಂದು ಎನ್ನ ಒಡಲವರ ಪೊರೆದೆನೊ
ಬಡವರಾಧಾರಿ ಶುಚಿ ವಿಜಯ ವಿಠ್ಠಲ ನಿನ್ನ
ಅಡಿಗೆ ಮನವೆರಗದೆ ಬಡುವಿನೊ ಭಂಗವ ೩

ಅಟ್ಟತಾಳ

ಒಂದು ಘಳಿಗೆ ಗ್ರಾಸ ದೊರಕದಿದ್ದರೆ ಓಣಿ.
ಸಂದಿ ಗೊಂದಿಯನ್ನು ಕೋಡಗದಂತೀಗ
ನಿಂದಿರದೆ ತಿರುಗಿ ಅವರಿವರೆನ್ನದೆ
ಮಂದಿರವ ಪೊಕ್ಕು ಮಹ ಕ್ಲೇಶವಬಡುವೆನೊ
ಬೆಂದೊಡಲಿಗೆ ಚಾಲವರಿದಂತೆ ಚೆನ್ನಾಗಿ
ಬಂದು ನಿಮಿಷ ನಿನ್ನ ಚಿಂತೆಯ ಮಾಡದೆ
ಮುಂದುಗಾಣದೆ ಪೋದೆ ಮುರಾರಿ ದೇವಕಿ
ನಂದನ ವಿಜಯ ವಿಠ್ಠಲನೆ ದೀನ ಬಂಧು
ಮುಂದುಗಾಣದೆ ಪೋದೆ ಮುಂದುಗಾಣದೆ ಪೋದೆ ೪

ಆದಿತಾಳ

ವಾರ್ಧಿಕತನ ಬರಲು ಸಾರ್ದು ಅನ್ಯರಿಂದ
ಗಾರ್ಧಭ ಮುದಿಹದ್ದು ಎಂದು
ಗರ್ಧನಿಂದ ನುಡಿಸಿಕೊಂಡೆ
ನಿರ್ದಯವಾಗದಿನ್ನು
ವರ್ಧನ ವಿಜಯ ವಿಠ್ಠಲ
ನಿರ್ಧಾರವಾಗಿ ಎನಗೆ
ಊರ್ಧ್ವಲೋಕಾಪೇಕ್ಷಾ ವೀಯೊ ೫

ಜತೆ

ನಿನ್ನಂಘ್ರಿ ತೋರೊ ನಿರ್ವಾಣ ವಿಜಯ ವಿಠ್ಠಲ
ಎನ್ನಂಗವನು ಪರಮ ಪಾವನಮಾಡೊ ೬

೬೦

ಧ್ರುವತಾಳ

ಪೂಜೆ ಯಾವುದು ನಿನಗೆ ಮಾಜದೆ ಪೇಳು ಸರ
ಸೀಜ ನಾಭನೆ ಪೂರ್ಣ ತೇಜೋಮಯನೆ
ಗೀಜಗನ ಕೈಯಿಂದ ಮ್ಯೂಜಗ ಇರುವಂಥ
ರಾಜಧಾನಿ ಮಾಡೆನಲು ಸೋಜಿಗವಲ್ಲೊ
ಈ ಜಗದೊಳಗುಳ್ಳ ಜಡದ್ರವ್ಯದಿಂದ
ಗೋಜು ಬೀಳಲಾರೆನೊ ಜೂಜುಗಾರ
ಭೋಜಕುಲದೊಡೆಯ ವಿಜಯ ವಿಠ್ಠಲ ನಿನ್ನ
ಬೀಜ ಮಂತ್ರ ಉಳ್ಳರೆ ಕುಜನನಾ ನೀಗುವೆನೊ ೧

ಮಟ್ಟತಾಳ

ಈ ಯಗ್ರೋದಕವೆ ಈಯಭಿಷೇಕವೆ
ಈ ಯಂಬರದೊಳಗೆ ಈಯಾಭರಣವೆ
ಈಯಡವಿಯ ತುಲಸಿ ಈಯಾರೋಗಣೆಯ

ಈಯಾರತಿಯೇ ಈಯಾರಾಧನಿಯೇ
ಈಯತಿಶಯಗಳೆ ಈಯ ಬಲ್ಲವೆ ಗತಿ
ಮಾಯಾರಮಣ ಹರಿ ವಿಜಯ ವಿಠ್ಠಲ ನಿನ್ನ
ಮಾಯಾಬಾರದನಕ ಮಾಯ ಬಿಡದು ಕಾಣೊ ೨

ತ್ರಿವಿಡಿತಾಳ

ಆಚಾರವನು ಮಾಡೆ ಅದರಿಂದ ಫಲವಿಲ್ಲ
ವಾಚಾವಂತನಾದಡೆ ಏನು ಫಲವೊ
ಊಚನಾಗಿ ಬೆಳೆದು ಹರಿಯ ನೆನಸಿದರಿಲ್ಲ
ಸೂಚನೆ ತಿಳಿದು ಸಂಚಾರ ಮಾಡಲು ಇಲ್ಲ
ಲೋಚನಗಳು ಮುಚ್ಚಿ ತಪಸು ಗೈದರೆ ಇಲ್ಲಾ
ಲೋಚನೆ ಹಗಲಿರುಳು ಮಾಡೆ ಇಲ್ಲ
ಭೂಚೋರಹರ ಸವ್ಯಸಾಚಿ ಸಾರಥಿವೇದ
ಗೋಚರ ಗೋವಿಂದ ವಿಜಯ ವಿಠ್ಠಲ ನಿನ್ನ
ಯೋಚನೆ ಯೋಚನೆ ಒಳಗುಳ್ಳ ಭಕುತಿ ದೊರೆಯದನಕ ೨

ಅಟ್ಟತಾಳ

ಭಕುತಿಯ ಕಾರಣ ಮುಕುತಿದಾ
ಯಕ ನಿನ್ನರ್ಚಕನಾಗುವುದಕ್ಕೆ
ಅಖಿಳ ಕರ್ಮಂಗಳ
ನಿಕರದಿಂದಲಿ ಸಾಧಕವಲ್ಲವೆಂದಿಗೂ
ಶುಕ ಪುಂಡರೀಕ ಶತಮುಖ ಶೌ
ನಕ ಬಲಿ ರುಕುಮಾಂಗದ ಕಪೀಶ
ಸುಖದ ಸನಕಾದಿಗಳಕಳಂಕ ವಿದೂರ ಕ–
ನಕ ಕಶ್ಯಪ ಕುಮಾರ
ನಕುಲ ಜನಕ ಭೂಪಾ
ಲರ ಭೀಷ್ಮ ಅಕುಹಕ ರಕ್ಕಸನಾಯಕ ಧ್ರುವ
ಸಕಲ ಭಕುತರೆಲ್ಲ ಲಕುಮಿನಾಯಕ ಪೂರ್ಣ

ಭಕುತಿ ವಿರಕುತಿಲಿ ಮುಕುತಾರ್ಥ ಸುಖದಯ್ಯ
ಸಕಲ ಭಕುತನಾನಕಟನಾದರೆ ಮೌ
ಕ್ತಿಕದ ಸರಕೆ ಬಂದದರೆಧಾರಾ
ಏಕವೂ ಮನಕೆ ಒಪ್ಪದು ಕಾಯೊ
ಬಕಾಸುರಾಂತಕನುತ ವಿಜಯ ವಿಠ್ಠಲ
ಲೋಕಾಂಬಕ ಪ್ರಕಾಶಿತ ಮಹಿಮ ೪

ಆದಿತಾಳ

ಶ್ರೀಶ ಪುರಂದರ ದಾಸರ ಪಾದವನ್ನು
ಏಸೇಸು ಜನ್ಮದಿಂದ ಲೇಸಾಗಿ ನಂಬಿದಂಥ
ದಾಸನು ನಾನಯ್ಯ ಹಲವು ಬಗಯಿಂದ
ಘಾಕಿ ಬೀಳಲಾರೆ ಕರ್ಮ
ಬ್ಯಾಸರಿಕೆಯಿಂದಲಿ ಮನಸು ನಿಲಿಸಲಾರೆ ದೇವ
ಸಾಸಿರಕ್ಕಾದರು ನಿನ್ನ ಮೀಸಲ ನಾಮವ ನೆ
ನೆಸುವಂತೆ ಭಕುತಿಯಿತ್ತು
ನೀ ಸಲಹ ಬೇಕು ಒಡೆಯ
ದೇಶದೊಳಗೆ ನಾನೊಬ್ಬನೆ ಬಲು
ದೋಷಿ ಆಶಾ ಪಾಶಬದ್ಧ
ಕ್ಲೇಶನಾಶ ಬಿಡಿಸುವಲ್ಲಿ
ನೀ ಸಮರ್ಥನು ಕಾಣೊ
ದಾಸರಿಗೆ ನಿತ್ಯ ಕರುಣಿ ವಿಜಯ ವಿಠ್ಠಲರೇಯ
ಈಸು ಬಗೆಯಿಂದಲಿ ಬಿನ್ನೈಸಿದೆನೊ ಲಾಲಿಪುದು ೫

ಜತೆ

ಬೀಜ ಮಂತ್ರವ ಭಕುತಿಯಿಂದ ನೆನೆದ ಮೇಲೆ
ಪೂಜೆ ಎಂಬುದೇನೊ ವಿಜಯ ವಿಠ್ಠಲದಾತ ೬

೬೧

ಧ್ರುವತಾಳ

ಪೂ ಬಾಡದಂತೆನ್ನ ಕ್ಷೋಭಿಯನು ಪರಿಹರಿಸಿ
ಪೂಬಾಣನಯ್ಯ ಕುಬೇರವಂದ್ಯ
ನೀ ಬಂದು ವಾರಂವಾರ ಬಿಡದೆ ನಿನ್ನ ಮೃದು
ಶೋಭಾನ ಕಾರದಿಂದ ತಡವರಸಿ
ಶ್ರೀ ಬಿಂಬ ಮೂರುತಿಯ ಬಳಿಗೆ ಸುಳಿವಾಗೆ
ಲಾಭವೆ ಕೋಟಿ ಕೋಟಿ ಅರ್ಬುದವು
ಕ್ಷೋಬಾಣ ವಿಜಯ ವಿಠ್ಠಲನೆ ನಿನ್ನ ನಾಮ
ಆಭರಣಗಳೆ ಎನ್ನ ಕರ್ಣಯುಗಳಕ್ಕೆ ೧

ಮಟ್ಟತಾಳ

ಕಡಿಯಲು ಕೊನೆಯಿಂದ, ಬುಡನಾಶನವಲ್ಲ
ಬುಡ ಹೊಯ್ದರೆ ಕೊನೆ ಒಡನೆ ಒಣಗುವದು
ದೃಢವಾದ ಅಹಂಕಾರ ಕಡಿದರೆ ಬಿಂಕದ
ಬಿಡಿ ಪಾಪಗಳೆಲ್ಲ ಅಡಗಿ ದೂರಾಗೋವು
ತಡಿಯದೆ ವಿಶಿಷ್ಟ ವಿಜಯ ವಿಠ್ಠಲ ನಿನ್ನ
ಅಡಿಗಳ ರುಚಿದೋರಿ ಬಿಡಿಸುವದಹಂಕಾರ ೨

ರೂಪಕತಾಳ

ಅಹಂಕಾರವೆಂಬೊ ಪಾಪಿಯ ಬೆನ್ನು ಬಿದ್ದರೆ
ಅಹಂಕಾರವಲ್ಲದೆ ಒಂದಿಷ್ಟು ಸುಖವಿಲ್ಲ
ಅಹಿವಾನು, ತಾನಾಗಿ, ಧರ್ಮದಾಯದ ಗುಣ
ವಿಹಿತವಾಗಿದ್ದ ಕರ್ಮವ ತಪ್ಪಿಸಿ
ಗೃಹ ದೇಹ ಎನ್ನದು ಎನ್ನದು ಎಂದೆಂಬೊ
ಕುಹಕ ನುಡಿಗಳಿಂದ ನರಕಕ್ಕೆ ಹಾಕುವುದು
ಮಹಶಕ್ತಿ ವಿಜಯ ವಿಠ್ಠಲ ನಿನ್ನ ಕರುಣ
ನೇಹದಲ್ಲಿ ಇನ್ನು ನಿನ್ನವನೆನಿಸೊ ೩

ಝಂಪೆತಾಳ

ನೀನಿತ್ತ ಸುಕೃತವೊ ನೀನಿತ್ತಾಗ್ರಜನನ
ನೀನಿತ್ತ ಸೌಭಾಗ್ಯ ನೀನಿತ್ತ ಪದವಿ
ನೀನಿತ್ತ ಸತಿಸುತರು ನೀನಿತ್ತ ಸಂಬಂಧ
ನೀನಿತ್ತ ತುರಗಾದಿ ಸಕಲ ಒಡವೆ
ನಾನು ಭುಂಜಿಸಿ ನಿನಗೆ ಅರ್ಪಿಸುವೆನೆಂದೆನುತ
ಆನಂದದಲಿಯಿದ್ದ ಜೀವನವನ್ನು
ತಾ ನೂಕಿ ತಾನೆ ಧೊರೆ, ತನ್ನ ಪೌರುಷವೆಂದು
ಹೀನ ಶ್ರೇಷ್ಠತ್ವದಲಿ ಬಾಳುತಿದೆಕೊ
ಪ್ರಾಣನಿಲಯ ನಾಮ ವಿಜಯ ವಿಠ್ಠಲ ನೀನೆ
ಮಾಣಿಸೊ ಅದಕ್ಕೆ ನಾನೆಂಬುದ ಬಿಡಿಸೊ ೪

ತ್ರಿವಿಡಿತಾಳ

ಅವನಾದರೆ ಇನಿತು ಕೇಡಿಲ್ಲ
ಇವನು ಇದ್ದರೆ ಸುಮ್ಮನಿರುವನಲ್ಲ
ಇವನ ಸಹಾಯದಿಂದಲೆ ಕಾಮಾದಿಗಳು
ಆವಾವ ಕರ್ಮಕ್ಕೆ ಎಳೆದೊಯ್ದು ಇಡು-
ತಿವೆ ಆ ಭಾಗ್ಯ ಒಲ್ಲೆ ಇವನ ಉಪಹತಿ
ಕಾವು ತಗ್ಗಿಸುವುದು ಇಲ್ಲದಿರೆ ಎನಗೆ
ಬೇವು ತಿಂದು ಬಿಸಿನೀರು ಕುಡಿಸಯ್ಯ
ಭಾವ ವಿಜಯ ವಿಠ್ಠಲ ಈ ವಿಚಾರ ಸಿದ್ಧ ೫

ಅಟ್ಟತಾಳ

ಪೋಗು ಎಂದರೆ ಪೋಗುವುದಲ್ಲ ಕಂಡಲ್ಲಿ
ನೀಗುವೆನೆಂದರೆ ತನ್ನ ವಶವಲ್ಲ
ತ್ಯಾಗವಿತ್ತೆನೆನೆ ವಸ್ತಾ ಒಡಿವೆಯಲ್ಲ
ಸಾಗಿಸುವೇನೆನೆ ಭಾರ ಕಾಣಿಸುದಿಲ್ಲ
ಆಗಾರದೊಳಗೊಂದು ಮದದಾನೆ ಸೇರಿಕೊಂ

ಡಾ ಗಿಡಗಳನೆಲ್ಲ ಕೆಡಿಸುವಂತೆ
ಪೂಗೋಲ ಉಳಿದಾದ ದುರುಳರ ಒಡಗೊಂಡು
ತಾ ಗರ್ವದಿಂದ ಇಂತಿದಕೊ
ವೇಗವತಿ ನಾಮ ವಿಜಯ ವಿಠ್ಠಲ ವೇಗ
ಮೂಗುದಾಣ ಇಕ್ಕಿ ಮೊಗ ಮಾಡಿಪುದು ೬

ಆದಿತಾಳ

ಮದವಾದ ಪದವಿಯನೊಲ್ಲೆ
ಪದಾರ್ಥ ಒಲ್ಲೆ ಪೌರುಷ ಒಲ್ಲೆ
ಒದಗಿದ್ದ ಬಾಹಿರದಲ್ಲಿ ಈಗ ಅಧಿಕ ಐಶ್ವರ್ಯಗಳೊಲ್ಲೆ
ಬದಿಯಲ್ಲಿ ಇದ್ದ ಅಹಂಕಾರವನು ಒದೆದು
ಹುದುಗಿಸಿ ಮೊಗದೋರದಂತೆ
ಇದೆ ಭಾಗ್ಯವ ಬೇಡಿ ಬರುವೆ
ಮುದದಿಂದ ಕರುಣಿಸಬೇಕು
ಪದುಮಗರ್ಭ ವಿಜಯ ವಿಠ್ಠಲ ಸದಮಲ ಮೂರ್ತಿ ನಿನ್ನ
ಪದುಮ ಪಾದ ಸೇವೆಯನುಗಾಲ
ಹೃದಯದಲ್ಲಿ ದೊರೆಯಲಿ ೭

ಜತೆ

ಮಂಡೆಯಲಿ ಮುಡಿದ ಪೂಮಾಸದಂತೆ ಕಾಯೋ ಉ-
ದ್ದಂಡ, ವಿಜಯ ವಿಠ್ಠಲ ಅಹಂಕಾರವ ಕುಟ್ಟಿ ೮

೬೨

ಧ್ರುವತಾಳ

ಪೊರೆಯೊ ಕರುಣದಲೆನ್ನ ಪೊರೆಯದಿದ್ದರೆ ನಿನ್ನ
ದುರುಳತನಗಳೆಲ್ಲ ದೂರದೆ ಬಿಡೆನಲ್ಲ
ಪೊರೆಯೊ ಕೀರ್ತಿಯ ಪೊತ್ತು ಪೊರೆಯೊ ಮತಿಯನಿತ್ತು
ಸರಿಯಿಲ್ಲ ನಿನಗೆಲ್ಲಿ ವರ ಪರಾಪರದಲ್ಲಿ

ಮರಿಯದಿರೆಲೊ ನಮ್ಮ ಗಿರಿಯ ಮೇಲ್ ಗಿರಿತಿಮ್ಮ
ಶರಣೆಂಬೆ ಶಿರವಾಗಿ ಕರವೆತ್ತಿ ನಿನಗಾಗಿ
ಹರಣವ ಒಪ್ಪಿಸುವೆ ನಿರುತ ಸಮರ್ಪಿಸುವ
ಶರೆಯಾಗಿ ಸಂಸಾರವೆಂಬೊ ಮಹ ಗರಳ
ಶರಧಿಯೊಳಗಿರಲಾರೆ ಶರಧಿ ಶಯನ ಹರೆ
ಗುರುವೆ ಬ್ರಹ್ಮವರ್ಧನ ವಿಜಯ ವಿಠ್ಠಲ
ಎರದು ನಿನ್ನ ನಾಮ ನಾಲಿಗೆಯಲಿ
ಎರಕಾ ಹೊಯ್ದಂತಿರಲಿ ಎರವೆನ್ನದಿರು ನಿನ್ನ
ಚರಣ ಯುಗಕೆ ಸಾವಿರ ಕೋಟಿ ಪ್ರಮಾಣ ೧

ಮಟ್ಟತಾಳ

ಹರಿದಾಸನ ಮಾಡು ಹರಿದಾಸರ ಮಾಡು ಹರಿಕರುಣದಿಂದ
ಹರಿದಾಸನಾಗುವ ಹರಕೆಯನು ತೋರಿ
ಹರಿ ಹರಿದಾಡುವ ಹರುಷಾಂಬುಧಿಯೊಳಗೆ
ಹರಿ ನಿಲಿಸಿ ಎನ್ನ ಹರಿದಿಂಬ ದುರಿತದ
ಹರಿಬಕೆ ನೀನೊದಗಿ ಪರಿ ಪಾಲಿಸು
ದರ್ಶನ ನಾಮ ವಿಜಯ ವಿಠ್ಠಲ ಎನ್ನ
ಹರಿಮಾರುವ ದೈವ ಹರಿ ಬಲ್ಲವರಿಗೆ ೨

ತ್ರಿವಿಡಿತಾಳ

ಮಜ್ಜ ಮಾಂಸ ರಕ್ತ ತ್ವಕು ಚರ್ಮಾಸ್ತಿಗಳಲ್ಲಿ
ರಜ್ಜಾ ದೊಳಗೆ ಶಿಲ್ಕಿ ನೋವಾದೆನೊ
ಮಜ್ಜಿಗಿಂದಲಿ ಪಾಲು ಹೆಪ್ಪು ಗೊಟ್ಟಂತೆನ್ನ
ಸಜ್ಜನರೊಳು ಕಲೆಸು ಕಮಲನಾಭ
ಮೂಜ್ಜಗ ಮಧ್ಯದಲಿ ನಿನ್ನ ಪೋಲುವ ದೈವ
ಸಜ್ಜಾಗಿ ನೋಡಲು ಕಾಣೆನಯ್ಯ
ಮಜ್ಜಿಗಿ ಕದ್ದ ಸವಿತ ವಿಜಯ ವಿಠ್ಠಲ
ಅಜ್ಜುಗಾರನು ನೀನೆ ಅನಂತ ಕಾಲದಲ್ಲಿ ೩

ಝಂಪೆತಾಳ

ನೀನೆ ಪುರುಷನಾಗಿ ನಿಜದಲ್ಲಿ ಇರಲಿಕ್ಕೆ
ನಾನು ಪರರಿಗೆ ಶರಣು ಹಾಕಬಹುದೆ
ಮಾನಿನಿಗೆ ಪತಿಯಾದವನು ಆಜ್ಞವ ಕೊಟ್ಟು
ತಾನೆ ಮುನಿದು ಬಿಡಲು ಅವಳು ಪೋಗಿ
ನಾನಾ ಪರಿಯಲ್ಲಿ ತಿರದುಂಡರಾ ಪತಿಗೆ
ಶಾನೆ ಸೌಭಾಗ್ಯಗಳು ಇದ್ದರೇನು
ನೀನೆ ನೇಮಿಸಿದ ಕಾಯ ಧರಣಿಯೊಳು ನೂಕೆ
ಹೀನಾಯದವನೆಂದು ಬಿಡಿ ಬೀಸಲು
ನೀನೆ ಮಿಕ್ಕಾದವರ ಪೊರೆದೆನೆಂಬೊ ಬಿರದು
ಅನಂತಾನಂತ ಧರಿಸಿದರೆ ಏನು
ಮಾನ ದಾತವ್ಯ ವಿಜಯ ವಿಠ್ಠಲ ಬಂದು
ಗೇಣಿಗಳಿದಾ ಮಾನಾ ಕ್ಷೋಣಿಯಾನಿತ್ತರೇನು ೪

ತ್ರಿವಿಡಿತಾಳ

ಇದೆ ಮನಸು ದೃಢವಾಗಲಿ ನಿನ್ನಯ
ಮುದದಿಂದ ತಿಳಿವಂಥ ಜ್ಞಾನಾವೊಂದು
ಒದಗಲಿ ಆಮ್ಯಾಲೆ ಭಕುತಿ ಚಂಚಲವಿಲ್ಲದೆ
ತದನಂತರದಲ್ಲಿ ವೈರಾಗ್ಯತೊಟ್ಟು
ಪದೊಪದಿಗೆ ನಿನ್ನ ಪದಗಳನೆ ಕೊಂಡಾಡಿ
ಬೆದರಿಸುವ ದುರಿತ ಅಧೋಮುಖವಾಗಲಿ
ಇದೆಯಲ್ಲದೆ ಎನ್ನ ಹೃದಯಾದಲ್ಲಿ ಮತ್ತೆ
ಅಧಿಕಾವಿದ್ದರೆ ನಿನ್ನ ಪದ ಪದುಮಗಳಾಣೆ
ಯದುಕುಲ ಪಾಲ ಸಾಧುವೆ ವಿಜಯ ವಿಠ್ಠಲ
ಇದಕಿಂತಾಧಿಕವಿತ್ತರೆ ನಿನಗೆ ಎನ್ನಾಣೆ ೫

ಅಟ್ಟತಾಳ

ಕಣ್ಣಿನಿಂದಾದರು ನಿನ್ನ ನೋಡಿಪೆನೇನೆ
ಚನ್ನ ವಸ್ತಕೆ ವೇಗನೆ ಎರಗೋದು
ಸನ್ನುತಿಯಿಂದಲಿ ನಿನ್ನ ಸ್ತುತಿಪೆನೇನೆ
ಅನ್ನದಗೋಸುಗ ಅನ್ಯರ ಪೊಗಳೋದು
ಕರ್ಣದಲ್ಲಿ ವಾರ್ತೆಯನು ಕೇಳಿಪೆನೇನೆ
ಅನ್ಯಥ ವಾರ್ತಿಗೆ ನಿಮ್ಮನೆನಿಗರೋವು
ಸನ್ನಿಧಾನನಾಗಿ ಕರವ ಮುಗಿಪೆನೇನೆ
ಉನ್ನತ ಪಗಡಿ ಪಂಜಿನಾಡಾ ಪೊಗೋವು
ನಿನ್ನ ಪ್ರಸಾದ ಭೋಜನ್ನ ಗೈಪೆನೆನೆ
ತಿನ್ನಲೋಡಿದೆ ಸಾಧನ್ನ ಬಿಟ್ಟು ನೆರೆ
ನಿನ್ನ ಪೂಜಿಸಿದ ಪೂವನ್ನ ಘ್ರಾಣಿಪೆನೆನೆ
ಕನ್ಯರ ಮುಡಿದಿದ್ದವನ್ನಪೇಕ್ಷಿಸುವುದು
ಪುಣ್ಯ ನಿಧಿಗಳು ಇನ್ನು ಮೆಟ್ಟುವೆನೇನೆ
ಕುನ್ನಿಕಾಲನಂತೆ ಕಂಡಲ್ಲಿ ತಿರಗೋವು
ಎನ್ನಿಂದ ಒಂದು ಸಾಧನ ಒಂದಿಲ್ಲಾ ಇಲ್ಲ
ನಿನ್ನ ದಯವೊಂದಲ್ಲದೆ ಗತಿಯಿಲ್ಲ
ಭಿನ್ನ ಸಂಶಯ ನಾಮ ವಿಜಯ ವಿಠ್ಠಲ ಪಾ
ವನ್ನ ಮೂರುತಿಯೆಂದು ಚಿಣ್ಣಾನಂತೆರಗಿದೆ ೬

ಆದಿತಾಳ

ತೊತ್ತು ತೊತ್ತೇರ ಬಳಿಯಾ ಭತ್ತವ ಕುಟ್ಟುವವರು ಮನೆ
ಹಿತ್ತಲಿಯಾ ಹೊರಗೆ ಕಸವೆತ್ತುವರ ಮನೆಗೆ ನೀರು
ಹೊತ್ತು ಬರುವರ ದೀಪದ ಬತ್ತಿಯಾ ಚಾಚುವರ
ಸುತ್ತಲಿದ್ದವರಿಗೆ ನಿತ್ಯ ಬುತ್ತಿ ಒಯ್ವ ಸೇವಕರ
ಹತ್ತಿಲಿ ಸೇರಿದ ಜನರ ತೆತ್ತಿಗರ ಬೋನಾದವರ

ಚಿತ್ತ ಪಿಡಿದಿದ್ದ ದಾಸೋತ್ತುಮರು ಉಂಡುಮಿಕ್ಕ
ತುತ್ತಿನೊಳಗೆ ಒಂದು ತುತ್ತನಿತ್ತು ಸಲಹಬೇಕು ಎನ್ನ
ಮತ್ತೆ ವಿಷಯದಲ್ಲಿ ಹಾಕದೆ ಉತ್ತರ ವಿಜಯ ವಿಠ್ಠಲ
ಚಿತ್ತ ನಿನ್ನಲ್ಲಿಡಿಸಿ ಕಾಯೊ ತೊತ್ತಿನ ತೊಂಬಲು ತಿಂಬೆ ೭

ಜತೆ

ಹಿಂದಣ ದುಷ್ಕರ್ಮ ಕಳೆಯಿತೇನೋ ಇಂದು ನಿನ್ನ
ಕಂಡೆ, ಕರ್ತೃ ವಿಜಯ ವಿಠ್ಠಲ ೮

೬೪

ಝಂಪಿತಾಳ

ಬಂದೆನೊ ಬಲು ತೊಳಲಿ ಬಲು ಯೋನಿ ಮುಖದಲ್ಲಿ
ನೊಂದ ನೋವಂಗಳಾರಿಗೆ ಉಸಿರಲಿ
ಹಿಂದೆ ಉದರದಲ್ಲಿ ಜಗವ ಪೊಂದಲಿಟ್ಟು ಜನನಿ
ಎಂದೆನಿಸಿಕೊಂಡೆ ಪ್ರಳಯಾಂಧದಲ್ಲಿ
ತಂದೆ ರೂಪವಾಗಿ ಒಂದೊಂದು ಪರಿಯಲ್ಲಿ
ಬಂದು ಸಂರಕ್ಷಿಸಿದೆ ಇಂದಿರೇಶ
ಮುಂದೆ ಸಹೋದರನಾಗಿ ನಿಂದು ಎಡಬಲಕೆ ಕೃಪೆ
ಯಿಂದ ಪಾಲಿಸಿದೆ ಸಂಕ್ರಂದ ವಿನುತ
ಒಂದೆ ಮನಸಿನಲಿ ನಮೋ ಎಂದ ಕಿಂಕರರ ನೂ
ರೊಂದು ಕುಲೋದ್ಧರಿಸೆ ಕಂದನಾಗಿ
ಬಂದಡರುವಾಪತ್ತು ಸಂದೋಹಗಳ ಕಳೆದು
ಬಂಧು ಎಂದೆನಿಸಿದೆ ಸಿಂಧುಶಯನ
ಅಂಧಕಾರದ ಜ್ಞಾನ ಸಂಧಿಸಿರೆ ಉಪದೇಶ
ದಿಂದಲ್ಲಿ ಪೋಷಿಸಿದೆ ಗುರುವೆನಿಸೀ
ಒಂದೆ ಎರಡೇ ಏನೆಂದು ಪೇಳುವೆನೆ ಎ
ನ್ನಿಂದಾಗುವ ಸಕಲ ಛಂದವನ್ನು
ತಂದೆ ಅಮೃತನಾಮ ವಿಜಯ ವಿಠ್ಠಲ ನಿನ್ನ
ಸಂದರುಶನಾಗಲು ಮಂದ ಮತಿಯುಂಟೆ ೧

ಮಟ್ಟತಾಳ

ಇರಳು ಹಗಲು ಬಿಡದೆ ದುರುಳ ಮನಸು ಸುತ್ತಾ
ಮರದ ನೆರಳು ತಿರುಗಿ ತಿರುಗಿದಂತೆ ನಿತ್ಯ
ಎರಗುವುದು ಮನಸು ಎರಕ ಬೆಚ್ಚಿಸಿದ ಈ
ಪರಿಯಲಿ ವಿಷಯಕ್ಕೆ ಸರಿಯದು ಸರಿಯದು
ಪರಿಯೆ ಸುಕೃತನಾಮ ವಿಜಯ ವಿಠ್ಠಲ ನೀನೆ
ಕರುಣ ದೈವವೆಂದು ಅರವು ಮಾಡಿದೆನಯ್ಯ ೨

ತ್ರಿವಿಡಿತಾಳ

ತಂದೆಯ ಉದರದಲಿಂದ ಜನನಿಯಲ್ಲಿ
ಬಿಂದು ಜಿಗುಳಿ ಬೀಳಲಂದೆ ನೀನೊಲಿದು
ಬಂದು ನಸುಲಾಲಿಸಿ ಒಂದೆ ಸಾರಿಗೆಲಿ
ಕುಂದಾಗದಂತೆ ಸರ್ವಾಂಗವನು ಬರಿದೆ
ಇಂದು ಗ್ರಾಸಕೆ ನಾನೆಂದರೆ ಚಿಂತಿಸಿ
ತಂದು ಶರಗಿಲಿ ಪಡಿ ಅಂದು ಕೊಟ್ಟಂತಿರೆ
ಮುಂದಾವುದು ಒಲ್ಲೆ ಕ್ಷಮ ವಿಜಯ ವಿಠ್ಠಲ
ಛಿಂದಿ ಛಿಂಧಿಯ ಮಾಡು ಬಂಧನಾಖ್ಯಗಳ ೩

ಅಟ್ಟತಾಳ

ಆಳುಗಳಿಗೆ ಆವಾವ ಬಗೆಯಲಿ ಬಾ
ಕೂಳಿಗೆ ನೀನಾಗಿ ಬಾಗಿಲು ಕಾಯ್ದುತ್ತ
ಕಾಲ ಕಾಲಕ್ಕೆ ಭಕ್ತ‍ಗೆ ಬಂದುಪ
ಟಳವಗಡಿದು ನೀನಾಳಾಗಿ ದುಡಿವೆ
ಆಳುಗಳಿಂದ ನಿನಗೇನು ಸುಖವೊ
ಆಳುಗಳಿಂದ ನಿನಗೇನು ಸಂತೃಪ್ತಿ
ಆಳಿನ ಅವಗುಣ ಎಣಿಸದಲೆ ನೀನು
ಆಳಾಗಿ ದುಡಿದು ಸೋಜಿಗವ ತೋರುವಿ
ಆಳು ಎನ್ನನು ಸ್ವಸ್ತಿನೆ ವಿಜಯ ವಿಠ್ಠಲ
ಪೇಳೆನೆಂದರೆ ಎನ್ನ ನಾಲಿಗೆ ಸಾಲದು ೪

ಆದಿತಾಳ

ಸಾಕು ಬಂದ ನರಜನ್ಮ ಲೋಕವಾರ್ತಿ ತೊರೆದು ವಿ
ವೇಕದಲ್ಲಿ ನಿನ್ನ ನಾಮ ಬೇಕು ನಿನ್ನಯ ಪ್ರಸಾದ
ಸ್ವೀಕರಿಸಿ ಈ ಮನ ಸಾಕಲ್ಯವಾಗಿ ನಿಂದು
ವಾಕು ಮರೆಯದಂತೆ ಗಮಕದಿಂದೊದಗಲಿ
ನೂಕು ಜನನ ನಿಲಿಸು ಜೋಕೆಯಿಂದಲೆ ಸಲಹು ಬಿಡದೆ
ಸೋಕಿ ಎನ್ನೊಡನೆಯಿದ್ದು ಪಾಕ ಶುದ್ಧನೆಂದೆನಿಸು
ಹಾಕದಿರು ಗರ್ಭದಲ್ಲಿ ತಾಕರ ವಿಜಯ ವಿಠ್ಠಲಾ
ನೇಕ ಮಹಿಮ ಅಪ್ರತಿದೈವ ನಾಕಾದಿ ಶಿರೋಮಣಿ ೫

ಜತೆ

ಅನಂತ ವಿಲಕ್ಷಣವುಳ್ಳ ಪರಮಪುರುಷ
ಅನಂತ ಶ್ರೀ ವಿಜಯ ವಿಠ್ಠಲ ಮನ್ನಿಸು ಎನ್ನ ೬

೬೫

ಧ್ರುವತಾಳ

ಬಂದೆನೊ ಭವರೋಗ ಬಂಧನದೊಳಗೆ
ನೊಂದೆನೊ ಸಂಸಾರ ಸಿಂಧುವಿನೊಳಗೆ
ಸಂದೆನೊ ಬಲುಕಾಮಾಂಧದ ಒಳಗೆ
ನಿಂದೆನೊ ನರಕ ಸಮ್ಮಂಧದ ಒಳಗೆ
ಮುಂದೇನು ಗತಿ ಕಾಣೆ ಮೂಲೋಕದೊಳಗೆಣೆ
ಎಂದೆಂದಿಗೆ ನಿನಗಿಲ್ಲವಲ್ಲ ಇಂದುಶೇಖರ
ವಂದಿತ ವಿಜಯ ವಿಠ್ಠಲರೇಯ
ಕುಂದುಗಳೆಣಿಸದೆ ಕಂದನಂತೆ ಕಾಯೊ ೧

ಮಟ್ಟತಾಳ

ರೋಮ ರೋಮಾಂಗದಲಿ ಕಾಮಪೂರಿತನಾಗಿ
ನಾಮವೇರಿದಂತೆ ತಾಮಸವ ಕವಿದು

ಪಾಮರ ನಾನಾಗಿ ನಾ ಮರೆದನು ನಿನ್ನ
ನಾಮವಾದರು ಒಂದು ಯಾಮವಾದರೆ ನೆನೆಯೆ
ರೋಮ ಕೋಟಿಲಿಂಗ ನಾಮದ ಒಡೆಯಾನೆ
ರಾಮ ವಿಜಯ ವಿಠ್ಠಲ ಮಹದೈವಾವೆ ೨

ರೂಪಕತಾಳ

ಕಾಯಿ ಎಲೆಯ ಮರೆಯಲ್ಲಿ ಕಾಯಿದಂತೆ ಇರದೆನ್ನ
ಕಾಯ ದಂಡಿಸಿ ಪರರ ಕಾಯವ ವರ್ಣಿಸಿ
ಕಾಯೆಂದು ಉದರವ ತೋರಿ ಬಾಯಿದೆರದು ಕ
ಗ್ಗಾಯಿಯಂದದಿ ವ್ಯರ್ಥ ಪ್ರಯಾಸವನು ಬಟ್ಟೆ
ಕಾಯದೊಳಡಗಿದ ಕಾಯಜ ಪಿತ ನಿನ್ನ
ಕಾಯ ಕಣ್ಣಿಲಿ ನೋಡಿ ಕಾಯ ಸಾಧನ ಗೈಯ್ಯೆ
ಕಾಯುವ ಬಿರಿದು ಪೊತ್ತು ಏಕ ವಿಜಯ ವಿಠ್ಠಲ
ಕಾಯ ಸೋತಂತೆ ನಿಕಾಯದೊಳಿಡದಿರು ೩

ಝಂಪಿತಾಳ

ದಾಸನು ನಾನೆಂದು ಧರಣಿಯೊಳಗೆ ಮಾಯ
ವೇಷವನು ಧರಿಸಿ ವ್ಯವಹಾರ ಮಾಡುತ್ತ
ಕಾಸುಕಾಸಿಗೆ ಕಾಲು ಸುಟ್ಟ ಬೆಕ್ಕಿನಂತೆ
ದೇಶದೊಳಗೆನ್ನ ಸರಕನು ತೋರುತ್ತ
ಕಾಶಿ ರಾಮೇಶ್ವರದ ಯಾತ್ರೆಗೆ ಪೋದ ವಿ
ಶೇಷರು ನಾವೆಂದು ಸಟೆಯ ಪೇಳಿ
ದೋಷಕ್ಕೆ ಗುರಿಯಾದೆ ವಿಜಯ ವಿಠ್ಠಲ ತಂದೆ
ನೀ ಸುಲಭನೆಂದು ಎಣಿಸದೆ ಗುಣಸದೆ ೪

ತ್ರಿವಿಡಿತಾಳ

ಜಗದೊಳು ನಿನ್ನ ಸೇವಕನಾದ ಮೇಲೆ
ಅನ್ನಿಗರನ್ನ ಬೇಡುವೆ ಬಸವಳಿದು
ಮುಗುಧಾನು ನಾನಯ್ಯ ಮೂಲ ಪಾಪಕ್ಕೆ ಪ್ರಧಾ

ನಿಗನಾಗಿ ತಿರುಗಿದೆ ತಿಗರಿಯಂತೆ
ರಗಳಿಲಿ ದಿನಗಳೆದೆ ಹಗಲಿರುಳು ಹೀಗೆ
ಹಗರಣವಾಯಿತು ಹಲವು ಬಗೆಯಿಂದ
ಮೊಗೆಯ ಸಂದಿಲಿ ಕೆಲದಾಡಿದಂತೆ ಇಂದು
ನಗೆಗೇಡಾಯಿತು ಎನಗೆ ವಿಜಯ ವಿಠ್ಠಲ ೫

ಅಟ್ಟತಾಳ

ಮಾರುವುದು ನಿನ್ನ ತೊತ್ತಿನ ಮಕ್ಕಳಿಗೆ
ಮಾರುವುದು ನಿನ್ನ ಪಾಗಾಣತಿಯರಿಗೆ
ಮಾರುವುದು ನಿನ್ನ ಬೋನಗಾರ್ತಿಯರಿಗೆ
ಮಾರುವುದು ನಿನ್ನ ನೀರು ಪೊತ್ತವರಿಗೆ
ಮಾರಮಾರು ನಿನ್ನ ಮಾರಕೊಂಬವರಿಗೆ
ಮಾರದಿರು ಎನ್ನ ಮಾರಿಗೆ ಗುರಿ ಮಾಡಿ
ಮಾರಜನಕ ಕೃಷ್ಣ ವಿಜಯ ವಿಠ್ಠಲ ಎನ್ನ
ಮಾರುದೋದರೆ ನಿನ್ನ ಮನೆಯಲ್ಲಿ ಶೆರೆಯಿಡೊ ೬

ಆದಿತಾಳ

ನಿನ್ನ ನಾಮವ ಕದ್ದ ಕುನ್ನಿಯ ಎಳೆ ಮರಿಯ
ನಿನ್ನವರಿಂದ ದಂಡಿಸಿ ರನ್ನದ ಸಂಕದಾಲಿಯ
ಎನ್ನ ಕಾಲಿಗೆ ಹಾಕಿಸಿ ನಿನ್ನ ಪುರದೊಳಿಟ್ಟು
ಸನ್ನಿವಾಸ ವಿಜಯ ವಿಠ್ಠಲ
ನಿನ್ನ ಚಿನ್ನೆಯವನೆನಿಸು ೭

ಜತೆ

ಮಂದ ಮತಿಗೆ ಒಂದು ದಾರಿಯ ತೋರಯ್ಯ
ಸಂಧಾತ ವಿಜಯವಿಠ್ಠಲ ರುಗ್ಮಿಣಿನಲ್ಲ ೮

೬೬

ಧ್ರುವತಾಳ

ಬಂಧು ನಿನಗೆ ಎನದೊಂದಾದರೂ ಪೂಜೆ
ಬಿಂದುಮಾತುರ ಕಾಣೆ ಎಂದೆಂದಿಗೆ
ಒಂದಾದರೂ ಇಲ್ಲ ವೃಂದಾರಕರ ನಲ್ಲ
ಸಂದುವುದೆಂತೊ ನಿನ್ನ ದ್ವಂದ್ವ ಪಾದಕ್ಕೆ
ಅಂದು ಮೊದಲಾರಭ್ಯ ಇಂದಿನ ಪರಿಯಂತ
ಕುಂದಾದೆ ಯೋಚಿಸಿ ಮುಂದೆ ನೋಡೆ
ತಂದರ್ಪಿಸುವದಾದರೂ, ಒಂದಾದರೂ ಕಾಣೆ
ನಿಂದು ಒಲಿಸುವೆನೆ ಇಂದುವದನ
ಇಂದ್ರ ನಾಮಕದೇವ ವಿಜಯ ವಿಠ್ಠಲ ಎನ
ಗೊಂದು ದಾರಿಯ ತೋರಿ ಮಂದವನು ಕಳಿಯೊ ೧

ಮಟ್ಟತಾಳ

ತುಳಸಿ ಮೊದಲಾದ ಕಲಶೋಧಕ ಗಂಧ
ತಳಿತಕ್ಷತೆ ಕುಸುಮ ಫಲಿತ ಓದನಾದ
ಕೆಲಕಾಲದಲಿ ವೆಗ್ಗಳವಾಗಿ ಕೊಡುವೆನೆಂ
ದೊಲಿದಿತ್ತರೆ ವೆಗ್ಗಳವಾಗಿ ಕೊಡುವೆನೆಂ
ದೊಲಿದಿತ್ತರೆ ನಿನಗೆ ಬಲುದಣಿಯಾಗುವುದೆ
ಬಲು ದೈವವೆ ನಮ್ಮ ವಿಜಯ ವಿಠ್ಠಲ ನಿನ್ನ
ಜಲಜ ಪಾದಕೆ ನಿತ್ಯ ತಲೆ ಬಾಗಿ ನಿಲುವೆ ೨

ತ್ರಿವಿಡಿತಾಳ

ಸ್ನಾನದಿಂದಲಿ ನಿನ್ನ ಒಲಿಸುವೆನೆಂಬೆನೆ
ಜಾನ್ಹವಿ ನಿನ್ನ ಪಾದೋದಕವಾದಳು
ನಾನಾ ಭೂಷಣ ತೊಡಿಸಿ ನೋಡುವೆನೆ ನಿನಗೆ
ಆನಂದವಾದ ಅಪ್ರಾಕೃತ ಆಭರಣ

ಏನಾದರಾಗಲಿ ವಸನ ಉಡಿಸುವೆನೆಂದು
ಧ್ಯಾನಿಸಲು ನಿತ್ಯ ದಿವ್ಯ ವಸನ
ದೀನರಪಾಲ ಶ್ರೀ ವಿಜಯ ವಿಠ್ಠಲ ನಿನಗೆ
ಆನಾವ ಬಗೆಯಿಂದ ಮೆಚ್ಚಿಸುವೆನಯ್ಯ ೩

ಅಟ್ಟತಾಳ

ಗಂಧಪರಿಮಳ ಪಚ್ಚಿಪೆನೆಂಬೆನೆ
ಗಂಧವಾಗಿ ನಿನ್ನಂಗ ಒಪ್ಪುತಲಿದೆ
ತಂದು ತುಲಸಿ ಪುಷ್ಪದಲಿ ಪೂಜಿಪೆನೆನೆ
ಕುಂದಮಂದಾರಮಾಲೆ ಸದಾ ನಿನ್ನ ಕೊರಳಿಲಿ
ಒಂದೊಂದು ಪರಿ ಧೂಪಾರತಿ ಮಾಡುವೆನೆನೆ
ಇಂದು ಕೋಟಿಯಂತೆ ನಿನ್ನ ಪ್ರಕಾಶವು
ಒಂದೆ ದೈವವೆ ಈಶ ವಿಜಯ ವಿಠ್ಠಲರೇಯ
ಮಂದಮತಿ ಎನಗೊಂದು ಸಾಧನವಿಲ್ಲ ೪

ಆದಿತಾಳ

ಓದನಾದಿಯಲ್ಲಿ ನಿನ್ನ ಮಾಧುರ್ಯವಾದ ದಯಸಂ
ಪಾದಿಸುವೆನೆಂದು ನೋಡೆ ಆದುದಿಲ್ಲ ಎನ್ನ ಕೈಯ್ಯ
ಆದಿಯಂತೆ ನಿತ್ಯತೃಪ್ತಿ ಆದಿತ್ಯ ಶತಕಿರಣ
ಶ್ರೀದೇವಿ ನಿನಗೆ ತಳೋದರಿಯಾಗಿಪ್ಪಳು
ಈ ಧರೆಯೊಳು ನಿನ್ನಾರಾಧನೆಗೆ ಮಿತಿಯಿಲ್ಲದೆ
ಶೋಧಿಸಿ ನೋಡಿದರೆ ಒಂದಾದರು ಕಾಣೆನೋ ರಂಗ
ಯಾದವೇಶ ವಿಜಯ ವಿಠ್ಠಲ ನೀ ದಯವಾಗಿ ಎನ್ನ
ಆದರಿಸಿ ಕಾಯೊ ಪ್ರಸಾದವಾದರೆ ಬದುಕುವೆನೊ ೫

ಜತೆ

ಕಾಯ ದಂಡಿಸಿ ನಿನ್ನ ಕಾಣಲಾರೆನೊ ಎನ್ನ
ಕಾಯಾದೊಳಗೆ ಮೆರೆಯೊ ವಿಜಯ ವಿಠ್ಠಲ ದೊರೆಯೆ ೬

೬೭

ಧ್ರುವತಾಳ

ಬಳಲಿಪುದು ಸಲ್ಲ ನಿಶ್ಚಲ ಮೂರುತಿ ಕೇಳು
ಕೆಲಕಾಲ ನಿನ್ನ ಹಂಬಲಿಸಿದವನೊ
ಛಲವ್ಯಾಕೆ ಎನ್ನೊಡನೆ ಶ್ರೀಹರಿಯೇ
ಬಲವಂತನೆಂಬೊ ವೆಗ್ಗಳದ ಗರ್ವಿಕೆಯೊ, ಸ–
ಕಲ ಲೋಕ ನಿನ್ನ ವಶವೆಂಬೊ ಬಿಗುವೊ
ಜಲ, ಅನಿಲ, ಅನಳ, ಬಯಲ ಮಿಕ್ಕಾದ ವಸ್ತುವಿ
ನೊಳಗೆ ವ್ಯಾಪುತನೆಂಬಗ್ಗಳಿಕೆ ಏನೋ
ಹಲವು ಬಗೆಯಿಂದಲಿ, ಬಲದೈವ ನೀನೆಂದು
ಸಲೆ ಸ್ತುತಿಸಿದರೆ ಕೇಳದಲೆ ಇಪ್ಪ ಪರಿಯೇನೊ
ಎಲೊ, ಶ್ರೇಷ್ಠ ಕೃಷ್ಣ ಎನ್ನಯ್ಯಾ, ಕುಲಗೋತ್ರ ಆವಾವ–
ಬಳಗಕ್ಕೆ ಬಳ್ಳದಲ್ಲಿ ಹೊನ್ನು ಹಣಗಳು
ಅಳೆದುಕೊಟ್ಟು ಬಿಡದಲೆ ಸಲಹಬೇಕೆಂದು
ನಿಲಿಸಿ ಪೋಗಗೊಡದಲೆ, ನಿಂದನೇ
ಒಲಿದು ನಿರಂತರ ಸುಳಿದು ಎನ್ನೊಳಗೆ, ಮಹ
ಸುಳಿಯೊ, ಮಧ್ಯದಿಂದ ಶೆಳೆದು ತೆಗೆಯೊ
ಹುಳವು ನಾನು ಎನಗೆ ಸುಳಿ ದಿವಸವಿದ್ದರು
ಕಳೆಯೊ, ಕರುಣದಿಂದ ಅಲಾಪು ಮಾಡಿ
ಹೊಲಗೇರಿ ಸೂರೆಯಾಗಲು ಅರಸನಾದವನು
ಗೆಲಲಾರೆನೆಂದು, ಅತ್ತಲೆ ಉಳಿವನೆ
ಸುಲಭ ಕೋರಿದೆನೊ, ಬೆಂಬಲವಾಗಿ ಅನುದಿನ
ಅಲಸದಂತೆ ಸ್ನೇಹ ಬಳಸು ಎಂದು
ಹಲುಬಿ ಅವಸರಿಸದೆ, ಒಲಿಸಿ ಬೇಡಿದರೆ, ಆ–
ಗಲಿ ಎಂಬೊದೇನೊ, ಮಂಗಳ ಮೂರುತಿ
ಕುಲಿಶಧರುನುತ ವಿಜಯ ವಿಠ್ಠಲ ಎನ್ನ ಬಿನ್ನಪ
ಸಲಸದಿರೆ ನಿನ್ನ ಗುಣಾವಳಿಗಳು ದೂರದೆ ೧

ಮಟ್ಟತಾಳ

ಈ ಕಲಿಯುಗದಲಿ ಮೂಕನಾದವಗೆ, ಬದುಕುವ ಬಗೆ ಎನ್ನ-
ತಾ ಕಾಣನು ಎಂದು, ಲೋಕ ಜನರು ಇನಿತು
ವಾಕು ಪೇಳುತಲಿದೆ, ಲೌಕಿಕವೇ ಸತ್ಯ
ನೇಕ ಬಗೆಯಿಂದ ನೀ ಕರುಣಿಯು ಎಂದು
ಏಕಾಂತದಲಿ ನಾ ಕೊಂಡಾಡಿದಕೆ
ವಾಕು ಕೇಳದಲೆ ನಿರಾಕರಣೆ ಮಾಡಿ
ಯಾಕೆ ಸುಮ್ಮನೆಯಿಪ್ಪೆ ಗೋಕುಲದೊಳು ಪುಟ್ಟಿ
ಆಕಾರವಡಗಿಸಿ, ಹೋಕೆತನದಲ್ಲಿ
ಹಾಕ್ಯಾಡುತ ಗೊಲ್ಲರ ಕೂಡ ಬೆಳೆದು
ಆಕಳನು ಕಾಯ್ದು ಕಾಕುಲಾತಿಯಿಂದ
ಡೋಕಾರಿಗನಾಗಿ ನೂಕಲು ಭಯ ಬಡದೆ
ಬೇಕೆಂದು ಮನೆ ಮನೆ ನೀ ಕಳವು ಮಾಡಿ
ಲೋಕದೊಳಗೆ ಮೆರದೆ, ಸಾಕು ನಿನ್ನಬ್ಬರ
ಸಾಕುವ ಧೊರೆತನಕೆ, ನಾಕಾದ್ಯರು ಪೊಗಳೆ
ಶಾಕವ ಸವಿದುಂಡೆ ಸಾಕುವ ದಾತಾರ ವಿಜಯ ವಿಠ್ಠಲರೇಯಾ
ತಾ ಕಾಣದಿರಲಾನೇಕರ ಸುಖವೇನೊ ೨

ತ್ರಿವಿಡಿತಾಳ

ತುಡುಗುತನದಿಂದ ಹುಡುಗರ ಕೂಡಲಿ
ಕಡೆಯಿಲ್ಲದೆ ಪರರ ಮಡದೇರ ಮೆಚ್ಚಿಸಿ
ಕುಡಿದು ಹಾಲು ಮೊಸರ, ಗಡಿಗೆ ಒಡೆದು ಬಿಸುಟು
ಅಡಿಗಡಿಗೆ ಲಜ್ಜೆಯಾಗೆಡಿಸಿ ಹಗಲಿರಳು
ಮಡುವಿನೊಳಗೆ ಇದ್ದ, ಮಡದೇರ ಮೈಲಿಗೆ
ತುಡಿಕೆ ಏರಿದೆ ಒಂದು ಕಡಹದ ಮರವನು
ಕೊಡಲಾರದೆ ಭಂಗ ಬಡಿಸಿ ಮಾನವ ಕೊಂಡ
ಉಡುಗಿಗಳ್ಳನೆ ಕಂಡ, ಎಡೆಯಂಜಲುಂಡವನೆ
ಬಿಡು ನಿನ್ನ ದೈವವ ಸಡಗರತನವನ್ನು
ಒಡನೆ ಸುರರು ನಿತ್ಯ ನುಡಿವುದ್ಯಾತಕೆ ನಿನ್ನ

ಭಿಡಿಯಾ ಸಲ್ಲದು ಎನಗೆ ಕೊಡದ ಮ್ಯಾಲೆ ತಿಳಿ
ಬಡಿವಾರವೇನು ಭಯ ಬಡುವವ ನಾನಲ್ಲ
ಗಿಡದ ಮೇಲಿನ ಹಕ್ಕಿ ಒಡನೆ ಸಿಗುವ ಬಲಿಯಾ
ನಡುವೆ ಬಿದ್ದಂತೆ, ಅವಘಡವ ಭವದೊಳು
ಕಡೆಗಾಣದೆ ನಾನೆ ಕೆಡುತಲಿರಲು ನಿನಗೆ
ಬಡಲ್ಯಾಕೆ ದೈನ್ಯವ ಅಡಿಗಡಿಗೆ
ಒಡೆಯ ನಿನ್ನಯ ಕೂಡ ತೊಡಕಿದಾಗಲೆ ಭಕ್ತ
ಕಡೆಬೀಳನು ನೂರು ಕಡೆಗಾಲ ಕಂಡರು
ಹಡದ ತಾಯಿ ಮಾವ, ಒಡ ಹುಟ್ಟಿದವ ತಂಗಿ
ಒಡಲಿಂದ ಬಂದವ, ಒಡನಾಡಿದವರ
ಕಡು ಸ್ನೇಹದವರ ಬೆಂಬಿಡದೆ ಓದಿದವನ
ಕಡು ಮುಳಿದು ತರಿದು, ಸಂಗಡಲೆ ನಗುವ ದೇವ
ತಡಿಯದೆ ಸರ್ವವು, ಕಡಿಯಾಗಲಿಕೆ ನಿನ್ನ
ಒಡಲೊಳಿಟ್ಟುಕೊಂಬ, ಬಡವರಯ್ಯಾ
ಪಿಡಿತುಂಬ ಅವಲಿಗೆ ಕಡು ಮೆಚ್ಚಿದವನೆ ಬ–
ಚ್ಚಿಡಲ್ಯಾತಕೆ ಹರಿ, ನಿನ್ನ ನಡತಿನುಡತಿ
ಎಡೆಯಾವಲ್ಲದ ದೈವ ವಿಜಯ ವಿಠ್ಠಲ ನಿನಗೆ
ಅಡಗುವುದೇನೊ, ನೀರಡಿಯಲ್ಲಿ ಪಡೆದವನೆ ೩

ಅಟ್ಟತಾಳ

ಹಣುವವನಲ್ಲ, ಸುಮ್ಮನೆ ಬೇಡಿದರೆ ನೀನು
ಮಣುವವನಲ್ಲ ಯೋಚನೆಯಿಂದ ನೋಡಲು
ದಣುವವನಲ್ಲ, ಮಾತಿನಲಿ ನಿರುತ್ತರ
ಅನುದಿನದಲಿ, ಲೋಚನದಿಂದ ಈಕ್ಷಿಸೆ
ಅಣು ಅಣು ಮಹತ್ತುವೆನಿಸುತಿರೆ ತೋರಿ
ಹಣ ಹೊನ್ನು ವಾಹನದಿಂದಲಿ ನೀನು
ದಣಿವವನಲ್ಲ ಸಾಧನವೆಂಬೋದೆ ಕಾಣೆ

ಎನಗೊಂದುಪಾಯವು ಮನಕೆ ತೋರುತಿದೆ
ಘನ ಭಕುತಿಯ ನೇಣನೆ ಮಾಡಿ, ನಿನ್ನಾ ಚ–
ರಣಕೆನ್ನ ಕೊರಳಿಗೆ, ಸನುರುಚಿಯಿಂದ ಗಂಟನೆ ಹಾಕಿಕೊಂಡು
ತೊನಗದೆ ಬಿಡೆನೊ ನಿನ್ನನು ಎಂದೆಂದಿಗೆ
ಮನಕೆ ನಮೊನಮೊ, ವಿಜಯ ವಿಠ್ಠಲರೇಯ
ಎನಗೆ ಸರ್ವದ ಕಾರಣಕರ್ತ, ಕಾರಣ ಕರ್ತ ನೀನೆ ೪

ಆದಿತಾಳ

ಸಾರಿದ ಭಕ್ತರ ಸಾರೆದಲ್ಲಿಪ್ಪನೆ
ಸಾರಬೇಕು ನಿನ್ನ ಸಾರಬೇಕು ನಿನ್ನ
ಸಾರಿದಲ್ಲದೆ, ಸಂಸಾರದ ಭೀತಿ, ಪ್ರಾ–
ಸಾರವೆಂಬುದು, ನೀರವಾಗದು ಕಾಣೊ
ಸಾರಿ ಸಾರಿಗೆ, ಕಂಸಾರಿ ನಿನ್ನ ದಯದ, ದಾ–
ಸರ ಮನೆಯ ಮುಂದೆ, ಸಾರಮೇಯನಾಗಿ
ಸಾರುತಲಿ ವಾಸರ ಕಳೆದೆ ಪಿಂತೆ
ಸಾರದೈವವೆ ಅನುಸಾರಣೆಯಲ್ಲಿ ಮನ–
ಸಾರ ನಾನು ಕೆಲಸಾರದೋಪಾದಿಲಿ
ಸಾರಹೃದಯರ ಸಾರೆವಿಡಿಸು, ನರ
ಸಾರಥಿ ಸುಮನಸರ ಪಾಲಾಯತ
ಸಾರದಲಿನಿತೆ ಸಾರನೆ ಮಾಡಿ, ಪ್ರತಿಸಾರವ ಹರಿಸೋದು
ಸಾರಸಲೋಚನ ವಿಜಯ ವಿಠ್ಠಲ ಸರ್ವ
ಸಾರಭೋಕ್ತ, ತಮಸಾ ರವಿಮೂರ್ತಿ ೫

ಜತೆ

ರಾಶಿ, ಗುಣಗಳುಳ್ಳ ರಮೆಯರಸ ನಮ್ಮ
ದೇಶಾಪತಿ ವಿಜಯ ವಿಠ್ಠಲ ಕರುಣಾಳು ೬

೬೮

ಧ್ರುವತಾಳ

ಬಾ ಎನ್ನ ಭಾಗ್ಯನಿಧಿ ಭಕುತರ ಬೆಂಬಲವೆ
ಬಾ ಎನ್ನ ಮನದೈವ ಭವವನ ದಾವಾ
ಬಾ ಎನ್ನ ಕುಲಸ್ವಾಮಿ ಸಕಲರಂತರ್ಯಾಮಿ
ಬಾ ಎನ್ನ ನಿಜತಪವೆ ಅಮೃತವಪುವೆ
ಬಾ ಎನ್ನ ಕರ್ನಾಮೃತವೆ ಅನುದಿನದಲಿ ಹಿತವೆ
ಬಾ ಎನ್ನ ಸುರಧೇನು ಸಂತತ ಜ್ಞಾನಸೋನೆ
ಬಾ ಎನ್ನ ಸುರತರುವೆ ಭಜಿಸಿ ನಿನ ಕರೆವೆ
ಬಾ ಎನ್ನ ಚಿಂತಾರುತನ ನಾನಾಯತನ
ಬಾ ಎನ್ನ ಹೃತ್ಕುಮುದಚಂದ್ರ ಚನ್ನಿಗಮುದಾ
ಬಾ ಎನ್ನ ಶಬದಸುತ ನಿತ್ಯ ಅಜಾತ
ಬಾ ಎನ್ನ ಕರತಳದಲಿಪ್ಪ ಕನ್ನಡಿಯಾದ
ಬಾ ಎನ್ನ ಬೆಳವಿಗಿಯಾ ಬೆಳೆಸುವ ಮಹಾಪ್ರೀಯ
ಬಾ ಎನ್ನ ಭಾರಕರ್ತ ಮತ್ತರಿಗೆ ಸಮರ್ಥ
ಬಾ ಎನ್ನ ಅಂತರಂಗ ಕರುಣಾಪಾಂಗ
ಬಾ ಯದುಕುಲ ತಿಲಕ ವಿಜಯ ವಿಠ್ಠಲರೇಯ
ಬಾ ಎನ್ನ ಧ್ಯಾನದಲ್ಲಿ ನಿಲುವ ಬಿಂಬ ಮೂರುತಿ ೧

ಮಟ್ಟತಾಳ

ಹೃದಯಾಕಾಶದಲಿ ಅಧೋಮುಖವಾಗಿದ್ದ
ಪದುಮಾಷ್ಟದಳ ಅದರೊಳಗೆ ಇಪ್ಪ
ಪದತಳ ಮೇಲಾಗಿ ಸದಮಲ ಶರೀರ
ಮದನ ಜನಕ ಹರಿ ವಿಜಯ ವಿಠ್ಠಲ ಎನ್ನ
ಪದೊಪದಿಗೆ ನೀನು ಬಿಡದೆ ಸಾಕುವ ಧೊರಿಯೆ ೨

ತ್ರಿವಿಡಿತಾಳ

ಚಿಂತಿಪುದೆಂತೊ ಸಮಾಧಿಯಲ್ಲಿ ಕುಳಿತು
ಅಂತರಾತ್ಮ ಪ್ರಾಜ್ಞಾ ಘನ ಅನಿರುದ್ಧ
ಮಂತ್ರ ತಂತ್ರಗಳಿಂದ ಮೆಚ್ಚಿಸಿ ನಿನ್ನ ನಾನು
ಸಂತೋಷ ಪಡಿಸುವೆನೆ ಸರ್ವದ ಸರ್ವ
ತಂತ್ರ ಸ್ವಾತಂತ್ರ ನೀನೆ ನೀನಲ್ಲದೊಂದಿಲ್ಲ
ಚಿಂತಾಯಕ ಚಿನ್ಮಯ ರೂಪ ಪ್ರತಾಪ
ಅಂತಾವುದೊ ನಿನ್ನ ಅರ್ಚಿಸುವ ಭಕುತಿ
ಸಂತರಿಗೆ ಬಹು ಬಗೆ ಮಾರ್ಗವೊ
ಪ್ರಾಂತಕೆ ನೀನೆ ಗತಿ ಅನಂತ ಜನುಮಕ್ಕೆ
ಇಂತಿನುಡಿಗಳು ಪುಶಿ ಬಪ್ಪವೆ
ಸಂತತ ರಮಣ ಶ್ರೀ ವಿಜಯ ವಿಠ್ಠಲ ಏಕಾ
ನಂತಿಪ್ಪ ಮೂರುತಿ ಜೀವಾಕಾರ ೩

ಅಟ್ಟತಾಳ

ಪ್ರಣವ ಜಪತಪ ಪ್ರಣಾಮ ಪ್ರದಕ್ಷಿಣೆ
ಧನದಾನ ದೀಪ ವಂದನೆ ತೀರ್ಥಯಾತ್ರೆ ಓ
ದನಯಾಗ ಭೂರಿ ಭೋಜನ ಪಂಚಾನಲ
ಅನುದಿನದಿ ಚಾಂದ್ರಾಯಣವ್ರತ
ಅನಿಮಿಷನಡಿಸ್ನಾನ ವನವನ ಸಂಚಾರ
ಮುನಿವೇಷ ಔಪಾಸನ ನಾನಾ ಧರ್ಮವ
ಘನವ್ರತಗಳು ಒಂದೊಂದು ಒಬ್ಬರಿಗೆ ಸಾ
ಧನ ಮಾಡಿ ಇಂತು ಆ ಕ್ಷಣ ಜ್ಞಾನ ಭಕುತಿ
ಯನು ಮಿಳಿತವಾದುದನ ನೀನೆ ಪಾಲಿಸು
ತನು ಕ್ಲೇಶವ ಬಿಟ್ಟುವೇಗನೆ ಗತಿಗಳು ಘನಕೃಪೆ ಮಾಡುವ
ಘನವರ್ಣಕಾಯ ಶ್ರೀ ವಿಜಯ ವಿಠ್ಠಲರೇಯ ೪

ಆದಿತಾಳ

ನೀರು ತುಲಸಿಯಿಂದ ಆರಾಧನೆ ಮಾಡುವೆ
ಸಾರಭೋಕ್ತನೆ ಕರುಣಾವಾರಿಧಿ ಲಾಲಿಸಯ್ಯ
ತೋರುವುದಿದೆ ಪೂಜೆ ಬ್ಯಾರೆ ನಾನೊಂದು ಕಾಣೆ
ಧಾರುಣಿಯೊಳಗೆ ಅಪಾರ ಸಾಧನವುಂಟು
ತೂರಿ ಯೋಗ್ಯತರಾಸಿ ಸೂರಿ ಬಿಡಲು ಎನಗೆ
ನೀರ ತುಲಸಿಯಿಂದ ಏರಿಸಿ ನಿನ್ನ ಚರಣ
ಸೇರುವಂಥ ಯೋಗ್ಯತ ಕೈ ಸೇರಿತಯ್ಯಾ ಎನಗಿಂದು
ಹಾರವಾಗಿದೆಯಿದಕೆ ವಾರವಾರ ಪೊಳೆದು
ಸಾರಿಸಾರಿಗೆ ನಿನ್ನ ರೂಪ ತೋರುವುದು ಎನ್ನೊಳಗೆ
ವಾರಿಧಿಶಯನ ನಮ್ಮ ವಿಜಯ ವಿಠ್ಠಲರೇಯ
ಚಾರು ಮನೋಹರ ಉದ್ಧಾರ ಮಾಡು ಮುದದಿಂದ ೫

ಜತೆ

ಎನ್ನಿಂದ ಈ ಪೂಜೆ ಕೈಕೊಂಡು ನೆರೆವುದು
ಇನ್ನೊಂದು ನಾನರಿಯೆ ವಿಜಯ ವಿಠ್ಠಲವಾಮನ ೬

೬೯

ಧ್ರುವತಾಳ

ಬಾರದಿರೆ ನೋಡು ಈ ಶರೀರವ ನಿನ್ನ ಪಾದ
ವಾರಿಜ ದಳದಲ್ಲಿ ಸೂರೆಗೊಡುವೆ
ಕಾರಣವೇನೊ ಮೊಗದೋರದೆ ಎನ್ನ ಮನೋ
ಹಾರ ಮಾಡದಿಪ್ಪ ವಾರುತೇನೊ
ವಾರ ವಾರಕೆ ಪೊರೆವಾಪಾರ ಭಾರಗಳು ಮ
ತ್ತಾರವೈ ಈರೇಳು ಧಾರುಣಿಯಲ್ಲಿ
ತೋರು ನಿನ್ನ ಸಮ ಸರಿಯಾದ ದೈವಗಳ

ನಾರಾಧಿಸುವೆನೊ ಅನ್ಯರ ಸರಿ
ಆರಿನರಿನೋ ಎಂದು ಗಿರವನು ತೊರದಾರೆ
ಶಾರಲಾಗದು ಮನ ಮಂದಿರದೊಳು
ದಾರಾಸುತಾದಿಗಳು ನಿನ್ನವರೆಂದು ವಿ
ಸ್ತಾರವಾಗಿ ಕೂಗಿ ಸಾರಿದೇನೊ
ಕೋರಿದೆನು ಎಲ್ಲ ಕಿಂಕರರು ನಿನಗೆಂದು
ಮಾರುತ್ತರಾಡದೆ ಧಾರಾಳವಾಗಿ
ಮಾರುತಿ ಪ್ರೀಯ ವಿಕ್ರಮ ವಿಜಯ ವಿಠ್ಠಲ
ಪೂರೈಸದಿರೆ ಎನ್ನ ಕಾಯ ಇರಬಲ್ಲುದೆ ೧

ಮಟ್ಟತಾಳ

ಹಿಂದೆ ಭಕುತ ಮುಚುಕುಂದನ ಪರಿಯಂಕ
ಸಂದಿಲಿ ತಲೆದೂರಿ ಬಂಡಡಗಿದವನಾರು
ಎಂದಿಗಿದ್ದರು ನಿನ್ನ ಛಂದವು ಒಂದು ಪರಿ
ಮಂದಿಯೊಳಗೆ ಲಜ್ಜೆ ಒಂದಿಷ್ಟು ಇಲ್ಲ
ನಂದ ನಂದನ ಸೂರ್ಯ ವಿಜಯ ವಿಠ್ಠಲ ಎನ್ನ
ಮಂದಿರದೊಳಗಿರೆಂದರೆ ಮನವಿಲ್ಲ ೨

ತ್ರಿವಿಡಿತಾಳ

ಎತ್ತಲಡಗಿದೆ ಎನ್ನ ಚಿತ್ತದ ವಲ್ಲಭನೆ
ತತ್ತಳಗೊಳಿಸುವುದು ಸೋತ್ತುಮತನವಲ್ಲ
ಹೊತ್ತು ಹೊತ್ತಿಗೆ ನಿನ್ನ ಬ್ಯಾಸರಿಸಿ ಬಲು
ವಿತ್ತ ಸಂಪಾದಿಸಿ ಕೊಡು ಎಂದೆನೆ ದೇವ
ಭಕ್ತ ನೀರು ಹಾಕಿ ಹೊರೆ ನಿತ್ಯ ತಪ್ಪದಂತೆ
ಹೊತ್ತು ತಂದು ಹಾಕಿ ಪೊರೆ ಎಂದಿದೆ
ಕಿತ್ತಿ ಬಿಸಟುವ ಪಾಪ ವೀತಭಯ ವಿಜಯ ವಿಠ್ಠಲ
ತೆತ್ತಿಗನ ಮಾಡಿ ನಿಜ ತೊತ್ತಿನವನೆನಿಸೆಂದೆ ೩

ಅಟ್ಟತಾಳ

ಮುನಿಸು ಯಾತಕೆ ಎನ್ನ ಮನಸಿನ ಅರಸಗೆ
ಕನಸಿನೊಳಗೆ ಬಂದು ಆಡುವ ಕರುಣಿಗೆ
ಕನಿಕರದಿಂದ ತರ್ಕೈಸುವ ದೇವಗೆ
ದಣಿಸುವ ಚಕ್ಷುರೇಂದ್ರಿಯಗಳಿಗೆ ಪೊಳೆವುತ್ತ
ತನುಶುದ್ಧಿನಾಮ ಭಕುತಿ ಲಕ್ಷಣದಿಂದ
ನೆನಸುವಂತೆ ಮಾಡೊ ನಾನಾ ಪ್ರಕಾರದಿ
ಘನ ದೈವ ಸರ್ವಜ್ಞ ವಿಜಯ ವಿಠ್ಠಲ ಎನ್ನ
ತನು ಸಂಬಂಧವೆ ಎಣಿಸಿ ಎನ್ನದು ಎಂದು ೪

ಆದಿತಾಳ

ಸ್ವಾಮಿ ನಿನ್ನ ಚರಣಕ್ಕೆ ಭ್ರಮರಾಗುವೆನು
ನೇಮ ನಿತ್ಯ ಕಥೆಸಂಗ ಧಾಮದೊಳು ಎಸಗಿದರು
ಈ ಮನಸು ಪೊಂದಿ ನಿಷ್ಕಾಮದಿಂದ ನಿನ್ನ ಸೇರಲಿ
ಪಾಮರ ಬುದ್ಧಿ ಕೊಡದೆ ಪ್ರೇಮದಲ್ಲಿ ಪ್ರೀತಿ ಬಡಿಸೊ
ಕಾಮದೇವ ನಾಮದೇವ ವಿಜಯ ವಿಠ್ಠಲ ನಿ
ನ್ನ ಮೂರುತಿ ಪೂಜಿಸುವೆ ನಿತ್ಯದಲ್ಲಿ ಎನ್ನ ಕಾಯೊ ೫

ಜತೆ

ಸಂಸಾರ ಸೇರಿ ಗತಿ ಪಡೆದವರಾರುಂಟು ಪ್ರಾ
ಗ್ವಂಶ ವಿಜಯ ವಿಠ್ಠಲ ಎನ್ನ ತೊಲಗದಿರೊ ೬

೭೦

ಧ್ರುವತಾಳ

ಬಿಡದಹಂಕಾರ ಬಲು ಬಡಿವಾರದಲ್ಲಿ ಸುಖ
ಪಡುವೆನು ದುರುಳ ನಡತೆಗಳಾಚರಿಸಿ
ಒಡಲಿಗೆ, ಮನೆಗೆ ಪಟ್ಟಿ ಬಡೆದಂತೆ ನಾಮಗಳ
ಎಡ ಬಿಡದೆ ಚೆನ್ನಾಗಿ ತಿದ್ದಿಕೊಂಡು

ಪಿಡಿದು ಜಪಸರ ಕೊರಳೊಳಗಿಟ್ಟು ಗಾ
ರುಡಿಗ ಕವಡೆಯ ಸರವ ಧರಿಸಿದಂತೆ
ಕೊಡೆಗೈಯ್ಯವಹ ಬಳಿಗೆ ನುಡಿಯುತ್ತ ಅಪಶಬ್ದ
ತಡೆಯದಲೇ ಪೋಗಿ ಆದರದಿ ನೀನೆ ಎಂಬೆ
ಒಡಲ ತೊರಿಸಿ ಮತ್ತೊಡನೊಡನೆನ್ನ ಕುಲ
ದೊಡೆಯಾನೆಂದು ಹಿಗ್ಗಿ ಪೊಗಳಿ ನಿಲುವೇ
ಜಡಮತಿ ಒಮ್ಮೆ ನೆನದರೆ ಗತಿಯೆ ನೀನು ನಿ-
ನ್ನಡಿಗಳ ಮರೆದು ಮಂದೆನಾದೆನಯ್ಯಾ
ಪೊಡವಿಯೊಳು ಬಹಳಾದ ಗ್ರಾಮದಲಿ, ಅಂ
ಗಡಿಹಾಕಿ ಲಾಭವನು, ಪಡೆವೆನೆಂಬ
ಕಡುಮೂರ್ಖನಂತೆ ನಾನಾಗಿ ಪಾತಕಕಿಳಿದೆ
ಬಡವಾನೆಂದಿನಿಸಾದೆ ಬ್ರಹ್ಮೇತಿ ಎನಿಸಿದೆ
ಬಿಡಿಸುವುದು ಜೀಯ ದುರಾಶೆ ಪಾಶಗಳು ಎ
ನ್ನೊಡೆಯ ಸಿದ್ಧಾತ್ಮ ಸಿರಿ ವಿಜಯ ವಿಠ್ಠಲ ಪರಿ ೧

ಮಟ್ಟತಾಳ

ಅನ್ನವೆಂದು, ಅನ್ಯರನ್ನ, ಸನ್ನುತಿಯಿಂದ, ಬಿನ್ನಗೈಸಿ
ತಿನ್ನಲೋಡಿ ನಿನ್ನ ನಾಮ, ಹಾನಿಕೆಯನ್ನು ತೊರೆದ
ಹಾನ್ಯಹಾನ್ಯಯನ್ನನಾಗಿ, ಖಿನ್ನನಾಗಿ ನಿನ್ನ ಮರೆದೆ
ಚನ್ನ ಸುಪ್ರಸನ್ನ, ದೇವರನ್ನೆ, ವಿಜಯ ವಿಠ್ಠಲನ್ನೆ
ನಿನ್ನ ನಾಮ ಮರದೆ, ನಿನ್ನ ಎನ್ನ ನೋಡೊ ಎನ್ನನೋಡೊ ೨

ಝಂಪಿತಾಳ

ಸೇವಕ ಮಾಡಿದ ಶತನೂರು ಅಪರಾಧ
ವಾ, ವಹಿಸಿ, ಪೊರೆವ ದೈವಗಳುಂಟೆ
ಸೇವೆ ಕೊಂಬಲ್ಲಿ ಕೊಡುವಲ್ಲಿ ಕೊಳುವಲ್ಲಿ
ಆವಾವ ಬಗೆಯಲ್ಲಿ ನೋಡುವಲ್ಲಿ
ಮೂವರನು ನೋಡುವೆನೆಂದು ಭೃಗುಮುನಿ ಬಂದು
ನೋವು ಮಾಡಲು ಮೆಚ್ಚಿ ಅರ್ಚಿಸಿದೆ

ಸಾವಿರ ಜನ್ಮದ ದೋಷರಾಶಿಗಳಿರಲು
ಕಾವ ಕರುಣಿಯೆಂದು ಒಮ್ಮೆ ನೆನೆಯೆ
ನಾವಾಗಿ ಭವಾಬ್ಧಿಯನು ದಾಟಿಸುವನು ನಮ್ಮ
ಗೋವ ನಾಮ ವಿಜಯ ವಿಠ್ಠಲ ಓವಿಗನು ೩

ಅಟ್ಟತಾಳ

ಚರಣಕೀರ್ತನೆ, ಚರಣಸೇವೆ, ಚರಣಧ್ಯಾನ
ಚರಣಸ್ಮರಣೆ, ಚರಣಪೂಜೆ, ಚರಣ ಸಂ–
ದರುಶನವೇ ಕೊಡುತಲಿ, ಚರಣ ಚರಣದಲ್ಲಿ ಸಂ–
ಚರಣವನ್ನು ಮಾಡುವಂಥ ಚರರ ಬಳಿಯಿಟ್ಟು ಖೇ
ಚರ ಸುಪಥವ ತೋರಿಸಿ, ಚರಾಚರದಲ್ಲಿ ಗೋ–
ಚರ ನೀನಾಗಿ ಎನ್ನ ನಿಶಾಚರದ ಗುಣವ ಬಿಡಿಸಿ ಉಪ–
ಚರಿಸುವಂಥ ಮಂಗಳಾಚರಣೆಯಿಂದ, ಗುರುಗಳ
ಚರಿತವನ್ನು ನಿತ್ಯ, ಉಚ್ಚರಿಸುವಂತೆ ಮಾಡು ಸಂ–
ಚರಾಚರ ವಿಜಯ ವಿಠ್ಠಲ ೪

ಆದಿತಾಳ

ಆದಿ ಅನಾದಿ ನೀನೆಂದು ಪಾದವನ್ನು ಪಿಡಿದೆನು
ಭೇದವನ್ನು ಮಾಡದಲೆ ಕಾಯ್ದು ಕೊಳ್ಳೈ ಕಮಲನಾಭ
ತೇದ ಗಂಧ ಪೂರ್ವದಂತೆ, ಆದುದೇನೊ ನಿನ್ನ ದಾಸ–
ನಾದೆನೆಂದು ಒಂದು ಸಾರಿ ಸಾಧುಗಳು ನುಡಿಯೆ ಜ–
ನ್ಮಾದಿ ದುಃಖದಿಂದ ಬಾಹು ಬಾಧೆ ಕಷ್ಟಾ ಕರ್ಮಲೇಶ–
ವಾದರು ಎನಗೆ ಉಂಟೆ? ವ್ಯಾಧಿಭವರೋಗವೈದ್ಯ
ವೇದಾಂಗ ನಾಮಧೇಯಾ ವಿಜಯ ವಿಠ್ಠಲ ಜೀಯಾ
ನೀ ದಯವಾಗೆ ಹಾರಲೂದುವೆನು ದುರಿತರಾಶಿ ೫

ಜತೆ

ಅತಂತ್ರ ನಾನಾಗಿ, ನಿನ್ನ ಬಯಸಿ ಬಂದೆ
ಸ್ವಾತಂತ್ರ ಸ್ವಾಭಾವ ಕಾಯಾ ವಿಜಯ ವಿಠ್ಠಲ ೬

೭೧

ಧ್ರುವತಾಳ

ಬೇಡುವೆನು ನಿನ್ನನಿದನೇ ಭಕುತಿಲಿ ತಲೆವಾಗಿ
ಮಾಡು ಕಾರುಣ್ಯ ಮನ್ಮಥ ಲಾವಣ್ಯ
ನಾಡೊಳಗಿದ್ದ ನಾನಾ ಭಾಗ್ಯವನ್ನೆ ಬೇಡಿ
ಕಾಡುವುದಿಲ್ಲ ಕರುಣಿಗಳರಸ
ನೋಡು ಇನಿತು ಎನ್ನ ಬಿನ್ನಹ ಕೇಳು ಆ
ರೂಢ ಜನ್ಮವನು ಕಳಿಯದಿರು
ಗೂಡಿನೊಳಗೆ ಇದ್ದರಿದ್ದರೆ ಉಪಕಾರವಿದೆ
ಆಡಲೇನಯ್ಯ ನಿನಗೆ ತಿಳಿಯದಿಪ್ಪದೊ
ಮಾಡು ಕಾರುಣ್ಯವ ಮನ್ಮಥ ಲಾವಣ್ಯ
ಹಾಡಿ ಪಾಡಿದರೇನು ಆವಾವ ಬಗೆ ಕುಣಿ
ದಾಡಿದರೇನಯ್ಯ ಹಗಲಿರುಳು
ನಾಡಿ ನಿರ್ಮಳ ಕಾಣೆ ನಿನ್ನ ಮಾಯಾ ಬಲು
ಗೂಢವಾಗಿದೆ ದೇವ ದೇವತಿಗಳಿಗೆ
ಈಡು ನಿನಗೆ ಇಲ್ಲ ಎನ್ನನು ಉದ್ಧಾರ
ಮಾಡುವ ಮನುಜರಿಲ್ಲ ಫಲರಹಿತ
ಓಡುವುದು ಮನಸು ಕಂಡಲ್ಲಿ ಹಂಬಲಿಸಿ
ನೀಡುವ ದಾತಾರ ತಿಳಕೊಳ್ಳದೆ
ಬಾಡಿ ನೆನೆಸುವರ ಪ್ರಾಣ ವಿಜಯ ವಿಠ್ಠಲ ಎನ್ನ
ಬೇಡದಂತೆ ಮಾಡು ಅಶುಭ ಜೀವರ ಬಳಿಯ ೧

ಅಟ್ಟತಾಳ

ನಿನ್ನನೆ ಬೇಡುವೆ ನಿನ್ನನೆ ಕಾಡುವೆನು
ನಿನ್ನನೆ ಹೋರುವೇನು ನಿನ್ನನೆ ಸಾರುವೆನು
ನಿನ್ನನೆ ತುತಿಸುವೆನು ನಿನ್ನನೆ ನುತಿಸುವೆನೊ
ನಿನ್ನನೆ ಕಾಂಬೇನೊ ನಿನ್ನನೊ ಅಂಬೆನೊ
ನಿನ್ನವರು ಎನಗೆ ಘನ್ನ ತೋರಿದರಯ್ಯ

ಇನ್ನು ಮರೆದುದುಂಟೆ ಇನ್ನು ಮರೆದುದುಂಟೆ
ಎನ್ನ ಜನ್ಮ ಬರಿದೆ ಅನ್ನಂತ ಕಾಲಕ್ಕೆ
ನಿನ್ನನೆ ಮೊರೆ ಹೊಕ್ಕೆ ಅನ್ಯರು ಯಾತಕ್ಕೆ
ಘನ್ನಸಿರಿ ರಮಣ ವಿಜಯ ವಿಠ್ಠಲರೇಯ
ನಿನ್ನ ಪಾದವೆಗತಿ ಜನ್ಮ ಜನ್ಮಾಂತರಕ್ಕೆ ೨

ತ್ರಿವಿಡಿತಾಳ

ಶ್ರುತಿ ಶಾಸ್ತ್ರ ಪುರಾಣ ಓದಿಕೊಂಡವನಲ್ಲ
ಕ್ರತು ಮೊದಲಾಗಿದ್ದ ಯಾಗ ಮಾಡಲಿಲ್ಲ
ಕ್ಷಿತಿಯೊಳಗಿಪ್ಪ ಯಾತ್ರಿಗಳ ಚರಿಸಲಿಲ್ಲ
ಸತತ ಗಂಗಾನದಿಯ ಮಜ್ಜನವೇ ಇಲ್ಲ
ವ್ರತ ದಾನ ಧರ್ಮಂಗಳು ಒಂದಾದರು ಇಲ್ಲ
ಶ್ರುತಿ ಶ್ರವಣನಾಗಿ ಸತ್ಕಥೆಯ ತಿಳಿಯಲಿಲ್ಲ
ಪ್ರತಿ ದಿನದಲಿ ನಿನ್ನ ಆರಾಧನೆ ಇಲ್ಲ
ಮತಿವಂತರ ಸೇವೆ ಬಿಡದೆ ಮಾಡಲಿಲ್ಲ
ಗತ ಪುಣ್ಯನಾಗಿ ಕಂಡ ಕಂಡ ವಿಷಯಕ್ಕೆ
ಅತಿಶಯವಾಗಿ ಹಂಬಲಿಸುವೆ ದಮ್ಮಯ್ಯ
ಗತಿ ತಪ್ಪೆ ಚರಿಸುವ ಮನುಜನಾನಾದಡೆ
ಚ್ಯುತದೂರ ನೀನೆ ದಯಾನಿಧಿಯಲ್ಲವೆ
ಸುತ ಧಡ್ಡನಾಗಿದ್ದು ಉಪನಯನಕೆ ಮೀರೆ
ಪಿತಗೆ ಚಿಂತೆಯಲ್ಲದೆ ಅನ್ಯರಿಗುಂಟೆ
ಪತಿತ ನಾನಾದರು ಎನ್ನ ಚಿಂತೆ ನಿನಗೆ
ಶತ ಸಾಸಿರಕ್ಕು ಸಿದ್ಧವಾಗಿದೆ
ಇತರಾಲೋಚನೆ ಯಾಕೆ ಪಕ್ವಕಾಲಕೆ ಸಕಲ
ಹಿತವೆ ಮಾಡಿಸಿ ಕೊಡುವೆ ಜ್ಞಾನ ಮಾರ್ಗ
ಖತಿಗೊಳಲ್ಯಾಕೆ ನೀ ನುಡಿದ ಮಾತಿಗೆ ಇನಿತು
ತುತಿಸಿ ಬಿನ್ನಪವನ್ನು ಮಾಡಿದೆನಯ್ಯಾ
ಪತಿತ ಪಾವನ ನಮ್ಮ ವಿಜಯ ವಿಠ್ಠಲ ಎನ್ನ
ಸಿತ ಚಿತ್ತನ್ನ ಮಾಡು ಇದನೆ ಬೇಡಿಕೊಂಬೆ ೩

ಅಟ್ಟತಾಳ

ಕೇಳನೆ ನಾ ನಿನ್ನ ಮಾತು ಪುಶಿಯಾದೆಂದು
ಕೇಳಿದೆ ಕಮಲಾಕ್ಷ ಕರವ ಮುಗಿದು ನಿಂದು
ಹೇಳುವುದೇನು ಹೇರಳವಾಗಿ ಸಮಸ್ತ
ಕಾಲದಿ ಅಭಿಪ್ರಾಯ ಬಲ್ಲವನೆ ನಿತ್ಯ
ಕೇಳುವೆ ನಾನಿಂದು ನಿನ್ನ ಚರಣ ಭಕ್ತಿ
ಮ್ಯಾಲೆ ತರತಮ್ಯ ಜ್ಞಾನ ವಿರಕುತಿ
ಮೇಲು ಸರ್ವದ ಸರ್ವಥಾ ಅನುಸೂಯರಾಗಿ
ಬಾಳುತಲಿಪ್ಪ ವೈಭವ ನೈರ್ಗುಣ್ಯ
ವಾಲಯ ಈಯೋ ಮತ್ತೊಂದು ಮನದಲ್ಲಿ
ಮಾಲಕಾರದಂತೆ ಭುವನ ಮಂಗಳವಾದ
ಶ್ರೀಲೋಲ ನಿನ್ನಂಘ್ರಿನಾಮ ಸ್ಮರಣೆ ಕೊಡು
ನಾಲಿಗೆಯಲಿ ನೀನು ವಾಯುವಾಹನಾಗಿ
ನಾಳೆ ನಾಡದು ಯಿಂದು ಈಗಲಾಗಲೆ ಆವ
ಕಾಲಕ್ಕಾದರು ಸ್ವಾಮಿ ಸ್ವೇಚ್ಛಾನುಸಾರದಿ
ಬೀಳುಗೆಡಹಿ ದೇಹದಿಂದ–ಪೊರಡುವಾಗ
ಏಳಲ ಮಾಡದೆ ದೋಷಗಳೆಣಿಸದೆ
ಪಾಲಿಸು ಬಳಿಯಲ್ಲಿದ್ದವರವರ ದುಃಖ
ಜಾಲವೆಲ್ಲ ಹಾರಿ ಪೋಪಂತೆ ಕೂಗನು
ಖೂಳ ದಾನವ ನಾಶ ವಿಜಯ ವಿಠ್ಠಲ ನಿನ್ನ
ಆಳುತನವೆ ಬಲ್ಲೆ ಬಲು ತುತಿಪುದೇನೊ ೪

ಆದಿತಾಳ

ಗುಣದೇಶ ಕಾಲಕರ್ಮ ವರ್ಣಾಶ್ರಮ ವಯಸು
ದಿನಪ್ರತಿ ದಿನದಲ್ಲಿ ಏಸು ಬಗೆಯಿದ್ದರೇನು
ಎನಗೊಂದು ಪ್ರಯೋಜನವಲ್ಲವೊ ಸಾಧನ
ಇನಿತರಿಂದಾಗೋದೆ ಬಹು ಜನ್ಮ ತೆತ್ತರೇನು
ಅನಿಮಿತ್ತ ಬಂಧು ನೀನೆ ಪರಮ ಮುಖ್ಯ ಸ್ವಾತಂತ್ರ
ಅನುಕೂಲವಿರಲಾಗಿ ಅನ್ಯಥ ನಿಯಮಗಳೆ

ಪ್ರಣತಾರ್ಥಿಹರಮೂರ್ತಿ ನರಕಂಠೀರವ ನಾರಾ
ಯಣ ವಿಶ್ವರೂಪ ಕೃಷ್ಣ ಕೃಷ್ಣನೆಂದೆಂಬ ಸಂಕೀ
ರ್ತನೆ ಮಾಡುವ ಬುದ್ಧಿ ಪ್ರೇರಿಸು ಆಗಲಾಗ
ಮನವಾಕ್ಕುತನು ನಿನ್ನಾಧೀನವೊ
ಗಣನೆಯಿಂದಲಿ ಎಣಿಸಿ ಪೇಳುವುದೇನಯ್ಯಾ
ಪ್ರಣವ ಮೂರುತಿ ನಮ್ಮ ವಿಜಯ ವಿಠ್ಠಲರೇಯ
ನಿನಗೆ ನಮಿಸಿ ಇಂಥ ಅಭಯ ಬೇಡಿಕೊಂಬೆ ೫

ಜತೆ

ಚಿತ್ತದೊಲ್ಲಭ ನಮ್ಮ ವಿಜಯ ವಿಠ್ಠಲ ನಿನ್ನ
ಚಿತ್ತಕ್ಕೆ ಬಂದದ್ದು ಮಾಡೋ ನಾ ನಿನ್ನವನು ೬

೭೨

ಝಂಪಿತಾಳ

ಭವರೋಗ ಪರಿಹರಿಸೋ ಭವ ರೋಗ ವೈದ್ಯ
ಭವಣೆ ಬಡಲಾರೆನೊ ಭವದೊಳಗೆ
ಭವದಿಂದ ಬಂದು ಸಂಭವನಾದೆ ನಾನಾಕ
ಭವನದೊಳಗೆ ಉದುಭವನಾಗುತ
ಭವಲಿಪ್ತರಾದ ಗುಂಭವನು ನೋಡಿದರೆ ಶು
ಭವನು ಕಾಣೆನೊ ವೈಭವದರಸೆ
ಭವತಾಪಕೆ ಭವನು ಪೋಗಲು ಸುಖಾನು
ನುಭವನು ಮಾಳ್ಪವರಾರು ಭವಸುರರೊಳು
ಭವ ವಿರಹಿತಕಾಯ ವಿಜಯ ವಿಠ್ಠಲ ದುರ್ಲ–
ಭವವನು ಮಾಡದಲೆ ಲಾಭವನೆನಿಸಿ ತೋರೋ ೧

ಮಟ್ಟತಾಳ

ಕಾಲಕರ್ಮ ಕಾಮ ಸ್ವಭಾವದಲ್ಲಿಂದ
ಮೇಲಾಗೇನೆಸಗಿದರು ಪೋಗದು ಭವರೋಗ
ಫಾಲದಲಿ ಬರೆದ ಬರೆದ ಲಿಖಿತಗಳು

ಶ್ರೀಲೋಲನೆ ನಿನ್ನ ಪಾದಾರ್ಚನೆ ಮಾಡೆ
ಮೂಲ ದುರ್ಲಿಪಿಗಳು ಜನುಮ ಜನುಮ ಭವ
ಮಾಲಿಕೆಗಳು ನಿವಾರಣವಾಗವೇನು
ಕಾಲಾದಿ ನಾಮಕನೆ ವಿಜಯ ವಿಠ್ಠಲ ನಿನ್ನ
ಆಳಾಗದಲೇವೆ ಆವ ಸಾಧನವಿಲ್ಲ ೨

ತ್ರಿವಿಡಿತಾಳ

ವರ ಪ್ರಲ್ಹಾದ ನಾರದ ಮುನಿಶುಕಪರಾ
ಶರನು ರುಕುಮಾಂಗದ ಗಂಗಾತನಯಾ
ನರ ಪುಂಡರೀಕ ಶೌನಕನಂಬರೀಷನು
ತರುಳ ಧ್ರುವನು ವಿದುರ ವಿಭೀಷಣಾ
ದ್ಯರು ನಿನ್ನ ಪಾದವ ನೆರೆನಂಬಿ ಭಜಿಸಿ ದು
ಸ್ತರವಾದ ಭವಾಂಬುಧಿ ಉತ್ತರಿಸಿದರು
ಕರಿರಾಜ ವರದ ಶ್ರೀ ವಿಜಯ ವಿಠ್ಠಲ ನಿನ್ನ
ಕರೆದಾರಲ್ಲದೆ ಭಾಗ್ಯ ಸುರಿದವರಾರಯ್ಯ ೩

ಅಟ್ಟತಾಳ

ಆವ ಭಕುತ ನಿನಗಾವ ವಸ್ತುವನಿತ್ತ
ಆವ ಭಕುತ ನಿನಗಾವ ಪುರವನಿತ್ತ
ಆವ ಭಕುತ ನಿನಗಾವ ವಸನವಿತ್ತ
ಆವ ಭಕುತ ನಿನಗಾವಲ್ಲಿ ಉಣಿಸಿದ
ಆವ ಭಕುತ ನಿನಗಾವೆಡೆ ಸಲಹಿದ
ಆವಾವರಾದರು ಆವಾದಿತ್ತದು ಕಾಣೆ
ದೇವ ಎನಗೆ ಕರುಣಾವಲೋಕನದಿಂದ
ಸೇವೆಯ ಕೈಕೊಂಡು ಪಾವನ್ನ ಮಾಡುವುದು
ಮಾವ ಮರ್ದನರಂಗ ವಿಜಯ ವಿಠ್ಠಲರೇಯ
ಗೋವಿಂದನೆಂದೆಂಬೊ ಜೀವಾಳ ಭಕ್ತರಿಗೆ ೪

ಆದಿತಾಳ

ನಾರದ ಮನದಲ್ಲಿ ಅಕ್ರೂರನ್ನ ಮಾಡುವುದು
ಪಾರಾಶಾರಾಮಕ್ಕೆ ವಿದೂರನೆಂದೆನಿಸೋದು?
ಘೋರ ಕರ್ಮದ ತತಿಗೆ ತೋರು ವಿಭೀಷಣನಂತೆ
ವಾರವಾರದಲ್ಲಿ ಪಂಚ ಕ್ರೂರರಿಗೆ ಭೀಷ್ಮನೆನಿಸು
ಆ ರುಕುಮಾಂಗದ ವಿಟ್ಟಿಸಾರಿಗೆ ಎನ್ನ ಹೃದಯ
ವಾರುಣ ಪುಂಡರೀಕ ಸೇರಿ ಶುಕನಂತೆ ಪೊಳೆದು
ಮೂರುತಿಯ ಕಾಣಿಸುತ್ತ ಚಾರು ಪ್ರಲ್ಹಾದನಂತೆ ಮಾಡೊ
ಭಾರಿ ದೈವವಂಬರೀಷ ಕಾರುಣ್ಯದಲ್ಲಿ ನಿನ್ನ
ಆರಾಧಿಸುವ ನಿನಗೆ ಮಾರಿ ಮೃತ್ಯು ಭವದ ಭೀತಿ
ದೂರವಲ್ಲದೆ ಸಾರೆವುಂಟೆ
ವಾರಿಧಿ ಶಯನ ನಮ್ಮ ವಿಜಯ ವಿಠ್ಠಲ ನಿನಗೆ
ಆರಾದರೂ ನಿತ್ಯವಾರಡಿಯಿಲ್ಲದವರು ೫

ಜತೆ

ಅವರವರರಿತು ಕಾಯುವ ವಿಜಯ ವಿಠ್ಠಲ
ಅವನೀಶಾ ಎನ್ನರಿತು ಪೊರೆದು ಪಾವನ ಮಾಡೊ ೬

೭೩

ಧ್ರುವತಾಳ

ಭೀತಿಗೊಳಿಪುದೇನೊ, ಭವದೂರ ಎನ್ನ ಕೂಡ
ನೀತವಲ್ಲವು ಕಾಣೋ ನಿನಗಿನಿತು
ಮಾತು ಮಾತಿಗೆ ನಿನ್ನ ಪದನಖಗುಣ ಒಂದು
ಮಾತರ ಬಿಡದಲೆ ನೆನೆಸುತಿಪ್ಪೆ
ಆತುರದವ ನಾನು ಅನಂತ ಜನುಮದಲ್ಲಿ
ಯಾತಕೆನ್ನಯ ಕೂಡ ಈ ತೆರನೋ

ಪ್ರೀತಿಯಾದವನೆಂದು ಪರಿ ಪರಿ ಭಕುತರು
ನೀತಿಯಿಂದಲಿ ಪೊಗಳಿ ಹಿಗ್ಗಿ ಹಾರೈಸೆ
ನಾ ತಡಿಯಾದೆ ಬಂದೆ ನಾನಾವತಾರನೆ
ಸೋತವನ ಕೂಡ ವಿಜಯವೇನೊ
ಮಾತಾಪಿತರು ಸರ್ವ ಬಂಧು ಬಳಗವೆಲ್ಲ
ಭೂತಳದೊಳಗೆ ನೀನಲ್ಲದೇ ಇಲ್ಲ
ಖ್ಯಾತಿ ಪೋಗಾಡದಿರು ಕ್ಷುದ್ರನ್ನ ಬಳಲಿಸಿ
ಮಾತು ಮಾಣಿಕ ಕಾಣೊ ಬಲ್ಲವರಿಗೆ
ನಾ ತಡಹೇನೊ ನೀನು ಎನ್ನ ಮಾತಾಲಿಸೊ
ದಾತ ಭಕ್ತವತ್ಸಲ ಬಿರಿದುಳ್ಳ ದೊರೆಯೆ
ನೂತನದೇನಾದರು ಕೈಕೊಂಡು ಉದ್ಧರಿಸೊ
ಜಾತರಹಿತ ಶಿರಿ ವಿಜಯ ವಿಠ್ಠಲ ಹರಿ ೧

ಮಟ್ಟತಾಳ

ಅರಿಯದಲ್ಲಿ ಆಗಾರದೊಳಗೆ ಒಂದು
ಹಿರಿಯ ಮೃಗಸಿಂಹ ತಿರುಗಿದೋಪಾದಿಯಲಿ
ಧರಣಿಯೊಳಗೆ ಎಲ್ಲರಿಗೆ ಬಲ್ಲಿದನಾಗಿ
ಹಿರಿಯ ದೈವವೆಂದು ಕರೆಸಿಕೊಂಡು ನಿತ್ಯ
ಮೆರವೋದು ಬಲು ಘನತನವೊ ಹರಿ ಕೇಳು ನಿನ್ನ
ನಿರುತ ಭಜಿಪ ಭಕ್ತರ ಬಳಿಯಲಿ ನಿಂ
ದಿರುದು ನಿನ್ನ ಮಾಯ ಪರಿಪರಿ ಒಂದರಘಳಿಗೆ ಬಿಡದೆ
ಸ್ಮರಣೆಯ ಕೈಕೊಂಡು ಮರೆ ಮೋಸದ ಮಹಾ
ಶರಧಿಯ ದಾಟುವುದು, ಅರಿತವರ ಮುಂದೆ ಗರುವಿಕೆ ತಾಳಿದರೆ
ಪರಾಕು ಮಾಡದೆ ಬಿಡರು ಚರಿಸಿದ ನಡತೆಗಳ
ಕರುಣಾ ಜಲನಿಧಿ ವಿಜಯ ವಿಠ್ಠಲನೇ ದಾ–
ಸರ ಕೊಡಲಿ ನಿನ್ನ ಸರಕು ಮಾರದು ಕಾಣೊ ೨

ತ್ರಿವಿಡಿತಾಳ

ಹುಬ್ಬಿನ ನಡುವೆ ಪುಟ್ಟಿದ ಭಕ್ತನು ನಿನ್ನ
ಗಬ್ಬಿನಾರಿಯ ರೂಪ ಬಯಸೀದನದಕೊ
ಅಬ್ಧಿಯೊಳಗೆ ಸುರರು ಕುಗ್ಗಿ ನಿನ್ನ ಕರದು
ಅಬ್ಬರದಲಿ ಬೆಟ್ಟ ಹೊರಸೀದರದಕೊ
ಶಬ್ದದ ಬಿಗಿವಿಲಿ ಹೆಣ್ಣಿಗೋಸುಗ
ತಬ್ಬಿಬ್ಬಿ ಭೀಷ್ಮನು ಗೋಳಿಸೀದನದಕೋ
ಹಬ್ಬೀಗಿಕ್ಕಿ ತಮ್ಮ ಮನಸಿಗೆ ಬಂದಂತೆ
ಯಬ್ಬಟೆಗೊಲ್ಲರು ಆಡಿದರದಕೊ
ಮಬ್ಬುಚರನು ಅಲ್ಪದಾನವನ್ನೇ ಇತ್ತು
ಹೆಬ್ಬಾಗಿಲ ಮುಂದೆ ಇಟ್ಟನದಕೊ
ಉರ್ಬಿಯೊಳಗೆ ನಿನ್ನ ಮಾವನು ಮಾಣಿಕ
ಎಬ್ಬಿಸಿದಾನೆಂದು ನುಡಿದನದಕೊ
ಈ ಬಗೆ ಮಾಡಿದ ಭಕುತ ಜನಕೆ ನೀನು
ದಬ್ಬಿದರು ಪೋಗದಲೆ ಒಡನಾಡುವೆ
ಗುಬ್ಬಿಯಾ ಮರಿಯಂತೆ ಮುದುಡಿಕೊಂಡು ನೀರ
ಬೊಬ್ಬುಳಿ ತೆರನಂತೆ ದೇಹಸಿದ್ಧ
ಅಬ್ಬಿದನತಿ ಸ್ಮರಣೆ ಮಾಡಿ ಮುಕುತಿಗೈವ
ನಿಬ್ಬಣದವರೊಡನೆ ಇಪ್ಪರನ
ಶಬ್ಧಕ್ಕೆ ಮೈಗೊಡದೆ ಅಡಗಿ ಅಂಜುವುದೇನು
ಅಬ್ಬರ ದೈವವೆ, ನೆಚ್ಚಿದವರ ನೆಂಟ
ಅಬ್ಧಿಶಯನರಂಗ ವಿಜಯ ವಿಠ್ಠಲ, ಎ
ನ್ನೊಬ್ಬನ ಕೂಡಲಿ ನಿನ್ನ ಕಪಟತನವೆ ೩

ಅಟ್ಟತಾಳ

ಮಾಡಿದವರು ಎಲ್ಲ ಮಾಡಿ ಹೋದರು ಇಂದು
ನೋಡಿದವರು ಏನೇನು ಮಾಡಿದರೆಂಬ ಗಾದೆ

ನಾಡೊಳಗಾಯಿತು ಆಡಲೇನು ನಾನು
ಬೇಡಿ ಕಾಡಿ ನಿನ್ನ ಆಡಿಕೊಂಬುವರ
ನ್ನಾಡಿ ಬಿಡದೆ ಕೊಡಲಾಡಿದ ದೇವ
ಈಡಾರು ನಿನಗೆ ನೀ ಮಾಡಿದ ಚೇಷ್ಟೆಗೆ
ಈಡಾವುದೊ ಮಾತನಾಡೆನೊ, ಇದಿರಾಗಿ
ಗೂಢ ಮಹಿಮ ನಮ್ಮ ವಿಜಯ ವಿಠ್ಠಲರೇಯ
ಕೂಡದು ನಿನಗೆನ್ನ ಕೂಡಮಾಡುವುದು ೪

ಆದಿತಾಳ

ಥಳ್ಳಾನೆ ಪೊಳೆದು ಒಳಗೆ ಬೆಳ್ಳಾನೆ ಮಾಡುವುದು ಕಿಂ-
ಜಲ್ಕಾವಾಸನೆ ಮನದ ಮಲ್ಕಾನೆ ವಿಂಗಡಿಸುತಾ-
ಕಿಲ್ಕಿಲಿ ನಗುತಾ, ಜಗವ ಗುಳ್ಳಾನೆ ನುಂಗವ ದೇವ
ನಿಲ್ಲಾದು ನಿನ್ನ ಮಹಿಮ, ಬಲ್ಲುಣಿದು ತುತಿಸಿದರು
ಕೊಳ್ಳಮತಿ ಬಿಡಿಸಿ, ಬಲು ಪುಳ್ಳೋತ್ಸಹದಲಿ ಇಟ್ಟು
ಶಿಲ್ಕಿದ ಮಾನವನ್ನ ತಳ್ಳಿಕ್ಕು ಭಕುತಿಯೊಳು
ತಿಲ್ಲಾಣೆ ಅಷ್ಟಾದರೊಂದು ಫಲನಿಸುವರುಂಟೆ
ತಳ್ಳದು ನಿನ್ನಯ ಸ್ತೋತ್ರ ಕಲ್ಕಾಲಾ ಗುಣಿಸಾದು
ವಲ್ಕಾಂಬರಧರ ಪ್ರೀಯ ವಿಜಯ ವಿಠ್ಠಲರೇಯ
ಬಳ್ಳುತ ಭಕ್ತರ ಮುಂದೆ ಫಲ್ಲೆನುತ ಕುಣಿದಾಡುವನೆ ೫

ಜತೆ

ಆರಾ ಜ್ಞಾನವೇನೊ, ಎನಗದರ ಗೊಡವ್ಯಾಕೆ
ದೂರ ನೋಡದೆ ಕಾಯೊ ವಿಜಯ ವಿಠ್ಠಲರಂಗ ೬

೭೪

ಝಂಪಿತಾಳ

ಮಂಜು ಕಿವಿ ಕಣ್ಣು ಕವಿದಾವು ಊರಾ
ಹಂಜಾವಾರ್ತಿಯ ತೊಲಗದು
ಮುಂಜೆರಗು ಹೆಂಗಳೆ ಬೀಸಲು
ಮುಂಜೋಣಿ ನೋಟವು ತಪ್ಪದು
ಸಂಜೆಯತನಕ ತಿನಲು ಹೀನರ
ಎಂಜಲಾಪೇಕ್ಷ ತಗ್ಗದು ತಗ್ಗದು
ಖಂಜಾತನವು ಬಂದು ಪ್ರಾಪ್ತನಾದಡೆ
ಅಂಜನಾ ಸ್ಪರ್ಶಾ ಬಯಸುವೆ
ಮಂಜು ಕವಿ ಕಣ್ಣು ಕವಿದಾವು
ಅಂಜಿಕೆಯಿಲ್ಲ ಹಾಳು ಹರಟೆಗೆ
ಅಂಜುಳಿ ಮುಗಿದಾಡುವೆ
ಬಂಜೆ ಮನ ಇನ್ನು ದಣಿಯದು
ರಂಜಕ ಮುಟ್ಟಿಸಿದಂತೆ ಭವ
ಪಂಜರದೊಳಗಾವಿಷ್ಟಾ
ರಂಜಣಿಗಿಯಲ್ಲಿ ಮಹಿಷಿ ಮೊಗವದ್ದಿ
ಗಂಜಿಮುಸರಿ ತೊಳೆಯದನೀರು
ಎಂಜಲಾ ದುರ್ವಾಸನೆ ಹೇಯಾ
ಗುಂಚಿಕೊಂಡು ಕುಡಿದಂತೆ
ನಂಜಿ ನಂಜಿ ಇರದೆ ವಿಷಯ
ಪುಂಜ ಸಮಗ್ರ ಸೇವಿಪೆ
ರಂಜಿಸುವ ಸುಕೃತ ಫಲ ಗುಲ
ಗಂಜೆ ತೂಕ ಮಾಡಲಿಲ್ಲ
ಕಂಜನಾಭ ನಮ್ಮ ವಿಜಯ ವಿಠ್ಠಲ ನಿ–
ರಂಜನ ನೀನೆ ಗತಿಯೊ ೧

ಮಟ್ಟತಾಳ

ಜೋಲು ಬಿದ್ದವು ಹುಬ್ಬುಕಾಲು ಹಸ್ತದ ಚರ್ಮ
ಜೋಲುತದೆ ಸಂಧಿ ಕೀಲುಗಳು ಸುಡಲಿ
ಕಾಲು ಕೋಲಾಯಿತು ನಾಲಿಗೆ ತೊದಲು ಜರೆ-
ಕಾಲಸುಕ್ಕಿದ ಗಲ್ಲ ಬೀಳುವಂತೆ ತಲೆ
ಓಲ್ಯಾಡುವ ಹುಡುಗು ಬಾಲತನದ ಬುದ್ಧಿ
ಲೋಲುಪ ಭವದ ಲೀಲೆ ಹಗಲು ಇರಳು
ಜೋತಿಯೊಳಗೆ ಬಿದ್ದು ವ್ಯಾಳ್ಯೆ ತಿಳಿಯದಲೆ
ಮೂಲ ವಿಚಾರಿಸದೆ ಜಾಲದುಷ್ಕರ್ಮ ವಿ-
ಶಾಲ ಮಾಡುವೆ ಇನಿತು ಏಳುವಾ ಬಗಿಯ ಹಾಳಾದೆ ಕಾಲಕ್ಕೂ
ಆಳುತನದಿಂದ ಮೂಲೋಕವ ಬಿಡದೆ
ಆಳಬೇಕೆಂಬ ಆಲೋಚನೆ ಮನ-
ಏಳಲು ಬಗೆದೆಯ್ಯ ಪೇಳಿಕೊಂಬುದೇನು
ಪಾಲಸಾಗರ ಶಾಯಿ ವಿಜಯ ವಿಠ್ಠಲರೇಯ
ಕಾಲ ಕಾಲಕೆ ಮನೋಧಾಳಿ ನಿಲ್ಲಿಸಲರಿದು ೨

ತ್ರಿವಿಡಿತಾಳ

ಗುಟುಕ ತಟಕು ಎರಡು ಸ್ವರ್ಗ ಪಾತಾಳಕ್ಕೆ
ಕಠಿಣವಾಗಿದ್ದ ಬಂಧನವಾದ ಕಾಲಕ್ಕೆ
ಕುಟೀರದೊಳಗಿದ್ದು ಬಳಲೂವ ಕಾಲಕ್ಕೆ
ನೆಟ್ಟನೆ ದೇಹಕ್ಕೆ ರೋಗ ಪ್ರಾಪ್ತವಾದ ಕಾಲಕ್ಕೆ
ಪಠಿಸುತ್ತ ಮಹಶಾಸ್ತ್ರ ಓದಿದ ಕಾಲಕ್ಕೂ
ಜಠರ ಭೂಮಿಗೆ ತಾಕಿ ಚರಿಸುವ ಕಾಲಕ್ಕೂ
ತುಟಿ ನಡುಗಿ ಮೈಯೆಲ್ಲ ಶೋಷಿಸಿದ ಕಾಲಕ್ಕೂ
ಜಟೆ ಧರಿಸಿ ಯತಿ ಜೋಗಿ ಎನಿಸಿದ ಕಾಲಕ್ಕೂ
ತಟಿನಿ ಸ್ನಾನವ ಮಾಡಿ ಜಪ ಮಾಳ್ಪ ಕಾಲಕ್ಕೂ
ಜೊಟ ಜೊಟನೆ ಮೈಯಲ್ಲಿ ಕ್ರಿಮಿ ಸುರಿದ ಕಾಲಕ್ಕೂ
ಕಟ್ಟಳೆಯಿಂದಲಿ ಬಹುರೋಗ ಭೋಗವಿದ್ದ ಕಾಲಕ್ಕೂ
ಮುಟ್ಟೆ ಶ್ವಾಸ ಬಂದು ಕಂಠಗತವಾಗಿ

ಗುಟು ಗುಟು ಗುಟು ಎನುತಾ ತೆರಳುವ ಕಾಲಕ್ಕೂ
ಗುಟುಕು ತಟಕಿನ ಚಿಂತೆ ತೊಲಗದಯ್ಯಾ
ತಟಿ ವ್ಯಾಕುಲ ವೃತ್ತಿ ಪ್ರಸಕ್ತಿ ಸಂ–
ಪುಟದೊಳಗಿದ್ದಂತೆ ಕಾಣಿಸದು
ಕಥಕ ವಿಷಯದಲ್ಲಿ ಕವಚ ಮಾಡಿಸಿ ಅಂ–
ಗುಟಶಿರಪರಿಯಂತ ತೊಡಸಿದರು
ಧಿಟ ಮನಸಿಗೆ ಸಾಕು ಎಂಬೋದೆ ಸೊಲ್ಲು
ಸಟಿಯಾಗಿ ಒಮ್ಮಿಗಾದರು ಬಾರದು
ಹಟ ಇದೆ ಸರ್ವದ ಸ್ಥಿರವಾಗಿ ಇದೆ ಇಂಥ
ಲೊಟಿವಿಡಿ ಸಂಸಾರ ಹೇಯವೆನ್ನಿ
ನಿಟಿಲದಲ್ಲಿ ಒಂದು ಕಣ್ಣು ತಂದಿಟ್ಟರು
ಘಟಕವಾದರು ಮನಸು ಹಿಂದಾಗದೂ
ಕಟಕ ಕೇಯೂರ ಹಾರ ವಿಜಯ
ವಿಠಲ ನಿನ್ನಂಘ್ರಿಯ ನಂಬಿದೆ ದಮ್ಮಯ್ಯ

ಅಟ್ಟತಾಳ

ಸಪ್ಪಡಿ ಮೆಲುವಾಗ ಉಪ್ಪಿನ ಯೋಚನೆ
ಉಪ್ಪು ದೊರೆತಾಗ ಸೊಪ್ಪಿನ ಯೋಚನೆ
ಸೊಪ್ಪು ದೊರಕಿದಾಗ ತುಪ್ಪದ ಯೋಚನೆ
ತುಪ್ಪ ದೊರಕಿದಾಗ ಕುಪ್ಪೆಯ ಯೋಚನೆ
ಕುಪ್ಪೆ ದೊರಕಿದಾಗ ಕೊಪ್ಪರಿಗೆ ಯೋಚನೆ
ಕೊಪ್ಪರಿಗೆ ಉಂಟಾಗೆ ಸಪ್ತದ್ವೀಪದ ಚಿಂತೆ
ಇಪ್ಪದು ಈ ಪರಿ ತಪ್ಪದೆ ಒಂದೊಂದು
ಅಪ್ಪರ ಯೋಚನೆ ಇಪ್ಪವು ಸಾವಿರ
ಇಪ್ಪತ್ತೊಂದು ಆರು ಒಪ್ಪದಿಂದಲಿ ಶ್ವಾಸ
ದರ್ಪಗುಂದುವ ತನಕ ಪೋಗದು ಯೋಚನೆ
ಸರ್ಪಶಾಯಿ ನಮ್ಮ ವಿಜಯ ವಿಠ್ಠಲರೇಯ
ಮುಪ್ಪಾದರೇನಯ್ಯ ತಪ್ಪದು ತಾವತ್ತನಕ ೪

ಆದಿತಾಳ

ಉಳ್ಳವನಾಗೆ ಲೇಸು ಹೊಲ್ಲೆಯರ ಠಕ್ಕೆಯುಂಟೆ
ನಿಲ್ಲದೆ ನಿನ್ನೊಳು ನೀನೆ ಮೆಲ್ಲನೆ ನಗುವ ಪರಿ
ಬಲ್ಲವರಾರು ಶ್ರೀವಲ್ಲಭನೆ ಎನಗೆ ಇಂಥ
ತಲ್ಲಣ ಪೆಚ್ಚಿಸಿ ಮನ ನಿಲ್ಲದಂತೆ ಮಾಡಿ ಸರ್ವ
ದಲ್ಲಿ ಚಿಂತಿ ಕಲ್ಪಿಸಿದೆ ಒಲ್ಲೆನೊ ಇಹದಲ್ಲಿ ಬಂದು
ಎಲ್ಲ ಪಾಟು ಬಡುವದು ಬಲ್ಲಿದ ವಿಜಯ ವಿಠ್ಠಲ
ಎಲ್ಲಿ ನಿನ್ನಂಥವನ ಕಾಣೆ

ಜತೆ

ನಿಮಿಷಾರ್ಧವಾದರು ನಿನ್ನಂಘ್ರಿಯಲಿ ಮನ
ಸಮನೆನಿಸಿ ಪಾಲಿಸೊ ವಿಜಯ ವಿಠ್ಠಲ ಧೊರಿಯೆ ೬

೭೬

ಧ್ರುವತಾಳ

ಯಾಕೆ ಸೇರಿದೆ ಎನ್ನ ಸಾಕುವ ಭಾರಕರ್ತ
ಲೋಕದೊಳಗೆ ಅನೇಕ ಭಕುತರುಂಟು
ಲೌಕಿಕದೊಳು ನಾನು ಲೋಕೇಶ ನಿನ್ನ ಪಾದ
ನೇಕ ಭಕುತಿಯಿಂದ ವಾಕು ಪೇಳಲಿಲ್ಲ
ನೀ ಕೇಳು ಭಾವವೆಂಬೊ ಶಾಕದಾಶ್ರಯ ಮಾಡಿ
ಶೋಕದಿಂದಲಿ ಧನಿಕನೆಂದೆನಿಸಿದೆ
ಸಾಕಾರ ವಿಗ್ರಹ ಸಕಲರೊಳಗೆ ವಿ–
ವೇಕವರಿತ ನಾನು ಆ ಕಾಲಾ ಈ ಕಾಲ ಎನದೆ
ನೀ ಕರುಣಿ ಎಂದುದಕಾವಾದರು ಸಮ
ರ್ಪಕಾವೆ ಮಾಡಿ ಪರಾಕು ನುಡಿಯಲಿಲ್ಲ
ಮ್ಯಾಕೆಯಂತೆ ಕಂಡುದಕ್ಕೆ ಓಡಿ ಪೋಗಿ
ಈ ಕಾಯಕ್ಕೆ ಬಂದವರ ಸಾಕುವೆನೆಂಬೋ ಮಹ

ವ್ಯಾಕುಲದಲ್ಲಿ ತಿರುಗಿ ಚಾಕಾನಾಗದೆ ಪೋದೆ
ಭೇಕ ಕಾಯದ ನಮ್ಮ ವಿಜಯ ವಿಠ್ಠಲರೇಯ
ವಾಕು ಲಾಲಿಸುವ ಕನಿಕರಿಸದೆ ಎನ್ನ ೧

ಮಟ್ಟತಾಳ

ಮಂಗಳವಾದ ಸ್ಥಾನಂಗಳು ಸುವಸನ
ಭಂಗಾರಾಭರಣ ಶೃಂಗಾರ ಮಯದ
ಹಿಂಗದೆ ತುಲಸಿ ಪುಷ್ಪಂಗಳು ಧೂಪಾರ್ತಿ
ಕಂಗೊಳಿಸುವ ದೀಪ ಮಂಗಳಾರತಿ ಓದ
ನಂಗಳು ನಾನಾ ಭಕ್ಷಂಗಳು ಪರಮಾನ್ನ
ಇಂಗಿತವಾದ ಶಾಕಂಗಳು ನಾನಾ ರ–
ಸಂಗಳು ಪರಿ ಪರಿ ಮಂಗಳ ಮಹಿಮ ನಿ –
ನ್ನಂಘ್ರಿಗೆ ಅರ್ಪಿಸಿ ಸಂಗೀತ ಪಾಡಿ ದಿ–
ನಂಗಳು ಕಳೆದು ಸುಖಂಗಳು ಕೊಡುವಾಲೋ–
ಕಂಗಳ ಬಯಿಪಾ ಮಾರ್ಗಂಗಳು ಮಾಡದೆ
ಭಂಗಬಡುವ ದುಃಖಂಗಳು
ಪಂಗಳೊಳಗೊಂದು ರಾಗ ಶಾ–
ರಂಗಧರ ವಿಜಯ ವಿಠ್ಠಲ ನಿನ್ನಾ
ತುಂಗ ಯುಗಳ ಚರಣಂಗಳನು ಎನ್ನ
ಕಂಗಳಿಂದಲಿ ನೋಡಿ ಡಿಂಗರಿಗರ ಕೊಡ
ಡಿಂಗರರಿಗ ನಾಗಲಿಲ್ಲ ೨

ತ್ರಿವಿಡಿತಾಳ

ಬಡತನದಲಿ ಹುಚ್ಚು ಹಿಡಿದು ತಿರುಗುವ ಮಗನು
ಅಡವಿ ಅಡವಿ ತಿರುಗಿ ತಿರುಗುತಿರಲು
ಹಡೆದ ತಾಯಿ ಬಹು ಮೋಹಪಾಶದಲ್ಲಿ
ಅಡಿಗಡಿಗೆ ಅವನ ರಕ್ಷಿಸುತಿಪ್ಪಳೊ
ಒಡೆಯಾ ಕೇಳುವುದು ಅವನಿಂದಲಿ ಜನನಿಗೆ
ಒಡಲು ಪೋಷಣವು ಲೇಶವಾದರುಂಟೆ

ಬಡವನು ನಾನು ಬಲು ಹುಚ್ಚು ಹಿಡಿದು ಚರಿಪ
ಕಡು ಮೂರ್ಖನೋ ದೇವ ನಿನ್ನವನೊ
ಪೊಡವೀಶ ನಿನಗೊಂದು ಬಿಂದೋದಕವನು
ತಡೆಯದೆ ತಂದು ಅರ್ಪಿಸದಲೇವೆ
ಒಡಲ ತುಂಬಿದೆ ನಾನು ಎನ್ನದೆಂಬೊ ಗರ್ವ
ನುಡಿಯಿಂದಾ ತೀರಿತೀಕ್ಷಣ ಮತಿಯಲ್ಲಿ
ಕಡು ದಯಾಳೊ ನಿನ್ನ ನೆಚ್ಚಿದವರ ಸಂ-
ಗಡ ಬಪ್ಪಾ ಉನ್ಮಾದವನೊ ಕಾಮವ
ಬಿಡಿಸಿ ಬೀಸಾಟವೆ ಅವನ ಜನನಿ ಸಾಕುವಂತೆ
ಒಡನೆ ಪಾಲಿಸುವುದು ದುರ್ಮತಿಯಾ ಬಿಡಿಸಿ
ದೃಢ ದೈವ ವಿಜಯ ವಿಠ್ಠಲರೇಯ ನಿನಗೆ ನಾನು
ಕೊಡದವನೆಂತೆಂದು ಕಡೆ ಮಾಳ್ಪದು ಸಲ್ಲ ೩

ಅಟ್ಟತಾಳ

ನಿಚ್ಚ ಜನನಿ ಬಲು ಹುಚ್ಚು ಹಿಡಿದ ತನ್ನ
ಕಚ್ಚುವ ಮಗನಿಗೆ ಬಚ್ಚಿಟ್ಟು ಪದಾರ್ಥ
ಮುಚ್ಚಿಕೊಂಡು ಬಂದು ಎಚ್ಚರಿಸಿ ಪೊಟ್ಟೆ
ಕಿಚ್ಚು ಪೋಗುವುದಕ್ಕೆ ಚಚ್ಚರದಲಿ ಸ್ನೇಹ
ಪೆಚ್ಚಿಸಿಕೊಂಡು ತಾ ಬಿಚ್ಚದೆ ಅವನನ್ನ
ಮುಚ್ಚುಕುಂದ ಸುಚ್ಚರಿತ ಅಚ್ಚ ಮಹಿಮ ಮುಕ್ತಿ
ವೆಚ್ಚಮಾಡುವನೆ ಎಚ್ಚದವನ ಪಾಲ
ಮುಚ್ಚುಕುಂದ ಪ್ರೀಯ ವಿಜಯ ವಿಠ್ಠಲ ಭಕ್ತ
ರಿಚ್ಚೆಯಗಾರನೆ ಎಚ್ಚರಿಕೆ ಕೇಳೊ ೪

ಆದಿತಾಳ

ಉತ್ತಮ ಭಕುತರಿಂದ ಪೂಜೆಯಗೊಂಬುವನೆ
ನಿತ್ಯ ಎನ್ನ ಬಳಿಯಲ್ಲಿ ಇರಲು ಇನ್ನಾವ ಫಲ
ಮರ್ತ್ಯಲೋಕದಲ್ಲಿ ಈ ಪರಿ ಹುಚ್ಚು ಹಿಡಿದ ಮಗನಿಗೆ
ಪೆತ್ತ ಜನನಿಗೆ ಸಾಮ್ಯ ದೃಷ್ಟವಾಗಿದೆ

ಮತ್ತೆ ನೀನೆ ಅದರಂತೆ ಎನ್ನ ಪಾಲಿಸುತಿಪ್ಪೆ ಮತ್ತೆ
ಎತ್ತಿ ಕರವ ಮುಗಿವೆನಯ್ಯ ಯದುಕು–
ಲೋತ್ತಮ ತಿಲಕ ಎತ್ತಲಾದರೇನು ಇವನು
ಭಕ್ತರೊಳಗೆ ಗಣನೆ ಎಂದು ಅತ್ಯಂತ ಭಕ್ತ
ರಿತ್ತ ಎಡೆಯಿಂದ ತೃಪ್ತನಾಗಿ
ಇತ್ತ ಬಂದು ಕಲಕಾಲ ಒಂದು ನಿಮಿಷ ತೊಲಗದಲೆ
ಹತ್ತಿ ಬಿದ್ದು ಪ್ರತಿ ದಿನ ಸಾಕುವ ಸುಲಕ್ಷಣ ಪುರುಷ
ತೆತ್ತಿಗರ ಮನೋರಥನೆ ವಿಜಯ ವಿಠ್ಠಲಗೊಂದು
ತುತ್ತು ಬೇಕಾಗಿಲ್ಲ ದೀಪ್ತಾ ನಿತ್ಯತೃಪ್ತ ಪರಂಜ್ಯೋತಿ ೫

ಜತೆ

ಕೊಡುವೆನೆಂದು ನಿಂದು ನಿಲ್ಲಲಾಡಿದ ಮೇಲೆ
ಕೊಡದಿರಬಹುದೆ ವಿಜಯ ವಿಠ್ಠಲ ಸತ್ಯ ೬

೭೭

ಧ್ರುವತಾಳ

ಯಾತರ ಶರಣನಯ್ಯ ಯಾತರ ಭಕುತನಯ್ಯ
ಯಾತರ ದಾಸನಯ್ಯ ಯಾತರ ಶುದ್ಧನಯ್ಯ
ಯಾತರ ಜನನ ಪಂಚ ಭೂತಾತ್ಮವಾಗಿ
ಪೂತಿಗಂಧದೊಳಗೆ ಬಳಲುತಿಪ್ಪ
ತಾ ತರುಣದಲ್ಲಿ ಲೇಪ ಲೇಪನವಾಗಿ
ವಾತ ಭ್ರಮಣವಾಗಿ ತೊಳಲುವೆನೊ
ಯಾತ ಎತ್ತುವಾಗ ಬಿಲ್ಲೆ ಒದರಿದಂತೆ
ಮಾತು ಮಾತಿಗೆ ನಿನ್ನ ನೆನೆಸುವೇನೊ
ಆತುಮದೊಳಗೆ ಯಾವತ್ತು ಶುಚಿಯಿಲ್ಲ
ಹೋತಿಗೆ ಬಲು ಘನತೆ ಇದ್ದ ತೆರದಿ
ನೀತಾಚಾರ ಪೇಳಲಿ ಬಲ್ಲೆನೇನಯ್ಯಾ
ಪಾತಕದಲ್ಲಿಗೆ ಎರಗುತಿಪ್ಪೆ

ಭೀತಿರಹಿತ ಯಜ್ಞಗುಹ ವಿಜಯ ವಿಠ್ಠಲ
ಯಾತರ ನಿನ್ನವನೊ ಯಾತರ ನಿನ್ನವನೊ ೧

ಮಟ್ಟತಾಳ

ದೇಹ ಎನ್ನದು ಎಂದು ಗೇಹ ಎನ್ನದು ಎಂದು
ಮೋಹ ಮೋಹ ಬಿಡದೆ ಆಹಾರ ಇಂದ್ರಿಯಗಳ
ಗಹನದೊಳಗೆ ಬಿದ್ದು ಅಹಸ್ಸು ಕಳೆವೇನೊ
ಮಹಾದುರ್ಮತಿ ನಾನು
ಮಹಾದ್ರಿಧೃತ ನಾಮ ವಿಜಯ ವಿಠ್ಠಲರೇಯ
ಬೇಹಿಗಾರಕೂಡ ಅಹೋ ನೊಂದೆನು ೨

ತ್ರಿವಿಡಿತಾಳ

ಎಲ್ಲಿಯ ಜ್ಞಾನ ಎನಗೆಲ್ಲಿಯ ಭಕುತಿ ಎನಗೆ
ಎಲ್ಲಿ ವೈರಾಗ್ಯ ಎನಗೆಲ್ಲಿಯಾಚಾರವೊ
ಇಲ್ಲಾವಿಲ್ಲವೊ ನಿನ್ನಲಿ ಬಿಂದು ಮಾತುರ
ನಿಲ್ಲಿಸಿ ಮನ ದೃಢದಲ್ಲಿ ಪೂಜಿಪುದು
ಸಲ್ಲುವೆನೆ ಸಲ್ಲುವೆನೆ ಬಲ್ಲಿದವರ ಕೂಡ
ಅಲ್ಲದೊಸ್ತವ ಬಯಸಿ ಕುನ್ನಿ ತಾ ಪೋದಂತೆ
ಕಲ್ಲು ಕಟದು ತಿಂದು ಹಲ್ಲು ಮುಕ್ಕಾದಂತೆ
ಎಲ್ಲಾ ಕಾಲದಲ್ಲಿ ನಾನು ಅಪರಾಧಿಯೊ
ಮಲ್ಲಗೋಡಿಗೆ ಕೊಟ್ಟಂತಿಪ್ಪೆನಯ್ಯಾ
ಸೊಲ್ಲು ಪಾಲಿಸು ಯಜ್ಞ ಮೋಹನ ವಿಜಯ ವಿಠ್ಠಲ
ಬಲ್ಲನ ನೀನು ನಾನೆಲ್ಲ ಬಿನ್ನೈಸಿದೆನು ೩

ಅಟ್ಟತಾಳ

ಕಾಮ ಕ್ರೋಧವ ಬಿಡೆ ಕಾಮಕ್ರೋಧವ ಬಿಡೆ
ಕಾಮಿನಿಯರಿಗೆ ಹಲುಬುವುದ ಬಿಡೆ
ಹೇಮವಾದರೂ ಎನ್ನ ಪ್ರಾಣ ಹೋದರು ಬಿಡೆ
ಸಾಮದಂಡ ಮಾಯ ಭೇದೋಪಾಯ

ತಾಮಸ ಪದವಿಗೆ ಈ ಮನವೆರಗುವುದು
ಭೀಮ ನಾಮ ನಮ್ಮ ವಿಜಯ ವಿಠ್ಠಲನೆ ದು
ರ್ನಾಮ ಪಾತ್ರನು ನಾನು ನೀ ಮರಿಯದಿರು ೪

ಆದಿತಾಳ

ಕರುಣಿ ಎನ್ನ ಸ್ವರೂಪ ಇರಹು ನೀನೆ ಬಲ್ಲವನು
ಅರಿಯದರಿಗಾದರೆ ವಿಸ್ತರಿಸಬೇಕು
ಚರಿಸುವ ಚರಿಸುವ ಪರಿಪರಿ ಗುಣಕರ್ಮ
ತರಳ ಯಾವನಾತನ ಜರೆಯಲ್ಲಿ ಎಸಗಿದ
ಪರಿಮಿತ ನೀನೆ ಬಲ್ಲೆ ಅರಸರಿಗರಸು
ಧೊರೆ ಎನಗಿರಲಾಗಿ ಪಾಮರರ
ಉಸುರಲ್ಯಾಕೆ ಬರಿದೆ ನೊಂದು
ಸುರರೊಡಿಯ ವಿಕ್ಷರ ಶ್ರೀ ವಿಜಯ ವಿಠ್ಠಲ ನಿನ್ನ
ಕರುಣದಳತೆಯನ್ನು ಗುರುದಯದಿಂದ ಅರಿವೆ ೫

ಜತೆ

ಹರಿವು ಡೊಂಕಾದರೆ ಹರಿವ ನೀರು ಡೊಂಕೆ ನಿನ್ನ
ಸ್ಮರಣೆ ಡೊಂಕಲ್ಲವೊ ಮಾರ್ಗ ವಿಜಯ ವಿಠ್ಠಲ ೬

೭೮

ಧ್ರುವತಾಳ

ಯಾತರಿಂದಲಿ ನಿನ್ನ ನಿಲಿಸಿಕೊಂಬೆನೊ ರಂಗ
ಯಾತರಿಂದಲಿ ನಿನ್ನ ಒಲಿಸಿಕೊಂಬೆನೊ ರಂಗ
ಯಾತರಿಂದಲಿ ನಿನ್ನ ಮೆಚ್ಚಿಸುವೆ ರಂಗ
ಯಾತರಿಂದಲಿ ನಿನ್ನ ನೆಚ್ಚಿಸುವೆನು ರಂಗ
ಯಾತರಿಂದಲಿ ನಿನ್ನ ಪೂಜಿಸುವೆನು ರಂಗ
ಯಾತರಿಂದಲಿ ನಿನ್ನ ಸೋಲಿಸುವೆನು ರಂಗ

ಯಾತರಿಂದಲಿ ಶೋಧಿಸಿ ನೋಡಿದರು
ದಾತ ನಿನ್ನ ತುತಿಸುವಾರ್ಚನೆ ಕಾಣೆನೊ
ಜಾತಿ ಧರ್ಮಕುಲಗೋತ್ರವಾವುದು ಯಿಲ್ಲ
ಭೂತಳದೊಳಗೆ ಮತ್ತಾರದೆನೆಸಲ್ಲ
ಪ್ರಾತಃ ಸಾಯಮಾರಭ್ಯವೆರಸಿ ತೊಳಲೆದಾರು
ನಾಥನೆ ನಿನ್ನನು ಒಲಿಸುವ ಬಗೆ ಏನು
ಭೂತಭಾವನ ನಮ್ಮ ವಿಜಯವಿಠ್ಠಲ ಎನ
ಗಾತುಮದೊಳಗೆ ಮೂರುತಿ ಕಾಂಬುವುದೆಂತೊ ೧

ಮಟ್ಟತಾಳ

ಉತ್ತಮ ಜಾತಿ ಉತ್ತಮ ಕುಲ
ಉತ್ತಮ ಗೋತ್ರ ಉತ್ತಮ ಧರ್ಮ
ಉತ್ತಮವಿದರೊಳಗಾಗುತ್ತಮವಾವುದು
ಎತ್ತಲು ತಿಳಿಯದೆ ಸುತ್ತಲು ಸುತ್ತಿದೆ
ತುತ್ತಿಸುವ ನಿನ್ನ ಉತ್ತಮೋತ್ತಮ ದೇವೋತ್ತಮನೆಂದು
ತುತ್ತಿಪರಲ್ಲದೆ ಚಿತ್ತಜಪಿತ ನಿನ್ನ ಚಿತ್ತಜದಲ್ಲಿಟ್ಟವರು
ಮತ್ತೆ ನಿನ್ನಯ ಜಾತಿ ಗೋತ್ರ ಕುಲಧರ್ಮ
ಮತ್ತಾವದು ಎಂದು ತತ್ತಳಗೊಳುವರು
ಚಿತ್ತದ ಒಡಿಯಾ ಸಿರಿ ವಿಜಯವಿಠ್ಠಲರೇಯ
ಎತ್ತಿ ಕರವ ಮುಗಿವೆ ಚಿತ್ತವಧರಿಸುವದು ೨

ತ್ರಿವಿಡಿತಾಳ

ಜಗವ ಸಾರಿಡುವುದು ಜಗವು ಸಾರಿಕ್ಕುವುದು
ಜಗವಾಡುವುದು ಈ ಜಗವೇ ಏಳುವುದು
ಹಗಲಿರುಳೆನ್ನದೆ ಅಗಣಿತ ದಿನದಲ್ಲಿ
ಬಗೆ ಬಗೆ ವ್ಯಾಪಾರ ನಿನ್ನವಾಗಿರಲು
ಜಗದೀಶಾ ನಿನ್ನಯ ಉಗುರು ಕಾಣದವರು

ಉಗುಳಿದಾ ತೊಂಬಲು? ನಾನು ನಿನ್ನ
ಯುಗಳ ಪಾದಗಳನ್ನು ಸುಗುಣನಾಗಿ ಅ.ಪ

ಬಗೆಯಿಂದರ್ಚಿಸುವೆನೊ ಮಗಳಮಾವಾ
ಖಗಗಮನ ವಿಜಯವಿಠ್ಠಲ ಪೂರ್ಣೇಂದುವದನ
ಗಗನಕ್ಕೆ ಹೊದಿಸಿ ಬಿಸಿಲು ತೆಗೆಸುವವನಾರೊ ೩

ಅಟ್ಟತಾಳ

ಕುಲಗೋತ್ರ ಮೊದಲಾವ ಸುಳಿಯೊಳಗೆ ಪೊಕ್ಕು
ನೆಲೆಯಗಾಣುವೆನೆಂದು ಬಲುದೂರ ನೋಡಲು
ತಿಳಿಯದು ತಿಳಿಯದು ಬಲವಂತರಿಗೆ ನೋಡು
ಕೆಲಕಾಲ ಮುನಿಗಳು ತಲೆ ಕೆಳಗಾದರು
ಜಲಜನಾಭನೆ ನಿನ್ನ ಕುಲಗೋತ್ರವೆಂಥಾದ್ದೊ
ಭಳಿರೆ ಹೆಮ್ಮಿನ ದೈವ ವಿಜಯವಿಠ್ಠಲರೇಯ
ಗೆಳಿಯನೆನಿಸಿದೆ ನೀನೊಲಿದ ಭಕ್ತರಿಗೆ ೪

ಆದಿತಾಳ

ಅತಿ ಬೆಡಗು ತೋರಿಕೊಳುತ
ಪ್ರತಿಯಿಲ್ಲದ ದೇವರೆನಿಸಿ
ಕ್ಷಿತಿಯೊಳಗಾಡುತ ಸತತ ಮತಿವಂತರಿಗೆ
ಗತಿಯಿತ್ತುದೆಂತೊ ನಿನ್ನ ಸ್ತುತಿಸಿದವರಾರೆಂತೂ
ಮಿತಿ ತಪ್ಪಿ ನೋಡಿದರು ನಿನಗೇನು ಬಂದು ಗು
ರುತು ಕಾಣೆ ಕಮಲನಾಭ ವಿಜಯವಿಠ್ಠಲ ನಿನಗೆ
ಪತಿತ ಪಾವನನೆಂಬೊ ಅತಿ ಬಿರದು ಒಂದಲ್ಲದೆ ೫

ಜತೆ

ಜಾತಿ ಗೋತ್ರದಲಿ ಕರೆಯಲು ನೆಲೆಗಾಣೆ
ತಾತ ನೀನೆ ಒಲಿಯೊ ವಿಜಯವಿಠ್ಠಲ ಧೊರಿಯೆ ೬

೭೯

ಧ್ರುವತಾಳ

ರಂಗ ನಿನ್ನ ಚರಣಂಗಳ ನಂಬಿದೆನೊ
ಮಂಗಳಾಂಗನೆ ದುರಿತ ತಮಕೆ ಪತಂಗ
ಜಂಗುಳಿ ಜನ್ಮಗಳಲಿ ಅಂಗೈಸಿದ ಪಾಪ
ಸಂಘಗಳು ಸುತ್ತಿ ಅಂಗಕ್ಕೆ ಲೇಪಿಸಿ
ಹಿಂಗದಲೆ ವ್ಯಾಧಿ ರೂಪಂಗಳು ಬೆಂಬಿಡದೆ
ಭಂಗ ಬಡಿಸುತಲಿರೆ ಮಂಗಳ ಮಹಿಮ
ಗಂಗೆ ಮಧ್ಯದಲ್ಲಿ ಹರಿಗೋಲು ಮಹಾ ಘನತ–
ರಂಗದೊಳಿದ್ದಂತೆ ಮುಂಗಾಣದೆ
ಕೆಂಗಡಿಕೆಯಿಂದ ದಿಕ್ಕರಿಗಳನು ಕಾಣದ
ಕಂಗಳನಂತೆ ಆಗಿ ಯಂಗಾದಿನೊ
ಸಂಗೀತಲೋಲ ಸುರಂಗಳ ಪಾಲ
ರಥಾಂಗಪಾಣಿ ವಿಜಯವಿಠ್ಠಲೇಶ
ಜಂಗಮ ಸ್ಥಾವರ ಕರ್ತ ಸರ್ವಭೋಕ್ತ
ತಿಂಗಳಾಗು ಎನ್ನಂತರಂಗ ಕುಮುದಕ್ಕೆ ೧

ಮಟ್ಟತಾಳ

ಪುನರೇವ ಪಾಪಿ ಪುನರೇವ ಕರ್ಮಿ
ಪುನರೇವ ದೋಷಿ ಪುನರೇವ ದಾರಿದ್ರಿ
ಪುನರೇವ ಜನನ ಪುನರೇವ ಕಷ್ಟಿ
ಪುನರೇವನಾಗಿ ಪುನಹ ಪುನಹ ಉಣುತ
ಅನುತ್ತಮ ನಾಮ ವಿಜಯವಿಠ್ಠಲನೆ
ಪುನೀತ ನಾನಾಗಿ ನೆನಸದೆ ನಿನ್ನ ಪು ನರಕದಲ್ಲಿ
ಪುನರಪಿ ಬೀಳುತ್ತ ಮುಣುಗಿ ತೇಲುವೆನೊ ೨

ತ್ರಿವಿಡಿ ತಾಳ

ಭೂರಂತರವ ತಿಳಿಯದೆ ಮೂರು ರಹಿತವಾದ
ಭೂರಮಣನ ಲೀಲೆ ತಿಳಿಯದಿರಲು
ದ್ವಾರ ಪ್ರವೇಶಿಸಿ ತಿರುಗಿ ಬಾರದಲಿಪ್ಪ
ಕಾರಣವಾವುದು ಇಲ್ಲಿ ಒಬ್ಬ
ಜಾರ ಸ್ತ್ರೀಯಳು ಉಂಟಾವಳ ಪತಿ ಪೆಸರೇನು
ಮಾರಾಳ ಪಕ್ಷಿಯ ನಾಮವಾವುದು ಎಂದು
ಧಾರುಣಿಯೊಳಗೊಂದು ನಾರಿ ಉಭಯ ದಿಕ್ಕಿಗೆ
ಪಾರುವುದೆಂದು ಪೇಳುವರೋ
ಈರಾರು ಕೂಡಿದ ಚಕ್ರ ಸಂಚರಿಸೆ ವಿ
ಚಾರ ಪಂಚ ಪಂಚ ಮನಿಗಳುಂಟು
ಆರಿಗೆ ವಶವಲ್ಲವಿದು ತಿಳಿಯೆಂದು ನಿನ್ನ
ವರನ್ನಾರಾಧಿಸು ಭಕ್ತರೆಂಬೋರು
ಚಾರು ಚರಿತ ನಿಗ್ರಹ ವಿಜಯವಿಠ್ಠಲ
ತೋರಿಕೊಡುವ ಇದರ ತಾರತಮ್ಯವನು ೩

ಅಟ್ಟತಾಳ

ಮನೆಯೊಳಗಿದ್ದ ವರ್ತಮಾನ ತಿಳಿಯದೆ
ದಿನ ದಿನ ನೆರೆ ಮನೆಯವರನ್ನು ನಿಂ
ದನ ಮಾಡುತಲಿ ತೃಣವೆಂದು ಪರರನ್ನು
ಗಣನೆ ಮಾಡದೆ ಅವಗುಣದಲ್ಲಿ ನುಡಿವೆನೊ
ಗುಣಿತ ಆವುದೊ ಈ ಮಾನಿಗೆ ಸುತ್ತಿಕಾ ಬಟ್ಟೆ
ಇನಿತು ಪ್ರಾಕೃತದಲ್ಲಿ ಪೋಗಿ ಬಂದ ಲೇಸು
ಘನ ಮೂರ್ತಿ ದಕ್ಷಣ ವಿಜಯವಿಠ್ಠಲರೇಯ
ಕೊನಿ ಮೊದಲಾದವು ಮನಿ ಅಹಂಕಾರಕ್ಕೆ ೪

ಆದಿತಾಳ

ಪ್ರಾಚೀನ ಕರ್ಮಗಳು ವಾಚಾ ಮಾನಸಾ ಕಾಯದಲ್ಲಿ
ನೀಚ ಗುಣನಾಗಿ ದುರಾಲೋಚನೆಗೆ ಒಳಗಾಗಿ
ಲೋಚನ ಹಸ್ತ ಚರಣದಾ ಚೇಷ್ಟೆಯಲ್ಲಿ ಮಾಡಿದ
ಯೋಚಿಸಿ ನೋಡಲು ಮಾಯಾ
ಪಾಚಿಸಿಂದಾಪಾರ ಲೀಲ
ವಾಚಾಮ ಗೋಚರ ಎನಗೆ ನಾಚಿಕೆ ಮುಂದಾದರಿಲ್ಲ
ಈ ಚೇತನದಲ್ಲಿ ಪಾಪ
ಮೋಚನ ಎನಿಸಲಿಲ್ಲ
ವಾಚಸಪತಿ ನಾಮ ವಿಜಯವಿಠ್ಠಲ ಬಂಧು
ಗೋಚರ ನೀನಾಗಿ ದುರ್ಮಿಥ್ಯಾಚಾರವನ್ನು ಬಿಡಿಸೊ ೪

ಜತೆ

ಜ್ಞಾನ ಭಕುತಿ ದೇಹಿ, ಜ್ಞಾನ ಭಕುತಿ ದೇಹಿ
ಅನಾದಿ ನಾಮನೆ ವಿಜಯವಿಠ್ಠಲನೆ ೫

೮೦

ಧ್ರುವತಾಳ

ವಂದ್ಯಾನೆಂದರೆ ನೀನಿಂದು ಮುನಿವರೇನೊ
ಮಂದ ಹಾಸನೆ ಗೋವಿಂದ ಸದಾನಂದ ನಂದನ
ಕಂದರ್ಪ ಜನಕನೆ, ಅಂದುಳ್ಳ ದೈವವೆ, ಇಂದಿರೆನಿಲಯ
ಮಂದಮತಿತನದಿಂದ, ಗರ್ವದಲ್ಲಿ
ನಿಂದಿಸಿದೆ ನಾನು ಮುಂದಿಳಿಯದೆ
ಕಂದನ್ನ ಅಪರಾಧ ಒಂದು ಎಣಿಸದಿರು
ತಂದೆಯಾ ತಂದೆ, ತಂದೆ, ಬಂದೆ ದೈವಾವೆ
ನೊಂದಗಲಿ ನಿನ್ನ ಅಂದಾದೆ ಶತಸಿದ್ಧ
ಸಂದೇಹವಿಲ್ಲವಿದಕಿಂದುವದನಾ
ಸುಂದರ ಶ್ರೀ ಗರ್ಭ ವಿಜಯವಿಠ್ಠಲರೇಯ
ವಂದಿಸಿ ನಾನು ನಮೋ ಎಂದೆರಗುವೆನೊ ೧

ಮಟ್ಟತಾಳ

ಕೊಟ್ಟವರಾ ಬಳಿಯಾ ಕಷ್ಟವಾದರು ತನ್ನ
ಪುಟ್ಟಿದ ಮನೆಗೆ ಬೈದಟ್ಟುವುದೆ ನಿಜವು
ಶಿಷ್ಟಪಾಲಕ ಎನ್ನ ದುಷ್ಟಹಂಕಾರಗೆ
ಕಟ್ಟಿಕೊಟ್ಟದರಿಂದ, ಕಷ್ಟವಾದರು ನಿನ್ನ
ಧಿಟ್ಟತನದಿ, ದೂರಿ ರಟ್ಟು ಮಾಡದೆ ಬಿಡೆನೊ
ಬಿಟ್ಟಿಯವ ನೆಂದು ಬಿಟ್ಟರೆ ಒಳ್ಳೇದೆ
ಶಿಷ್ಟನಾಮ ವಿಜಯವಿಠ್ಠಲನಂಘ್ರಿ
ಯಿಟ್ಟಲ್ಲೆ ಕಾಯಾ ಕೊಟ್ಟಲ್ಲದೆ ತೊಲಗೆ ೨

ತ್ರಿವಿಡಿತಾಳ

ಗಗನದಿಂದಲಿ ವರುಷಾ ಸೊಗಸಾಗಿ ಸುರಿಯೇ ಜೀ
ವಿಗಳೆಲ್ಲಾ ಸುಖಿಸೋರು ಯುಗಯುಗಾಂತರ ಬಿಡದೆ
ಜಗದಿಂದ ಜಲಉಬ್ಬಿ ಜಿಗಿದು ನಭವ ತೊಯ್ದು
ಮಿಗಿಲಾಗಿ ಬೆಳಿಯೆ ಪ್ರಾಣಿಗಳು ಸಂತೃಪ್ತಿಯೆ
ವಿಗಡ ದೇವರ ದೇವ ಅಗಣಿತ ಪರಾಕ್ರಮ
ಖಗ–ಗಮನ ನಿನ್ನ, ಪಾದಯುಗಳ, ಕರುಣವಾಗೆ–
ಬಗೆಬಗೆಯಿಂದ ತೊಲಗದ, ಮಾಡಿದ ಮಹ
ಅಘಗಳು ಪೋಗಿ ಬೈಲಿಗೆ ಬೀಳೋವು
ಭಗವಾನ್ ನಮೊ ನಮ್ಮ ವಿಜಯವಿಠ್ಠಲ
ನ್ನಿಗೆ, ಎನ್ನಿಂದಾವದು ಉಗುರಿನಿತುಪಕಾರವಿಲ್ಲ ೩

ಅಟ್ಟತಾಳ

ಕ್ಷೀರ ವಾರಿಧಿಗೆ ಹಾರುತ ಪೋಗಿ, ಮೀರಿದ ಹರುಷವೆ
ವಾರಿಧಿ ತುಂಬಿ ಉಕ್ಕೇರಿ ಹರಿವುದೇನೊ
ಕ್ರೂರವಾಗಿ ಪೋಗಿ ಸಾರೆ ಕುಡತಿ ತುಂಬಿ
ಕ್ಷೀರ ತೆಗೆಯಲವೆ ವಾರಿಧಿ ಕಡಿಮೇನೊ
ನಾರಾಯಣ ವೇದ ಪಾರಾಯಣನೆ ನಿನ್ನ
ನೂರು ಬಗೆಯಿಂದ ಜಾರಿ ಸ್ತುತಿಸಿದರೆ

ಕಾರಣವೇನಯ್ಯ ದಾರಿಂದಲಿ ನಿನಗೆ
ಧಾರುಣೀಶಾ ಮಹಕೇಶವ ವಿಜಯ ವಿಠ
ಲಾರು ನಿನ್ನ ಮನದಂತರ್ಚಿಸುವರು ೪

ಆದಿತಾಳ

ನುತಿಸಿ ಸ್ತುತಿಸಿ ಭಾಗ್ಯ ಅತಿಶಯವಾಗದು ದು–
ರ್ಮತಿಯಾಗಿ ನಿಂದಿಸಲು, ಮಿತಿ ಜ್ಞಾನದಲಿ ನಿನ್ನ
ದ್ಭುತ ಲೀಲೆ ತಿಳಿಯದೆ ಗತಿ ತಪ್ಪಿ ನುಡಿವೆನೊ
ಪಿತನು ವ್ಯಾಮೋಹದಲ್ಲಿ ಸುತದಿಂದ ನುಡಿಸಿಕೊಂಡು
ಖತಿಯಾಗದೆ ಸಂತೋಷ ಪ್ರತಿಯಿಲ್ಲದೆ ಬಡುವನು
ಕೃತಜ್ಞಾನಾಮ ನಮ್ಮ ವಿಜಯವಿಠ್ಠಲ ನೀನೆ
ಪಿತನಾದ ಬಳಿಕ ದೂರತನ ಮಾಡುವೆಯಾ ೫

ಜತೆ

ಅರ್ಭಕನ ಬಿನ್ನಹ ಗರ್ಭೀಕರಿಸಿಕೊಳ್ಳೊ
ಭೂರ್ಭುವ ವಿಜಯವಿಠ್ಠಲನೆ, ಜಾರ ಚೋರ ೬

೮೧

ಧ್ರುವತಾಳ

ವ್ಯರ್ಥವಾಯಿತು ಜನನಾನರ್ಥ ಸಾಧನದಲಿ
ಕರ್ತೃತನವೆನ್ನದೆಂಬಾವರ್ತದಲ್ಲಿ
ಸಾರ್ಥಕ ಇಲ್ಲ ನಿರರ್ಥಕವಾಗಿ ದುಃ–
ಖಾರ್ಥವ ಬಲಗೊಂಡೆ ಅರ್ಥಿಯಿಂದ
ವ್ಯರ್ಥಾಯ ನೊಂದು ಇತ್ಯರ್ಥವ ಕಾಣದೆ
ಅರ್ಥಾತುರನಾಗಿ ಧರ್ಮದ ದಾರಿ ಯ
ಥಾರ್ಥವೆನ್ನದಲೆ ಕೃತಾರ್ಥನಾಗದೆ ನರಕ
ಗರ್ತದೊಳಿಳಿವೆನು ಕೀರ್ತಿಮರೆದು
ತೀರ್ಥಮೌಳಿಯ ಪಾಲಾ ವಿಜಯವಿಠ್ಠಲ ಮು–
ಕ್ತಾರ್ಥ ಧ್ಯಾನದೊಳಿರದೆ ಘರ್ತನಾಗುಳಿವೆ ೧

ಮಟ್ಟತಾಳ

ಇಬ್ಬರಿಂದಲಿ ಬಂದ ಮೊಬ್ಬು ಕವಿದು ಮನಸು
ಉಬ್ಬಿ ಮಂದನಾಗಿ ಹಬ್ಬಿತು ತಾಮಸವು
ನಿಬ್ಬರದಲಿ ನಿನ್ನ ಎಬ್ಬಟ್ಟು ಪಾಪ
ದುಬ್ಬಸ ಕಳೆಯುವರನ ಒಬ್ಬರ ಕಾಣೆನೊ
ಅಬ್ಜದಳನಯನ ವಿಜಯವಿಠ್ಠಲ ನೀನೆ
ಒಬ್ಬನಲ್ಲದೆ ಆಧಾರೊಬ್ಬರು ಎಲ್ಲಿಲ್ಲ ೨

ತ್ರಿವಿಡಿ ತಾಳ

ಮನವೆಂಬ ತರಗೆಲೆ ದುರ್ವಾಸನೆ ಎಂಬ
ಅನಿಲಾ ಬೀಸಲು ಹಾರಿ ಪೋಗುತಿದಕೊ
ಎನಗೆ ಪಿಡಿವ ಶಕ್ತಿಯನು ಕಾಣೆ ಕಾಣೆನೊ
ಕ್ಷಣವೊಂದರೊಳಗೆ ಕೋಟಿ ಕೋಟಿ ಯೋ–
ಜನ ಹಾರಿ ಈ ಮನಸು ಸುತ್ತ ಸುತ್ತತಲಿದೆ
ಘನ ಮಹಿಮ ನಿನ್ನಂಘ್ರಿ ವನಜಯುಗಳ ಊರಿ
ಮನವೆಂಬ ತರಗೆಲೆಯನು ಹಾರದಂತೆ ದಯ–
ವನು ಮಾಡು ನಿನಗೆ ವಂದನೆ ಗೈವೆ ಹರುಷದಲಿ
ಹನುಮ ವಂದಿತ ಪಾದ ವಿಜಯವಿಠ್ಠಲರೇಯ
ದಣಿಸದೆ ಕರವಿಡಿದು ಗುಣವಂತರೊಳಗಿಡು ೩

ಅಟ್ಟತಾಳ

ನಿನ್ನಂಥ ಪ್ರಿಯನು ಎನಗೊಲಿದಿರಲಾಗಿ
ಅನ್ಯರಿಗೆ ಸೆರಗನ್ನೊಡ್ಡಿ ಬೇಡುವೆನೆ
ಎನ್ನಂಥ ದುರಾತ್ಮಕನ್ನಂತದೊಳಗಿಲ್ಲ
ಇನ್ನೇನುಪಾಯವ ಇನ್ನೇನು ಗತಿಯೊ
ಅನ್ಯಥನ್ಯರಿಗೆ ದೈನ್ಯ ಬಡುವ ವೃತ್ತಿ
ಬೆನ್ನು ಬಿಡದು ಕಾಣೊ ಚನ್ನ ಪ್ರಸನ್ನ
ಅನ್ನಾಥರೊಡೆಯನೆ ವಿಜಯವಿಠ್ಠಲ ಸಂ–
ಪನ್ನ ಮನ್ನಿಸಿ ಮಾನವನು ಕಾಪಾಡೊ ೪

ಆದಿತಾಳ

ಈರಾರು ದ್ವಿಗುಣ ಪರಿವಾರದವರ ಸಹಿತ ನೀನು
ಸೇರಿಕೊಂಡು ಎನ್ನೊಳಗೆ ತೋರಿ ತೋರಿಕೊಳುತಲಿದ್ದು
ಕ್ರೂರ ಇಂದ್ರಿಯಗಳ ಗುಡಿ ಹಾರಿಹಾರಿ ಈ ಮನಸು
ಗಾರು ಮಾಡುವುದು ನೋಡಿ ಆರಿಗಾರಂತಿರಬಹುದೆ
ಕಾರುಣ್ಯನಿಧಿ ನಮ್ಮ ವಿಜಯವಿಠ್ಠಲ ನೀನೆ
ದೂರು ನೋಡಿದರೆ ಎನಗಾರು ಗತಿ ಇಳೆಯೊಳು ೫

ಜತೆ

ಅಂದ ಮಾತನು ಕೇಳೊ ಬಂಧು ಎನ್ನ ಮನಸು
ಪೊಂದಿ ನಿನ್ನರ್ಚಿಸಲಿ ವಿಜಯವಿಠ್ಠಲ ಶೌರಿ ೬

೮೨

ಧ್ರುವತಾಳ

ವಿಜಯವಿಠ್ಠಲನೆ ಗಜರಾಜ ವರದನೆ
ಅಜನ ಪಿತನೆ ಪಂಕಜ ನಯನನೆ
ಅಜಮಿಳಪಾಲನೆ ಭುಜಗಶಯನನೆ ಭೂ
ಭುಜರ ಹರಣನೆ ವೀರಜ ಭೂಷಣನೆ
ರಜನೀಶವದನನೆ ವಿಜಯನ್ನ ಪಾಲನೆ
ತ್ರಿಜಗ ವ್ಯಾಪ್ತನೆ ದಿವಿಜ ಸದನನೆ
ಭಜಿಸುವ ಸುಜನರ ವ್ರಜದೋಷ ದೂರನೆ
ವಿಜಯವಿಠ್ಠಲ ವಾರಿಜರಮಣದೇವ ೧

ಮಟ್ಟತಾಳ

ಕಟಿಕರ ಶಂಖ ಕಟಿಕರ ಅಭಯ
ಕಟಕ ಮುತ್ತಿನ ಹಾರ ವಟಪತ್ರ ಶಯನ
ತಟಿತಕೋಟಿಸನ್ನಿಭ ಜಠರದೊಳಜಾಂಡ

ಕಟಹ ಹರಹಿಕೊಂಡ ಧಿಟ ಅದ್ಭುತ ದೈವ
ಪಟುತರ ಮೂರ್ತಿ ವಿಜಯವಿಠ್ಠಲ ವೆಂ
ಕಟರಮಣ ಸಂಕಟಹರಣ ೨

ತ್ರಿವಿಡಿ ತಾಳ

ಗುಣಹೀನದವನೆಂದು ಗಣನೆ ಮಾಡದೆ ನಿನ್ನ
ನೆನಹ ಪಾಲಿಸದೆ ಸುಮ್ಮನೆ ಇಪ್ಪ ಬಗೆ ಏನೋ
ಗುಣ ಒಂದಾದರು ಕಾಣೆ ಎಣಿಸಾಲಜಾಮಿಳನಲ್ಲಿ
ಗುಣವಂತ ಲಾಲಿಸೊ ಗುಣದಾಯಕ
ಅನುದಿನ ನಾ ಮರೆದು ಮರಣ ಕಾಲದಲಿ ನಂ
ದನ ನಾರಗನೆಂದು ನೆನದನಂತೆ
ಮನಮುಟ್ಟಿ ನಿನ್ನ ಸ್ಮರಣೆ ಮಾಡಿದನೆಂದು
ಗುಣವ ನೋಡದಲೆ ಪಟ್ಟಣಕ್ಕೆ ಕರಿಸಿದಿ ಅವನ
ಎಣೆಯಾರೊ ನಿನಗೆ ನಮ್ಮ ವಿಜಯವಿಠ್ಠಲರೇಯ
ಮನದಿಚ್ಛೆ ಕಾಮಧೇನುವೆ ಎನಗೆ ನೀನೆ ೩

ಅಟ್ಟತಾಳ

ನಂದನನು ಬಲು ಮಂದಮತಿಯಾಗೆ
ತಂದೆಗೆ ಬಲು ಚಿಂತೆ ಬಂದು ಘಟಿಸುವುದು
ತಂದ ಸತಿಯಲ್ಲಿ ಕುಂದಮತಿಯಾಗೆ
ತಂದ ಪುರುಷನಿಗೆ ಎಂದಿಗೆ-ಬಲು ಚಿಂತೆ
ಇಂದೀವರಾಂಬಕ ವಿಜಯವಿಠ್ಠಲ ನಿನ್ನ
ಪೊಂದಿದವರ ಕೆಡಲಿದಾದದು ಚಿಂತೆ ೪

ಆದಿತಾಳ

ತಡಮಾಡದಂತೆ ಎನ್ನ ಬಿಡದಲೆ ಕರೆದೊಯ್ದು
ಒಡೆಯ ನಿನ್ನಯ ದಿವ್ಯ ಅಡಿಗಳ ತೋರಿ ಭಕುತಿ
ಪಡೆವಂತೆ ಮಾಡಿ ಕೀರ್ತಿ ಪಡೆಯೊ ಮೆರೆಯೊ ಜಗ

ದೊಡೆಯ ದೇವರ ದೇವ ಬಡವನು ನಾನು ಪರ
ಒಡವೆ ವಿಜಯವಿಠ್ಠಲ
ತಡೆಯದಂತೆ ಮಾಡು ಪಾಪದ ಘಡೆಗಳು ಬಂದು ಎನ್ನ ೫

ಜತೆ

ಅಂತಃಕರುಣಿ ನೀನೆ ಅಂತರಾತ್ಮಕ ನೀನೆ
ಸಂತೋಷ ಪಾಲಿಸು ವಿಜಯವಿಠ್ಠಲ ಒಲಿದು ೬

೮೩

ಧ್ರುವತಾಳ

ಶರಣನಾಗುವೆ ಶರಣರ ಪರಿಪಾಲ
ಶರಣು ನಿನಗೆ ಅನಂತ ಶರಣು
ಶರಣಾಗತ ವತ್ಸಲ ಶರಣರ ಅಭಿಮಾನ
ಶರಣರಿಗೆ ವಜ್ಜರ ಪಂಜರ
ಶರಣೆಂದವರ ಭಾರಾ ಪರಿಪೂರ್ಣವಹಿಸುವ
ಶರಣು ಪೊಕ್ಕವರಘ ದಹಿಸುವನು
ಶರಣು ನಿನ್ನ ಪಾದಕ್ಕೆ ಶರಣು ನಿನ್ನ ಪಾದಕ್ಕೆ
ಶರಣೆಂಬದಕ್ಕೆ ಸುಮನವನೀಯೋ ಚರಣ
ಸ್ಮರಣೆಗೆಲ್ಲಿ ಸರಿಸಾಟಿಯಲ್ಲೆಂದು
ಪರಮಾ ಉತ್ತಮರು ವಿಸ್ತರಿಸುವರು
ಇರಳು ಹಗಲು ಒಂದರ ಘಳಿಗೆ ವಾಸರ
ದಂತೆ ಕರುಣವನು ಮಾಡಿ ಬರಿದಾಗದಂತೆ
ಹರಿ ನಿನ್ನ ನೆನವಂತೆ ಶರಣ ಒಡಗೂಡಿ
ಅರಿವುಮಾಡುವುದು ಪಾಮರಶಾಲಿಗೆ
ಅರಿದರ ಮಹಸ್ವಗತಿ ವಿಜಯವಿಠ್ಠಲರೇಯ
ಶರಣರ ಭಕ್ತರ ಭಕ್ತಗೆ ಕರಗುವಾ ದೈವ ೧

ಮಟ್ಟತಾಳ

ಸ್ನಾನ ಸಂಧ್ಯಾ ಜಪವೇ ಮೌನ ಧ್ಯಾನಂಗಳು
ದಾನ ಧರ್ಮಾವಳಿ ಏನೇನು ಮಾಡಿದರು
ಶ್ರೀನಿವಾಸನೆ ನಿನ್ನ ಜ್ಞಾನದಿಂದಲೆ ನೆನವನಿಗೆ ಸರಿಯುಂಟೆ
ಅನಂತ ಜನುಮದಲಿ ಹೀನ ಸಂಗತಿಯಿಂದ
ಏನೇನು ಬಂದಿರಲು ಜೇನು ಮುಗ್ಗಿದಂತೆ
ಕ್ಷೀಣವಾಗೋವಯ್ಯ ಏನೇನು ಕರ್ಮಗಳು
ಕ್ಷೋಣಿಯೊಳಗೇನೆಸಗೆ ಶ್ರೀನಾಥನ ನಾಮಾ
ಗಾನಕೆ ಸರಿಯುಂಟೆ ಗಾನಕೆ ಸರಿಯುಂಟೆ
ದೀನ ಪಾಲಕ ಸೂಕ್ಷ್ಮ ವಿಜಯವಿಠ್ಠಲ
ನೀನೆ ಪರದೈವ–ನೀನೆ ಜಗಧ್ಭರಿತಾ ೨

ತ್ರಿವಿಡಿತಾಳ

ಒಂದೆ ನಾಮವೆ ನೆನೆಯೆ ಎಂದೆಂದು ಪೋಗದು
ಸಂದೋಹ ಪಾಪಗಳು ಬೆಂದು ಪೋಗುವುವು
ಅಂದೆ ಇಂದೇವೆ ಇನ್ನೊಂದು ಸಿದ್ಧಿಸುವುದ
ಕೆಂದು ಯೋಚನೆಮಾಡಿ ನೋಡ ಸಲ್ಲ
ಬಂದು ದಿವಸ ಮನ ಬಂದಾಗಲು ಹರಿಗೋ–
ವಿಂದನೆಂದೆನಲಾಗಿ ಭಕುತಿಯಿಂದ
ಹಿಂದಾಗನುವೇಗದಿಂದ ಸಾಕುವನು
ನಂದ ಮತಿಯನಿತ್ತಾನಂದ ದೈವ
ಎಂದು ಕೇಳಿ ನಾನು ಬಿಂದು ನಿನ್ನನು ಕಾಯ್ದೆ
ತಂದೆ ಶ್ರೀ ವಿಜಯವಿಠ್ಠಲನೆ ಮನ್ನಿಪುದು ೩

ಅಟ್ಟತಾಳ

ಮನೆ ಮುಂದೆ ಪೀಯೂಷ ವನಧಿಯಿರಲು ಉದಾ
ಸೀನ ಮಾಡಿ ನೂರು ಯೋಜನ ಪೋಗಿ ಕೊಳ–
ಚೆನೀರನು ನೋಡಿ ಕೊಂಡಾಡಿ ತನು ರೋಮಾಂಚನ ಉಬ್ಬಿ
ಮನಕೆ ಬಂದ ಹಾಗೆ ಕುಡಿದು ದೇವರ ನೆನೆದು

ದಣಿದು ಬಾಯಾರಿದೆ ಗುಣಹಿನ ನಾನಾಗಿ
ಜನುಮಾದಿರಹಿತ ಶಿರಿ ವಿಜಯವಿಠ್ಠಲ
ಎನಗೊಂದು ಸಾಧನ ತೋರಿ ನಿನ್ನ ದಾಸನ್ನ ಮಾಡೋ ೪

ಆದಿತಾಳ

ಹಾರಿ ಹಾರಿ ಪಾರಲಾರೆ ಚೀರಿ ಕೂಗಿ ಕರೆಯಲಾರೆ
ಮೋರೆ ಮೇಲೆ ಎತ್ತಿಕೊಂಡು ಸಾರಿಸಾರಿಗೆನಲಾರೆ
ಆರು ಮಾಡಿದಂತೆ ಆರಾಧನೆ ಮಾಡಲಾರೆ
ಭಾರಕರ್ತ ಬ್ರಹ್ಮಣ್ಯ ವಿಜಯವಿಠ್ಠಲ ಕೇಳು
ಸೂರ ಮನವೆ ನಿನಗಲ್ಲದೆ ಬ್ಯಾರೆ ಎನಗೆ ಕರ್ಮವಿಲ್ಲ ೫

ಜತೆ

ನಾಮದ ಶರಣನ ಮಾಡು ಮನಮಥ ಜನಕ
ಕ್ಷೇಮಕೃತೆ, ವಿಜಯವಿಠ್ಠಲ ದಯದಿಂದ ೬

೮೪

ಧ್ರುವತಾಳ

ಸಾರಥಿಯಾಗಿ ಪಾರ್ಶ್ವದನಾಗಿ ಸಖನಾಗಿ
ವೀರಾಸನನಾಗಿ ಅನುಗಮನನಾಗಿ
ಸಾರ ದೂತನಾಗಿ ಸೇವಕನಾಗಿ ಬಿಡದೆ
ಬಾರಿ ಬಾರಿಗೆ ಸ್ತವನನಾಗಿ ನಿತ್ಯ
ಸಾರೆದಲಿದ್ದು ಸಂವರಕ್ಷಿಸು ದಾ
ತಾರನಾಗಿ ದೊರೆಯಾಗಿ ನೀನೆ
ಮಾರುಕೊಂಡವನಾಗಿ ಜನನಿ ಜನಕನಾಗಿ
ಹಾರೈಸಿ ಹರಿಕೆ ಕೊಡುವ ಹಿರಿಯ ನಾಗಿ
ದಾರಿ ತೋರುವನಾಗಿ ಧರ್ಮ ಮಾಳ್ಪವನಾಗಿ

ತಾರಕನಾಗಿ ತಾಮಸ ಕಳೆವನಾಗಿ
ಆರಿಗಾದರು ಅಸಾಧ್ಯ ಬೋಧನಾಗಿ
ಚಾರು ಮನೋಹರನಾಗಿ ಅಚಲನಾಗಿ
ಚಾರು ಮನೋಹರನಾಗಿ ಅಚಲನಾಗಿ
ಧೀರಾಧಿಧೀರ ಅವಧಾರು ಆಶ್ರಿತ ಜನರ
ಕೋರಿದಭೀಷ್ಟ ಕೊಡುವ ಕರ್ತನಾಗಿ
ಈ ರೀತಿ ನಿಂದು ನಿಂದು ಅನೂಹ್ಯನಾಗಿ
ವಾರ ವಾರಕೆ ಎನ್ನ ಪೊರೆವನಾಗಿ
ಧಾರುಣಿಯೊಳು ನೀನು ಭಕುತರ ಮನ್ನಿಪುದು ಸ
ತ್ಕೀರುತಿಯಿರಲಿಕ್ಕೆ ಮುಂಗಾಣದೇ
ಆರಾದರು ಒಂದು ಆರಂಭಿಸಿಕೊಂಡು
ನೂರಾರು ಭಾರ ಕೊಡುವೆನೆಂದವಗೆ
ನೀರ ಬೊಬ್ಬುಳಿಯಂತೆ ಇಪ್ಪ ಶರೀರವ
ಮಾರಿಕೊಂಡೆನೆಂಬ ಮನವಾಹುದೊ
ಪಾರತಂತ್ರ ರಹಿತ ನಿನ್ನ ಕರೆವ ನೆವದಿಂದ
ಮ್ಯಾರೆಯಿಲ್ಲದೆ ಸದಾ ಹೇಮವರುಷ
ಧಾರೆ ಎಡಬಿಡದೆ ಸುರಿವುತಿರೆ ಈಕ್ಷಿಸಿ
ಪೊರವಾಗಿ ಸವಿದು ಸುಖಿಸದಲೇ
ಕ್ಷೀರವಾರುಧಿಯೊಳಗಿಪ್ಪ ಮಾನವ ನಿತ್ಯ
ಕ್ಷಾರೋದಕೆ ಎನ್ನ ಮನಸು ಇಂತೊ
ಪೊರೆವೆನ್ನ ನೋಡಲು ಈ ಸೌಖ್ಯಅನುಭವಿಸಿ
ಸೂರೆಗೊಳಬಾರದೆ ನಿನ್ನ ಪುರವ
ಹಾರಿ ಪೋಗುತಲಿದೆ ಕಂಡದ್ದು ಹಂಬಲಿಸಿ
ಆರಾದರು ನುಡಿದರೆ ಆಶೆಗೊಂಡು
ಸೇರಿ ಕಾಲವ ಕಳೆವೆನೆಂಬ ವಿಚಾರದಲ್ಲಿ
ಧಾರುಣಿಯೊಳು ಬಾಳುವೆ ಗತಿ ನೀ ಎಂದು
ನೀರಜದಳನೇತ್ರ ವಿಜಯವಿಠ್ಠಲ ನಿನ್ನ
ಆರಾಧನಿಯ ಮಾಡುವ ಮಹಿಮೆ ತಿಳಿಯದಾದೆ ೧

ಮಟ್ಟತಾಳ

ಅಧಿಕಾಧಿಕಪೇಕ್ಷೆ ಮಾಡಿ ಮಾಡಿ ನಾನು
ಪದವಿಗೆ ಬಲು ದೂರವಾಗಿ ಪೋಗುವೆನಯ್ಯ
ಪದೋಪದಿಗೆ ಯಿಂಥ ಬದ್ಧಿಯಲ್ಲದೆ ಲೇಶ
ಸದಮಲ ಮತಿ ಮಾರ್ಗ ಕಾಣೆನೊ ಕಮಲೇಶ
ಹೃದಯದೊಳಗೆ ಇನಿತು ಯೋಚನೆಯಲ್ಲದೆ
ಒದಗುವುದು ಹಿಂದಣ ಕರ್ಮದ ಫಲವು
ವಿಧಿ ಜನಕ ನಮ್ಮ ವಿಜಯವಿಠ್ಠಲರೇಯ
ನಿಧಿ ದೊರಕಿದವನು ಕಾಸು ಹುಡುಕಿದಂತೆ ೨

ತ್ರಿವಿಡಿತಾಳ

ಇಂತು ನೀನೆ ಒಲಿದು ರಕ್ಷಿಸುತಿರಲಾಗಿ
ಭ್ರಾಂತಿಗೊಂಡ ಜೀವ ಮನೆಯೊಳಗೆ ನಾನಾ
ನಂತ ಬಗೆಯಿಂದ ಬೇಡಿದ ಪದಾರ್ಥ
ಅಂತು ಇಲ್ಲದೆ ಮುಂದೆ ಇರಲು ನಂಬಿಕೆ ಸಾಲದೆ
ಹಂತರ ಒಡಗೂಡಿ ನೂರಾರು ಯೋಜನ
ಸಂತೆಯಿರಲು ಪೋಗಿ ತಾ ಹೆನೆಂಬಂತೆ
ಕಂತು ಜನಕ ನಿನ್ನ ಕರುಣತ್ವ ತಿಳಿಯದೆ
ಮುಂದೆ ಯೋಚಿಸುವೆನೊ ಮಂದನಾಗಿ
ಅಂತರಂಗದಲಿಪ್ಪ ವಿಜಯವಿಠ್ಠಲ ನಿನ್ನ
ಚಿಂತೆಗೆ ಬಲು ವಿಘ್ನ ನಿಲ್ಲದೆ ಬರುತಿವೆ ೩

ಮಟ್ಟತಾಳ

ಅವುದಾವುದೊ ಸಾಧನ ಮ
ತ್ತಾವುದು ಸಾಧನ ಕಾಣೆನೊ
ಸರ್ವವೇದಗಳಲ್ಲಿ ಆವಾಗ ಆಜಭವಸುರರೆಲ್ಲ ಶೋಧಿಸೆ
ದೇವೇಶ ನಿನ್ನ ನಾಮ ಒಂದೆ ನಮಗುಪ

ಜೀವನವಾಗಿದೆ ಎಂದು ಜಪಿಸುವರು
ಪಾವನ ಮತಿಯ ಕೊಡುವ ಪರರ ಸೇವೆಯ ಮಾಡೆ
ಧಾವಂತಗೊಂಬ ಪ್ರಯಾಸವ ಬಿಡಿಸುವ
ಮಾವಿನ ಫಲದಂತೆ ಕಲಿಯುಗದಲ್ಲಿ ಪುಟ್ಟಿ
ಜೀವಿಸುವುದು ಕೇಳು ಕಮಲಲೋಚನನೆ
ಲಾವಕವಾಗಿದ್ದ ಮನೋದೋಷ ಓಡಿಸೆ
ಈವದೊ ಎನಗೆ ಭಕುತಿ ಲಾಭ ಅನುದಿನ
ಕಾವ ಕರುಣಿ ನಮ್ಮ ವಿಜಯವಿಠ್ಠಲರೇಯ
ಆವಾವ ಕಲ್ಪಕ್ಕೆ ಪರಮಾನುಗ್ರಹ ಮಾಡು ೪

ಆದಿತಾಳ

ರಮಾ ಬ್ರಹಾದಿಗಳಿಗೆ ಉತ್ತಮೋತ್ತಮ ನೀನೆ
ಅಮಮ ನಿನ್ನಾಧೀನ ತ್ರಿಜಗವೆಂದಿಗೆ ಸತ್ಯ
ಸಮವಿಲ್ಲ ನಿನಗೆಲ್ಲಿ ಸರ್ವಸ್ವತಂತ್ರನೆ
ಅಮಿತಾನಂತ ಕಲ್ಯಾಣ ಗುಣಪರಿಪೂರ್ಣ ಸಂಪೂರ್ಣ
ಅಮಲ ಮೂರುತಿ ಅಖಿಳ ದೋಷ ಗಂಧವಿದೂರ
ಕ್ರಮದಿಂದ ಮಕ್ತರನು ಪೊರೆವ ಅಪ್ರತಿಹತನೆ
ನಮಿಸುವೆ ನಾನಾ ಪರಿ ಕಾಲಕಾಲಕೆ ಇದನೆ
ಶಮೆದಮೆಯಿಂದ ತಿಳಿದು ಗತಿಗೆ ಪೋಪ ಮಾರ್ಗ
ನಿಮಿಷ ಮೊದಲು ಮಾಡಿ ಅಲ್ಲಿ ಪರಿಯಂತವಾಗಲಿ
ಸಮಜ್ಞಾನಾನಂದರೂಪ ವಿಜಯವಿಠ್ಠಲರೇಯ
ಶ್ರಮವೆ ಹರಿಸಿ ನಿನ್ನ ದಾಸರೊಳಗಿಡು ೫

ಜತೆ

ಬೇಡುವೆ ನಿನ್ನನು ಕರದಲ್ಲಿ ಇದನೆ ದಯ–
ಮಾಡು ಮಾನಸದಲ್ಲಿ ವಿಜಯವಿಠ್ಠಲರೇಯ ೬

೮೫

ಧ್ರುವತಾಳ

ಸಿಂಧುತನಯಳರಮಣ ಸಿಂಧು ಬಂಧನ ಪಾಲ
ಸಿಂಧುಶಯನ ಸಿಂಧು ಮೂರ್ತಿ
ಸಿಂಧು ರಾಜಾಹರಣ ಸಿಂಧುರಾಪಾಲಾ ಪಾಲಿ-
ಸಿಂಧು ಎನ್ನನು ದೀನ ಸಿಂಧುಶಯನ
ಸಿಂಧು ಮಥನ ಭವ ಸಿಂಧುನಯನ
ಸಿಂಧು ವಿರೋಧಿ ನೀತ ಸಿಂಧುಸಂಚರಣ
ಸಿಂಧು ಮಧ್ಯ ಮಂದಿರ ವಿಜಯವಿಠ್ಠಲ ಸಪುತ
ಸಿಂಧು ಮೀರಿದ ಭವಸಿಂಧು ದಾಟಿಸು ದೇವ ೧

ಮಟ್ಟುತಾಳ

ಆವುದಾವುದು ಎನಗೆ ಜೀವಕೆ ಸಾಧನವು
ಕಾವನಯ್ಯನೆ ಕರುಣಿ ಕಾವ ದಾತಾರ
ಕಾವುರಿ ಮದದಿಂದ ನೋವು ನೋವಾದೆನೊ
ಆವುದು ನೆಲೆಗಾಣೆ ಆವುದು ನೆಲೆಗಾಣೆ
ಈ ವಿಷಯಂಗಳ ಕಾವಲಿ ಒಳಬಿದ್ದು
ಬೇವು ಮೆದದಾ ಮಾನವನಾದೆ
ಶ್ರೀವನಿತೆಯರಸ ವಿಜಯವಿಠ್ಠಲರೇಯ
ಭಾವುಕ ಮೂರುತಿ ಲಾವಕನ ಕಾಯೊ ೨

ತ್ರಿವಿಡಿತಾಳ

ಎಂತು ಮಾಡಲಿ ಹರಿಯೆ ಅಂತರ ಶುಚಿಯಾಗಿ
ಶಾಂತವಾಗಿಪ್ಪ ಪಂಥ ತೋರದು ಕಾಣೊ
ಚಿಂತೆಯಲಿ ಈ ಮನಸು ನಿಂತಲ್ಲಿ ನಿಲ್ಲದೆ
ಸಂತತ ಕುದಿದು ಲೋಕಾಂತಕೆಳವುತಿದೆ
ಕಾಂತಾರದೊಳು ನಿಂದು ಅಂತರಿಕ್ಷಕೆ ಬೆದರಿ

ದಂತವ ಕೀರಿದವನಂತೆ ಜೀವಿಸಿದೆನೊ
ಸಂತೋಷ ಗುಣನಿಧಿ ವಿಜಯವಿಠ್ಠಲ ನಿನ್ನ
ಚಿಂತಿಗೆ ಮನಸು ಏಕಾಂತದಲ್ಲೆರಗದು ೩

ಅಟ್ಟತಾಳ

ದಶ ಇಂದ್ರಿಯಗಳು ಇದ್ದೇನು ಫಲವಯ್ಯ
ವಶಮಾಡಿ ಮನಸು ನಿಲ್ಲಿಸದನ್ನಕ
ಪುಶಿಯಲ್ಲ ಪರಗತಿ ಸಾಧನವಾಗದು
ಹಸಿಯ ಮರಕೆ ಬೇಯಿಸ ತೊಡಕಿದರೆ
ಮುಸುಕಿ ಕುದಿದು ಕೊನೆ ಒಸರುವ ತೆರದಂತೆ
ವಶವಲ್ಲ ಸಂಸಾರ ಮುಸುಡಿಯೊಳಗೆ ಬಿದ್ದು
ಅಸುವ ಶೋಷಣವಾಗಿ ಕುಸಿದು ಅಳಲುವೆ
ಹಸನಾವುದು ಕಾಣೆ ವಿಜಯವಿಠ್ಠಲರೇಯ
ಘಸಣೆಗೊಳಿಸುವ ತಾಮಸವನೆ ಕೆಡಿಸೊ ೪

ಆದಿತಾಳ

ಅದ್ಭುತ ಕರ್ಮದೊಳು ಬಿದ್ದು ಬಯಲಾಸಿಯೆ
ಸಿದ್ಧವೆಂದು ತಿಳಿದು ಬಧ್ಧಿಪಲ್ಲಟನಾದೆ
ನಿದ್ರಾಲಸ್ಯಾಹಾರ ಮೆದ್ದು ಮಂದನಾಗಿ
ಕ್ಷುದ್ರನಡತೆಯಲ್ಲಿ ಪೊದ್ದಿದೆ ಇಹದೊಳು
ಅಬ್ಧಿಗೊಡೆಯ ವಿಜಯವಿಠ್ಠಲ ಎನ್ನ ಪೊರೆವ ದಾ
ರಿದ್ರ ಮನಸು ದೂರಮಾಡೊ
ಶಬ್ದಗಳಿಗಾಗೋಚರನೆ ೫

ಜತೆ

ಬಿಡಿಸು ಬಿಡಿಸು ಜೀಯಾ ಭವದ ವ್ಯಾಕುಲವನ್ನು
ಮೊಡಮಡುವೆ ನಿನ್ನ ಪಾದಕೆ ವಿಜಯವಿಠ್ಠಲ ೬

೮೬

ಧ್ರುವತಾಳ

ಸಿಕ್ಕಿದೆ ಸಂಸಾರ ಸಿಕ್ಕಿನೊಳಗೆ ನಾನು
ಸಿಕ್ಕು ಬಿಡಿಪರಿಲ್ಲ ರಕ್ಕಸಾರಿ
ತ್ವಕ್ಕುವ ಮಿಕ್ಕಾದ ಕಕ್ಕಸ ಇಂದ್ರಿಯಗಳು
ತಿಕ್ಕಿ ಮುಕ್ಕುತಲಿವೆ ಮುಕ್ಕುಂದನೆ
ತೆಕ್ಕೊ ಕರುಣವನ್ನು ಇಕ್ಕೊ ವಂದನೆ ನಿನಗೆ
ತುಕ್ಕುವುದೋ ಕಳಿಯೋ ಚಕ್ಕನೀಗ
ಚೊಕ್ಕಟ ಮನವೀಯೊ ಸೊಕ್ಕಿದ ಮದವಳಿಯೊ
ದಕ್ಕಿದೆ ಕೆಲಕಾಲಕ್ಕೆ ನಿನಗೆ ಫಕ್ಕನೆ ಕರವಿಡಿದು
ಇಕ್ಕಟ್ಟಿನೊಳಗಿಂದು ದಿಕ್ಕುಗೆಟ್ಟವನ ಸಾರಕ್ಕೆ ಕರಿಯೊ
ಬಕ್ಕದಾಸನು ನಾನು ಇಕ್ಕೆಲ್ಲ ಭಕ್ತರೊಳಗೆ
ತಕ್ಕದನಿತ್ತು ಎನಗೆ ಪುಕ್ಕಟೆ ಶ್ರಮ ಬಿಡಿಸೊ
ಹಕ್ಕಿವಾಹನದೇವ ವಿಜಯವಿಠ್ಠಲ ರೇಯಾ
ತಕ್ಕ ಹಲವು ಬಗೆ ಹಕ್ಕಲ ಗೈಸೋದು ೧

ಮಟ್ಟತಾಳ

ಸುಖವುಳ್ಳವನಿಗೆ ದುಃಖಲೇಪನ ಹಚ್ಚಿ
ಅಖಂಡ ಕಾಲದಲ್ಲಿ ಅಖಿಳ ಬಗೆಯಿಂದ
ನಖಶಿಖ ಪರಿಯಂತ ಮುಖಂಡ ಪಾಪಗಳ
ಮುಖಕೆ ಎನ್ನನು ಹಾಕಿ
ಸಖನಾಗಿದ್ದು ಅಣಕವಾಡುವುದೇನೋ
ಮುಖಕೆ ಪಾಲನ ನಮ್ಮ ವಿಜಯವಿಠ್ಠಲರೇಯ
ಶಿಖಿನುತ ರವಿ ಮಯೂಖ ಸಮಶುಭ ಚರಣ ೨

ತ್ರಿವಿಡಿತಾಳ

ದುರಿತ ಜೀಮೂತವಾತ
ನಿರುತ ಶುಭಸನ್ನುತ
ಚರಿತಾ ಗುಣವಂತ
ಭರಿತ ಭಾಗ್ಯವಂತ
ಮರುತಾದಿಗಳ ತಾತಾ
ಅರಿತ ಭಕುತಿ ವ್ರಾತ
ಬೆರೆತ ಪಂಚಭೂತ ಉರಿ ತಾಪಕ ರಹಿತ
ತ್ವರಿತ ನೆನವೆ ಪ್ರೀತ
ಕರೆತಾರೊ ಎಲೊ ದಾತ
ಮರೆತಾರೊ ಎನಗೆತ್ತ
ಹರಿತೋರದು ಸುತ್ತ
ಸುರತರುವೆ ತುಂಗ ಸಂತರಲ್ಲಿ ನಿಂತ ವಿಜಯವಿಠ್ಠಲಜಾತ
ಭರತಗ್ಗಿಸು ಮಲತ ೩

ಅಟ್ಟತಾಳ

ಮಲಿನ ಹೇಸಿಕೆಗೂಡು ಹೊಲಸು ರಕುತ ಮಾಂಸ
ಎಲವು ಸುತ್ತಿದ ನರ ಬಲಿದ ಬಳ್ಳಿಗಳು ವೆ
ಗ್ಗಳ ಹುಳುವಿನಕೊಂಡ ಬಿಲಗಳು ಒಂದೆಂಟೆ
ರಲಿ ಸೋರುವ ಹೀನ ಜಲ ಪೂರಿತವಾಗಿ
ಅಳಲಿಕೆ ಬಳಲಿಕೆ ತೊಳಲುವ ತೊಳಸುವ
ಒಳಗೆ ಹೊರಗೆ ಬೆಂದು ನಲುಗಿ ಹಲವು ಹಂ
ಬಲ ಬಿಡದಲೆ ಬೆಂಬಲವಾಗಿ ಕೆಲಕಾಲ
ತಿಳಿದು ಬಲಿದು ಆಶೆ ಬಲಗೊಂಡು ಚಂಚಲ
ಉಳಿದಾದ ಕ್ಲೇಶದ ಬಲೆಯೊಳಗೆ ಇಪ್ಪೆ
ನಳಿನಾಕ್ಷ ವಿಜಯವಿಠ್ಠಲರೇಯ ಬಿನ್ನಹ
ಒಲಿದು ಕೇಳುವುದು ಒಡಲ ಉಮ್ಮಳಿಕೆಯ ೪

ಆದಿತಾಳ

ಇನ್ನಾದರೆ ಬಿಡಿಸೊ ಬನ್ನ ಬಡಿಪ ಜನುಮ ಈ
ನಿನ್ನಾಳಿನ ಮನೆಯ ಕುನ್ನಿಯಾದವನೊ
ಕಣ್ಣಿನಿಂದಾದರು ಎನ್ನ ಮಾತರನೋಡು
ಮನ್ನಿಸು ಮುದದಿಂದ ನಿನ್ನವನಾದ ಮೇಲೆ
ಎನ್ನ ಪಾಲಿಸಿದರೆ ನಿನ್ನಾರು ಮೆಚ್ಚುವರೊ
ಬಣ್ಣಿಸುವೆನು ನಿತ್ಯ ವಿಜಯವಿಠ್ಠಲರೇಯ
ಎನ್ನಾಧೀನದದೈವ ಚಿನ್ನುಮಯ ಮೂರುತಿ ೫

ಜತೆ

ಸಾಕು ಮಾಡು ತಂದೆ ಸಂಸಾರದೊಳಗಿಂದ
ಶ್ರೀಕರ ಮೂರುತಿ ವಿಜಯವಿಠ್ಠಲರೇಯ ೬

೮೭

ಧ್ರುವತಾಳ

ಸುಖದ ದೈವವೆಂದು ಸತತದಲಿ ಸ್ತುತಿಸಲು
ಮುಖವ ತಿರುಹುವರೆ ಮುರವಿರೋಧಿ
ಅಖಿಳ ಲೋಕದಲ್ಲಿ ಭಜಿಸುವ ಭಕ್ತರಿಗೆ
ಸಖನಾಗಿ ರಕ್ಷಿಸುವ ಸರ್ವೋತ್ತಮ
ಪಖದಲ್ಲಿಯಿಟ್ಟು ಪರಿಪಾಲನೆಯ ಮಾಡಿ
ದುಃಖದಿಂದ ದೂರನೆನಿಸೊ ದುರ್ಲಭನೆ
ಮುಖಜನು ನಾನಯ್ಯ ಮುಕುತಾರ್ಥ ಬಾಹೊದೇನೊ
ನಿಖಿಳ ತಾಮಸಂಗಳು ನಿನಗೆಲ್ಲೊ
ಅಖಂಡ ಪ್ರತಾಪ ನಮ್ಮ ವಿಜಯವಿಠ್ಠಲ ನಿನ್ನ
ನಖವೆಂಬೊ ಸುರತರು ನೆಳಲಿಂಬುಗೊಡೊ ೧

ಮಟ್ಟತಾಳ

ಜನನಿ ತನುಜಗೆ ಪಾಲು ಕುಡಿಸುವಾಗ
ನೊಣ ಬಿದ್ದಿರಲು ಉದಾಸೀನ ಮಾಡುವಳೇನೊ
ಜನಮ ಜನುಮಕೆ ಜನನಿಯಾಗಿ ನೀನೆ
ಎನಗೊಲಿದಿರಲು ಸಾಧನ ಪುಣ್ಯವೆಂಬೊ ಪಾ
ಲಿನ ಮಧ್ಯದಲಿ ಕಪ್ಪನೆ ಬಿದ್ದಿರಲುದಾ
ಸೀನ ಮಾಡುವರೇನೊ ಸನಕ ಸನಂದನ ಸರ್ವೋತ್ತಮ
ಸನತ್ಕುಮಾರ ವಂದ್ಯ ವಿಜಯವಿಠ್ಠಲರೇಯ
ಕ್ಷಣ ಪ್ರತಿಕ್ಷಣಕೆ ಎನ್ನನು ಪಾಲಿಪ ದೈವ ೨

ತ್ರಿವಿಡಿತಾಳ

ಉಪವಾಸದವನಿಗೆ ಊರು ತುಂಬಿದರೇನು
ಅಪಹಾಸಗೊಳಿಸುವ ಗೆಳೆಯನಾದರೇನು
ಕಪಟ ಬಿಡದವನ ಕೂಡ ಉಂಡರೆ ಏನು
ಕುಪಿತ ಬಿಡದವನು ಕುಲಜನಾದರೆ ಏನು
ಉಪಕಾರರಿಯದವನು ಊಟಕೆ ಬಂದರೇನು
ಹಪ ಹಪ ಉಣಿಸುವ ಆಪುತನಾದರೆ ಏನು
ಚಪಲಾತನದಲಿಯಿದ್ದ ಸತಿಯ ಸಂಗತಿ ಏನು
ಕೃಪೆಯ ಮಾಡದವನ ಚರಣ ತೊಳೆದರೇನು
ತಪಸಿಗಳೊಡೆಯ ನಮ್ಮ ವಿಜಯವಿಠ್ಠಲ ನಿನ್ನ ಆ–
ಲಾಪ ಕಾಣದಿರಲಾ ಅಪವರ್ಗದಗೊಡಿವೇನೊ ೩

ಅಟ್ಟತಾಳ

ಇಷ್ಟು ದಿನ ನಿನ್ನ ಹಾರೈಸಿಕೊಂಡವನ
ಭ್ರಷ್ಟನ ಮಾಡಿ ನೋಡುವರೇನೊ ಹರಿಯೆ
ಮೊಟ್ಟ ಮೊದಲೆ ಸುಮ್ಮನಿದ್ದರೆ ನಿನಗೆ ನಾ
ನಿಷ್ಟು ಪರಿಯಲ್ಲಿ ಚಾಲ್ವರಿವೇನೆ
ನಿಷ್ಠನೆಂದೆನಿಸಿ ಬಲು ಪರಿಯಿಂದಲಿ
ಸೃಷ್ಟಿಯೊಳಾಭಾಸನೆನಿಸುವರೆ

ತಲೆಬಾಗಿ ಕರಗಳ ಮುಗಿದು ನಿಂದೆ
ಹಲವು ಜನನದಲ್ಲಿ ಪುಟ್ಟಿ ನೊಂದೆ
ಸುಲಭ ಜನನದಲ್ಲಿ ಪುಟ್ಟಿ ನೊಂದೆ
ಸುಲಭ ಕಾಣದೆ ಪೊಕ್ಕೆ, ನಿನ್ನ ಹಿಂದೆ
ಹಲುಬಿ ಪೋಗುವಂತೆ ಮಾಡದಿರು ಎಂದೆ
ಜಲಜಾಕ್ಷ ಮಹಾಂಬುಧಿ ವಿಜಯವಿಠ್ಠಲ ಎನ್ನ
ಬಲು ದೂರಮಾಡೆಂದೆ ಸಲಹೊ ತಂದೆ ೧

ಮಟ್ಟತಾಳ

ಜಲದೊಳು ಜಲ ಹಾಕಿ ಪ್ರಳಯ ಕಾಲದ ತನಕ
ಕಲಸಿ ನಾದಿದರದು ಫಲಿತವಾಗುವುದೇನು
ಇಳಿಯೊಳಗೆ ಉಳ್ಳ ಹಲವು ದೈವರಿಗೆ ಕೇ-
ವಲ ಚಾಲ್ವರಿದರೆ ಹಲಬುವುದಲ್ಲದೆ
ಬಳಲಿಕೆ ಪೋಗೋದೇನಯ್ಯ
ಕುಲಗುರು ಅಪ್ರಯೇಯಾತ್ಮ ವಿಜಯವಿಠ್ಠಲ ನಿನ್ನ
ಸುಳುವಾದರೆ ನಾನು ಬಲು ಸುದೈವನು ೨

ತ್ರಿವಿಡಿತಾಳ

ಮುಖ್ಯ ದೈವವೆ ನೀನೆ ಮೂರು ಲೋಕಕೆ ಎಂಬೊ
ಆಖ್ಯಾನ ಕೇಳಿ ಅತಿ ಆತುರದಲ್ಲಿ
ಸೌಖ್ಯದಿಂದಲಿ ನಂಬಿ ಎಲ್ಲ ಕರ್ಮವ ತೊರೆದು
ಐಕ್ಯತನವೆ ಬಿಟ್ಟು ದಾಸ್ಯಭಾವದಲ್ಲಿ
ಇಕ್ಕೆಲದವರನು ದೂರವಾಗಿ ಜರೆದು
ಮುಖ್ಯ ಪ್ರಾಣನ ಸಹಿತವಾಗಿದ್ದು ಎನಗೆ
ಸಖ್ಯವಾಗಿ ಇದ್ದು ನಿತ್ಯ ಪಾಲಿಸುವುದು
ಪ್ರಖ್ಯಾತಮೂರುತಿ ಶ್ರೀ ವಿಜಯವಿಠ್ಠಲ ೩

ಅಟ್ಟತಾಳ

ಯೋನಿಜನಾಗಿ ತೊಳಲಿ ಬಂದುದಕಿನ್ನು
ಏನು ಕಾಣೆನೊ ಎಳ್ಳಿನಿತು ಸಾಧನ ಸಂಪ–
ತ್ತಾನು ಒಂದಾರು ಅನಂತ ಜನುಮಕ್ಕೆ
ಆತನಿಗೆ ಪನ್ನೀರು ಸ್ನಾನ ಮಾಡಿಸಿದ, ತೆ–
ರನಾಯಿತಯ್ಯ ಅರಿಗೆ ದೂರಲಿ
ನೀನಲ್ಲದೆ ಮತ್ತಾರನು ಕಾಣೆನೊ
ಸಾನಂದ ಸಾತ್ವಿಕ ವಿಜಯವಿಠ್ಠಲ ಕರು
ಣಾನಂದ ವಿನೋದ ಎನ್ನ ಮನದೈವ ೪

ಆದಿತಾಳ

ಅಂತರಂಗದಲ್ಲಿ ನಿರಂತರಂತರ ನಿನ್ನ ರೂಪ
ಸಂತೋಷದಲ್ಲಿ ತೋರಿ ಸಂತಾಪವನು ಬಿಡಿಸೊ
ಭ್ರಾಂತಿಗೊಳಿಸದೆ ವಿಶಿಷ್ಟ ವಿಜಯವಿಠ್ಠಲ
ಅಂತಿಕಾಲಕ್ಕೆ ನಿನ್ನ ಚಿಂತೆ ಒಂದನೀಯೊ ೫

ಜತೆ

ವಿಷಯಾದಿಗಳಿಗೆರಗದಂತೆ ಒಳಗೆ ನಿಂದು ಕಾಯೊ
ವಷಟ್ಕಾರ ವಿಜಯವಿಠ್ಠಲ ಧ್ಯಾನಕ್ಕೆ ಬಾರೋ ೬

೯೦

ಧ್ರುವತಾಳ

ಸೇರಿದೆನೊ ಬಂದು ಸಂಕಟದಲ್ಲಿ ನೊಂದು
ತಾರಿ ತುಟಿಯಾರಿ ದಾನವಾರಿ
ಘೋರವಾದ ಕ್ರೂರರು ಒಳಗೆ ಐ
ವಾರು ಒಂದಾಗಿ, ಮೆದ್ದಾರು ಚೆನ್ನಾಗಿ
ನೂರು ನೂರು ಬೇರು ಬಲ್ಲನೆಂದರೆ ಮೂರು
ಬಾರಿ ಕುಡಿಸಿದರು ಬಂದೊಂದು ಸೇರು

ಪುರಾತನ ನಾನು ವಿಜಯವಿಠ್ಠಲ ಪ್ರೇಮ
ಆರೈದು ಸಲಹುವವರ ಕಾಣೆ ಬಲ್ಲವರ ೧

ಮಟ್ಟತಾಳ

ವಿಷಪಾನಗಳಲ್ಲಿ ನಸುಗುಂದಿದೆ ನವೆದು
ಮುಸುಕಿತು ರೋಗ ಕಾಣಿಸಲಾರದೆ ಉ–
ಬ್ಬಸ ಬಡುತಲಿಪ್ಪೆ
ಅಶ್ವತ್ಥನಾಮಕನೆ ವಿಜಯವಿಠ್ಠಲನೆ ಎನ್ನ
ಅಸುವನು ನಿರ್ವಹಿಸಲಾರೆನೊ ಇನ್ನು ೨

ರೂಪಕತಾಳ

ಎಂದಿಗಾದರು ಒಮ್ಮೆ ಪುಣ್ಯವಂತರಿಂದ
ಒಂದು–ದಿನ ನಾಮಾಮೃತವ ಪಾನವನು ಮಾಡೆ
ಬಿಂದು ಮಾತುರ ಕಾಯಕೆ ಆಗಗೊಡದೆ
ಮುಂದುಗೆಡಿಸುತಿದೆ ಮುನಿದು ಮುನಿದು ನಿತ್ಯ
ಬೆಂದು ಹಸಿಮರ ತುದಿಯಲ್ಲಿ ಕುದಿದಂತೆ
ಕಂದಿ ಕುಂದಿಸಿ ಎನ್ನ ತಿಕ್ಕಿಮುಕ್ಕುತಲಿವೆ
ತಂದುಕೊಂಬೆನೆ, ಜೀರಣಕೆನಲು, ಸುವರ್ಣ
ಬಿಂದು ವಿಜಯವಿಠ್ಠಲನೆಂದೆಂದಿಗೆ ಎನ್ನಿಂದಾಗದು ದೇವ ೩

ಝಂಪಿತಾಳ

ವಿದ್ಯೆ ಎಂಬುದು ಇಲ್ಲ ಮುದ್ದೆ ಘಳಿಸಿದ್ದಿಲ್ಲ
ಉದ್ದಿನಷ್ಟು, ಸೇವೆ ಮಾಡುವನು ಅಲ್ಲ
ಉದ್ದಕ್ಕೆ ನಿನಗಡ್ಡ ಬಿದ್ದು ದೈನ್ಯದಲಿ, ಪಾ–
ದದ್ವಯಕೆ ಎರಗುವೆನು ಉದಧಿಶಯನ
ಉದ್ಧಾರವನು ಮಾಡು ಕ್ಷುದ್ರರಿಕ್ಕಿದ ವಿಷವ
ಮದ್ದು ಪರಿಹರಿಸುವುದು ಮಧುಸೂದನ
ಸದ್ಗತಾನಾಮ ಶ್ರೀ ವಿಜಯವಿಠ್ಠಲರೇಯ
ಹೊದ್ದಿದೆನು ಎನ್ನ ಅವಿದ್ಯ ಮಾಡದಿರು ೪

ತ್ರಿವಿಡಿತಾಳ

ಘನ ವೈದ್ಯ ನೀನು ಒಬ್ಬನೆ ಎಂದು ಸ್ತುತಿಯಿಂದ
ಅನಿಮಿಷಾವಳಿ ಮುನಿಸನಕಾದ್ಯರು
ವಿನಯದಲಿ ಪೇಳಲರ್ಜುನ ಮಿಕ್ಕರವರು ಆ-
ರ್ಜನೆ ಮಾಡಿ ವಿಷಪಾನವನು ಪರಿಹಾರದಿಂದ
ತನು ಶುದ್ಧವಾದರೆಂಬೋದು ಮನಕೆ
ಧನವಂತ್ರಿ ವೈದ್ಯನೆ ನಿನಗೆ ತೋರಿತು ಕಾಣೊ
ಪುನರ್ವಸುನಾಮ ಸಿರಿ ವಿಜಯವಿಠ್ಠಲ ಎನ್ನ
ಗಣನೆ ಮಾಡುವುದು ಸುಜನರ ತರುವಾಯ ೫

ಅಟ್ಟತಾಳ

ನಾರಾಯಣನೆಂಬ ವೀರವೈದ್ಯನ ಕಂಡ
ಕಾರುಣ್ಯದಲಿ ತನ್ನ ಚರಣಾಂಬಿಲಿ ಚಿಂ
ತಾರುತುನ ಮಾತ್ರೆ ಅಂದು ಪೂರ್ಣವಾಗಿ
ಕಾರಕೊಟ್ಟನು ನೋಡು ಕರದು ಸಮೀಪಕ್ಕೆ
ಶಾರಿರವೆ ಉಂಡು, ಎದಿಗೆ ಹತ್ತಿದ ಮದ್ದು
ಕಾರಿಸಿತು ಬಹು ವ್ಯಾಪ್ತವಾಗಿದ್ದದ್ದು
ಪೂರಾಯಿತ ನಾಮಾ ವಿಜಯವಿಠ್ಠಲ ಮುಂದೆ
ಪೊರೆವ, ದುರುಳರು ಸೇರದಂತೆ ಒಲಿದು ೬

ಆದಿತಾಳ

ಮುಂದಾದರು ದುರುಳ ಇಂದ್ರಿಯಗಳಿಂದ ಬಪ್ಪ
ವೃಂದ ರೋಗಗಳಿಗೆ ಇಂದು ತನ್ನಯ ದಯವೆಂಬೊ
ಸಿಂಧೂರ ಮಾತ್ರೆಯನ್ನು ತಂದು ಲೇಪಿಸಿದ, ಗೋ
ವಿಂದ ವಿಜಯವಿಠ್ಠಲ ಬಂದು ಎನ್ನ ನಾಲಿಗ್ಗೆ ೭

ಜತೆ

ಬಹು ದಿನದಲಿ ಇದ್ದ ಭವರೋಗ ಹಿಂಗಿತು
ಸಹಿ ವಿಷ್ಣು ವಿಜಯವಿಠ್ಠಲ ವೈದ್ಯನಿಂದಲಿ ೮

೨. ನಿವೇದನಾತ್ಮಕ ಸುಳಾದಿಗಳು

ವಿಜಯವಿಠಲನ ಸ್ತೋತ್ರಗಳು

೯೧

ಧ್ರುವತಾಳ

ಅಕಳಾಂಕ ಚರಿತಾ ನಿಷ್ಕಳಂಕಾಭರಣಾ
ಅಖಿಳ ಜಗತ್ತಿನ ಸಂತತ ಧಾರಾ
ಲಕುಮಿ ಕುಚ ಕುಂಕುಮಾಂಕಿತ ರಜೋ ಭೂಷಾ
ಅಖಿಳ ಜೀವರಿಗತ್ಯಂತ ಭಿನ್ನಾ
ಶಕಟಾಸುರ ಭಂಜನ ನಿತ್ಯನಿರಂಜನ
ಮುಕುತಿ ಪ್ರದಾಯಕ ಪರಿಪೂರ್ಣ ರೂಪಕ
ಶಕುತನಿಗೆ ಮುಕುತಿಯನಿತ್ತ ಸರ್ವಸಮರ್ಥಾ
ರುಕುಮನ್ನ ಮಾನಭಂಗ ಚಾಪಸಾರಂಗ
ಭಕುತ ಪುರಂದರರ ಹೃದಯಾಬ್ಜಭೃಂಗಾ
ಶುಕನುತ ಯಜ್ಞ ಸಾಧನ ವಿಜಯವಿಠ್ಠಲ
ಮಕ್ಕಳ ಮಾಣಿಕವೇ ಪಂಚಮುಖನ ಪ್ರೀಯಾ ೧

ಮಟ್ಟತಾಳ

ರಂಗ ರಂಗ ವಿಹಂಗ ತುರಂಗ
ಮಂಗಳಾಂಗ ತರಂಗ ಮಹಿಮಾ
ಅಂಗುಟಾಗ್ರದಿ ಗಂಗೆಯ ಪೆತ್ತಾ
ನಂಗಜ ಜನಕ ತುಂಗಕಾಯ ಸು
ರಂಗಳ ಕೋಶ ಮಂಗಳ ದಾಸ
ರಂಗಳದೊಳಗೆ ಸಂಗ ಸುಖದಲ್ಲಿ
ಸಂಗೀತ ಸ್ವರಜಾಗಂಗಳಿಗೆ ಬೆಡಗಂಗಳನು ತೋರಿದ ಪಾ
ರಂಗತ ದೈವ ಲಾಂಗುಲಿರಮಣ ವಿಜಯವಿಠ್ಠಲ
ರಂಗ ರಂಗ ಭೋಗಂಗಳ ಮಾತಿಗೆ
ತುಂಗ ಕಾಯ ಸುರಂಗಳ ಕೋಶಾ ೨

ತ್ರಿವಿಡಿತಾಳ

ಸ್ವಲ್ಪವಾದರು ತನ್ನ ನಂಬಿದ ಜನರ ಸಂ
ಕಲ್ಪಕ್ಕೆ ಕಡಿಮೆ ಕರ್ಮವು ಮಾಡಲು
ಅಲ್ಪಾದೊಳೆಣಿಸದೆ ಒಂದಾನಂತೆ ಮಾಡಿ
ಕಲ್ಪ ಕಲ್ಪಕ್ಕೆ ಫಲವಾ ಬೆಳಿಸುತಿಪ್ಪಾ
ಮೂಲ್ಪಂಥ ತಿಳಿಯದೆ ದುಷ್ಟ ಜೀವರು ನಿತ್ಯ
ಆಲ್ಪರಿದು ಹಗಲಿರಳು ಅರ್ಚಿಸಿದರೂ
ನಿಲ್ಪನವನ ಪುಣ್ಯ ಭಸುಮ ಮಾಡಿ ಬಿಡುವ
ಬಲ್ಪಂಥಗಾರನು ಗರುಡ ಗಮನಾ
ತಲ್ಪ ಸಾಗರ ಯಜ್ಞಾ ಭೃತ ವಿಜಯವಿಠ್ಠಲ
ವಲ್ಪಿಗೆ ಮೆಚ್ಚನು ಗೂಢವಾಗದನಕಾ ೩

ಅಟ್ಟತಾಳ

ಶರಣಾಗಿ ತನ್ನ ಅರಸಿಯ ತೊರೆವಾನು
ಶರಣಾಗಿ ತನ್ನ ಪುರವನ್ನು ಬಿಡುವನು
ಶರಣಾಗಿ ತನ್ನ ಶರೀರವ ಕೊಡುವನು
ಶರಣಾಗಿ ತನ್ನ ಏಕಾಂತ ಒಲ್ಲನು
ಶರಣನ ಬಿಡನೊ ಅರಿಗಳ ಮುರಿದು
ಧರಿಯೊಳಿದರಿಯೊ ದುರಿತಾಂಥ ಹರಿದು
ಶರಣರ ಕಾಣದೆ ಅರಘಳಿಗೆ ನಿಲ್ಲಾ
ಶರಣರು ಕರೆದರಬ್ಬರಕೆ ನಿಲ್ಲದೆ ಬರುವಾ
ಶರಣು ದಕ್ಷಿಣನಾಮ ವಿಜಯವಿಠ್ಠಲನೀತ
ಶರಣರಲ್ಲದೆ ಅನ್ಯರನ ನೋಡುವನೆ ೪

ಆದಿತಾಳ

ಪುಟ್ಟಿದ ದಾಸರಿಗೆಲ್ಲ ಕಟ್ಟಿಮನೆ ಪುಂಡರೀಕ
ವಿಠ್ಠಲನ್ನ ಪಾದದಲ್ಲೆ ಪುಟ್ಟಿದ ರಾಜಕವಚ
ತೊಟ್ಟು ಪೂರ್ಣವಾಗಿ ಮನವಿಟ್ಟು ಭಕ್ತಿರಸವೆಂಬ

ಗುಟ್ಟು ಒಬ್ಬರಿಗೀಯದೆ ಕಟ್ಟಡಿ ಮಾರ್ಗವಿಡದೆ
ಬೆಟ್ಟದೊಡಿಯ ತಿಮ್ಮ ವಿಜಯವಿಠ್ಠಲ ತುಂಗವಾಸನ
ಇಟ್ಟು ಹೃದಯದೊಳಗೆ ಬಪ್ಪ
ಹುಟ್ಟು ಸಾವು ತೊಡುವದಲ್ಲಾ ೫

ಜತೆ

ಈತನ ಕಾಣದಲಾರಿಗೆ ಗತಿಯಿಲ್ಲಾ
ಆತುಮವಂತ ನಾಮ ವಿಜಯವಿಠ್ಠಲ ಬಲ್ಲಾ ೬

೯೨

ಧ್ರುವತಾಳ

ಅಚ್ಯುತಾನಂತ ಕೃಷ್ಣ ಗೋವಿಂದ ಮಾಧವ
ಸಚ್ಚಿದಾನಂದಾತ್ಮಕ ಸರ್ವೋತ್ತಮಾ
ಸುಚ್ಚರಿತ ರಂಗಾ ಕಾಳಿಂಗ ಮದಭಂಗಾ
ನಿಚ್ಚ ಭಕ್ತರ ಮನೋಹರಾ ವಿಶ್ವಂಭರಾ
ಅಚ್ಚಾಟಾಡುವ ದೈವ ಶ್ರೀ ವಾಸುದೇವಾ
ಅಚ್ಚಾ ಕೌಸ್ತುಭಹಾರ ಅಸುರಕುಲ ಕುಠಾರಾ
ಪುಚ್ಛ ಭಾಗದಲ್ಲಿ ಭಕ್ತನ್ನ ಇಟ್ಟ ಧಿಟ್ಟಾ
ಎಚ್ಚರವುಳ್ಳ ಪುರುಷಾ ಯಾದವೇಶಾ
ಮೆಚ್ಚಿದೆ ನಾನು ನಿನ್ನ ಬಲು ಪ್ರತಾಪವ ಕೇಳಿ
ಚಚ್ಚಾರದಲ್ಲಿ ಸಲಹೋ ಚಂದ್ರವದನಾ
ಮುಚ್ಚುಮರೆ ಯಾತಕೆ ಮುಚುಕುಂದ ನ್ನಪ ವರದ
ಮೆಚ್ಚುಗೊಳಿಸಿದವರ, ನಿರುಪಾ ಕಾಯ್ವ ದ್ವಾರಾ
ನೆಚ್ಚಿದವರ ಬಂಟಾನೆನಿಪಾ ವೈಕುಂಠಾ
ಹೆಚ್ಚಿನ ಹೆದ್ದೈವ ವಿಜಯವಿಠ್ಠಲರೇಯಾ
ಎಚ್ಚರನೊ ನೀನು ನಂಬಿದ ದಾಸರಿಗೆ ೧

ಮಟ್ಟತಾಳ

ಭಕುತರಿಗೆ ನೋವು ಭಕುತರಿಗಾಪತ್ತು
ಭಕುತರಿಗೆ ಪವಾಡಾ ಭಕುತರಿಗೆ ಕೇಡು
ಭಕುತರಿಗೆ ಬಂಧಾ ಭಕುತರಿಗೆ ನರಕಾ
ಭಕುತರಿಗೆ ವ್ಯಾಧಿ ಭಕುತರಿಗೆ ದುಃಖಾ
ನಿಕರಂಗಳು ಹಣಿಕಿ ನೋಡದಂತೆ
ಅಖಿಳ ಜನ್ಮಾದಿ ಪಾಲಕ ನೀನೆ ಜೀಯ್ಯ
ಅಯ್ಯಾ ಅಯ್ಯಾ ಅಯ್ಯೋಯೊ
ಹೊ ಹೊ ಹೊ ಹೊ ನಿನ್ನ ಬಿರಿದು
ಸಕಲೇಶ್ವರ ನಮ್ಮ ವಿಜಯ ವಿಠ್ಠಲ ನೀನೆ
ಮುಕುತೇಶ್ವರ ನಿನ್ನ ಮೂಲವೆ ತಿಳಿಯಾದೊ ೨

ತ್ರಿವಿಡಿತಾಳ

ಭಕುತರಾಡಿದ್ದೆ ಆಟಾ ಭಕುತರು ಮಾಡಿದ್ದೆ ಮಾಟ
ಭಕುತರು ನೋಡಿದ್ದೆ ನೋಟಾ ಭಕುತರುಕಾಡಿದ್ದೆ ಕಾಟಾ
ಭಕುತರು ಉಂಡದ್ದೆ ಊಟಾ ಭಕುತರು ಕೂಡಿದ್ದೆ ಕೂಟಾ
ಭಕುತರು ಓಡಿದ್ದೆ ಓಟಾ ಭಕುತರಂದದೆ ನೀಟಾ
ಭಕುತರು ವಶನೇ ಭಕುತರಾಧೀನನೇ
ಭಕುತರಿಗಾಗಿ ಬಾಳುವ ದೈವವೇ
ಭಕುತರ ಬಾಯಿಂದ ಪೊರಟಾಕ್ಷಣ ನುಡಿ
ಅಕಟಾ ಲಾಲಿಸುತಿಪ್ಪಾ ಓವಿಗನೇ
ಭಕುತರ ಕೊಟ್ಟ ಮಾತಿಗೆ ಸಲೆ ವಿನುತಲಿ
ಮುಕುಟವ ತೂಗುವ ಅಪ್ರಾಕೃತನೇ
ಭಕುತಿ ಪಾಶಕೆ ಬಪ್ಪ ವಿಜಯ ವಿಠ್ಠಲ ನಿನ್ನ
ಭಕುತವತ್ಸಲ ತನಕೆ ನಮೋನಮೋ ಎಂಬೆ ೩

ಅಟ್ಟತಾಳ

ಹಿಡಿ ಹೊನ್ನು ಉಂಬಾ ಸಂಬಳಿಗನು ಕಾಯ್ದಂತೆ
ಬಿಡದೆ ಭಕುತರಿಂದ ಒಂದಡಿ ತೊಲಗದೆ
ಎಡಬಲ ಹಿಂಭಾಗ ಮುಂಬಿನಲ್ಲಿ ನಿಂದು
ಹಿಡಿದಸಿ ಚಕ್ರ ಗದಾ ಚಾಪ ಶರದಿಂದ
ಒಡ ಒಡನೆ ಇದ್ದು ಕಾಲಕಾಲಕೆ ಭಯ
ತೊಡರು ಹೊರಿಸದಂತೆ ಸಾಕುವ ಮಹಾಧೀರ
ಬಿಡನು ಭಕ್ತರನೆಂದೊ ಮೊದಲೇ ಬಿರಿದು ಉಂಟು
ನುಡಿ ಒಮ್ಮೆಯಾದರು ಧನ್ಯನಾಗಲಿ ಬೇಕು
ಕಡು ತೇಜೋಮಯರೂಪ ವಿಜಯ ವಿಠ್ಠಲ ನಿನ್ನ
ಅಡಿಗಳ ತುತಿಪರು ಅವರೇ ಧನ್ಯರು ಕಾಣೋ ೪

ಆದಿತಾಳ

ಭಕುತರಿಗಾಗಿ ನೀ ಅವತಾರ ಧರಿಸಿದೆ
ಭಕುತರಿಗಾಗಿ ನೀ ಚೋರನೆಂದೆನಿಸಿದೆ
ಭಕುತರಿಗಾಗಿ ನೀ ಜಾರನೆಂದೆನಿಸಿದೆ
ಭಕುತರೇ ಎಂದಿಗೂ ನಿನಗೆ ಪಂಚಪ್ರಾಣಾ
ಭಕುತರ ಕೈಯಿಂದ ಸೃಷ್ಟಿಯ ಮಾಳಿಪೆ
ಭಕುತರಿಗಾಗಿ ಸೂರೆ ನಿನ್ನ ಪರಾಕ್ರಮಾ
ಭಕುತರಿಗೆ ನೀನೆ ನಿನಗೆ ಭಕುತರೂ
ಭಕುತರು ದೋಷಮಾಡಲು ಪುಣ್ಯವೆನಿಸುವೆ
ಭಕುತರ ಪರಿಪಾಲಿಸೊ ವಿಜಯ ವಿಠ್ಠಲ ನಿನ್ನ
ಭಕುತರಿಗಿದ್ದ ಸ್ವಾತಂತ್ರ್ಯವಾರಿಗೆ ಇಲ್ಲಾ ೫

ಜತೆ

ಭಕುತರಿಚ್ಛೆಯಂತೆ ನಡೆಸುವ ಮಹಾಮಹಿಮಾ
ಅಖಿಳ ಜೀವರ ಭಿನ್ನ ವಿಜಯ ವಿಠ್ಠಲ ನೀನೆ ೬

೯೩

ಧ್ರುವತಾಳ

ಅನಾಥ ಬಂಧು ದೀನದಯಾಳು ಅನಾದಿದೈವ
ಅನಿಮಿತ್ತ ಜೀವ ಅನಾಮಯಾ ಅನಂತ
ಅನಂತ ಮ್ಯೂರ್ತಿ ಪ್ರಧಾನ ಪುರುಷರ ಧ್ಯಾನಕ್ಕೆ ದೂರಾ
ಆನಂದ ಮಯನತಿ ಜ್ಞಾನಾದಿ ಪೂರ್ಣಾ
ವಾಣಿಯರಸನಯ್ಯ ಅನರ್ಪಿತನ್ನೇ
ಪ್ರಾಣಾಪಾನಾದಿ ಪಂಚ ಪ್ರಾಣಾಹುತಿಯಿಂದ
ತ್ರಾಣರನ್ನೆ ಮಾಡಿ ಮಾಣದೆ ನಡಿಸುವ
ಜಾಣಬೃಹದ್ಭಾನು ವಿಜಯ ವಿಠ್ಠಲ ನೀನು
ನಾನಾ ಲೀಲೆಯ ತೋರುವ ನಾರಾಯಣದೇವ ೧

ಮಟ್ಟತಾಳ

ಅಚ್ಯುತಾನಂತ ಗೋವಿಂದ ಕೃಷ್ಣ
ಸಚ್ಚಿದಾನಂದ ವೈಕುಂಠರಮಣ
ಅಚ್ಚರ ಮಹಿಮ ಕಮಲ ಜಾಂಡ
ಮುಚ್ಚಿ ಬಿಚ್ಚುವಂಥ ಬಿಗಹು ಪ್ರತಾಪಾ
ಅರ್ಚಿಷ್ಮಾನೆಂಬೊ ನಾಮದೊಡಿಯ ವಿಜಯ ವಿಠ್ಠಲನೆ
ಅಚ್ಚುತ ಪದವಿಗರುಹಾ ನೀನೆ ೨

ತ್ರಿವಿಡಿತಾಳ

ನಾ ಎಂದು ನುಡಿಯಲು ನಾನಾನರಕ ನಾಶ
ರಾ ಎಂದು ಪೇಳಲು ರಾಯ ಪದವಿಯಕ್ಕು
ಯ ಎಂದು ವರ್ಣಿಸಲು ಎಲ್ಲಕಾಲದಲ್ಲಿ

ಶ್ರೇಯಸ್ಸಿನಲ್ಲಿ ಆನಂದಕ್ಕೆ ಅಭಿವೃದ್ಧಿ
ಣಾ ಎಂದುದರ ಫಲವಾರು ಪೇಳುವರಯ್ಯ
ಭೂವ್ಯೋಮ ಪಾತಾಳ ಮಧ್ಯದಲ್ಲಿ
ರಾಯಾ ಮಹಿಷ್ವಾಸಾ ವಿಜಯ ವಿಠ್ಠಲನ್ನ
ಗಾಯನ ಮಾಳ್ಪನ್ನ ಮತಿಗೆ ನಮೋ ನಮೋ ೩

ಅಟ್ಟತಾಳ

ಪನ್ನಗ ಮಥನನ್ನ ಚನ್ನಾಗಿ ಮನದಲ್ಲಿ
ಸನ್ನಿಲ್ಲಿಸಿಕೊಂಡು ಉನ್ನತಧ್ಯಾನವನು ಕೈಕೊಂಡ
ವನ್ನ ಪುಣ್ಯಕ್ಕೆ ಸರಿಯೆನ್ನು ಪೇಳುವರಾರು
ಭಿನ್ನವಾಡಿದರೆ ಸುಣ್ಣಪುಡಿಯಲಿಟ್ಟು
ತಣ್ಣೀರು ಪೊಯಿಸುವನು ಪನ್ನಗಮಥನನ
ಚನ್ನಾಗಿ ಮನದಲ್ಲಿಡೆ
ಘನ್ನ ಪ್ರಜಾಪತಿ ವಿಜಯ ವಿಠ್ಠಲ ಸಂ
ಪನ್ನ ನಾಮಕ್ಕೆ ಇನ್ನಾವುದು ಸರಿ ೪

ಆದಿತಾಳ

ಅಜ ಸುರ ದಿಕ್ಪಾಲಕಾ ಪ್ರಜೆಸುರ ಸಮುದಾಯ
ಗಜ ಅಜಮಿಳ ಪರಮಾ ಭಜಕರ ಮನೋಹಂಸಾ
ತ್ರಿಜಗವಂದಿತ ಪಂಕಜಪತಿ ಮಹಾಮಾಯಾ
ವಿಜಯ ವಿಠ್ಠಲರೇಯಾ ನಿಜವಾದ ಮಹಾಮಹಿಮಾ ೫

ಜತೆ

ತೂಲವೆಂಬೊ ಪಾಪಕ್ಕೆ ಪಾವಕ ಹರಿನಾಮಾ
ತಿಳಿದು ಶ್ರೀಮತ ನಮ್ಮ ವಿಜಯ ವಿಠ್ಠಲನೊಲಿಸೆ ೬

೯೪

ಧ್ರುವತಾಳ

ಆವನ್ನ ದಯದಿಂದ ಈ ದೇಹ ದೊರಕೋದು
ಆವನ್ನ ದಯದಿಂದ ಗುರು ಕರುಣಿಸುವನು
ಆವನ್ನ ದಯದಿಂದ ಸುಜ್ಞಾನ ತಿಳಿವುದು
ಆವನ್ನ ದಯದಿಂದ ಭಕ್ತಿವೆಗ್ಗಳಿಸುವುದು
ಆವನ್ನ ದಯದಿಂದ ವೈರಾಗ್ಯ ಪುಟ್ಟುವುದು
ಆವನ್ನ ದಯದಿಂದ ಧ್ಯಾನ ಸಂಘಟಿಸುವುದು
ಆವನ್ನ ದಯದಿಂದ ಬಿಂಬಾಪೊಳೆವುದ
ಆವನ್ನ ದಯದಿಂದ ತನ್ನತಾನರಿವನು
ಆವನ್ನ ದಯದಿಂದ ಆಗಮ ನಿಲ್ಲುವುದು
ಆವನ್ನ ದಯದಿಂದ ಸಂಚಿತ ಸರಿವುದು
ಆವನ್ನ ದಯದಿಂದ ಪ್ರಾರಬ್ಧ ತೀರುವುದು
ಆವನ್ನ ದಯದಿಂದ ಈ ದೇಹ ದೊರಕೋದು
ಆವನ್ನ ದಯದಿಂದ ಭುವನತ್ರಯವಾಶ್ರೈಸೋದು
ಆವನ್ನ ಪಾವನ್ನ ನಾಮ ನೆನೆದರೆ
ಜೀವನ್ನ ಸುಖ ಉಂಟು, ಜನರ ಭಯವಿಲ್ಲಾ
ಕಾವನ್ನಪಿತ ಹರಿ ವಿಜಯ ವಿಠ್ಠಲ ಸಂ
ಜೀವನ್ನ ನಂಬಲು ಕಾವಾನು ದಯದಿಂದ ೧

ಮಟ್ಟತಾಳ

ನಂಬುವುದು ನಂಬುವುದು ಅಂಬುಧಿಯೊಳು ಮಲಗಿ
ಅಂಬುಜ ಪೊಕ್ಕಳಲಿ ಅಂಬುಜಭವನೆಂದಂಬವನ ಪಡೆದ
ಕಂಬುಕಂಠನ ಪಾದಾಂಬುಧರಿಸಿ ತ್ರಿಯಂಬಕ ಪೆಸರಾದ
ನಂಬುವುದು ನಂಬುವುದು ಅಂಬುಜಪತಿ ಪೀ

ತಾಂಬರ ವಿಜಯ ವಿಠ್ಠಲ ನಾಮವ ಉಂಬವಗಲ್ಲದಲೆ
ಇಂಬಿಲ್ಲ ಪರದಲ್ಲಿ ಎಂಬುವುದು ಶತಸಿದ್ಧಾ
ನಂಬುವದಂಬುವುದು ಅಂಬುಜನಾಭನಾ ೨

ರೂಪಕತಾಳ

ಗೋಕುಲದೊಳು ಜನಿಸಿ ಏಕಮಾನವನಾಗಿ
ಆಕಳ ಕಾಯಿದ ಅನೇಕ ಗೋವಳರೊಡನೆ
ಸಾಕಾರ ಸತ್ತೀಯಾ ಏಕಮೇವನು ತಾನು
ಲೋಕಕ್ಕೆ ಬಹುಮೋಹಕ ತೋರುತ್ತಾ
ನಾಕಾದ್ಯರಿಗೆ ದೂರ ಭೀಕರಸುರಹರ
ಬೇಕಾದರೆ ಸಿಗ ನೂಕಿದರೆ ಪೋಗಾ
ಶೋಕನಾಶನ ನಾಮಾ ವಿಜಯ ವಿಠ್ಠಲರೇಯಾ
ಸಾಕಿ ಗೊಲ್ಲರಿಗೆ ಸಾಲೋಕ್ಯವ ಪಾಲಿಸಿದಾ ೩

ಝುಂಪೆತಾಳ

ಆವ ದೇವರು ಕೊಟ್ಟ ವರಗಳನು ಜಯಿಸಿ ಮ
ತ್ತಾವವನು ಕ್ಷಿತಿಯೊಳಗೆ ಪೆಸರಾದನೂ
ಆವನಾ ತೋರು ಅನಾದಿಕಾಲದಲಿಂದ
ದೇವರಿಕೆ ಹಿಡಿಯದಲೆ ಹಿತಥವಾ
ಗೋವುಜನ್ನಿಗೆ ಪಾಲು ಶುನಕನ ಮರಿ ತಂದು
ದೇವರಾಮನೆಯೊಳು ಕೂಡಿಸಿದಂತೆ
ನೋವಿಗಾರಾಗದೆ ಸರ್ವಲಕ್ಷಣ ನಾಮ
ಶ್ರೀ ವಿಜಯ ವಿಠ್ಠಲ ಸುದೈವ ದೈವವೆನ್ನಿರೋ ೪

ತ್ರಿವಿಡಿತಾಳ

ಗುಂಡೇರಿ ಬಾಡಿ ಎದೆಗುಂಡಿಯ ಒಣಗಿಸಿ
ಕೆಂಡದ ಮಧ್ಯದಲಿ ಅಂಡೊಲಿದು ನಿಂದು
ದಿಂಡುಂದೆ ಉರುಳಿ ಮುಂಕೊಂಡು ಮಂಡಲವೆಲ್ಲ

ಕಂಡಲ್ಲಿ ತಿರುಗಿ ತಿರುಗಿ ತಿರುಗಿ ನೀವು
ದಡಾಣಿಂದಲಿ ದಣಿದು ವ್ಯರ್ಥವಾಗಿ ನೀವ
ಖಂಡಾ ಮನಸಿನಲ್ಲಿ ಭಂಡಾದರೆ ನಮ್ಮಾ
ಅಂಡಜಗಮನಾನೊಲಿಯ ಕಾಣಿರೋ
ಪುಂಡರೀಕಾಕ್ಷ ಶ್ರೀ ವಿಜಯ ವಿಠ್ಠಲನ್ನ
ಪುಂಡರೀಕ ಪಾದದೊಲಿಮೆಯಾಗದನಕಾ ೫

ಅಟ್ಟತಾಳ

ಸಪ್ತವೆರಡು ಲೋಕದೊಳಗೆ ವ್ಯಾಪ್ತನೀತಾ
ಸಪ್ತವರಣ ಬಾಹಿರದೊಳಗೀತಾ
ಸಪ್ತಾರ್ಚಿ ವಿಪ್ರರರಾ ಮುಖದಿಂದ ಭುಂಜಿಸಿ
ತೃಪ್ತಿಯ ಬಡುವನೀತಾ ನಿತ್ಯ ತೃಪ್ತನೀತಾ
ಆಪ್ತನು ಜನುಮಜನುವ ನಿಜದಾಸರಿಗೆ
ಕ್ಲಿಪ್ತಿಗೆ ಕಡಿಮೆ ಇಲ್ಲದಂತೆ ಪೊರೆವನು
ಗೋಪ್ತನಾಮ ನಮ್ಮ ವಿಜಯ ವಿಠ್ಠಲ ಸಂ
ಕ್ಷೇಪ್ತನು ಎಂದೆಂದಿಗೆ ಇಹ ಪರದಲ್ಲಿ ೬

ಆದಿತಾಳ

ಮೂರೊಂದು ಮೂರೊಂದು
ಮೂರು ಎರಡು ಮೂರು ಮೂರು
ಮೂರುತಿಯ ರೂಪನೋಡಿ
ಮೂರು ಮೂಲೆಯೊಳಗಿದ್ದಾ
ಮೂರುತಿಯಿಂದ ಕೊಡಿಸಿ ಮೂರುತಿ ನಿರ್ಮಳರಾಗಿ
ಮೂರರೊಳಗೆ ಒಂದು ಪಿಡಿದು
ಮೂರು ಪುರಾಣದಲ್ಲಿ ನೀನು

ಮೂರೊಂದು ಪದವಿಯಲ್ಲಿ ಮೂರುತಿವಂತನಾಗೋ
ಮೂರು ಆರು ಎರಡುಕಲಿತು
ಮೂರುತಿ ವಿಜಯ ವಿಠ್ಠಲನ್ನ
ಮೂರು ರೂಪಾದವನ ನಂಬಿ
ಮೂರು ಮುವತ್ತವರ ಕೂಡೊ ೭

ಜತೆ

ನೀನೆಂದು ನಂಬಲು ಲಿಂಗ ಶರೀರವ
ಹಾನಿ ಮಾಡುವ ವಿಷ್ಣು ವಿಜಯವಿಠ್ಠಲನೊಲಿದು ೮

೯೫

ಧ್ರುವತಾಳ

ಎಂಥಾದೊ ನಿನ್ನ ಮಹಿಮೆ ಇಂಥಾದಂಥಾದೆಂದು
ಎಂಥವರೊ ಎಣಿಸಿ ಗುಣಿಸಿದರು
ಇಂಥಾದೆ ಎಂದು ಮತಿಗೆಟ್ಟಿಪರಾಗೀ
ಅಂತುಗಾಣುವರಾರು ಕಂತುಜನಕ
ಸಂತತಾನಂತಾ ಸಾವಿರ ಮೊಗದಲ್ಲಿ
ನಿಂತು ದ್ವಿಸಾವಿರ ಜಿಹ್ವೆಯಿಂದ
ನಂತಾನಂತಾ ಎಂದು ಒಂದೊಂದು ನಾಲಿಗಿಲಿ
ಪಂಥಿ ಸಾಗಿದಂತೆ ಪ್ರತ್ಯೇಕ ಪ್ರತ್ಯೇಕ
ಅಂತರ ಶುದ್ಧನಾಗಿ ನಿಲವಿಲ್ಲದೆ
ಚಿಂತಿಸಿ ಒಂದಿಷ್ಟು ನೆಲೆಗಾಣದೆ ಪೋಗಿ
ಭ್ರಾಂತಿಯಲ್ಲಿ ಫಣಿಪ ಸುಮ್ಮನಾದಾ
ನಂತಾವತಾರ ವಿಕರ್ತ ವಿಜಯ ವಿಠ್ಠಲ
ಎಂಥಾ ದೈವವೋ ನೀನು ಎಂಥಾ ರೂಪನು ನೀನು ೧

ಮಟ್ಟತಾಳ

ಸ್ವರೂಪ ಅರೂಪ ಅಪರೂಪಾ
ಸ್ವರತಿ ಸ್ವತೀಜ ಸ್ವಪ್ರಕಾಶ
ಸ್ವಕಾಧೇಯಾ ಆರಾಧೇಯಾ
ಸ್ವಾರೋಗಣಿಯ ಸ್ವಬಂಧುಬಂಧೂ
ಕ್ಷೀರ ಸಿಂಧುಕುಮಾರಿಯ ಪ್ರಿಯ ನಿಗಮಗೇಯಾ
ಪರಾವಸ್ತು ಪರಮ ಮಹಿಮಾ
ಪರಕೆ ಪರಾತ್ಪರಮಪುರುಷಾ
ಪರಮೇಷ್ಟಿಪಿತನೆ ವಿಜಯ ವಿಠ್ಠಲಾ
ಅರಾಧೀನ ಅನಾಧೀನ ಅನಾಥ
ನೀನೆ ನಾಥನು ನೀನೆ ಸ್ವಾಮಿ
ಸ್ವರೂಪ ಅರೂಪ ಅಪರೂಪ ೨

ತ್ರಿವಿಡಿತಾಳ

ಅನಾದಿ ಬ್ರಹ್ಮಚಾರಿ ನೀನೆಂದು ಸುರರ
ಸ್ಥಾನದಲ್ಲಿ ಕೀರ್ತಿ ಪೊಗುಳುತಿದೆ
ಅನಾದಿಗ ನೀನೆ ಅವತಾರವತಾರಾ
ಕೇನಾದುದು ಎಲ್ಲ ನೀನೆ ಬಲ್ಲೀ
ನೀನಾರಿಯಾಗಿ ಸುರರಕುಲಕ್ಕೆ ಸುಧಾ
ಪಾನವೆರದೆ ಮಾಯಾನಂಬುವವೇಷಧರಿಸಿ
ದಾನವರ ಎದೆದಲ್ಲಣನೆನಿಸಿ ಮ
ತ್ತಾ ನಾರಿರೂಪವೆ ಪೊಗಲಾಡೀ
ಜಾಣತನದಲ್ಲಿ ಸರ್ವರಲ್ಲಿ ಜುಣಗಿ
ಏನು ಅರಿಯದಿಪ್ಪ ಹೊಂತಕಾರಿ
ಮಾನವವೇಷ ಮಹಾಸ್ವಾಂಗಾ ವಿಜಯ ವಿಠ್ಠಲ
ಆನು ನಿನ್ನಯ ಸಮಾನ ದೈವವ ಕಾಣೆ ೩

ಅಟ್ಟತಾಳ

ನಡೆವಾ ನಡಿಯು ಬೇರೆ, ನುಡಿದ ನುಡಿಯು ಬೇರೆ
ಅಡಿಗಡಿಗೆ ಸುಖಬಡುವ ಸಂಭ್ರಮ ಬೇರೆ
ಕೊಡುವ ಪ್ರಸಾದ ಕೈಪಿಡಿವ ಚಿತ್ರವೆ ಬ್ಯಾರೆ
ಸಡಗರ ದೈವವೇ ಅಡಿಗಡಿಗೆ ಗೋವಳರೊಡನೊಡನೆ
ಆಡಗೆಡೆಗೊಡುವುದು ಬ್ಯಾರೆ
ಪಡಿಗಾಣೆ ನೀನಿಟ್ಟ ಮುಡಿ ಸಡಿಲಿಪರಾರು
ಬಿಡು ಪೋಗಿ ಮೂರುತೊಡರನಿಕ್ಕುವ ಜಾಣಾ
ಒಡಿಯರಿಗೊಡೆಯಾ ಬಡವರ ಸಹಾಯ
ವಡವನ್ನಿನಾಮ ವಿಜಯ ವಿಠ್ಠಲ ಸರ್ವ
ಕೂಡಲೊಳಗಾಡುವ ಕೊಡುಗೈಯಾ ದಾತಾರಾ ೪

ಆದಿತಾಳ

ಏವಂತಿ ಜಾಯತೆ ಹರಿ ನಿಜರೂಪವೆಂದು
ಆ ವೇದಾವಳಿಗಳು ಪಾವಿನಹಿರಿಯಂಗೆ ಪೇಳೆ
ದೇವಾದಿ ಕುಲದವರು ತಾವೊಲಿದು ಪೊಗಳಿದರು
ಆವುದಯ್ಯ ನಿನ್ನ ರೂಪ ಆವುದಯ್ಯಾ ನಿನ್ನ ಮಾಯಾ
ದೇವ ಮರ್ತ್ಯ ಪಾತಾಳ ಭೂ ವ್ಯಾಪಿಸಿಕೊಂಡಿವೆ
ಜೀವ ಜೀವರಾಡಿದಂತೆ ಆವಕಾಲಕ್ಕೆ ತಕ್ಕಹಾಗೆ
ವಾವಿವರಕೆ ಇಲ್ಲದಲೆ ಕಾವ ಸ್ತ್ರೀ ಪುರುಷನಾಗಿ
ಕಾವನಯ್ಯ ನಿನ್ನ ಲೀಲೆ ಆವುದೊ ಕಡಿಗೆ ನಿನ್ನ
ಭಾವಕೆ ಬಂದಂತೆ ಮಾಡುವಿ ಸೇವಕರಿವರವರೆನೆದೆ
ಭಾವನೆ ವಿಜಯ ವಿಠ್ಠಲ ದೇವ ನೀನೆ ಒಬ್ಬ ಮಿ
ಕ್ಕವರೆಲ್ಲ ನಿನ್ನ ಮಾಯಾವಳಿಗೆ ಬೀಳುವರು ೫

ಜತೆ

ಅಪ್ರತಿ ಪ್ರತಾಪಾ ಅಪ್ರತಿಯರಸೆ ಪು
ಣ್ಯ ಪ್ರಭಾವ ವಿಜಯ ವಿಠ್ಠಲನೆ ಸರ್ವೋತ್ತಮಾ ೬

೯೬

ಝಂಪೆತಾಳ

ದೊರಕುವುದೆ ಹರಿನಾಮಾ ದೊರಕಿದರೆ ನಿಲುಕದು
ದೊರಕಿದರೆ ಅವ ಬಲು ಧೊರಿಯೇ ಧೊರಿಯೇ
ದೊರಕುವದನಂತ ಧರಣಿಸುರ ಜನ್ಮಗಳು
ದೊರಕದಲ್ಲದೆ ನಾಮ ದೊರಿಯದಯ್ಯಾ
ದೊರೆತವನ ಸುಖಕೆ ವಿಸ್ತರಿಸಲೇನು ಸಪ್ತ
ಶರಧಿ ದ್ವೀಪಸಹಿತ ಆಳುವಂಥ
ದೊರಿಯ ಸುಖಕಿಂತ ನೂರ್ಮಡಿ ಮಿಗಿಲು ಅಧಿಕವು
ಮೊರೆಮೊರೆದು ಕೂಗುತಿವೆ ಬಿರಿದು ಘೋಷಾ
ದೊರಿಯದೊ ದೊರಿಯದೊ ಧರಣಿಯೊಳು ಹರಿನಾಮ
ಸ್ಮರಣೆ ಮಾಡಿದನೆ ನೋಡಲಾಗಿ ಧರಾಧರ ಬಲ್ಲ
ಧರಧರನ ನಾಮ ರುಚಿಕರವಾಗಿ ಸವಿದು ಸುಂ
ದರವೆಂಬುದು ಅರಿಧರ ಸಂಕ್ಷಿಪ್ತ ವಿಜಯ ವಿಠ್ಠಲನ್ನ
ಸ್ಮರಣೆ ಒಂದಕ್ಕೆ ಎಲ್ಲ ಸರಿ ಎಂದೆನಿಸಾದು ೧

ಮಟ್ಟತಾಳ

ಕಾಲಸೂತ್ರವಾದ ಮೇಲಾದ ನರಕದಲಿ
ಗೋಳಿಡುತಲಿ ವಂಶಾವಳಿ ಮಿಡುಕುತಿರೆ
ಭೂಲೋಕದಲಿ ಓರ್ವ ಬಾಲಕನು ಪುಟ್ಟಿ
ಶೀಲಗುಣನಾಗಿ ಕಾಲಕಾಲಕೆ ಹರಿಯಾ
ನಾಲಿಗಿಂದಲಿ ನೆನೆಸಿ ಶ್ರೀಲೋಲಾರ್ಪಿತವ
ವ್ಯಾಳೆ ವ್ಯಾಳೆಗೆ ಅಂದ ಘಾಳಿ ಬೀಸಲು ಸಾಕಾ
ಶೀಲಿ ಅವನಕುಲಕೆ ವಾಲಯವಾಗುವುದು
ವಾಲಯದಲ್ಲಿ ವಿಶಾಲ ವೈಕುಂಠದಲಿ

ಶೀಲ ಬ್ರಹ್ಮನ ಪ್ರೀಯಾ ವಿಜಯ ವಿಠ್ಠಲರೇಯಾ
ಬೀಳಲೀಸನು ತನ್ನ ಆಳುಗಳಾ ೨

ತ್ರಿವಿಡಿತಾಳ

ನಾಮವೆ ಜೀವನಾ ನಾಮವೆ ಪಾವನಾ
ನಾಮವೆ ಸಕಲಥಾ ಹೋಮವವೆಂಬೋದು
ನಾಮವೆನಲು ಸುರಸ್ತೋಮವೆ ಭಜಿಸುವುದು
ನೇಮವೆ ತಿಳಿವುದು ಪ್ರೇಮವೆ ಎನುತಲಿ
ನಾಮವೆ ಉತ್ತಮ ಹೇಮವೆಂದು ಕಾಯಾ
ಧಾಮವೆ ಮಾಡಿ ಸಕಾಮವೆ ಬಯಸದೆ
ಸಾಮವೇದಲೋಲ ವಿಜಯ ವಿಠ್ಠಲನ್ನ
ನಾಮವೆ ನೆನಿಯೆ ನಿಷ್ಕಾಮವೆ ನುಡಿವುತ್ತಾ ೩

ಅಟ್ಟತಾಳ

ಅಪ್ಪ ತಿಮ್ಮಪ್ಪನ ನಾಮವ ನೆನಸಲು
ತುಪ್ಪ ಸಕ್ಕರೆ ಹಣ್ಣು ಹರಿವಾಣದಲ್ಲಿ
ಒಪ್ಪಾಚಾರದಿಂದ ಸವಿದಂತೆ ಕಾಣಿರೋ
ಅಪ್ರಾಕೃತದ ರಸಕೆ ಪಡಿಯುಂಟೆ
ಸುಪ್ರಸಾದನಾಮ ವಿಜಯ ವಿಠ್ಠಲನ್ನ
ತಪ್ಪದೆ ನಾಮಾ ಗುಪ್ತದಲಿ ನೆನಸೊ ೪

ಆದಿತಾಳ

ನಾಮ ಒಂದು ಬಲವಾಗಿ ಸೀಮೆಯೊಳಗುಳ್ಳ ಬಲು
ತಾಮಸರು ಬಂದು ಎನ್ನ ರೋಮ ಬಾಗಿಸುವರೆ
ಗೋಮತಿ ಮಿಕ್ಕಾದ ನದಿಯ ಮಿಂದು ಬಂದರೇನು
ನಾಮಕ್ಕನಂತ ಕಡಿಮೆ ಫಲವಧಿಕವಿಲ್ಲ

ಈ ಮಾತು ಮನ್ನಿಸೆ ಸುಕಾಮಿಸಿ ಹರಿಯ ಪಾದಾ
ನಾಮವೆ ಬಿಡದೆನೆನಸೆ ರೋಮರೋಮಾ ದುರಿತನಾಶ
ಕ್ಷೇಮಾಕೃತೆ ವಿಜಯ ವಿಠ್ಠಲನ ನಾಮ ಮುದ್ರಾಂಕಿತದವಗೆ
ಭೂಮಿಯಾಕಾಶಕ್ಕೆ ಒಂದೇ ಸುಮಾರ್ಗವೆಂದು ಪೇಳೋ ೫

ಜತೆ

ಹರಿನಾಮ ಸರಿಯಾದ ಕುರುಹು ನಾನರಿಯನು
ಅರಿದವರಿಗೆ ನಮೋ ಶ್ರೀಶ ವಿಜಯ ವಿಠ್ಠಲಾ ೬

೯೭

ಧ್ರುವತಾಳ

ನಂಬಿದೆ ಎಲೊ ಹರಿ ಅಂಬರ ರೂಪಕಾರಿ
ಬೆಂಬಲವಾಗು ಭವರೋಗ ನೀಗು
ಡಿಂಬವುಳ್ಳನಕ ಕ್ಲೇಶ ಬಡಿಸುವ ಶೋಕ
ಎಂಬುದ ಕಾಣಿಸದಿರು ಕೈಯ್ಯಾ ತೋರೊ
ಕುಂಭಿಣಿಯೊಳು ನೀನೆಂಬ ಮಾನವರಿಗೆ
ಅಂಬುಧಿಯಾ ಪೋಷಣ್ಯಾಗದೇನೊ
ತಿಂಬೆನೆಂಬಾ ಮೃಗವಾ ಅಡವಿಯೊಳು
ಅಂಬೆಯಾ ತಡೆದಂತ ತೆರನಾಗಿದೆ
ಮುಂಬಿಡಿಸುವರಿಲ್ಲ ಮುದ್ದು ಲಕುಮಿನಲ್ಲಿ
ಅಂಬುಜಭವಗಾದರು ನೀನೆ ಗತಿಯೊ
ಜಂಭಾರಿನುತ ವಿಷ್ಣು ವಿಜಯ ವಿಠ್ಠಲ ಕರು
ಣಾಂಬುಧಿಯೊ ನೀನು ನಮಿಸುವೆ ನಾನು ೧

ಮಟ್ಟತಾಳ

ಅಪಮೃತ್ಯು ಸಮೀಪಿಸಿದೆ ಎನ್ನ ಅಪಹಾಸಲ್ಲವೊ
ಕೃಪೆಯಿಂದಲಿ ನೋಡು ಪರನು ಪರಮ ಮಹಿಮ

ತಪಸಿಗಳ ಒಡೆಯಾ ಕಪಿ ವಿಜಯ ವಿಠ್ಠಲ
ಉಪಶಮನ ಗೈಸೊ ೨

ತ್ರಿವಿಡಿತಾಳ

ಅಕಾಲ ಮೃತ್ಯುವಿನ ಗಂಟಲ ಗಾಣನೆಂದು
ನಾಕಾದಿ ಲೋಕದಲಿ ಪೊಗಳುತಿದೆ ಪದ
ಸೋಕಲು ಪಾಷಾಣ ಪೆಣ್ಣಾಗಿ ಮೆರೆದದು
ಲೋಕ ಈರೇಳರೊಳು ಬಲ್ಲರೆಲ್ಲ
ಲೋಕಾಧ್ಯಕ್ಷನಾಮಾ ವಿಜಯ ವಿಠ್ಠಲದೇವ
ನೂಕುವುದು ಬಂದ ಅಪಮೃತ್ಯುಗಳನು ೩

ಅಟ್ಟತಾಳ

ಭಕುತಿ ವಿರಕುತಿ ನಿಜ ಶಕುತಿಬೇಕು ನಿನ್ನ ಭಜಿಸಿ
ಮುಕುತಿಯನ್ನು ಪಡೆವವಂಗೆ
ಯುಕುತಿಯೆಂದು ಯುಕುತಿವಂತರು
ಮುಕುತಾರ್ಥ ಪೇಳುವವರು
ರಿಕುತ ನಿನ್ನ ಮಾತು ಲಾಲಿಸಿ
ಭಕುತಿರಕುತಿ ಶಕುತಿಯೆಲ್ಲ
ಭಕುತಿ ಮಿತಿಗೆ ಪಾಲಿಸಯ್ಯಾ
ಶಕುತಿಮತ ಶ್ರೇಷ್ಠ ನಾಮಾ ವಿಜಯ ವಿಠ್ಠಲ
ಸಕಲರೊಡಿಯಾ ಸುಕುತಾರ್ಥತೋರಿಸಯ್ಯಾ
ಸತತ ನಿನ್ನ ನೆನೆಸುವಂತೆ ೪

ಆದಿತಾಳ

ನಿನ್ನ ದಿವ್ಯ ಚರಣವನ್ನು ಇನ್ನು ಪಿಡಿದ ಮ್ಯಾಲೆ
ಎನ್ನ ದುಷ್ಕರ್ಮಗಳಿನ್ನು ಪೋಗದಿರಲು
ಇನ್ನು ನಿನ್ನ ಬರಿದೆ ನಾ ಮುನ್ನೆ ಭಜಿಸಲು ಯಾಕೆ

ಮಣ್ಣು ಕಸ್ತೂರಿಯಾ ಕೂಡೆ ಬಣ್ಣ ಪ್ರತಿಕುರುಹವೇನೊ
ಚನ್ನಿಗ ನಿನ್ನಂಘ್ರಿಯ ಪ್ರಸನ್ನೀಕರಿಸಿಕೊಂಡ ಮೇಲೆ
ಎನ್ನ ಕರ್ಮ ಬೆನ್ನು ಬಿಡದೆ ಸನ್ನಿಧಿಯಾಗಿಪ್ಪದೆ ಪ್ರ
ಸನ್ನಾತ್ಮನಾದ ದೇವ ರನ್ನ ವಿಜಯ ವಿಠ್ಠಲ
ನಿನ್ನ ನಾಮಾನೆನಸಿ ದೂರನ್ನ ಮಾಡೊ ಪಾಪದಿಂದ ೫

ಜತೆ

ಜತೆ ತಪ್ಪದಂತೆ ಜತನವ ಮಾಡಿ ನಿಜ ಭಾಗ
ವತರೊಳು ಇಡು ನಮ್ಮ ವಿಜಯವಿಠ್ಠಲ ದಕ್ಷ ೬

೯೮

ಧ್ರುವತಾಳ

ನಿನ್ನ ನಾಮ ಪೀಯೂಷಾನ್ನವೊ ಜ್ಞಾನಿಗಳಿಗೆ
ನಿನ್ನ ನಾಮವೆ ರುಚಿ ಅನಂತಕಾಲದಲ್ಲಿ
ನಿನ್ನ ನಾಮವೆ ಸವಿದುಣ್ಣಲು ಸುಖಾ
ನಿನ್ನ ನಾಮದ ನೆಲೆಯನ್ನು ಬಲ್ಲ ಮಾನವ
ಅನ್ಯ ರಸಗಳಿಗೆ ಮನಸು ಎರಗಿಸಾ
ನಿನ್ನ ನಾಮವೆ ತಿಳಿದು ತನ್ನೊಳಗೆ ತಾನೆ ನಲಿದು
ಚನ್ನಾಗಿ ನಾಮಸುಧೆಯನ್ನು ನಾಲಿಗೆಯಲ್ಲಿ
ಕಣ್ಣಿವೆ ಹಾಕುವ ಅನ್ನಿತದೊಳಾದರು ಮನ್ನಿಸಿ ಹರಿಯ ಕಾ
ರುಣ್ಯ ನಾಮಾಮೃತ ಬಿನ್ನಾಣದಲ್ಲಿ ಸುರಿದ
ವನ್ನ ಸೌಭಾಗ್ಯಕ್ಕೆ ಇನ್ನು ಎದಿರುಂಟೆ ಅನಂತ ಜೀವಿಯೊಳು
ಜನ್ಮಾದಿರಹಿತ ಶ್ರೀ ವಿಜಯ ವಿಠ್ಠಲರೇಯಾ
ನಿನ್ನ ಶರಣಾಗತರು ಧನ್ಯರೋ ತ್ರಿಜಗಕ್ಕೆ ೧

ಮಟ್ಟತಾಳ

ಹರಿ ನಿನ್ನನಾಮ ಕರಣಶುದ್ಧಿಯಲ್ಲಿ ಪರೀಕ್ಷಿಸಿ ಪ್ರತಿದಿನ
ಸುರಿಸುರಿದು ಬಹಳ ಹರುಷನಾಗುವ ನರನು
ಧರಣಿಯೊಳಗೆವುಳ್ಳ ಚರಿಸುವ ರಸಂಗಳ

ಸರಕು ಮಾಡನು ಕಾಣೊ ಅರಿದು ಬಿಡುವಾ
ನಿರಾಕರಣೆಯನು ಮಾಡಿ ಪರಲೋಕಕೆ
ಸುಖಕರವಿದು ಅಲ್ಲೆಂದು ಹರಿ ನಿನ್ನ ಸಿರಿಚರಣ
ಶರಣರ ಮನೋಗತ ನರನಾದರೂ ಒಮ್ಮೆ
ಅರಿಯಲಾರರು ಕಾಣೊ ಪರತತ್ವ
ವರರಂಗ ವಿಜಯ ವಿಠ್ಠಲ ನಿನ್ನ
ಪರಮ ನಿರ್ಮಳ ನಾಮದಾರುರಸ ಬಲು ಸವಿಯೋ ೨

ತ್ರಿವಿಡಿತಾಳ

ಮನಸಾರ ಹರಿ ನಿನ್ನ ನಾಮಾಮೃತವ ಬಿಡದೆ
ನೆನೆಸುತ್ತ ಸವಿದುಂಡ ಮಾನವಗಾದರೂ
ಕನಸಿನೊಳಾದರೂ ಹಸಿವಿ ತೃಷೆಗಳಿಲ್ಲ
ಮನುಜೋತ್ತಮನಾಗಿ ಬಾಳುವನೋ
ಜನ ಸರತಿಯಲಧಿಕಾ ಕುಂದನುಡಿಗಳಿಲ್ಲ
ಮನಸಿಜನುಪಹತಿ ಇರಲಿಸಲ್ಲ
ಅನುಸರಿಸಿ ಅನ್ಯರನ್ನು ಬೇಡಿ ಕಾಡುವುದಲ್ಲ
ಅನುಶುಚಿಯಕಲ್ಲದೆ ಕ್ಲೇಶವಿಲ್ಲಾ
ಅನಿಶ ಬಿಡದೆ ಕಾಯುವ ವಿಜಯ ವಿಠ್ಠಲರೇಯಾ
ಘನ ಸಮರ್ಥನ ನಾಮಸುಧಿ ಉಂಡವನೇ ಧಿಟ್ಟಾ ೩

ಅಟ್ಟತಾಳ

ಧರೆ ಸುತ್ತಿ ಹಣಸಾಲಕೊಟ್ಟು ತರುವುದಲ್ಲ
ಮರೆಸಿ ಮೋಸದಲ್ಲಿ ವ್ಯವಹಾರ ಮಾಡುವುದಲ್ಲ
ಇರಿಸಿದ ಪದಾರ್ಥ ಪೋಯಿತು ಎನೆಸಲ್ಲ
ಬೆರಿಸಿದೆಡೆಯಲ್ಲಿ ಅದೆ ಇಲ್ಲೆಂಬುದಲ್ಲ
ತರಿಸುವುದಲ್ಲ ಅನ್ಯರಿಂದ ಕೇಳಿ
ಧರಿಸುವುದಲ್ಲ ಶಿರದಮೇಲೆ ಅನುದಿನ
ಅರಸರ ಬಾಗಿಲು ಕಾಯಿದು ಕೇಳುವುದಲ್ಲ
ಮೆರೆವ ಸುರರೊಳು ವಿಜಯ ವಿಠ್ಠಲನ್ನ
ವರ ಸಮೀಪದಲ್ಲಿ ಸುಖ ಬಡಿಸುವುದಿದು ೪

ಆದಿತಾಳ

ಒಗರು ವಿಷ ಖಾರ ಹುಳಿ ಕಟು ಷಡುರಸಕೆ
ಮಿಗಿಲೆನಿಸುವುದು ಅನಂತಾನಂತ ಮಡಿ
ಹಗಲು ಇರಳು ಸವಿದುಣ್ಣಲು ಬೇಸರಿಕೆ ಇಲ್ಲ
ಹೊಗೆ ಉರಿಯಿಂದ ಪರಿಪಕ್ವವಾಗುವುದಲ್ಲ
ಉಗುಳಿ ಕಳೆವುದಲ್ಲಾ ಹೇಶಿಕೆ ಪುಟ್ಟಿತೆಂದು
ತೆಗೆಯೆಂದು ಒಬ್ಬರಿಗೆ ದೈನ್ಯ ಪಡುವುದಲ್ಲ
ಜಗದೊಳು ನಾಮರಸ ಸುರಿಯೆ ಅವನ ವಂಶ
ಅಘದಿಂದ ದೂರರಾಗಿ ನಿತ್ಯತೃಪ್ತಿ ಪಡುವರು
ಅಘದೂರ ವಿಜಯ ವಿಠ್ಠಲನ ನಾಮಸುಧಿ
ವಿಗಡನಾಗದೆ ಸುರಿಯೆ ರಗಳೆ ಭವದನಿಗಳ ಹರ ೫

ಜತೆ

ಹರಿನಾಮಾಮೃತವನ್ನು ಉಣಬಲ್ಲ ಜ್ಞಾನಿಗೆ
ಬರಿದೆ ನೆಚ್ಚನು ವಿಷಯಾ ವಿಜಯ ವಿಠ್ಠಲ ಒಲಿವಾ ೬

೯೯

ಧ್ರುವತಾಳ

ಪರಿಪೂರ್ಣ ಕಾಮ ವಿಸ್ತರ ಮಹಿಮ ಪರಂಧಾಮ
ಶರಣರ ಸುರದ್ರುಮ ಸುರಸಾರ್ವಭೌಮಾ
ಮಿರುಗುವನಂತರ್ಯಾಮಿ ಕಿರಣ ಧಿಕ್ಕರಿಪ ಪ್ರೇಮ
ಪರಿಪರಿ ಗುಣನಾಮ ಭರಿತವಾದ ರಾಮಾ
ದುರುಳ ದೈತ್ಯ ವಿರಾಮ ದುರಿತಾಂಬುಧಿಗೆ ಭೀಮ
ಪುರುಷೋತ್ತಮ ನಿಸ್ಸೀಮ ಸುರಗಣ ಲಲಾಮಾ
ಪರಮ ಶುದ್ಧ ಅನುಪಮಾ ಚರಿತ ಸುಂದರ ಶಾಮಾ
ಕರುಣಾ ಜಲಧಿ ಜನನ ಮರಣ ರಹಿತ ನೇಮಾ
ಹರಿ ಪರಾಪರ ಬೊಮ್ಮ ಮೆರೆವ ಜಗದುತ್ತಮ
ಸರಿಗಾಣೆ ನಿಗಮಾಗಮ ಸರಸಿಜಭವ ಕಾಮಾ

ದ್ಯರ ಪೆತ್ತ ನಿತ್ಯ ನಿಗಮಾ ಪರಿಪಾಲ ಭಕ್ತ ಸ್ತೋಮ
ಶರಧಿಗೆ ರಾಕಾಬ್ಜಸೋಮಾ ಪರಾಪರದಲ್ಲಿ ಸಮಾ
ಅರರೆ ಒಂದೊಂದು ರೋಮಾ ತೆರವಿಲ್ಲದಾಗ ಬೊಮ್ಮಾ
ದ್ಯರ ತುರುಗಿದ ಹೇಮಾಂಬರ ಕಾಂಚಿದಾಮಾ
ಧರಿಗೆ ಸಾಧಾರ ಹೇಮಗಿರಿಯ ಧರಿಸಿದ ಪದುಮಾ
ವರನೆ ವಿಜಯ ವಿಠ್ಠಲ ನರನೊಳು ನಾನಾಧಮಾ
ನಿರುತ ನಿನ್ನ ಉತ್ತಮ ಚರಣವನ್ನು ನಿಷ್ಕಾಮ
ಕರನಾಗಿ ಭಜಿಸಿ ಕ್ಷೇಮವರವೆಂತು ಪಡಿವೆ ಸುಧಾಮಾ ೧

ಮಟ್ಟತಾಳ

ನಿತ್ಯ ತೃಪ್ತನು ನೀನು ನಿತ್ಯಾನಂದ ನೀನು
ನಿತ್ಯ ಭೂಷಿತ ನೀನು ನಿತ್ಯ ನಿರ್ಮಳ ನೀನು
ನಿತ್ಯ ವ್ಯಾಪಕ ನೀನು ನಿತ್ಯ ನಾಟಕಿ ನೀನು
ನಿತ್ಯ ಮಂಗಳ ನೀನು, ನಿತ್ಯ ಭಾಗ್ಯನು ನೀನು
ನಿತ್ಯ ಮಾನಿತ ನೀನು, ನಿತ್ಯ ಕ್ರಿಯನು ನೀನು
ನಿತ್ಯ ವಸ್ತುವೆ ನೀನು, ನಿತ್ಯ ನಿತ್ಯದಲ್ಲಿ
ನಿತ್ಯ ಭರಿತ ನೀನು, ನಿತ್ಯ ಮೋಹನ ನೀನು
ನಿತ್ಯೋಪಾಸ ನೀನು, ನಿತ್ಯ
ಮುಕ್ತಾಶ್ರಯ ವಿಜಯ ವಿಠ್ಠಲ ಸದಾ
ನಿತ್ಯ ದೈವವೆ ಅನಿಮಿತ್ತ ಬಾಂಧವ ನೀನೆ ೨

ತ್ರಿವಿಡಿತಾಳ

ಸುರನದಿ ಪೆತ್ತವಂಗೆ ನಿನಗೀ ಮಜ್ಜನವೆ ಪಾ
ಲರಮನೆ ಮನೆ ಉಳ್ಳವಗೆ ಕ್ಷೀರಾಭಿಷೇಕವೆ
ಸರಸಿಜ ಕುಸುಮ ಶ್ರೀತುಲಸಿ ಪಡೆದ ದೈವವೆ
ಧರೆಯೊಳಗಿದ್ದ ಕುಸುಮಾದಿ ನಿನಗೆ ಮೆಚ್ಚೆ
ಸಿರಿ ಉರದಲ್ಲಿ ಗಂಧ ಪರಿಮಳ ಎಸೆವನೆ

ಪರಿಪರಿ ಪರಿಮಳ ಗಂಧದಿಂದೇನಯ್ಯಾ
ಪರಮೇಷ್ಠಿಯಿಂದರ್ಘ್ಯ ಕೈಕೊಂಡವನೆ ನಿನ್ನ
ಚರಣ ತೊಳೆದು ಸುಖ ಪಡಿಸಲಾಪನೆ ನಾನು
ಎರಡು ಕಂಗಳಿಂದ ಲೋಕ ಬೆಳಗುತಿಪ್ಪನೆ
ವಿರಚಿಸಿದ ದೀಪದಿಂದ ವೆಗ್ಗಳವೇನೊ ನಿನಗೆ
ಕರುಣಿಸಿ ದ್ರೌಪದಿಗೆ ವಸನಗಳಿತ್ತವಂಗೆ
ನರ ನಾನು ನಿನಗೊಂದು ವಸ್ತ್ರ ಈಯಬಲ್ಲೆನೆ
ವರ ಪ್ರಳಯದಲಿ ಸರ್ವವು ದಹಿಸುವನೆ
ಹಿರಿದು ಧೂಪಾರತಿಯ ಎತ್ತುವುದು ಘನವೆ
ಕರದೊಳು ಮುನಿಗೆ ರಸಾಯನ ಉಣಿಪಂಗೆ
ತರಿಸಿ ತೋರಿಸಿದ ಪದಾರ್ಥದಿಂದೇನಯ್ಯಾ
ಎರಡೈದು ಸಾಗರ ಪೋಷಣಗೊಂಬವಗೆ
ಎರದ ನೀರಿನಿಂದ ಪೋಷಣೆ ನಿನಗೇನೊ
ಸರಿಗಾಣೆ ನಿನ್ನ ನಖದ ಕಾಂತಿಗೆ ಎಲ್ಲೀ
ಮರುಳೇ ಎತ್ತುವ ಮಂಗಳಾರತಿಯ ಬೆಳಗ್ಯಾಕೆ
ಹರಸಖ ಕುಬೇರ ನಿನ್ನವನಾಗಿರೆ
ಬರಿದೆಯಲ್ಲವೆ ಎನ್ನ ಸುವರ್ಣ ಪುಷ್ಪವು
ಪರಿವಾರವೆಲ್ಲ ಸರ್ವ ಸುರರಾದಿಗಳು ನಲಿಯೆ
ವರಮಂದ ಮತಿಯಿಂದ ನಿನಗೇನು ವಾಲಗವೆ
ಗರುಡವಾಹನ ನಮ್ಮ ವಿಜಯ ವಿಠ್ಠಲರೇಯಾ
ಎರಗಿ ಕೈಮುಗಿವೆನೊ ತರುಳತನದಲಿ ನಾನು ೩

ಅಟ್ಟತಾಳ

ನಿಗಮಗಳಿಗೆ ನಿಲುಕದಿಪ್ಪ ಮನದ ದೈವ
ಅಗಣಿತ ಸ್ತೋತ್ರಗಳಿಂದ ಹೀಯಾಳಿಕೆ
ಝುಗಝುಗಿಪ ಭೂಷಣ ಧರಿಸಿದ ದೈವನೆ
ಮಿಗಿಲೇನೂ ನಿನಗೆ ಈ ಲೋಕರಾಭರಣವು
ಖಗರಾಜ ಉರಗ ವಾಹನ ಹಾಸಿಕೆ ಇದೆ
ಮಗುಳೆ ನಾ ನುಡಿದ ವಾಹನ ಹಾಸಿಕೆ ಬೇಕೆ

ಬಗೆಬಗೆಯ ಗಾಯನವ ನಾರದಾದ್ಯರು ಪಾಡೆ
ಪೊಗಳ ಬಲ್ಲೆನೆ ನಿನ್ನ ಬಲುಪರಿ ಮಹಿಮೆಯ
ಸುಗುಣ ಸಾಹಸ ಮಲ್ಲ ವಿಜಯ ವಿಠ್ಠಲ ರೇಯಾ
ಗಗನ ಮಣಿಯಂತೆ ಪೊಳೆವ ಅನಾದಿ ಕರ್ತಾ ೪

ಆದಿತಾಳ

ಸಕಲ ಪೂಜೆಯು ಈ ಪರಿ ಇರಲು ಮತ್ತೆ
ಲಕುಮಿ ಪೂಜಿಸುವಳಾಲಕುಮಿಗೆ ನೀನೆ ಪ್ರೇ
ರಕನಾಗಿ ಒಳಗೆ ನಿಂದು ನಿನಗೆ ನೀನೆ ಅ
ರ್ಚಕನಾಗಿ ಅನುಗಾಲ ಸುಖಿಸುವ ಹೆದ್ದೈವ
ಭಕುತರಿಂದಲಿ ನಿನಗೆ ಆವುದೊ ಪರಿಪೂರ್ಣ
ಮುಕುತಾ ಮುಕುತ ರೊಳು ಎಣಿಸಿ ಗುಣಿಸಿದರು
ಭಕುತ ರೊಳಗೆ ನಾನೊಬ್ಬ ಅಲ್ಪರಿಗೆ ಆಲ್ಪರಿವೆನಯ್ಯ
ಅಕುಟಿಲನಾಗಿ ನಿನ್ನ ಮೆಚ್ಚಿಸ ಬಲ್ಲೆವೆ
ಅಖಿಳ ಜೀವರೊಳು ವ್ಯಾಪ್ತನಾಗಿ ಇದ್ದು
ಸುಖನಾಗಿ ಪ್ರತಿದಿನ ಪಾಲಿಪ ಪರಮಾತ್ಮ
ಲಕುಮಿ ಮಿಕ್ಕಾದ ತಾರತಮ್ಯ ಭಾವದಿಂದ
ಭಕ್ತರರ್ಚನೆ ಮಾಡಲೇಶ ಬೇಕಾದುದಿಲ್ಲಾ
ಸಕಲಾಭರಣ ವಿಟ್ಟು ಮರುಳೆ ಮರಳೆ ತನ್ನ
ನಖಶಿಖ ಪರಿಯಂತೆ ನಸುನಗೆಯಲಿ ನಿತ್ಯ
ಮುಕುರದೊಳಗೆ ಪ್ರತಿಬಿಂಬ ನೋಡಿಕುಳುತ
ಸುಖವ ಬಟ್ಟಂತೆ ನಮಗಲ್ಲದೇ ನಿನಗೇನು
ಲಕುಮಿ ವಲ್ಲಭ ನಮ್ಮ ವಿಜಯ ವಿಠ್ಠಲರೇಯಾ
ಭಕುತರಿಗೆ ನಿನ್ನ ಇಚ್ಛೆ ಯಾಗದಲೆ ಗತಿಯಿಲ್ಲಾ ೫

ಜತೆ

ನಿನಗೆ ನೀನೆ ಪೂಜೆ ಮಾಡಿಕೊಂಬದೇವ
ಎನಗಾವ ಸಥಿಯಿಲ್ಲಾ ವಿಜಯ ವಿಠ್ಠಲ ಒಲಿಯೋ ೬

೧೦೦

ಧ್ರುವತಾಳ

ಪೂರ್ಣಗಣ್ಯಾ ಗುಣಾರ್ಣವ ನವಮೋಹನ್ನಾ
ಸ್ವರ್ಣಜ್ಯೋತಿ ಸಕಲ ಜೀವಜಡರ ಒಡೆಯಾ
ವರ್ಣಿಸಬಲ್ಲೆನೆ ನಿನ್ನ ಮಾಯಾ ನಿತ್ಯಾ
ವರ್ಣದಿಂದ ಕರಿಸಿಕೊಂಬುವನೇ ಸೂ
ಪರ್ಣ ವಾಹನಾ ಧರ್ಮಸ್ಥಾಪ ಚತುರಾ
ವರ್ಣಾಶ್ರಮದಲ್ಲಿ ನೀನೆ ನೇಮನನಾಗಿ
ನಿರ್ಣಯ ಕರ್ಮಂಗಳ ಮಾಡಿಸುವೆ
ನಿರ್ನಯದಲ್ಲಿ ನಿನ್ನ ಕ್ರೀಡೆಯ ತಿಳಿದು ಸಂ
ಕೀರ್ಣವುಳ್ಳವರ ಕೈಯ ಪಿಡಿದು
ದುರ್ನಡತಿಯ ಬಿಡಿಸಿ ಸಾಧನಸಂಪತ್ತು
ಪೂರ್ಣವಾಗಿ ಮಾಡಿಸುವ ಮಧುಸೂದನಾ
ಕರ್ನದ್ವಾರದಿ ಪೊಕ್ಕು ಬಲುಕಾಲದ ಕರ್ಮ
ಚೂರ್ಣ ಮಾಡಿ ಕಳೆವ ಚತರಾವಟದ
ಪರ್ನ ಪರಿಯಂಕ ವಿಜಯ ವಿಠ್ಠಲ ಸೂ
ವರ್ನ ಸಂತತ ಮುಖ್ಯಪ್ರತಿಪಾದ್ಯ ವೇದ ವೇದ್ಯಾ ೧

ಮಟ್ಟತಾಳ

ನಿನ್ನ ಕೀರುತಿ ನಿನ್ನ ಮೂರುತಿ
ನಿನ್ನ ಕೀರ್ತನೆ ನಿನ್ನ ಪ್ರಾರ್ಥನೆ
ನಿನ್ನ ಚರಿತೆ ನಿನ್ನ ವಾರಿತೆ ನಿನ್ನ ಶಕುತಿ ನಿನ್ನ ಯುಕುತಿ
ನಿನ್ನ ವ್ಯಾಪುತ ನಿನ್ನ ಗುಪತಾ ನಿನ್ನ ವ್ಯಕುತಿ ನಿನ್ನ ಭಕುತಿ
ನಿನ್ನ ಧೈರ್ಯ ನಿನ್ನ ಶೌರ್ಯ
ನಿನ್ನ ಕಾರ್ಯ ನಿನ್ನ ಚರಿಯಾ
ನಿನ್ನ ದೊರೆತನ ನಿನ್ನ ಹಿರೇತನ
ನಿನ್ನ ರೂಪ ನಿನ್ನ ಸಲ್ಲಾಪ

ಶಾಂತ ಮೂರುತಿ ನಮ್ಮ ವಿಜಯ ವಿಠ್ಠಲ ಭಕ್ತ
ರಂತರಂಗದೊಳು ನಿಂತಾಡುವ ದೈವಾ ೪

ಆದಿತಾಳ

ಕಿರೀಟ ಕುಂಡಲ ಕುರುಳಗೂಡಲು
ಕೊರಳ ಹಾರ ಕೈಮುದ್ರೆ ಪರಿ
ಪರಿ ಭೂಷಣ ಶೋಭನ ವಸನ
ಚರಣ ನೂಪುರ ಕಡಗ ಗೆಜ್ಜೆ
ಗರುವ ದೇವರದೇವ ಸಾ
ವಿರನಯನ ವಿಜಯ ವಿಠ್ಠಲ
ಕರುಣಿ ಪುರಂದರದಾಸರಿಗೆ
ನಿರುತ ಒಲಿದ ನಿರ್ಮಳ ರೂಪ ೫

ಜತೆ

ಧನ್ಯನಾದೆನು ಇಂದು ದಾನವಾರಿಯ ಕಂಡು
ಪುಣ್ಯಸಂಪಾದಿಸಿದೆ ವಿಜಯ ವಿಠ್ಠಲನಿಂದಾ ೬

೧೦೨

ಧ್ರುವತಾಳ

ಭಕ್ತರಿಗೋಸುಗ ನಿನ್ನ ಮೂರುತಿಗಳು
ಭಕ್ತರಿಗೋಸುಗ ನಿನ್ನ ಗುಣಂಗಳು
ಭಕ್ತರಿಗೋಸುಗ ನಿನ್ನವತಾರಗಳು
ಭಕ್ತರಿಗೋಸುಗ ನಿನ್ನ ಮಹಿಮೆಗಳು
ಭಕ್ತರಿಗೋಸುಗ ನಿನ್ನ ಚರಿತೆಗಳು
ಭಕ್ತರಿಗೋಸುಗ ನಿನ್ನ ಭಾಗ್ಯವಯ್ಯಾ
ಭಕ್ತರಿಗೋಸುಗ ನಿನ್ನ ಮಂದಿರಗಳು
ಭಕ್ತರಿಗೋಸುಗ ನಿನ್ನ ನಡತೆ ನುಡತಿ
ಭಕ್ತರ ನೆಲೆಮಾಡಿ ಅವರಿಗೆ ಪ್ರೇರಿಸಿ
ಭಕ್ತವತ್ಸಲನೆಂಬೊ ಬಿರಿದು ಪಡೆದೆ

ಮುಕ್ತ ನಾಮ ಪರಮಾಂಗತಿ ವಿಜಯ ವಿಠ್ಠಲ
ಭಕ್ತರಿಂದಲಿ ನೀನು ಭಾಗ್ಯವಂತನು ೧

ಮಟ್ಟತಾಳ

ವೇದಗಳು ರಚಿಸಿ ಆದರದಿಂದಲಿ
ಆಧಾರವನು ಮಾಡಿ ಆದಿಮಧ್ಯಾಂತದಲಿ
ಆದಿ ಮೂರುತಿಯಾಗಿ ಭೇದಾರ್ಥವ ತಿಳುಹಿ
ಭೋಧರ ಕೈಯಿಂದ ತ್ರಿಧರೆಯೊಳು ಮೆರೆದೆ
ವಿಧಾತನಾಮ ವಿಜಯ ವಿಠ್ಠಲರೇಯಾ
ವೇದಗಳು ರಚಿಸಿ ಆದರದಿಂದಲಿ ೨

ತ್ರಿವಿಡಿತಾಳ

ಬಿಸಿಜಜಾಂಡ ಪುಟ್ಟಿಸಿ ಪಂಚ ಭೂತಾತ್ಮದ
ವಸುಧಿಯ ನಿರ್ಮಾಣವನ್ನು ಮಾಡಿ
ಬಸುರಿಲಿದ್ದವರನ್ನು ಒಂದೊಂದು ರೂಪದಲಿ
ಅಸುವ ನೇಮಿಸಿ ಚೇತನಂಗಳಿತ್ತು
ವಿಷಜೀವಿಗಳಿಗೆ ತಾಮಸ ದಾರಿಯ ತೋರಿ
ಕುಶಲ ಬುಧರಿಗೆ ಶೋಭಿಸುವ ಮತಿ
ವಿಶುದ್ಧಾತ್ಮನಾಮ ಸಿರಿ ವಿಜಯ ವಿಠ್ಠಲ ನೀನು
ವಶವಾಗಿ ಭಕ್ತರ ಕೂಡಲಿರುತಿಪ್ಪೆ ೩

ಅಟ್ಟತಾಳ

ಮೇರು ಮಂದರಗಿರಿ ಮೊದಲಾದ ಪರ್ವತ
ಧಾರುಣಿಯೊಳಗುಳ್ಳ ಸಕಲ ತೀರ್ಥಂಗಳು
ನೂರೆಂಟು ಸ್ವಯಂ ವ್ಯಕ್ತವಾದ ಪುಣ್ಯನದಿ
ವಾರಿಧಿ ಪರಿಯಂತ ಮರ್ಯಾದೆ ಮಾಡಿ
ಪಾರಮಾರ್ಥ ಸಾಧನವಲ್ಲಿಗಲ್ಲಿಗೆ
ಕಾರುಣ್ಯದಲಿ ಸೃಜಿಸಿ ಕಿಂಕರರಿಂದ
ಆರಾಧನೆಗೊಂಡು ಅವರಿಗೆ ಸದ್ಗುಣ
ತೋರಿಕೊಡು ಧ್ವನಿ ವಿಜಯ ವಿಠ್ಠಲರೇಯಾ ೪

ಆದಿತಾಳ

ಬಿಸಿಲೊಳಗೆ ತಪಿಸಿ ಬಂದ ತೃಷೆಯಾದ ಮನುಜಗೆ
ರಸದಾಳಿಕಬ್ಬು ಕೂಲಿಗೆ ಹಸನಾಗಿ ತಿನಿಸಿದಂತೆ
ವಿಷದಲ್ಲಿ ತಪಿಸುತಾ ವಸುಧಿಯೊಳಗಿರುತಿರೆ
ವಸುದೇವಸುತನೆಂಬೊ ರಸದಾಳಿ ಕಬ್ಬುಕೂಲಿಗೆ
ಎಸಳ ಮೆದ್ದಂತೆ ಕಾಣೊ ಅಸುರಾರಿ ನಿನ್ನ ನಾ
ಮ ಸುಧೆಯ ಕುಡಿಸಿ ಕೂಲಿಗೆ ಅಸಮ ಸಂಪದವನೀವೆ
ಅಸಂಭಾವಿತರಾಗದಂತೆ ವೃಷ ವಿಜಯ ವಿಠ್ಠಲ
ಅಸಮದೈವವೆ ನೀನು ಹಸುಗಳ ಪಾಲಿಸುತ
ಪೆಸರ ಪಡೆವನಂತೇ ೫

ಜತೆ

ದಾಸರಾಡಿದ ಲೀಲೆ ನಿನಗೆ ಸಂತೃಪ್ತಿಯೊ
ಭೂಷಣ ನಾಮ ಸಿರಿ ವಿಜಯ ವಿಠ್ಠಲ ಒಡೆಯಾ ೬

೧೦೩

ಧ್ರುವತಾಳ

ಭಕುತರಿಗಾಪತ್ತು ಬರಲೀಸಾ ಬರಲೀಸಾ
ಭಕುತರಿಗಪಮೃತ್ಯು ಬರಲೀಸಾ ಬರಲೀಸಾ
ಭಕುತರಿಗೆ ಕ್ಲೇಶ ಬರಲೀಸಾ ಬರಲೀಸಾ
ಭಕುತರಿಗೆ ಭಯ ಬರಲೀಸಾ ಬರಲೀಸಾ
ಭಕುತರಿಗೆ ಪೀಡೆ ಬರಲೀಸಾ ಬರಲೀಸಾ
ಭಕುತರಿಗೆ ಅಧರ್ಮ ಬರಲೀಸಾ ಬರಲೀಸಾ
ಭಕುತರಿಗೆ ದೋಷಾ ಬರಲೀಸಾ ಬರಲೀಸಾ
ಭಕುತರಿಗೆ ಸಮೀಪಾ ದೂರದಿಂದ
ಭಕುತಿ ಪಾಶಕೆ ಶಿಲ್ಕಿ ಬಂದೊದಗುವ ದೇವಾ

ಭಕುತರಿಗೆ ಪಂಚಪ್ರಾಣ ನಾಯಕಾ
ಭಕುತರಪೇಕ್ಷೆಯನ್ನು ಸಲಿಸಿ ಸೋತು ಬಿಡುವಾ
ಭಕುತೇಶ ಮುಕುತೇಶ ಮುಕ್ತಾಮುಕ್ತ ನಿಯಾಮಕ
ಭಕುತರಿಗೊಲಿವುದು ಆವ ಗಂಭೀರತನವೋ
ಭಕುತರ ಆತನಿಗೆ ಏನು ತಂದಿತ್ತರು ಕಾಣೊ
ಭಕುತರನ ಕಾಣದೆ ಇರುತಿಪ್ಪ ವಿಶ್ವರೂಪಾ
ಭಕುತರನ ಪಕ್ಕೆಯೊಳಗಿಟ್ಟು ಸಾಕುವ ಗುಣನಿಧಿ
ಭಕುತರು ಪಾಲಿಪುದು ಆತಗೇನಾನಂದವೊ
ಭಕುತರು ಹೇಳಿದಂತೆ ಕೇಳಿಕೊಂಡು ಇಪ್ಪಾ
ಶಕುತನೆ ನಿಸ್ಸಂಗಾ ಇಂದ್ರಿಯ ಗೋಚರಾ
ಸಕಲೈಶ್ವರ್ಯಾತಗೆ ಪರಿಪೂರ್ಣವಾಗಿರೆ ನಾ
ಟಕವಾಡುವಾ ತನ್ನ ನಿಜಸ್ವಭಾವವೊ
ಭಕುತರನ ಸಲೆ ಬಿಟ್ಟು ಅವರಂತೆ ಆಡುವಾ
ಅಕಳಂಕ ಅಖಂಡ ವ್ಯಾಪ್ತದೀಪ್ತಾ
ಅಖಿಳ ಬೊಮ್ಮಾದ್ಯರು ಅನಂತಾನಂ
ತ ಕಲ್ಪಕೆ ತೊಲಗದೆ ತನ್ನ ಒಂದು ರೋಮದೊಳು ಎ
ಣಿಕೆ ಅನಂತಾನಂತಾಂಶಾ ಮೂಡಲೀಪರಿ ಅ
ಧಿಕವ ಗುಣಿಸಲು ಅಂಥಾದಂಥಾದಂಥಾದೆ
ಉಕುತಿ ನಿಲುವಾ ಪರಿಯಂತ ಯೋಚಿಸಿ ಅ
ದಕೆ ಏಕ ಪ್ರದೇಶದಲ್ಲಿ ಹತ್ತಿಕೊಂಡು ತಮ್ಮ
ಸುಖಸಾಂದ್ರದಿಂದ ನಾನಾ ರೂಪವ ಧರಿಸಿ ಬಾ
ಧಕವಿಲ್ಲದಂತೆ ವಿಸ್ತಾರ ಸಂಚರಿಪರೂ
ಭಕುತರು ಈ ಪರಿ ತನ್ನೊಳಗಿರಲಿಕ್ಕೆ
ಮಕ್ಕಳಾಟಿಕೆಯಂತೆ ಮಾಯಾವ ಹಚ್ಚಿಕೊಂಡು
ಅಕುಟಿಲ ಧೈವವೆ ಅನಾದಿಯಿಂದಲಿ
ಭಕುತರಿಗೆ ಬಂಟನಾಗಿ ಇಪ್ಪುದು ಇದೇನು ಸೋಗು

ಪ್ರಕಟ ಅಪ್ರಕಟ ಆತನ ಮುಕುತಿಗೆ ದೇ
ವಕ್ಕಳೆಲ್ಲ ಎದುರಿಲ್ಲಾ ಎಂದೆಂದಿಗೆ ನೋಡೆ
ಭಕುತರಿಗಾಗಿ ನೀಚ ವೃತ್ತಿ ಕೈಕೊಂಡು
ವಿಕುತಸಖನಾಮನಿಗೆ ಸಮಸ್ತಲೋಕ ಪಾ
ಲಕ ಬಂದು ಮನ್ನಿಸಿ ವಂದನೆ ಕೊಂಡಂತೆ
ಭಕುತ ಜನಕೆ ತಾನೆ ಕೈವಶವೋ
ಭಕುತರೆಲ್ಲಿದ್ದರಲ್ಲೆ ಮಂಗಳಪ್ರದನಾಗಿ
ನಿಖಿಳಕಾಲಕೆ ನಿರ್ದುಃಖಿ ಎನಿಸಿಕೊಂಬ
ಭಕುತರ ಅರಭಾರ ವಹಿಸುವ ಹರಿ ಚನ್ನಾಗಿ
ಭಕುತರ ಭಾಗ್ಯವೆಂತೋ ಅಹಾಹಾ ಹೊ ಹೊ ಹೊ
ಭಕುತರಾಶೇಷವನ್ನು ಕೊಂಬ ವಿಚಿತ್ರ ಪುರುಷಾ
ಭಕುತರ ವಿಶೇಷವೇನಯ್ಯಾ ಲಕುಮಿ ಇರಲು
ಭಕುತರು ತನ್ನ ಉದ್ಧಾರಕರ್ತರೇನೊ
ಭಕುತರು ನಾನಾ ಪರಿ ಅಪರಾಧವೆಸಗೆ ಪಾ
ಪಕೆ ಹಾಕದಲೆ ತನ್ನ ಕೂಡಾಡಿಸುವಾ
ಭಕುತಿಗೆ ಸಾಧ್ಯವಾದಂತೆ ಸರ್ವೋತ್ತಮಾ
ಮಖ ತೀರ್ಥಯಾತ್ರಿ ಕನ್ಯಾಕಾಂಚನ ದಾನಕೊಟ್ಟು
ದಕೆ ಒಲಿಯನು ಕಾಣೋ ಕೇವಲ ರಹಸ್ಯ
ಭಕುತರಿಗೆ ಸ್ವಾಮಿ ಸರ್ವದಾ ಸುಲಭಾ
ವಿಕಳಮಾನವ ಇಂಥ ಅತಿಶಯ ಬಿಟ್ಟು ಲೌ
ಕಿಕವೆಲ್ಲಾ ಬ್ರಹ್ಮಸ್ವರೂಪವೆಂದು ವೈಕಾ
ರಿಕ ಮಾರ್ಗ ಕಾಣದವ ಅವನೆ ಮೊಳೆಸೋಗನೊ
ರಕ್ಕಸ ವೇಷದವ ಬಹು ಜನುಮ ಜನುಮದಾಗೆ
ಕಕುಲಾತಿಯಿಂದ ಪೋಗಿ ಅನುಸರಿಸಿದಿರೆ ಸುಜನಾ
ಭಕುತ ವತ್ಸಲ ನಮ್ಮ ವಿಜಯ ವಿಠ್ಠಲನ ಪಾದ
ಭಕುತಿ ದೊರಿಯದ ತನಕ ಕರ್ಮ ಹಿಂದಾಗದು ೧

ಮಟ್ಟತಾಳ

ಭಕುತರಿಗಾಗಿ ಮಹಾತತ್ವ ಮೊದಲಾದ
ಸಕಲ ತತ್ವಂಗಳು ಪುಟ್ಟಿಸಿದನು ಗಡಾ
ಭಕುತರಿಗಾಗಿ ಚತುರ್ದಶ ಲೋಕವನು
ಅಕಟಕಟಾ ವೇಗ ಮಾಡಿದಾ ನೋಡುಗಡಾ
ಭಕುತರಿಗಾಗಿ ಸಪುತ ಶರಧಿ ಉ
ದಕ ಪೂರಿತವಾಗಿ ಸೃಜಿಸಿದನು ಗಡಾ
ಭಕುತರಿಗಾಗಿ ಮೇರು ಮಂದಾರ ಶೈಲಾ
ದಿಕ್ಕು ದೇಶ ಕೋಶ ಮಾಡಿ ಇಟ್ಟನು ಗಡಾ
ಭಕುತರಿಗಾಗಿ ತೀರ್ಥ ಪುಣ್ಯಕ್ಷೇತ್ರ
ಸಕಲ ಪದಾರ್ಥಗಳು ಇಡಲಾಪಟ್ಟನುಗಡಾ
ಭಕುತರಿಗಾಗಿ ಏನು ಬೇಡಿದ್ದು
ಭಕುತಿಯ ಕಲ್ಪಿಸಿ ಧರಿಗೆ ತುಂಬಿದ ಗಡಾ
ಭಕುತರಾಧೀನ ನಮ್ಮ ವಿಜಯ ವಿಠ್ಠಲ ತನ್ನ
ಭಕುತರಿಗಾಗಿ ನಾನಾ ಪಾಟುಬಡುವಾ ೨

ತ್ರಿವಿಡಿತಾಳ

ತಂದೆಯಾಗಿ ತಾಯಿಯಂದದಿ ಸಾಕುವ
ಬಂಧು ಬಳಗವಾಗಿ ಸಾಕುವ ಸಾಕುವಾ
ಹಿಂದೆ ಮುಂದೆ ಇದ್ದು ಸಾಕುವ ಸಾಕುವಾ
ಕಂದನಾಗಿ ಬಿಡದೆ ಸಾಕುವ ಮುಖ್ಯ ಸಂ
ಬಂಧಿಗ ತಾನಾಗಿ ಸಾಕುವಾ ಸಾಕುವಾ
ಕುಂದಗೊಡದೆ ಒಲಿದು ಸಾಕುವಾ ಸಾಕುವಾ
ಸಂದಣಿಯೊಳಗಿರಲು ಸಾಕುವ ಸಾಕುವ
ಸಂದಣಿಯೊಳಗಿರಲು ಕರಣಾದಿಂದಲಿ ಒದಗಿ
ಬಂದು ಸಾಕುವಾ ಬಹು ಚತುರತನದಲ್ಲಿ
ನಿಂದಲ್ಲಿ ಕುಳಿತಲ್ಲ ಮಲಗಿ ಏಳುವಲ್ಲಿ

ಒಂದುಕ್ಷಣ ಬಿಟ್ಟು ಇರದೆ ಸಾಕುವನಯ್ಯಾ
ಎಂದೆಂದಿಗೆ ಶರಣ ಬೇಡಿದ ಭೀಷ್ಟೆಯನ್ನು
ತಂದು ಕೊಡುವ ತವಕದಿಂದಲಿ ಮೀರದಲೆ
ಇಂದಿರಾರಮಣನ ಕರುಣಾತನಕೆ ಏ
ನೆಂದು ಪೇಳಲಿ ಮನಸು ಸಾಲದು ಸಾಲದು
ನಂದು ಬೇಕಾದರೆ ಆ ತನ್ನ ಪಾದವನ್ನು
ಪೊಂದಿರೋ ಪುಶಿಯಲ್ಲ ಪುಣ್ಯವೇ ಫಲಿಸೋದು
ಪುಣ್ಯಾತ್ಮಕ ದೇವಾ ವಿಜಯ ವಿಠ್ಠಲರೇಯಾ
ಭಿನ್ನಾಂಶನಾಗಿ ನಮ್ಮೊಳಗಿಪ್ಪ ಜಗದಪ್ಪ ೩

ಅಟ್ಟತಾಳ

ದೇವ ದೇವೇಶನು ತನ್ನ ಇಂದ್ರಿಯಗಳೆಲ್ಲಾ
ಜೀವರ ಸ್ವರೂಪೇಂದ್ರಿಯೊಳಿಗಿಟ್ಟು ತ
ದ್ಭಾವ ನಡೆಸುವ ನಿರ್ದೋಷನಾಗಿ
ತ್ರಿವಿಧ ಗುಣದಲ್ಲಿ ಮರಳೆ ಮಿಶ್ರವಾಗಿ
ಪಾವನ ಪಾವನ ಮತಿಯನೆ ಕೊಡುತಲಿ
ಕಾವಾ ಕೊಲ್ಲುವುದಕ್ಕೆ ಕರ್ತಾನೆನಿಸಿಕೊಂಡು
ಜೀವರಿಗೆ ಲೇಶ ತಿಳಿಯಗೊಡಲಾಹಂ
ಭಾವವೆ ಕಲ್ಪಿಸಿ ಭಕುತಿಯ ಪುಟ್ಟಿಸಾ
ಕೋವಿದರಿಗೆ ತಾನೇ ಒಲಿಯ ಬೇಕಾದರೆ
ಆವಾಗೆ ಅವರಿಗೆ ತನ್ನನೇ ತೋರುವಾ
ದೇವಕ್ಕಿನಂದನ ವಿಜಯ ವಿಠ್ಠಲರೇಯಾ
ಕೈವಲ್ಯದಾಯಕ ಆನಂದ ಭರಿತಾ ೪

ಆದಿತಾಳ

ಬೊಮ್ಮ ಮರುತ ಗರುಡ ಶೇಷ
ಉಮ್ಮೆಯರಸಾ ಇಂದ್ರ ಕಾಮಾ
ಈ ಮಹಾತ್ಮರವಿಡಿದು ಮನುಜೋ

ತ್ರುಮ ತೃಣ ಪರಿಯಂತ ಇದೆ ಇದೆ ಪೆಸರಿನಲಿ
ಮಮ್ಮತಾರಹಿತರಾಗಿ ಆ
ತುಮ್ಮದೊಳಗೆ ವಾಸವಾಗಿದ್ದು
ಒಮ್ಮಿಗಾದರು ತೊಲಗದೆ
ಘಮ್ಮನೆ ಕರ್ಮ ಮಾಡಿಸುವಾ
ಹಮ್ಮುಯಿಲ್ಲದ ದೈವ ವಿಜಯ ವಿಠ್ಠಲರೇಯಾ
ಇಮ್ಮಡಿ ಮುಮ್ಮಡಿ ನಡೆಸುವಾ ೫

ಜತೆ

ಭಕುತರ ಮನೋಹರಾ ಸೌಭಾಗ್ಯವಂತ ವಿ
ರಕ್ತರ ಪ್ರೀಯಾ ಸಿರಿ ವಿಜಯ ವಿಠ್ಠಲರೇಯಾ ೬

೧೦೪

ಧ್ರುವತಾಳ

ಮರುಳನ್ನ ಪರಿಹರಿಸೊ ದುರ್ಗಾರಮಣ ಹರಿ
ಉರಗಾಭರಣ ರುದ್ರನಾಮಕ ನಾರಾಯಣ
ಸರಳೊಂದು ಎಚ್ಚೆ ಸಪ್ತ ತೃಣರಾಜ ತರುಗಳ
ಧರಣಿಗೆ ಒರಗಿಸಿದ ಧೈರ್ಯಶಾಲಿ
ಇರಳು ಹಗಲು ನಿನ್ನ ಶರಣಂಗೆ ಪ್ರೀತಿಯಾದ
ನರರಿಗೆ ಮನೋವಾಚ ಕಾಯದಲ್ಲಿ
ಅರ ಎಳ್ಳಿನಿತಾದರು ವಿಪತ್ತು ಎಂಬೊದುಂಟೆ
ಕರುಣಾಕರ ದೇವ ಅಮೃತ ಹಸ್ತ
ಗರಳುರಿ ಮಧ್ಯದಲ್ಲಿದ್ದ ಸಸಿಯಂತೆ ಜೀ
ವರು ಇಪ್ಪರು ಕೇಳು ಕಡೆ ಹಾಯಿಸೊ
ಪರಮ ಮೂರ್ಖರಾದರು ಶೋಧಿಸಿ ನೋಡಿದರು
ಹರಿ ನಿನ್ನ ಲೀಲೆ ಕಾಣೆ ತಿಳಿದು ಬಲ್ಲೆ
ಪರರಿಗೆ ಈ ಪರಿ ಸಾಹಸ ಎಂತೆಂಬಿಯಾ ಭಕ್ತಜನರ

ಪೊರೆವ ಬಿರಿದು ನಿನ್ನದಲ್ಲವೇನೈ
ಅರಿಯದವನಂತೆ, ಸುಮ್ಮನಿರಲಾಗದೊ
ಪರಿಪಕ್ವಕಾಲ ಬಂದಿದೆ, ಈಗಲೇ
ಮೊರೆ ಹೊಕ್ಕೆನಯ್ಯಾ ನಿನ್ನ ಚರಣಾಬ್ಜಯುಗಳ
ನೆರೆ ಮಾತು ಲಾಲಿಸು ಮನಕೆ ತಂದು
ಬರಿದಾಗೆ ಪೋಗದಂತೆ ಮಾಡೊ ಮಹಾ ಪ್ರಬಲ
ತುರಗವೇರಿದ ಕಲ್ಕಿ ಖಳಮರ್ದನ
ಪರೀಕ್ಷೆ ಮಾಡುವ ಕಾಲ ಸ್ವಲ್ಪವಾದರು ಇಲ್ಲ
ಸರುವ ಬಗೆಯಿಂದ ವಿಚಾರಿಸೆ
ಕೊರಳಗತಾರ್ತರಾಗಿ ಕೇವಲ
ನಿರವಿಣ್ಯ ಪರರಾಗಿ ದೈನ್ಯವೃತ್ತಿಬಡುತಿಪ್ಪರೊ
ವರ ಅಭಯ ಮೂರ್ತಿಯಿಂಥ ಸಮಯಕ್ಕೆ ನಿನ್ನ
ಚರಿತ್ರೆ ತೋರದಿದ್ದಡೆ ಇನ್ನಾವಗ ತೋರ್ಪೆ
ಹಿರಿಯರು ಪಿಂತೆ ರಾಯರಿಗೆ ಬಂದ ಕುಹೂಯೋಗ
ಪರಿಹರಿಸಿ ಕೀರ್ತಿಪೊತ್ತು ನಿನ್ನವರಾಗಿ
ಧರಣಿಯೊಳಗೆ ಮೆರೆದು, ಜಯವಂತರೆನಿಸಿ ಡಂ
ಗುರವ, ಹೊಯಿಸಿ ನಿನ್ನ ಒಲಿಸಲಿಲ್ಲೆ
ನೆರೆ ಹೊರೆಯವನಲ್ಲ ನಾನವರ ಶಿಷ್ಯರ
ಕರುಣಾಕಟಾಕ್ಷಕ್ಕೆ ಯೋಗ್ಯನಹುದೊ
ಹರಿ ನೀನೆ ಉಪೇಕ್ಷ ಮಾಡಿದರೆ ನಿಂ
ದಿರೆ ಮಾರ್ಗ ಕಾಣೆನೊ ಪರಮ ಮಿತ್ರ
ಹರುವ ಹೆದ್ದೊರೆಯೊಳುಕ್ಕಾಸು ಈಸುಕಾಯಿ
ಹರಗೋಲು ತಪ್ಪಿ ಕೈಸೋತು ಕಡಿಗೆ
ಬರುವ ಮನುಜ ನಡುವೆ ಮುಣುಗುವ ಪರಿಯಂತೆ
ತೆರನಾಗಿದೆ, ಇನ್ನೇನುಳಿದೆ ಇಲ್ಲ
ಸುರಪಾಲಾನುತ, ಸಿರಿ ವಿಜಯ ವಿಠ್ಠಲ ನಿನ್ನ
ಕರುಣವಾದರೆ ಕೋಟಿ ಪ್ರತಿಬಂಧಕ ಹರವು ೧

ಮಟ್ಟತಾಳ

ಕಣ್ಣಿಲೆ ಕೊರ ಜೀವ ಹಿಡಕೊಂಡು ಜನರು
ಖಿನ್ನರಾಗಿ ಬಹಳ ಖೇದ ಬಡುತಲಿಹರೊ
ಮುನ್ನೆ ಉಪಾಯಗಳು ಒಂದಾದರು ಅವರು
ಇನ್ನು ಕಾಣರು ಕಾಣೊ, ಇತ್ತ ಮೊಗವಾಗೊ
ಬಿನ್ನೈಸುವೆನೊ ಮುಂದಣ ವಿಚಾರ, ಪ್ರ-
ಸನ್ನ ವದನ ಒಲಿದವರ ಚಿತ್ತಾಪಹಾರಿ
ಘನ್ನ ಮಹಮಹಿಮ ವಿಜಯವಿಠ್ಠಲ, ದೈತ್ಯಾ
ರಣ್ಯವ ಸವರುವ, ಸಂತತಗುಣಶೀಲ ೨

ತ್ರಿವಿಡಿತಾಳ

ಪ್ರಜೆಗಳ ಕ್ಷೋಭಿಯ ನೋಡಲಾರದೆ ನಿನಗೆ
ಭಜನೆಯಿಂದಲೆ ನಾನು ಮೊರೆಯಿಟ್ಟೆನಯ್ಯಾ
ಗಜರಾಜ ಎಲ್ಲರಿಗೆ ಮೇಲು ಪಂಜ್ತೆಯ ಹಾಕಿ
ತ್ರಿಜಗದೊಳಗೆ ಇಂತು ತೋರಿ ಕೊಟ್ಟ
ದ್ವಿಜರಾಜ ಧ್ವಜನೆ ಸಂಭವಾಮಿ ಯುಗೆ ಯುಗೆ
ನಿಜವಾಕ್ಯ ಭಕ್ತಿರ್ಗೆ ದೊರೆತಿಪ್ಪದೊ
ರಜದೂರ ನಿನ್ನವತಾರ ಕೃತ್ಯವೆ ಭೂ
ಭುಜರ ಶಕ್ತಿ ನಿನ್ನದಲ್ಲವೇನೈ
ಯಜಮಾನ ಸಕಲಕ್ಕೂ ನೀನಾದ ಕಾರಣ ಯೋ
ನಿಜರು ಪೌರುಷ ಪೇಳಿ ವ್ಯರ್ಥವಹರೆ
ವ್ರಜದಲ್ಲಿ ಕಾಲಾನಳನು ನುಂಗೆ ಗೋಗೋಪ
ವ್ರಜಗಳ ಕಾಯ್ದು ವೈಭವ ಪ್ರಭುವೆ
ದ್ವಿಜದೇವ ವೃತ್ತಿಕ್ಷೇತ್ರ ಧರ್ಮ ಮೊದಲಾದ
ಯಜನಾದಿಗಳು ನಿರುಪದ್ರವಾಗಿ
ಸುಜನರು ಸಂತೋಷದಿಂದಲಿಪ್ಪರು ನಿತ್ಯ
ವಿಜಯವಾಗಿಪ್ಪುದು ನೋಳ್ಪರಿಗೆ
ಕುಜನರ ಪಾಪ ಪೂರತಿಯಾಗುವತನಕ

ಅಜನಯ್ಯ ಎನಗೆ ಈ ಮಾತು ದೊರಕುವುದೇನೊ
ಭುಜಗೇಂದ್ರಶಯನ, ಸಿರಿ ವಿಜಯ ವಿಠ್ಠಲ ಎನ್ನ
ರುಜುವಾಕ್ಯವೆಂಬೋದೆ ಬಾಣಪ್ರಯೋಗವು ೩

ಅಟ್ಟತಾಳ

ಆಲಸ್ಯ ಮಾಡೋದು ಸಲ್ಲ ಶ್ರೀನಲ್ಲ ಬಲು
ಬಾಲಮತಿಯವ ನಾನು ಸುರಧೇನು ನಿನ್ನ
ಪಾಲಿಗೆ ಬಂದಿಹೆನಯ್ಯಾ ಪಿಡಿ ಕೈಯ್ಯ ಇಂದು
ನಾಲಿಗೆಯಿಂದ ಬಂದ ಬಲು ಛಂದ ಮಾತು
ಪಾಲಿಸು ಪರಮ ಪಾವನ್ನ ಮೋಹನ್ನ ದೇವಸ್ವಾಮಿ
ಹೇಳಿದ್ದು ಪೊಳ್ಳಾಗಗೊಡದೆ ಹೀಗೆ ಬಿಡದೆ ಸತ್ಯ
ವಾಲಯವಾಗಲಿ ಸ್ವಾಮಿ ಅಂತರ್ಯಾಮಿ ಇದು
ಕೇಳೊ ಎನ್ನಂತೆ ಕರ್ನದಲ್ಲಿ ಕಾಲ
ಕಾಲಕೆ ಅನ್ಯಾಪೇಕ್ಷಿಸದೆ ಉಪೇಕ್ಷಿಸದೆ ಹರಿ
ವಾಲಗ ಮತ್ತೊಂದರಿಯೆ, ಎನ್ನ ಧೊರಿಯೆ, ದೇಶ
ಕಾಲಗುಣ ಪರಿಪೂರ್ಣ ನಾನಾವರ್ಣ ತೇಜ
ಪಾಲಸಾಗರ ಸರ್ಪಶಾಯಿ, ನಮ್ಮ ತಾಯಿ ದಿವ್ಯ
ಮೇಲು ಮೇಲು ನಿನ್ನ ಶಕ್ತಿ, ಎನ್ನ ಉಕ್ತಿ ನಿಜ
ತಾಳಿದೆ ಹತ್ತಾವತಾರ, ಭವತಾರ ನಿ
ನ್ನಾಳಿಗೆ ಬರುವುದು ಕೀರ್ತಿ ನಿನ್ನ ವಾರ್ತಿಭವ್ಯ
ಕೇಳಿದರಿಂದ ಮುಕ್ತಿ, ಸದ್ಯ ಭುಕ್ತಿ ಭಕ್ತಿ
ಮೇಲು ಸುಜ್ಞಾನ ವೈರಾಗ್ಯವೆಂಬೊ, ಭಾಗ್ಯ ಕೃಷ್ಣ
ನೀಲಾಂಗ ವಿಜಯ ವಿಠ್ಠಲ ಅಕುಟಿಲ, ಸುಖ, ದಿವದಿ
ಬಾಳಿದೆ ನಿನ್ನಂಘ್ರೀ ಸೇರಿ ಮನಸಾರಿ ೪

ಆದಿತಾಳ

ಭೂಮಿಸುರರು ನಿಂದು ಮಾಡಿದ ಜಪ ತಪ
ನೇಮನಿತ್ಯಂಗಳೇಸು ಕಾಮ್ಯಕರ್ಮ ಮಾಡಲು
ಯಾಮ ಯಾಮಕೆ ಮಾತ್ರ ಸಿದ್ಧಿಯಾಗಲಿ, ನಿ–

ಷ್ಠಾಮಕವಾಗಲಿ ಎನಗೆ ನುಡಿದು ಲಿಪಿಸಿದ ಪ್ರತಿ
ಭೀಮ ಪರಾಕ್ರಮ, ದುಷ್ಟನಿಗ್ರಹ ಸುರ
ಪ್ರೇಮ ಫಲಪ್ರದ ಪ್ರಾಕೃತ ಪಾದ, ವಿಜಯ ವಿಠ್ಠಲರೇಯ
ತಾಮಸ ಖಂಡಿಸಿ, ಎಲ್ಲರಿಗೆ ಸುಖವನೀಯೋ ೫

ಜತೆ

ಉಭಯಾರ್ಥಕ್ಕಿದೆ ಸ್ತೋತ್ರ ಮಾಡಿ ಅರ್ಪಿಸಿದೆನೋ
ಶುಭ ಮೂರುತಿ ನಮ್ಮ ವಿಜಯ ವಿಠ್ಠಲ ಬಾರೋ ೬

೧೦೫

ಧ್ರುವತಾಳ

ರೋಗ ನಿವಾರಣವಾಗುವುದಿದು ಮಹಾ
ರೋಗಿಗಳು ನೆರೆದು ನಿಗಮ ಸುಪುರಾಣ
ಭಾಗವತ ಪಂಚರಾತ್ರಾಗಮವ ಶೋಧಿಸಿ
ವೇಗದಿಂದಲಿ ದುಗ್ಧ ಸಾಗರ ಮಧ್ಯದೊಳಗೆ
ನಾಗರಾಜನ ಮೇಲೆ ಯೋಗನಿದ್ರೆಯೊಳಿಪ್ಪ
ವಾಗೀಶ ಪಿತನ ಇಂಬಾಗಿ ನೆನೆಸಲು
ಪೋಗುವದಘವೆಂದು ಯೋಗೀಶ್ವರರು ಶಿರ
ದೂಗಿ ಸಾಕುವರು ಚನ್ನಾಗಿ ಶ್ರೀಹರಿಯ ನಾಮ
ಈಗ ಸಂಸಾರವೆಂಬೊ ಬ್ಯಾಗಿ ಮಧ್ಯದ ನರರು
ಜಾಗುಮಾಡದೆ ಬಲು ಜಾಗರರಾಗಿ ತಂಬಲಾಗುವಂತೆ ಉಂಡು
ತೇಗಿ ತೃಪ್ತಿ ಪಡುವುದು ಭೋಗಾನಂದಾ ನಿಮಗೆ
ಯೋಗಾನಂದ ಹಾಗಾರಾ ಹಾಗಾವಿತ್ತು ಲೋಗರಕೈಯಿಂದ
ತೂಗಿ ಬೆಲೆಗೆ ವಸ್ತಾವೇಗತರುವದಲ್ಲ
ಶ್ರೀಗುರು ಧನ್ವಂತ್ರಿ ವಿಜಯ ವಿಠ್ಠಲನಾಮ ದ್ವೇಷ
ಭಾಗಿಗಳಿಗೆ ಸಲ್ಲಾ ಶ್ರೀ ಗೌರಿಪತಿ ಬಲ್ಲಾ ೧

ಮಟ್ಟತಾಳ

ಅಡವಿ ಗಿಡವ ತುಕ್ಕಿ ಆಗಳಿ ತರುವದಲ್ಲ
ಕೊಡಲಿಯಲಿ ಕಡಿದು ಪೊತ್ತು ತರುವದಲ್ಲ
ಪುಡಿಮಾಡಿ ಅರೆದು ಮುದ್ದೆ ಮಾಡುವುದಲ್ಲ
ಅಡಿಗೆಯನೆ ಮಾಡಿ ಪಾಕಕ್ಕಿಳಿಪದಲ್ಲ
ಅಡಿಗಡಿಗೆ ಬಾಯ್ದೆರೆದು ಬೇಡುವುದು ಅಲ್ಲ
ಕೊಡರು ಪರರು ಎಂದು ದುಃಖಬಡುವದಲ್ಲ
ಬಡವ ಭಾಗ್ಯವಂತರೆಂಬ ವಚನ ಸಲ್ಲ
ಪೊಡವಿಯೊಳಗೆ ಬಲು ಸವಿಯದೌಷಧವೊ
ಕುಡಿಯ ಬಲ್ಲವರಿಗೆ ರುಚಿ ಬಲುರುಚಿ ಕಾಣೊ
ಕಡಲಶಯನ ನಮ್ಮ ವಿಜಯ ವಿಠ್ಠಲರೇಯನ
ಕಡು ನಾಮಾಮೃತವು ಸರ್ವರೋಗಹರವು ೨

ತ್ರಿವಿಡಿತಾಳ

ಪಥ್ಯ ಮಾಡುವುದಲ್ಲ ಅನುಪಾನ ಮೊದಲಿಲ್ಲ
ಪೈತ್ಯಹೆಚ್ಚಿತು ಎಂದು ಬಳಲಿ ಬೀಳುವದಲ್ಲ
ಶೈತ್ಯವಾತ ಭ್ರಮಣ ಮೇಹ ಹೆಚ್ಚುವುದಲ್ಲ ಅ
ಪಥ್ಯವಾಯಿತು ಎಂದು ಶೋಕಿಸುವುದು ಸಲ್ಲ
ನಿತ್ಯಕೊಳ್ಳಲು ಲೇಶ ರುಚಿ ಕೆಡುವುದಲ್ಲಾ
ಸತ್ಯವಲ್ಲದೆ ಇದು ಎಂದಿಗೂ ಪುಶಿಯಲ್ಲಾ
ಮೃತ್ಯು ಮೃತ್ಯುವಿನ ದೂತರಿಗೆ ಕಕ್ಕಸವಾಗಿಪ್ಪದು
ಭೃತ್ಯರಾದವರಿದು ಪಾಲಿಸುತಿಪ್ಪುದು
ಸತ್ಯ ವಲ್ಲಭ ಸಿರಿ ವಿಜಯ ವಿಠ್ಠಲ ರಂಗನ್ನ
ಸ್ತುತ್ಯಮಾಳ್ಪರ ಮನಕೆ ಶೋಭಿಸುವುದು ೩

ಅಟ್ಟತಾಳ

ಸರಿ ಬಂದಡುಣಲುಂಟು ಸರಿ ಬಂದ ಕಾಲಕ್ಕೆ
ಸರಿ ಸರಿ ಬಂದಂತೆ ಸುರಿದು ಸುಖಿಸೆತನ್ನ
ಜರೆ ಮರಣ ಜಡ ಜ್ವರ ರೋಗಗಳು

ಉರುಳಿ ಪೋಗುವವಯ್ಯಾ
ಸುರಕ್ಷಿತವಾಗಿಹ ಪುರದಲ್ಲಿ ಪೊರೆವುದು
ಸುರಮುನಿನುತ ಸಿರಿ ವಿಜಯ ವಿಠ್ಠಲರೇಯನ
ನೆರೆನಂಬಿದವರಿಗೆ ಹಿರಿದಾಗಿ ಒಲಿವುದೊ ೪

ಆದಿತಾಳ

ಬುದ್ಧಿವಂತರೆಲ್ಲರಿದು ಮೆದ್ದು ಸವಿನೋಡಿ ಜಗಕೆ
ಶುದ್ಧ ಜೀವಿಗಳಿಗಿದು ಸಿದ್ಧವೆಂದು ಧರೆಗೆ ಬೀರೇ
ಎದ್ದು ಮಲಗಿ ಕುಳಿತು ಇದ್ದು ತಿರುಗಾಡುತ
ಇದ್ದಕಾಲಕೆ ಸಮೀಪ ಹೊದ್ದುಕೊಂಡು ಇಪ್ಪುದು
ಉದ್ದಿನಷ್ಟು ಪಾಪಾವ ಹೊದ್ದುಗೊಡದೆ ಓಡಿಸಿ ಜ್ಞಾ
ನಾಬ್ಧಿಯೊಳಗಿಡುವುದು ಶ್ರದ್ಧಾ ವೈರಾಗ್ಯವಿತ್ತು
ಮುದ್ದುರಂಗ ವಿಜಯ ವಿಠ್ಠಲಾ
ವೈದ್ಯನೆ ತಾನಾಗಿ ನಿಂದು ಬದ್ಧವಾಗಿದ್ದ ಭವಕೆ
ಮದ್ದು ಇತ್ತು ಮಾಡಿಸುವಾ ೫

ಜತೆ

ಬಹಿರಂತರ ರೋಗ ನಿವಾರಣವಾಗುವುದು
ಅಹಿಶಾಯಿವಿಜಯ ವಿಠ್ಠಲನಾಮ ಔಷಧಕೆ ೬

೧೦೬

ಧ್ರುವತಾಳ

ಶ್ರೀ ವಲ್ಲಭ ನಿನ್ನ ಕಾವೊ ಘನವೋ
ಭೂವಲ್ಲಭ ನಿನ್ನ ಕಾವೊ ಘನವೋ
ಆವಾವ ನಾಮನೋ ಈ ವಸುಧಿಯೊಳ
ಗಾವಲ್ಲಿ ನೋಡಲು ದೇವರೊಳಗೆ ಕಾಣೇ
ಸೇವಕರಲ್ಲಿದ್ದ ಆವಾವಾ ದ್ರವ್ಯವ

ಕಾವ ಕಟ್ಟಲಿಯಿಂದ ಜೀವ ಜತನಮಾಡಿ
ಅವರಿಗೆ ಪ್ರಾಮತವ ಮಾಡಿ ಕೊಡುವೆ
ದೇವಾ ನಿನ್ನ ಲೀಲೆಗೆ ಆವುದು ನೆಲೆಗಾಣೆ
ಭಾವಜ್ಞರೊಡೆಯಾ ವಿಜಯ ವಿಠ್ಠಲರೇಯ
ಕಾವ ಕರುಣಿ ಸಂಜೀವ ಸತತ ಎನಗೆ ೧

ಮಟ್ಟತಾಳ

ಪದುಮನಾಭ ಪರಮಪುರುಷಾ
ಸದಮಲಾನಂದಾ ಸಾತ್ವಕಿಪ್ರೀಯಾ
ಸುದರುಶನ ಪಾಣಿ ಸುಲಭಾ ದೇವಾ
ಅದುಭೂತ ಮಹಿಮಾ ಅನಾದಿಸಿದ್ಧ
ಪದೋಪದಿಗೆ ನಿನ್ನ ಪಾದವ ನಂಬಲು
ಇದು ಅದು ಎಂಬೋದು ಅನಿಸಲಿಲ್ಲಾ
ಚದುರಂಗ ವಿಜಯ ವಿಠ್ಠಲ್ಲಾ
ಮುದದಿಂದ ಒಲಿಯೋ ಒದಗುವುದು ಪುಣ್ಯ ೨

ತ್ರಿವಿಡಿತಾಳ

ಉಪ್ಪಿಲ್ಲದಂಬಲಿ ಕುಡಿವಾ ನರಗೆ ಕೋಟಿ
ಕೊಪ್ಪರಿಗೆ ಧನ ಇದ್ದಲ್ಲಿ ದೊರೆತಂತೆ
ತಿಪ್ಪೆ ಮೇಲೆ ಹೊರಳಿಮಲಗುವ ಮನುಜಗೆ
ಉಪ್ಪರಗಿ ಮೇಲೆ ಸುಖಿಸುವಂತೆ
ಚಿಪ್ಪಗೀರಿ ತಿಂಬ ದಟ್ಟದಾರಿದ್ರಗೆ
ತುಪ್ಪಾ ಸಕ್ಕರಿ ಪಾಲು ಹಣ್ಣು ಮೆಲಿಸಿದಂತೆ
ಸರ್ಪಶಯನ ನೀನು ತಪ್ಪದೆ ದಯಮಾಡು
ತಿಪ್ಪದು ಅರಿಯರೊ ಸರ್ಪಭೂಷಾದಿಗಳು
ಸರ್ಪಕೇತನ ಗರ್ವಹರ ವಿಜಯವಿಠ್ಠಲ
ಅಪ್ಪನೇ ಜಗದೇಕವಂದ್ಯ ಸರ್ವೇಶಾ ೩

ಅಟ್ಟತಾಳ

ಹಿಂದಿನ ದಿನದಲ್ಲಿ ವೈಶ್ಯ ಮಾದಮ್ಮನ
ನಂದನ ನಂಜುಂಡ ಯಮಲೋಕಕ್ಕೆ ಪೋಗಿ
ಬಂದು ಪುರಂದರದಾಸರು ನಿಲ್ಲಲು
ಸಂದೇಹಗೊಳಿಸದೆ ಅವನ ಎಬ್ಬಿಸಿ ಕೊಟ್ಟಾ
ನಂದಮೂರುತಿಯೇ ನಿನ್ನಂಘ್ರಿಗೆ ನಮೋ ನಮೋ
ಇಂದು ಪೋಗಿದ್ದ ಜಡಪದಾರ್ಥವ
ತಂದು ಇತ್ತದು ಬಲು ಸೋಜಿಗವಲ್ಲವೋ
ಮುಂದಾಗಿ ಸಾಕುವ ವಿಜಯವಿಠ್ಠಲ ದೇವಾ
ಎಂದೆಂದಿಗೆ ನಂಬಿದವರಂಗ ಸಂಗಾ ೪

ಆದಿತಾಳ

ಭೋವ್ಯೋಮ ಪಾತಾಳ ಪಯೋಜಜಾಂಡದೊಳು
ಶ್ರೀಯರಸ ನಿನ್ನ ಪ್ರೀಯರ ಒಡಿವೆ ವಸ್ತಾ
ವಾಯು ಮಳೆ ಪಾವಕ ಮಿಕ್ಕಾಯದಲ್ಲಿ ಹಾಕಿದರು
ಬೇಯದೆ ತಿರುಗಿ ಬಂದು ನ್ಯಾಯದಲ್ಲಿ ಸೇರುವುದು
ನೋಯದಂತೆ ಸಾಕುವುದುಪಾಯಗಾರ ನೀನಹುದೊ
ನಾಯಿಗೆ ವರವಿತ್ತ? ವಿಜಯವಿಠ್ಠಲರೇಯಾ
ನೀ ಎಡೆಬಿಡದಿರಲು ಆಯಾಸ ಒಂದೂ ಕಾಣೆ ೫

ಜತೆ

ಬೊಮ್ಮಾಂಡ ನುಂಗಿ ಉಗುಳುವ ಮಹಾದೈವವೆ
ಈ ಮಹಿಮೆ ಅರಿದೆ ವಿಜಯವಿಠ್ಠಲ ನಿನಗೆ ೬

೧೦೭

ಧ್ರುವತಾಳ

ಸುಳಿಕುಮಾಯದ ನಡುಸುಳಿಯಿಂದ ಕಡೆಮಾಡಿ
ಸುಳಿಸುವದಾಲಿದು ಸುಲಭರೊಡಿಯಾ
ಸುಳಿಸದಿರಿಲ್ಲಿಯೆ ಸುಳಿಸಾದಿರೆಯೆ ಸುಳಿದಿನಾವಿದ್ದರು
ಸುಳವಾಗಿ ಮಾಡಿ ಶುದ್ಧಮುಗ್ಧಗೊಲಿದು
ಸುಳಿಯೊ ಸುಹೃತ್ತಮ ನಾಮಾ ವಿಜಯವಿಠ್ಠಲರೇಯಾ
ಸುಳವಿನೊಳಿಗೆ ಇಂದು ದೀನ ಜನಬಂಧು ೧

ಮಟ್ಟತಾಳ

ಒಂದಾನು ಒಂದು ದಿನವಾದರು ನಿನ್ನ
ಬಿಂದು ಮಾತುರ ನಾಲಿಗಿಂದು ನೆನೆದು ನಾಮ
ಪೊಂದೀಗಾ ಪೊಗಳದೆ ಇಂದು ಕಿಂಕರನೆಂದು
ಮಂದಿಯೊಳಗೆ ನೋಡಿದಿಂದು ತುದಿ ಫಲವ
ಬಂದು ಹೆಳುವ ನೋಡಿ ತಿಂದೇನೆಂತೆಂಬೊ
ಮಂದಮತಿಯಾದೆ ಮುಂದೆ ಸೂಚಿಸದಂತೆ
ತಂದೆ ಸುಹೃತನಾಮ ವಿಜಯವಿಠ್ಠಲ ಆವಾ
ನಂದದಲೆ ಬಯಸಿ ವಂದಿಸಿದೆ ನಿನ್ನಾ ೨

ರೂಪಕತಾಳ

ಈ ಶರೀರವು ಕ್ರಿಮಿ ರಾಶಿ ಎನಗೆ ನಿನ್ನ
ಸಾಸಿರನಾಮಾ ಕಾಣಾಸಿಯಾಗಿರಲಿ
ಲೇಸುವುಳ್ಳನಕಾ ನಾ ವಾಸಾವಾಗಿಪ್ಪೆನೊ
ದೇಶದೊಳು ಡಂಭಕದ ದಾಸನಾಗಿ
ರಾಶಿ ಹಾಕಿದ ಹಣ ಏಸು ಇದ್ದರೇನು
ಕಾಸಿಗೆ ಪೋಗಾದಾದೊಂದಾರಿರದೆ

ಕೇಶವ ನಿನಗಿನ್ನು ಮೀಸಲಾ ದಾಸರು
ವಶಯಾಗಿದ್ದರು ಆ ಸರ್ವರೊಳಗೊಬ್ಬ
ದೋಷಕಾರಿ ನಾನು ಪಾಶಬದ್ಧಕ ನಾನು
ಹೇಸಿ ಮಾನವ ನಾನು ಆಸೆಬಡಕನಾನು
ಈಸುಗುಣವುಳ್ಳ ಕ್ಲೇಶಾಧಿಕಾರನ್ನ
ಪೋಷಣೆ ನಿನ್ನದು ಬೀಸಿ ಬಿಸಾಟದಿರು
ನೀ ಸೇರಿವೊಳಗೆ ಪ್ರಕಾಶ ಮಾನನಾಗಿ
ಭೂಷಾ ವಿಜಯ ವಿಠ್ಠಲೇಶ ಕರುಣದಿಂದ
ವಾಸವಾಗಿದ್ದೆನ್ನ ದೋಷವ ಹಿಂಗಿಸಿ
ಸೂಸುವ ಭಕ್ತಿಗೆ ಭೂಷಣನಾಗೋ ೩

ಝಂಪಿತಾಳ

ಭಕುತ ಪ್ರಲ್ಹಾದನು ನಿನಗೇನು ಇತ್ತನು
ಶುಕ–ಮಹಾಮುನಿಪ ನಿನಗೇನು ತಂದುಕೊಟ್ಟ
ರುಕುಮಾಂಗನುಪಕಾರ ನಿನಗೇನು ಮಾಡಿದ
ಮಖಶತನು ನಿನಗೇನು ಊಟವನುಣಿಸಿದಾ
ಸುಖಬಡಿಸಿದನು ನಾರದಮುನಿ ನಿನಗೇನು
ಮಕರ ತೋರಣವ ಕಟ್ಟಿದನೇನೋ ನದಿಸುತಾ
ಶಿಖರವೆತ್ತಿದನೇನೋ ಲಂಕಾಧಿಶನು ಬಂದು
ಸಕಲ ಸುರರು ನಿನ್ನ ಒಕ್ಕಲಾ ಗೈಸಿದರೆ
ಭಕುತ ಪ್ರಲ್ಹಾದ ಅಕಟ ನಾ ನಿನಗೇನು
ಭಕುತಿ ಮಾಡದೆ ಪೋದೆ ಲಕುಮಿ ವಲ್ಲಭ ಎನ್ನ
ವಿಕಳಮತಿಯೊಳಗದ್ದಿ ಕಕ್ಕಸಬಡಿಸೋದು
ಚಕಿತತನವೇ ದೇವ
ತ್ರಿಕಕುಬ್ಧ ನಾಮ ಸಿರಿ ವಿಜಯ ವಿಠ್ಠಲ ತಂದೆ
ವಿಕಸಿತ ಜ್ಞಾನಕ್ಕೆ ಅಂತರಂಗದಲ್ಲೇ
ಮಕರಂದನಾಗೋ ಪಾದಕ್ಕೆ ನಮಿಸುವೆನು ೪

ತ್ರಿವಿಡಿತಾಳ

ಅವರೀಗ ಕರಿಯಲು ಅಂತರ ಬಾಹಿರ
ಅವತಾರಗಳಿಂದಲ್ಲಿ ಪೊಳದು ನಿಂದು
ಅವರವರ ವಾಸನಾ ತೀರಿಸಿ ಮನೋಭೀಷ್ಟೆ
ಅವರಿಗೆ ಈವೆಯೋ ಅವರಂತೆ ನಾನಲ್ಲಾ
ಅವರಿಂದಲಾನಂತ ಸೇವೆ ನಿಮಗಾಯಿತು
ಅವತ್ತ ಗುಣದವನಿಂದ ಎಂದು ಪೂರ್ತಿ
ಅವರ ಸೇವಿಯಾದಿತು ಅವರಿಗೆ ಪ್ರೇರಿಸಿದ್ದಾ
ಅವರ ದಾಸಾನುದಾಸ ಎನ್ನ ಸೇವೆಯಾ ರೀತ್ಯಾ
ತವಬಿಂಬ ಮೂರ್ತಿಯ ತೋರೋ ಭೂತ ಭವ್ಯ
ಭವನ್ನಾಥನಾಮ ಶ್ರೀ ವಿಜಯ ವಿಠ್ಠಲ ಎನ್ನ
ಭವಪಾಶವ ಹರಿದು ಸಂಭವಿಸಲಿ ಜ್ಞಾನ ೫

ಅಟ್ಟತಾಳ

ಆತುಮ ಮೂರುತಿ ಪ್ರಮಾಣವಂಗುಟಿ
ಮಾತುರ ಮೂರುತಿ ದೇಹ ದೇಹಿಯಲ್ಲಿ
ತತುಪ್ರಮಾಣ ಶೋಭಿಸುತಿರೇ
ಆತುಮನಾಮಕ ಪ್ರಾಜ್ಞ ಮೂರುತಿಯೇ
ಆತ ನಾನಾ ಬಿಂಬ ಮೂರುತಿಯಾಗಿ ಪೂಜಿಯ
ಪ್ರೀತಿಯಲ್ಲಿಗೊಂಬ ಆತುಮದೊಳಗೆ
ಪಾತಕ ಹರಿಸುತ್ತ ಪತಿತರ ಪೊರೆವುತ್ತ
ಆತುಮಯೋನಿ ವಿಜಯ ವಿಠ್ಠಲರೇಯಾ
ಯಾತರ ಭಯವಿಲ್ಲಾ ಪ್ರಾಯಶ್ಚಿತ್ತವೆ ಇಲ್ಲಾ ೬

ಆದಿತಾಳ

ಹೆಳವನು ಬಯಸಿದಾ ಫಲವು ಚಲಿಸದೆ ಇರುತಿದ್ದು
ಕೆಳಗೆ ಬೀಳೆ ಪಾವನದಿಂದ ಸಲೆಪಣ್ಣು ದೊರಕಿದಂತೆ
ಮಲಿನಗಳೆದು ಗುರುಗಳೆನಗೆ

ಒಲಿದು ತೋರಿಸಿದರಾದಳವಾಗೆ
ಸುಳಿದು ಸುಖದ ವಿಜಯ ವಿ
ಠ್ಠಲ ಬಲುದೈವಾ ಕಾಯ್ವಾ ೭

ಜತೆ

ಸಾಸಿರ ಮೂರುತಿ ಶತಾನಂತ ಮೂರುತಿ
ಸಾಸಿರನಯನ ಶ್ರೀ ವಿಜಯ ವಿಠ್ಠಲ ಸುಳಿದಾ ೮

೧೦೮

ಧ್ರುವತಾಳ

ಹಗರಣ ಮಾಡದಿರು ಹರಿಯೆ ನಿನಗೆ ಕರವ
ಮುಗಿದು ಬೇಡಿಕೊಂಬೆ ಭಕ್ತ ಜನರ
ಬಗೆಬಗೆಯಿಂದ ಬಂದ ಕ್ಲೇಶವ ಕಳದು ನಂ
ಬಿಗೆಯೆತ್ತು ಪಾಲಿಸುವ ಗುಣವಾರಿಧಿ
ಜಗದೊಳು ನಿನಗಿದೆ ವ್ಯಾಪಾರವಲ್ಲದೆ
ಮಿಗಿಲೇನೊ ಕಾಣೆ ಸರ್ವದ ನೋಡಲು
ಪಗೆವುಳ್ಳವನಾದರು ಬಂದು ನಿನ್ನ ಚರಣ
ಯುಗಳ ನಂಬಲು ಕಾಯುವೆನೆಂಬೊ ಬಿರಿದು
ಅಗಣಿತವಾಗಿ ದಶದಿಕ್ಕಿಲಿ ಒಪ್ಪುತಿದೆ
ನಿಗಮವಿನುತ ನಿಷ್ಕಳಂಕ ಮಹಿಮ
ಸೊಗಸೋದೆ ಸರಿ ಸಜ್ಜನರ ಪ್ರತಿಪಾಲಿಪುದು
ಮಗುಳೆ ಉತ್ತರವುಂಟೆ ಎಲೊ ದೇವನೆ
ಖಗರಾಜಮಣಿಯಿರೆ ಪನ್ನಗ ಗರಳದ ಭಯವೇನು
ಹಗಲು ಇರಳು ಒಡನಿದ್ದರಾಗೆ
ಭಗವಂತ ಹಲವು ಮಾತಿನ ಫಲವೇನು ಭ
ಕ್ತಗೆ ಬಂದಾಪತ್ತು ಪರಿಹರಿಸಿ ನೋಡು ಕರುಣಾದಲ್ಲಿ
ನಗೆಗೆಡೆಗಾಗಗೊಡದೆ ರಾಹುವಿನಿಂದಲಿ ಹೊರ
ದೆಗದ ಇಂದುವಿನಂತೆ ಮಾಡು ಜೀಯಾ

ನೆಗಳಿಯ ಕತ್ತರಿಸಿ ಗಜವ ಕಾಯ್ದದದು ಮನ
ಸಿಗೆ ಯಾಗುತಿದೆ ಸಿದ್ಧವೆಂಬೋದಿಂದಲಾ
ತ್ರಿಗುಣಾತೀತ ಕೃಷ್ಣ ವಿಜಯ ವಿಠ್ಠಲ ನಿನ್ನ
ಪೊಗಳುವ ದಾಸನ್ನ ತಡಮಾಡದೆ ಕಾಯೊ ೧

ಮಟ್ಟತಾಳ

ಹರಿಯೆ ನರಹರಿಯೆ ಕರುಣಾಸಾಗರ ಸಿರಿಯೆ
ಪರರ ಕುರುಹನರಿಯೆ ನಿರುತ ನಿನ್ನ ಮರಿಯೆ
ದುರಿತ ಕದಳಿ ಕರಿಯೆ ಸುರಗಣದಾ ಧೊರಿಯೆ
ಬರಿದೆ ಸೌಖ್ಯಕೆ ಕರಿಯೆ ದುರವಾರ್ತೆಯ ಬರಿಯೆ
ದುರುಳರಲ್ಲಿ ಬೆರೆಯೆ ಪರಮದಿಂದಲಿ ಬರಿಯೆ
ಸರಿಗಾಣೆನೀ ಪರಿಯೆ ಸ್ಮರಣೆಯಲ್ಲಿ ಸರಿಯೆ
ಪೊರೆವ ನೀನೆ ಮಂದರ ಗುಣವೆಣಿಸದೆ
ಧರೆಯೊಳು ಮತ್ತೊಬ್ಬರುಳ್ಳವರಾರು
ತುರುಗಳ ಕಾಯಿದಾ ಶ್ರೀ ವಿಜಯ ವಿಠ್ಠಲ ಕೃಷ್ಣ
ಎರವು ಮಾಡದೆ ಈ ಉತ್ತರವನು ಮನ್ನಿಸಬೇಕು ೨

ತ್ರಿವಿಡಿತಾಳ

ನೀನೆ ಉಳಿಪೆನೆಂದು ನಿಂದರಾದಡೆ ಸು –
ಪ್ರಾಣರು ಆರೈಸಿ ನಿಲಲಾಪರೆ
ಏನೆಂಬೆನೊ ನಿನ್ನ ನಾಮದಾಚರಣೆಗೆ
ನಾನಾ ವಿಪತ್ತುಗಳು ನಿಲಬಲ್ಲವೆ
ಕಾಣೆನಿದಕೆ ಒಂದುಪಾಯವ ಆವಲ್ಲಿ
ಮೇಣು ಪೇಳುವುದೇನು ಪರಮಪುರುಷ
ನೀನಾಳಿದ ಬಂಟಂಗೆ ಮಹಾತಾಪಗಳು ಬಂದು
ಬ್ಯಾನೆ ಬಡಿಸಲಾಪವೆ ಕ್ಷಣಮಾತುರ
ಜ್ಞಾನ ಸಂಪನ್ನರು ದಾಸರಂದೇ ನಮ್ಮ
ಪಾಣಿಗ್ರಹವ ಮಾಡಿಪ್ಪರಯ್ಯಾ
ಮಾಣಾದೆ ಈ ಸೊಲ್ಲು ಮನ್ನಿಸಿದರೆ ಕೀರ್ತಿ

ಕ್ಷೋಣಿಯೊಳಗೆ ನಿನಗೆ ಬರುತಲಿದೇ
ನೀನೆ ಪರದೈವ ಲೋಕಕ್ಕೆ ಗುರುಮುಖ್ಯ
ಪ್ರಾಣನೆ ನಿಜವೆಂಬೊದಾದರಿಂದು
ನಾನು ಬರೆದ ಬರಹ ಸತ್ಯವಾದರೆ ಖರಿಯಾ
ಮಾನಾಭಿಮಾನದೊಡಿಯಾ ಧನ್ವಂತ್ರಿ
ನೀನೊಲಿದದಕ್ಕೆ ಮಾಣಿಸು ಅಪವಾದಾ ನಿ-
ರ್ವಾಣಗಿಂತಧಿಕ ಎನಗಿತ್ತದಯ್ಯಾ
ಧ್ಯಾನಾದಿಗಳು ತಿಳಿಯೆ ಬಾಯಿಗೆ ಬಂದಂತೆ
ಗಾನ ರೂಪದಲಿ ಕೊಂಡಾಡಿದೆನೊ
ಹೀನವಾಗಗೊಡದೆ ಹಿತವ ಚಿಂತಿಸು ಕ-
ಲ್ಯಾಣವ ಕೊಡುತಲಿ ಸಹಾಯವಾಗಿ
ಪ್ರಾಣಧಾರನೆ ವಿಜಯ ವಿಠ್ಠಲರೇಯ
ದೀನ ಬಾಂಧವ ಸತತ ಸಾಧು ನರನ ಕಾಯೊ ೩

ಅಟ್ಟತಾಳ

ಉದ್ಧವನ್ನ ಶಾಪದಿಂದ ಮುಕ್ತನಮಾಡಿ
ಉದ್ಧರಿಸಿದೆ ತತ್ವವ ಉಪದೇಶಿಸಿ
ಶುದ್ಧ ವೈಷ್ಣವನಿವ ನಿರ್ಮತ್ಸರದವ
ಮಧ್ವರಾಯರ ಪಾದ ಪದ್ಮವ ಪೊಂದಿದ
ತದ್ದಾಸರ ದಾಸರ ಭೃತ್ಯನೆನಿಸು
ಶ್ರದ್ಧೆಯುಳ್ಳವನಿವ ಸೌಮ್ಯ ಗುಣದವ
ಸಿದ್ಧಾಂತ ಪ್ರಮೇಯಗಳ ಪದ್ಧತಿ ಬಲ್ಲವ
ಉದ್ದಂಡನಲ್ಲವೊ ಕರ್ಮನಿಷ್ಠನಿವ
ಕ್ಷುದ್ರನಾದರೆ ನಾ ನಿನಗೆ ಪ್ರಾರ್ಥಿಸುವೆನೆ
ಹಾರ್ದವ ತಿಳಿದು ಪೇಳಿದೆ ಭವರೋಗದ
ವೈದ್ಯ ವೈಕುಂಠ ರಮಣ ರಾಮಚಂದ್ರಾ
ವಿದ್ಯಾ ಕರ್ಮಾಲಂಬನದವ ನಾನಲ್ಲ
ಶುದ್ಧ ವೈಷ್ಣವರ ಚರಣರೇಣು ತಾನಾಗಿ

ಬದ್ಧ ಪ್ರಯಕ್ತದಿ ಇನಿತು ತುತಿಸಿದೆನು
ಛಿದ್ರವಾಗಿದ್ದರು ಪೂರ್ಣವಾಗುವುದು ನೀ–
ನಿದ್ದ ಕಡೆಗೆ ಒಮ್ಮೆ ಶಿರಬಾಗಿ ನಮಿಸಲು
ಅದ್ರಿಧರ ನಿನ್ನ ನಂಬಿದ ದಾಸಗೆ
ಭದ್ರವಲ್ಲದೆ ಸರ್ವದಾ ಎನ್ನಸ್ವಾಮಿ
ಮುದ್ದು ಮೋಹನರಾಯ ವಿಜಯ ವಿಠ್ಠಲರೇಯ
ಒದ್ದು ಕಳೆಯೊ ಬದ್ಧ ತಾಪಂಗಳ ತಡಿಯದೆ ೪

ಆದಿತಾಳ

ಅಪಕೀರ್ತಿ ತಾರದಿರು ಎನ್ನ ಪಾಲಿಗೆ
ಅಪರಿಮಿತ ಮಹಿಮ ಅಂಬರೀಷ ವರದ
ಅಪಾರಗುಣನಿಲಯ ಅಭಯವನೀಯೊ ಇವಗೆ
ಸ್ವಪನಾವಸ್ಥಿಯಂತೆ ಕಡೆಗಾಗಲಿ ಕ್ಲೇಶ
ಉಪಚಾರ ನಿನಗೆ ನಾನು ಏನು ಪೇಳಲಸಾಧ್ಯ
ಅಪವಾದ ಬಂದಿದೆ ಅದನು ಪರಿಹರಿಸು
ಕೃಪೆಮಾಡು ಅರ್ಥಿಯಲ್ಲಿ ಅನನ್ಯ ಶರಣನೆಂದು
ಕೃಪಣನಾದರು ನಿನ್ನ ದಾಸನೆನಿಸಿ ಇಪ್ಪೆ
ಅಪಹಾಸಕಿಕ್ಕದಿರು ಅನಂತ ಜನುಮದ
ಉಪಕಾರ ಎನಗಿದೆ ಮತ್ತೊಂದಾವುದು ಒಲ್ಲೆ
ಜಪತಪ ಸ್ವಾಧ್ಯಾಯ ಮತ್ತೆ ದಾನ ಧರ್ಮ
ಸಫಲವಿದ್ದರು ಅವಗೆ ಅಡಸಿ ಬಂದಟ್ಟಿದ
ಅಪಮೃತ್ಯು ತೊಲಗಿಸು ತವಕದಿಂದಲಿ ಒಲಿದು
ಗುಪುತಮಹಿಮೆ ನಮ್ಮ ವಿಜಯ ವಿಠ್ಠಲರೇಯ
ವಿಪರೀತವಾಗಗೊಡದೆ ಬಲವಾಗಿ ರಕ್ಷಿಪುದು ೫

ಜತೆ

ಆರೋಗ್ಯವನೆ ಮಾಡು ಆಲಸ್ಯಗೈಸದೆ
ವೈರಾಗ್ಯನಿಧಿ ವಿಜಯ ವಿಠ್ಠಲ ಮಹವೈದ್ಯ ೬

೧೦೯

ಧ್ರುವತಾಳ

ಹರಿನಾಮ ಪ್ರಹ್ಲಾದನ್ನ ಮೊರೆ ಕೇಳಿ ಒದಗಿತು
ಹರಿನಾಮ ಗಜೇಂದ್ರನ್ನ ಆಪತ್ತು ಹರಿಸಿತು
ಹರಿನಾಮ ಅಜಾಮಿಳನ ಪಾತಕ ಕೆಡಿಸಿತು
ಹರಿನಾಮ ನಾರದನ ನೀಚಯೋನಿ ಬಿಡಿಸಿತು
ಹರಿನಾಮ ಭೀಷ್ಮನ್ನ ಪಂಥವ ಗೆಲೆಸಿತು
ಹರಿನಾಮ ಅಂಬರೀಷನ ವ್ರತವ ಸಂರಕ್ಷಿಸಿತು
ಹರಿನಾಮ ವಿಭೀಷಣನ ಪಟ್ಟದಲ್ಲಿಟ್ಟಿತು
ಹರಿನಾಮ ದ್ರೌಪದಿಯ ಮಾನವೆ ಪಾಲಿಸಿತು
ಹರಿನಾಮ ಧ್ರುವನ್ನ ತಪಸಿಗೆ ಒಲಿಯಿತು
ಹರಿನಾಮ ಅಹಲ್ಯಾ ಶಾಪವ ಹಿಂಗಿಸಿತು
ಹರಿನಾಮ ಬಲಿನೃಪನ ಇಂದ್ರನ್ನ ಮಾಡಿತು
ಹರಿನಾಮ ಕುಚೇಲನ ದಾರಿದ್ರ ಕಳೆಯಿತು
ಹರಿನಾಮ ವಿದುರನ್ನ ಕ್ಷೀರಕ್ಕೆ ಹಿಗ್ಗಿತು
ಹರಿನಾಮ ಪಾರ್ಥನ್ನ ಜೀವವೇ ಉಳಿಸಿತು
ಹರಿನಾಮ ಜನಕನ್ನ ದೃಢಮಾಡಿ ನೋಡಿತು
ಹರಿನಾಮ ಪುಂಡರೀಕನ ಭಕ್ತಿಗೆ ಮೆಚ್ಚಿತು
ಹರಿನಾಮ ಗುರುಪುತ್ರನ್ನ ತಿರುಗಿ ಬದುಕಿಸಿತು.
ಹರಿನಾಮ ವಾಲ್ಮೀಕನ್ನ ಮುನಿಪನೆಂದೆನಿಸಿತು
ಹರಿನಾಮ ಭೂಮಿಯ ಉದ್ಧಾರ ಗೈಸಿತು
ಹರಿನಾಮ ಪರಿಪರಿ ಭಕ್ತರೊಡನಾಡಿತು
ಹರಿನಾಮ ಒಂದಿರಲು ಅನ್ಯುಪಾಯವೇ
ಹರಿನಾಮ ಸಮಸ್ತ ಭಯನಿವಾರಣವಯ್ಯ
ಹರಿನಾಮ ಮನಸಿಗೆ ನಿರ್ಮಲ ಕಾರಣ
ಹರಿನಾಮ ಸರ್ವ ದೇವತೆಗಳಿಂದಧಿಕವೊ

ಹರಿನಾಮ ಜಗದೊಳು ಅಖಂಡವಾಗಿಪ್ಪುದೊ
ಹರಿನಾಮ ಅಜಭವಾದಿಗಳಿಗೆ ಗತಿಪ್ರದಾ
ಹರಿನಾಮ ಮಹಿಮೆ ಆರು ಬಣ್ಣಿಪರಯ್ಯಾ
ಹರಿ ಹರಿ ಹರಿ ಎಂದು ನೆನೆದಡೆ ರೋಗಂಗಳು
ಉರುಳಿ ಪೋಗುವುದು ನೀನು ಕೇಳೊ ಎಲೋಕೇಳೋ
ಹರಿನಾಮ ಸಕಳ ಪ್ರಾಯಶ್ಚಿತ್ತಕ್ಕೆ ಮೊದಲು
ಹರಿನಾಮವಿರಲಾಗಿ ಮತ್ತೊಂದಪೇಕ್ಷೆಯೇ
ಹರಿನಾಮ ನಿಜಸ್ವಾಮಿ ವಿಜಯ ವಿಠ್ಠಲನಂಘ್ರಿ
ಪರಿಶುದ್ಧನಾಗಿ ಎಳ್ಳನಿತು ಮನದಲ್ಲಿಡೊ ೧

ಮಟ್ಟತಾಳ

ಹರಿನಾಮವೇ ನಮ್ಮ ಮನವಶವಾಗಿರಲು
ಮರೆದು ಪಾಮರನಾಗಿ ಕೆಟ್ಟುಪೋಗುವದ್ಯಾಕೆ
ಹರಿನಾಮವೇ ನಿತ್ಯ ಎದುರಿಲಿ ನಿಡಿದಾ
ಗುರುತಿನಂತಿರಲಾಗಿ ಬೆಸನೆ ಮಾಡುವುದ್ಯಾಕೆ
ಮರುಳೆ ಮಾತನು ಕೇಳೊ ಅನಂತರ ಕ್ಲೇಶವನ್ನು
ಇರಗೊಡದಿರು ನಿನಗೆ ತಿಳಿಪುವೆನು ಇನ್ನು
ಮುರಮರ್ದನ ನಮ್ಮ ವಿಜಯವಿಠ್ಠಲನ್ನ
ಸ್ಮರಣೆ ಮಾಡಲು ಬಂದ ರೋಗವೆ ವಿನಾಶ ೨

ತ್ರಿವಿಡಿತಾಳ

ಹರಿನಾಮವೆಂಬೋದು ದುರಿತ ಕಾನನ ಸಂ
ಹರಿಸುವ ಪ್ರಳಯಾಗ್ನಿ ಸೋಲಿಸುತಿಪ್ಪುದು
ಹರಿನಾಮ ನೆನೆದವ ಕುಲಕೋಟಿ ಉದ್ಧಾರ
ಹರಿನಾಮ ನಂಬಿದರೆ ಕೇಡಿಲ್ಲಾ ಕೇಡಿಲ್ಲಾ
ಹರಿನಾಮ ಜಗದೊಳು ಅಖಂಡವಾಗಿ ನಿಂ
ದಿರದೆ ವ್ಯಾಪಿಸಿಕೊಂಡು ಇಪ್ಪುದಿದಕೋ

ಹರಿನಾಮವೇ ಮಹಾ ಪ್ರತಿಬಂಧಗಳ ಕಳೆದು
ಪೊರೆಯುತ್ತಲಿರೆ ನಮಗೆ ಚಿಂತೆಯಾಕೆ
ನರದೇಹಕ್ಕೆ ಬಂದ ಭಣಗು ಉಪದ್ರವ
ಪರಿಹರಿಸಿ ಬಿಡುವುದು ಸೋಜಿಗವೇ
ಬರೆದೊರದು ಜ್ಞಾನಿಗಳು ಪೇಳುವ ಕಥೆ ಕೇಳಿ
ಸ್ಥಿರಮಾಡುವುದು ಚಿತ್ತ ಸುಖವೇ ಉಂಟೋ
ತಿರುಗಿ ಬಾರದು ವ್ಯಾಧಿ ಪೋಯಿತೆಂದು ತಿಳಿ
ಹರಿನಾಮದ ಶೌರ್ಯ ಸತತದಲ್ಲಿ
ಜ್ವರತಾಪ ನಿವಾರಿಸಿ ವಿಜಯ ವಿಠ್ಠಲ ಸಜ್ಜ
ನರ ಮಾತನು ಪುಸಿಯಾಗಗೊಡ ನಿಜವೋ ೩

ಅಟ್ಟತಾಳ

ಹರಿನಾಮ ಇದ್ದಲ್ಲಿ ಹರುಷವೇ ಎಂದಿಗೂ
ಸುರರಾದಿಗಳು ಬಲ್ಲರು ಬಹುಕಾಲದಿ
ನಿರಯಾದೊಳಿದ್ದರೂ ಕಡೆಹಾಕುವುದು ಅ
ದರಿಂದ ಪಾಲಿಸಿ ಪರಮ ಪ್ರೀತಿಯಿಂದ
ನಿರುತ ಜ್ಞಾನ ಭಕ್ತಿ ವೈರಾಗ್ಯ ಕೊಡುವುದು
ಬರಿದಾಗದು ಕಾಣೊ ತುಂಬಿದ ಭಂಡಾರ
ಪಿರಿದಾಗಿ ಎಂತೆಂಥ ರಾಯರಾಯರನೆಲ್ಲ
ಅರೆಕ್ಷಣದಲ್ಲೀಗ ಕಾಯಿತು ಕಾಯಿತು
ಧರಣಿಪಾಲಕ ರಂಗ ವಿಜಯವಿಠ್ಠಲರೇಯಾ
ಹೊರಗೆ ಒಳಗೆ ಇದ್ದು ಆನಂದಿಬಡಿಸುವ ನಿಜವೋ ೪

ಆದಿತಾಳ

ಒಂದೊಂದು ಹರಿನಾಮ ನೆನಿಸಿದರೆ ನಮಗೆ
ಸಂಧಿ ಸಂಧಿಯಲ್ಲಿದ್ದ ರೋಗಗಳೆ ಸಂಹಾರ
ಕುಂದು ಎಣಿಸದಿರು ಕುಚ್ಛಿತಯೋಚನೆ ಬಿಡು

ಪೊಂದು ತಿರುಗಿ ಪೊಂದು ಹರಿನಾಮ ಸ್ಮರಣೆಯನ್ನು
ನಿಂದಲ್ಲಿ ಕುಳಿತಲ್ಲಿ ನಡೆದಾಡುವಲ್ಲಿ
ಮಂದಮತಿಯಲ್ಲಿ ಮದಡನಾಗಿದ್ದಲ್ಲಿ
ಸಂದೇಹ ಬಡದಲೆ ಸರ್ವೋತ್ತಮನ ಮನ
ದಿಂದ ತೊಲಗಲೀಯದೆ ಮುಂದುಗೆಡೆದೆ ನೆನೆಸೊ
ಮಂದರಧರ ನಮ್ಮ ವಿಜಯ ವಿಠ್ಠಲರೇಯಾ
ಬಂದು ಭಕ್ತಿಗೆ ಒಲಿದು ಮನೋಭೀಷ್ಟವ ಕೊಡುವನು ೫

ಜತೆ

ಇತ್ತಾ ಮುಂದಾಗಿ ನಮಗೆ ಮುನ್ನಾವಭಯ ನಮಗಿಲ್ಲ
ಚಿತ್ತಜಪಿತ ವಿಜಯವಿಠ್ಠಲನೇ ಗತಿ ಎನ್ನೋ ೬

೧೧೦

ಧ್ರುವತಾಳ

ಹರಿಯ ಬಿಡದಿರು ಸತ್ಯ ಹರುಷದಲಿ ನಿತ್ಯ
ಹರಿಯೆಂಬ ಕೊಂಡಾಡಿ ನಿರುತ ಪಾಡಿ
ಹರಿ ಸರ್ವೋತ್ತಮ ಎಂದು ಶರಣು ಎಂದು
ಹರಿದಾಡಿ ಕುಣಿವರು ಗುಣವೆಣಿಸುವುದು
ಹರಿಯನ್ನೇ ಪೊಂದುವುದು ಗತಿಗೆ ಸಂದುವುದು
ಹರಿಯ ಬಿಟ್ಟರೆ ಕೇಡು ನಿಮಿಷದಲ್ಲಿ ನೋಡು
ಹರಿಯ ಕೂಡಣ ದ್ವೇಷಿ ನಿತ್ಯ ನರಕವಾಸಿ
ಹರಿಗಂಡವನು ಶ್ರೀ ಹರಿಯ ಕಾಂಬುವನು
ಹರಿಯಗಾಣದವನು ಅತಿಶುದ್ಧ ಶವನೂ
ಹರಿ ಪರಮಪುರುಷ ಪುರುಷೋತ್ತಮ
ನರಸಿಂಹನಾಮ ಸಿರಿ ವಿಜಯವಿಠ್ಠಲ
ಹರಿದಿಂಬ ದುರಿತ ಕರಿಗೆ ಹರಿ ಹರಿ ಕಾಣೊ
ಹರಿಪಾದ ನೆನವನ್ನು ಮರೆಯದಿರು ಮನುಜಾ ೧

ಮಟ್ಟತಾಳ

ಮಾತಾಪಿತಾ ಗುರು ಭ್ರಾತೃ ಬಾಂಧವನು
ಪ್ರೀತನ ಪ್ರಿಯನು ದಾತನು ನಾಥನು
ಈತನು ಕಾಣೆಲವೋ ಭೂತ ಭೂತಳಕ್ಕೆ
ಭೂತಭಾವನ ನಾಮ ವಿಜಯವಿಠ್ಠಲಾ
ಜ್ಯೋತಿರ್ಮಯ ವಿಖ್ಯಾತ ಮೂರುತಿಯಿದು
ಯಾತಕೆ ಸಂಶಯವೋ ಪಾತಕ ಪೋಗಾಡು ೨

ರೂಪಕತಾಳ

ಒಂದೊಂದು ರೋಮ ರೋಮ ಕೂಪದೊಳು
ಪೊಂದಿಸಿಕೊಂಡಿಪ್ಪನಾನಂತಾನಂತರ
ವಿಂದ ಜಾಂಡಗಳೆಲ್ಲ ಬಿಂದುಗಜದ ಮ್ಯಾಲೆ
ಬಂದು ಬಿದ್ದ ತೆರದಿ ಇಂದಿರೇ ರಮಣ
ನಂದಾದಿಂದಾವ್ಯಾಕೃತಾಗಸಕ್ಕೆ ಸು
ಗಂಧವ ಪೂಸಿದಂತೆ ಲೇಪಿಸಿಕೊಂಡು
ಒಂದೆ ಮೂರುತಿಯಾಗಿ ವಿಶ್ವನೆಂದೆನಿಸಿ ಮ
ತ್ತೊಂದು ಮೂರುತಿಯಾಗಿ ಲಕುಮಿಗೆ ಪೊಳೆವ
ಅಂದವರಂತೆ ವರವನೀವನು ಶತಾ
ನಂದ ವಿಜಯವಿಠ್ಠಲ ಕಂದರ್ಪನಯ್ಯಾ ೩

ಝಂಪೆತಾಳ

ಬೊಮ್ಮನಕುಲದಲ್ಲಿ ಉತ್ಪತ್ಯವಾದನು
ತಮ್ಮಂದಿರು ಕುಂಭಶ್ರವಣವ
ಉಮ್ಮೆಯರಸನು ಅವರ ಮನೆದೈವ
ಸುಮ್ಮನಸರ ಶೆರೆಹಾಕಿ ಇಪ್ಪಾ
ಇಮ್ಮಡಿಯಾಗಿ ಸಾಗರದ ನಡುವೆ ನಗರ
ಹಮ್ಮಿಲಿ ತಿರುಗುವ ರಾವಣನ್ನ
ರಮ್ಮೆ ಅರಸನು ಅಣುವಾಗಿ ದನುಜನ

ಮನ ಮಧುಸೂದನ ಮುಕ್ಕುಂದ ಜನಾ
ರ್ದನ ಅಚ್ಯುತಾನಂತ ನಾಮ ಉಚ್ಚರಿಸಲು
ಉಣಲುಂಟು ಉಡಲುಂಟು ಏನೇನು ಬೇಡಿದ
ಮನೋಭಿಷ್ಟೆಯು ಉಂಟು ಮಾತು ಸತ್ಯವೆ ಉಂಟು
ಕನಸಿನೊಳಾದರು ಕಾಣಿಸವು ಪಾಪ
ಗಣಗಳೆಲ್ಲ ಕೇಳಿ ಜ್ಞಾನದ ಮಹಿಮಾ
ಜನನವಿದೂರ ನಮ್ಮ ವಿಜಯ ವಿಠ್ಠಲ ನಂಘ್ರಿ
ಮನದಲ್ಲಿ ನಿಲ್ಲಿಸಲು ಉತ್ಸಾಹ ಎಂದಿಗೂ ೪

ಆದಿತಾಳ

ವಿದ್ಯದ ಬಲ ಕೇಳೋ ಸುಯಜ್ಞ ಮುನಿ ಬಾಲಕ
ಶುದ್ಧಾತ್ಮ ಕಾನನದಲ್ಲಿ ಪೋಗುತಿರೆ ಮಹ
ಕ್ರುದ್ಧವ ತಾಳಿ ಇಪ್ಪತ್ತೆಂಟು ಪಿಶಾಚಿಗಳು
ಮೆದ್ದೆವೆಂದು ವೇಗಾ ಹರಿದೆದ್ದು ಓಡಿಬರಲು
ಖದ್ಯೋತವರ್ಣದಂತೆ ಜ್ಞಾನಿಯ ಕಾಂತಿಯಿಂದ
ಪೊದ್ದಿ ಭೀತಿಯಿಂದ ವಂದನೆ ಮಾಡಿ ನಮ್ಮ
ನುದ್ಧರಿಸು ಎಂದು ವಶವಾದರು ಕೇಳಿ
ಭದ್ರಗತಿಯ ಪಥವ ಸೇರಿದರು ಬಿಡದೆ
ಈ ಧರಿಯೊಳು ಭಕ್ಷಿಸಲು ಬಂದ ಕ್ರೂರರು
ಪದ್ಮ ನಾಭನ ಪೊಂದಿ ಜ್ಞಾನ ಸಂಪಾದಿಸಿದ
ಸದ್ಮುನಿಗೆ ಸಮಸ್ತ ಜಗತ್ತು ವಶಕರವೊ
ಸಿದ್ಧಾಂತ ಪ್ರಮೇಯ ಇದೆ ಇದರಂತೆ ಚರಿಸಿದರೆ
ಇದ್ದಲ್ಲಿ ಸೌಕರ್ಯವೊ ಆವ ಮನುಜಗಾಗೆ
ಬುದ್ಧಿ ಪಾಲಿಸುವ ಪಾವನ್ನ ವಿಜಯವಿಠ್ಠಲನ್ನ
ಹೃದ್ಯದಲ್ಲಿ ಇಡಲು ನೆನೆದಂತೆ ಸೌಕರ್ಯ ೫

ಜತೆ

ಮಾತು ಮಾತಿಗೆ ಹರಿನಾಮವೆ ಗತಿ ಎನ್ನು
ಗಾತುರ ನಿರ್ಮಲಿನಾ ವಿಜಯ ವಿಠ್ಠಲ ಒಲಿವಾ ೬

೧೧೨

ಧ್ರುವತಾಳ

ಹೆಜ್ಜೆ ಹೆಜ್ಜೆಗೆ ಒಮ್ಮೆ ಅರ್ಜುನಸಾರಥಿ ಕೃಷ್ಣ
ಮೂರ್ಜಗದೊಡಿಯಾ ಧೂರ್ಜಟಿಯ ಪ್ರಿಯಾ
ನಿರ್ಜರರ ಪಾಲಾ ವಿವರ್ಜಿತಲಯ ಕಾಯೊ
ಸಜ್ಜನರ ಮನೋಹರ ದುರ್ಜನರ ಸಂಹಾರಾ
ವಜ್ಜರ ಪಂಜರ ಭಕುತಜನಕೆ ಎಂದು
ಲಜ್ಜೆಯನು ತೊರೆದು ನಿರ್ಲಜ್ಜರಾಗಿ
ಪರ್ಜನ್ಯಗರೆವ ಘನಗರ್ಜನೋಪಾದಿಯಲಿ
ಗರ್ಜನೆಯ ಮಾಡುತ್ತ ಈ ಜಗದೊಳಗೆ
ಪರ್ಜನ್ಯನಾಮ ಸಿರಿ ವಿಜಯವಿಠ್ಠಲ ಪಾ
ದಾಬ್ಜವನು ಸ್ಮರಿಸದ ದುರ್ಜೀವಿಗೆ ತಮಸು ೧

ಮಟ್ಟತಾಳ

ನಡೆನಡೆದು ದಾರಿ ವಿಡಿವಿಡಿದು ಪೋಗು–
ತಡಿಗಡಿಗೆ ನಲಿದು ಅಡಿಗಡಿಗೆ ಬಿಡದೇ
ಒಡಲೊಳಗಾಡುವನ ಒಡ ಒಡನೆ ಶಬ್ಧ
ನುಡಿನುಡಿದು ಹರುಷ ಪಡೆಪಡೆದ ಜನ
ದೊಡಿಯ ಅಮೃತನಾಮ ವಿಜಯ ವಿಠ್ಠಲನ್ನ
ಕಡುನಾಮಾಮೃತದೆಡೆಯುಣ್ಣದವನು
ಅಡಿಅಡಿಯಾಗಿ ಮಿಡಕೋಡು ಕಡೆಗಾಣೆ ೨

ತ್ರಿವಿಡಿತಾಳ

ಹರಿನಾಮವೇ ಸ್ನಾನ, ಹರಿನಾಮವೇ ಮೌನ
ಹರಿನಾಮವೇ ಧ್ಯಾನ, ಹರಿನಾಮವೇ ದಾನ
ಹರಿನಾಮವೇ ಗಾನ, ಹರಿನಾಮವೇ ಜ್ಞಾನ
ಹರಿನಾಮವೇ ಸರ್ವ ತೀರ್ಥಯಾತ್ರೆಗಳು
ಹರಿನಾಮವೇ ಕೃತು ಹರಿನಾಮವೇ ವ್ರತ
ಹರಿನಾಮವೇ ಸಕಲ ಸಾಧನ ಸಂಪತ್ತು
ಹರಿನಾಮವೇ ಗತಿ ಹರಿನಾಮವೇ ಮತಿ

ಹರಿನಾಮವೇ ಹಿತ, ಹರಿನಾಮಾಮೃತಾ
ಹರಿನಾಮ ನೆನೆಯದಿರೆ ಶರಧಿ ಬತ್ತಿದ ಮೀನು
ಒರಲಿದಂತೆ ಒರಲಿ ಹೀನರಾಗುವರು
ಹರಿನಾಮ ಒಂದೆ ಉಳ್ಳರೆ ಬಂದ ದುರಿತ ಪರಿ
ಹರ ಮಾಡುವನು ಗಂಭೀರ ವಿಜಯವಿಠ್ಠಲಾ ೩

ಅಟ್ಟತಾಳ

ಹರಿಯೆಂದು ದಿನದಲ್ಲಿ ಸ್ಮರಿಸದ ನರಗುರಿಯಾ
ಕರೆಯನೋ ಸಂಗಡ ನೆರೆಯನೊ ಬೆರೆಯೆನೋ
ಮರಳೆ ಸರಸದಲ್ಲಿ ಕುಳ್ಳಿರೆ ನಿಂದಿರೆ
ಸರಿದು ಪೋಗುವನತಿ ದೂರದಲ್ಲಿ ನೋಡಿ
ದುರುಳಗೆ ಶರಣೆಂದು ಎರಗಿದರೆ ಯಮ
ಕರವ ಕತ್ತರಿಸುವ ಕರುಣವಿಲ್ಲದಲೆ
ಹರಿನಾಮ ಮರೆದವ ಮರವೆನ್ನಿ ಮರವೆನ್ನಿ
ಮರಪುಟ್ಟಿ ಕುಲಕೆ ವಿರೋಧಿಯಾದನೆನ್ನಿ
ಸುರಪಾಲ ಮಹಿಧರ ವಿಜಯವಿಠಲನ್ನ
ಮರೆದು ತನ್ನಯ ಕುಲವ ನಿರಯದೊಳಿಡುವನು ೪

ಆದಿತಾಳ

ಕೇಳಿ ಕೇಳಿ ಇಹ ಜನರು ಪೇಳುವೆನು ಕ್ಷಿತಿಯಲ್ಲಿ
ಕಾಲಾಕಾಲಾವೆನ್ನದೆ ಶ್ರೀ ಲೋಲನ್ನ ಕೊಂಡಾಡಿದರೆ
ಫಾಲದಲ್ಲಿ ಬರೆದ ಹೀನಲಿಖಿತಾ ತೊಡದೂ
ಪಾಲಿಸುವ ಪರಮ ಸಂಪದವನಿತ್ತು ಇವನ
ಪೀಳಿಗಿಯ ಲಾಲಿಸುವ ತಿಳಿವಿಂದಲಿ ಕರಿಸಿ
ಆಳುವ ಸಂಸ್ಥಾನ ನಾಮ ವಿಜಯ ವಿಠ್ಠಲ ಕರು
ಣಾಳಿಯ ನೆನೆಯದವನು ನಾಮಾನಾಮಾ ಇಟ್ಟರೇನು ೫

ಜತೆ

ನರಕದವರ ಉದ್ಧಾರವ ಮಾಡಿದ ನಾಮಾ
ಪರಿಪೂರ್ಣರಕ್ಷಣ ವಿಜಯ ವಿಠ್ಠಲನ ನಾಮಾ ೬

೧೧೩

ಧ್ರುವತಾಳ

ವೆಗ್ಗಳವಲ್ಲವಯ್ಯಾ ನಿನ್ನಂಘ್ರಿ ಧೇನಿಪ ಭ
ಕ್ತರ್ಗೆ ಇಹಸುಖ ಬಲುಪರಿ ನಿತ್ಯ
ಸ್ವರ್ಗಾಪವರ್ಗ ನಾನಾ ಲೋಕವಾವನು
ನೀರ್ಗುಡಿದಂತೆ ಅಲ್ಲವೇನೊ ಸುಲಭಾ
ಕೂರ್ಗಣಿಯಾದರು ಪೂವು ಶುಭವಂದಾದ
ಮೊಗ್ಗಿಯ ಮನಿಯಂತೆ ದಿನ ಪ್ರತಿದಿನ
ಮಗ್ಗುಲೊಳಗಿನ ಸುರತರುವೇ
ಬಗೆ ಬಲ್ಲರೇನೊ ನಿನ್ನವರನ್ಯರಿಗೆ
ವೆಗ್ಗಳವೇನೋ ದುರ್ಗಮವಾಗಿದ್ದ ದುರಿತಕೋಟಿಗೆ
ಲಗ್ಗಿಗೆ ಬಿಟ್ಟು ಕುಡಿನೋಟದಲ್ಲಿ ನೋಡಿ
ಮುಗ್ಗು ಮಾಡುವ ವಿಷಯಂಗಳಿಗೀಮನ
ಒಗ್ಗಟ್ಟಿಕೊಂಡು ಪೋಗದಂತೆ ಒಂದಕ್ಕೆ
ಜಗ್ಗುವೆ ಜಗಜ್ಜನಕಾ ಜಲಧಿಶಯ್ಯಾ
ದುರ್ಗಮ ಅಗ್ಗಳಿಕೇನೆಂಬೆ ನಿನ್ನ ನಂಬಿದವರು
ದಿಗ್ಗಜದಂತೆ ಮದವೇರಿ ಸಂಚರಿಪರು
ಯೋಗ್ಯತಾವಾರದೊ ತೊಲಗಿತು ಉಬ್ಬಿದ ಜ್ಞಾನ
ಸುಗ್ಗಿಯೊಳಗೆ ನಿಂದಾಡೋದು ನೀನೆ ಬಲ್ಲೆ
ಅಗ್ಗಳಿಕೆ ಹಾಹಾ ಹಾಹಾ ಸೋಜಿಗಾ
ಜಿಜ್ಞಾಸೆವ್ಯಾತಕ್ಕೆ ನಿನ್ನ ಪಾದವ ಕಂಡ
ಸುಜ್ಞಾನಿಗೆ ಎಲ್ಲಿ ಆವಲ್ಲಿ ಇದ್ದರೂ
ತಗ್ಗಿ ಪೋಗದೆ ಪುಣ್ಯ ಪೂರತಿಯಾಗುವುದು
ನೆಗ್ಗು ಬೀಳದು ಬಹುಕಾಲಕ್ಕೆ
ಋಗ್ವೇದಾದಿಗಳು ವಿಚಿತ್ರ ಬಗೆಯಿಂದ
ಒಗ್ಗೂಡಿಸಿ ಕೊಂಡಾಡಿ ನಿಲ್ಲುತಲಿವೇ
ಜಿಜ್ಞಾನಾಪ ರುಕ್ಮಿಣಿ ಮನೋಹರ ನೀನು ಮಾಡಿದ ಪ್ರ
ತಿಜ್ಞವ ಬಿಟ್ಟು ನಿಜಭಕ್ತರ ಗೆಲಿಸುವೆ

ಉಗ್ಗಡ ವಿವರಿಪೆ ದೇವಾ ನಿನ್ನ ಕೃಪೆಗೆ
ದಿಗ್ಗದೇಶದೊಳಗೆ ಅಧಿಕವು ಕಾಣೆ
ಕಗ್ಗತ್ತಲಿನೊಳು ಕಾರ್ಗಗನ ಮಿಂಚೆ
ಕುಗ್ಗುಗೊಡದಂತೆ ಹೃದ್ಗತ ನಿವಾಸಾ
ವಿಜ್ಞಾನಮಯ ಮೂರುತಿ ವಿಜಯ ವಿಠ್ಠಲಾ
ದುರ್ಗಾರಮಣ ದುರ್ಜನ ವಿದಾರಣಾ
ವೆಗ್ಗಳವಲ್ಲವಯ್ಯಾ ೧

ಮಟ್ಟತಾಳ

ಆರಿಗೆ ದುರ್ಭಿಕ್ಷಾ ಆರಿಗೆ ಸುಭಿಕ್ಷಾ
ಆರಿಗೆ ಅರಿಷ್ಟಾ ಆರಿಗೆ ಮಹಾಕಷ್ಟಾ
ಆರಿಗೆ ಸಂತಾಪಾ ಆರಿಗೆ ದುರ್ಲೇಪಾ
ಆರಿಗೆ ವ್ಯಾಕುಲಾ ಆರಿಗನುಕೂಲಾ
ಆರಿಗೆ ದಾರಿದ್ರಾ ಆರಿಗೆ ಗುಣಛಿದ್ರಾ
ಆರಿಗೆ ಆವಸತ್ಯಾ ಆರಿಗೆ ವೈಪರೀತ್ಯಾ
ಆರಿಗಾರಯ್ಯಾ ಈ ರೀತಿ ದುಶ್ಚಿತ್ತಾ
ನಾರಾಯಣ ನಿನ್ನ ಸೇರದ ಪಾಪಿಗೆ
ಪೋರತನವೆಲ್ಲ ಬಂದುಟ್ಟುವದು
ಸಾರಿಸಾರಿಗೆ ನಿನ್ನ ಸಾರಿದ ಮನುಜಂಗೆ
ಸರುವಪಾಪಗಳು ದೂರದಲ್ಲಿಪ್ಪವು
ಕಾರುಣ್ಯಸಿಂಧು ವಿಜಯ ವಿಠ್ಠಲರೇಯಾ
ಆರಾಧಿಸುವರಿಗೆ ಸೂರೆ ನಿನ್ನ ನಾಮಾ ೨

ತ್ರಿವಿಡಿ ತಾಳ

ಕಠಿಣವಾಗಿಪ್ಪದು ಯಮಪುರಾದಾ ಬಟ್ಟೆ
ಕಠಿಣವಾಗಿಪ್ಪದು ಯಮ ಯಾತನೆ
ಕಠಿಣವಾಗಿಪ್ಪದು ಯಮದೂತರ ನೋಟಾ
ಕಠಿಣವಾಗಿಪ್ಪದು ಯಮದರುಶನಾ
ಸಟೆಯಲ್ಲಾ ಈ ಮಾತು ಸಿದ್ಧಾಂತವೆ ಸರಿ

ಶಠನಿಗಲ್ಲದೆ ನಿನ್ನವರಿಗುಂಟೇ
ಘಟದೊಳಗೆ ಉದಕ ಇದ್ದ ತೆರದಿ ನಿನ್ನ
ಜಠರದೊಳಗೆ ಲೋಕಾದಿರಲದರಲ್ಲಿ
ತೃಟಿಯಾದರು ಬಿಡದೆ ನಾನಾ ಸುಖದಿಂದ
ನಟನೆ ಮಾಡುತಲಿಪ್ಪ ತೋಂಡನಿಗೆ
ತುಟಿ ಮಿಸಕಲು ಸರ್ವ ತಾತ್ವಿಕರು ಬಂದು
ಘಟಕರಾಗುವರು ನಿನ್ನ ಭೀತಿಯಲ್ಲಿ
ಕಠಿಣವಾವದು ಕಾಣೊ ಯಾವ ವ್ಯಾಪಾರದಲ್ಲಿ
ಕಟಿಕಟಾ ಧರ್ಮರಾಯಾ ಹೊಲ್ಲೆನೆಲ್ಲಾ
ಪಟುಮೂರುತಿ ನಮ್ಮ ವಿಜಯ ವಿಠ್ಠಲ ನಿ
ಚ್ಚಟಲ ಭಜಕರ ಕೂಡ ಸರಸವಾಡುವ ರಂಗಾ ೩

ಅಟ್ಟತಾಳ

ಎಂಥಾದೊ ನಿನ್ನ ರಕ್ಷಣೆಗೆ ಪಡಿಗಾಣೆ
ಅಂತುಗಾಣದು ಕಾಣೆ ನಿನ್ನಂಘ್ರಿಗಳಾಣೆ
ಸಂತರ ಸಂತರಿಸಿ ನಿರಂತರ
ಸಂತಾಪ ಕಳೆದು ಆದ್ಯಂತಕಾಲದಲ್ಲಿ
ಅಂತರಂಗದಲ್ಲಿ ಸಂತತವಾಸನೆ
ಸಂತೋಷವಾಗಿಪ ಚಿಂತೆಯೊಳಗಿಟ್ಟು
ಅಂತಕನ ಭೀತಿ ಪಿಂತಿ ಮಾಡಿಸುವ ಶ್ರೀ
ಕಾಂತ ವಿಜಯ ವಿಠ್ಠಲರೇಯ ನಿರ್ಮಳಕಾಯ
ಚಿಂತಾಮಣಿಯ ಸಚ್ಚಿದಾನಂದಾತ್ಮಕಾ ೪

ಆದಿತಾಳ

ಭಕ್ತರ ನೋಡಿ ನಗುವ ಪರಮ ನಿನ್ನ ವ್ಯಾಪಾರ
ವ್ಯಕ್ತಾವ್ಯಕ್ತ ವೆಂದು ತಿಳಿದರೆ ಅವನೆ ಅಪಾರಾ
ಉಕ್ತಿವಂತನಹುದೋ ಸಿದ್ಧಾಂತ ಅವನೆ ಪ್ರಸಿದ್ಧಾ
ಶಕ್ತಸುಕಾಣೊ ಅವನಿಯೊಳಗೆ ತಾರೊ ಮನಸಿಗೆ

ಮುಕ್ತಿಯಪೇಕ್ಷಾ ಒಮ್ಮಿಗೆಮಾಡ ಹರಿಯನ್ನೆ ಬಿಡಾ
ಭೋಕ್ತಿಗೆ ಆವಾನು ಆವಪರಿಯ ನೋಡಿವನ ಪರಿಯಾ
ಭಕ್ತಿ ಜ್ಞಾನ ವಿರಕ್ತಿಯಲ್ಲಿ ಲೋಲಾಡುವುನಲ್ಲಿ
ತ್ಯಕ್ತ ದೇಹಸಂಬಂಧದ ಮೋಹ ಸುಜನರಲ್ಲಿ ಸ್ನೇಹಾ
ಮುಕ್ತಿದಾತಾ ವಿಜಯ ವಿಠ್ಠಲನಾ ದೇವ ಸಂಜೀವಾ
ಸಕ್ತನಾಗಿದ್ದವಗೆ ಬರುವ ಎದುರಿಗೆ ೫

ಜತೆ

ಪಕ್ಕೆಯೊಳಗೆ ಪಕ್ಕಿ ಮಕ್ಕಳ ಸಾಕಿದಂತೆ
ಅಕ್ಕರದಲಿ ವಿಜಯ ವಿಠ್ಠಲ ಭಕ್ತರ ಕಾವಾ ೬

ವರಾಹ ಸ್ತೋತ್ರ

೧೧೪

ಧ್ರುವತಾಳ

ಭೂವರಾಹ ಅವತಾರ ಶೃಂಗಾರ ಗುಣಾಕಾರಾ
ದೇವರ ದೇವನೆ ಧಾರುಣೀಧರ ದಾ-
ನವರ ವಿಪಿನ ಕುಠಾರ ಕಲುಷಹರಾ
ಸ್ಥಾವರ ಜಂಗಮ ಜಠರದೊಳಗೆ ಇಟ್ಟ
ಶ್ರೀವರ ಸರ್ವಸಾರಭೋಕ್ತ ಶ್ರೀಮದನಂತ
ಜೀವರಾಖಿಳರಿಗೆ ಬಲು ಭಿನ್ನ ದಯ ಪಾ-
ರಾವಾರ ಮೂರುತಿ ಸುರನರೋರಗ ಪಾ-
ರಾವಾರ ವಿನುತಾ ವಿನುತಜ ಗಮನಾ ಕ್ಷೀರ
ವಾರಿಧಿ ಶಯನಾ ವಾರಿಜನಯನಾ ಇಂ-
ದೀವರ ಶ್ಯಾಮ ಶ್ರೀ ವಿಜಯ ವಿಠ್ಠಲರೇಯಾ
ತಾವರೆ ಜಲದೊಳಗಿದ್ದಂತೆನ್ನೊಳಗಿಪ್ಪಾ
ಭೂವರಹಾವತಾರಾ ೧

ಮಟ್ಟತಾಳ

ಸುರರನು ಬೆಂಬುತ್ತಿ ಧರಣಿಯನು ಕಿತ್ತಿ
ಸುರುಳಿಯ ಮಾಡಿ ಸುತ್ತಿ
ಭರದಿಂದಲಿ ಎತ್ತಿ ಇರಿಸಿದ ದುರ್ಮತ್ತಿ
ಧರುಣಿಯ ನಿಜಪತ್ತಿ ವಿಜಯವಿಠ್ಠಲ ಮೂರ್ತಿ-
ಮೆರೆದನು ಸತ್ಕೀರ್ತಿ ಧರುಣಿಯ ನಿಜಪತ್ತಿ ೨

ರೂಪಕತಾಳ

ಅಸುರ ಕನಕಾಕ್ಷನು ವಸುಧಿಯಾ ಎಳೆದೊಯ್ದು
ರಸಾತಳದೊಳಗೆ ಇರಿಸಿದನಂದೂ
ರಸಹೀನವಾಗೆ ವೀರಸರಾಗಿ ಪೋಗಿ, ಸುಮ-
ನಸರು ಚಿಂತೆಯಲಿ ಕಾಣಿಸದೆ ಪುಣ್ಯ-
ಬಿಸಜಭವನೆಡೆಗೆ ಅಸುರರಿಪುಗಳು ಪೋಗಿ
ಪುಸಿಯಾದೆ ಬಿನ್ನೈಸಿ ವಸುಧಿಯಾ ಸ್ಥಿತಿಯಾ
ಪಶುಪತಿ ಪಿತ ತಿಳಿದು ವಿಜಯ ವಿಠ್ಠಲರೇಯಗೆ
ಹಸುಳೆಯಂದದಲಿ ಉಬ್ಬಸವ ಪೇಳಿದನು ೩

ಝಂಪೆತಾಳ

ಸೂಕರ ರೂಪವತಾಳಿ ಕೋರಿದಾಡಿಲಿಂದ
ಭೀಕರ ಶಬ್ದದಿ ದಶದಿಶೆಗಳೆಲ್ಲ ಬೀರುತ್ತ
ಭೂಕಂಪಿಸುವಂತೆ ಘುಡಿಘುಡಿಸೆ ಘೋಷವ
ಲೋಕೇಶ ಮುಖ್ಯರು ಸುರರೆಲ್ಲ ಸುಖಬಡಲು
ಶೋಕವಾಯಿತು ದೈತ್ಯಾವಳಿಗೆ ವೇದಗಳು
ವಾಕು ತೊದಲನುಡಿ ಗದಗದನೆ ಕೊಂಡಾಡೆ
ವೈಕುಂಠಪತಿ ನಮ್ಮ ವಿಜಯ ವಿಠ್ಠಲನು ವಿ
ವೇಕರನೊಡಗೂಡಿ ನೂಕಿದನು ಬಲವಾ ೪

ತ್ರಿವಿಡಿತಾಳ

ಇಳಿಯಾ ಬಗಿದು ರಸಾತಳಕೆ ನಿಲ್ಲದೆ ಪೋಗಿ
ಪೊಳೆವ ದಾಡಿಲಿಂದ ಖಳನ ಕುಕ್ಕಿರಿದೊ
ಕೋಳಾಹಳವೆಬ್ಬಿಸಿ ನೆಲಕೆ ಅಪ್ಪಳಿಸಿ
ಬಲು ಬಲವಂತನಾದವನಾ
ಅಳಿದು ಅಕ್ಷಣದಲ್ಲಿ ನೆಲಕೆ ಕೆಡಹಿ
ನೆಲನಾ ಪಲುದುದಿಯಲಿ ಪೊತ್ತುಕಿಲಿ
ಕಿಲಿ ನಗುತಾಲಿಪ್ಪ ಹಲವು ಮಾತಿಲಿ
ಜಲಜನಾಭನೆ ನಮ್ಮ ವಿಜಯ ವಿಠ್ಠಲರೇಯಾ
ವೊಲವಕಿಟದೇವಾನೆ ಇಳಿಯ ಭಾರಹರಣಾ ೫

ಅಟ್ಟತಾಳ

ನಾರಾಯಣ ಕೃಷ್ಣ ಅಚ್ಚುತ ಗೋವಿಂದ
ನಾರದ ವರದ, ಗೋವಿಂದಾನಂತಾ
ಶೌರಿ ಮುರಾರಿ ಮುಕುಂದ ಸದಾನಂದಾ
ಶ್ರೀ ರಮಣನೆ ಜ್ಞಾನಪುಂಜಾನೆ ಕುಂಜರ
ದಾರುಣ ದೈತ್ಯಾರಿ ಕಾರುಣ್ಯ ಮೂರುತಿ
ಈ ರೀತಿಯಲಿ ಸ್ತೋತ್ರ ಧಾರುಣಿದೇವಿ ಅ
ಪಾರವಾಗಿ ಮಾಡೆ ಮಾರಜನಕ
ಹರಿ ವಿಜಯ ವಿಠ್ಠಲರೇಯಾ
ಗೀರವಾಣರ ಪ್ರತಿ ಸಾರವ ಹರಿಸಿದಾ ೬

ಆದಿತಾಳ

ದುಂದುಭಿ ಮೊರೆಯೆ, ಮೇಲೆ ಮಂದರ ಮೊಗ್ಗೆಗರಿಯೆ
ಗಂಧರ್ವಾದಿಗಳು ನಾರಂದ ತುಂಬುರಾರು ನಿಂದು
ಛಂದಾಗಿ ಪಾಡುತ್ತ ನಂದಾದಿಂದ ನಲಿದಾಡೆ
ಇಂದುವಿನೊಳು ಕಳಂಕ ಪೊಂದಿದಂತೆ ದಾಡೆತುದಿಗೆ

ಸುಂದರ ವಸುಂಧರವು ಛಂದದಿಂದ ಒಪ್ಪುತಿರೆ
ಮಂದಾಕಿನಿಜನಕ ವಿಜಯ ವಿಠ್ಠಲ ಉರ
ಗೇಂದ್ರ ಗಿರಿಯಲ್ಲಿ ಬಂದು ನಿಂದ ನಿಗಮಗೋಚರ ೭

ಜತೆ

ಸ್ವಾಮಿ ಪುಷ್ಕರಣಿಯವಾಸಿ ಕ್ರೋಡವೇಷಾ
ಭೂಮಿರಮಣ ನಮ್ಮ ವಿಜಯ ವಿಠ್ಠಲ ತಿಮ್ಮಾ ೮

ಕಪಿಲಾವತಾರ ಸ್ತೋತ್ರ

೧೧೫

ಧ್ರುವತಾಳ

ಉಪಜೀವ್ಯ ನಿಜಾನಂದ ಉದಧಿಶಯನ ಸರ್ವೇಶ
ಸಪುತ ಸಪುತಲೋಕ ಪಾಲಕ ಕಾಮೇಶ
ಉಪಜೀವ್ಯ ತಪೋಧನ ಪಾನಿಷ್ಟ ಪಾಪಾವನಪಾವಕ
ಜಪಶೀಲ ಸಿದ್ಧಮೂರ್ತಿ ಸಾಕಾರ ಸರ್ವಕಾರ
ಉಪದೇಶವ ತುಂಬುರಾದಿ ನಾರದವಂದಿತ ಪಾದಾ
ನುಪಮೇಯ ರಮೆಯರಸಯೋಗಿ ಜಟಿವಲ್ಕಲವಾಸಾ
ತೃಪುತ ತ್ರಿಗುಣಾತೀತ ತ್ರಿಕಾಲ ಕಾಲನಾಮಕ
ವಿಪುಲ ಮಧ್ಯ ಯೋಗ ಶಾಸ್ತ್ರ ರಚನೆಗೈಸಿದ ಗತಿಪ್ರದ
ಕುಪಿತರಹಿತ ನಿರುತ ಅಪಾರ ಅನಾದಿ ಅಪ್ರತಿಹತ ದೇವಾ
ಚಪಲನಯನ ಅಪರಿಚ್ಛಿನ್ನ ವ್ಯಾಪ್ತ ಬೊಮ್ಮಾಂಡ ಕಾರಣ
ಉಪಜೀವ್ಯ ತ್ರಿಕೋಟಿ ಕಪಿಗಳಯ್ಯಾ ಕನಕವರ್ಣ
ಕಪಿಲ ವೃಷಾಕಪಿಪತಿ ಅಪರ ಬುದ್ಧನ ನೋಡು ಎ
ನ್ನಪರಾಧ ಕ್ಷಮೆ ಮಾಡಯ್ಯಾ ಕೃಪಣವತ್ಸಲ
ಉಪಹತಿಗಳನ್ನು ಬಿಡಿಸಯ್ಯಾ
ಉಪಜೀವ್ಯ ದೀಪುತ ವಿಜಯ ವಿಠ್ಠಲ
ಕಪಿಲಾವತಾರ ಲಾವಣ್ಯ ೧

ಮಟ್ಟತಾಳ

ಪದ್ಮಸಂಭವ ತನ್ನ ಛಾಯದಿಂದಲಿ ಪುಟ್ಟಿದ
ಕರ್ದುಮಮುನಿ ದೇವಹೂತಿಯಲ್ಲಿ ಬಂದು
ಉದ್ಭವವಾದ ಶುಕ್ಲ ಶೋಣಿತರಹಿತ
ಈಧರೆಯೊಳಗೆ ನಿನ್ನ ನಂಬಿದ ಮಾನವಗೆ
ಹೃದ್ರೋಗವೇ ಇಲ್ಲ ಸುಹೃತ ಸುಪ್ರಭ ಪ್ರಭಾ ಮೂರುತಿ
ಶುದ್ಧ ವಿಜಯ ವಿಠ್ಠಲ ಕಪಿಲಾತ್ಮಕ
ಉದ್ಧರಿಸು ಎನ್ನ ಮನದೊಳಗೆ ನಿಂದು ೨

ತ್ರಿವಿಡಿತಾಳ

ಮುನಿವರೇಣ್ಯ ಸ್ವಾಮಿ ಸ್ವತಂತ್ರ ಕರ್ತ ಸು
ಜ್ಞಾನ ಮನೋಭೀಷ್ಟ ಭಯನಾಶಕ ಶಕ್ತ
ಜನನಿಗೆ ಜ್ಞಾನೋಪದೇಶವ ಪೇಳಿ ಸಾ
ಧನ ಮಾರ್ಗತೋರಿ ಸಂಸಾರವೆಂಬೋ
ವನಧಿಯ ದಾಟಿಸಿ ಸ್ನೇಹ ಭಾವದಿಂದ
ನಿನಗೆ ನೀನೆ ಪೊಳೆದ ಭಕುತವಶನೇ
ವನಜ ಭವಾದಿಗಳು ನಿನ್ನ ಲೀಲೆಯನೋಡಿ
ಗುಣಿಸಿ ಎಣಿಸಿ ಮೈಮರೆದರದಕೋ
ಎಣೆಗಾಣೆನೋ ಸ್ವೇಚ್ಛಾ ಕ್ರೀಡಿಗೆ ಮಂಗಳ
ಖಣಿಯೆ ತುಳಸೀಪ್ರೀಯ ಅತುಳ ಕೀರ್ತಿ
ಪ್ರಣವ ಮೂರುತಿ ನಮ್ಮ ವಿಜಯ ವಿಠ್ಠಲರೇಯಾ
ಮಣಿದು ನಮೋ ಎಂಬೆ ಸಾರಹೃದಯಬದ್ಧ ೩

ಅಟ್ಟತಾಳ

ಆದಿಮನುವಿನ ಕಾಲದಲ್ಲಿ ಪುಟ್ಟಿ
ಭೇದಾರ್ಥ ಜ್ಞಾನವ ಶಿಷ್ಯರಿಗೆ ಪೇಳಿ
ವೇದ ವೇದಾಂತ ತಿಳುಪಿ ಅಜ್ಞಾನವ
ಭೇದಿಸಿ ಬಿಟ್ಟ ಬಿಸಿಜದಳಾಂಬಕ
ಸಾಧು ಸಾಧು ಸಚ್ಚಿದಾನಂದಾತ್ಮಾ ವಿ

ನೋದ ಮನುಜ ಕಾಯ ನಾರಾಯಣ ವರ
ಬೋಧಮುದ್ರಹಸ್ತ ಶಶಿವರ್ಣ ಸಂಕಾಶ
ಆದಿತ್ಯವಂದಿತ ವಿಜಯ ವಿಠ್ಠಲರೇಯಾ
ವೈಧಾತ್ರ ಸೇವ್ಯ ನಿರಾಕುಲ ಕಪಿಲಾ ೪

ಆದಿತಾಳ

ಅರುಣೋದಯದಲೆದ್ದು ಕರಣ ಶುದ್ಧಿಯಿಂದ
ಗುರುಕಪಿಲ ಕಪಿಲನೆಂದು ಸ್ಮರಿಸಿದ ಮಾನವಗೆ
ನಿರುತ ಮಾಡಿದ ಮಹತ್ತರ ಕರ್ಮಬಂಧ
ಪರಿಹಾರವಾಗಿ ಪೋಗುವುದು ಪರಮ ಜ್ಞಾನಿಯಾದ
ಪರಿಮಾಣಕ್ಕೆ ತನ್ನ ಕುರುಹು
ತೋರಿಸಿ ಯಮನ ಬಾಧೆ ತಪ್ಪಿಸುವನು
ನಿರಯದೂರ ಮನುಪಾತ್ರ ವಿಜಯ ವಿಠ್ಠಲ
ಪೊರೆವ ಪ್ರಸನ್ನ ಜನರ ಹೃದಯದೊಳಗೆ ನಿಂದು ೫

ಜತೆ

ಕಪಿಲ ಕಪಿಲ ದೇವ ದೇಶ ಕಾಲತಃ ಪೂರ್ಣ
ದ್ರುಪದನಂದನವರದ ವಿಜಯ ವಿಠ್ಠಲ ಮೂರ್ತಿ ೬

೧೧೬

ಧ್ರುವತಾಳ

ಸಿದ್ಧಿದಾಯಕ ಶಿಷ್ಯಜನ ಪರಿಪಾಲ ಪರಮ
ಶುದ್ಧಾತ್ಮ ಸುಗುಣ ಸಾಂದ್ರ ಸುಖವಾರಿಧಿ
ನಿದ್ರಾರಹಿತ ನಿದ್ರಾರಮಣ ನಿರ್ವಿಕಾರ
ಚಿದ್ದೇಹಿ ಸರ್ವಕಾಲ ಸುಂದರಸಾರ
ಪದ್ಮಸಂಭವ ಬಲಿ ಪ್ರಕ್ಷಾಲಿತ ಪಾದ ಮಹಾ
ಹೃದ್ರೋಗನಾಶ ವೈಕುಂಠವಾಸ
ವಿದ್ಯಾತೀತ ವಿಶ್ವನಾಟಕ ನಾರಾಯಣ

ವಿದ್ಯ ಉದ್ಧಾರಕ ಉದಧಿಸದನಾ
ಸಿದ್ಧಾದಿ ವಿನುತ ಸಂತತ ಪಾತಾಳವಾಸಿ
ಬುದ್ಧಿ ವಿಶಾಲ ಮಹಿಮ ಪಾಪಹಾರಿ
ಖದ್ಯೋತ ವರ್ಣ ಸಕಲ ವ್ಯಾಪ್ತ ಆಕಾಶ ಅಮಿತ
ಅದ್ವೈತಕಾಯಾ ಮಾಯಾರಮಣ ರಾಜೀವನೇತ್ರಾ
ಅದ್ವಯ ಅನಾದಿ ಪುರುಷ ಚಿತ್ರ
ಕರ್ದಮ ಮುನಿಸೂನು ವಿಜಯ ವಿಠ್ಠಲ ಕಪಿಲ
ನಿರ್ದೋಷ ಕರುಣಾಬ್ಧಿ ಸರ್ವರಾಧಾರಿ ೧

ಮಟ್ಟತಾಳ

ಆದಿ ಮನ್ವಂತರದಿ ಜನಿಸಿದ ಮಹದ್ದೈವ
ಆದಿ ಪರಬೊಮ್ಮ ಬೊಮ್ಮನಯ್ಯಾ ಜೀಯಾ
ಸಾಧುಜನ ಪ್ರೀಯಾ ಸುತಪ ಮುನಿತಿಲಕಾ
ಬೋಧಶರೀರ ಭಕುತರ ಮನೋಹರ ಹರಿ
ಮಾಧವ ಸಿರಿ ವಿಜಯ ವಿಠ್ಠಲ ವಿಮಲೇಶ
ಮೋದಪತಿ ಕೊಡುವ ಕಪಿಲ ಭಗವನ್ಮೂರ್ತಿ ೨

ತ್ರಿವಿಡಿತಾಳ

ಘನ ಮಹಿಮಾ ಗೌಣಾಂಡದೊಳಗೆ ಲೀಲೆಯಿಂದ
ಜನಸಿ ಮೆರೆದೆ ಬಿಂದುಸರೋವರದಲ್ಲಿ
ಮಿನುಗುವ ದ್ವಯ ಹಸ್ತ ಅಪ್ರಾಕೃತಕಾಯ
ಇನನಂತೆ ಒಪ್ಪುವ ಶಿರೋರುಹವೊ
ಕನಕ ಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ
ಅನವರತ ತುಂಬಿ ಸೂಸುತಲಿದಕೊ
ಜನನಿ ದೇವಹೂತಿಗೆ ಉಪದೇಶವನು ಮಾಡಿ
ಗುಣಮೊದಲಾದ ತತ್ವವ ತಿಳಿಸಿದೆ
ತನುವಿನೊಳಗೆ ನೀನೆ ತಿಳಿದು ತಿಳಿದೆ ನಿತ್ಯ
ಜನರನ್ನು ಪಾಲಿಸುವ ಕಪಿಲಾಖ್ಯನೆ
ಅನುದಿನ ನಿನ್ನ ಧ್ಯಾನವ ಮಾಡಿ ಮಣಿಯಿಂದ

ಎಣಿಸುವ ಸುಜನಕ್ಕೆ ಜ್ಞಾನ ಕೊಡುವೆ
ಎಣೆಗಾಣೆ ನಿನ್ನಾಲೋಚನದ ಶಕ್ತಿಗೆ ಸಗರ
ಜನಪನಂದನರನ್ನು ಭಂಗಿಸಿದೆ
ಅನುಮಾನವಿದಕಿಲ್ಲ ನಿನ್ನ ನಂಬಿದ ಮೂಢ
ಮನುಜನಿಗೆ ಮಹಪದವಿ ಬರುವುದಯ್ಯಾ
ಮುನಿಕುಲೋತ್ತಮ ಕಪಿಲ ವಿಜಯ ವಿಠ್ಠಲರೇಯ
ಎನಗೆ ಯೋಗ ಮಾರ್ಗವ ತೋರು ತವಕದಿಂದ ೩

ಅಟ್ಟತಾಳ

ಕಪಿಲ ಕಪಿಲ ಎಂದು ಪ್ರಾತಃ ಕಾಲದಲೆದ್ದು
ಸಪುತ ಸಾರಿ ನುಡಿದ ಮಾನವನಿಗೆ
ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲಾ
ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ
ಗುಪುತ ನಾಮವಿದು ಮನದೊಳಗಿಡುವುದು
ಕಪಟ ಜೀವರು ಈತನ ಒಬ್ಬ ಋಷಿ ಎಂದು
ತಪಿಸುವರು ಕಾಣೊ ನಿತ್ಯ ನರಕದಲ್ಲಿ
ಕೃಪಣವತ್ಸಲ ನಮ್ಮ ವಿಜಯ ವಿಠ್ಠಲರೇಯಾ
ಕಪಿಲಾವತಾರನು ಬಲ್ಲವಗೆ ಬಲು ಸುಲಭ ೪

ಆದಿತಾಳ

ಬಲಹಸ್ತದಲ್ಲಿ ಯಜ್ಞಶಾಲೆಯಲ್ಲಿ ಕಂ
ಗಳ ಕಪ್ಪಿನಲ್ಲಿ ಹೃದಯಸ್ಥಾನ ನಾಭಿಯಲ್ಲಿ
ಜಲಧಿ ಗಂಗಾ ಸಂಗಮದಲ್ಲಿ ಗಮನದಲ್ಲಿ
ತುಲಸಿ ಪತ್ರದಲ್ಲಿ ತುರಗ ತುರುವಿನಲ್ಲಿ
ಮಲಗುವ ಮನೆಯಲ್ಲಿ ನೈವೇದ್ಯ ಸಮಯದಲ್ಲಿ
ಬಲುಕರ್ಮಬಂಧಗಳು ಮೋಚಕವಾಗುವಲ್ಲಿ
ಚಲುವನಾದವನಲ್ಲಿ ವಿದ್ಯೆಪೇಳುವನಲ್ಲಿ
ಫಲದಲ್ಲಿ ಪ್ರತಿಕೂಲ ಇಲ್ಲದ ಸ್ಥಳದಲ್ಲಿ
ಬೆಳೆದ ದರ್ಭಗಳಲ್ಲಿ ಅಗ್ನಿಯಲ್ಲಿ ಹರಿವ

ಜಲದಲ್ಲಿ ಜಾಂಬುದ ನದಿಯಲ್ಲಿ ಶ್ಲೋಕದಲ್ಲಿ
ವಲಿಮುಖ ಬಳಗದಲ್ಲಿ ಆಚಾರ ಶೀಲನಲ್ಲಿ
ಘಳಿಗೆ ಆರಂಭದಲ್ಲಿ ಪಶ್ಚಿಮ ಭಾಗದಲ್ಲಿ
ಪೊಳೆವ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು
ಕಾಲ ಅಕಾಲಕ್ಕೆ ಬಿಡದೆ ಸ್ಮರಿಸು ಕಪಿಲ ಪರಮಾತ್ಮನ್ನ
ಗೆಲುವುಂಟು ನಿನಗೆಲವೋ ಸಂಸಾರದಿಂದ ವೇಗ
ಕಲಿಯುಗದೊಳಗಿದೆ ಕೊಂಡಾಡಿದವರಿಗೆ
ಖಳರ ಅಂಜಿಕೆಯಿಲ್ಲ ನಿಂದಲ್ಲಿ ಶುಭಯೋಗ
ಬಲವೈರಿನುತ ನಮ್ಮ ವಿಜಯ ವಿಠ್ಠಲರೇಯಾ
ಇಳಿಯೊಳಗೆ ಕಪಿಲಾವತಾರನಾಗಿ ನಮ್ಮ ಭಾರವೊಹಿಸಿದಾ

ಜತೆ

ತಮಪರಿಚ್ಛೇದ ಈತನ ಸ್ಮರಣೆ, ನೋಡು ಹೃ
ತ್ಕಮಲದೊಳಗೆ ವಿಜಯ ವಿಠ್ಠಲನ್ನ ಚರಣಾಬ್ಜ ೬

ದತ್ತಾವತಾರ ಸ್ತೋತ್ರ

೧೧೭

ಧ್ರುವತಾಳ

ದತ್ತಾ ಯೋಗೀಶ ಯೋಗಿ ಯೋಗಶಕ್ತಿಪ್ರದ
ದತ್ತಾ ಪ್ರಣತರಿಗೆ ಪ್ರಣವಪ್ರತಿಪಾದ್ಯ
ದತ್ತ ಸ್ವತಂತ್ರದಿಂದ ಜಗಕೆ ಸತ್ಕರ್ಮ ಪ್ರ
ದತ್ತ ಮಾಡಿಕೊಡುವ ದೀಪ್ತಾ ಚೂಡಾ
ದತ್ತಾ ಚೀರಾಂಬರಗೇಯಾ ವಲ್ಕಲವಾಸ
ದತ್ತಾ ದುರ್ವಾಸ ಚಂದ್ರ ಸಹಭವ ಭವ್ಯಹಂಸಾ
ನಿತ್ಯ ಪ್ರಕೃತಿ ರಮಣಾ ಮೂಲಮೂರ್ತಿ
ಅತ್ರಿನಂದನ ಕೃಷ್ಣಾಂಜನ ಬ್ರಹ್ಮಸೂತ್ರ ಪ
ವಿತ್ರ ಧಾರಣದೇವಾ ದೇವವಂದ್ಯಾ
ಸತ್ಕ್ರಿಯಾ ಸತತ ಸಾವಿರ ಹಸ್ತವರದ

ದೈತ್ಯ ಮೋಹಕ ರೂಪಾಘನ ಪ್ರತಾಪಾ
ಅತ್ಯಂತ ಜಗದ್ಭರಿತಾ ಜನನಾದಿ ಶೂನ್ಯ ಸ
ರ್ವೋತ್ತಮ ಮಹಾ ಪ್ರಭುವೆ ಸ್ವಪ್ರಭಾವಾ
ಕೀರ್ತಿ ಪಾವನವಪುಷ ವೈಕುಂಠವಾಸ ತಪೋ
ವಿತ್ತ ಸುಚಿತ್ತಾ ಸಚ್ಚಿದಾನಂದಾತ್ಮಾ ಉತ್ತುಂಗ
ವ್ಯಾಪ್ತ ಗೋಪ್ತಾ ಪ್ರಾಪ್ತಾ ಸಂತೃಪ್ತಾ
ತಪ್ತ ಕಾಂಚನಗಾತ್ರಾ ನಿರ್ಜರಾಪ್ತಾ
ಚಿತ್ರ ವಿಚಿತ್ರ ಕರ್ಮ ವಿಜಯ ವಿಠ್ಠಲರೇಯಾ
ದತ್ತಾವತಾರ ಭಗದತ್ತಾಯುಧಧಾರಿ ೧

ಮಟ್ಟತಾಳ

ದತ್ತ ಜ್ಞಾನದತ್ತಾ ದತ್ತ ಭಕುತಿದತ್ತಾ
ದತ್ತ ಶ್ರವಣದತ್ತಾ ದತ್ತ ಮನನದತ್ತಾ
ದತ್ತ ದಾನದತ್ತಾ ದತ್ತಾ ಸಾಧನದತ್ತಾ
ದತ್ತ ಚಿತ್ತದತ್ತಾ ದತ್ತಾವಿರಕ್ತಿ ದತ್ತಾ
ದತ್ತ ಮಾರ್ಗದತ್ತಾ ದತ್ತಾ ದತ್ತಾ ಇಷ್ಟದತ್ತಾ
ದತ್ತ ಸರ್ವದತ್ತಾ ದತ್ತ ಭೋಗದತ್ತಾ
ದತ್ತಾ ನಂದದತ್ತಾ ದತ್ತ ತನ್ನನೆದತ್ತಾ ದತ್ತಾತ್ರೇಯ
ದತ್ತ ಮೂರುತಿ ನಮ್ಮ ವಿಜಯವಿಠ್ಠಲರೇಯಾ
ದತ್ತನೆಂದನಿಗೆ ದತ್ತ ಮಗನಾಹಾ ೨

ತ್ರಿವಿಡಿತಾಳ

ಎಣಿಸಿ ಪೇಳುವನಾರು ನಿನ್ನ ಸ್ವಭಾವವಾ
ಅನುಸೂಯ ವರಸೂನು ಕರ್ದಮ ದೌಹಿಣಜಿಡಿ
ಗುಣಿಸಿ ಕೊಂಡಾಡಿದ ಜನರಿಗೆ ಭೀತಿ ಕರ್ಮಾ
ಜನಿಸುವ ಬಗೆಯಿಲ್ಲ ಇಳಿಯೊಳಗೆ
ನೆನೆಸಿದವರ ಮಸ್ತಕದಲ್ಲಿ ಸುಳಿವ
ಮನಸಿಜ ಜನಕ ಜಗನ್ಮೋಹನಾ
ಕನಸಿನೊಳಾದರೂ ಕಳವಳಿಕಿಯಿಂದಾಡೆ

ಮನ ಸೂರೆಗೊಡುವಾನು ಮಂದಹಾಸಾ
ಅನುಸರಿಸಿ ತಿರುಗುವ ಭಕ್ತರೊಡನೆ ದತ್ತಾ
ಘನ ಶುದ್ಧಾತ್ಮನು ಕಾಣೊ ಗೌರವರ್ಣಾ
ಉಣಿಸುವ ತನ್ನಯ ನಾಮಾಮೃತವ ಒ
ಕ್ಕಣಿಸುವಂತೆ ನಿತ್ಯ ಪ್ರೇರಿಸುವಾ
ಜನ ಸುಮ್ಮನಿರದಲೆ ಜಪಿಸಿ ಈತನ ನಾಮಾ
ಮಣಿಸಾರಿಸಾರಿಗೆಲಿ ಎಣಿಕೆ ಗೈಯೊ
ಗುಣ ಸಾರಾತರ ನಮ್ಮ ವಿಜಯವಿಠ್ಠಲರೇಯಾ
ಮನಸಿನೊಳಗೆ ನಿಲುವಾ ನಂಬಿದವಗೆ ದತ್ತಾ ೩

ಅಟ್ಟತಾಳ

ಯೋಗಾಸನಾ ಅಕ್ಷಮಾಲಾ ಜ್ಞಾನ ಮುದ್ರ
ಯೋಗಶಾಸ್ತ್ರ ಕರ್ತ ವರ್ತಮಾನಕಾಲ
ಭೂಗೋಲ ಚರಿಸುವ ಬ್ರಹ್ಮಚರ್ಯಧಾರ್ಯಾ
ಶ್ರೀಗುರು ಅಜಗುರು ಸರ್ವಜಗದ್ಗುರು
ಭಾಗೀರಥಿ ತೀರ ಬದರಿನಿವಾಸ ಆ
ಯೋಗ ಕರ್ಮಹಾರಿ ದತ್ತ ದಾನವರಿಗೆ
ಭೋಗ ಶಾಯಿ ಮುಕ್ತಾಭೋಗ ಭಾಗಾಧೇಯಾ
ಭಾಗ ತ್ರಯಗುಣ ನಾಶ ಗುಣಾಂಬುಧಿ
ರಾಗವಿದೂರ ಸರಾಗ ಮಣಿ ನಖಾ
ಪೂಗರ್ಭನೆನಿಸುವ ಈ ತನ್ನ ತಾತನ್ನ
ಆಗಸದಲಿ ನೋಡಿ ತಾತನ್ನ ಐಶ್ವರ್ಯ
ಯಾಗಾ ತೀರ್ಥಯಾತ್ರೆ ನಾನಾ ಪುಣ್ಯ ಸಂ
ಯೋಗದಿಂದಧಿಕ ದತ್ತನ ಸ್ಮರಣೆ ಒಮ್ಮೆ
ಜಾಗು ಮಾಡದೆ ಮಾಡೆ ಮುದದಿ ಬಂದೊದಗೋದು
ಜಾಗರತನದಿಂದ ಮಹಪುಣ್ಯ ಪ್ರತಿದಿನ
ಸಾಗರ ಮಂದಿರ ವಿಜಯ ವಿಠ್ಠಲ ಭವ
ರೋಗದ ವೈದ್ಯ ವೈಲಕ್ಷಣ್ಯ ೪

ಆದಿತಾಳ

ಜಯ ಜಯವೆಂದು ದತ್ತಮಂತ್ರವ
ನಯಮತಿಯಿಂದ ಜಪಿಸಲು
ತ್ರಯ ಪರಿಚ್ಛೇದಕ ಛೇದನಾ
ಭಯಪರ್ವತ ವಿಭೇದನಾ
ಅಯುತದುರಿತ ರೋದನಾ
ಕ್ಷಯರಹಿತ ಸನ್ಮೋದನಾ
ಜಯಜಯವೆಂದು ದತ್ತ ಮಂತ್ರಾ
ಪ್ರಿಯವಾಗಿಪ್ಪದು ಪ್ರಾರಭ್ಧಾ
ಜಯಜಯವೆನ್ನನೊ ಬಲುಲಬ್ಧಾ
ತ್ರಯ ಜಗದೊಳವನೆ ತಬ್ಧಾ
ಸುಯತಿಗಳು ನುಡಿದ ಶಬ್ದಾ
ದಯಪೂರ್ಣ ನಮಗೆ ವಿಜಯ ವಿಠ್ಠಲ ದತ್ತ
ಬಯಕೆ ಕೊಡುವುದು ಒಲಿದು ಬಿಡಬ್ಧ ಅಬ್ಧಾ ೫

ಜತೆ

ದತ್ತ ಪ್ರಧಾನ ವಿದ್ಯಾ ಸಪ್ರದಾತಾ ಪಾರ
ತಂತ್ರರಹಿತ ವಿಜಯ ವಿಠ್ಠಲ ಪ್ರಜ್ಞಾ ೬

ಹಯಗ್ರೀವ ಸ್ತೋತ್ರ

೧೧೮

ಧ್ರುವತಾಳ

ಜಯಜಯ ಜ್ಞಾನ್ಞವಿಜನಕ ಜಗದಾಧಾರ
ಭಯನಿವಾರಣ ಭಕ್ತ ಫಲದಾಯಕ
ದಯಾಪಯೋನಿಧಿ ಧರ್ಮಪಾಲ ದಾನವಕಾಲ
ತ್ರಯ ಹತ್ತೆಂಟು ಮೀರಿದ ತ್ರೈಲೋಕನಾಥ ಆ

ಶ್ರಯ ಸಂತರ ಕಾಮಧೇನು ಧೇನುಕಭಂಜ
ವ್ಯಯದೂರ ವ್ಯಾಧಿಹರಣ ವ್ಯಾಪ್ತ ವ್ಯಾಕುಲಹಾರಿ
ಪ್ರಿಯ ಪ್ರೇರಕ ಪ್ರಥಮ ಪ್ರಾಪ್ತಿ ಪ್ರಾಣ
ಜಯದೇವಿರಮಣ ಜಯಜಯ ಜಯಾಕಾರ
ಸುಯತಿಗಳ ಮನೋಹಾರ ಮಂದಹಾಸ ಚಂದ್ರೋ
ದಯಭಾಸ ಪೂರ್ಣಶಕ್ತಿ ಸರ್ವರೂಪ
ತ್ರಯಕಾಯ ತತ್ವ ತತ್ವ ತದಾಕಾರ ಮೂರುತಿ
ಕ್ರಿಯ ಗುಣಾನಂತ ರೂಪಾನಂತ ಏಕಾನೇಕ ಸಮಸ್ತ
ಸಯವಾಗಿಪ್ಪ ಸಮಅಸಮ ದೈವಾ
ಹಯಮೊಗಾ ವಾದಿರಾಜಗೊಲಿದ ವಿಜಯ ವಿಠ್ಠಲ
ಪಯೋನಿಧಿ ಶಯನ ಸತ್ವನಿಯಾಮಕ ೧

ಮಟ್ಟತಾಳ

ಶಶಿಮಂಡಲ ಮಂದಿರ ಮಧ್ಯದಲಿ ನಿತ್ಯ
ಮಿಸುಣಿಪ ಶುಭಕಾಯಾ ಯೋಗಾಸನನಾಗಿ
ಎಸುಳುಗಂಗಳ ಚೆಲುವ ಹುಂಕರಿಸುವನಾದ
ಬಿಸಜಾಕ್ಷ ಪುಸ್ತಕ ಜ್ಞಾನ ಮುದ್ರಾ
ಎಸೆವ ಚತುರ ಬಾಹು ಕೊರಳ ಕೌಸ್ತುಭ ಮಾಲೆ
ಶಶಿಮುಖಿಯರು ಒಲಿದು ಸೇವೆಮಾಡುತಲಿರೆ
ಅಸುರರ ಕಾಳಗವ ಕೆಣಕುವ ಕಾಲ್ಗೆದರಿ
ದಶದಿಶ ಕಂಪಿಸಲು ಖುರಪುಟದ ರಭಸ
ಪುಸಿಯಲ್ಲ ನಮಗೆ ಪರದೇವತಿ ಇದೇ
ಕುಶಮೊನೆ ಮನದಲ್ಲಿ ಧ್ಯಾನಮಾಡಲಿ ಬೇಕು
ಹಸನಾಗಿಕೇಳಿ ಮುದದಿ ವಾದಿರಾಜಾ
ಮಸಕರಿಗೆವೊಲಿದ ವಿಜಯ ವಿಠ್ಠಲರೇಯಾ
ಕುಶಲವ ಕೊಡುವನು ಈ ಪರಿ ಕೊಂಡಾಡೆ ೨

ತ್ರಿವಿಡಿತಾಳ

ನಾಶಿಕ ಪುಟದಿಂದ ಸರ್ವವೇದಾರ್ಥಂಗಳು
ಶ್ವಾಸೋಚ್ಛ್ವಾಸದಿಂದ ಪೊರಡುತಿದೆಕೋ
ಏಸುಬಗೆ ನೋಡು ಇದೇ ಸೋಜಿಗವೆಲ್ಲಾ
ಶ್ರೀಶನ್ನ ಸಮಸ್ತ ದೇಹದಿಂದ
ಭಾಸುರವಾಗಿದ್ದ ಸಾಕಲ್ಯ ಶ್ರುತಿತತಿ
ಲೇಶಬಿಡದೆ ಪೊರಟು ಬರುತಿಪ್ಪವು
ಈ ಸಾಮರ್ಥಿಕೆ ನೋಡು ಅನ್ಯದೇವಗೆ ಉಂಟೆ
ಈಶನಯ್ಯಗೆ ಉಪದೇಶ ಮಾಳ್ಪ
ದೇಶ ಕಾಲವೆ ಮೀರಿ ತನಗೆ ತಾನೆ ಇಪ್ಪಾ
ಏಸು ಕಲ್ಪಕೆ ಸರ್ವಸ್ವಾತಂತ್ರನೋ
ಮೋಸ ಪೋಗುವನಲ್ಲ ಆರಾರ ಮಾತಿಗೆ
ಕೇಶವ ಕ್ಲೇಶನಾಶನ ಕಾಣಿರೋ
ದ್ವೇಷ ತಾಳಿ ಆಗಮ ವೈದವನನ್ನು
ರೋಷದಿಂದಲಿ ಕೊಂದ ನಿಷ್ಕಪಟಿಯೋ
ಸೂಸುವ ಬಾಯಿಂದ ಸುರಿಯುವ ಜೊಲ್ಲುಪಿ
ಯೂಷಕ್ಕಧೀಶ ಕಾಣೋ, ಸವಿದುಣ್ಣಿರೋ
ವಾಸುದೇವನೆ ಈತನೆ ಆವಲ್ಲಿಪ್ಪನೆಂದು
ಬೇಸರವಗೊಂಡು ಬಳಲದಿರೀ
ಈ ಶರೀರದಲ್ಲಿ ಜೀವಾಂತರ್ಗತನಾಗಿ
ವಾಸವಾಗಿಹ ಅಣುಮಹ ಕಾಣೋ
ಹ್ರಾಸವೃದ್ಧಿಗಳಿಲ್ಲ ವಿಶೇಷ ಅವಿಶೇಷ
ಈಸು ಬಗೆಯುಳ್ಳವೆ ಸ್ವರೂಪ ಭೂತ
ದೋಷರೂಪಗಳಲ್ಲಿ ಜ್ಞಾನಾನಂದ ಕಾರ್ಯ
ದಾಸರಿಗಾಗಿ ಈ ಪರಿಮಾಡುವ
ಆಶಾಬದ್ಧನು ಅಲ್ಲ ಆಪ್ತಕಾಮನು ಕಮ
ಲಾಸನ್ನ ಜನಕ ಸರ್ವಭೂಷಿತಾ
ಲೇಸು ವಾದಿರಾಜ ವಂದ್ಯ ವಿಜಯ ವಿಠ್ಠಲ
ಸಾಸಿರನಾ ಒಡಿಯ ಹಯವದನಾ ೩

ಅಟ್ಟತಾಳ

ಸುರರಿಗೆ ಹಯವಾಗಿ ಗೆಲಿಸುವನು ಗಂಧ
ರ್ವರಿಗೆ ವಾಜಿಯಾಗಿ ಪೋಗುವ ಮುಂಚಾಗಿ
ದುರುಳದಾನವರಿಗೆ ಅರ್ವನಾಗಿ ತಾನು
ಇರದೆ ಪರಾಭವನಾಗುವ ಸಿಗದಲೆ
ನರರಿಗೆ ಅಶ್ವನೆಂದೆನಿಸಿ ಮಹಾಭಾರ
ಹೊರುವ ದಣಿವಿಕೆ ಇಲ್ಲದೆ ಅವರ
ಪರಮ ಪುರುಷನ್ನ ಅದ್ಭುತಚರಿತೆ ಕೇಳಿ
ಅರಿವುದು ಮನದಲ್ಲಿ ಸರ್ವಜೀವಿಗಳೊಳು
ಇರಳು ಹಗಲು ಈ ಪರಿಯಾಗಿ ಮಾಡುವ
ಮರಿಯಾದೆ ಇಪ್ಪದು ಮರೆಯಾದೆ ಸ್ಮರಿಸಿ ಪಾ
ಮರ ಬುದ್ಧಿ ಪೋಗಾಡಿ ತುರಿಯಾಶ್ರಮ ಮಣಿ ವಾ
ದಿರಾಜಯತಿ ಕರದಿಂದರ್ಚನೆಗೊಂಡ ವಿಜಯ ವಿಠ್ಠ
ಲರೇಯಾ ತುರಗಾಸ್ಯನು ಕಾಣೋ ತೃಪ್ತಿಯ ಕೊಡುವನು ೪

ಆದಿತಾಳ

ಶಿತವರ್ನದಲಿ ಸತ್ವಗುಣದಲ್ಲಿ
ಜಾತ ವೇದಸಂಗೆ ಆಹುತಿ ಕೊಡುವಲ್ಲಿ
ಭೂತಳದಲ್ಲಿ ಮತ್ತೆ ಜಠರಾಗ್ನಿಯಲ್ಲಿ
ಆತುಮದಲ್ಲಿ ವಿತ್ತಪತಿಯಲ್ಲಿ ಹೇಳನ
ಪಾತಕ ಪೋಗುವೆಲ್ಲ ವಂಜರ ನದಿಯಲ್ಲಿ
ಸ್ತೋತ್ತಮರಲ್ಲಿ ವೇದ ಓದುವ ಠಾವಿನಲ್ಲಿ
ಮಾತು ಪೂರ್ವರಂಗದಲ್ಲಿ ಭದ್ರಾಶ್ವ ಖಂಡದಲ್ಲಿ
ಜ್ಯೋತಿ ಪ್ರಕಾಶದಲ್ಲಿ ಮನಿಯದ್ವಾರದಲ್ಲಿ
ನೇತುರ ರೇಖೆಯಲ್ಲಿ ನಾಶಿಕ ಪುಟದಲ್ಲಿ
ದಾತನಲ್ಲಿ ಸರ್ವಜೀವರಲ್ಲಿ ನಿವಾಸಾ
ನೀತವಾಗಿ ಎಣಿಸು ನಿರ್ನೈಸುವುದಕ್ಕೆ
ಶ್ರೀ ತರುಣಿಗಾದರೂ ಗೋಚರಿಸದು ಕಾಣೋ
ಈತನ ನೆನೆದರೆ ಬೇಡಿದ ಪುರುಷಾರ್ಥ

ಮಾತುಮಾತಿಗೆ ತಂದುಕೊಡುವ ಸರ್ವದಾ
ಆತುಮದೊಳಗಿದ್ದು ಆನಂದ ಕೊಟ್ಟು ಪಾಲಿಪ
ಶೇತಾಂಗು ಮಂಡಲವದನ ವಿಜಯ ವಿಠ್ಠಲರೇಯಾ
ಪ್ರೀತಿಯಾಗಿ ಇಪ್ಪಾ ವಾದಿರಾಜಗೆ ಹಯವದನಾ ೫

ಜತೆ

ಗುರು ವಾದಿರಾಜಗೆ ಒಲಿದ ಹಯವದನಾ
ಕರುಣಾಕರ ಮೂರ್ತಿ ವಿಜಯ ವಿಠ್ಠಲರೇಯಾ ೬

ಋಷಭದೇವ ಸ್ತೋತ್ರ

೧೧೯

ಧ್ರುವತಾಳ

ಸೌಭಾಗ್ಯವಂತ ಜಯತು ಸೌಂದರ್ಯಸಾರ ಜಯತು
ಭೂಭಾರಹರಣ ಜಯತು ಭೂಮಾ ಜಯತು
ಶ್ರೀ ಭೂರಮಣ ಜಯತು ಶೃಂಗಾರ ಪುರುಷ ಜಯತು
ಶೋಭನಮೂರ್ತಿ ಜಯತು ಲೋಕೇಶ ಜನಕ ಜಯತು
ಲಾಭ ಪ್ರದಾತ ಜಯತು ಲಘುವ ಜಯತು
ವೈಭೋಗಾನಂಧ ಜಯತು ವೈಕುಂಠ ವಾಸ ಜಯತು
ಭೂ ಭೂಜ ರತ್ನ ಜಯತು ಭೂಷಾಜಯತು
ನಾಭಿ ಕಮಲಾ ಜಯತು ನಾಗಾರಿಗಮನಾ ಜಯತು
ಗೋ ಭೀತಿನಾಶ ಜಯತು ಗೋತ್ರಜ ಜಯತು
ಶ್ರೀ ಭಾಗ ಚರಣ ಜಯತು ತ್ರಿದಶವಂದಿತ ಜಯತು
ವೈಭವಕೀರ್ತಿ ಜಯತು ವೈದ್ಯ ಜಯತು
ನಾಭಿನಂದನ ಜಯತು ನಾನಾವತಾರ ಜಯತು
ಸ್ವಭಾವ ಲೀಲಾ ಜಯತು ಸ್ವಾಮೀ ಜಯತು
ಸಾಭೀಮಾನನೆ ಜಯತು ಸಮಸ್ತಫಲದಾ ಜಯತು
ಸಾಭೀಮ ದೈವ ಜಯತು ಸಮಸ್ತ ಸಾಧೂ ಜಯತು
ಸುಭಾಷ್ಯಪಾಲ ಜಯತು ಸುಖಸಾಂದ್ರ ಜಯತು

ಕುಭಾವ ವೈರಿ ಜಯತು ಕುಶಲಾ ಜಯತು
ಸೌಭರಿ ಮುನಿ ವಂದ್ಯ ವಿಜಯ ವಿಠ್ಠಲ ಋಷಭ
ಈ ಭೋಗದಲ್ಲಿ ನಿಂದು ವಿಜ್ಞಾನವನ್ನೆ ಕೊಡು ೧

ಮಟ್ಟತಾಳ

ಋಷಭ ಋಷಭ ಮಹಾ
ಋಷಿಜನ ಮನೋಹರ
ವೃಷವಾಹನ ಪ್ರೀಯ
ಹೃಷಿಕೇಶ ಪರಮೇಶ ಋಷಿ ಋಷಭ
ವಿಷಭಂಜನ ನಿತ್ಯ ವಿಷಯವಿದೂರ
ವಿಷಯದ ಮಡುವಿನೊಳಗೆ
ವಿಷದಂತನ ತುಳಿದ ವಿಜಯ ವಿಠ್ಠಲರೇಯಾ
ಋಷಿವೇಷವಧರಿಸಿ ವಸುಧೆಯೊಳಗೆ ಮೆರೆದೆ ೨

ತ್ರಿವಿಡಿತಾಳ

ಪಾರ ತಂತ್ರ ರಹಿತ ಪರಿಪೂರ್ಣ ವಿಜ್ಞಾನ
ಶಾರೀರ ಸತ್ವ ಜಾಗರ ಮೂರುತೀ
ಮೇರು ಗರ್ಭೋದಯ ಮೇಧಾದಿ ನಾಮಕ
ಚಾರು ಪರಮಹಂಸರೂಪ ಭರತಜನಕ
ಧಾರುಣಿಯೊಳಗವಧೂತವೇಷವ ಧರಿಸಿ
ತೋರಿದೆ ಅಜಗರ ವೃತ್ತಿಯನ್ನು
ಸಾರಿಸಾರಿಗೆ ಮನುಜ ಲೀಲೆಯಿಂದಲಿ ಮೆರೆದೆ
ಆರಾರು ನುಡಿದದ್ದ ಸೈರಿಸಿಕೊಂಡೆ
ಮೂರು ಭುವನದೊಳು ಆಶ್ಚರ್ಯ ತೋರಿ ಸಂ
ಸಾರ ಉತ್ತರಿಸುವ ಮಾರ್ಗವ ತಿಳುಪಿ
ಊರ ಪೋರಂಗಳಿಂದ ನೀಚತ್ವ ನುಡಿಸಿಕೊಂ
ಡೀರಿತಿಯಲ್ಲಿ ಒಪ್ಪಿದ ನಿರ್ದೋಷನೆ
ಆರುಬಲ್ಲರು ನಿನ್ನ ಆನಂದಾನಂದವ

ವಾರಿಜೋದ್ಭವಾದಿಗಳು ಪೊಗಳಲೊಶವೆ
ಭಾರಕರ್ತ ನಮ್ಮ ವಿಜಯ ವಿಠ್ಠಲರೇಯಾ
ವಾರವಾರಕೆ ಎನ್ನ ಮನದಲ್ಲಿ ಸುಳಿದಾಡು ೩

ಅಟ್ಟತಾಳ

ತತುವ ಮೋದಾಂಬುಧಿ ತಪನೀಯವರ್ಣನೆ
ತತುತಕ್ಕದ್ದು ವ್ಯಾಪಾರವ ಮಾಡುವಿ
ಹುತವಾಹನನೊಳು ಅಂತರ್ಧಾನನಾಗಿ
ಕ್ಷಿತಿಯೊಳು ಷೋಡಶಗಿರಿಯಲ್ಲಿ ಅಡಗಿದೆ
ಮತಿಹೀನ ಮನುಜರು ವಿಪರೀತ ತಿಳಿದು ದು
ರ್ಗತಿಯಲ್ಲಿ ಪೋಗಿಬೀಳುವರು ಶ್ರುತಿಸಿದ್ಧಾ
ಸತತ ನಿಜವೆಂದು ಒಲಿಸಿದ ಮನುಜ ಉ
ನ್ನತ ಪದವಿಯಲ್ಲಿ ಸೇರಿ ಸುಖಿಸುವರು
ಅತಿ ಚಿತ್ರವಿಚಿತ್ರ ವಿಜಯ ವಿಠ್ಠಲ ಋಷಭ
ಯತಿ ಶಿರೋಮಣಿ ಮಧ್ವಮುನಿ ವಂದ್ಯ ಆನಂದಾ ೪

ಆದಿತಾಳ

ಸುಜನರ ಸಂತಾಪಹರಣ ಅನಾದಿಕಾಯ
ದ್ವಿಜಕುಲ ಸಂರಕ್ಷಣಯೋಗಿ ಯೋಗೇಶ್ವರ
ಭಜಿಸುವೆ ನಿನ್ನ ಪಾದ ಕಾಲಕಾಲಕೆ ಎನ್ನ
ವೃಜನಗಳು ಪೋಗಾಡಿ ಶುದ್ಧಾತ್ಮನ ಮಾಡು
ಅಜದೇವಾದಿಗಳಿಗೆ ಸಮಸ್ತ ಸಾಧನ
ಸೃಜಸಿ ಕೊಡುವೆ ವೇಗ ತಾರತಮ್ಯದಿಂದಲಿ
ಪ್ರಜಾಪಾಲ ಪಾವನ ವಿಜಯ ವಿಠ್ಠಲರೇಯಾ
ನಿಜಭಕ್ತರ ಕೈಯ್ಯ ಪೂಜೆಗೊಂಬ ಪರಮಾತ್ಮಾ ೫

ಜತೆ

ಕಂಜನಾಭ ಅಮೃತವಪುವೆ ಋಷಭ ನಿ
ರಂಜನ ಮೂರುತಿ ವಿಜಯ ವಿಠ್ಠಲ ಸ್ವಾಮಿ ೬

ಧನ್ವಂತರೀ ಸ್ತೋತ್ರ

೧೨೦

ಧ್ರುವತಾಳ

ಆಯು ವೃದ್ಧಿಯಾಗೋದು ಶ್ರೇಯಸ್ಸು ಬರುವುದು
ಕಾಯಾ ನಿರ್ಮಲಿನಾ ಕಾರಣವಾಹುದೋ
ಮಾಯಾ ಹಿಂದಾಗುವುದು ನಾನಾರೋಗದ ಬೀಜ
ಬೇಯಿಸಿ ಕಳೆವುದು ವೇಗದಿಂದ
ನಾಯಿಮೊದಲಾದ ಕುತ್ಸಿತದೇಹನಿ
ಕಾಯವ ತೆತ್ತು ದುಷ್ಕರ್ಮದಿಂದ
ಕ್ರೀಯಮಾಣ ಸಂಚಿತ ಭರಿತವಾಗಿದ್ದ ದುಃಖ
ಹೇಯ ಸಾಗರದೊಳು ಬಿದ್ದು ಬಳಲೀ
ನೋಯಿಸಿಕೊಂಡು ನೆಲೆಗಾಣದೆ ಒಮ್ಮೆ ತನ್ನ
ಬಾಯಿಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿ
ರಾಯಾ ರಾಜೌಷಧಿ ನಿಯಾಮಕಕರ್ತ
ಕ್ರೀಯರಸನೆಂದು ತುತಿಸಲಾಗಿ
ತಾಯಿ ಒದಗಿಬಂದು ಬಾಲನ್ನ ಸಾಕಿದಂತೆ
ನೋಯಗೊಡದೆ ನಮ್ಮನ್ನು ಪಾಪಿಪಾ
ಧೇಯಾ ದೇವಾದಿಗಳಿಗೆ ಧರ್ಮಜ್ಞ ಗುಣಸಾಂದ್ರ
ಶ್ರೇಯಸ್ಸು ಕೊಡುವನು ಭಜಕರಿಗೆ
ಮಾಯಾಮಂತ್ರದಿಂದ ಜಗವೆಲ್ಲ ವ್ಯಾಪಿಸಿ ಸ
ನ್ಯಾಯವಂತನಾಗಿ ಚೇಷ್ಟೆ ಮಾಳ್ಪಾ
ವಾಯುವಂದಿತ ನಿತ್ಯ ವಿಜಯ ವಿಠ್ಠಲರೇಯಾ
ಪ್ರಿಯನು ಕಾಣೊ ನಮಗೆ ಅನಾದಿರೋಗ ಕಳೆವಾ ೧

ಮಟ್ಟತಾಳ

ಧನ್ವಂತ್ರಿ ಶ್ರೀ ಧನ್ವಂತ್ರಿ ಎಂದು
ಸನ್ನುತಿಸಿ ಸತತ ಭಿನ್ನ ಜ್ಞಾನದಿಂದ
ನಿನ್ನವ ನಿನ್ನವನೊ ಘನ್ನತಿಯಲಿ ನೆನೆದ
ಮನ್ನೂಜ ಭುವನದೊಳು ಧನ್ಯನು ಧನ್ಯನೆನ್ನಿ
ಚನ್ನ ಮೂರುತಿ ಸುಪ್ರಸನ್ನ ವಿಜಯ ವಿಠ್ಠಲ
ನ್ನ ಸತ್ಯವೆಂದು ಬಣ್ಣಿಸು ಬಹುವಿಧದಿ ೨

ತ್ರಿವಿಡಿತಾಳ

ಶಶಿಕುಲೋದ್ಭವ ಧೀರ್ಘತಮನಂದನ ದೇವಾ
ಶಶಿವರ್ನ ಪ್ರಕಾಶ ಪ್ರಭುವೆ ವಿಭುವೆ
ಶಶಿಮಂಡಲ ಸಂಸ್ಥಿತ ಕಲಶ ಕಲಶಪಾಣಿ
ಬಿಸಿಜಲೋಚನ ಅಶ್ವಿನೇಯ ವಂದ್ಯಾ
ಶಶಿಗರ್ಭ ಭೂರುಹ ಲತೆಪೊದೆತಾಪ ಓ
ಡಿಸವೌಷದಿ ತುಲಸಿ ಜನಕ
ಅಸುರ ನಿರ್ಜರತತಿ ನೆರೆದು ಗಿರಿಯತಂದು
ಮಿಸುಕದಲೆ ಮಹೋದಧಿ ಮರ್ದಿಸಲಾಗಿ
ನಸುನಗುತ ಪುಟ್ಟಿದೆ ಪೀಯೂಷಘಟಧರಿಸಿ
ಅಸಮ ದೈವನೆ ನಿನ್ನ ಮಹಿಮೆಗೆ ನಮೋ
ಬಿಸಿಜು ಸಂಭವ ರುದ್ರ ಮೊದಲಾದ ದೇವತಾ
ಋಷಿನಿಕರ ನಿನ್ನ ಕೊಂಡಾಡುವರೊ
ದಶದಿಶದೊಳು ಮೆರೆವ ವಿಜಯ ವಿಠ್ಠಲ ಭಿಷ್ಕಾ
ಅಸು ಇಂದ್ರಿಯಂಗಳ ರೋಗ ನಿವಾರಣ ೩

ಅಟ್ಟತಾಳ

ಶರಣು ಶರಣು ಧನ್ವಂತರಿ ತಮೋಗುಣ ನಾಶ
ಶರಣು ಆರ್ತಜನ ಪರಿಪಾಲಕ ದೇವ–
ತರುವೆ ಭವತಾಪ ತರುಣ ದಿತಿಸುತ

ಹರಣಮೋಹಕ ಲೀಲಾ ಪರಮ
ಪೂರ್ಣ ಬ್ರಹ್ಮ ಬ್ರಹ್ಮ ಉದ್ಧಾರಕ
ಉರು ಪರಾಕ್ರಮ ಉರಗಶಾಯಿ
ವರಕಿರೀಟ ಮಹಾಮಣಿ ಕುಂಡಲ ಕರ್ನ
ಮಿರುಗುವ ಹಸ್ತಕಂಕಣ ಹಾರಪದಕ ತಾಂ
ಬರ ಕಾಂಚೀಪೀತಾಂಬರ ಚರಣ ಭೂಷಾ
ಸಿರಿವತ್ಸಲಾಂಛನ ವಿಜಯ ವಿಠ್ಠಲರೇಯಾ
ತರುಣಗಾತುರ ಜ್ಞಾನಮುದ್ರಾಂಕಿತ ಹಸ್ತಾ ೪

ಆದಿತಾಳ

ಏಳುವಾಗಲಿ ಮತ್ತೆ ತಿರಿಗಿ ತಿರುಗುತಲಿ
ಬೀಳುವಾಗಲಿ ನಿಂತು ಕುಳ್ಳಿರುವಾಗಲಿ
ಹೇಳುವಾಗಲಿ ಮಾತು ಕೇಳುವಾಗಲಿ ಕರೆದು
ಪೇಳುವಾಗಲಿ ಪೋಗಿ ಸತ್ಕರ್ಮಮಾಡುವಾಗ
ಬಾಳುವಾಗಲಿ ಭೋಜನ ನಾನಾ ಷಡ್ರಸ ಸಂ
ಮ್ಮೇಳವಾಗಲಿ ಮೇಲು ಪುತ್ರಾದಿ ಒಡನೊಡನೆ
ಖೇಳವಾಗಿ ಮನುಜ ಮಾರ್ಯಾದೆ ನಿನ್ನಯ
ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದು ಒಮ್ಮೆ
ಕಾಲಲಕಾಲದಲ್ಲಿ ಸ್ಮರಿಸಿದರೆ ಅವಗೆ
ವ್ಯಾಳಿ ವ್ಯಾಳಿಗೆ ಬಾಹ ಭವಬೀಜ ಪರಿಹಾರ
ನೀಲಮೇಘಶ್ಯಾಮ ವಿಜಯ ವಿಠ್ಠಲರೇಯಾ
ವಾಲಗ ಕೊಡುವನು ಮುಕ್ತರಸಂಗದಲಿ ೫

ಜತೆ

ಧಂ ಧನ್ವಂತರಿ ಎಂದು ಪ್ರಣವ ಪೂರ್ವಕದಿಂದ
ವಂದಿಸಿ ನೆನೆಯಲು ವಿಜಯ ವಿಠ್ಠಲ ಒಲಿವಾ ೬

ನರಸಿಂಹ ಸ್ತೋತ್ರ

೧೨೧

ಧ್ರುವತಾಳ

ವೀರಸಿಂಹನೆ ನಾರಸಿಂಹನೆ ದಯ ಪಾರಾ
ವಾರನೆ ಭಯ ನಿವಾರಣ ನಿರ್ಗುಣ
ಸಾರಿದವರ ಸಂಸಾರ ವೃಕ್ಷದ ಮೂಲ
ಬೇರರಸಿ ಕೀಳುವ ಬಿರಿದು ಭಯಂಕರ
ಘೋರಾವತಾರ ಕರಾಳವದನ ಅ
ಘೋರ ದುರಿತ ಸಂಹಾರ ಮಾಯಾಕಾರ
ಕ್ರೂರ ದೈತ್ಯರ ಶೋಕ ಕಾರಣ ಉದುಭವ
ಈರೇಳು ಭುವನ ಸಾಗರದೊಡಿಯಾ
ಆ ರೌದ್ರನಾಮಾ ವಿಜಯ ವಿಠ್ಠಲ ನರಸಿಂಗ
ವೀರರಸಾತುಂಗ ಕಾರುಣ್ಯಪಾಂಗ ೧

ಮಟ್ಟತಾಳ

ಮಗುವಿನ ರಕ್ಕಸನು ಹಗಲಿರುಳು ಬಿಡದೆ
ಹಗೆಯಿಂದಲಿ ಹೊಯ್ದು ನಗಪನ್ನಗ ವನಧಿ
ಗಗನ ಮಿಗಿಲಾದ ಅಗಣಿತ ಬಾಧೆಯಲಿ
ನೆಗೆದು ಒಗದು ಸಾವು ಬಗೆದು ಕೊಲ್ಲುತಿರಲು
ಜಗದವಲ್ಲಭನೆ ಸಗುಣಾನಾದಿಗನೆ
ನಿಗಮಾವಂದಿತನೆ ಪೊಗಳಿದ ಭಕತರ
ತಗಲಿ ತೊಲಗನೆಂದೂ ಮಿಗೆ ಕೂಗುತಲಿರಲು
ಯುಗ ಯುಗ ದೊಳು ದಯಾಳುಗಳ ದೇವರ ದೇವ
ಯುಗಾದಿಕೃತೆ ನಾಮಾ ವಿಜಯ ವಿಠ್ಠಲ ಹೋ, ಹೋ
ಯುಗಳಕರವ ಮುಗಿದು ಮಗುವು ಮೊರೆಯಿಡಲು ೨

ಆದಿತಾಳ

ಅರ್ಥವಾದವಲ್ಲ ಮನಸು ಪೂರ್ವಕದಿಂದ
ಪ್ರಾರ್ಥನೆ ಮಾಡುವೆ ಅನಾದಿ ಬ್ರಮ್ಹಚಾರಿ
ಸ್ವಾರ್ಥಗೋಸುಗವಾಗಿ ಬೇಡಿಕೊಂಬುವನಲ್ಲ
ವ್ಯರ್ಥವಾಗಗೊಡದಿರು ವೇದದಲ್ಲಿ ಪೇಳಿದ
ಅರ್ಥಜ್ಞಾನಕ್ಕೆ ನಿತ್ಯ ಎಲ್ಲಿದ್ದರು ದೇವ
ಅರ್ಥಾತುರ ನೀನಲ್ಲ ಸಕಲ ಕಾಲದಲ್ಲಿ, ಸ
ಮರ್ಥ ನೀನಹುದೋ ಸರ್ವೋತ್ತಮ, ಪರಹಿ
ತಾರ್ಥವಾಗಲಿ ಇದೆ ಪುಶಿಯಾಗದಂತೆ ಕಾಯೊ
ಆರ್ತವಿದೂರ ನಮ್ಮ ವಿಜಯ ವಿಠ್ಠಲ ಕೃ
ತಾರ್ಥನ್ನ ಮಾಡುವುದು ಮುದದಿಂದ ಒಲಿದು ಬಂದು ೫

ಜತೆ

ಭಕುತರ ಭಾಗ್ಯವೇ ಅಪೇಕ್ಷಾ ಪೂರೈಸಿ
ಸುಖಕೊಡುವುದು ಬಿಡದೆ ವಿಜಯ ವಿಠ್ಠಲ ವೆಂಕಟ ೬

೧೨೩

ಧ್ರುವತಾಳ

ಜಯ ಜಯವೆಂದು ಜಗದೋತ್ಪಾದಕ ವಾಯು
ವಯನಾಯಕಾದ್ಯರು ತುತಿಸೆ ಮಾತಾಡದಿಪ್ಪೆ
ಭಯ ಬಿಟ್ಟವನಂದದಿ ಘನ್ನತನವನ್ನೆ ಬಿಟ್ಟು
ತ್ರಯಲೋಕ ನಗುವಂತೆ ಬಾಯಿ ತೆರೆದೆನೊ
ನಯನಂಗಳು ನೋಡಿದರೆ ವಿಶಾಲಾಯತ ಸೀತಳಾ
ದಯರಸ ಪೂರ್ಣವಾಗಿ ನಿತ್ಯ ಒಪ್ಪುತಲಿವೆ
ವ್ಯಯರಹಿತವಿದೇನೆಂಬೆನೊ ಅಖಿಳರ ಓಡಿಸುವ
ಲಯಕಾರಿಯಂತೆ ಕಿಡಿ ಉದುರಿಪ ಬಗೆ ಏನು
ನಯವಾಗಿ ನಿನ್ನ ಪಾದಗಾಯನ ಗತಿಗೆ ನಿ

ರ್ಣಯ ಮಾಡಲಾರದೆ ಸುರರು ಮರುಳಾಗುತಿಪ್ಪರು
ಅಯುತಾಯುತಾ ನಿಯತಾ ಸಿಡಿಲುಗರ್ಜನೆ ಮಿಗಿಲು
ಸಯವಾಗಿ ಭೋ ಎಂದು ಕೂಗಿ ಕೆಂಗೆಡಿಪದೇನು
ಹುಯಲಿಟ್ಟು ಜಗವೆಲ್ಲ ಒಂದಾಗಿ ಕರೆದರೆ
ಪಯೋಬಿಂದಿನಷ್ಟು ದೂರ ಪೀಠಾ ಬಿಡದು ಮಹಿಮಾ
ಪಯಣಗತಿ ಇಲ್ಲದಲೆ ಒಮ್ಮಿಂದೊಮ್ಮೆ ಬಂದುವು
ದಯವಾದೆ ಸ್ತಂಭದಿಂದ ವಿಚಿತ್ರವೇನು
ಬಯಸಿದವರಾಪತ್ತು ಎಲ್ಲಿದ್ದರು ನಿಲ್ಲದೆ
ಬಯಲಾಗಿ ಪೋಪವೆಂದು ಸುರರು ಕೊಂಡಾಡೆ ನಿತ್ಯ
ಪ್ರಾಯಕೆ ಸಿಕ್ಕಿದಂತೆ ಬಾಲನ ಮೊರೆಗೆ ವಿ
ಜಯವನೀವಗೋಸುಗ ನೀನೆ ಒದಗಿದ್ದೇನೊ
ಪಯೋನಿಧಿಸುತೆ ನಿನ್ನ ಲಕ್ಷಣೋಪೇತ ಚಲುವಿ
ಕಿಯ ನೋಡಿ ಹಿಗ್ಗಿ ಹಿಗ್ಗಿ ಹಿಗ್ಗಿ ಹಾರೈಸುತಿರೆ
ಪ್ರಿಯನೆ ಪರಮಾನಂದ ಸಂಪೂರ್ಣೈಶ್ವರ್ಯ ಚಿ
ನ್ಮಯ ಮೂರುತಿಯೇ ಇಂಥ ಅಂಗವಿಕಾರವೇನು
ಜಯದೇವಿನಾಥ ದೀನನಾಥ ದುರ್ಜಯ ವಿ
ಜಯ ವಿಠ್ಠಲ ನರಸಿಂಹ ನಿನ್ನ ಲೀಲೆಗೆ ನಮೋ ೧

ಮಟ್ಟತಾಳ

ಅರಿದರ ಮೊದಲಾದ ನಾನಾಕೈದುಗಳಿರಲು
ಅರಿಯ ಉದರ ನಖದಿ ಸೀಳಿದ ಪರಿ ಏನೋ
ಸರುವ ಕಾಲರೂಪ ನಿನಗೆ ಮೀರಿದವಿಲ್ಲಾ
ಅರಸದೆ ಸಮಯಾನುಸಾರ ಸಾಕಲ್ಯವೇನೋ
ಇರುಳು ಹಗಲುದೇವಿ ಸಾರುವ ತೊಡಿಮ್ಯಾಲೆ
ದುರುಳಾ ನಿರ್ಜೀವಿಯ ಇಟ್ಟ ಸಂಭ್ರಮವೇನೋ
ಶರಣಾಗತ ವತ್ಸಲ ವಿಜಯ ವಿಠ್ಠಲರೇಯ
ನರಕೇಸರಿ ನಿನ್ನ ಚರಿತೆಗೆ ಸೋಜಿಗವೋ ೨

ತ್ರಿವಿಡಿತಾಳ

ಪರದೇವತಿ ನಿನ್ನ ಗುಣರೂಪ ಕ್ರಿಯಗಳು
ಪರಮ ಶಾಂತವೆಂದು ಸಮಸ್ತರೊಲಿಸೆ
ಭರದಿಂದ ಘುಡಿಘುಡಿಸುತ ಬಂದ ಕಾಲಕ್ಕೆ
ಉರಿ ಮಾರಿ ದೈವವೆಂದೆಲ್ಲಾರೋಡಿದ್ದೇನೋ
ವರಮಣಿ ನಾನಾ ಹಾರಗಳಿರೆ ಕೊರಳಲ್ಲಿ
ಸುರಿವ ಶೋಣಿತ ಹಸಿಗರಳಾ ಹಾಕಿದುದೇನು
ಸಿರೋರಹ ಮಿಗಿಲಾದ ಅವಯವಂಗಳೂ ಮೃದು
ತರವಾಗಿದ್ದರೆ ಮಹಾಕಠಿಣ ತೋರಿದುದೇನೊ
ನರವಲ್ಲ ಮೃಗವಲ್ಲ ಜಗದ್ವಿಲಕ್ಷಣವಾದ
ಶರೀರವ ತೆತ್ತು ಅದ್ಭುತ ಬಿರಿದಾದ್ದೇನೊ
ಪರಮೇಷ್ಠಿ ಶಿವಪುರಂದರ ಸುರರಾದ್ಯರು
ನಿರುತ ನಿನಗೆ ನಿಜಕಿಂಕರರಾಗಿರೆ
ಸುರ ವೈರಿಗಳಿಗೆ ಒಂದೊಂದು ಪರಿಪರಿ
ವರ ಪಾಲಿಸಿದ್ದು ಮನ್ನಿಸಿದಾ ಘನವೇನೊ
ದುರಿತ ಕುಠಾರಿ ವಿಜಯ ವಿಠ್ಠಲ ಘೋರ
ತರ ರೂಪವತಾಳಿದೆ ಸೌಮ್ಯತನವೆ ತೊರದು ೩

ಅಟ್ಟತಾಳ

ಸಂತತ ನಿನ್ನ ಪಾದೈಕಾಶ್ರಯಾ ಏ
ಕಾಂತಿಗಳಿಗೆ ಮೆಚ್ಚಿ ಸುಮ್ಮನಾಗದ ದೈವ
ಎಂತು ಪೇಳಲಿ, ನೋಡಿ ತರಳ ಪ್ರಹ್ಲಾದ
ಮುಂತೆ ನಿಲ್ಲಲು ಸೋತ ಮುಗುಳುನಗಿ ಏನು
ಕಿಂತುಯಿಲ್ಲದ ಸ್ವಾಮಿ ಶುದ್ಧಾತ್ಮಾ ಶ್ರೀ ಲಕುಮಿ
ಕಾಂತ ಸರ್ವಾಂತರ್ಯಾಮಿ ಕರುಣಾಳು
ಚಿಂತಿತ ಫಲದಾಯಾ ದೈತ್ಯಾವಳಿಗೆ ಮಹಾ
ಭ್ರಾಂತೆಗೊಳಿಪ ನಮ್ಮಾ ವಿಜಯ ವಿಠ್ಠಲ ಸ್ವಾ
ತಂತ್ರ ಸರ್ವೋತ್ತಮಾ ನಿನ್ನಾ ಮರಿಯದೆ ಎಂತೊ ೪

ಆದಿತಾಳ

ಕುಟಿಲ ನಿಟಿಲಲೋಚನ ಕರುಳವಕ್ತ ಕರವಾಳಪಾಣಿ
ಕಠಿಣ ಕೋಪಾಟೋಪಪಾಗ್ನಿ ಭಟ ಭಟರಭಸ ಚಂಡಪ್ರತಾಪ
ಕಠೋರಶಬ್ದ ಹಾಹಾಕಾರ ತೀಕ್ಷ್ಣನಖ ವಜ್ರನಾಗೋಪವೀತ
ಝುಟಶಠರೋಮ ಕುಚಿತಕರ್ನದಂತೋಷ್ಠ ಮಿಳಿತವು
ತಟ ಶ್ವಾಸೋಶ್ವಾಸ ನಾಶಿಕ ಪುಟಹುಂಕಾರ ಜ್ವಾಲಾಮಾಲಾ
ಕಣಕಣ ಪ್ರವಾಹ ಭೃಕುಟಿ ತಟಿ
ತಟಿತ್ಕಾಂತಿ ವೀರಾವೇಶ ಕೋಲಾಹಲ ಸಿಂಹ
ಪಟುತರ ಲಂಘಣೆ ಭುಜತೊಡೆ ತಟಕೆ
ಲಟಲಟ ಜಿಹ್ವಾಗ್ರ ಉಗ್ರಾದಿಟ ಅಧಟ ಅಚ್ಚಟ ನಿಚ್ಚಟವು
ತೃಷ್ಟ ಅಟ್ಟಹಾಸಾ ಮಿಟಿ ಮಿಟಿ ಮಿಟಿ ಮಿಟಿ ಮಿಟಿ ನೋಟ
ನಟ ನಟ ನಟಣೆ ಅಬ್ಬರ ಉಲ್ಬಣ
ನಿಬ್ಬರ ಅರ್ಭಾಟ ಬೊಬ್ಬಾಟ
ಕಟ ಕಟ ಕಾರ್ಬೊಗೆ ಹಬ್ಬಿಗೆ ಮೊಬ್ಬಿಗೆ ಉಬ್ಬಿಗೆ
ಇದತಬ್ಬಿಬ್ಬಿಗೆ ಜಬ್ಬಿಗೆಲುಬ್ಧ
ಭಟರೆದೆ ಇಬ್ಬಗೆ ಇಬ್ಬಗೆ ಆರಾಟಾ
ತುಟಿ ಕದಪು ಭುಜಕಂಧರ ಉರಬಾಹು
ಜಠರ ನಾಭಿ ಜಘನಾ ಕಟಿ ಊರು ಜಾನುಜಂಘೆಗುಲ್ಫಾಂ
ಗುಟ ಪದಕುಣಿಯೇ ಅನುಕಂಪ
ಪುಟಿ ಪುಟಿದಾಡುವ ಅಡಿಗಳು ಬೊಮ್ಮಾಂಡ
ಕಟಹದಲ್ಲಣವು ಭಟ ಸುರಮುನಿ
ಕಟಕ ನೆರೆದುಘೇ ಉಘೇ ಭಳಿರೆ
ಪೂತರೆ ಭಲ್ಲ ಭಲ್ಲರೆ ಸಿಂಗಾ
ಘಟಿತಾಘಟಿತ ಸಮರ್ಥ ನಿಜೈಶ್ವರ್ಯ ಗುಣಪೂರ್ಣ
ಚಟುಲ ನಿರ್ಜರರ ಕಟಕ ಪೂಜಿತ ಸಕಲ ಕ್ರಿಯಾನಂದ
ಹಟ ನಾನಾಚಿತ್ರ ವಿಚಿತ್ರ ಅದ್ಭುತ ಐಶ್ವರ್ಯ ಅಣುಮಹತ್ತು
ತ್ಕಟ ಗುರುಲಘು ಪರಿಮಿತ ವ್ಯಕ್ತಾವ್ಯಕ್ತಾ

ದ್ಧಟಿ ಅಗೋಚರ ಘೋರ ಯುಗಪದಿ ಪೂರ್ಣನಿರ್ಭೇದದ
ದುರ್ಲಭ ಸುಲಭಾ ಅಲೋಭಾ ಅವಿರುದ್ಧಾಸುವಿರುದ್ಧಾ
ಕರ್ಮವಿಕರ್ಮ ವಿದೂರನೆ
ಸಟಿಯಲ್ಲ ಅನಾದಿ ಸಿದ್ಧ ಇಬ್ಬಗೆ ಅಸುರಾರಿ
ವಟಪತ್ರಶಾಯಿ ಸಿರಿ ವಿಜಯ ವಿಠ್ಠಲ ಕಂಠೀರವ
ಪರಿಸಿ ಪುಟಾಂಜುಳಿಯಾದವಗೆ
ತೃಟಿಯೊಳು ಪೊಳೆವ, ಪತಿತ ಪಾವನನೇ ೫

ಜತೆ

ಭೃತ್ಯವತ್ಸಲ ನಿನ್ನ ರೂಪಕ್ಕೆ ನಮೋನಮೋ
ದೈತ್ಯಮರ್ದನ ವಿಜಯ ವಿಠ್ಠಲ ಕಟಿತರುವಾಯಾ ೬

ವಾಮನ- ತ್ರಿವಿಕ್ರಮ ಸ್ತೋತ್ರ

೧೨೪

ಧ್ರುವತಾಳ

ವಾಮನ ವಟು ಇಂದ್ರಾನುಜ ಉಪೇಂದ್ರನೆ
ಭೂಮಿ ಸುರಾಗ್ರಣಿ ಬಾಲ ಬ್ರಹ್ಮಚಾರಿ
ಹೇಮ ಯಜ್ಞೋಪವೀತ ಹೇಮ ಮೇಖಳ ಪೋಳವ
ಹೇಮ ಕೌಪೀನಧರ ಕ್ಷೇತ್ರರಮಣಾ
ವ್ಯೋಮಗಂಗಾ ಜನಕ ಹಸ್ತ ಛತ್ರಕಮಂಡುಲ
ಸೋಮ ಸನ್ನಿಭ ಪೂರ್ಣ ಗುಣ ಗಣ ನಿಲಯಾ
ಕಾಮಿತಫಲವೀವ ಕರುಣಾನಿಧಿ
ಸಾಮಗಾಯನ ಪ್ರೀತ ಸುಜನರ ಮನೋರಥ
ಸಮಸ್ತಲೋಕನಾಥ ಗರುಡುವರೂಥ
ಭೀಮದೈತ್ಯಹರಣ ವಿಜಯ ವಿಠ್ಠಲ ನಿ
ಸ್ಸೀಮ ಮಹಿಮ ಸುರಸ್ತೋಮ ವಿನುತಪಾದ ೧

ಮಟ್ಟತಾಳ

ಬಲಿರಾಯನು ಬಹಳ ಬಲವಂತನಾಗಿ
ಖಳಾರಾತಿ ಮಿಕ್ಕ ಬಿಲಿಷ್ಟರಾದವರ
ಕಲಹದೊಳೋಡಿಸಿ ಛಲದಲ್ಲಿ ಅವರ
ಬಲು ಪದವಿಗಳನು ಕಳೆದು ತೆಗೆದುಕೊಂಡು
ಇಳಿಯೊಳಗಾರಿಗೆ ಅಳುಕದಲಿರುತಿರಲು
ಬಿಲ್ಲುಗಾರರಿಗೆ ವೆಗ್ಗಳನಾಗಿ ಚರಿಸಿ
ಜಲಜ ಮಗನ ಜನಕ ವಿಜಯ ವಿಠ್ಠಲ ತ
ನ್ನೊಳಗೆ ನಿರಂತರ ನಲಿದೊಲಿದು ನೆನೆವಾ ೨

ರೂಪಕತಾಳ

ಮನದೊಳು ಬಲಿರಾಯಾ ಮನಸಿಜನಯ್ಯನ
ನೆನೆಸುತ್ತ ಸಕಲ ಲೋಕವನೆ ಗೆದ್ದು
ಎನಗಾರು ಸರಿಯೆಂದು ಬಲುಗರ್ವದಲಿ ಇರೆ
ಅನಿಮಿಷಪತಿ ಪಲಾಯನವಾಗಿ ಪೋಗಲು
ದನುಜ ಬಲ್ಲಿದನೆಂದು ದಕ್ಷನ ತನುಜೆ
ಮನೋವ್ಯಥೆಯಿಂ ಕ್ಲೇಶಬಡುತತ್ತ
ಕಣಿಸಿ ದೈತ್ಯನ ಕೂಡ ಗೆಲುವ ಮನನ ಪಡಿವೆಂ
ದೆನುತ್ತ ರೋಷದಲಿ ಪತಿ ಅಜ್ಞಾನದಲ್ಲಿ
ವನಜನಾಭನೆ ಧ್ಯಾನವನೆ ಮಾಡಿದಳು ತನ್ನ
ಮನದ ಬಯಕೆ ಸಲ್ಲಿಸು ಎನುತಲಿ
ಫಣಿಶಾಯಿ ವಿಜಯವಿಠಲ ವಾಮನ ದೇವ
ಮುನಿ ಕಶ್ಯಪ ಅದಿತಿದೇವಿಗೆ ಒಲಿದಾ ೩

ಝುಂಪಿತಾಳ

ಶಕ್ರನ ಸೌಭಾಗ್ಯ ಇಂದ್ರಸೇನನು ಬಿಡದೆ
ಆಕ್ರಮಿಸಿ ತ್ರಿಲೋಕ ಮಧ್ಯದಲಿ ಬಲು ಪ
ರಾಕ್ರಮನಾಗಿ ತಾನಲ್ಲದಲೆ ಮತ್ತೋರ್ವ

ಚಕ್ರವರ್ತಿಯೇ ಇಲ್ಲವೆಂದು ಹಿಗ್ಗೀ
ಶುಕ್ರನ್ನ ಶಿಷ್ಯನಿರೆ ಯಾಗದಲ್ಲಿಗೆ ಉ
ರುಕ್ರಮನೇ ಉಪೇಂದ್ರನಾಗಿ ಬಂದು
ತಾ ಕ್ರೀಡೆಯಾಡಿದಂತೆ ಬಾಲಕನಾಗಿ
ಆಕ್ರಮಮಾಡಿ ಒಲಿಯೆ ಮೆಚ್ಚಿಸೀ
ಸಕ್ರಿಯ ಸಕಲೇಶ ವಿಜಯ ವಿಠ್ಠಲನು ತ್ರಿ
ವಿಕ್ರಮಾವತಾರ ಧರಿಸಿದನು ಸುರರೊಲಿಯೊ ೪

ತ್ರಿವಿಡಿತಾಳ

ದಾನವನಲ್ಲಿಗೆ ಮುದ್ದು ಮೋಹನ ಪೋಗಿ
ದಾನವ ಬೇಡಿದ ಮೂರುಪಾದಾ
ಕ್ಷೋಣಿಯಕೊಡು ಎಂದು ಕಪಟವೇಷದಲ್ಲಿ
ಏನೆಂಬೆ ವಟುವಿನ ಮಹಾಮಹಿಮೆ
ಮಾನವನಂತೆ ಲೀಲೆ ತೋರಿ ಕರಒಡ್ಡಿ
ದಾನೊ ಪಿತಾಮಹನಯ್ಯಾ ನಮ್ಮಯ್ಯ
ಕಾಣುವರಾರು ಈತನ ಮಹತ್ತಣು ರೂಪಾ
ಎಣಿಸಲಳವೇ ಲಕುಮಿಗಾದರೂ
ಬಾಣಸುರನ ಜನಕ ಮಾತುಕೇಳುತ ವಿಪ್ರ
ಏನು ಬೇಡಿದನೆಂದು ನಸುನಗುತ್ತ
ತಾ ನೀರಿನಲಿ ತನ್ನ ಸತಿಯಸಹಿತನಾಗಿ
ಕ್ಷೋಣಿಯ ತ್ರಿಪಾದಾ ಧಾರಿ ಎರಿಯೇ
ಧೇನು ಭಕ್ತರಿಗೆಲ್ಲ ವಿಜಯ ವಿಠ್ಠಲ ತಾನೆ
ಆನಂದದಲಿ ಕೈಕೊಂಡಾಭಕ್ತಿಗೆ ಮೆಚ್ಚಿ ೫

ಅಟ್ಟತಾಳ

ಒಂದು ಚರಣ ಬೊಮ್ಮಾಂಡ ಖರ್ಪರದಲ್ಲಿ
ಒಂದು ಚರಣ ಪಾತಾಳಲೋಕದಲ್ಲಿ
ಸಂದೇಹವಿಲ್ಲದೆ ವ್ಯಾಪಿಸಿದವು ಮ

ತ್ತೊಂದು ಪಾದಕೆ ಭೂಮಿ ಸಾಲದಾಯಿತೆಂದು
ಇಂದ್ರಸೇನಗೆ ವಾಮನದೇವ ನುಡಿಯಿಂದ
ಬಂಧಿಸಿ ಸಮಯಬದ್ಧಮಾಡಲು ಬಲಿ
ಇಂದಿರಾಪತಿ ಈತನೆಂದು ತಿಳಿದು ವೇಗ
ವಂದಿಸಿ ತನ್ನಯ ಶಿರವನು ನೀಡಲು
ಅಂದು ಗೋವಿಂದನು ಅರಸನು ತಲೆಮೆಟ್ಟಿ
ಒಂದು ಚರಣದಲ್ಲಿ ಪಾತಾಳಕಟ್ಟಿದ
ಮುಂದೆ ನಖದಿಂದ ಬೊಮ್ಮಾಂಡ ಭೇದಿಸಿ
ಮಂದಾಕಿನಿ ಪೆತ್ತಾ ನಿರುತ ನಿರ್ಭೀತಾ
ಇಂದ್ರವಂದಿತ ಸಿರಿ ವಿಜಯ ವಿಠ್ಠಲ ಕೃಪಾ
ಸಿಂಧು ಸಿಂಧುರ ಪಾಲಾ ಸಿಂಧುತನುಜೆ ಪತಿ ೬

ಆದಿತಾಳ

ಕಾಯವನಿತ್ತವಗೆ ನಾರಾಯಣನು ಒಲಿದು ಕಲ್ಪ
ಆಯುವನಿತ್ತು ಸರ್ವದ ಐಶ್ವರ್ಯದಲ್ಲಿ ಇಟ್ಟು
ಕಾಯಿದಾ ತಾನವನ ಮನಿಯ
ಸ್ಥಾಯವಾಗಿ ಬಾಗಿಲೊಳು ಈಯಬಲ್ಲಿ ದೇವ ತನ್ನ
ಮಾಯಾದಿಂದ ಜನರ ಮೋಹಿಸಿ ಶ್ರೀಯರಸ ವಿ
ಜಯ ವಿಠ್ಠಲ ನಾಯಕ ಶಿರೋಮಣಿ
ಶ್ರೇಯಸ್ಸನೀವ ತನ್ನ ಗಾಯನ ಮಾಡುವರಿಗೆ ೭

ಜತೆ

ಇಂದ್ರಂಗೆ ಸುರ ಪದವಿ ಕೊಡಿಸಿ ಬಲಿಗೆ ಒಲಿದಾ
ಕಂದರ್ಪಪಿತ ನಮ್ಮ ವಿಜಯ ವಿಠ್ಠಲವಟು ೮

ಪರಶುರಾಮ ಸ್ತೋತ್ರ

೧೨೫

ಧ್ರುವತಾಳ

ಸತ್ಯವತಿ ಪುತ್ರ ದುರ್ಗಾಕಳತ್ರ ನಿಜ
ಸತ್ಯ ಸಂಕಲ್ಪ ಸಿದ್ಧಸೂರಿ ಪ್ರಸಿದ್ಧ
ನಿತ್ಯ ನಿಸ್ಸಂಗಾ ನಿರ್ವಿಕಾರಗುಣ ತರಂಗ
ಭೃತ್ಯವತ್ಸಲ ಲೀಲಾ ಭೃಗುಕುಲ ಪಾಲಾ
ದೈತ್ಯಜಾತಿಮರ್ದನ ಸದ್ಧರ್ಮವರ್ಧನ
ಅತ್ಯಂತ ಪರಾಕ್ರಮ ರಾಮರಾಮಾ
ಸತ್ಯಲೋಕೇಶನಯ್ಯಾ ಸತತ ವಿಜ್ಞಾನ ಕಾಯಾ
ಮೃತ್ಯುಂಜಯ ನಿಂದು ಜಯವೆನೆ ಸುರವೃಂದಾ
ತೌತ್ಯನೆ ರಾಜರಿಪು ಬಲುಧನ್ವಾ
ಹತ್ಯಾದಿ ದೋಷದೂರ ಭೂಭಾರವನಕುಠಾರಾ
ನೃತ್ಯಗೀತಕೆ ಒಲಿದಾ ದೇವರದೇವಾ
ಇತ್ಯರ್ಥಕಂಡವರಾರು ಎಂದಿಗೆ ನಿನ್ನಾ
ಗತ್ಯಾದಿ ಮಿಗಿಲಾದ ಪ್ರವರ್ತಕಾ
ದ್ವಿತ್ಯಕ್ತ ಮಾಡಿಸು ಪರಿಣಾಮಕೆ ಚಿತ್ತ
ಸತ್ಯವಾಗಲಿ ನಿನ್ನಂಘ್ರಿಯಲಿ
ಸತ್ಯರ್ಥ ಮುಕುತಿಗೆ ಸಾಧನಾ ಧನವ್ಯೆಪ
ರಿತ್ಯ ಇಲ್ಲವು ಕಾಣೊ ಕಮಲಾಕಾಂತಾ
ಅತ್ಯಧಿಕ ದೈವಾ ವಿಜಯ ವಿಠ್ಠಲರೇಯಾ
ಕೃತಜ್ಞತೆಯನ್ನು ಮಾಡು ನಿನ್ನ ದಾಸರೊಳು ಪೊಂದಿಸಿ ೧

ಮಟ್ಟತಾಳ

ರಾಮಾ ರಾಮಾ ಪೂರ್ಣಕಾಮಾ ಕಾಮಿತ ಫಲದಾ
ಜಾಮದಗ್ನಿ ಅಗ್ನಿನೇಮಕ ಕುಲಿಶುಧರಾ
ರಾಮ ವಲ್ಕವವಾಸ ರಾಮಣೀಯ ಸರ್ವಸಾರ್ವ

ಭೌಮಾ ಪೂರ್ಣ ಪೂರ್ಣಾ
ಭೂಮಿನಾಥಾ ತಾಮಸಗುಣಹಾರಿ
ಧೂಮಕೇತುವರ್ನಸ್ವಾಮಿ ಅಂತರ್ಯಾಮಿ
ಸಮಸ್ತ ಘನಶೌರಿ ರಾಮ ರಾಜಿವಾಕ್ಷಾ
ಸೋಮಕುಲವ್ಯೆರಿ ವಿಜಯ ವಿಠ್ಠಲರಾಮಾ
ಕಾಮಧೇನು ಸತತ ಮನದಲಿ ನೆನೆದವಗೆ ೨

ತ್ರಿವಿಡಿತಾಳ

ಮುನಿ ಕುಲೋದ್ಭವ ರಾಮ ರೇಣುಕಾನಂದನಾ
ಧನುರ್ಧಾರಿ ಖಡ್ಗ ಚರ್ಮಧಾರಿಯೇ
ರಣಭಯಂಕರ ಚಂಡಪ್ರಚಂಡ ಉದ್ದಂಡಾ
ಸೆಣೆಸಿದವರ ಗಂಡಾ ರಿಪು ಭೇರುಂಡಾ
ಗಣನೆಗಾಣಿಸೊ ನಿನ್ನ ಪ್ರತಾಪತನಕೆ ತ
ಲ್ಲಣಿಸುತದೆ ರಾಯಾಕುಲ ಸಾಗರಾ
ಜನಕನ ಮಾತುನು ಲಾಲಿಸಿ ಭ್ರಾತಾರಾ
ಜನನಿಯ ತರಿದು ಮಗುಳೆ ಉಳುಹಿದೆ
ಜನನ ಮರಣ ಶೂನ್ಯ ರಾಮ ಭಾರ್ಗವರಾಮ
ಬಿನಗು ದೈವಂಗಳು ನಿನಗೆ ಸಮನೆ
ಅನಿಮಿಷತತಿ ಅಭ್ರದಲಿ ನಿಂದು ಬಾಗಿ
ನೆನೆ ನೆನೆದುಘೇಯನೆ ನಿನ್ನ ಚರಿತೆ
ಪಣವ ಮಾಡುವನಾರು ನಿನ್ನ ಸಂಗಡ ಹೋಹೋ
ತೃಣ ಸಮವಾಗಿದೆ ತ್ರಿಭುವನಾ
ಸನಕಾದಿ ವಂದಿತಾ ವಿಜಯ ವಿಠ್ಠಲರೇಯಾ
ಮಣಿದು ನಮೋ ಎಂಬೆ ಉದ್ಧರಿಸು ಉರ್ಜಿತಾ ೩

ಅಟ್ಟತಾಳ

ಕೃತವೀರ್ಯಸೂನು ಅರ್ಜುನನ ಸಾವಿರಹಸ್ತಾ
ಕ್ಷಿತಿಗುರುಳಿಸಿ ಅವನನ್ನ ಕೊಂದು ಅವನ

ಸುತರನ ಸದದು ಕಾಳಗದೊಳು ಏಕ ವಿಂ
ಶತಿಸಾರಿಗೆಲಿ ನಿಕ್ಷತ್ರಿಯರ ಮಾಡಿ
ಕೃತುಮಾಡಿ ಅವನಿಸುರರಿಗೆ ಸಕಲದಾನಾ
ಚತುರ್ದಿಗ್ಭಾಗವ ಕೊಟ್ಟು ಸಿಂಹ ಪ
ರ್ವತದಲ್ಲಿ ಇದ್ದ ಬ್ರಾಹ್ಮರನ ಮನ್ನಿಸಿ ವಾರಿ
ಪತಿಯಿಂದ ಭೂಮಿಯ ಪಡೆದು ರಾಮಭೋಜ
ಕ್ಷಿತಿಪನ್ನ ಪೊಂದಿಸಿ ಯಾಗವ ಮಾಡಿಸಿ
ಕೃತಕಾರ್ಯ ನೀನಾದೆ ಪಡುವಲ ವನಧಿಲಿ
ನುತಿಸಿದವರ ಪ್ರಾಣಾ ವಿಜಯ ವಿಠ್ಠಲರೇಯಾ
ಪ್ರತಿಕೂಲ ಕಳೆವ ವಾಗಿಂದ್ರಿಯ ನಿವಾಸ ೪

ಆದಿತಾಳ

ಪರುಶುರಾಮನೆಂದು ಸ್ಮರಿಸಿದ ಜನರಿಗೆ
ಸ್ಪರಿಸಮಾಡದು ಕಾಣೊ ನಿರಸವಾಗೊದು ನಿತ್ಯ
ಹರುಷದಿಂದಲಿ ಸಂಚರಿಸುವ ಪುಣ್ಯ ಭೂಮಿ
ಪುರುಷಾರ್ಥವಾಗುವುದು ವರುಷ ವರುಷ ಜ್ಞಾನ
ವರುಷಸುರಿವುದು ಪರುಷವಾಗಿಪ್ಪನೂ
ಅರಸಿನ ಸಹಿತಬಂದು ಅರಸಿದರೆ ದೊರಕನು
ಸುರ ಶಿರೋಮಣಿ ಪತಿಕರಿಸುವ ತಾನೆ ಉ
ದ್ಧರಿಸುವ ಕರುಣದಿಂದ ಪುರುಷ
ಪ್ರಧಾನ ಜನಕ ವಿಜಯ ವಿಠ್ಠಲರೇಯಾ
ಸರಿಸಿಜ ಭವಾದ್ಯರಿಗೆ ಅರಸಾಗಿ ಒಪ್ಪುತಿಹಾ ೫

ಜತೆ

ಭಾವಿ ಸಪ್ತ ಋಷಿಯ ಭಕ್ತವತ್ಸಲ ಕರು
ಣಾವಲೋಕವ ರಾಮಾ ವಿಜಯ ವಿಠ್ಠಲ ಮುಖ್ಯ ೬

ಶ್ರೀ ರಾಮ ಸ್ತೋತ್ರ

೧೨೬

ಧ್ರುವತಾಳ

ರಾಜ ರಾಜ ರಮಣಿ ರಾಜಶೇಖರ ವಿನುತಾ
ರಾಜ ತೇಜೋನಿಧಿ ರಾಜಾಧೀಶಾ
ರಾಜ ಹಂಸ ನಯನ ರಾಜಶೇಖರ ವಿ
ರಾಜಿತ ಕೀರ್ತಿ ಗಜ ರಾಜವರದಾ
ರಾಜ ವದನಾ ರಿಪು ರಾಜಮಸ್ತಕ ಶೂಲಾ
ರಾಜ ರಾಜೋತ್ತಮ ರಾಜವಿನುತಾ
ರಜೀವದೊಳಗಿದ್ದ ರಾಜೀವನ ಪಾಲಿಸಿದ
ರಾಜ ಮಾರ್ತಾಂಡ ದ್ವಿಜರಾಜ ಗಮನಾ
ರಾಜ ರಾಜರು ನಿನ್ನ ರಾಜಿಸುವ ಚರಣ
ರಾಜೀವದಲ್ಲಿ ವಾಲಗ ಮಾಳ್ಪರೂ
ರಾಜ ರಾಜಾಗ್ರಗಣ್ಯ ರಾಜಾಭಿಷೇಕಕ್ಕೆ
ರಾಜ ನೀನಲ್ಲದೆ ರಾಜರುಂಟೇ
ರಾಜಗಂಭೀರ ಅಪರಾಜಿತನಾಮ ನಮ್ಮ
ವಿಜಯ ವಿಠ್ಠಲ ರಂಗರಾಜ
ರಾಜ ಸಮುದ್ರರಾಜ ಶಯನನೇ ೧

ಮಟ್ಟತಾಳ

ದಶಶಿರನೆಂಬುವನು ಅಸಮ ವೀರನಾಗಿ
ಬಿಸಿನಿಧಿ ಮಧ್ಯದಲ್ಲಿ ತ್ರಿದಶರ ಶೆರೆ ಇಡಲು
ದಶದಿಕ್ಕಿನ ಒಳಗೆ ಪೆಸರಾಗಿ ಪಸರಿಸುತ
ಪಶುಪನ ವರದಿಂದ ಕುಸಿಯದಲಿರುತಿರೇ
ಅಸುರನ ಉಪಹತಿಗೆ ವಸುಧಿಭಾರವಾಗೆ
ಬಿಸಿಜಭವ ಸುಮನಸರೆಲ್ಲರು ಪೋಗಿ
ಬಿಸಿಜದಳನಯನ ವಸುಧಿ ಸಂರಕ್ಷಕನೇ
ಅಸುರರ ಶಿಕ್ಷಕನೆ ಅಸಮಯ ಬಂದಿದೆ

ದೆಶೆಗೆಟ್ಟವರ ಪಾಲಿಸಬೇಕೆಂದೆನುತ
ಶಿಶುಗಳೊದರಿದಂತೆ ಎಸದು ಮೊರೆಯಿಡಲು
ವೃಷಭನಾಮಕದೇವ ವಿಜಯ ವಿಠ್ಠಲರೇಯನ
ಬಿಸಿಜ ಚರಣದಲ್ಲಿ ಹಸನಾಗಿ ಬಿನ್ನೈಸೇ ೨

ರೂಪಕತಾಳ

ಮೂರು ಗುಣರಹಿತ ಮೂರುತಿ ಈತನು
ಕಾರುಣ್ಯವನ್ನು ಇನ್ನಾರು ಬಲ್ಲವರಿಲ್ಲ
ವಾರಿಜಾದ್ಯರ ಸಾರೆಗರದು ಶ
ರೀರವ ತಡವರಿಸಿ ತಾರತಮ್ಯದಿಂದ
ಭಾರ ಎನ್ನದು ಎಂದು ಭರವಸವ ಇತ್ತು
ಕ್ರೂರನಿಂದಲಿ ಬಂದ ಭಾರ ಇಳಿಸುವೆನೆಂದು
ಧಾರುಣಿಯೊಳಗಿತ್ತ ಈರೈದುರಥದವನು
ನಾರಾಯಣನು ಕುಮಾರನಾಗಲೆಂದೂ
ಆರಾಧನೆಯ ಮಾಡೆ ಶ್ರೀರಾಮನೆಂದೆಂಬವ
ತಾರವನ್ನು ಧರಿಸಿದ ರಮಾರಮಣನು
ಚಾರುಗುಣ ನಿಲಯ ವಿಜಯ ವಿಠ್ಠಲರೇಯಾ
ಸಾರಿದವರ ಮನೋಹಾರವ ತೋರುತ್ತಾ ೩

ಝುಂಪಿತಾಳ

ಮುನಿಪ ಕೌಶಿಕನ ಯಾಗವಕಾಯಿದು ತಾಟಕಿ
ದನುಜೆಯ ಮುರಿದು ನಿಜಾನುಜನ ಕೂಡ
ಜನಕನಾ ಪುರಕೆ ಗಮನವಾಗಿ ಪೋಗುತ್ತ
ಮುನಿಯಾಂಗನೆಯ ಶಾಪವನ್ನೆ ತೊಡದು
ಅನಲಾಕ್ಷನ ಧನುಸು ಮುರಿದು ಇಕ್ಕಡಿಮಾಡಿ
ಜನಕರಾಯನ ನಂದಿನಿಯ ನೆರದೂ
ಅನುವರದೊಳಗೆ ಭೃಗುತನುಜನ್ನ ಪೊಕ್ಕಳಲಿ
ದನುಜ ಸೇರಿರಲು ಬಾಣದಲಿ ಸದದೂ
ತನಗೆ ತಾನೇ ಲೀಲಿ ತೋರಿದ ಮಹದೈವವಾ
ತನೆ ಕಾಣೋ ಗೋಹಿತ ವಿಜಯ ವಿಠ್ಠಲರಾಮ ೪

ತ್ರಿವಿಡಿತಾಳ

ಪಿತನ ಮಾತನು ಮನ್ನಿಸಿ ಸತಿಸಹಿತ ಭಾಗೀ
ರಥಿಯ ದಾಟುತಲಿ ಭಕುತಗೊಲಿದೂ
ಅತಿಶಯವಾದ ಪರ್ವತ ಚಿತ್ರಕೂಟದಲಿ
ಯತಿಗಳಿಂದಲಿ ಪೂಜಿತನಾಗುತ
ಮತಿಹೀನನಾಗಿ ಬಾಳುತಲಿದ್ದ ಕಾಕನ್ನ
ಗತಲೋಚನನ ಮಾಡಿ ಕ್ಷಿತಿಗಟ್ಟಿದೇ
ಹಿತವಾಗಿ ಬಂದ ಭರತಗೆ ಹಾವುಗೆ ಕೊಟ್ಟು
ವ್ರತವಧರಿಸಿದ ಉನ್ನತ ಮಹಿಮಾ
ಪಥಚಾರನಾಗಿ ಶೋಭಿಸುತ ದಂಡಕಾರಣ್ಯ
ಯತಿಪುಂಗವ ಕುಂಬಸುತನ ಕಂಡೂ
ಪ್ರತಿರಥ ನಾಮಾ ವಿಜಯ ವಿಠ್ಠಲ ರಘು
ಪತಿ ನೀನೆ ಉತ್ಪತ್ತಿ ಸ್ಥಿತಿ ಲಯಕರ್ತನೇ ೫

ಅಟ್ಟತಾಳ

ಮೋಸದ ಅಸುರಿಯ ಮೂಗುಕೊಯ್ದು ಖರ
ದೂಷಣಾದ್ಯರನ್ನು ಕೊಂದು ಗೌತುಮೆಯಲ್ಲಿ
ವಾಸವಾಗಿದ್ದ ಮಾರೀಚ ಮಾಯಾ ಮೃಗ
ವೇಷವಾಗಿ ಬರೆ ಕೊಂದು ಮಾರ್ಗದಲ್ಲಿ
ಘಾಸಿಯಾಗಿದ್ದ ವಿಹಂಗನ ಮನ್ನಿಸಿ
ದ್ವೇಷಿ ಕಬಂಧನ ಕಡಿದು ಶಬರಿಯ
ಮೀಸಲ ಭಕುತಿಗೆ ಹಣ್ಣುಸವಿದು ಸಂ
ತೋಷದಿಂದಲಿ ತುಂಗಾ ತೀರದಲ್ಲಿ ಪವ
ನಾ ಸೂನು ಎರೆಗಲು ಎತ್ತಿ ಮಾತಾಡಿ ದಿ
ನೇಶ ತನುಜಗೆ ಅಭಯವನ್ನು ಇತ್ತು
ಬೀಸಿಡಗದೆ ಕಾಲಲಿ ದುಂಧುಮಾರನ್ನ
ನೀ ಸವರಿದೆ ಏಳುತಾಳುವ ಒಮ್ಮೆಲೆ
ಸಾಸಿರನಾಮವೇ ವಿಜಯ ವಿಠ್ಠಲ ನರ
ವೇಷವ ಧರಿಸಿದ ವೈಕುಂಠವಾಸ ೬

ಆದಿತಾಳ

ಭೀತಿ ಶೂನ್ಯನಾದ ಪುರಹೂತ ಮಗನ ಕೊಂದು ರವಿ
ಜಾತಗೆ ಪಟ್ಟವಗಟ್ಟಿ ಪ್ರೀತಿದೂತ ವಾಯುಜನ್ನ
ಸೀತೆ ಬಳಿಗೆ ಕಳುಹೇ ಪೋಗಿ
ಮಾತು ತಂದು ಪೇಳಿದಾತಗೆ ವರವನಿತ್ತು
ಕೋತಿ ಕರಡಿ ಸಹಿತವಾಗಿ ಸೇತುವೆ ಬಿಗಿಸಿ ಬಂದ
ನೀತ ವಿಭೀಷಣನ ಕೂಡ ಕಾತುರದಿಂದಲಿ ದಾಟಿ
ಧೂತ ರಾವಣಾದಿಗಳ ಯಾತನೆಗೆ ಬೀಳ್ಕೊಡಿಸಿ
ಪ್ರೀತಿಯಾಸ್ಪದನಾದತಿದಾತ ವಿಭೀಷಣಗೆ ಪ್ರ
ದ್ಯೋತ ಶಶಿ ಉಳ್ಳನಕ ಭೂತಳದೊಳಗೆ ಲಂಕೆ
ಯ ತಪ್ಪದಂತೆ ಆಳೆಂದಾತಗೆ ಪಟ್ಟವಗಟ್ಟಿ
ಸೀತೆ ಸಹಿತ ಬಂದು ಸಾಕೇತಪುರದಲ್ಲಿ ನಿಂದು
ಧಾತಾದಿಗಳ ಮನಕೆ ಪ್ರೀತಿ ಬಡಿಸಿ ಸೆರೆಯ ಬಿಡಿಸಿ
ಸೀತೆಯರಸ ವಿಜಯ ವಿಠ್ಠಲಭೂತ
ನಾಥನಿಂದ ಬಂದ ಮಾತು ಮನ್ನಿಸಿದ ಮಹಾತ್ಮಾ ೭

ಜತೆ

ಸಾರ್ವಭೌಮನೆ ರಾಮ ದುರುಳ ದೈತ್ಯವಿರಾಮಾ
ಸರ್ವಯೋಗಿ ವಿನಿಶ್ರುತಾ ವಿಜಯ ವಿಠ್ಠಲ ೮

೧೨೭

ಧ್ರುವತಾಳ

ಸುತ್ತ ವಿರಜಾನದಿ ರತ್ನಮಯದ ಏಳು
ಸುತ್ತಿನ ಕೋಟೆ ಪಚ್ಚೆ ಮುತ್ತು ವೈಢೂರ್ಯದಿಂದ
ಕೆತ್ತಿದ ಪಲಗೆ ಕಾಳಗತ್ತಲೆ ಹರಿಸುವ
ಎತ್ತಿದ ಸೂರ್ಯಪಾನ ಪತಾಕೆಗಳ ಗಲಭೆ
ಎತ್ತ ನೋಡಿದರತ್ತ ನೃತ್ಯಗೀತವಾದ್ಯ
ಇತ್ತಂಡದಲಿ ನಿಂದಾ ಬೆತ್ತದವರ ಸೊಲ್ಲು

ಹತ್ತು ದಿಕ್ಕುಗಳಂಜಿಸುತಲಿಪ್ಪ ತೆರದಿ
ಚತ್ತುರ ದಿಕ್ಕಿನಲ್ಲಿ ಉತ್ತರದಿ ನಾಲ್ಕು
ತತ್ಥಳಿಸುವ ದ್ವಾರ ಉತ್ತಮ ಸರೋವರ
ಮತ್ತೆ ಆನಂದವನ ಅತ್ತಲತ್ತಲಾಡುವ
ಸತ್ವ ಶರೀರಗಳ ಉತ್ತಮಾಂಗಗಳೆ ತೂ
ಗುತ್ತ ಸ್ವೇಚ್ಛೆಯಿಂದಾ
ನಿತ್ಯ ಕ್ರೀಡೆಯಲ್ಲಿ ಭರಿತವಾಗಿಪ್ಪರು
ಸತ್ಯವಲ್ಲದೆ ಪುಸು ಉತ್ತರವೆಂಬೊದಿಲ್ಲ
ಹೊತ್ತು ಹೊತ್ತಿಗೆ ಎಲ್ಲ ಚಿತ್ತಚಂಚಲರಿಲ್ಲ
ತೆತ್ತಿಸಕೋಟಿ ದೇವತೆಗಳು ತಲೆಬಾಗಿ
ತೆತ್ತಿಗರಾಗಿ ನಿಂದು ತುತಿಪರನುಗಾಲಾ
ಸತ್ಯಲೋಕದ ಮ್ಯಾಲತ್ತ ಉಳ್ಳ ವೈಕುಂಠ
ಹತ್ತಿಲಿ ಓಲ್ಯೆಸುತ್ತ ಇಂದಿರೆ ಇರೆ
ಎತ್ತಣದದ ತಾ ದೊರೆತನವೋ ನಿನ್ನದು
ಶ್ರುತ್ಯರ್ಥಗಳಿಗೆ ದೂರತ್ತನೆನಿಸುವನೇ
ಚಿತ್ತಜಪಿತ ರಾಮ ವಿಜಯ ವಿಠ್ಠಲ ನೀ
ಮರ್ತ್ಯಲೋಕಕ್ಕೆ ನರಕೃತ್ಯ ತೋರಿದದೇನೋ ೧

ಮಟ್ಟತಾಳ

ವನಜಭವಾದ್ಯರು ತನುಜರಾಗಿರೆ ನಿನಗೆ
ಜನಪ ದಶರಥಗೆ ತನುಭವವೆನಿಸುವರೇ
ಎಣೆಗಾಣೆನೊ ನಿನ್ನ ಗುಣಕರ್ಮಾವಳಿಗೆ
ಮನೋವಾಕ್ಕಾಯಾ ನೆನೆನೆನೆದು ನಿತ್ಯ
ದಣಿ ದಣಿ ಪಾಡಿದರು ದಣಿಯಬಲ್ಲದೆ ಜಿಹ್ವೆ
ಯನು ಸಾಲದು ಎನಗೆ ಅನಿಮಿಷ ಮಿಕ್ಕಾದ
ಜನರ ಸಮಾಧಿಗೆ ಗಣನೆ ಮಾಡುತಲಿಪ್ಪಾ
ಚಿನುಮಯ ಮೂರುತಿ
ಮನುಜೋತ್ತಮ ರಾಮ ವಿಜಯ ವಿಠ್ಠಲ ನಿನಗೆ
ಮಣಿದು ನಮೋ ಎಂದವನೇ ಬಲು ಧನ್ಯ ಧನ್ಯ ೨

ರೂಪಕತಾಳ

ಅನಂತಯಾಗದ ಕರ್ತಾಭೋಕ್ತನೆ ನಿನಗೆ
ಮೌನಿಯ ಮುಖವಂದು ಕಾಯ್ದದ್ದು ಸೋಜಿಗವೆ
ಏನೆಂಬೆ ಜಡದಿಂದ ಚೇತನ ಈಯಪನೇನೋ
ಮಾನಿನಿ ಜಡಚೇತನವನ್ನು ಕಳದದ್ದು ಸೋಜಿಗವೆ
ದಾನವ ಬಲವಾಗೆ ನಿತ್ರಾಣ ಗೈಸಿದವನೆ
ದೀನ ಉಮೇಶನ ಧನುವ ಮುರಿದದ್ದೇನೊ
ರಾಣಿವಾಸವು ನಿತ್ಯ ಶ್ರೀನಾರಿ ಅವಿಯೋಗಿ
ಜಾನಕಿಯ ಮದುವೆಯಾದನು ಎನಿಸುವದೇನೋ
ನೀನೆ ನಿನ್ನೊಳು ಕಾದಿ, ಮಾನವಾಧಮರಿಗೆ
ಹೀನಗತಿಗೆ ಮಾರ್ಗವನು ತೋರಿದ ದೈವಾ
ಭಾನುಕುಲೋತ್ತಮಾ ವಿಜಯ ವಿಠ್ಠಲ ರಾಮಾ
ನೀನಾಡಿದ ಲೀಲೆ ತಿರೆಗೆ ವಶವಲ್ಲ ೩.

ಝುಂಪಿತಾಳ

ಬಲು ಜೀವಿಗಳ ಭವದ ವಲಯದೊಳಗಿಟ್ಟು
ತೊಳಲುವಂತೆ ಮಾಡಿ ಅಳಲಿಸುವ ಮಹದೈವ
ಇಳಿಯೊಳಗೆ ವನವಾಸದಲಿ ತೊಳಲಿದನೆಂದು
ತಿಳಿಸಿ ನರರಿಗೆ ಮಾಯ ಕಲ್ಪಿಸಿ ಬಿಡುವುದೇನೋ
ಸುಲಭದಿಂದಲಿ ಸಕಲರಿಗೆ ಉಣಿಸುವನೆ
ಫಲಗಳಿಂ ದಿನವ ಕಳೆದನೆನಿಸುವದೇನೋ
ನಳಿನಜಾದ್ಯರು ನಿನ್ನೆಂಜಲ ಬಯಸುತಿಪ್ಪರು
ಒಲಿದು ಶಬರಿ ಸವಿದ ಫಲ ಮೆಲುವುದೇನಯ್ಯ
ಜಲಜ ಭವಾಂಡಕ್ಕೆ ಸಲೆ ನೀನು ಆಶ್ರಯವೋ
ಮಲೆವಿಂಧ್ಯದೊಳಗೊಂದು ಸ್ಥಳವ ಮಾಡಿದದೇನೋ
ನೆಲೆ ಯಾವುದೊ ನಿನ್ನ ಬಲವ ಪೊಗಳುವದಕ್ಕೆ
ಸುಳಿದ ಮೃಗವಟ್ಟಿ ಬೆಂಬಲ ಪೋದನೆನಿಸಿದೆ
ಚೆಲುವ ಸೀತೆಯ ನಿನ್ನ ಬಳಲಿಟ್ಟುಕೊಂಡು
ಹಲುಬಿದೆ ಹೆಂಡತಿಯ ಕಳಕೊಂಡವನಂತೆ

ಭಳಿರೆ ನಿನ್ನವತಾರ ಹಲಬರಿಗೆ ಸಾಧ್ಯವೇ
ಹಲವು ಬಗೆಯಲಿಂದ ಪೊಗಳಲಿ ಕೂಡದು
ಮಲತವರ ಮಸ್ತಕಾಂಕುಶ ರಾಮ ವಿಜಯ ವಿ
ಠಲ ನಿನ್ನ ಚರಣದಾ
ಸುಳುವು ಕಂಡವನಾರೋ ಸುರರು ಬೆರಗಾಗುವರು ೪

ತ್ರಿವಿಡಿತಾಳ

ಗುಣನಿಧಿಯೆ ನಿನ್ನ ನೆನವೆಲ್ಲರಗೆ ಬಲ
ನಿನಗೆ ಸಹಾಯವೇನೊ ಇನನಂದನಾ
ಕ್ಷಣ ಮೀರದಲೆ ಬೊಮ್ಮನ ಪದವಿಗೆ ಋಜುಗಣವೇ
ಹನುಮಗೆ ನೂತನಪಟ್ಟ ಇನ್ನುಂಟೆ
ಅನುದಿನ ಸರ್ವರಂತರವನು ಬಲ್ಲ ವ್ಯಾಪ್ತನೆ
ವನಚರಾದಿಯ ಸುದ್ದಿಯ ತರಲಟ್ಟಿದೆ
ಮುನಿದಾಕ್ಷಣ ಏಳು ವನಧಿ ನುಂಗುವನೆ
ಮಣಿಯ ಸಾಗರನೆಂದು ಧನುವ ಎಸದದೇನೊ
ತೃಣವೊಂದಿಡದೆ ಕಟ್ಟೆಯನು ಕಟ್ಟಿದ ಧೀರಾ
ಘನ ಪರ್ವತಗಳಿಂದ ವನಧಿ ಬಿಗಿಪುದೇನೋ
ಮಿನುಗುವ ರತ್ನಭೂಷಣಕೆ ಕೊರತೆಯಿಲ್ಲ
ತನುವಿಗೆ ನಾರುವಸನಉಟ್ಟ ಜಡಿಯೇನೋ
ಸೆಣಿಸಿದವರ ಗಂಡ ವಿಜಯ ವಿಠ್ಠಲ ನಿನಗೆ
ಅನುವಾರಾವೇನೊ ಜನನ ಮರಣ ರಹಿತಾ ೫

ಅಟ್ಟತಾಳ

ಇಂದ್ರಂಗೆ ಪುರುಷಾರ್ಥ ತಂದುಕೊಡುವನಿಗೆ
ಇಂದ್ರನು ನಿನಗೊಂದು ಸ್ಯಂದನಟ್ಟಿದನೇನೊ
ನೊಂದವರು ನೋಟದಿಂದಲೇಳುವರು
ಗಂಧವಹನ ಕರದಿಂದದ್ರಿ ತರಿಸಿದೆ
ಕುಂದದೆ ಲೋಕವ ಕೊಂದು ಹಾಕುವ ದೇವ
ಅಂದು ದುರುಳ ದಶಕಂಧರನನಳಿದದಾ

ನಂದಾ ಪಟ್ಟವಗಟ್ಟಿ ವೃಂದಾರಕರ ಪೊರೆದೆ
ಬಂದಾ ವಿಭೀಷಣಗೊಂದು ಪಟ್ಟ ಕಟ್ಟಿದ ಬಗೇ
ನೆಂದು ಪೇಳಲಿ ನಿನ್ನಾನಂದವಾದಾಟಕ್ಕೆ
ವಂದಿಸಿ ನಮೊ ನಮೋ ಎಂದು ಕೊಂಡಾಡುವೆ
ಇಂದಿರಾಪತಿ ರಾಮ ವಿಜಯ ವಿಠ್ಠಲ ಶಾಮ
ಸುಂದರ ಸುಧಾಕಾಯ ಕಂದರ್ಪನಯ್ಯ ೬

ಆದಿತಾಳ

ಏಸೇಸು ಬೊಮ್ಮಾಂಡ ನಾಶನ ಗೈಸುವಂಗೆ
ದೋಷಕಾರಿಗಳನ್ನು ಘಾಸಿಮಾಡಿದ ಹತ್ಯ
ವೊ ಸೇರಿದರಿಂದ ಈಶನಭಜನಿ ಲೇಸಾಗಿಮಾಡಿ ನಿ
ರ್ದೋಷನಾದನೆಂದು ಹೇಸಿ ನರಕ ನಿತ್ಯ
ವಾಸಿಗಳು ನುಡಿದು ಕ್ಲೇಶವ ಬಡುವರು
ಏಸೇಸು ಜನ್ಮದಲ್ಲಿ ದೋಷವೆತ್ತಣದೊ ಅ
ಶೇಷದೋಷ ದೂರನೆ ದೇಶಾದೊಳಗೆ ನಿನ್ನ
ದಾಸನಾದವನಿಗೆ ಲೇಶ ದೋಷಗಳಿಲ್ಲಾ
ದೋಷ ನಿನಗೆ ಉಂಟೆ ದಾಶರಥೆ ನಮ್ಮ ವಿಜಯ ವಿಠ್ಠಲ ಸ್ವಪ್ರ
ಕಾಶನೆ ನಿನಗೆಣಿಸಲು ಕಾಣೆ ೭

ಜತೆ

ನಿನ್ನ ಮಾಯಾ ಮೋಹ ಖಳರಿಗೆ ತಮಸ್ಸು ಆ
ಪನ್ನರಿಗೆ ಮೋಕ್ಷ ವಿಜಯ ವಿಠ್ಠಲ ಧೋರಿಯೇ ೮

೧೨೮

ಧ್ರುವತಾಳ

ಮಧ್ವವಲ್ಲಭ ಜಯ ಸದ್ವೈಷ್ಣವರ ಪ್ರಿಯಾ
ಅದ್ವೈತ ಮಹಿಮ ಜಗದ್ವಿಲಕ್ಷಣ ರಾಮಾ
ಸದ್ವರ್ಣ ಭೂತ ಭವಿಷ್ಯದ್ವರ್ತಮಾನ ಬಲ್ಲ
ವಿದ್ವಾಂಸರೊಡಿಯಾಘ ಪ್ರಧ್ವಂಸ ಅಪ್ರಮೇಯ

ಸದ್ವೀರ ಏಕಮೇವ ಅದ್ವಿತೀಯಾ ಪಾ
ದದ್ವಯನೆನಿಸುವ ಸದ್ವಾಣಿವುಳ್ಳ ಗು
ರು ದ್ವಾರ ಸಾರಿದವರ ಹೃದ್ವನಜದಲ್ಲಿದ್ದು
ಸದ್ವಿಚಾರ ನಡೆಸುವ ತದ್ವಿಪರೀತ ಕಾರ್ಯ
ಅಧ್ವರ ಭೋಕ್ತ ನಮ್ಮ ವಿಜಯ ವಿಠ್ಠಲರೇಯಾ ಮ
ರುದ್ವಂಶರಿಂದ ನಿತ್ಯ ಸದ್ವಾಲಗಕೊಂಡ ಮೂರ್ತಿ ೧

ಅಟ್ಟತಾಳ

ಪೆರ್ಮೆಯಿಂದಲಿ ವಿಶ್ವಾಕರ್ಮನಿಂದಲಿ ಅಂದು
ನಿರ್ಮಿತವಾಗಿದ್ದ ನಿರ್ಮಳ ಶರೀರ
ಧರ್ಮಬೋಧಕ ರಾಮಾ ನಿರ್ಮಯನೆ ಚ
ತುರ್ಮಾಗ ನಿತ್ಯ ನಿಷ್ಕರ್ಮ ಭಾವದಲ್ಲಿ
ನಿರ್ಮತ್ಸರನಾದ ವಿಜಯ ವಿಠ್ಠಲರೇಯನ
ನಿರ್ಮಲ ಚಿತ್ತದಲ್ಲಿ ಅರ್ಚನೆ ಮಾಡಿದೆನೋ ೨

ತ್ರಿವಿಡಿತಾಳ

ಬಲುಕಾಲ ಲೋಕೇಶ ತನ್ನ ಮನಿಯಲ್ಲಿ
ಚೆಲುವ ರಾಮನಪೂಜೆ ಮಾಡುತಿರಲು
ಒಲಿದು ಜಾಬಾಲಿಮುನಿ ಪ್ರಾರ್ಥನೆ ಯಿಂದಲಿ
ಜಲಜ ಸಂಭವನ ಮೆಚ್ಚಿಸಿ ಬೇಡಲು
ಸಲಿಸಿ ಮಾತನು ಋಷಿಗೆ ಈ ಪ್ರತಿಮೆ ಕೊಡಲಾಗಿ
ಒಲಿಸಿಕೊಂಡಲ್ಲಿಂದ ಶಿವಗೆ ಕೊಡಲು
ಸುಲಭದಿಂದ ಶಿವನು ತನ್ನಯ ನಿಜ
ಲಲನಿಗೆ ಕೊಡಲಾಗಿ ವಿನಯದಿಂದ
ಕೆಲವು ದಿವಸ ಗಿರಿಜೆ ಪೂಜಿಸಿ ಆಮೇಲೆ
ತಿಳಿದು ದಕ್ಷನ ಯಾಗದಲ್ಲಿಗೆ ಬಂದು
ಇಳಿದು ಪೋಗುವಾಗ ಸೈಮುನಿ ಋಷಿ ಕೈ

ಯಲ್ಲಿಕೊಟ್ಟ ತರುವಾಯ ರಾಮ ಪ್ರತಿಮೆಯನ್ನು
ಜಲಜಗರ್ಭನ ವಶಕೆ ತಂದು ಕೊಡಲು
ಪೊಳೆವ ಸುಮೇರು ಪರ್ವತದಲ್ಲಿ ಇಟ್ಟು ನಿ
ಶ್ಚಲ ಪೂಜೆ ಮಾಡುತಿದ್ದಾನೆಂದೂ
ಬಲುದೈವ ವಿಜಯ ವಿಠ್ಠಲ ಜಾನಕಿಪತಿ
ಬಲವಂತ ಭಕ್ತರ ಪ್ರಿಯ ಸುಜನಗೇಯಾ ೩

ಅಟ್ಟತಾಳ

ತಪಮಾಡಿ ಇಕ್ಷ್ವಾಕು ಬ್ರಹ್ಮಗೆ ಮೆಚ್ಚಿಸಿ
ಕೃಪೆಯಲ್ಲಿ ಮೂಲರಾಮನ ಕೊಡಲಿತ್ತಲು
ಕ್ಷಿತಿಯೊಳಗೆ ಅಯೋಧ್ಯದಲ್ಲಿ ಪೂಜಿಸಲಾಗಿ
ಅತಿಶಯವಾಗಿ ರಾಮಚಂದ್ರ ಪರಿಯಂತೆ
ಮಿತಿ ಇಲ್ಲದ ವಾಲಗದಲ್ಲಿ ಒಪ್ಪಲು
ಕ್ಷಿತಿಸುತೆ ತಾನೆ ಪೂಜಿಸಿ ಹನುಮಂತನಿಗೆ
ಪ್ರತಿಮೆಯ ಪಾಲಿಸೆ ಅಲ್ಲಿಂದ ಮಾರುತ
ಸುತನು ಜಾಂಬುವಂತನಿಗೆ ದಯಮಾಡಿದಾ
ಸತತ ಮಂಗಳಕಾಯಾ ವಿಜಯ ವಿಠ್ಠಲ ರಾಮಾ
ನುತಿಸಿ ಕೊಳುತಲಿದ್ದಾ ಸುರರಾದಿ ಕೈಯಾ ೪

ಆದಿತಾಳ

ವೇದಗರ್ಭನೆಂಬೊ ಭೂಸುರ ರಾಮನ್ನ
ಪಾದ ಸಂದರ್ಶನವಾಗದಲೆ ಅ
ನ್ನೋದಕ ಕೊಳದಿರೆ ರಾಘವ ಭಕ್ತನಿಂ
ದಾದ ಪ್ರತಿಜ್ಞೆಯನು ತಿಳಿದು ತನ್ನ ಮೂರ್ತಿಯ
ಆದರದಿಂದಲಿ ಕೊಟ್ಟು ಕಳುಹಲಿತ್ತಾ
ಭೂದೇವ ಬಹುಕಾಲ ಸೀತಾರಾಮ ಪ್ರತಿಮೆಯ
ಮೇದಿನಿಯೊಳು ಬಿಟ್ಟು ಪೋಗಲಾಗಿ ಇತ್ತ
ಸಾಧುಗುಣವುಳ್ಳ ಮುಕುಂದವರ್ಮನೆಂಬ

ಮೇದಿನಿಪತಿಯಾಗಿ ಒಡ್ಡಿ ದೇಶದಲ್ಲಿರೆ
ಆದುದು ಅಶರೀರವಾಕ್ಯ ಆತಗೆ ಕೇಳಿ
ಆದಿತ್ಯವಂಶಜ ವಿಜಯ ವಿಠ್ಠಲ ರಾಮಾ
ರಾಧನೆಗೊಳುತಿದ್ದ ಅಜನಿಂದ ಕೋಶದಲ್ಲಿ ೫

ಜತೆ

ನರಹರಿತೀರ್ಥರಿಗೆ ಒಲಿದ ವಿಜಯ ವಿಠ್ಠಲ
ಸ್ಮರಿಸಿದವರ ಕಾವಾ ನಿತ್ಯ ರಘುರಾಮಾ ೬

೧೨೯

ಧ್ರುವತಾಳ

ವಂದೆ ಮುಕುಂದ ಮುಚಕುಂದ ಪರಿಪಾಲಕ
ಕುಂದೇಂದು ವದನ ಆನಂದಮೂರ್ತಿ
ಗಂಧದೋಷ ದೂರವಾಗಿದ್ದ ಚಿತ್ ಪ್ರಕೃತಿ
ಯಿಂದ ನೋಡೆ ಚತುರ್ವಿಧ ದೋಷದೂರಾ
ವಂದೆ ಮುಕುಂದ ನಮೋ ವೃಂದಾರಕ ಮುನಿ
ವೃಂದ ಪಂದ್ಯ ಸುಖಸಾಂದ್ರ ಸರ್ವೋತ್ತಮಾ
ಮಂದಹಾಸ ಮಂದಾಕಿನಿ ಜನಕ
ಸುಂದರಿನಾಥ ಗೋವಿಂದ ಇಂದೀವರದಳ ಶಾಮಲಾ
ಕಂದರ್ಪ ಕೋಟಿಲಾವಣ್ಯ ತಾರುಣ್ಯ ಸದಾ
ಮಂದಿರಾ ವೈಕುಂಠ ವೈನತೇಯಾ
ಶ್ಯಾಂದನ ಸ್ಕಂದ ಸನಂದನ ಪ್ರಿಯ ಪು
ರಂದರ ನಂದನ್ನ ಮಾನಭಂಗ ಇಂದನ ಭೋಕ್ತನೇತ್ರಾ
ಒಂದೊಂದು ಒಂದಾರು ಮ್ಯಾಲೊಂದು
ಕಂಧರನಗೊಸುಗ ಅಹಮತಿಯಲ್ಲಿ
ಬಂದು ನಿಂದೆದಿರಾಗೆ ಜಡಮಾಡಿ ನಿಲಿಸಿದ ಅ
ರಿಂದವು? ದಮಶಾಂತ ಪೂರ್ಣ ಪೂರ್ಣಾ

ವಂದೆ ಮುಕುಂದ ನಮೋ
ನಂದ ಗೋಕುಲ ಪಾವನ ವಿಜಯ ವಿಠಲ ರಾಮ
ಚಂದ್ರ ಪಾಪ ವರ್ತಕೆ ಇಂದ್ರಾಯುಧವೆಂದೆನಿಪ ೧

ಮಟ್ಟತಾಳ

ಮಂಗಳಾಂಗಿ ರಮಣ ರಂಗ ರಂಗೋರಂಗ
ಪುಂಗವ ಪರಿಯಂಕ ಸಂಗ ಸಂಗೀತಲೋಲ
ಅಂಗ ವಿಚಿತ್ರಾಂಗ ತುಂಗ ಮಾತುಂಗ ರಿಪು
ಭಂಗ ರಾಜಸಿಂಗ ಭಂಗರಹಿತ ಸರ್ವಾಂಗ ರೋಮ ಪ್ಲ
ವಂಗ ಕಟಕನಾಯಕ ಇಂಗಿತ ಜನರಂತ
ರಂಗ ಕರುಣಾಪಾಂಗ ರಂಗು ಮಾಣಿಕ ಭೂಷಾ
ಶೃಂಗಾರಾಂಗ ಮಾರ್ಗಣ ಶಿಂಗಾಡಿ ಹಸ್ತ
ಅಂಗುಳಿ ಚಾತುರ್ಯ ಗಂಗಾಧರ ಚಾಪ
ಭಂಗ ಭಕ್ತವತ್ಸಲ ರಂಗ ರಂಗರಾಮ
ಮಂಗಳಾಂಗ ದೇವೋತ್ತುಂಗ ವಿಜಯ ವಿಠ್ಠಲ
ಜಂಗಮ ಸ್ಥಾವರ ಜಂಗುಳಿ ಜಡ ಭಿನ್ನಾ ೨

ತ್ರಿವಿಡಿತಾಳ

ಇಂದ್ರಗೋಪದಂತೆ ವರ್ಣದಿಂದೊಪ್ಪುವ
ಅಂದವಾದ ದಿಗ್ವಿಜಯರಾಮು
ಚಂದ್ರ ಭಕ್ತ ಚಕೋರ ಮಾನವ ಮನುಜಲೀಲಾ
ಸಂದರುಶನ ಮಾತ್ರದಿಂದ ಲಾಭಾ
ಸಂದೋಹ ಕೊಡುವನೆ ಕ್ಷತ್ರಕುಲೋತ್ತಮ
ಶ್ಯಂದನಹತ್ತು ನಾಮಕಲ ನಂದನಾ
ಇಂದೆನ್ನ ಹೃದಯಾಬ್ಜ ಮಂದಿರದಲಿ ಬಂದು
ನಿಂದಾಡುವ ದಾಶರಥಿಯೆ ತಂದೆ
ತಂದೆ ತಂದೆ ತಂದೆ ಈ ಪರಿ ಎನ್ನಾ
ನಂದವಾದ ಮನಕೆ ನಿನ್ನ ಮೂರ್ತಿ

ಪೊಂದಿಸು ಭುವನ ಪಾವನವಾದ ಚರಣಾರ
ವಿಂದ ಪಾಂಸ ಲೇಶ ಧರಿಪಾರಲ್ಲಿ
ಬಂದು ಕಾರುಣ್ಯಸಿಂಧು ನಿನ್ನಂಘ್ರಿನಖಚಂದ್ರ
ಚಂದ್ರಿಕೆಯಲಿ ಎನ್ನ ಹೃತ್ತಾಪವ
ನಂದಿಸು ನಾನಾವತಾರ ನಾರೆಯಣಾ
ಮಂದರೋದ್ಧರನೇ ಮಹಾಮಹಿಮಾ
ಸಂದೇಹ ಎನಗಿಲ್ಲ ನಿನ್ನ ಕಂಡ ಮೇಲೆ
ಬಿಂದು ಮಾತುರ ಕ್ಲೇಶ ಎನಗಿಪ್ಪುದೇ
ಕೊಂದು ಬಿಸುಟುವೆನು ಖಳರ ಉಪದ್ರವ
ಕಂದ ನಾನೆಲೋ ನಿನಗೆ ಜನುಮ ಜನುಮ
ಎಂದೆಂದಿಂಗೆ ಎನ್ನ ಸಾಧನದಿಂದಲಿ ಆ
ನಂದ ಕೊಡುವೆನೆಂಬೊ ಕೀರ್ತಿಯುಂಟೇ
ಬಂದು ಸೇರಿದ ಭೂತ ಪ್ರೇತಾದಿಗಳು ಮಂತ್ರ
ದಿಂದಲಿ ಅನ್ನಪಾನಾದಿಗಳು ತಂದು ಇತ್ತದ
ರಿಂದ ವಶವಾಗಿ ಒಡನೊಡನೆ
ಹಿಂದೆ ತಿರುಗುತಿಪ್ಪವು ತ್ರಾಣಗೆಟ್ಟು
ವಂದಿಪೆ ಅದರಂತೆ ನಿನಗಲ್ಲವೊ ಎಳೆ
ಗಂದಿಯೋ ಸಂತಸ ಅನುಕಂಪನೆ
ಅಂದ ಜನಕೆ ಪ್ರಾಣ ನಿಜಸ್ವಭಾವ ಉ
ಪೇಂದ್ರ ವಿಜಯ ವಿಠ್ಠಲ ರಾಮ ರಘುಕುಲ ತಿಲಕಾ ೩

ಅಟ್ಟತಾಳ

ಜಡ ಚೇತನದೊಳು ವ್ಯಾಪ್ತವಾಗಿಪ್ಪನೆ
ಧೃಢ ಭಕ್ತರಿಗೆ ತತ್ತದಾಕಾರ ರೂಪನಾಗಿ
ಬಿಡದೆ ಕಾಣಿಸಿಕೊಂಬುದೇನು ಸೋಜಿಗವೆ
ಬಡವ ಭಾಗ್ಯವಂತ ಎಂಬೊ ವಾರ್ತೆಯಲ್ಲಿ
ಅಡಿಗಡಿಗೆ ಕೇಳು ಇದರ ವಿಚಿತ್ರದ

ನುಡಿಬೇರೆ ನಡೆ ಬೇರೆ ಪಾರಾವಾರ ಮೂರ್ತಿಯೆ
ಸಡಗರ ಏನೆಂಬೆ ಯೋಗ್ಯತಾನುಸಾರ
ಕೊಡುವನು ಜ್ಞಾನಭಕುತಿ ವೈರಾಗ್ಯವ
ಅಡಿಗಡಿಗೆ ತನ್ನ ಧ್ಯಾನವ ಪಾಲಿಸಿ
ಪೊಡವಿ ವಿಬುಧರೆಲ್ಲ ಮತ್ಸರ ದುರ್ಗವ
ಕಡಿದು ಮನೋರಥ ಪಡಕೊಂಡು ಸುಖಿಪರು
ಕಡಲಶಯನ ನಮ್ಮ ವಿಜಯ ವಿಠ್ಠಲರೇಯಾ
ಅಡಿಗಳರ್ಚಿಪರ ಚಿತ್ತದಲ್ಲಿ ನೆಲಸಿಪ್ಪ ೪

ಆದಿತಾಳ

ಆನಂದ ಜ್ಞಾನಪ್ರದ ಶ್ರೀ ನಾಥನ ದಕ್ಷಿಣ ವಾಮಾಂಘ್ರಿ
ಆನಂದಪಾದ ಆನಂದಪ್ರದ ವಾನರಕಾಂತ ಲಕ್ಷಣ ಸುಗ್ರೀವ
ದಾನವನಿಂದಲಿ ಪೂಜೆಗೊಂಬ ಪಾದ ರಾಜಿಸುವ ಪಾದ
ದೀನ ಮಾನವರಿಗೆ ಒಲಿದೊಲಿದು ನಿತ್ಯ
ಧ್ಯಾನದಪಾದ ಮಾನಪ್ರದ ಪಾದ
ಶ್ರೀನಾರಿ ಕರಕಮಲ ಪೂಜಿತ ಸರ್ವಾಂಕಿತಪಾದ ಭವತಾರಕಪಾದ
ಏನೇನು ಬೇಡಿದಭೀಷ್ಟೆಯ ಕೊಡುವುದು
ಒಳಗೆ ಪೊಳೆವ ಪಾದ ಹೊರೆಗೆ ತೋರುವಪಾದ
ಆನಂದತೀರ್ಥರ ಮನದಲ್ಲಿ ನಿಂದ ಅತಿನಿರ್ಮಳಪಾದ
ಅಪಾಕೃತ ಪಾದ
ದಾನಿಗಳರಸ ವಿಜಯ ವಿಠ್ಠಲ ಕಾಮ
ಧೇನು ರಾಮ ರಾಮಕೌಸಲ್ಯ ತನಯನ ಪಾದ ೫

ಜತೆ

ವಸುಧೇಂದ್ರ ಮುನಿಯಿಂದ ನಾನಾ ಪೂಜೆಯ ಗೊಂಡು
ವಸುಧಿಯೊಳಗೆ ಮೆರೆವ ವಿಜಯ ವಿಠ್ಠಲ ರಾಮ ೬

ಶ್ರೀಕೃಷ್ಣ ಸ್ತೋತ್ರ

೧೩೦

ಧ್ರುವತಾಳ

ಅಂಜಿಸುವುದೇನೋ ಪರಂಜಳವಾಗಿರದೇ
ಕೆಂಜಡಿಯನೊಡಿಯ ಯಾದವರೊಡಿಯಾ
ಎಂಜಲ ಉಂಡು ಗುಲಗಂಜಿಯ ದಂಡಿಯ ಗುಥರಿಸಿ
ಗೂಂಜಿಗೊಳನ್ನು ಕುಡಿದದ್ದು ಮರದಿಯಾ
ಭುಂಜಿಸಿ ಪರವು ಮಾಡಿ ತಂದ ವಾಗರಕೆ ನೀ
ಅಂಜದೆ ಏಳುದಿವಸ ಗಿರಿಯಪೊತ್ತೇ
ಕಿಂ ನನ ನಿನ್ನದು? ನಿನಗಂಜಲ್ಯಾಕೇ ಧ
ನಂಜಯ ನಾಮಾ ಹರಿ ವಿಜಯ ವಿಠ್ಠಲ ಗೊಲ್ಲ ೧

ಮಟ್ಟತಾಳ

ಬಾಲಕತನದಲ್ಲಿ ಪಾಲು ಮೊಸರು ಕದ್ದು
ಕೋಲು ಬಡಿಗೆಯಿಂದ ಕೊಲಿಯ ಕೊಲ್ಲಿಸಿಕೊಂಡೆ
ಕಾಲನ ಒರಳಿಗೆ? ಬೀಳು ಕಟ್ಟಿಸಿಕೊಂಡು
ಏಳಲವಾದಿಯೊ ಗೊಲ್ಲ ಬಾಲೇರಿಗೆ ಎಲ್ಲ
ಮೂಲೋಕವು ಬಿಡದೆ ಆಳುವ ದೊರೆತನವು
ಏಳಲವಾಯಿತೊ ವಿಜಯ ವಿಠ್ಠಲ ಶ್ರೇಷ್ಠಾ ೨

ರೂಪಕತಾಳ

ರಕ್ಕಸಗಂಜಿ ಮುಚುಕುಂದನ ಮೊರೆ ಬಿದ್ದೆ
ರಕ್ಕಸಗಂಜಿ ಸಾಗರದೊಳು ಪುರಬಿಗಿದೆ
ರಕ್ಕಸಗಾಗಿ ವಿಕಾರ ಮೊಗನಾದಿ
ರಕ್ಕಸಗಾಗಿ ಕೋಡಗ ಬಲ ನೆರಹಿದೆ
ರಕ್ಕಸಾಂತಕ ನಿನ್ನ ಮಕ್ಕಳಾಟಕೆ ದೇ
ವಕ್ಕಳ ಮನಸ್ಸಿಗೆ ಸಿಕ್ಕಿದೆಂತೆಂಬೋರು

ಮಕ್ಕಳ ಬೇಡಿ ನೀ ಮುಕ್ಕಣ್ಣನೊಲಿಸಿದೆ
ಠಕ್ಕು ಮಾಯಾತನ ಕಕ್ಕುಜ ಗೊಂಬೆನೊ
ಚಿಕ್ಕವನ ಹಿರಿಯನ ಮಾಡಿ ಪುಣ್ಯವ
ದಕ್ಕಿಸಿಕೊಂಡೆ ಶ್ರೀ ವಿಜಯ ವಿಠ್ಠಲ ಪುಂಡ ೩

ಝಂಪಿತಾಳ

ಅಳಕುವವಗೆ ಕಾವಳದೊಳು ಹುಲ್ಲ ಸರವೇ
ತುಳಿದರೆ ಪೊಳೆವೊದು ಫಣಿವೊಲು
ಅಳುಕದವಗೆ ಜಲಧಿ ಮೊಳಕಾಲು ಉದಕವೋ
ಅಳುಕುವುದೇನು ನಿನ್ನಯ ಭೀತಿಗೆ
ಇಳಿಯ ಮುಣಗಿದವಗೆ ಛಳಿಯ ಪರವೇನು ಸಿ
ಡಲಿಗಂಜದವನು ಹೆಗ್ಗೋಳಿಗಂಜುವನೆ
ಬಲವಾಗಿ ಎನ್ನೆಡ ಬಲದಲಿ ನಿನ್ನ ನಾಮಗಳು
ಪಾಲಿಸುತಿರೆ ಚಲಿಸಲ್ಯಾತಕೋ ದೇವಾ
ಕುಲಿಶ ಪಾಪದಗಿರಿಗೆ ವಿಜಯ ವಿಠ್ಠಲಕೃಷ್ಣ
ಕೆಲಕಾಲದಂತೆ ನೋಡದ ಹೊಸ ಪರಿ ಏನೋ ೪

ತ್ರಿವಿಡಿತಾಳ

ಬಾಗಿಲ ಕಾಯಿಸಿದ ಹಾಗಾಕೊಡದೆ ಬಲಿ
ಯೋಗಿ ನಾರದನು ಸ್ತ್ರೀಯರು ಬೇಡಿದ
ಭಾಗೀರಥಿ ಸುತನು ನಿನ್ನ ಪಂಥವ ಕಳೆದ
ಜೋಗಿಯಾಗಿ ಪಾರ್ಥ ಅನುಜೆಯ ಒಯ
ಭೋಗೀಶನು ಬಿಡದೆ ಹೆಣಗಾಡಿದನಯ್ಯ
ನಾಗರಾಜನು ಬೆರಳ ಬಾಗಿಸಿದಿ ಏನೋ ನೀ
ನೇ ಗತಿ ಎಂದೆನಲಾಗಿ ಎನ್ನ ನೀನಂಜಿಸಿ ಕೊಂಬೆ
ಯೋಗಿಯಾಗಿ ಎನ್ನ ನೀನಂಜಿಸುವುದೇ ನೋ
ಪೂಗಾರಗೊಲಿದ ಭಂಡುಗಾರ ಗೋವಾ ಶೃತಿ
ಸಾಗರ ನಾಮ ವಿಜಯ ವಿಠ್ಠಲರೇಯಾ ೫

ಅಟ್ಟತಾಳ

ಸೂತಸತಿಯ ಉದರದಲ್ಲಿ ಬಂದವನಿಗೆ
ಖ್ಯಾತಿಯಾತಕೊ ಇಷ್ಟು ಭೂತಳದೊಳಗೆ
ದೂತನಾಗಿ ಪೋಗಿ ಹಸ್ತಿನಾಪುರದಲ್ಲಿ
ಭೂತಿಗಳಿಂದ ಬಿಗಿಸಿಕೊಂಡು ನಿಂದು
ಯಾತಕೆ ನಿನಗಿಷ್ಟು ಬಿಂಕದ ಮಾತು
ಭೀತಿಗೊಂಬವರಿಗೆ ತೃಣ ಮೇರುವಾದಂತೆ
ಕೋತಿ ಕೊರವಂಗೆ ಸಿಕ್ಕಿದಂತೆ ಎನ್ನ
ಈ ತೆರದಲಿ ಇನ್ನು ಕಾತುರೆಬ್ಬಿಸವರೇ
ಜಾತಿಯಿಲ್ಲದ ನಿತ್ಯ ಜಾತರಹಿತ ಮಹ
ಭೂತ ವಿಜಯ ವಿಠ್ಠಲನೀತವೇ ನಿನಗೆ ೬

ಆದಿತಾಳ

ಒದ್ದವನು ಒದ್ದೇ ಪೋದಾ ಮೆದ್ದವನು ಮೆದ್ದೇ ಪೋದಾ
ಕದ್ದವನು ಕದ್ದೇ ಪೋದಾ, ಗೆದ್ದವನು ಗೆದ್ದೇ ಪೋದಾ
ಇದ್ದವನು ಇದ್ದೇ ಪೋದಾ, ಎದ್ದವನು ಎದ್ದೇ ಪೋದಾ
ಗದ್ದುಗೆ ನೀಡಿಸಿದವನು ಹೊದ್ದಿದ ನಿನ್ನವರೊಳು
ಸಿದ್ಧಿದ ವಿಜಯ ವಿಠ್ಠಲ ಬಿದ್ದೆನೋ ನಿನ್ನ ಪಾದಕ್ಕೆ
ಪದ್ದು ಎನ್ನ ಕೊಡ ನಿಷಿದ್ದ ಎಂದೆಂದಿಗೂ ಬೇಡ ೭

ಜತೆ

ಕಂಡವರಿಗೆ ಮುನ್ನ ಪ್ರಾಯಶ್ಚಿತ್ತವೇ ಇಲ್ಲ
ಕುಂಡಲಿ ಶಯನ ಶ್ರೀ ವಿಜಯ ವಿಠ್ಠಲ ನಿನಗಂಜೆನೋ ೮

ಪೊರೆದಾ ಪ್ರೀತಿ ದೈವಾ ನರಲೀಲೆ ತೋರಿ ವಿಜಯ ವಿಠ್ಠಲ
ನರಹರಿ ರೂಪಧರಿಸಿದ ಪರಮ ಮಂಗಳ ಮೂರ್ತಿ ೨

ರೂಪಕತಾಳ

ಅಸುರ ಕಂಸನು ತಾಮಸ ಬುದ್ಧಿಯಲ್ಲಿ ವ್ಯ
ಖ್ಯಸನಾಗಿ ರೋಷದಲ್ಲಿ ವಸುದೇವ ದೇವಕಿಯ
ಮಸದು ಮತ್ಸರಿಸಿ ಇಡಿಸಿದೆ ನಿಗಳವ ಬಂ
ಧಿಸಿ ಶೆರೆಮನೆಯಲ್ಲಿ ಅಸೂಯವ ಬಡುತಲೆ
ಕುಸುಮನಾಭನೇ ಜನಿಸುವೆನೆಂದು ಮಾ
ನಿಸ ವೇಷವನು ತಾಳಿ ಕುಶಲದಿಂದಲಿ ಆ
ವಸುದೇವ ದೇವಕಿ ಬಸುರಿಲಿ ಉದುಭವಿಸಿ ಚಕ್ರಾಬ್ಜಗದಾ
ಬಿಸಿಜ ಚನ್ನಾಗಿ ಧರಿಸಿದ ಚತುರಹಸ್ತಾ
ದಿಶೆಗೆ ರವಿಯಂತೆ ರಂಜಿಸುವ ಸ್ವಪ್ರಕಾಶ
ಹಸುಳೆಯಾಗಿ ತೋರಿದ ಪರಂಜ್ಯೋತಿ
ವಸುಧಿ ಭಾರಹರಣ ವಿಜಯ ವಿಠ್ಠಲ ನೀನೆ
ಶಿಶುವಾಗಿ ಕಣ್ಣಿಗೆ ಕಾಣಿಸಿ ಕೊಂಡೆ ಈರ್ವರಿಗೆ ೩

ಝಂಪೆತಾಳ

ಮಧುರಾ ಪುರದಲಿ ಜನಿಸಿ ವೇಗದಿ ಯಮುನಾ
ನದಿದಾಟುವಾಗ ಉರಗನು ಸೇವೆಯನು ಮಾಡೆ
ಒದಗಿ ತಂದು ನಿನ್ನ ಯಶೋದಾದೇವಿಯ
ಬದಿಯಲ್ಲಿ ಇಟ್ಟು ದುರ್ಗಾದೇವಿಯ ಒಯ್ಯೇ
ಅದರಿಂದ ಕಂಸಗೆ ಖೇದ ವೆಗ್ಗಳಿಸೆ ಕ
ರೆದು ಪೂತನಿಯನಟ್ಟೇ ಅವಳ ಅಸು ಹೀರಿದೆ
ಒದೆದೆ ಶಕಟನ ವನಕ್ಕೆ ಪೋದಲ್ಲಿ ಕಾಲಿಲೀ
ಮುದದಿಂದಲಿ ಬಲು ಜಾರ ಚೋರನೆನಿಸಿದೆ
ಮದುವೆ ಇಲ್ಲದೆ ಬಹು ಮಕ್ಕಳನ್ನು ಪಡೆದೇ
ಗದೆ ಬಲ್ಲು ಗಜುಗು ಚಂಡಾಟದಲಿ ಮೆರೆದೇ
ಎದುರಾದ ಹಯ ವೃಷಭ ಬಕ ಧೇನುಕ ವತ್ಸ

ಮೊದಲಾದ ಖಳರಮರ್ದಿಸಿ ಯಮುಳಾರ್ಜುನರ
ಪದದಲ್ಲಿ ಶಾಪವನು ಕಳೆದು ಕಿಚ್ಚನೇ ನುಂಗಿ
ಹೃದಯದೊಳಗೆ ಇದ್ದ ಕಾಳಿಂಗನ ತುಳಿದು ಕಾಯ್ದು
ಸದರವಿಲ್ಲದೆ ಗಿರಿಗೆ ಹಾಕಿದನ್ನವನ್ನುಂಡು
ತುದಿಬೆರಳಲಿಂದೇಳು ದಿವಸ ಗಿರಿಯಧರಿಸಿ
ತ್ರಿದಶನಾಯಕನ ಭಂಗಿಸಿದೆ ಅಕ್ಷಣದಲೀ
ಕ್ಷುಧಿಗೆ ಅಂಬಲಿ ಕುಡಿದು ಗೋವಳರನಟ್ಟಿ ಯಾ
ಗದ ಅನ್ನಸತಿಯರಿಂದಲಿ ತರಿಸಿ ಭುಂಜಿಸಿದೇ
ಪದುಮಗರ್ಭಗೆ ಬೆಡಗು ತೋರಿದ ಮಹದ್ದೈವ
ಪದುಮಲೋಚನ ನಮ್ಮ ವಿಜಯ ವಿಠ್ಠಲರೇಯಾ
ಮದನಾಟದಲ್ಲಿ ಗೋಪಿಯರ ಕೂಡ ನಲಿದಾ ೪

ತ್ರಿವಿಡಿತಾಳ

ಕರೆಯ ಬಂದಕ್ರೂರ ಭಕುತನ್ನ ಮನ್ನಿಸಿ
ಮರಳೆ ನಾರಿಯರ ಒಡಂಬಡಿಸಿ
ಬರುತ ಉದರದೊಳು ರೂಪವ ತೋರಿ
ಕರಿಯ ಸೀಳಿದೆ ರಜಕನಸಹಿತ
ಶರಾಸನ ಮುರಿದು ಗೋಮಕ್ಕಳೊಡನುಂಡೆ
ಹರುಷದಿಂದಲಿ ಮಾಲೆ ಕೊಡಲು ಧರಿಸಿಕೊಂಡೆ
ಕುರೂಪಿಯ ತಿದ್ದಿ ದಿವ್ಯಾಂಗನಿಯ ಮಾಡಿ
ತರಳನಾಗಿ ಪೋಗಿ ಸೊಕ್ಕಿದಾನಿಯ ಕೊಂಡೆ
ವರಿಸಿದೆ ಮಲ್ಲರ ಕಾಳಗದೊಳಗೆ ನಿಂದು
ಹರಿದು ಕಂಸನ ಪಿಡಿದು ಅವನ ಈಡಾಡಿ
ಉದರ ಮೇಲೆ ಕುಣಿದು ಅವನ ಮರ್ದಿಸಿದೆ ಮುಂದೆ
ಸೆರೆಬಿದ್ದ ಜನನಿ ಜನಕರ ಬಿಡಿಸಿದೆ
ಮೆರೆದೆ ಬಾಲನಾಗಿ ಸೋಜಿಗವತೋರಿ
ಪರಮಜ್ಞಾನಿ ನೀನೆ ಸಾಂದೀಪನಲಿ ಓದೀ
ಗುರುಪುತ್ರ ಮೃತವಾಗಿರಲು ತಂದಿತ್ತೆ
ಸಿರಿರುಗ್ಮಿಣಿ ಸತ್ಯಭಾಮೆಯರ ಮಿಕ್ಕಾದಷ್ಟ

ತರುಣಿಯರ ಮದುವ್ಯಾದಿ ಚರಿತೆ ತೋರಿ
ಭರದಿಂದ ಜರಾಸಂಧ ಕಾಲಯಮ ಶಿಶುಪಾಲ
ನರಕಹಂಸಡಿಬಿಕ ಸಾಲ್ವ ಪೌಂಡ್ರಿಕ
ದುರುಳಾದಿಗಳ ದಂತವಕ್ತ್ರ ಬಲುದೈತ್ಯರ
ಒರಿಸಿದ ಅವರವರ ದರುಳತೆಯನು ನೋಡಿ
ಕರುಣದಿಂದಲಿ ಮುಚುಕುಂದನ್ನ ಪಾಲಿಸೀ
ಪರಿಪರಿ ಬಗೆಯಿಂದ ಶರಧಿಯೊಳಗೆ ನಲಿದೆ
ಹರನಲ್ಲಿ ಸಂತಾನ ಬೇಡಿ ತಪವ ಮಾಡಿದೆ
ಹಿರಿದೋ ನಿನ್ನ ಮಹಿಮೆ ಪೊಗಳಾಲಳವೇ
ಅರಸು ಉಗ್ರಸೇನಗೆ ಒಲಿದ ವಿಜಯ ವಿಠ್ಠಲ
ಸರಿಸರಿ ಬಂದಂತೆ ಲೀಲೆ ಮಾಡಿದ ದೇವ ೫

ಅಟ್ಟತಾಳ

ದ್ವಾರಕಾಪುರದಲ್ಲಿ ನಾರಿಯರ ಕೂಡ
ವಾರವಾರಕೆ ವಿಹಾರಮಾಡಿದ ದೈವಾ
ನಾರದನು ಒಂದು ಪಾರಿಜಾತವ ತರೇ
ಕಾರುಣ್ಯದಲಿ ಪೋಗಿ ನಾರಿಯ ಸಂಗಡ
ಪಾರಿಜಾತವೃಕ್ಷ ಬೇರರಸಿ ತಂದೆ
ದಾರಿದ್ರತನದಲ್ಲಿ ಧಾರುಣಿಸುರ ನಿನ್ನ
ಸಾರಲು ಭಾಗ್ಯ ಅಪಾರವಾಗಿಯಿತ್ತೆ
ಆರು ಹತ್ತುಸಾವಿರ ಸತಿಯರಲ್ಲಿ
ಈರೈದುಸುತರು ಕುಮಾರಿ ಒಬ್ಬಳ ವಿ
ಸ್ತಾರದಿಂದಲಿ ಪೆತ್ತ ಮೀರಿದಾ ದೈವವೇ
ವಾರಿಧಿಯೊಳು ಪೋಗಿ ಕಿರೀಟಿಗೋಸುಗ
ಧಾರುಣಿಸುರನ ಕುಮಾರನ ಕರೆದಿತ್ತೇ
ಭೂರಿ ದಕ್ಷಿಣದಿಂದಾದ್ವರವ ಮಾಡಿದ
ಕೋರಿದವರ ಮನಸಾರ ವರವನೀವಾ
ವಾರಿಜಧರ ನಮ್ಮ ವಿಜಯ ವಿಠ್ಠಲರೇಯಾ
ತೋರಿದೆ ಸುರಮತಿ ನಾರದನ ಬೆಡಗು ೬

ಆದಿತಾಳ

ಏಕಮೇವ ನೀನು ಲೋಕದೊಳಗೆ ಬಲು
ಪ್ರಾಕೃತ ಚರಿತೆ ಅನೇಕ ಬಗೆಯಲಿ ತೋರಿ
ಆಕರಿದರ್ಪಜ ಪಿನಾಕಿಯ ಭಕುತನ್ನ
ಸೂಕುಮಾರಿಗೆ ಸೋತು ತಾಕಿ ಸೆರೆ ಬಿದ್ದಿರಲು
ಪಾಕಶಾಸನ ಸುಧಾಕಲಶ ತಂದವನ್ನ
ನೀ ಕರುಣದಿಂದಲೇರಿ ರಾಕಾಬ್ಜನಂತೆ ಪೊಳೆವ
ನಾಕ ಜನರ ನೋಡಿ ಶ್ರೀಕಂಠನ ಹಿಂದು ಮಾಡಿ
ಭೂಕಂಪಿಸುವ ಬಲೀಕುಮಾರನ ಕರಗ
ಳಾ ಕಡಿದು ಮೊಮ್ಮಗನ ಜೋಕೆಯಿಂದಲಿ ಬಿಡಿಸಿ
ಲೋಕ ಮೂರರೊಳಗೆ ಸಾಕಾರನೆನಿಸಿದೆ
ಸಾಕುಮಾಡಿದೆ ಯದುಕುಲವನ್ನು ಒ
ನಕೆ ನೆವದಿಂದ ಲೋಕೇಶ ತಲೆದೂಗೆ
ಸಾಕಿದೆ ಭೂಮಿಯ ತೂಕಾ ಇಳುಹಿ ವೇಗ
ವಾಕು ಉದ್ಧವಗೆ ವಿವೇಕ ಮಾರ್ಗವ ಪೇಳಿ
ಈ ಕೃಷ್ಣಾವತಾರ ಸಾಕುಮಾಡಿ ಒಂ
ದು ಕಳೇವರ ಇಟ್ಟು ಈ ಕುಂಭಿಣಿಗೆ ತೋರಿ
ದಾ ಕಪಟನಾಟಕ ಶ್ರೀ ಕಾಂತ ತಾ
ಳಂಕ ತಮ್ಮ ವಿಜಯ ವಿಠ್ಠಲಾ
ಸೋಂಕಿದಾಕ್ಷಣ ತೊಂಡೆ ಭೂಕಾಂತವಾಗಿದೆ ೭

ಜತೆ

ಪಾರ್ಥಸಾರಥಿ ಕುರುವಂಶ ಘಾತಕನೆ ಮು
ಕ್ತಾರ್ಥ ಎನ್ನ ದೊರೆ ವಿಜಯ ವಿಠ್ಠಲರೇಯಾ ೮

೧೩೩

ಧ್ರುವತಾಳ

ಕೈಯ ಬಿಡದಿರೊ ಹರಿಕೈಟಭಾಸುರ ವೈರಿ
ಅಯ್ಯಾ ನಿನ್ನ ನಂಬಿದೆನೊ, ಎನಗೆ ಮುಂದೆನೊ
ಪರಿಕರವನು ತೋರೊ ಪತಿತರ ಸುರತರು
ಜಯಿಸಲಾರೆನು ಜನನವೆಂಬೋದು ಕಾನನ
ಲಯ ಮಾಡೊ ವಿಜಯ ವಿಠ್ಠಲರೇಯ ದಯದಿಂದ
ಮಯದುನಗೆ ಒಲಿದಂತೆ ಒಲಿದು ವೇಗದಲ್ಲಿ ೧

ಮಟ್ಟತಾಳ

ಆರನ ಮೊರೆಯೊಗಲಿ, ಆರಂಘ್ರಿಗೆರಗಲಿ
ಆರನ ಕಾಡಲಿ ಆರೆನಲ್ಲೊ
ಆರಲ್ಲಿಗೆ ಪೋಗೆ ಆರೆವೆಂದರೊ
ಆರೆನಗಿಲ್ಲ ವಿಜಯ ವಿಠ್ಠಲ ನೀನೆ ಗತಿಯೊ
ಆರೈದು ಸಲಹಯ್ಯಾ ಆರೊಂದು ಪುರದೊಳು ೨

ತ್ರಿವಿಡಿತಾಳ

ಚತುರದಶ ಭುವನಗಳಲ್ಲಿ ಚತುರಾತ್ಮಕ ನೀನೆಂದು
ಚತುರವಾರ್ತೆಯ ಕೇಳಿ ಚತುರದಲ್ಲಿ ನೆರದೆ
ಚತುರ ಸಿರಿ ವಿಜಯ ವಿಠ್ಠಲ ರಂಗರಾಯಾ
ಚತುರ ಮೂರುತಿಯೆ ಚತುರನ್ನ ಮಾಡೊ ೩

ಅಟ್ಟತಾಳ

ಕಾಸನಿತ್ತು ನೃಪನ ರಾಣಿವಾಸದವರ ಕೈಯ
ಮೀಸಲನ್ನ ಬಯಸಿದಂತೆ ಬಯಸಿದೇನಯ್ಯಾ ನಾನು
ದೊಷಕಾರಿಗದು ಆಯಾಸವಲ್ಲವೆ ದೇವ
ಲೇಸನೀವಲ್ಲಿ ನಿನಗೆಲ್ಲಿ ಸರಿಯಿಲ್ಲವೆಂದು
ದೇಶದೊಳಗೆ ಪೊಗಳುತಿದೆ ಈಸು ಮೂರುತಿಯನು ಬಿಟ್ಟು

ಆಶೆಯಲ್ಲಿ ನಾನು ಬಂದೆ
ಶ್ರೀ ಶ ವಿಜಯ ವಿಠ್ಠಲ ನಿಜ ದಾಸ
ದಾಸರ ಕೂಡ ಎಣಿಸುವುದು ಬಿಡದೆ ಎನ್ನನು ೪

ಆದಿತಾಳ

ನಾನು ನಿನ್ನನು ಮೆಚ್ಚಿಸುವೆನೆ ಏನಾದರಿನ್ನಾಗದಯ್ಯ
ನೀನೆ ದಯದಿಂದ ಸತ್ರಾಣನ್ನ ಮಾಡು ಮಾಡು
ಮಾನಸ ಧ್ಯಾನದಲ್ಲಿ ಜ್ಞಾನದೃಷ್ಟಿಯೊಳಗೆ ಪೊಳೆದು
ಆನಂದವಾರಿಧಿಯೊಳು ದೀನ ಮಾನವನ ಇಡು
ಶ್ರೀನಿವಾಸ ವಿಜಯ ವಿಠ್ಠಲ ನೀನೆ ಕರುಣಾಳು ಅಲ್ಲವೆ
ಭಾನುವಿಗೆ ಬಿಸಿಲಿನಿಂದ ಏನುಪಕಾರ ಪೇಳು ೫

ಜತೆ

ಎಂದೆಂದಿಗೆ ನಿನ್ನ ಪೊಂದಿದವನೊ ಪು–
ರಂದರಗೊಲಿದಂತೆ ಒಲಿಯೊ ವಿಜಯ ವಿಠ್ಠಲ ೬

೧೩೪

ಧ್ರುವತಾಳ

ಗೊಲ್ಲನಾದಕ್ಕಿದೇ ಗುಣಗಳ ತೋರಿದೆಯೋ
ಸಲ್ಲುವುದು ನಿನ್ನ ಕಪಟತನವೋ
ಬೆಲ್ಲಗಿಂತಧಿಕ ಮಾತುಗಳು ಕಾಣಿಸುತವೆ
ಪಳ್ಳಿಗಾಧಟಿ ಉಳಿಕಾರ ಕರುಣಾಸಿಂಧು
ಎಲ್ಲೆಲೊ ಎಲೋದೇವ ಒಂದಾದರು ಮಾತು
ಸಲ್ಲಿಸಿದ್ದು ಕಾಣೇ ಮನಸಿನಂತೇ
ಮೆಲ್ಲನೆ ಸ್ತುತಿಸಿ ಕೊಂಡಾಡಿದರೆ ನಿನ್ನ
ದಲ್ಲವೋ ಕೊಡುವ ಕೈ ಕಮಲನಾಭಾ
ಗುಲ್ಲು ಎಬ್ಬಿಸಿ ನಾನಾ ವಿಕಾರತನದಲ್ಲಿ

ನಿಲ್ಲದೆ ನೀನು ಕದ್ದು ಮೆದ್ದದ್ದೆಲ್ಲಾ
ಅಲ್ಲಿ ಅಲ್ಲಿಗೆ ದೂರಿ ರಚ್ಚೆಗಿಕ್ಕಾದಿರೆ
ಸಲ್ಲಾದೆ ಪೋಗುವೆನು ಗತಿ ಮಾರ್ಗಕ್ಕೆ
ಬಲ್ಲವರು ಪೋಗುವೆನು ಗತಿ ಮಾರ್ಗಕ್ಕೆ
ಎಲ್ಲಿ ಪೋಗಲು ಬದುಕಿಲ್ಲವೆಂದು
ಸೊಲ್ಲುಮರಿಯದೆ ಏನೊ ಗತಿಗಾಣದಿರೆ ಭೂಮಿ
ವಲ್ಲಭ ನೀನಲ್ಲೆ ನಿನಗಂಜೆನೋ
ಕಲ್ಲಿನ ಮುಂದೆ ತಂದು ಸುರುವಿದ ಬೋನವ
ಅಲ್ಲಿ ವ್ಯಾಪುತನಾಗಿ ಬಳಿದುಂಡಿಯೇ
ಹೊಲ್ಲೆ ಲೇಸುಗಳಿಲ್ಲ ಹೊರಗೊಳಗುಳ್ಳರೆ
ಎಲ್ಲಿದೆಲ್ಲೆದು ಕಾಣೆ ನಿನ್ನ ಲೀಲೆ
ಕಳ್ಳನಾಗಿ ಪೊಟ್ಟೆ ಪೊರೆದ ವಿಜಯ ವಿಠ್ಠಲ ಭಕ್ತವ
ತ್ಸಲ ನಂಬಿದೆ ಎನಗೇನೋ ೧

ಮಟ್ಟತಾಳ

ಅರಸು ನೀನಾದಡೆ ದೇವಕಿಯಲ್ಲಿ ಅವ
ತರಿಸಿ ಬಂದಾಗಲು ಆವ ರಾಜ್ಯವನಾಳಿ
ಅರಸ ಎನಿಸಿದ್ದು ಒಬ್ಬರ ವಾಕ್ಯದಲಿ
ಸ್ಮರಿಸಿದ್ದು ಕಾಣೆ ಆವಲ್ಲಿ ಚರಿಸಿದರೂ
ತರುಳತನದಲ್ಲಿ ಗೋಮಕ್ಕಳ ಕೂಡಿ
ನೆರೆದಾಡಿ ಲಜ್ಜೆ ಹೊರಿಸಿದರು ನಿನಗೇ
ಅರಿದುಕೋ ಮನದೊಳಗೆ ತರುವಾಯದಲಿ ಗೊ
ಲ್ಲರ ಪಾಲು ಮೊಸರು ಕದ್ದದ್ದಕ್ಕೆ ಸಾವಿರ ಬೈದರು ಕಾಣೊ
ಇರಳು ಹಗಲು ಚಿದಗುವ್ಯಾಪಾರದಲ್ಲಿ
ಸರಿ ಇಲ್ಲವೊ ನಿನಗೆ ಪೇಳಿದರೇನಹುದು
ನರನ ಬಂಡಿಯ ಹೊಡಿದೆ ಭೀಷ್ಮನ ವಂಚಿಸಿದೆ
ಗುರು ಕರ್ನ ಶಲ್ಯ ಮೊದಲಾದವರ
ಮರಣವ ಗೈಸಿದೆ ಮಹಾ ಕಪಟಾಟದಲ್ಲಿ

ದೊರೆತನವುಳ್ಳರೆ ಧರ್ಮರಾಯನಲ್ಲಿ
ಪರಿಚಾರನಾಗಿ ಇದ್ದದ್ದು ಆವ ಬಗೆ
ಶರಣ ನೀನಾಗಿ ಶ್ರೀ ರುಕ್ಮಿಣೀ ಸಹಿತ ಭೂ
ಸುರನ ರಥವನ್ನು ಎಳೆದದ್ದು ಏನಯ್ಯಾ
ಪರಿಪೂರ್ಣ ಮಹಿಮನೆನಿಸಿಕೊಂಡದ್ದೆಲ್ಲ
ಬರಿದೆಯೆಂಬೋದಾಗಿ ತೋರಿದೆ ಎನಗೆ
ತುರುಕರುಗಳ ಕಾಯ್ದು ವಿಜಯ ವಿಠ್ಠಲ ಕೃಷ್ಣ
ಮರಣವ ಮಾಡಿದೆ ಮೊಲೆಗೊಡ ಬಂದವಳ ೨

ತ್ರಿವಿಡಿತಾಳ

ಸಾಧು ಎತ್ತಿಗೆ ಎರಡು ಗೋಣಿ ಹೇರುವರೆಂಬೋ
ಗಾದಿಯಾಗಿದೆ ದೇವಾ ಎನ್ನ ಮಾತುರಕೆ
ಕ್ರೋಧದಲ್ಲಿ ಮುಳುಗಿ ಕಡೆಮಾಡೆಂದು ನಿನ್ನ
ಪಾದವ ನೆರೆನಂಬಿ ಇದ್ದವಗೇ
ನೀ ದಯಮಾಡದೆ ಮರಳೆ ಮರಳೆ ವೆಗ್ಗಳ
ಕ್ರೋಧವ ಪೆಚ್ಚಿಕೊಡುವದೇನೋ ಸ್ವಾಮೀ
ಕ್ಯಾದಿಗೆಯಲಿ ಸರ್ವ ಅವಗುಣಂಗಳು
ಇದ್ದರಾದರು ಅದರಲ್ಲಿ ಒಂದುತ್ತಮಾ
ವಾದ ವಾಸನೆಗುಣ ಇರತಕ್ಕದ್ದಾಗಿ ಸ
ರ್ವದಾ ಎಲ್ಲರಿಗೆ ಬೇಕಾದದ್ದಲ್ಲೆ
ಮಾಧವಾ ನಾನೊಬ್ಬ ಬಲುಪಾಪಿಯಾದರು
ಆದಿವಿಡಿದು ದತ್ತ ಸ್ವಾತಂತ್ರದಿ
ಮೇದಿನಿಯೊಳು ಪುಟ್ಟಿ ನಿನ್ನಿಂದ ಭಕುತಿ ಸಂ
ಪಾದಿಸಿಕೊಂಡು ಸ್ತುತಿಸುತಿಪ್ಪೆನೋ
ಆದದ್ದೆಲ್ಲಾಗಲಿ ಭಕುತಿವುಳ್ಳಾದರೆ ಅಪ
ರಾಧಗಳ ನೋಡದಲೇ ಕಾಯಬೇಕೊ
ಪ್ರಧಾನ ಭಕುತಿಯಿಲ್ಲದಲೇ ಮತ್ತೊಂದು ಬೇಕಾ
ದದ್ದು ಏನಯ್ಯಾ ಪರಿಪೂರ್ಣನೆ

ಸಾಧಾರಣದವನೆಂದು ಕೊಡಲಿ ವೇದಸ್ಮೃತಿಗಳಲ್ಲಿ
ಸಾರುತಿವೆ ಬೀದಿ ಬೀದಿಯೊಳು ಗೋಪಳ್ಳಿಯೊಳು ನಿನ್ನ
ಯಾದವ ಕುಲಕೆ ಕೀರ್ತಿಯನು ತಂದೆ
ಸಾಧುಜನ ಪ್ರಿಯ ವಿಜಯ ವಿಠ್ಠಲ ಕೃಷ್ಣ ೩

ಮಟ್ಟತಾಳ

ನೀನು ಮಾಡುವುದೇನೋ ನಾನು ನೋತದಲ್ಲದೆ
ಅನಂತ ದಿವಸಕ್ಕೆ ಮಾಣಿಸಲಾಪೆಯೋ
ಯೋನಿಗಳಲ್ಲಿ ಮಂದಾನು ಜನಿಸುವ
ಹೀನಯವನು ನೀನು ಕಾಣದೇ ಇರಲಾಪ್ಯ
ನಿನಗಂಜುವುದೇನೊ ಸಂಕಲ್ಪಕ್ಕೆ
ಕಾಣಿಯ ಏನಿತ್ತು ಕಡಿಮೆ ಎನಿಸಲಾಪ್ಯಾ
ಏನಿದ್ದ ಪರಿಮಿತ ತಾನೆ ಕ್ಲಪ್ತಿಯದೆ
ಹೇನಾಥ ನೀನೆಂದು ನಾನು ಕರೆವುದೇನೊ
ಹಾನಿವೃದ್ಧಿ ನಿನ್ನಧೀನವಾಗಿದೆ ಸತ್ಯ
ಮಾನವನೀಪರಿಯನು ಮಾಡುವರೆ
ನೀನರಸಾದಡೆ ಕಾಣಾ ಒಪ್ಪದು ಬಂಟ
ರನಾ ಸಾಕುವ ಭಾರ ಏನಾದರೇನಹುದು
ಶ್ರೀನಿಧಿ ಕೃಷ್ಣಾ ವಿಜಯ ವಿಠ್ಠಲ ಮೂರ್ತಿ
ನೀನಾಡಿದ ಕಡೆಯಿಂದ ಏನಾಡಿದರೇನು ೪

ಆದಿತಾಳ

ರವಿಗೆ ಅಂಗಯ್ಯ ಒಡ್ಡಿ ಅವನಿಯೆಲ್ಲ ಕವಳ
ಕವಿವುದೇನೊ ಮೂರು ಭುವನೇಶ ಭೂತಿವಂತ
ಎವೆ ಇಡೊ ಸ್ವಾತಂತ್ರದವನು ನಾನಲ್ಲವೋ
ಅವಗುಣನೆನೆಸಿ ಕೋಪವನು ನಾನಲ್ಲವೋ
ಸವಿಗಾರ ವೊಂದರೆದಿವಸವಾದರು ಲೇಶ ಭವಲೇಪವಾದರೆ
ಭವಣೆ ತಿಳಿಯಬಪ್ಪುದು ನವನವ ಬಗೆ ಮಹಿಮೆ
ಅವನಾಗಿ ಎಲ್ಲರಿಗೆ ಪವಿತುರನಾಗಿ ಅಂದವಮಾಡಿಕೊಳುತಲಿ

ಯುವತಿ ಸಮೇತದಲ್ಲಿದ್ದು ಅವರವರ ಕರ್ಮ ನಿಮಿ
ತ್ಯವ ಮಾಡಿ ನೀನು ಚಕ್ಕಂದವನಾಡಿ ನಗುವ ಕೇ
ಶವ ಮಾಯಾ ಮೊದಲೇ
ಸವೆಯದಗತಿ ದಾತಾ ವಿಜಯ ವಿಠ್ಠಲ ನಮ್ಮ
ಭವವಿಮೋಚನ ಭೇದವ ನುಡಿಸುವ ದೇವಾ ೫

ಜತೆ

ನಾಡದೈವದ ಗಂಡ ವಿಜಯ ವಿಠ್ಠಲ ನಿನ
ಗಾಡದವರೇ ಇಲ್ಲಾ ಎನ್ನ ಮನ್ನಿಸಿ ಕಾಯೋ ೬

೧೩೫

ಧ್ರುವತಾಳ

ತಡಿಯಾ ಕೊಡುವುದಿಂದು ಒಡೆಯಾ ಕರುಣದಲ್ಲಿ
ತಡವ ಮಾಡಿದರೆ ಬಲು ಅಪಕೀರ್ತಿಯು
ತಡಿಯಾದೆ ಬರುವುದು ಬಿಡದೆ ನಿನಗೆ ಇಂದು
ಬಡವರಾಧಾರಿ ಎಂಬೊ ನಿನ್ನ ಬಿರಿದು
ಪೊಡವಿಯೊಳು ತುಂಬಿದೆ ನಾನೊಬ್ಬ ಪೇಳಲಿಲ್ಲ
ಪೊಡ ಮಾಡುವೆನು ನಿನ್ನಯ ಚರಣಕ್ಕೆ
ಕಡೆಗಣ್ಣಿನಿಂದ ನಮ್ಮನ್ಯಾಕೆ ನೋಡುವೆ ಹೀಂಗೆ
ಅಡಗಾಣಿಸಿ ನಿಲ್ಲಸುವುದು ಧರ್ಮವಲ್ಲ
ಒಡವೆ ಬೇಡ ಬಂದಿದ್ದಿಲ್ಲ ಸ್ವಾಮಿ
ಒಡಲ ಉಮ್ಮಳಿಕೆಯಲ್ಲಿ ನಿರ್ದೋಷ ನಿನ್ನ
ಅಡಿಗಳ ನೋಡಿ ದೋಷವ ಪೋಗಾಡಿ
ಅಡಿಗಡಿಗೆ ಅಧಿಕವಾಗಿ ಎಂದೆಂದಿಗೆ ಸುಖ
ಬಡುವೆನೆ ಬಲು ಬಗೆಯಿಂದ ನಾನು
ಜಡಮತಿಯಾದರು ನೀನೆವೆ ಗತಿಯೆಂದು
ನಡೆದು ಬಂದಿರೆ ಈ ಪರಿಯಾಹುದೆ
ಕಡಗೋಲು ಪಿಡಿದ ಸಿರಿ ವಿಜಯ ವಿಠ್ಠಲ ಕೃಷ್ಣ
ಪಡುವಲಗಡಲವಾಸ ಯಾದವೇಶ ರಮೇಶ ೧

ಮಟ್ಟತಾಳ

ನಾರಾಯಣ ಕೃಷ್ಣ ನರಹರಿ ಗೋವಿಂದ
ವಾರಿಜನಯನ ಗುಣವಾರಿಧಿ ವಾಮನ್ನ
ಶೌರಿಮುರಾರಿ ಶ್ರೀ ಕರ ಮೂರುತಿ ರಾಮ
ಧಾರುಣೀಧರ ದಾನ್ನವಾರಿ ವಾಸುದೇವ
ಮಾರಜನಕನೆಂದು ಘೋರ ಪಾತಕನಾಗಿ
ಸಾರಿದರೆ ಬಿಡದೆ ಹೊರುವ ಭವರಾಶಿ
ಹಾರಿ ಪೋಗುತದೆಂದು ಸಾರಿಸಾರಿಗೆ ವೇದ
ಸಾರಿ ಪೇಳುತಿವೆ ಕಾರುಣ್ಯವನಧಿ ವಿಜಯ ವಿಠ್ಠಲ ಕೃಷ್ಣ
ಹಾರೈಸಿ ನಿನ್ನ ಸಾರೆ ಬಂದವನಿಗೆ
ಶಾರೀರಕೆ ಇನಿತೆ ಈ ಶಾರೀರಕೆ ಇನಿತೆ ೨

ತ್ರಿವಿಡಿತಾಳ

ಹಸಿದು ಬಂದು ನರನು ತುತ್ತನ್ನವ ಬೇಡೆ
ಬಿಸಿಲೊಳು ಒಯ್ದು ಕುಳ್ಳಿರಿಸಿದಂತಾಯಿತು ದೇವ
ವಸುಧಿಯೊಳಗೆ ಮಿಕ್ಕ ಕ್ಷೇತ್ರಗಳಲ್ಲೆ ಅ
ರ್ಚಿಸುವರು ಅನುದಿನ ಹರಿ ಗುರುಗಳ
ದ್ವಿಷಗಳಿಲ್ಲಾದಿಲ್ಲವೆಂಬೋದೆ ತಿಳಿದು ನೀ
ಕ್ಷಿಸಿದದಕೆ ನೀನೊಲಿದು ಕೃಪೆ ಮಾಡಿದೆ
ಪೆಸರಾದೆ ರಜತ ಪೀಠಪುರಸ್ಥಾನವೊ
ಶ್ವಸನ ದೇವನೆ ಮಧ್ವಮುನಿಯಾಗಿ ನಿನ್ನ ಪೂ
ಜಿಸಿದನೆಂಬೊ ಮಹಾಖ್ಯಾತಿ ಕೇಳಿ
ಬೆಸನೆ ನಿನ್ನಂಘ್ರಿಯಾ ಹರುಷದಿಂದಲಿ ದ
ರುಶನವ ಮಾಡುವೆನೆಂದು ಬಂದಾದಿನಿತು
ಹಸನಾದ ಪ್ರಯಾಣ ಸಾಗಗೊಡದಂತೆ ಸು
ತ್ತಿಸುವುದು ನಿನಗೆ ವಿಹಿತವಲ್ಲವೊ
ವಸುದೇವಸುತ ಕೃಷ್ಣ ವಿಜಯ ವಿಠ್ಠಲನೆ ವಂ
ಚಿಸದಲೆ ಎನ್ನ ಮನೋಭೀಷ್ಟವನ್ನೀಯೊ ೩

ಅಟ್ಟತಾಳ

ಬಲು ಜನ್ಮದ ಭವರೋಗ ಕಳೆವನಿಗೆ
ಹಲು ರೋಗ ಕಳೆವುದು ಸೋಜಿಗೆ ನಿನಗಲ್ಲ
ಎಲೊ ದೇವ ಎನ್ನಯ ಕರ್ಮವೀಪರಿಯಿರೆ
ಫಲ ಅನುಭವಿಸದೆ ಬಿಡದೆಂಬುದು ನೀನೆ
ತಿಳಿದು ಸ್ವಲ್ಪದ ಮ್ಯಾಲೆ ಪರಿಹರಿಸುವೆನೆಂದು
ಗೆಳೆಯನಾಗಿ ಸಂಗಡವಾಗಿ ಇಪ್ಪ ನಿ–
ಶ್ಚಲ ಕೋಮಲಕಾಯ ಬಳಲಿಸದೆ ಇನ್ನು ಬಂದ ರೋಗವ ಅ
ಟ್ಟುಳಿ ಮಾಡದಂತೆನ್ನ ಪ್ರತಿಪಾಲಿಸಿ ದಿನ
ಕಳೆಯದಂತೆ ನಿನ್ನ ದರುಶನಕೆ ಸಾ
ಗಲಿ ಪ್ರಯಾಣಂಗಳು ಪರಮ ವಿನೋದನೆ
ಸುಲಭ ಮೂರುತಿ ಕೃಷ್ಣ ವಿಜಯವಿಠಲ ನಿನ್ನ
ಬಲವಾದ ಮ್ಯಾಲೆ ಅನ್ಯರ ಬಲವೇನೊ ೪

ಆದಿತಾಳ

ಸ್ತೋತ್ರ ಮಾಡಬಲ್ಲೆನೆ ಚಿತ್ರ ಚಾರಿತ್ರ ಮಹಿಮನೆ
ಸೂತ್ರಧಾರಕ ಶಾಮಗಾತ್ರ ಗಂಗಾಜನಕ
ಮಿತ್ರ ನೀನಾದರಿಷ್ಟ ಮಾತ್ರವೆ ಬೇಡು ಸ
ರ್ವತ್ರರಿಗೆ ನಿನ್ನ ಕ್ಷೇತ್ರ ಮೆಟ್ಟಿಸಿ ಪ–
ವಿತ್ರರನ್ನ ಮಾಡುವುದು ಛತ್ರದಂತೆ ಒಲಿದು
ಯಾತ್ರಿ ನಾಮಕ ಕೃಷ್ಣ ವಿಜಯ ವಿಠ್ಠಲ ಕಾ
ಲತ್ರಯನೆ ನಮಿಪೆ ಸುತ್ಪುತ್ರರ ಗುರುವೆ ೫

ಜತೆ

ಇದರಿಂದ ನಿನಗೆ ನಿನ್ನಾಳಿಗೆ ಬಲುಕೀರ್ತಿ
ಒದಗಿ ಬರುತಲಿದೆ ವಿಜಯ ವಿಠ್ಠಲ ಕಾಯೊ ೬

೧೩೬

ಝಂಪೆತಾಳ

ನವ ರತುನದಿಂದಲೆಸೆವ ಮುಕುಟದೊಳಗೊಂದು
ರವಿಯ ಹರಳಿನ ಕಾಂತಿ ಪೇಳಲಳವಲ್ಲ
ಭುವನ ಪಾತಾಳ ಗಗನವನು ಭೇದಿಸಿಕೊಂಡು
ಛವಿಕವಿದು ಮುಸುಕಿದುದು ಕವಿಗಳೆಣಿಸಲೋಶವೇ
ದಿವಿಜಜೇಷ್ಟನು ಪವನ ದಿವಿಜ ಪವನಾಶನ
ಶಿವ ವೃದ್ಧ ಶ್ರವನಗ್ನಿ ಜವನಸುರ ವೈಶ್ರವಣ
ದಿವಿಜ ರವಿಯಾದಿಗಳ ಅವಯವಾದಿಗಳಾಭರಣ
ಛವಿಗೆ ಅಪಾರ ಪ್ರಭೆ ಥಳಥಳಿಸೆ
ಎವೆದೆಗಿಯಾದತಿ ಸೂಜಿಗವನು ಪೊಂದಿ ನಿಂದರು
ಕವಿನಾಮ ವಿಜಯ ವಿಠ್ಠಲ ನಿನ್ನ ಸಿರಿಧೊರೆ
ಅವನಿಯೊಳಗಿಲ್ಲದಿರೆ ಈ ಪರಿ ರೂಪವನ್ನು
ತವಪಾದಕೆ ನಮೋ ನಮೋ ಮಾಯಾ ಲೀಲಾ ೧

ಮಟ್ಟತಾಳ

ಪ್ರಳಯಾದಲಳುವಿಲ್ಲಾ ಚಳಿಬಿಸಿಲು ಇಲ್ಲಾ
ಮಳಿಗಾಳಿ ಇಲ್ಲಾ ತಳಲಿದ ವನಗಳು
ಫಲಪುಷ್ಪದಲಿ ಮೀಸಲು ಗುಂದದಲೇವೆ
ಕಳೆ ಕಾಂತಿಗಳಿಂದ ಥಳ ಥಳ ಪೊಳೆವಂಥ
ಹೊಳಲಾದಾ ವೈಕುಂಠ ನೆಲೆಯವನು ತೊರೆದು
ಇಳಿಯೊಳು ಬಂದು ಗೋಕುಲದಲ್ಲಿ ಜನಿಸಿ ಗೋ
ವಳನಾದದೇನು ವಿಜಯ ವಿಠ್ಠಲ ನಿನ್ನ
ನೆಲೆ ತಿಳಿಯದೆಂದು ಬಳಲುವರು ಸುರರು ೨

ತ್ರಿವಿಡಿತಾಳ

ಮುಕುತಾ ವನದಲಿ ಮುಕುತ ಶುಕ ಹಂಸೆ
ಪಿಕ ಭೃಂಗ ನಾನಾ ಪಕ್ಷಿಗಳಾ
ನಿಕರ ಕಿಲಿ ಕಿಲಿ ಶಬ್ದ ಸದಾ ಮುಕುಳಿದ ನಗೆಯಲ್ಲಿ
ಕಕ ಕಕ ಕಾಯೆಂದು ಝೇಂಕರಿಸುತಿರೇ
ಮುಕುತಾಮುಕುತ ಬೊಮ್ಮರ
ಭಕುತಿರಸದಿಂದ ಹಸ್ತಕರಾಗಿ ನಿಂದು ಭ್ರಾ
ಮಕರಾಗಿ ತುತಿಸೆ ವಿಕಸಿತ ಕಮಲಾ
ಬಕದ ಕೊನೆಯಿಂದ ಮುಕುತಾ
ಮುಕುತರನ್ನು ನೋಡುವ ದೇವಾ
ಅಕಳಂಕನಾಗಿ ಇದೇ ಗೋಕುಲದಿ ಜನಿಸೇ
ಸಕಲ ಗೋಮಕ್ಕಳ ಕೈಯ್ಯ ಬೈಸಿಕೊಂಡದ್ದೇನೊ
ಅಖಿಲ ಜೀವಕೆ ಭಿನ್ನ ಶಾಶ್ವತ ವಿಜಯ ವಿಠ್ಠಲ
ಸುಖಸಾಂದ್ರ ನಿನ್ನ ಮಕ್ಕಳಾಟಿಕೆ ಸೋಜಿಗವೋ ೩

ಅಟ್ಟತಾಳ

ಮೀಸಲಾಭರಣ ಭೂಷಣ ನಾನಾ
ಲೇಸಾದ ಪುಷ್ಪದ ಮಾಸದ ಮಾಲಿಕೆ
ಭಾಸಿತ ಪೀತ ವಸನ ಶೋಭಿಸುತಿರೆ
ಏಸು ಶಿಂಗಾರ ಬಿಟ್ಟು ಗೋಸಂಕುಲ ಕಾಯ್ದು
ವೇಷಧಾರಕನಾಗಿ ಕೀಸಲಯದ ಬಳ್ಳಿ
ನೀಸುತ್ತಿ ಶಿರಕೆ ಮಾನೀಸನಾಗಿ ಜೀವ
ರಾಸಿ ಕೊಡಾಡಿದೆ ಕೇಶವ ವಿಜಯ ವಿಠ್ಠಲ ನಿನ್ನಲೀಲೆಯ
ಏಸೇಸು ದಿನಕೆ ಎಣಿಸಲು ಮಿತಿಯುಂಟೇ ೪

ಆದಿತಾಳ

ಜಗತ್ತಿನೊಳಗೆ ಇದ್ದ ಗುಣಕೆ
ಮಿಗಲಯ್ಯ ನಿನ್ನ ಗುಣಗಳು
ಅಗಣಿತ ರಾಶಿಗಳು ಬಗೆಬಗೆಯಿಂದ ಇರಲು

ಮಗುವಿಗೆ ಎಲ್ಲಾರೊಳು ಹಗಲಿರಳು ನಗೆಯಿಂದ
ಹಗರಣವಾದಾನೆಂಬೊ ಜಗದೊಳಗಾಶ್ಚರ್ಯವೇನೋ
ಖಗಗಮನಾ ವಿಶ್ವಾತ್ಮ ವಿಜಯ ವಿಠ್ಠಲ ನಿನ್ನಾ
ವಿಗಡ ನಾಟಕಕ್ಕೆ ಕೈಮುಗಿದು ಶರಣೆಂಬೆ ೫

ಜತೆ

ಅಪ್ರಾಕೃತನಾಗಿ ಪ್ರಾಕೃತದಲಿ ಮೆರೆದೆ
ಅಪ್ರಮೇಯ ನಾಮಾ ವಿಜಯ ವಿಠ್ಠಲ ಆನಾದಿ ೬

೧೩೭

ಧ್ರುವತಾಳ

ನೀ ಕಾಯದಿರೆ ಎನ್ನ ಕಾಯುವರಾರೋ ಕೃಷ್ಣ
ಬೇಕೋ ನೀನೆ ಕಾಯಬೇಕೊ ಕಾಮಧೇನು
ವಾಕು ಲಾಲಿಸೊ ಲಾವಕರ ತೊಲಗಿಸೊ
ನೂಕು ಭವಾಂಬುಧಿ ಈಯೊ ಸುಗುಣ ಬುದ್ದಿ
ಯಾಕಯ್ಯಾ ಯಾಕಯ್ಯ ನೀ ಕೈಯ ಬಿಡುವುದು
ಸಾಕುವ ಬರಿದು ಈ ಲೋಕ ಲೋಕದೊಳು
ರಾಕಾಬ್ಜವದನ ಪಿನಾಕಿವಂದಿತ ಪಾದನೆ
ಏಕಾತ್ಮ ವಿಜಯ ವಿಗ್ರಹನೆ, ಒಲಿದು ಎನ್ನ
ನೀ ಕಾಯೊ ನಿನ್ನಯ ಸೇವಕನಿವನೆಂದು
ಈ ಕಾಲಕೆ ನಿಜಕರ ಮುಗಿದು ಬೇಡಿಕೊಂಬೆನು ದೇವ
ಕೋಕಿಲಾವಳಿಯೊಳು ಕಾಕ ಇದ್ದಂತೆ, ವಿ–
ವೇಕ ರಹಿತ ನಾನು ಕೇಳೊ ದೇವಾ–
ನೇಕ ಮೂರುತಿ ವಿಜಯ ವಿಠ್ಠಲರೇಯ ನಿ–
ಜಾಕಾರ ಪುರುಷ ನೀ ಸೋಕಲು ಪರುಶ ೧

ಮಟ್ಟತಾಳ

ನೆನೆದು ನೆನೆದು ಅನ್ಯ ನೆನವಿಲಿ ಈತನು
ನೆನೆನೆದು, ನಿನ್ನ ನೆನವಿಗೆ ನಾ ಉದಾಸೀನವನ್ನು ಮಾಡಿ
ಬಿನಗು ಮನುಜನಾದೆ ಅನಯ ವಿಜಯ ವಿಠ್ಠಲನು
ಅನಿಮಿತ್ತ ಬಂಧು ೨

ರೂಪಕತಾಳ

ಕಲ್ಲು ನೀರೊಳು ಹಾಕಿ ನಿಲ್ಲೋಡೆ ಮಧ್ಯದಿ
ಎಲ್ಲೆ ಮಾತು ಇಂತೆಲ್ಲ ಪೇಳುವರಾರು
ಫುಲ್ಲ ಲೋಚನ ನಿನ್ನಲ್ಲಿ ಸೇರಿದ ಮೇಲೆ
ಕಲ್ಲು ಮಾನವ ನಾನಲ್ಲವೊ ಅಲ್ಲವೊ
ಅಲ್ಲಕೆದೆ ಅಲ್ಲಲಿತವಾದ ಪಲ್ಲವಾರುಣ ಪಾದ
ಮೆಲ್ಲನೆ ತೋರಿಸಿ ಎಲ್ಲ ಕಾಲದಲ್ಲಿ
ಬಲ್ಲಿದ ವಿಜಯ ವಿಠ್ಠಲ ವಿಶ್ವ ಮೂರುತಿ
ಎಲ್ಲಾರೊಡೆಯ ಶ್ರೀ ವಲ್ಲಭ ಕಾಯೊ ೪

ತ್ರಿವಿಡಿತಾಳ

ಹಾಗ ಕಾಸೂವೀಸ ಹಂಚಿಕೊಡು ಎಂದು
ಭಾಗದೇಯನಾಗಿ ನಾ ಬೇಡಲಿಲ್ಲ
ಕೂಗಿ ಬೆಟ್ಟಕ್ಕೆ ಪಿರಿದಾಗಿ ಸೌಭಾಗ್ಯ ಬೇಡಿ
ಪೋಗಗೊಡದೆ ನಿನ್ನ ತಡಿಯಾಲಿಲ್ಲ
ಬಾಗಿ ಬೇಡಿದೆನೊ ದೃಢವುಳ್ಳ ಭಕ್ತರ ಮನೆಯ
ಬಾಗಿಲು ಕಾಯುವಂಥ ಸೇವೆಯನ್ನು
ಯೋಗಿ ಹೃದಯ ಸಂಯೋಗ ವಿಜಯ ವಿಠ್ಠಲ
ನೀ ಗರುವಿಸಿದರೆ ರೇಗದೆ ಒಡಲೊಳು ೪

ಝಂಪಿತಾಳ

ಆರಿಗಾಲವರಿಲಿ ಆರನಾಶ್ರೈಸಲಿ
ಆರಿಗಂಜಲಿ ಮತ್ತಾರಿಗಡಗಲಿ

ಆರಳಾ ಸೇರಿ ಆರಿಗೆ ದುಡಿಯಲಿ
ಆರನಪ್ಪಾ ಎಂದು ಹಾರೈಸಲಿ
ಆರಿಗಿನ್ನಳುಕಲಿ ಆರೋಷವಾಗಿ ಆರಾ ಕೇಳಲಿ
ಆರನರ್ಚಿಸಲಿ ಆರುವಾರು ಎನಗೆ ವಿಜಯ ವಿಠ್ಠಲ ಹರಿ
ಆರನಾದರು ಕಾಯಲಾರೆ ನಾನಾರೆನೊ ೫

ಅಟ್ಟತಾಳ

ಊರದೇವತೆಗಳನಾರಾಧಿಸಲು ನಿತ್ಯ
ನೀರೊಳು ಯಜ್ಞವ ಮಾಡಿದ ತೆರನಂತೆ
ಆರನೆ ಪೊಂದದೆ ಹಾರಿ ಹೋಗುವದಯ್ಯಾ
ನೀರಡಿಸಿ ತೆವರಾನು ತೋಡಿದಂತೆ
ಪೂರಣವಾದದು ವಿಜಯ ವಿಠ್ಠಲ ವಿ–
ಸ್ತಾರ ಮಹಿಮನೆಂದು ಸಾರಿದೆ ಕೂಗಿದೆ
ಕಾರುಣ್ಯವನೆ ಮಾಡು ಕರುಣದಿಂದಲಿ ನೋಡು ೬

ಆದಿತಾಳ

ಧೂಪ ದೀಪದಿಂದ ಇನ್ನು ಬೇಡಿಕೊಂಡವನಲ್ಲ
ಅಪ್ಪ ಅಪ್ಪ ಎಂದು ನಿನ್ನ ಬಲಿಸಿಕೊಂಡವನಲ್ಲ
ಪಾಪವೆಂಬೊರಳಿನಲ್ಲಿ ಅಪಸಾಪ ಬೀಳದೇನೆ
ಶ್ರೀ ಪತಿಯೇ ನಿನ್ನ ನಾಮ ಲೇಪಿಸೆನ್ನ ನಾಲಿಗಿಯಲಿ
ನೀ ಪರಮ ಪ್ರೀತಿಯಲಿಹಾಕುನೆವೆನೆ ಎರಡು
ಪೋಪಗಳಾದ ಹೀನ ಸ್ವರೂಪ ಉದ್ಧಾರವ ಮಾಡೊ
ಗೋಪತಿಯೆ ವಿಜಯ ವಿಠ್ಠಲ
ನೀ ಪಾಲಿಸಯ್ಯಾ ಬಿಡದೆ ೭

ಜತೆ

ಬಡವರ ಮನೆಯಲ್ಲಿ ಒಡೆಯತನಕಿಂತ
ಬಡಿವಾರೊಂದೆ ಸಾಕು ವಿಜಯ ವಿಠ್ಠಲನೆಂಬೊ ೮

೧೩೮

ಧ್ರುವತಾಳ

ಬಿನ್ನಪ ಲಾಲಿಸಯ್ಯಾ ಭಕುತ ವತ್ಸಲದೇವ
ನಿನ್ನ ಸುರತರು ಪಾವನ್ನ ನೆಳಲು
ಚೆನ್ನಾಗಿ ನಂಬಿದವನೋ ಚನ್ನಿಗ ಗೋವಳೇಶ
ಅನ್ನಾಥ ಬಂಧುವೆಂಬೊ ಘನ್ನದೆಂತೋ ಘನ್ನ ನಿನ್ನದು
ಗಣ್ಯವಿಲ್ಲದೆ ತ್ರಿಭುವನ್ನದೊಳು ತುಂಬಿದೆ
ಎನ್ನ ಪ್ರಾಣದೊಡಿಯಾ ಪನ್ನಗಶಯ್ಯ
ಅನ್ಯಾಯವಾಗಗೊಡದೆ ಮನ್ನಿಸಿ ನಿನ್ನ ಅಮೃ
ತಾನ್ನ ಇತ್ತ ಕೈಯಿಂದ ಅಭಯಾಕೊಟ್ಟು
ಬೆನ್ನು ಕಾಯಲಿಬೇಕು ಬೀಸಿ ಬಿಸಾಟದಲೆ
ಅನ್ನಂತ ಕರ್ಮದಾಧಾರ ಧೀರ
ಹುಣ್ಣಿಗೆ ಕ್ರಿಮಿ ಹತ್ತಿದಂತೆ ಅವನ ರೋಗ
ಬನ್ನಾ ಬಡಿಸುತಿದೆ ಬಲು ಬಗೆಯಲ್ಲಿ
ಮುನ್ನೆ ಆಯಿತಾ ಕರುಣಾರಸ ಪೂರ್ಣಭ್ಯಾಂ ಲೋ-
ಚನ್ನ ದಿಂದಲಿ ನೋಡು ಭವವಿದೂರ
ನಿನ್ನ ನಾಮ ನೆನೆಸಲು ಘನ್ನ ರೋಗಗಳೆಲ್ಲ
ಛಿನ್ನವಾಗಿ ಪೋಗೋವು ಮಹಶಕ್ತನೆ
ಬೆಣ್ಣೆಯೊಳಗಿನ ಕೂದಲು ತೆಗೆದಂತೆ
ಸಣ್ಣವನ ಕ್ಲೇಶ ಕಡಿಗೆ ಮಾಡು
ಅನ್ನುಮಾನ ಸಲ್ಲ ಅಸಾಧ್ಯವೆನ್ನದೆ ಪ್ರ
ಸನ್ನ ವದನನಾಗು ಸಮ್ಮಂಧಿಗಾ
ಅನ್ಯರ ಸೇವಿಸುವೆನೆ ತಿಳಿದ ಮಾತಿಗೆ ಸಂ-
ಪನ್ನ ಮೂರುತಿ ಪ್ರಪನ್ನ ಪಾಲಾ
ಚಿನ್ಮಯವಿಗ್ರಹ ವಿಜಯ ವಿಠ್ಠಲರೇಯ
ಅನ್ನಾ ಕೊಡುವಲ್ಲಿ ಕಡಿಮೆ ನಿನ್ನಾಗುಂಟೆ ೧

ಮಟ್ಟತಾಳ

ಪರದೈವವೆ ನೀನೆ ಭುವನ ಜೀವನ ಪರಮ
ಗುರುವಾದರೆ ಎನ್ನ ನುಡಿಗಳು ನಿಲಲೆಂದು
ಶರಣನ ಗೋಸುಗ ಮುಂಡಿಗೆ ಹಾಕಿದರು
ಹರಿಯೆ ಕೇಳುವುದೆನ್ನ ಮನಸಿನ ಹಾರ್ದವ
ದುರುಳ ಜನಕೆ ಬಲು ವಿಶ್ವಾಸವ ತೋರಿ
ಸರ್ವೋತ್ತಮವೆಂಬೊ ಬಿರಿದು ಧರೆಯೊಳಗೆ
ಹಿರಿದಾಗಿ ಪೊಗಳಿ ಹಿಗ್ಗುವ ಬಗೆಯಿಂದ
ಕರಣ ಶುದ್ಧಿಯಲಿ ಪೇಳಿದೆನಲ್ಲದೆ
ಹರಿದೈವವಲ್ಲ ಸೂತ್ರನಾಮಕ ವಾಯು
ಗುರುವಲ್ಲವೆಂದು ದೂರಿದವನಿವನಲ್ಲ
ದುರಿತ ಕಾಡುತಿರೆ ಸಲಿಗೆಯಿಂದಲಿ ಬಂದು
ಎರಗಿದ ಕಾಲವನ್ನು ನೋಡಿ ಸ್ತುತಿಸಿದೆನೋ
ಮರಣರಹಿತ ನಮ್ಮ ವಿಜಯ ವಿಠ್ಠಲರೇಯ
ಕಿರಿಯನ ಭಾರ ಪೂರ್ಣವಾಗಿ ವಹಿಸು ೨

ತ್ರಿವಿಡಿತಾಳ

ಇವನಿಂದ ಎನಗೇನು ಉದ್ಧಾರವಾಗುವ
ಹವಣು ಉಂಟೆಂದು ನಿನ್ನ ಪಾದಕ್ಕೆ
ವಿವರಿಸಲಿಲ್ಲಯ್ಯಾ ಮತ್ತೊಂದು ಪರಿವುಂಟು
ತವಕದಿಂದಲಿ ಕೇಳು ಕರುಣದಿಂದ
ಅವನಿಯೊಳಗೆ ಮಧ್ವಮತದಲ್ಲಿ ಬಂದು ಉ-
ದ್ಭವನಾದ ಕಾರಣ ಬಹಳ ಕಾಲ
ತವಪಾದಾರ್ಚನೆ ಸೇವೆ ಸ್ಮರಣೆ ಕೀರ್ತನೆ ಮಹ
ಶ್ರವಣಾದಿಗಳು ಮಾಡಿಕೊಂಡ ಅವನು
ದಿವಸ ಸಾರ್ಥಕ ಮಾಡಿಕೊಂಡದರಿಂದಲಿ
ಲವಪುಣ್ಯವಾದರೂ ಬರುವುದಯ್ಯಾ
ವಿವಿಧವಾದರೆ ಲೇಸು ಇಲ್ಲದಿದ್ದರೆ ದೊಡ್ಡ
ಕವಿಗಳ ಮಹಿಮೆಯಾದಿನದೊಳೊಮ್ಮೆ

ಅವನ ಶ್ರವಣಕ್ಕೆ ಬಿದ್ದ ಕಾರಣದಿಂದ
ಪವಿತುರನಾಗುವ ಭವ ಪೊಗಾಡಿ
ಅವನಿಮ್ಯಾಲೆ ಬದುಕಿ ಈ ಪರಿ ಸಾಧನ
ಅವಗುಣನಾದರು ಮಾಡಿಕೊಳಲಿ
ಜವನದೂತರನೊದೆವ ವಿಜಯ ವಿಠ್ಠಲರೇಯ
ಜವಗೆಡಿಸದಿರು ಜತನವ ಮಾಡಯ್ಯ ೩

ಅಟ್ಟತಾಳ

ಲೇಸುಕೊಡು ಸರ್ವ ಔಷಧಿಪತಿಯೆ
ದೇಶದೊಳಗೆ ನಿನ್ನ ದಾಸರು ಕೊಟ್ಟ
ಭಾಷೆ ತಪ್ಪದೆಂದು ಸೂಸುತಿದೆ ಮಾತು
ಕೇಶವ ನೀನಿತ್ತ ಭಾಷೆ ತಪ್ಪುವುದೇನೊ
ವಾಸುದೇವ ಕೃಷ್ಣ ವಿಜಯ ವಿಠ್ಠಲರೇಯ
ನೀ ಸಲಹದಿರೆ ಪ್ರತಿದಾತರ ಕಾಣೆ ೪

ಆದಿತಾಳ

ಪ್ರತಿಕೂಲವುಂಟೆ ನಿನ್ನ ಕರುಣಕಟಾಕ್ಷಕ್ಕೆ
ಗತಿ ನೀನೆ ಗತಿ ನೀನೆ ದೇಹಾನುಬಂಧಿಗಳಿಗೆ
ಮೃತವಾದ ಗುರುಸುತನ ಹಿತವಾಗಿ ತಂದು ಇತ್ತೆ
ಖತಿಗೊಳಿಸುವ ರೋಗ ಕಳೆವದಾಶ್ಚರ್ಯವಲ್ಲ
ಸಥೆಯಿಂದಲಿ ಬಿನ್ನೈಸಿದೆ ಯಾತಕ್ಕೆ ಆಲಸ್ಯ
ಲತೆ ಪಲ್ಲೈಸುವ ಬಗೆ ಮಾಡೊ ಪ್ರೀತಿಯಲಿ
ಪತಿತಪಾವನ ರಂಗ ವಿಜಯ ವಿಠ್ಠಲರೇಯ
ನೃತ ಮಾಡು ವೇಗ ಈ ಕೃತಿಯ ಸಿದ್ಧನೆನಿಸಿ ೫

ಜತೆ

ಬಲವಂತನ ಬಳಿಯಲಿದ್ದ ಮಾನವರ
ಕುಲಕೆ ಬಳಲಿಕೆ ಇಲ್ಲ ವಿಜಯ ವಿಠ್ಠಲರೇಯ ೬

೧೩೬

ಧ್ರುವತಾಳ

ಬೆಳಗಪ್ಪಾ ಝಾವದಲಿ ಮಲಗಿ ಮಲಗದಂತೆ
ಪೊಳಲು ಪೊರಮಟ್ಟು ಪೋಗನ್ಯಪೋರರಾ
ಬಳಗವ ಒಡಗೊಂಡು ಬಳಿ ವಿಡಿದು ಉಟ್ಟ
ತಳಲ್ಲರಿ ಪೊಂಬಟ್ಟೆ ಧಟ್ಟಿ ಬಿಗಿದು
ಗೆಳೆಯರ ಕೂಡಿ ಕೂಗದೆ ಮೆಲ್ಲಮೆಲ್ಲನೆ
ಝಳಿವೆಂದು ಹೆಜ್ಜೆಯ ಇಡದೆ ಸಾಗುತ್ತಾ
ಕಳವು ಮಾಡುವುದಕ್ಕೆ ಕಧವ ನೂಕಿ ಗೋಪ
ಬಾಲಿಯರು ಮಲಗಿರೆ ಕುಚವ ತಟ್ಟೀ
ಕಳಲುಮಜ್ಜಿಗೆ ಹಾಲುಮೊಸರು ಬೆಣ್ಣೆ ತುಪ್ಪ
ನೆಲವಿಗೆ ಹಾಕಿದ ಬಲಿಯ ಹರಿದೊ
ನೆಳಲು ಬೀಳದಂತೆ ಸುಳಿ ಸುಳಿದಾಡಿ ಕೈ
ತಳದಿಂದ ಸುರಿದು ಎಲ್ಲವರಿಗಿತ್ತು
ಕೆಲವು ಚಲ್ಲಿ ಕೆಲವು ಹಾರಿಸಿ ಕೆಲವು ಓ
ಕಳಿಯಾಡಿ ಕೆಲವು ಉಳಿಹಿ ಉಗಳೀ
ಒಳಮೂಲೇ ಹೊರಾಂಗಣ ಏಕಾಕಾರವಾಗಿ
ಕಲೆಸಿದ ಕೆಸರಂತೆ ಒಪ್ಪುತಿರೇ
ತುಳಿದು ಇಂತು ಗಲಭೆ ಮಾಡಲು ಗೊಲ್ಲ
ಲಲನೇರು ಎಚ್ಚತ್ತು ಕಳವಳಿಸೇ
ಮಲದೂರ ವಿಜಯ ವಿಠ್ಠಲರೇಯನ ಲೀಲೆ
ಹೊಲಬುಗೊಂಡವನಾರು ಸುರರು ತೊಳಲುತಿರೆ ೧

ಮಟ್ಟತಾಳ

ಬೆಳಕು ಮರೆಯಲ್ಲಿಟ್ಟು ಕಿಲಕಿಲನೆ ಗೋ
ಕುಲನಾಥ ನಗುತ ಚಲವಗಂಗಳ ಹೆಂ
ಗಳಿಯರ ನೋಡಿ ಚಪ್ಪಾಳಿಯನ್ನೆ ಹೊಯ್ದು
ಹಲಬರ ಮೇಲೆ ತೊಂಬಲ ರಸವನೇ ಉಗುಳಿ

ಹಲಬರ ವಸನಗಳ ಸೆಳದು ಬೀದಿಗೆ ಬಿಸುಟು
ನಳಿ ತೋಳಿಲಿ ಅಪ್ಪಿ ಕಲೆಗಳ ಸಂತೈಸೀ
ಕಲ ಕಲವೆಬ್ಬಿಸಿ ಬಾಗಿಲ ಪೊರಟ ಚೋರ
ಕಲಿಭಂಜನ ನಮ್ಮ ವಿಜಯ ವಿಠ್ಠಲರೇಯಾ
ಕೆಲದಾಡಿದನು ಗೋವಳೆಯರ ಕೂಡ ೨

ತ್ರಿವಿಡಿತಾಳ

ಗುಲಗಂಜಿ ಗುಪ್ಪೆಂದೆ ಬಿಲ್ಲೆ ಹರಳುಬಿಲ್ಲು
ಜಿಲಿಬಿಲ್ಲಿ ಜಿಂಕೆ ಭೋಗರಿ ಚಂಡು ಚಕ್ರಾ
ಸುಳಿದಾಟ ಚಿಣಿಕೋಲು ಕುಣಿಗಾಳು ತುರಗಾಟ
ಶಳೆಗೋಲು ಜತೆಲಗ್ಗೆ ಕೊಂಬು ತುತ್ತೂರಿ ನಾದಾ
ಮಳಲುಕುಪ್ಪೆ ಗುಬ್ಬಿಮನೆ ಕಣ್ಣು ಮುಚ್ಚಣಿಕೆ
ಬೆಳದಿಂಗಳ ಕುಪ್ಪೆ ಉಯ್ಯಾಲೆ ಜೋ ಜೋ
ಅಳವಾಳ ಗೊಟ್ಟಿಗೆ ಅಟ್ಟಿಗೆ ಮುಟ್ಟಿಗೆ ಚ
ಕ್ಕಳ ಗುಕ್ಕಳ ಗೋಲಿ ತೇವು ಅಪ್ಪಚ್ಚಿಯು
ತಲೆ ಡಿಕ್ಕಿ ಆನೆ ಏಕಾಂತ ಒಗೆವ ಕಲ್ಲು
ಹುಲಿಕಟ್ಟು ಹುಡಗಾಟ ಗೊಟ್ಟಗುಣಿ ಹರಿಕಳ್ಳ
ಬೆಳಸುರಾಸಿ ಅರಸು ಪ್ರಧಾನಿ ಪರಿವಾರ
ಫಲ ಸರಕು ಮಾರುವ ಬೀದಿ ಅಂಗಡಿ ಸಾಲು
ಹೊಲ ಮರಿಯದ ಮಾತುಗಳು ಮುನಸು ನಾನಾ
ಮಲಗಿ ಏಳುವ ಲೀಲೆ ಗಂಡಹೆಂಡಿರ ನೀತಿ
ಬಲುಪರಿ ಒಂದೊಂದು ಬಾಲಾಟದಲಿ ನಲಿದು
ಒಲುಮೆಯಿಂದಲಿ ನೋಡಬಂದ ಯೌವನ ಸ್ತ್ರೀಯರ
ನಿಲಿಯ ಬಿಡಿಸಿ ಭಂಡುಭೂತ ಮಾಡೀ
ಬಳಿಯ ಇಡುವೆನೆಂದು ಕೈಪಿಡಿದು ಹಿಸಿಕೀ
ಮೊಲೆಗೆ ಕರಚಾಚುವ ಮುಖ ತಗ್ಗಿಸೀ
ಎಲೋ ಕೃಷ್ಣ ಎಂದರೆ ಬೆದರಿ ಓಡಿಪೋಗಿ
ಪಲ್ಲುದೆರೆದು ಅಣಿಕಿಸುವ ಅಟ್ಲಾಡಿಸೀ
ತಲುವರಿತನದಿಂದ ಕ್ರೀಡೆಯಾಡುತಲಿರೇ

ಬಲವೈರಿ ಸುತರೆಲ್ಲ ಅಹೋ ಎನುತಾ
ತಲೆದೂಗಿ ತಮ್ಮಿಂದ ಬಣ್ಣಿಸಲರಿದೆಂದು
ಪುಲಿದೊಗಲಾ ಬ್ರಹ್ಮನು ಬೆಸಸಿದರು
ನೆಲೆಗಾಣೆವು ಎಂದು ಅವರು ಮೌನವಾಗೆ
ಜಲಜಲೋಚನೆ ಲಕುಮಿ ಹಸ್ತ ಮುಗಿಯೇ
ಕುಲದೈವ ವಿಜಯ ವಿಠ್ಠಲರೇಯಾ ನಂದಗೋ
ಕುಲದಲ್ಲಿ ಜನಿಸಿ ಗೋಪಿಯ ಮನೆಯಲ್ಲ್ಯಾಡಿದಾ ೩

ಅಟ್ಟತಾಳ

ಚಿಕ್ಕದಲ್ಲಕ್ಕಿದ ಬುತ್ತಿ ಪೆಗಲಿಲ್ಲ
ಪಕ್ಕೆಯೊಳಗೆ ಕೋಲು ಕರಗದಲ್ಲಿ ತಳಿಹಗ್ಗಾ
ಚಿಕ್ಕ ಗೋಮಕ್ಕಳ ಸಂಗಡ ತುರುವಿಂಡು
ಅಕ್ಕೊ ಇಕ್ಕೋ ಎಂದು ತೋರುತ ಪೊರಡಿಸಿ
ಅಕ್ಕರದಿಂದ ಸಂಗವ ಕಲೆವ ಸಮಯಕ್ಕೆ
ಬುಕ್ಕುತ ಮುಕ್ಕುತ ಉಡಿಯ ಗುಗ್ಗರಿ ಹೆಜ್ಜೆ
ಇಕ್ಕುತ ಸಾಗಲು ಭೂಮಿ ನಮೋ ಎನ್ನ
ಪಕ್ಕೆಯ ಗರಿ ನವಿಲ ಪಿಂಚಾಕುಂಚಿಗೆ
ಸಿಕ್ಕಿಸಿದಾ ಎಲೆಬಳ್ಳಿ ಕುಸುಮ ನಾನಾಜಾತಿ
ಚೊಕ್ಕಾಟ ಗುಲಗುಂಜಿ ದಂಡೆ ಬರಹ ಮಣ್ಣಾ
ಚುಕ್ಕಿ ದೇಹದಲ್ಲಿ ಎಳೆದುಳಸಿ ದಾಮಾ
ಚಕ್ಕಂದವಾಡುತ್ತ ಗೋಪಾಲರ ಮಧ್ಯ
ತಕ್ಕಥೈ ಥೈ ಎಂದು ಕುಣಿದಾಡಿ ಹಾರಾಡಿ
ಕಕ್ಕನ ಗುಂಪಿಲೀ ವಿಮಾನವೇರಿ ದೇ
ವಕ್ಕಳು ಈ ಲೀಲೆ ಒಬ್ಬಣ್ಣಿಸುತಿರೇ
ನಕ್ಕು ನಕ್ಕು ತಮ್ಮೊಳು ತಾವೆ ತಲೆದೂಗಿ
ಅಕ್ಕಟ ಪೆದ್ದೈವ ಹುಡಗಾಟನೆಸಗಿದೆ
ತಕ್ಕದು ನೋಡೆಂದು ಮುಕ್ತಿ ಪ್ರದಾತನೋ
ಪೊಕ್ಕಳ ಹೂವಿನ ಎಜಯ ವಿಠ್ಠಲ ಕೃಷ್ಣ
ಸಿಕ್ಕಿದ ಬಗೆ ನೋಡು ಧನ್ಯ ಗೋಕುಲ ಗೋಪಿ ೪

ಆದಿತಾಳ

ಕೊಳಲ ಗೋಪಾಲ ನಸುನಗುತ ಕೈ
ಕೊಳಲು ಒಂದೇ ಸ್ವರ ಗೈಯೆ
ಪೊಳಲು ಪೊರಟು ಗೋಪೇರು
ಬಳಲುತ ವಿರಹ ತಾಪದೀ
ಕಳಲು ತ್ಸವದಿ ಕದಡುತ್ತ
ತಳಲ ತಾಪಕೆ ಬಾಡಿದಂತೇ
ಮಳಲು ತುಳಿಯುತ್ತ ತೊಳಲುತ್ತ
ಘಳಿಲು ಶಬ್ದದಿ ಬರುತಿರೆ
ನೆಳಲು ನೆಮಿ ಕೃಷ್ಣಯ್ಯಾ
ತಿಳಿಲು ಮಾತಿಲಿ ಬಳಿಗರೆದು
ಹೆಳಲು ಪಿಡಿದು ತಕ್ಕೈಸಿ
ಬಳಲುತಾಪಾ ತೀರಿಸಿ
ಅಳಿಕುಂತಳಗೋವ ವಿಜಯ ವಿಠ್ಠಲ
ಪೊಳಲಿಗೆ ಬಂದ ರಜನಿಮುಖ ಕಾಲಾ ೫

ಜತೆ

ಚಿಕ್ಕಮಕ್ಕಳ ಕೂಡ ನಲಿದಾಡಿದ ಸ್ವಾಮಿ
ಲಕ್ಕುಮಿರಮಣಾ ವಿಜಯ ವಿಠ್ಠಲ ಕೃಷ್ಣ ೬

೧೪೦

ಝಂಪಿತಾಳ

ಮುತ್ತು ನವರತ್ನಮಯ ಪವಳ ಸಂಗತಿಯಿಂದ
ಕೆತ್ತಿಸಿದ ಮುಕುಟ ಶಿರದಲ್ಲಿ ಧರಿಸಿಪ್ಪದೇನೋ
ನೆತ್ತಿಗೆ ಗಿಡದಲೆ ನಾನಾ ಬಳ್ಳಿಗಳು
ಸುತ್ತಿ ಸಣ್ಣವರೊಡನೆ ಪಾರಾಡುವುದೆತ್ತ
ಹತ್ತುಸಾವಿರ ವೇದ ಸ್ತುತಿಸಿ ಬಾಯಾರಿ ಬೇ
ಸತ್ತು ಸುಮ್ಮನೆ ನಿನ್ನ ಮಹಿಮೆ ಅರಸುವುದೇನೋ

ಚಿತ್ತಕ್ಕೆ ಬಂದಂತೆ ಗೋಮಕ್ಕಳ ಕೈಯ್ಯಾ
ಹತ್ತು ನೂರಾರುಗಳು ಬೈಸಿಕೊಂಬುವದೆತ್ತ
ನಿತ್ಯ ತೃಪ್ತ ಪರಮ ನಿತ್ಯಾನಂದನೆಂದು
ತೆತ್ತೀಸ ಕೋಟಿ ಆದಿತ್ಯರು ಪೊಗಳಲೇನು
ಹೊತ್ತು ಹೊತ್ತಿಗೆ ಕಲ್ಲಿಬುತ್ತಿ ಉಣಲು ಸಾಲದೆ
ತತ್ತಪಸಿಗಳ ಯಾಗದಲ್ಲಿ ಉಂಡದ್ದೇನೋ
ಉತ್ತಮೋತ್ತಮ ವೈಕುಂಠವನ್ನು ಬಿಟ್ಟು
ಮರ್ತ್ಯ ಲೋಕದಲ್ಲಿ ನಿನ್ನ ಲೀಲಾವಿನೋದವೇನೋ
ಸತ್ಯಸಂಕಲ್ಪ ಸಿದ್ಧ ವಿಜಯ ವಿಠ್ಠಲ ನಿನ್ನ
ಚಿತ್ತಕ್ಕೆ ಬಂದದ್ದಲ್ಲದೇ ಪ್ರತಿಯುಂಟೇ ೧

ಮಟ್ಟತಾಳ

ಜನನ ಮರಣ ದೋಷವಿದೂರ
ಎನಿಸಿಕೊಂಡು ಮೆರೆವುದೇನೋ
ಮನುಜಕಾಯಧರಿಸಿ ದೇವಕಿ
ತನುಜನಾಗಿ ಪುಟ್ಟುವುದೆತ್ತ
ವಿನಯತಾ ಸಾಕ್ಷಿ ವಿಜಯ ವಿಠ್ಠಲ
ಅಣುಮಹತ್ತೆ ಗುಣಗಣ ನಿಲಯಾ ೨

ರೂಪಕ ತಾಳ

ದನುಜದಲ್ಲಣನೆಂಬೊ ಘನಪೆಸರು ನಿನಗೇನು
ದನುಜಗಂಜಿ ಪೋಗಿ ವನಧಿಯೊಳಡಗಿದೆ
ಸನಕಾದಿಗಳು ನಿನ್ನ ಬಿಡದೆ ಕಾಯುವುದೇನೋ
ವಿಜಯದಿಂದಲಿ ನೀನು ದನಗಾವಿಗನೆನಿಸಿದೆ
ವನಜಭವಾದಿಗಳು ನಿನ್ನದಾಗಲವೇನು
ಧನಂಜಯಗೆ ನೀನು ರಥವನು ನಡೆಸುವುದೇನು
ವಿನಯೋಜನಾಮ ಸಿರಿ ವಿಜಯ ವಿಠ್ಠಲ ನೀನು
ನೆನದಾಟವಲ್ಲದೇ ಅನಿಮಿಷರು ಬಲ್ಲರೇ ೩

ಝಂಪೆತಾಳ

ಸಿರಿಗೆ ನಿನಗೆ ನೋಡೆ ಎಂದಿಗೆ ವಿಯೋಗವಲ್ಲ
ಭರದಿಂದ ರುಕ್ಮಿಣಿಯ ತಂದೆ ನಂಬುವದೇನೋ
ಸರಸಿಜಜಾಂಡಗಳೆಲ್ಲ ಹೊತ್ತ ಮಹಮಹಿಮನೆ
ಗಿರಿಧರಿಸಿದನೆಂಬ ಕೀರ್ತಿ ಪಡೆದದೇನೋ
ವರವೇದಗಳ ಸೆರೆ ಬಿಡಿಸಿದ ಧೀರಗೆ
ತರುಣೇರ ಬಿಡಿಸಿದ್ದ ಸೋಜಿಗವೆ ನಿನಗೆ
ಸರಿಯಾದ ದೈವಂಗಳು ಇಲ್ಲದ ಕಾರಣದಿಂದ ಬೆರಗು
ತೊರುವಿ ಜಗಕೆ ಸತ್ವ ವಿಜಯ ವಿಠ್ಠಲಾ ೪

ತ್ರಿವಿಡಿತಾಳ

ಅನಿಲಾಸನನ ಮೇಲೆ ಯೋಗನಿದ್ರೆವುಳ್ಳವಗೆ
ಮನದೊಳು ಕಂಡಲ್ಲಿ ಮಲಗಿ ಏಳುವುದೇನೋ
ಮಣಿಕಾಂಚನ ವಸನ ಉಟ್ಟು ಉನ್ನತನೆ ರ
ತುನಗಂಬಳಿ ಚಲ್ಲಣದ ಶೃಂಗಾರವೇನೋ
ಚಿನುಮಯನಾಗಿ ಕಾಣಿಸದಿಪ್ಪ ದೈವವೇ
ಮನೆಮನೆ ಪೊಕ್ಕು ನವನೀತ ಕದಿವುದೇನು
ಸನಾತ್ಸನಾತನ ನಾಮ ಸಿರಿ ವಿಜಯ ವಿಠ್ಠಲರೇಯಾ
ಅಣುವಾಗಿ ಎಲ್ಲರೊಳು ಜುಣುಗಿಯಾಡಿದದೇನೋ ೫

ಅಟ್ಟತಾಳ

ಸ್ವರಮಣ ನೀನಾಗಿ ಸುಖಿಸುವ ದೈವವೇ
ಕರಡಿಯ ಮಗಳನು ಕೂಡಿದ ಬಗೆ ಏನೋ
ಸುರ ಪಾರಿಜಾತ ಮಂದಾರ ಪುಷ್ಪ ಮುಡಿದಿಪ್ಪ
ಧರಿಸಿದ ಮಾಲಾಗಾರರು ಹಾರುವನು ತಾರೆ
ಶರಧಿಯೊಳಗೆ ಬಂದು ಸುಧಿಯನೆರದವನೆ
ಕರದ ನೊರೆಪಾಲು ಕುಡಿದನೆನಸಿದನೇನೋ
ಸುರುಚಿರ ನಾಮ ನಮ್ಮ ವಿಜಯ ವಿಠ್ಠಲ ನಿನ್ನ
ಚರಿತೆ ಒಂದೊಂದು ಉಚ್ಚರಿಸಲೆನ್ನಳವೇ ೬

ಆದಿತಾಳ

ಪರಾಪರಾವ ಪ್ರಾಕೃತ ಶರೀರವೆನಿಸುವುದೇನು
ಜರಾಮರಣನೆಂದು ತೋರಿದರಿಗೆ ಎನಿಸುವುದೇನು
ಹರಿ ನಿನ್ನ ಮಾಯಾಲೀಲೆ ಆವಾದಾವದಾವದಯ್ಯಾ
ಅರಿದರಿ ಚೇತನ ಅಚೇತನದೊಳಗೆ ಇಲ್ಲಾ
ಚರಾಚರದಲ್ಲಿ ನಿತ್ಯವರಸಿ ನೋಡಿದರೊಂದು
ಪರಿಗೆ ಅನಂತಪರಿ ನೂತನವೆನಿಸುತಿದೆ
ಸುರೇಶ್ವರನಾಮ ಸಿರಿ ವಿಜಯ ವಿಠ್ಠಲ ನಿನ್ನ
ತರುಳತನದ ಲೀಲೆಗಳು ದನುಜರ ಕುಲಕೆ ಕೃಷ್ಣಾ ೭

ಜತೆ

ನಿಮ್ಮ ಮಹಿಮೆಗೆ ಅನಂತಾನಂತ ನಮೋ
ಬೊಮ್ಮಗೆ ಪರಬೊಮ್ಮ ಗಹನ ವಿಜಯ ವಿಠ್ಠಲಾ ೮

೧೪೧

ಧ್ರುವತಾಳ

ಸತತ ಬ್ರಹ್ಮಚಾರಿ ಎನಿಸಿಕೊಂಡು ಪರೀ
ಕ್ಷಿತನ ಪ್ರಾಣವನ್ನು ಉಳುಹಿದ ದೈವವೆ
ರತಿಪತಿ ವ್ಯಾಪಾರದಲ್ಲಿ ಶ್ರೇಷ್ಠನೆನಿಸಿ ಅನ್ಯ
ಸತಿಯರ ಭೋಗಿಸಿ ಸುತರ ಪಡೆದದೇನೋ
ಚತುರ ಮೊಗಾದಿಗಳ ಪೆತ್ತ ಪರಮಪುರುಷ
ಗತಿ ಪ್ರದಾಯಕನಾಗಿ ಮೆರೆದೆ ಕಮಲನಾಭಾ
ಗತಿಯಾಗಬೇಕೆಂದು ಸುತನಗೋಸುಗ ಪೋಗಿ
ಕೃತ ವಿರೋಧಿಯ ಒಲಿಸಿ ವರವ ಕೈಕೊಂಡದ್ದೇನೊ
ನುತಿಸಿದ ಜನರಿಗೆ ಅನದಿನ ತಪ್ಪದಲೇ
ಹಿತವಾಗಿರುತಿಪ್ಪ ಭಕ್ತವತ್ಸಲದೇವ
ಶಿತವಾಹನಗೊಲಿದು ರಣದೊಳು ಸುಧನ್ವನ್ನ

ಹತಮಾಡಿಸಿದ್ದು ಆವುದೋ ಕರುಣತನವೋ
ತುತಿಸುತಿಪ್ಪರು ನಿನ್ನ ನಿತ್ಯ ತೃಪ್ತನೆಂದು
ಕೃತಭೂಜರೊಂದಾಗಿ ಗಣನೆ ಕಾಣದೆ ಎಣಿಸಿ
ಕ್ಷಿತಿಯೊಳು ಭಕ್ತರಿತ್ತ ಸ್ವಲ್ಪಕ್ಕೆ ತೇಗುವೆ
ಅಮಿತಭೋಜನನೆಂದು ಕರೆಸಿಕೊಂಬುವುದೇನೋ
ಪತಿತ ಪಾವನ ರಂಗಾ ವಿಜಯ ವಿಠ್ಠಲ ನಿನ್ನ
ಕೃತಕಾರ್ಯಂಗಳಿಗೆ ನಾನೇನೆಂಬೆ ತಲೆದೂಗಿ ೧

ಮಟ್ಟತಾಳ

ಬಲುರವಿ ಪ್ರಕಾಶನೆಂದು ನಿನ್ನನ್ನು
ಕೆಲಕಾಲಾ ಬಿಡದೆ ಪೊಗಳುವ ಬಗೆ ನೋಡು
ಇಳೆಯೊಳಗೆಯಿದ್ದ ಮನುಜರ ಕಣ್ಣಿಗೆ
ಬೆಳಗುತೋರಿ ಪ್ರೀತಿ ಮಾಡಿದ ಪರಿಯೇನೋ
ಹಲವು ಬಗೆಯಿಂದ ಶುದ್ಧಾತ್ಮನೆಂದು
ಒಲಿಸಿ ವೇದಂಗಳು ಬೆರಗಾಗುತಲಿರೇ
ಗಲಭೆ ಮಾಡದೆ ಪೋಗಿ ಗೊಲ್ಲತಿಯರ ಮನೆ
ಒಳಪೊಕ್ಕು ಪಾಲು ಮೊಸರು ಬೆಣ್ಣೆಯ ಕದ್ದೆ
ಜಲಜಜಾಂಡಕಿಂತ ಭಾರವುಳ್ಳವನೆಂದು
ನೆಲೆಗಾಣೆನು ನಿನ್ನ ಕೀರ್ತಿಗೆ ಎಣೆಯುಂಟೇ
ಕುಲಸತಿ ನಾರದಗೆ ಮಾರಿದ ಸಮಯದಲಿ
ತುಲಸಿದಳಕ್ಕಿಂತ ಕುಡಿಮೆಯಾದುದು ಏನೊ
ಕಲಿಭಂಜನ ನಮ್ಮ ವಿಜಯ ವಿಠ್ಠಲ ನಿನ್ನ
ಸುಲಭತನಕೆ ಎಲ್ಲಿ ಸರಿಗಾಣೆ ನೋಡಿದರು ೨

ತ್ರಿವಿಡಿತಾಳ

ನೀನೆ ಅಪ್ರಾಕೃತ ಶರೀರನೆನಿಸಿಕೊಂಡು
ಅನಂತಕಲ್ಪಕ್ಕೆ ಬಾಳುವ ಭವದೂರಾ
ಮಾನವರೂಪವು ಬಂದಾಗ ಕಾಯವ
ಕ್ಷೋಣಿಯೊಳಗೆ ಬಿಟ್ಟು ಪೋದನೆನಿಸುವುದೇನೊ

ಮಟ್ಟತಾಳ

ಸದಾ ನಿನ್ನ ಭಕುತರು ಮುಡಿದ ನಿರ್ಮಾಲ್ಯವಾಸನೆ
ನೇಮಿಸು ಎನ್ನನಾಸಕ್ಕೆ
ಸದಾ ನಿನ್ನ ಭಕುತರ ಬರವ ಕಾಣುತಲಿ ಅಡ್ಡಬೀಳುವಂತೆ
ನೇಮಿಸು ಎನ್ನಂಗಂಕ್ಕೆ
ಸದಾ ನಿನ್ನ ಭಕುತರು ಇದ್ದಲ್ಲಿಗೆ ಪೋಗಿ–
ಸುಳಿದಾಡುವುದೆ ಎನ್ನ ಚರಣಕೆ ನೇಮಿಸು
ಸದಾ ನಿನ್ನ ಭಕುತರು ಇದ್ದಲ್ಲಿಗೆ ನಮೊ
ಸದಮಲ ಮೂರುತಿ ಉಡುಪಿಯ ಕೃಷ್ಣ ಶ್ರೀ
ಸದನ ವಿಜಯ ವಿಠ್ಠಲ ಮಧ್ವಮುನೀಶಾ
ಸದಾ ನಿನ್ನ ಭಕುತನು ನಾನು ೨

ತ್ರಿವಿಡಿತಾಳ

ನಿನ್ನ ಭಕುತರ ಮಹಿಮ ಅನ್ನಂತ ಬಗೆಯುಂಟೆ
ಎನ್ನಿಂದ ಕೊಂಡಾಡಲೊಶವೆ ಸ್ವಾಮಿ
ಎನ್ನ ಮನಸು ಬಹು ಚಂಚಲವುಳ್ಳದ್ದು
ಇನ್ನು ತಿಳಿಯುವುದೆಂತೋ ನಿನ್ನವರ
ಕಣ್ಣಿಗೆ ಕಾಣಿಸರು ಆವಾವ ಪರಿಯಲ್ಲಿ
ನಿನ್ನ ಮೂರುತಿ ಎನ್ನ ಹೃದಯ ಮಧ್ಯ
ಚೆನ್ನಾಗಿ ನೋಡುತ್ತ ನಿಲಿಸಿ ಧ್ಯಾನವ ಮಾಡಿ
ಧನ್ಯರೆಂದೆನಿಸುವರನುಗಾಲವೊ
ಎನ್ನಂಥ ಮತಿ ಹೀನಗೆ ಶುಚಿಯಾಗಿ ಅವ
ರನ್ನ ವಂದಿಪುದೆಂತೊ ತ್ರಿಜಗವ್ಯಾಪ್ತ
ಅನ್ನಂತೇಶ್ವರ ಕೃಷ್ಣ ಉಡುಪಿ ನಿವಾಸ ಸಂ–
ಪನ್ನ ವಿಜಯ ವಿಠ್ಠಲ ಆನಂದ ಮುನಿಗೇಯ ೩

ಅಟ್ಟತಾಳ

ನಿನ್ನ ಭಕುತರು ಬರಲು ಏಳದಿರೆ
ಘನ್ನ ನರಕಕ್ಕೆ ಕಾರಣವಾಗೋದು
ಮುನ್ನಾವ ಗತಿಯೊ ಮುಕ್ಕುಂದ ಮುರಾರೆ

ಇನ್ನುಪಾಯ ಒಂದಾದರು ಕಾಣೆ
ಬಿನ್ನಪ ಮಾಡುವ ಭಕುತ ವತ್ಸಲನೆ
ಮನ್ನಿಸು ಈ ಮಾತ ಮುದದಿಂದ ಲಾಲಿಸಿ
ಕಣ್ಣು ಮೊದಲಾದ ಸ್ಥಾನದಲ್ಲಿ
ಅನ್ನು ದಿನ ವಾಸವಾಗಿದ್ದ ತಾತ್ವಿಕರಿಗೆ
ಚೆನ್ನಾಗಿ ನಿರ್ಮಳ ಚೇತನ ಪಾಲಿಸೆ
ಎನ್ನ ಕೂಡಲಿ ಸಜ್ಜನರ ಚರಣ ಸೇವೆ–
ಯನ್ನು ಮಾಡಿಸುವಂತೆ ನಿನ್ನದೆ ದಯವಯ್ಯ
ಅನ್ಯಾಯದಲಿ ಸಂಚರಿಸುವ ಜನರನ್ನು
ಇನ್ನು ಕಂಡರೆ ಆಕ್ಷಣ ಹಗೆ ಪುಟ್ಟಲಿ
ಪನ್ನಂಗ ಶಯನ ಉಡುಪಿಯ ಸಿರಿಕೃಷ್ಣ
ಎನ್ನ ಮನೋಭೀಷ್ಟ ವಿಜಯ ವಿಠ್ಠಲ ಮಧ್ವ
ಮುನ್ನಿಗೊಲಿದ ದ್ವಾರಕ ಪುರನಿವಾಸ ೪

ಆದಿತಾಳ

ಹರಿ ನಿನ್ನ ಭಕುತರು ದುರಿತ ರಾಸಿಗೆ ಪಾವಕ
ಹರಿ ನಿನ್ನ ಭಕುತರು ಪುಣ್ಯ ಸಸಿಗೆ ಚಂದ್ರ
ಹರಿ ನಿನ್ನ ಭಕುತರೆ ಕರುಣ ಮಾಡಿದರವ
ಸುರಲೋಕ ಮೊದಲಾದ ಸುಖವೆ ಧಿಕ್ಕರಿಸುವರು
ಹರಿ ನಿನ್ನ ಭಕುತರ ನಂಬಿದವನೆ ಧನ್ಯ
ಹರಿ ನಿನ್ನ ಭಕುತರಿಗೆ ನಿನ್ನ ಒಲಿಮೆ ಎಂತೊ
ಹರಿ ಹರಿ ನರಹರಿ ಶರಣು ಶರಣ ಗತಿ
ಕರದಲ್ಲಿ ಕಡಗೋಲು ನೇಣ ಪಿಡಿದ ಕೃಷ್ಣ
ಪರಮ ಪುರುಷ ನಮ್ಮ ವಿಜಯ ವಿಠ್ಠಲ ನಿನ್ನ
ಶರಣರ ಚರಣ ಸ್ಮರಣೆ ಪರಮಾನಂದ ಕಾಣೊ
ಗುರು ಮಧ್ವ ಮುನಿಯಿಂದ ಪೂಜೆಗೊಂಬುವ ದೇವ ೫

ಜತೆ

ನಿನ್ನ ಭಕ್ತರು ದಯ ಮಾಡಿದವನ ಚಿಂತೆ
ಘನ್ನವಾಗಿದೆ ನಿನಗೆ ವಿಜಯವಿಠ್ಠಲ ಕೃಷ್ಣ ೬

೧೪೩

ಧ್ರುವತಾಳ

ಸ್ವರ್ಗತಿ ನಿರ್ಗತಿ ಸಕಲ ನಿಗಮ ಮಸ್ತಕ ರನ್ನನೇ
ಅಗಣಿತ ಬಲನೇ ಜಗದಾ ಮೋಹನನೇ
ಸಗುಣ ನಿರ್ಗುಣದವನೇ ಸ್ವಗುರು ಸ್ವವಶನೇ
ಸ್ವಗಮನಾನೇ ಸ್ವಾಂಗ ಝಗಿಪ ಮುಕುಟನೇ
ಮಗುವಾಗಿ ನಗುತ ಮಲಗಿದ ಮಹಿಮನೇ
ಯುಗ ಯುಗದವತಾರ ಅನಾದಿಗನೇ ಜಗಕೆ ಸೋ
ಜಿಗ ತೋರಿದ ಮಗುವಾದವನೇ
ಹಗಲಿರುಳು ಗೋಪಿಗೆ ಬಗೆ ತೋರಿದವನೇ
ಭೊಗರಿ ಚಂಡು ಚಿಣಿಕೋಲಾಡಿದವನೇ
ಜಿಗಿದು ಅಡವಿ ತಿರುಗಿ ಒಗರು ಮೆದ್ದವನೇ
ಹಗಲಿರುಳು ಪರರ ಒಗೆತನವನಳಿದವನೇ
ಬಗೆಬಗೆಯಿಂದಲಿ ಹಗರಣದವನೇ
ಜಗಕೆ ಚನ್ನಿಗ ಗುಪ್ತ ವಿಜಯ ವಿಠ್ಠಲನೇ
ವಿಗಡತನದ ವಿನೋದಿಗನೆ ಪಳ್ಳಿಗನೇ ೧

ಮಟ್ಟತಾಳ

ಸಾಗರವೆಲ್ಲಾ ಪೋಷಣೆಗೊಂಬಾ
ದಾಗಿದೆ ನಿನ್ನ ಕರತಳವಯ್ಯಾ
ವಾಗರ ಗಂಜಿ ಅಂಬಲಿ ಜೋರು
ನೀಗುಡುವೆ ಭೊಗಸಿಯನು ಒಡ್ಡಿ
ದಾಗಡಿ ಬಳ್ಳಿ ತಲೆಗೆಸುತ್ತಿ ಆಗರದೊಳಗೆ ಆಡುವುದೇನೋ
ಸೋಗು ತೋರಿದ ವಿಚಿತ್ರಚರಿತಾ ಪ್ರ
ಜಾಗರ ಮೂರುತಿ ವಿಜಯ ವಿಠ್ಠಲ
ಹೀಗಲ್ಲದೆ ಮತ್ತಾರರ್ಚಿಸಾರೇ ೨

ತ್ರಿವಿಡಿತಾಳ

ಸುತನ ಕನ್ನಿಕೆ ಮಾಡಿ ನೆರವ ಸ್ವರಮಣವೇ
ಕ್ಷಿತಿಯೊಳು ಗೊಲ್ಲರಂಗನಿಯರ ರಮಿಸುವರೆ
ಸತಿಯಾಗಿ ಸುರರಿಗೆ ಅಮೃತವನೆರೆದವನೇ
ಸತಿಯರು ಬೇಕೇನೊ ಮಾಯಾ ಲೀಲಗಾರನೇ
ಹಿತವಾಗಿ ಸುರರಿಗುಪದೇಶವಿತ್ತವನೇ
ಕ್ಷಿತಿಸುರ ಸಾಂದೀಪನಲ್ಲಿ ಓದಿದವನೇ
ಯತಿಗಳ ಮನಸಿಗೆ ದೂರತರವಾಗುವನೇ
ರಥವನ್ನು ನಡಿಸಿದ ಬಂಡಿ ಓವಿಗನೇ
ಚತುರ ಶ್ರೀ ವಿಜಯ ವಿಠ್ಠಲ ವಿಶ್ವ ನಾಟಕ
ಅತಿ ಆಶ್ಚರ್ಯವ ತೋರಿದ ಸತತ ಚತುರಿಗನೆ ೩

ಅಟ್ಟತಾಳ

ಸ್ತಂಭ ಸಂಭವನಾಗಿ ಉದುಭವಿಸಿದ ಪರಿ
ಎಂಬೆನೆ ಶುಕ್ಲ ಶೋಣಿತ ವಿರಹಿತ ದೇವಾ
ಕುಂಭಿಣಿಯೊಳು ದೇವಕಿದೇವಿ ಗರ್ಭದ
ಲಿಂಬಿಟ್ಟು ಜನನವಾದ ಪರಿ ಆವುದು
ತುಂಬರ ನಾರದ ಜಂಭಾರಿ ಶಂಭು ಸ್ವ
ಯಂಭು ಸುರಾದ್ಯರ ಕುಣಿಸುವ ದೇವ
ಕಂಬು ಕೊಳಲು ತುತ್ತೂರಿ ಮವುರಿ
ಭೊಂ ಭೊಂ ಭೊಂ ಎಂದು ಊದುವ ಜಾಣಾ
ಕುಂಭದೊಳಗೆ ಜಲತುಂಬಿ ಅನೇಕರು
ಸಂಭ್ರಮದಿಂದಲಿ ಸಾಲಾಗಿ ನೋಡೆ
ಅಂಬರಗಳಿ ಗಿಳಿಯಂಬಕ ಪೋಳೆವಂತೆ
ತುಂಬಿದ್ದ ಪರಿಪೂರ್ಣ ವಿಜಯ ವಿಠ್ಠಲರೇಯಾ ೪

ಆದಿತಾಳ

ಘನವಂಗುಟದಲಿನ್ನು ವನಜಜಾಂಗಳವನ್ನು
ತೃಣದಂತೆ ವ್ಯಾಪಿಸಿ ದಿನವಾ ನಡಿಸುವ ದೈವಾ

ಮನುಜ ವೇಷವ ತಾಳಿ ಜನನಿಯ ಭೀತಿಗೆ ಬಾ
ಯನು ಮುಚ್ಚಿ ಬಾಲನಾಗಿ ಮನಿಯೊಳಗಿಪ್ಪ ದೇವ
ಅಣು ಘನವೆರಡು ನಿನ್ನನಬಾರದು ನಿನ್ನ
ಗುಣಗಳ ಸರ್ವಲಕ್ಷಣಗಳು ನೂತನವೂ
ಅನಿಶ ನಾಮಕ ನಮ್ಮ ವಿಜಯ ವಿಠ್ಠಲರೇಯಾ
ಅನುಪಮ ಚರಿತ ಚೇತನಾಚೇತನ ಪ್ರಾಣಾ ೫

ಜತೆ

ಅಮರಾಸುರರಿಗೆ ಸೌಖ್ಯದುಃಖಕ್ಕೆ ಕಾರಣ
ನಮೋ ನಮೋ ಸೋಮ ವಿಜಯ ವಿಠ್ಠಲ ಗೋಪ ೬

ವೇದವ್ಯಾಸ ಸ್ತೋತ್ರ

೧೪೪

ಧ್ರುವತಾಳ

ಯತಿಗಳ ಶಿರೋರತುನಾ ಸತಿಯ ಅವಿಯೋಗಿ
ರತಿಪತಿಜನಕಾ ಸ್ವರತ ಸ್ವಪ್ರಕಾಶ
ಅತೀತಾದ್ಭುತ ಮಹಿಮ ಪತಿತಪಾವನ ನಾಮಾ
ನತಜನ ಸುರಧೇನು ದಿತಿಜ ತಿಮಿರಭಾನು
ಅತಿದೂರ ದೂರ ಸಂತತ ದಯಾಪರ
ಚತುರ ನಾನಾಸುರತತಿ ಕರಕಮಲಾ
ರ್ಚಿತಪಾದ ಸುಂದರ ದೀನಮಂದಾರ
ಪ್ರತರ್ದನನಾಮ ನಮ್ಮ ವಿಜಯ ವಿಠ್ಠಲ ಸತ್ಯ
ವತಿಸೂನು ಜಗದೊಳು ಪ್ರತಿಯಿಲ್ಲದ ದಾತಾ ೧

ಮಟ್ಟತಾಳ

ಜ್ಞಾನಮಯಾಕಾರ ಜ್ಞಾನಮಯಾನಂದಾ
ಜ್ಞಾನಮಯೈಶ್ವರ್ಯ ಜ್ಞಾನಮಯ ವರ್ನ
ಜ್ಞಾನಮಯತೇಜಾ ಜ್ಞಾನಮಯ ಶಕ್ತಿ

ಜ್ಞಾನಮಯಾಂಬುಧಿ ಜ್ಞಾನವಿಲೋಲ ನಾ
ಮಾನಿ ವಿಜಯವಿಠ್ಠಲನೆ ನಿನಗೆ ಸಮಾ
ಮೌನಿವ್ರತ ಧೃತನೆ ಜ್ಞಾನಸುಖಸಾಂದ್ರಾ ೨

ತ್ರಿವಿಡಿತಾಳ

ಕಲಿಯ ವ್ಯಾಪಾರ ವೆಗ್ಗಳವಾಗಿ ವ್ಯಾಪಿಸಿ
ಸಲೆ ಧರ್ಮಾವಳಿಗಳು ಅಳಿದು ಪೋಗಿರಲಾಗಿ
ಸುಲಭ ಜ್ಞಾನವೆಲ್ಲ ಮಲಿನದಿಂದಲಿ ಕೆಟ್ಟು
ಇಳಿಯೊಳು ಉತ್ತಮ ಸಂಪ್ರದಾಯರಿದಾ
ಸುಳುವು ಕಾಣದೆ ಪೋಗಿ ಅಳಲಿ ಗೀರ್ವಾಣರು
ಜಲಜ ಸಂಭವನು ಒಂದಾಗಿ ನಿಂದೂ
ತಲೆವಾಗಿ ಉಸಿರಲು ಬಲವಾಗಿ ವಶಿಷ್ಟ
ಕುಲದಲ್ಲಿ ಜನಿಸೀದ ಬಲುದೈವವೇ
ನಳಿನಾಕ್ಷಮಹ ಸಿರಿ ವಿಜಯವಿಠ್ಠಲ ಬದರಿ
ನಿಲಯ ನಿನ್ನ ಲೀಲೆಗೆ ನೆಲೆ ಯಾವುದೋ ಜೀಯಾ ೩

ಅಟ್ಟತಾಳ

ಪರಾಶರನ ಉದರದಲ್ಲಿ ಬಂದು
ಮೂರಾರು ಪುರಾಣವಿರಚಿಸಿ ಅದರೊಳು
ಆರುಸತ್ವ ಆರುರಾಜಸ ತರುವಾಯ
ಆರುತಾಮಸ ಇನಿತಷ್ಟಾದಶವೆಂದು
ಧಾರುಣಿ ತುಂಬಲು ಕರುಣದಿಂದ
ಸೂರಿ ಮುಕ್ತರಿಗೆ ನಿತ್ಯ ಸಂಸಾರಿಗೆ
ಘೋರ ತಮಸಿಗೀ ಮೂರು ಪರಿಮಾಡಿ
ಕಾರಣವೆನಿಸಿ ಪ್ರತಿಷ್ಠಿಸಿ ಕಲಿಯ ನಿ
ವಾರಣವನು ಮಾಡಿದ ಭಾರಕರ್ತನೆ ಸುಜ
ನರಿಗೆ ಜ್ಞಾನವ ಬೋಧಿಸಿ ಸುಕೃತದ
ದಾರಿಯ ತೋರಿದ ದ್ವಯಪಾಯನ ಮುನಿ
ಈರೇಳು ಭುವನದೊಳಾರು ನಿನಗೆ ಎಣೆ

ಕಾರುಣ್ಯನಿಧಿ ಪುಣ್ಯ ವಿಜಯ ವಿಠ್ಠಲಮುನಿ
ವರೇಣ್ಯ ಸುರರಗ್ರಣ್ಯ ನಿರ್ವಿಣ್ಣಾ ೪

ಆದಿತಾಳ

ತಮಸಂಬಂಧವ ಕಳೆದು ವಿಮಲ ಜ್ಞಾನವನ್ನು
ಅಮರರಿಗೆ ಪಾಲಿಸಿದೆ ಅಮಿತ ತೇಜಸದಿಂದ
ಕಮಂಡುಲು ದಂಡಕಾಷ್ಟ ಸಮೀಚೀನವಾದ ಕರ
ಕಮಲದಲ್ಲಿ ಧರಿಸಿದಮಲಕಾಷಾಯಾಂಬರಾ
ಗಮದರ್ಥ ಶಿಷ್ಯರಿಗೆ ಪ್ರಮೇಯಗಳ ಪೇಳುತ
ಕ್ರಮ ನೂರಾರು ಮಾಡಿದ ಕುಮತಿಯ ಪರಿಹರಿಸಿ
ದ ಮಯತೆನಾಮಯತಿ ವಿಜಯ ವಿಠ್ಠಲನನು
ಪಮ ರಾಜ್ಯವನು ಕ್ರಿಮಿಯಿಂದ ಆಳಿಸಿದ ೫

ಜತೆ

ಬಾದರಾಯಣ ಸುಖಕಾರಣ ಭಕುತರಿಗೆ
ವೇದವ್ಯಾಸನೆ ವಿಷ್ಣು ವಿಜಯವಿಠ್ಠಲವ್ಯಾಸ ೬

ಶ್ರೀನಿವಾಸ ಸ್ತೋತ್ರ

೧೪೫

ಧ್ರುವತಾಳ

ಸುಳಿದವನಾರೆನ್ನ ಕಣ್ಣಮುಂದೆ
ಪೊಳೆದವನಾರೆನ್ನ ಕಂಗಳಿಗೇ
ಥಳಥಳಿಸುವ ಪುತ್ಥಳಿ ಬೊಂಬಿಯಂದದಿ
ಎಳೆ ಮಿಂಚಿನಂತೆ ಕಂಗಳು ಥಳಥಳಿಸುವಂತೆ
ಸುಳಿಗುರುಳು ಭ್ರಮರಾವಳಿಯಂತೆ ಒಪ್ಪಲು
ಗುಲಗುಂಜಿ ಸರ ಶಿರಕೆ ಪೊಳೆವ ಮುಕುಟ ಬಳ್ಳಿ
ಗಳುಸುತ್ತಿ ಕಂಡಕಂಡೆಲಿಯ ತುರಾಯವು
ಹಲವಾಭರಣ ತಳಲಗಾವಿ ಪೊಂಬಟ್ಟೆ

ಕೊಳೆಗೋಲು ಕೈಯ ಕೊಳಲಧ್ವನಿಗೈಸುತ್ತಾ
ಕಳಕಾಯದನೀತ ಗೆಳೆಯ ಗೋವಳಗೆ
ಗೆಲ ಸೋಲಾಡಿದನೀತ ಬಲುಮಾಯಾದಾತಾ
ಹಲವಂಗ ಯಜ್ಞಾಂಗಕೃತನಾಮ ವಿಜಯ ವಿ
ಠ್ಠಲನೀತ ಮೇಲ್ಗಿರಿ ತಿರುವೆಂಗಳಾನೀತ ೧

ಮಟ್ಟತಾಳ

ಮುಗುಳು ಮಲ್ಲಿಗೆ ಸಂಪಿಗೆ ಸುರಹೊನ್ನೆ ಮ
ರುಗ ಪಾರಿಜಾತ ಮಿಗೆ ಕೇತಕಿ ಶಾವಂ
ತಿಗೆ ಇರುವಂತಿ ಸುರಗಿ ಪಾರಿಭದ್ರಾ
ದಿಗಳು ಕುಸುಮ ತುರುಗಿ ತುರುಬಿನಲ್ಲಿ
ಮೃಗನಾಭಿ ಫಣಿಗೆ ನಾಮವನಿಟ್ಟು
ಮುಗುಳುನಗೆಯಿಂದ ಬಗೆ ಬಗೆ ಒಯ್ಯಾರ
ಸೊಗಸು ತೋರುವ ಜಾಣ ನಗಧರ ಸರ್ವ
ದ್ರುಗ ವಿಜಯವಿಠ್ಠಲಯುಗಳ ಚರಣ ದಂ
ದಿಗೆ ರಭಸಗೈಯೋ ೨

ತ್ರಿವಿಡಿತಾಳ

ಪೂಸಿದಗರು ಚಂದನ ಶೋಭಿಸುವ ಗಂಧ
ಲೇಸಾದ ಕಸ್ತೂರಿ ಪುನಗು ಜವ್ವಾದಿ ಸು
ವಾಸನೆಯಿಂದ ಪ್ರಕಾಶದಲ್ಲಿ ಒಪ್ಪೆ
ಸೂಸುವ ಕರ್ಪುರದ ಹಳಕು ತಾಂಬೂಲ
ಭೂಷಣ ಸಿರಿದೇವಿ ಉರದಲ್ಲಿ ನಲಿದಾಡೆ
ನಾಶರಹಿತ ಕಮಲಾಸನ ಜನಕ
ಮೋಸ ಪೋಗನು ತನ್ನ ದಾಸರ ವಿರಹಿತ
ಅಶತೃಘ್ನನಾಮ ವಿಜಯವಿಠ್ಠಲ ಎನ್ನ
ಮೀಸಲ ದೈವವು ಈ ಸುಲಭದಿಂದ ೩

ಅಟ್ಟತಾಳ

ಚಂದ್ರನುದ್ಭವನಾಗೆ ಚತುರಂಗಲದಷ್ಟು
ಸಿಂಧುರಾಜನು ಉಬ್ಬಿ ಮೇಲಕ್ಕೆ ಸೂಸುವ
ಇಂದಿರೇಶನು ಎನ್ನ ಹೃದಯಾಂಬುಧಿಯೊಳು
ಇಂದು ಸುಳಿದಂತೆ ಪರಿಪೂರ್ಣವಾಗೆ
ಇಂದೆನ್ನ ಸಂತೋಷ ಪಿಡಿಯಲಾರವಶ
ಅಂಧಕಗೆ ಕಣ್ಣು ಬಂದಂತೆಯಾಯಿತು
ಸುಂದರ ಸುವೇಧ ವಿಜಯವಿಠ್ಠಲರೇಯ
ಒಂದೊಂದು ಪರಿಯಲ್ಲಿ ನಿಂದು ನಿಂದೊಲಿದಾ ೩

ಆದಿತಾಳ

ಇಂದು ಮಂದಾಕಿನಿಯಲ್ಲಿ ಮಿಂದ ಫಲ ಉಪರಾಗ
ಬಂದ ಕಾಲದಲ್ಲಿ ಕೋಶ ತಂದು ದಾನವಿತ್ತು ಸಕಲ
ಸಿಂಧುವಿನಲ್ಲಿ ಸ್ನಾನ ಮಾಡಿ ಒಂದುಬಿಡದೆ ಯಾತ್ರೆ ಚರಿಸಿ
ಮಂದರಧರನಾ ನಖ ಒಂದು ಕಾಣಲದಕೆ ನೂ
ರೊಂದು ಮಡಿ ಫಲವಹುದೆಂದು ವೇದ ಸಾರುತಿದೆ
ಇಂದು ಎನ್ನ ಭಾಗ್ಯವೇನೆಂದು ಪೇಳಿಕೊಂಬೆನಯ್ಯ
ವಂದಿಸಿ ವರ ಮನಕೆ ನಿಜಬಂಧು ವಿಜಯ ವಿಠ್ಠಲ ಸ
ನಂದನಾದಿ ವಂದ್ಯನೀತ ಇಂದು ಕೃತ ಕೃತ್ಯನಾನು ೪

ಜತೆ

ಕಂಡು ಧನ್ಯನಾದೆ ಕಮನೀಯ ಮೂರುತಿಯ
ಮಂಡಲೇಶನಯ್ಯಾ ವಿಜಯ ವಿಠ್ಠಲದೇವನ ೬

ದುರ್ಗಾಸ್ತೋತ್ರ

೧೪೬

ಧ್ರುವತಾಳ

ದುರ್ಗಾ ದುರ್ಗೆಯ ಮಹದುಷ್ಟಜನ ಸಂಹಾರೆ
ದುರ್ಗಾಂತರ್ಗತ ದುರ್ಗೆ ದುರ್ಲಭೆ ಸುಲಭೆ
ದುರ್ಗಮಯವಾಗಿದೆ ನಿನ್ನ ಮಹಿಮೆ ಬೊಮ್ಮ
ಭರ್ಗಾದಿಗಳಿಗೆಲ್ಲ ಗುಣಿಸಿದರೂ
ಸ್ವರ್ಗಭೂಮಿ ಪಾತಾಳ ಸಮಸ್ತ ವ್ಯಾಪುತ ದೇವಿ
ವರ್ಗಕ್ಕೆ ಮೀರಿದ ಬಲುಸುಂದರೀ
ದುರ್ಗಣದವರ ಬಾಧೆ ಬಹಳವಾಗಿದೆ ತಾಯಿ
ದುರ್ಗತಿಹಾರೆ ನಾನು ಪೇಳುವುದೇನು
ದುರ್ಗಂಧವಾಗಿದೆ ಸಂಸೃತಿ ನೋಡಿದರೆ
ನಿರ್ಗಮ ನಾ ಕಾಣೆನಮ್ಮ ಮಂಗಳಾಂಗೆ
ದುರ್ಗೆ ಹೇ ದುರ್ಗೆ ಮಹಾದುರ್ಗೆ ಭೂದುರ್ಗೆ ವಿಷ್ಣು
ದುರ್ಗೆ ದುರ್ಜಯೆ ದುರ್ಧಷೆ ಶಕ್ತಿ
ದುರ್ಗ ಕಾನನ ಗಹನ ಪರ್ವತ ಘೋರ ಸರ್ಪ
ಗರ್ಗರ ಶಬ್ಧ ವ್ಯಾಘ್ರ ಕರಡಿ ಮೃತ್ಯು
ವರ್ಗ ಭೂತಪ್ರೇತ ಪೈಶಾಚಿ ಮೊದಲಾದ
ದುರ್ಗಣ ಸಂಕಟ ಪ್ರಾಪ್ತವಾಗೆ
ದುರ್ಗಾದುರ್ಗೆ ಎಂದು ಉಚ್ಚಸ್ವರದಿಂದ
ನಿರ್ಗಳಿತನಾಗಿ ಒಮ್ಮೆ ಕೂಗಿದರೂ
ಸ್ವರ್ಗಾಪವರ್ಗದಲ್ಲಿ ಹರಿಯೊಡನೆ ಇದ್ದರು
ಸುರ್ಗಣ ಜಯಜಯವೆಂದು ಪೊಗಳು ತಿರೆ
ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿಭೂತೆ
ನೀರ್ಗುಡಿದಂತೆ ಲೋಕಲೀಲೆ ನಿನಗೆ
ಸ್ವರ್ಗಂಗಾಜನಕ ನಮ್ಮ ವಿಜಯ ವಿಠ್ಠಲನಂಘ್ರಿ
ದುರ್ಗಾಶ್ರಯಮಾಡಿ ಬದುಕುವಂತೆ ಮಾಡು ೧

ಮಟ್ಟತಾಳ

ಅರಿದರಾಂಕುಶ ಶಕ್ತಿ ಪರಶು ನೇಗಲಿ ಖಡ್ಗ
ಸರಸಿಜ ಗದೆ ಮುದ್ಗರ ಚಾಪ ಮಾರ್ಗಣ
ವರ ಅಭಯ ಮುಸಲ ಪರಿ ಪರಿ ಆಯುಧವ
ಧರಿಸಿ ಮೆರೆವ ಲಕುಮಿ ಸರಸಿಜಭವ ರುದ್ರ
ಸರುವ ದೇವತೆಗಳ ಕರುಣಾ ಪಾಂಗದಲ್ಲಿ
ನಿರೀಕ್ಷಿಸಿ ಅವರವರ ಸ್ವರೂಪಸುಖ ಕೊಡುವ
ಸಿರಿ ಭೂಮಿದುರ್ಗಾ ಸರುವೋತ್ತಮ
ನಮ್ಮ ವಿಜಯ ವಿಠ್ಠಲನಂಘ್ರಿ
ಪರಮ ಭಕುತಿಯಿಂದ ಸ್ಮರಿಸುವ ಜಗಜ್ಜನನಿ ೨

ತ್ರಿವಿಡಿತಾಳ

ಸ್ತುತಿಮಾಡುವೆ ನಿನ್ನ ಕಾಳಿ ಮಹಾಕಾಳಿ ಉ
ನ್ನತ ಬಾಹು ಕರಾಳವದನೆ ಚಂದಿರಮುಖೆ
ಧೃತಿಶಾಂತಿ ಬಹುರೂಪೆ ರಾತ್ರಿ ರಾತ್ರಿ ಚರಣೆ
ಸ್ಥಿತಿಯೆ ನಿದ್ರಾಭದ್ರೆ ಭಕ್ತವತ್ಸಲೆ ಭವ್ಯೇ
ಚತುರಷ್ಟದ್ವಿಹಸ್ತೆ ಹಸ್ತಿ ಹಸ್ತಿಗಮನೆ ಅ
ದ್ಭುತ ಪ್ರಬಲೆ ಪ್ರವಾಸಿ ದುರ್ಗಾರಣ್ಯವಾಸೆ
ಕ್ಷಿತಿಭಾರ ಹರಣೆ ಕ್ಷೀರಾಬ್ಧಿತನಯೆ ಸ
ದ್ಗತಿ ಪ್ರದಾತೆ ಮಾಯಾ ಶ್ರೀಯೆ ಇಂದಿರೆ ರಮೆ
ದಿತಿಜಾತ ನಿಗ್ರಹೆ ನಿರ್ಧೂತ ಕಲ್ಮಷೆ
ಪ್ರತಿಕೂಲ ಭೇದೆ ಪೂರ್ಣ ಭೋಧೇ ರೌದ್ರೆ
ಅತಿಶಯ ರಕ್ತ ಜಿಹ್ವಾಲೋಲೆ ಮಾಣಿಕ್ಯ ಮಾಲೆ
ಜಿತಕಾಮೆ ಜನನ ಮರಣ ರಹಿತೆ ಖ್ಯಾತೆ
ಘೃತಪಾತ್ರ ಪರಮಾನ್ನ ತಾಂಬೂಲಹಸ್ತೆ ಸು
ವ್ರತೆ ಪತಿವ್ರತೆ ತ್ರಿನೇತ್ರೆ ಶಕ್ತಾಂಬರೆ
ಶತಪತ್ರನಯನೆ ನಿರುತ ಕನ್ಯೆ ಉದಯಾರ್ಕ
ಶತಕೋಟಿ ಸನ್ನಿಭೆ ಹರಿಯಾಂಕ ಸಂಸ್ಥೆ
ಶ್ರುತಿ ತತಿ ನುತೆ ಶುಕ್ಲ ಶೋಣಿತ ರಹಿತೆ ಅ

ಪ್ರತಿಹತೆ ಸರ್ವದಾ ಸಂಚಾರಿಣಿ ಚತುರೆ
ಚತುರ ಕಪರ್ದಿಯೆ ಅಂಭ್ರಣಿ ಶ್ರೀ
ಉತ್ಪತ್ತಿ ಸ್ಥಿತಿಲಯ ಕರ್ತೆ ಶುಭ್ರ ಶೋಭನ ಮೂರ್ತೆ
ಪತಿತಪಾವನೆ ಧನ್ಯೇ ಸರ್ವೌಷಧಿಯಲಿದ್ದು
ಹತಮಾಡು ಕಾಡುವ ರೋಗಂಗಳಿಂದ
ಕ್ಷಿತಿಯೊಳು ಸುಖದಲ್ಲಿ ಬಾಳುವ ಮತಿ ಇತ್ತು
ಸತತ ಕಾಯಲಿಬೇಕು ದುರ್ಗೆದುರ್ಗೇ
ಚ್ಯುತದೂರ ವಿಜಯ ವಿಠ್ಠಲರೇಯನ ಪ್ರೀಯೆ
ಕೃತಾಂಜಲಿಯಿಂದಲಿ ತಲೆಬಾಗಿ ನಮಿಸುವೆ ೩

ಅಟ್ಟತಾಳ

ಶ್ರೀ ಲಕ್ಷ್ಮಿ ಕಮಲಾ ಪದ್ಮಾ ಪದ್ಮಿನಿ ಕಮ
ಲಾಲಯೆ ರಮಾ ವೃಷಾಕಪಿ ಧನ್ಯ ವೃದ್ಧಿ ವಿ
ಶಾಲ ಯಜ್ಞಾ ಇಂದಿರೆ ಹಿರಣ್ಯ ಹರಿಣಿ
ವಾಲಯ ಸತ್ಯನಿತ್ಯಾನಂತ ತ್ರಯಿ ಸುಧಾ
ಶೀಲೆ ಸುಗಂಧ ಸುಂದರಿ ವಿದ್ಯಾಸುಶೀಲೆ
ಸುಲಕ್ಷಣ ದೇವಿ ನಾನಾ ರೂಪಗಳಿಂದ ಮೆರೆವಮೃತ್ಯುನಾಶೆ
ವಾಲಗಕೊಡು ಸಂತರ ಸನ್ನಿಧಿಯಲ್ಲಿ
ಕಾಲಕಾಲಕೆ ಎನ್ನ ಭಾರವೊಹಿಸುವ ತಾಯಿ
ಮೇಲು ಮೇಲು ನಿನ್ನ ಶಕ್ತಿ ಕೀರ್ತಿ ಬಲು
ಕೇಳಿ ಕೇಳಿ ಬಂದೆ ಕೇವಲ ಈ ಮನ
ಗಾಳಿಯಂತೆ ಪರದ್ರವ್ಯಕ್ಕೆ ಪೋಪುದು
ಏಳಲ ಮಾಡದೆ ಉದ್ಧಾರ ಮಾಡುವ
ಕೈಲಾಸ ಪುರದಲ್ಲಿ ಪೂಜೆಗೊಂಬ ದೇವಿ
ಮೂಲ ಪ್ರಕೃತಿ ಸರ್ವ ವರ್ಣಾಭಿಮಾನಿನಿ
ಪಾಲಸಾಗರ ಶಾಯಿ ವಿಜಯವಿಠಲನೊಳು
ಲೀಲೆ ಮಾಡುವ ನಾನಾಭರಣೆ ಭೂಷಣೆ ಪೂರ್ಣೆ ೪

ಆದಿತಾಳ

ಗೋಪಿನಂದನೆ ಮುಕ್ತೆ ದೈತ್ಯಸಂತತಿ ಸಂ
ತಾಪವ ಕೊಡುತಿಪ್ಪ ಮಹಾಕಠೋರೆ ಉಗ್ರ
ರೂಪ ವೈಲಕ್ಷಣೆ ಅಜ್ಞಾನಕ್ಕಭಿಮಾನಿನಿ
ತಾಪತ್ರಯ ವಿನಾಶೆ ಓಂಕಾರ ಹೋಂಕಾರೆ
ಪಾಪಿಕಂಸಗೆ ಭಯ ತೋರಿದೆ ಬಾಲಲೀಲೆ
ವ್ಯಾಪುತೆ ಧರ್ಮ ಮಾರ್ಗ ಪ್ರೇರಣೆ ಅಪ್ರಾಕೃತೆ
ಸ್ವಪ್ನದಲಿ ನಿನ್ನ ನೆನೆಸಿದ ಶರಣನಿಗೆ
ಅಪಾರವಾಗಿದ್ದ ವಾರಿಧಿಯಂತೆ ಮಹಾ
ಆಪತ್ತುಬಂದಿರಲು ಹಾರಿ ಪೋಗೊವು ಸಪ್ತ
ದ್ವೀಪ ನಾಯಿಕೆ ನರಕ ನಿರ್ಲೇಪೆ ತಮೋಗುಣದ
ವ್ಯಾಪಾರ ಮಾಡಿಸಿ ಭಕ್ತಜನಕೆ ಪುಣ್ಯ
ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ ದುರ್ಗೆ
ಪ್ರಾಮುತವಾಗಿ ಎನ್ನ ಮನದಲ್ಲಿ ನಿಂದು ದುಃಖ
ಕೂಪದಿಂದಲಿ ಎತ್ತಿ ಕಡೆಮಾಡು ಜನ್ಮಂಗಳು
ಸೌಪರ್ಣಿ ಮಿಗಿಲಾದ ಸತಿಯರು ನಿತ್ಯ ನಿನ್ನ
ಆಪಾದಮೌಳಿ ತನಕ ಭಜಿಸಿ ಭವ್ಯರಾದರು
ನಾ ಪೇಳುವುದೇನು ಪಾಂಡವರ ಮನೋಭೀಷ್ಟೆ
ಈ ಪಾಂಚಭೌತಿಕದಲ್ಲಿ ಆವ ಸಾಧನ ಕಾಣೇ
ಶ್ರೀಪತಿನಾಮ ಒಂದೇ ಜಿಹ್ವಾಗ್ರಹದಲಿ ನೆನೆವ
ಔಪಾಸನ ಕೊಡು ರುದ್ರಾದಿಗಳ ವರದೇ
ತಾಪಸಜನ ಪ್ರೀಯ ವಿಜಯ ವಿಠ್ಠಲ ಮೂರ್ತಿಯ
ಶ್ರೀಪಾದಾರ್ಚನೆ ಮಾಳ್ಪ ಶ್ರೀ ಭೂ ದುರ್ಗಾವರ್ಣಾಶ್ರಯ ೫

ಜತೆ

ದುರ್ಗೆ ಹಾ ಹೆ ಹೊ ಹಾ ದುರ್ಗೆ ಮಂಗಳ ದುರ್ಗೆ
ದುರ್ಗತಿ ಕೊಡದಿರು ವಿಜಯ ವಿಠ್ಠಲ ಪ್ರೀಯೇ ೬

ಲಕ್ಷ್ಮೀಸ್ತೋತ್ರ

೧೪೭

ಧ್ರುವತಾಳ

ಕಾಯೇ ಲಕುಮಿ ಕಾಯೊ ವಿಠ್ಠಲ
ಕಾಯಾ ಸೃಜಿಸುವ ಕಮಲ ಸಂಭವ
ಕಾಯೊ ಪಾಲಕ ಕುಲಿಶ, ಕಾಯದೊಳಗುಳ್ಳ ಸಕಲ ದಿವಿಜರೇ
ಕಾಯಗೆಡುಹುವೆ ನಿಮ್ಮಯ ಪಾದಕೆ
ಮಾಯಾ ಮೃತ್ಯುವಿಗೆ ವಶಮಾಡದೆ
ಕಾಯೆಂದು ದೈನ್ಯವನು ಬಡುವೆನು ಕಾಯೆ ಲಕುಮಿ
ದಾಯಿಗರು ತಲೆದೋರದ ಮುನ್ನ
ಛಾಯಾವಾಗುವದು ಎನ್ನಯ ಶಿರಸಕೆ
ವಾಯುನಾಮಕ ವಿಜಯ ವಿಠ್ಠಲನು
ಈಯಾಬಲ್ಲನು ನೆನಸಿದಂತೆ ೧

ಮಟ್ಟತಾಳ

ಇರುಳು ಹಗಲು ಪೋಗಿ ಪರರನ್ನಾಶ್ರೈಸಿ
ಒರಲಿ ಒರಲಿ ನಿಂದು ಶರಗನು ಮಾರೊಡ್ಡಿ
ಉರಿಯೊಳು ಪತಂಗ ಭರದಿ ಬೀಳುವಂತೆ
ಅರೆಮರೆಯಿಲ್ಲದಲೆ ಅರ ಉರಿಯೊಳಗಿಳುವೆ
ಅರಿದೇನು ಫಲವೊ ಅರಿಪಾಣಿ ಹರಿಯ
ಸ್ಮರಣೆ ಗೈಯದಲೆ ಬರಿಪಾದೆನು ಮುಂದೆ
ತರಳನ್ನನವಗುಣವ ತರಲಾಗದು ಮನಕೆ
ಗರುಡಧ್ವಜ ವಿಜಯ ವಿಠ್ಠಲನೆ ಕೃಪೆಯಿರಲಿ ೨

ತ್ರಿವಿಡಿತಾಳ

ಆವಾತ ಭಕುತಿಯ ಬಿಡದೆ ದೃಢ ಚಿತ್ತದಲಿ
ಆವಾತನನ ಭಜಿಸೆ, ಆತಗೆ ಒಲಿದಿಪ್ಪ
ನಾವಾತನಾ ತಾನೆ ನಮಗೊಲಿದು ಸರ್ವದ

ಕಾವಾ ತಾ ದಯದಿಂದ ಭವವೆಂಬೊ ವನಧಿಗೆ
ನಾವಾ ತಾ ಬೇಡಿದ ಪರಮ ಸದ್ಗತಿಯ
ನೀವಾತಾ ಒಂದರ್ಧಾ ನಿಮಿಷಾದೊಳು
ದೇವತಾ ಮಣಿ ವಿಶ್ವ ವಿಜಯ ವಿಠ್ಠಲನೆಂದು
ಭಾವಾ ತಾನಲ್ಲಿಡು ಆ ವಾತ ಮತ ತೊಡು ೩

ಅಟ್ಟತಾಳ

ಆವಾ ಜೀವದ ಮೇಲೆ ಆವಾ ಜೀವದ ಇಂದ್ರಿ
ಆವಾ ಜೀವದ ಕರ್ಮ, ಆವಾ ಜೀವದ ಕ್ರೀಡೆ
ಆವಾ ಜೀವದಿಂದಲಾವಾ ಜೀವಕೆ ಬಂದು
ನೋವಾ ನೋವಾದೆನು ತಿಳಿಯದಲೆ
ಆವಾ ಜೀವದ ನಾರಿ ಆವಾ ಜೀವದ ಭವರು
ಆವಾ ಜೀವಾದವರು, ಆವಾವ ಜೀವರು
ಆವಾವಾಗೆ ಪೋಗೆ ನಾವೊಂದು ಬಿಡಿಸಾದೆ
ನೀವೊಂದು ಕಲ್ಪಿಸಿ, ಪ್ಲಾವಂಗನಂತೆ, ಕುಣಿಸೋದೇನೊ
ಸೂವರ್ಣ ಬಿಂದುವೆ ವಿಜಯ ವಿಠ್ಠಲನೆ ಅ
ಘಾವಳಿ, ಸವರಿ ಸಾಧನಕೆ ಬಲವಾಗು ೪

ಆದಿತಾಳ

ಎಂದಿಗೆ ದುಷ್ಕರ್ಮ ನಾಶನವಾಗೋದು
ಎಂದಿಗೆ ಸ್ವರೂಪ, ಜ್ಞಾನ ಫಲಿಸವುದು
ಎಂದಿಗೆ ಚರ್ಮ ಶರೀರ ದೂರಾಗೋದು
ಎಂದಿಗೆ ಆನಂದಕಭಿವೃದ್ಧಿ ತೋರೋದು
ಒಂದೊಂದು ದಾರಿಯಲ್ಲಿ, ತಾರತಮ್ಯದಿಂದ
ಬಂದು ಮುಣುಗುವೆ, ಗೋವಿಂದ ನಿನ್ನ ಬೆವರಿನೊಳು
ಎಂದಿಗೆ ನಿನ್ನಯ ನಂದನ ಕರತಂದು
ಪೊಂದಿಸುವನು, ನಿನ್ನೊಳು ಎನ್ನ ಸ್ಥಳದಲ್ಲಿ

ಅಂದಿನನತನಕ ನಿನ್ನಂದವ ತೋರುತ್ತ
ಬಂಧನದೊಳಗೆನ್ನ ನಿಂದಿರ ಗೊಡದಲೆ
ನಂದನ ವಿಜಯ ವಿಠ್ಠಲ ನಿನ್ನ ನಾಮವ
ಒಂದರಿಂದಲಿ ಪಾಪಾ, ಬೆಂದು ಪೋಗಲಿ ನಿತ್ಯ ೫

ಜತೆ

ಸ್ತೋತ್ತರ ಮನೋಹರ ದೈತ್ಯಕುಲಸಂಹಾರ
ಅತ್ರಿನಾಮ ದೇವಾ ವಿಜಯ ವಿಠ್ಠಲ ದಾತ ೬

ವಾಯುದೇವರ ಸ್ತೋತ್ರ

೧೪೪

ಧ್ರುವತಾಳ

ಧಾತ್ರಿತ್ರಯಕೆ ಗುರು ಸೂತ್ರನಾಮಕ ವಾಯು
ಪುತ್ರನು ಜಯಸಂಕರುಷಣ ದೇವಗೆ
ನೇತ್ರ ತ್ರಯಾದಿಗಳು ಪರಮಶಿಷ್ಯರು ಈತಗೆ
ಸುತ್ರಾಮ ವಿಬುಧರು ದನುಜಬಲ ಒಂದಾಗಿ
ಮಿತ್ರ ಭಾವದಲಿ ಮಂದರ ತಂದು ಮರ್ದಿಸಲು
ಗಾತ್ರವಾದ ಮಹ ಹಾಲಾ ಹಾಲ ಉದಭವಿಸ
ಗಾತ್ರವನು ಬಚ್ಚಿಟ್ಟು ದಾನವಮರರೋಡೆ
ಚಿತ್ರವೇಗದಲಿ ಶ್ರೀಹರಿ ಚರಣಾನುಗ್ರಹ
ಪಾತ್ರವೆಂದೆನಿಸಿ ಮಂಗಳವಾದ ತಪನೆಯ
ಪಾತ್ರಿಯೊಳಗೆ ಕಾಳಕೂಟವೆ ಭುಂಜಿಸಿ
ಮಾತ್ರದಲ್ಲಿ ತೇಗಿದನು ಜೀರ್ಣಮಾಡಿಕೊಂಡು
ಚಿತ್ರ ಚಾರಿತ್ರ ಅಚ್ಯುತ ವಿಜಯ ವಿಠ್ಠಲನ್ನ
ಸ್ತೋತ್ರನು ಭಾರತಿ ಕಳತ್ರ ಶುಚಿಮಿತ್ರ ೧

ಮಟ್ಟತಾಳ

ಪಶುಪತಿ ಮೂರೂರ ಅಸುರರ ಗೆಲಪೋಗೆ
ಅಸಮನಾತನು ಸರಸಿಜಸಂಭವನು ರಾ
ಜಿಸುವ ಸುವಾಸು ಮೇರುಧನಸು ನಾರಾಯಣ
ಅಸಿ ಮಾರ್ಗಣನು ತ್ರಿದಶ ಬಲರುವೇದ
ಎಸೆವ ವಾಜಿಗಳು ಸಾಹಸಿಗನು ತಾನಾಗಿ
ವಶದಲ್ಲಿರುತಿರೆ ಅಸುರಾರಿ ಗೆಲಿಸೆ
ಅಸಹಾಯ ಶೂರ ಹನುಮಾ ಬಿಸಿನಿಧಿಗೆ ಹಾರಿ
ದಶಶಿರನ ಭಂಜಿಸಿ ನಗರವ ಉರುಪಿ
ಅಸುರುಹ ಕೋಟಿಲಿಂಗ ಅಸಮ ವಿಜಯ ವಿಠ್ಠ
ಲ ಸದನನ್ನ ನಾಮ ರಸವಾಗುಂಬೊ ಪರಶುಪಗಿಂದಧಿಕ ೨

ರೂಪಕತಾಳ

ಮುಂದೆ ಈತನು ಬ್ರಹ್ಮಾ ವಾಯರ್ವ್ಯೆ ಬ್ರಹ್ಮಾ
ಎಂದೆಂಬೊ ನಿಗಮಾರ್ಥವ ಪೇಳುತಲಿವಕೊ
ಸಂದೇಹ ಸಲ್ಲದು ತದ್ವೇಷವ ಮರೆದು
ಪೊಂದಿ ವೈಷ್ಣವರಾಗಿ ವಾತನ್ನ ಪಾದ
ವಂದಿಸಿ ಪಾಪವಿಮುಕ್ತರಾಗುವುದು
ತಂದೆ ತಾಯಿ ಮತ್ತೆ ಬಂಧು ಬಳಗ ಗುರು
ವೆಂದರೆ ಇವರೇ ನಮಗೆ ಸರ್ವರಿಗೇ
ಮಂದಮಾರ್ಗವ ಬಿಡು ಮನವೀತನಲ್ಲಿಡು
ಸ್ಕಂದನಾಮ ಸಿರಿ ವಿಜಯ ವಿಠ್ಠಲನ್ನ
ದ್ವಂದ್ವಪಾದ ತೋರಿ ಸಾಂದ್ರಸುಖವೀವ ೩

ಝಂಪೆತಾಳ

ಹನುಮನ ನಂಬಿದ ಸುಗ್ರೀವನು ಗೆದ್ದ
ಹನುಮನ ನಂಬಿದ ವಿಭೀಷಣ ಪ್ರಸಿದ್ಧ
ಹನುಮನ ನಂಬಿದರೆ ಸರ್ವ ಕಾರ್ಯವೆ ಬದ್ಧ
ಹನುಮನ ನಂಬಿದವ ಪಾಪದಲಿ ಬಿದ್ದ

ಹನುಮ ಹನುಮನೆಂಬೋದು ಜ್ಞಾನಕೆ ಶಬ್ದ
ಹನುಮನೆ ಮಹತತ್ವಕ್ಕಭಿಮಾನಿಯೆ ಸಿದ್ಧ
ಹನುಮಗೆ ವನಜ ಸಂಭವಗೆ ಅಭೇದ
ಮನೊಜೀವ ವಿಜಯ ವಿಠ್ಠಲನಲ್ಲಿ ಇದ್ದ ೪

ತ್ರಿವಿಡಿತಾಳ

ಖಗನು ಕಲಶವ ತಂದು ಜಗದೊಳು ಪೆಸರಾದ
ಗಗನಾಂಗಣದಲಿ ಸಂಜೀವ ನಗವ
ಬಗದು ತೃಣವಮಾಡಿ ಎಗರಿಸಿಕೊಂಡು ಎಳೆ
ನಗಿಯಿಂದ ದಾಣಿಕಲ್ಲಂತೆ ಹಾರಿಸುತ್ತ
ಹಗೆಯಿಂದ ಮಡಿದ ಕಪಿಗಳನೆಬ್ಬಿಸಿ ಮೂರು
ಜಗದಪತಿಗೆ ಸೇವೆ ಅರ್ಪಿಸಿದನು
ಜಗಸೇತುವೆ ನಾಮ ವಿಜಯ ವಿಠಲ ಬಲ್ಲ
ಮಿಗಿಲಾರು ಹನುಮಗೆ ಯುಗ ಯುಗದೊಳಗೆ ೫

ಅಟ್ಟತಾಳ

ರಣದೊಳು ಫಣಿಪನ್ನ ಅವತಾರವಾದ ಲ
ಕ್ಷ್ಮಣನು ಬಿದ್ದಾಗ ಮೂಲರೂಪ ಸ್ಮರಿಸಿರೆ
ಗಣನೆಯಿಲ್ಲದೆ ಒಂದು ಕರದಲ್ಲಿ ಎತ್ತಿ ರಾ
ವಣನು ಸೋಜಿಗ ಪೊಂದಿ ಹನುಮನ ಪೊಗಳಿದಾ
ಎಣೆಯಾರು ಈ ಹನುಮಗೆ ಸುರಾಸುರ
ಗಣದೊಳು ವಿಕ್ರಮಗೆ ನಿಜನಾಮ
ರಣಪ್ರಿಯ ವಿಜಯವಿಠ್ಠಲದಾಸರ ಪ್ರೇಮಗೆ
ರಣದೊಳು ಫಣಿಪನಾದಾ ೬

ಆದಿತಾಳ

ಭೀಮನಾದ ಹಿಡಿಂಬಾದಿ ಆ ಮಾಗಧನ ಸೀಳಿದ
ಭೂಮಿಯನೀಯೆನೆಂಬೊ ನೃಪನ ಯಮಪುರಿಗೆ ಕಳುಹಿದ
ಕಾಮನಯ್ಯನ ಪ್ರೀತಿ ಬಡಿಸಿ ತಾಮರಸ ಪರಿಹರಿಸಿದ

ಶ್ರೀಮದಾಚಾರ್ಯರಾಗಿ ಕುಮತಗಳ ದಹಿಸಿದ
ಆ ಮಹಾತತ್ವದ ಸುರಳಿ ಹರಹಿ ವೈಷ್ಣವರ ಉದ್ಧರಿಸಿದ
ಕಾಮನಾಮ ವಿಜಯ ವಿಠಲ ಈ ಮಹಿಯೊಳಗೆ ಮೆರೆಸಿದ ೭

ಜತೆ

ವನಜಜಾಂಡಗಳೆಲ್ಲವನು ದಿನದಿನ ಪಾಲಿಪ
ಧನುರ್ಧರ ವಿಜಯ ವಿಠ್ಠಲನ ಪ್ರೇಮದ ದಾಸಾ ೮

೧೪೯

ಧ್ರುವತಾಳ

ಪ್ರಾಣ ಅಪಾನ ವ್ಯಾನ ಸಮಾನ ಉದಾನ
ಜ್ಞಾನಮಯಾ ಸತ್ವಶರೀರ ಸಮೀರ
ಆನಂದಸಾಂದ್ರ ಹರಿನಂದ ಪವಮಾನ
ಮಾನದಭಿಮಾನಿಯ ವಾಣಿಪ್ರೀಯಾ
ನೀನೆ ಸರ್ವರಲ್ಲಿ ಗೀರ್ವಾಣರಿಗೆ ಮೊದಲು
ನಾನಾ ಪ್ರಕಾರ ಜೀವಿಗಳಾಧಾರಾ
ಸ್ನಾನ ಜಪತಪ ಹೋಮ ಮೌನ ತೀರ್ಥಯಾತ್ರೆ
ನೀ ನಡೆಸಲದರಿಂದ ಸಿದ್ಧಿಪವು
ನೀನೆಲ್ಲೋ ಅಲ್ಲಿ ಶ್ರೀ ನಾರಾಯಣನು ಇಪ್ಪ
ಏನೆಂಬೆ ನಿನ್ನಯ ಕರ್ತೃತನಕೆ
ಕ್ಷೋಣಿ ವಿಕ್ಷೋಣಿಯಲ್ಲಿ ಸರ್ವವ್ಯಾಪಾರ ಪಂಚ
ಪ್ರಾಣಜನಕ ವಾಯು ನಿನ್ನದಯ್ಯಾ
ದಾನವಾಮರರ ಮಧ್ಯ ಬಂದು ಅಘೋರ ವಿಷ
ಪಾನವನ್ನು ಮಾಡಿದ ಪ್ರಭಂಜನಾ
ದೀನ ವತ್ಸಲ ನಮ್ಮ ವಿಜಯ ವಿಠ್ಠಲನಂಘ್ರಿ
ರೇಣು ಶಿರದಲ್ಲಿಟ್ಟ ರೈರಮಣಾ ೧

ಮಟ್ಟತಾಳ

ಸುರರು ತಮ್ಮೊಳು ತಾವೇ ನೆರೆದು ಯೋಚಿಸಿದರು
ಮರುತನು ನಮಗೆಲ್ಲಿ ಹಿರಿಯನು ಅಹುದೆಂಬ
ಗರುವಿಕೆತನವೇನು ಸರಿ ಸರಿ ಬಂದಾಗು
ತ್ತರವನಾಡುತಿರೆ ಹರಿ ಅರಿದು ಒಂದು
ಶರೀರವನು ಮಾಡಿ ಪರಿ ಪರಿಯ ತ
ತ್ವರ ಒಳಗೆ ಪೋಗಿಸಿದ ಮರುತನ ಸಹವಾಗಿ
ಪುರುಷ ನಾಮಕ ದೇವ ವಿಜಯ ವಿಠ್ಠಲರೇಯ
ಸುರರಿಗೆ ಪ್ರಾಣನಿಗೆ ಪರೀಕ್ಷಿಸಿ ತೋರಿದಾ ೨

ತ್ರಿವಿಡಿತಾಳ

ಚರಣದಿಂದಲಿ ಇಂದ್ರ ಸೂನು ಪೋಗಲು ಹೆಳವ
ಕರಗಳಿಂದಲಿ ದಕ್ಷ ಪೋಗಲು ಕರಹೀನ
ಮರಳೆ ನಯನದಿಂದ ಭಾನು ಪೋಗಲು ಕುರುಡ
ತರಣಿಮಕ್ಕಳು ಪೋಗೆ ಪರಿಮಳವಾಗದು
ವರುಣ ಪೋಗಲು ರುಚಿಯೆ ತೋರದು ಕಾಣೋ
ಮರುತ ಸಖನು ಪೋಗೆ ಮೂಕ ನಾಹಾ
ತೆರಳಿದಿಗ್ದೇ ವತಿಗಳು ಪೋಗೆ ಕಿವುಡನು
ಅರಣಿ ಸ್ವಾಯಂಭು ಪೋಗಲು ಅಲ್ಲಿಯೋ ನಿಲ್ಲ
ಮರುತನು ಪೋಗಲು ಮೈ ಸ್ಮರಣೆಯು ಇಲ್ಲ
ಗರುಡ ಶೇಷರುದ್ರ ಪೋಗಲು ಹಾನಿಲ್ಲ
ಇರದೆ ಗಣೇಶಾದಿ ಪೋಗೆ ಆದೇಹ ಅನಿಸಲಿಲ್ಲ ಪೆಣನೆಂದು
ವರ ಮುಖ್ಯ ಪ್ರಾಣ ಸ್ಥಾನದಿಂದಲಿ ವೇಗಾ
ತೆರಳಿ ಪೋಗಲು ದೇಹ ಪೆಣನೆಂದೆನಿಸಿತು
ಪರೀಕ್ಷಿಸಿ ತಿಳಿದು ನಾಚಿಕೆ ಉಳ್ಳವರಾಗಿ
ಮರಳೆ ಪ್ರವೇಶಿಸೀ ಏಳಾದಿರೇ

ಹರಿಗೆ ಕೇವಲ ಮುಖ್ಯದಾಸ ಮುಖ್ಯಪ್ರಾಣ
ತಿರುಗಿ ಬಂದು ಹೋಗಲು ಚೇತನಾಗೆ
ಸುರರು ತಮ್ಮೊಳು ತಾವು ನೋಡಿಕೊಳ್ಳುತಲೆ
ಮರುತದೇವನೆ ನಮಗೆ ಹಿರಿಯನೆಂದು
ಕರವ ಮುಗಿದು ನಿಂದು ಜಯವೆಂದು ಕೊಂಡಾಡಿ
ಗುರುವೇ ನೀನೆಂದು ಪವನನ ಕೊಂಡಾಡೇ
ಮಿರಗುವಾಂಬರಧರೆ ವಿಜಯ ವಿಠ್ಠಲನ
ಶರಣರೊಳಗೆ ಮುಖ್ಯಶರಣ ಈತನು ಕಾಣೊ ೩

ಅಟ್ಟತಾಳ

ತಂದೆ ಈತನು ಕಾಣೊ ತಾಯಿ ಈತನು ಕಾಣೊ
ಬಂಧು ಬಳಗ ಸರ್ವಾರ್ಥವು ಈತನು
ಹಿಂದು ಮುಂದೆ ನಮಗಾಧಾರ ಈತನು
ಎಂದೆಂದಿಗೆ ಸಂಬಂಧಿಗನೀತನು
ಚಂದದ ರಸಾಯನ ಭೋಕ್ತನು ಈತನು
ಇಂದ್ರಿಯಂಗಳಿಗೆ ಪ್ರತಿದಿನ ನಿಯಾಮಕಾ
ನಂದ ಮೂರುತಿ ನಮ್ಮ ವಿಜಯ ವಿಠ್ಠಲನಂಘ್ರಿ
ನಿಂದಿರಾದರ್ಚಿಪ ಗರಳ ಭರಿತನದೇವಾ ೪

ಆದಿತಾಳ

ತರಣಿ ಅಯನುತ್ತರ ಗೌರ ಪಕ್ಷ ಹಗಲು
ನರ ಭೂತವಾಯು ವ್ಯೋಮಾದಿಯಲ್ಲಿ ನೀನೆ
ಇರುಳು ವಲ್ಲಭೆ ದಕ್ಷಿಣಾಯನ ಕೃಷ್ಣ ಪಕ್ಷ
ಇರುಳು ಸ್ತ್ರೀ ತೇಜಾದಿಯಲ್ಲಿ ನಿನ್ನ ರಮಣಿ
ಪರಿಪೂರ್ಣವಾಗಿ ನೀವಿಬ್ಬರು ಸರ್ವದಾ
ಹರಿ ಅಜ್ಞೆಯಿಂದ ವ್ಯಾಪಾರ ಮಾಳ್ಪರು
ಕರಣಶುದ್ಧಿಯಲ್ಲಿ ಈ ಪರಿ ತಿಳಿದವರಿಗೆ

ದುರಿತಗಳೋಡಿಸಿ ವರ ಪದವಿಯ ನೀವೆ
ಸರಿಗಾಣೆ ನಿನ್ನ ಅದ್ಭುತ ಲೀಲೆಗೆ ನಾನು
ಎರಗಿ ನಮೋನಮೋ ಎಂಬೆ ಮರುತ ಪ್ರಧಾನನೆ
ಸಿರಿಯರಸ ವಿಜಯ ವಿಠ್ಠಲನ್ನ ನೆಚ್ಚಿದ
ಪರಮಭಕ್ತನು ನೀ ಎನಗೆ ಭರದ ಭಕ್ತಿಯಕೊಡು ೫

ಜತೆ

ಮೂರವತಾರದ ಗುರುವೆ ಸುರ ತರುವೆ
ವಾರವಾರಕ್ಕೆ ವಿಜಯ ವಿಠ್ಠಲನ್ನ ಪ್ರತಿಬಿಂಬಾ ೬

ಹನುಮಂತನ ಸ್ತೋತ್ರ

೧೫೦

ಧ್ರುವತಾಳ

ಜಲಜಸಂಭವನ ಪಟ್ಟಕ್ಕೇರುವ ಗುರುವೆ
ಇಳೆಯೊಳು ಕೋತಿ ಕಾಯ ಧರಿಸಿ ಪುಟ್ಟಿದ್ದೇನೊ
ಬಲು ಪ್ರಳಯದಲ್ಲಿ ಜಾಗ್ರತನಾಗಿದ್ದ ಮರುತ
ಕುಲಿಶ ಧರನಿಂದನೊಂದು ಮೂರ್ಛೆಗೊಂಡಿದ್ದೇನೊ
ಕೆಲಕಾಲ ಸಮಸ್ತ ಶ್ರುತಿ ನಿರ್ಣಯದಂತೆ
ಜಲಜಾಪ್ತನಲ್ಲಿ ನಿಂದು ಓದು ಓದಿದ್ದೇನೊ
ಬಲವಂತನಾಗಿ ಸುರರಕೈಯ ಕಪ್ಪವ ಕೊಂಬುವನೆ
ಒಲಿದು ಸುಗ್ರೀವಂಗೆ ದೂತನಾದದ್ದೇನೊ
ಗಳಿಗೆ ಬಿಡದೆ ಶ್ರೀ ಹರಿಯ ಕೂಡ ಇಪ್ಪಗೆ
ತಲೆಬಾಗಿ ರಾಮನ ಕಂಡನೆನಿಸುವುದೇನೊ
ಛಲದಿಂದ ಖಳಜಾತಿಯ ಕೊಲಿಸುವ ಹರಿಪ್ರಿಯ
ಹುಲುವಾಲಿಯೊಬ್ಬನ್ನ ಕೊಲ್ಲಿಸಿದ ಬಗೆಯೇನೊ
ಜಲಜಜಾಂಡ ಕರತಲದಲ್ಲಿ ಕಾಂಬ ಪ್ರಾಣ
ಚಲುವ ಸೀತೆಯಗೋಸುಗ ಹುಡುಕಲು ಪೋದದ್ದೇನೊ
ಸಲೆ ಆಲೋಚನೆಯಿಂದ ಎಲ್ಲೆಲ್ಲಿದ್ದ ದ್ರವ್ಯ ನೋಳ್ಪನೆ

ಕುಳಿತು ಕಪಿಗಳ ಕೂಡಾಲೋಚನೆ ಮಾಡಿದ್ದೇನೊ
ಪಳಮಾತ್ರ ಕಾಲಭೀತಿ ಇಲ್ಲದ ಪ್ರತಾಪನೆ
ಸುಳಿದೆ ಬಿಡಾಲನಾಗಿ ಲಂಕೆಯೊಳು ಸೋಜಿಗವೇನೊ
ಮಲೆತ ಮಲ್ಲರ ವೈರಿ ವಿಜಯ ವಿಠ್ಠಲನಂಘ್ರಿ
ಜಲಜಾರ್ಚನೆ ಮಾಳ್ಪ ಸೂತ್ರ ನಾಮಕ ವಾಯು ೧

ಮಟ್ಟತಾಳ

ಹರಿಸಿರಿಗೆ ನಿತ್ಯ ಅವಿಯೋಗ ಚಿಂತಿ ಪನೆ
ವರ ಕೋಡಗನಾಗಿ ಮುದ್ರೆ ಇತ್ತದ್ದೇನೊ
ಉರಗನೊಡನೆ ಮೇರುಮಗನ ಕಿತ್ತಿದ ಧೀರ
ತರುಜಾತಿಗಳ ಕಿತ್ತು ಬಿಸುಟಿದ್ದೇನೊ
ಕರಣಾಭಿಮಾನಿಗಳ ಜಯಸಿದ ಜಗಜ್ಜೀವ
ನೊರಜು ದಾನವರ ಗೆದ್ದದ್ದು ಮಹಾ ಸೊಬಗೆ
ಸರುವ ಭುವನ ನಿನ್ನ ವಶವಾಗಿ ಇರಲು
ಪುರುಹೂತನ ವೈರಿಯ ಕೈಗೆ ಸಿಕ್ಕಿದ್ದೇನೊ
ಪರಮಪುರುಷ ರಂಗ ವಿಜಯ ವಿಠ್ಠಲರೇಯನ
ಕರುಣದಿಂದಲಿ ನಮ್ಮನು ಪೊರೆವ ಪ್ರಾಣಾ ೨

ತ್ರಿವಿಡಿತಾಳ

ಗರಳ ಧರಿಸಿ ಸುರರ ಕಾಯ್ದ ಕರುಣಾನಿಧಿ
ದುರುಳ ರಾಮಣನ ಸಭೆಯೊಳಂಜಿದ್ದೇನೊ
ಸರಸಿಜಜಾಂಡವ ಸಖನಿಂದ ದಹಿಸುವನೆ
ಭರದಿಂದ ಲಂಕೆಯ ದಹನ ಮಾಡಿದ್ದದ್ದೇನೊ
ನಿರುತ ಅಮೃತ ಉಂಡು ಸುಖಿಸುವ ಸಮರ್ಥ
ಪರಿ ಪರಿ ಫಲದಿಂದ ಹಸಿವೆ ನೂಕಿದ್ದೇನೊ
ಧರೆ ಚತುರ್ದಶದಲ್ಲಿ ನೀನೆ ಚೇಷ್ಟಪ್ರದನು ವಾ
ನರ ಬಳಗವನ್ನು ಖ್ಯಾತಿ ಮಾಡಿದ್ದೇನೊ
ನೆರೆದ ಕಟಕವೆಲ್ಲ ಕರತಲದಲಿ ದಾಟಿಪನೆ
ಗಿರಿಗಳ ಹೊತ್ತು ತಂದು ಶರಧಿ ಬಿಗಿದದ್ದೇನೊ

ಹರಿಯ ರೂಪಾನಂತ ಸಂತತ ಧರಿಪನೆ
ಧುರದೊಳು ರಾಮನ ಪೊತ್ತನೆನಿಪದೇನೊ
ಕರದಲ್ಲಿ ಮಹಾಗದೆ ಪಿಡಿದಿಪ್ಪ ಪುರುಷನೆ
ಗಿರಿ ತರುಶಾಖದಿಂದ ರಣವ ಮಾಡಿದ್ದೇನೊ
ಸರುವನಿಯಾಮಕನಾಗಿ ವ್ಯಾಪಾರ ಮಾಡಿಪನೆ
ಕರೆದು ವಿಭೀಷಣನ ಪ್ರಶ್ನೆ ಕೇಳುವುದೇನೊ
ಭರಣ ಮಿನುಗುವ ವಸದಿಂದೊಪ್ಪುವ
ವರ ಕೌಪೀನವ ಹಾಕಿ ಚರಿಸಿದ ಬಗೆ ಏನೋ
ತರಣಿ ವಂಶಜ ರಾಮ ವಿಜಯ ವಿಠ್ಠಲರೇಯನ
ಚರಿತೆಯಂದದಿ ನಿನ್ನ ಚರಿಯ ತೋರಿದ ಹನುಮ ೩

ಅಟ್ಟತಾಳ

ದ್ವಿತೀಯ ಕೂರ್ಮನಾಗಿ ಜಗವ ಪೊತ್ತ ಶಕ್ತ
ಭೃತ ಸಂಜೀವನಾದ್ರಿ ಭಾರತರವೇನೊ
ಸತತ ಆರಬ್ಧಾಂತಗಾಮಿ ನೀನಾಗಿದ್ದು
ಜಿತಶಕ್ರನ ಪಾಶದೊಳಗೆ ಬಿದ್ದದೇನೊ
ಅತಿಶಯ ಜ್ಞಾನದಲಿಪ್ಪ ಪವನನೆ
ಖತಿಗೊಂಡು ಮಾಯಾ ಸೀತೆಗೆ ಚಿಂತಿಸಿದ್ದೇನೊ
ಅತಿಶಯ ಕೋಟಿ ರಾವಣಿ ಭಂಗ ನೆರೆದು
ಪತಿಯ ಬಾಣದಲಿಂದ ಅವನ ಕೊಲಿಸಿದ್ದೇನೊ
ಶ್ರುತಿತತಿ ವಿನುತ ಶ್ರೀವಿಜಯ ವಿಠ್ಠಲನ್ನ
ಸ್ತುತಿಸಿ ಕೊಳುತ ಹರಿಗೆ ಪ್ರೀತನೆನಿಸಿದ ಪ್ರಾಣ ೪

ಆದಿತಾಳ

ಆ ಮಹಾದೇವಾದ್ಯರಿಗೆ ಪಟ್ಟಕೊಡಿಸಿದವನೆ
ಭೂಮಿಯೊಳಗೆ ವಿಭೀಷಣಗೆ ಪಟ್ಟ ಕೊಡಿಸಿದ್ದು ಘನವೆ
ರೋಮ ರೋಮಕೆ ಕೋಟಿ ಲಿಂಗ ಉದುರಿಸಿದವನೆ
ಆ ಮಹಾ ಕಾಶಿಗೆ ಲಿಂಗ ತರಲು ಪೋದ ಬಗೆ ಏನೊ

ಕಾಮಿಸಿದಲ್ಲಿ ವ್ಯಾಪ್ತನಾಗಿ ಇರುವನೆ ಸು
ತ್ರಾಮ ಸುತನ ರಥದಲ್ಲಿ ನಿಂತದ್ದೇನೊ
ಕೋಮಲಾಂಗನೆ ನಿನ್ನ ವರ್ಣಿಸಲು ಭಾರತಿಗರಿದು
ಈ ಮರ್ತ್ಯಲೋಕದಲ್ಲಿ ಈ ರೂಪವಾದದ್ದೇನೊ
ಸೋಮಾರ್ಕರ ಸೋಲಿಸುವ ಮಾಣಿಕ್ಯ ಮನೆ ಇರಲು
ಧಾಮ ಮಾಡಿದ್ದೇನೊ ಕಿಂಪುರುಷ ಖಂಡದೊಳಗೆ
ಸಾಮ ಗಾಯನಲೋಲ ವಿಜಯ ವಿಠ್ಠಲರೇಯ
ಸ್ವಾಮಿ ಕಾರ್ಯ ಧುರಂಧರ್ಯ ಭಕ್ತ ಸೌಕರ್ಯ ೫

ಜತೆ

ಒಡೆಯನಾಜ್ಞಾವ ತಾಳಿ ಕಾರ್ಯ ಮಾಡಿದ ಗುರುವೆ
ಕಡು ಸಮರ್ಥ ವಿಜಯ ವಿಠ್ಠಲನ ನಿಜವಾಸ ೬

೧೫೧

ಧ್ರುವತಾಳ

ಕಡಗ ಕಂಕಣದಿಂದ ಶೋಭಿತವಾದ ಹಸ್ತಾ
ಪೊಡವಿಪತಿ ರಘುನಾಥಗೆ ಎರಗಿ ಮುಗಿದ ಹಸ್ತಾ
ಒಡನೆ ಕುರಹುಗೊಂಡು ಸೀತೆಗಿತ್ತ ಹಸ್ತಾ
ಗಿಡಗಳು ಮುರಿದು ತರಿದಂಥದೀ ಹಸ್ತಾ
ಘುಡಿಘುಡಿಸುತ ಅಕ್ಷನ ಸದೆಬಡದ ಹಸ್ತಾ
ಜಡರಾವಣನ ಎದೆಯಲ್ಲಿ ಗುದ್ದಿದ ಹಸ್ತಾ
ತಡಿಯದೆ ಚೂಡಾಮಣಿಯ ಒಡೆಯಾಗಿತ್ತ ಹಸ್ತಾ
ಕಡು ಪರಾಕ್ರಮದ ಹಸ್ತಾ
ಕಡಲಾ ಬಂಧಿಸಲು ಗಿರಿಗಳ ತಂದ ಹಸ್ತಾ
ಬಿಡದೆ ಪೂಜಿಪರಿಗೆ ಅಭಯಕೊಡುವ ಹಸ್ತಾ
ಸಡಗರದ ದೈವ ಸಿರಿ ವಿಜಯ ವಿಠ್ಠಲರಾಮನ
ಅಡಿಗಳಲ್ಲಿ ಅನುಗಾಲ ಇಟ್ಟ ಹಸ್ತಾ ೧

ಮಟ್ಟತಾಳ

ಗದೆಯಿಂದ ಅರಿಗಳ ಸದೆ ಬಡೆದ ಹಸ್ತಾ
ಮುದದಿಂದಲಿ ಅದ್ರಿವೊದಗಿ ತಂದ ಹಸ್ತಾ
ಕದನದೊಳಗೆ ಮಾಗಧನ ಸೀಳಿದ ಹಸ್ತಾ
ಮದನೃಪನನುಜನ ಉರವ ಬಗೆದ ಹಸ್ತಾ
ಸುದತಿಯ ತುರುಬು ತಿದ್ದಿದ ಕರುಣ ಹಸ್ತಾ
ಪದೋಪದಿಗೆ ನಮ್ಮ ವಿಜಯ ವಿಠ್ಠಲನ್ನ
ಸದಮಲ ಭಕ್ತಾ ಎನಗೆ ಪೊಳೆವ ಹಸ್ತಾ ೨

ತ್ರಿವಿಡಿತಾಳ

ರಣದೊಳು ಲಕ್ಷ್ಮಣನ ಎತ್ತಿತಂದ ಹಸ್ತಾ
ಕ್ಷಣದೊಳು ದ್ರೋಣನ ರಥ ಬಗೆದ ಹಸ್ತಾ
ಸೆಣಿಸುವರಿಗೆ ಎದೆ ಶೂಲವಾಗಿಹ ಹಸ್ತಾ
ವಿನಯದಿಂದಲಿ ಹರಿವಾಣ ಒಯಿದ ಹಸ್ತಾ
ಮಣಿಗಣದಿಂದ ರಾಮನ ಎಣಿಸುವ ಹಸ್ತಾ
ತೃಣಮಾಡಿ ಬಕನ ಸಂಹರಿಸಿದ ಮಹಾ ಹಸ್ತಾ
ಅನಿಮಿಷರಿಗೆ ತುತ್ತುಮಾಡಿ ನೀಡಿದ ಹಸ್ತಾ
ವನಿತೆಗೆ ಸೌಗಂಧಿ ಕುಸುಮ ತಂದ ಹಸ್ತಾ
ವನದೊಳು ಅಸುರೆಯ ಬಿಗಿದಪ್ಪಿದ ಹಸ್ತಾ
ಘನದಂಡ ಕಾಷ್ಟವ ಧರಿಸಿ ಮೆರೆದ ಹಸ್ತಾ
ಅನಿಮಿತ್ಯ ಬಂಧು ಶ್ರೀ ವಿಜಯ ವಿಠ್ಠಲ ರೇಯನ
ಮನದೊಳಿಟ್ಟು ಅರ್ಚನೆ ಮಾಡುವ ಹಸ್ತಾ ೩

ಅಟ್ಟತಾಳ

ವಾರಿಜಜಾಂಡವ ಸಾಕುವುದೀ ಹಸ್ತಾ
ಭಾರತೀದೇವಿಯ ಮನಸಿಗೊಪ್ಪುವ ಹಸ್ತಾ
ನೂರಾರು ಖಂಡಗ ಪಾಕ ಗೈಸಿದ ಹಸ್ತಾ
ವಾರಣದಿಂದ ಮಸ್ತಕವ ಪಿಡಿದ ಹಸ್ತಾ
ಮಾರಾರಿಗೆ ಉಪದೇಶ ಮಾಡಿದ ಹಸ್ತಾ

ವಾರಣಗಳ ಗಗನಕ್ಕೆ ಇಟ್ಟ ಹಸ್ತಾ
ಚಾರು ಚರಿತ ನಮ್ಮ ವಿಜಯ ವಿಠ್ಠಲರೇಯನ
ಹಾರ್ಯೆಸಿ ಹರುಷದಿ ಪೂಜಿಪ ಈ ಹಸ್ತಾ ೪

ಆದಿತಾಳ

ವಿಷ ಉದ್ಭವಿಸಲು ಒರಸಿ ಕಳೆದ ಹಸ್ತಾ
ಶಿಶುವಾಗಿ ಹುರಳಿ ಗುಗ್ಗರಿ ಸವಿದ ಹಸ್ತಾ
ಬಿಸಿಜ ಸಖಿಗೆ ತುಡಿಕಿ ಕ್ರಮಗೆಡಿಸಿದ ಹಸ್ತಾ
ನಿಷಿಕ ತಿಂತ್ರಿಣಿ ಬೀಜದಿ ಸಾಲತಿದ್ದಿದ ಹಸ್ತಾ
ದಶ ಚತುರ್ಲೋಕವ ಒಳಗಡಗಿಸುವ ಹಸ್ತಾ
ಹಸಿದು ತುತಿಸಲು ಅಮೃತವಗರೆದ ಹಸ್ತಾ
ದಶಶಿರನ ಮದಕಾಯ ಶರಗು ಎಳೆದ ಹಸ್ತಾ
ಅಸುರ ವೈರಾವಣನ ಕೊಂದು ಬಿಸುಟ ಹಸ್ತಾ
ವಸುಧೆಯ ಸುರರಿಗೆ ಮುದ್ರೆ ಒತ್ತಿದ ಹಸ್ತಾ
ಶಶಿವರ್ಣದಂತೆ ನಖದಿಂದೊಪ್ಪುವ ಹಸ್ತಾ
ವಸುಧೀಶ ವಿಜಯ ವಿಠ್ಠಲ ರಾಮಕೃಷ್ಣ ವ್ಯಾಸರೆ
ಬಿಸಜ ಪಾದವ ಬಿಡದೆ ಭಜಿಪ ಮಂಗಳ ಹಸ್ತಾ ೫

ಜತೆ

ಮೂರಾವತಾರದಲ್ಲಿ ಕಾರ್ಯ ಮಾಡಿದ ಹಸ್ತಾ
ಧೀರ ಶ್ರೀ ವಿಜಯ ವಿಠ್ಠಲಗೆರಗಿದ ಹಸ್ತಾ ೬

೧೫೨

ಧ್ರುವತಾಳ

ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಪೆಂಡೆ
ಯಿಂದ ಝಗ ಝಗಿಸುವ ಅರುಣಾಕಾಂತಿಯ ಚರಣ
ಇಂದುವಿನ ಸೋಲಿಸುವ ಪ್ರಕಾಶಪೂರ್ಣಮಯ
ದಿಂದ ಬ್ರಹ್ಮಾಂಡವನ್ನು ಬೆಳುಗುತಿಪ್ಪ ಚರಣ
ತಂದನ್ನ ತಾನ ಎಂದು ಕೈಯ್ಯಲ್ಲಿ ಕಿನ್ನರಿ ಧರಿಸಿ

ಅಂದವಾಗಿ ಶ್ರೀ ಹರಿಯ ಮುಂದೆ ಕುಣಿವ ಚರಣ
ಇಂದು ಮೌಳಿ ಮುಖ್ಯ ಸುರರಾದ್ಯರಿಂದ ಆ
ನಂದವಾಗಿ ನಿತ್ಯ ಪೂಜೆ ಗೊಂಬ ಚರಣ
ಅಂದಿಗೆ ಪೊಂಗೆಜ್ಜೆಯನಿಟ್ಟಚರಣ
ಮಂದ ಮಾನವರಿಗೆ ಪ್ರೀತಿ ಬಡಿಸಿ ಸುಖ
ಸಿಂಧುವಿನೊಳಗಿಟ್ಟು ದಯ ಮಾಳ್ಪುದೀ ಚರಣ
ಸಂದೇಹ ವಿಪರೀತ ಜ್ಞಾನ ಜೀವರಿಗೆ ನಿ
ರ್ಬಂಧನದೊಳು ಪೋಗಿಸಿ ಕಷ್ಟಬಡಿಸುವ ಚರಣ
ಮುಂದೆ ಬೊಮ್ಮನಾಗಿ ಸತ್ಯ ಲೋಕದಲ್ಲಿ ಮೃ
ಗೇಂದ್ರನ ಗದ್ದುಗಿ ಮೇಲೆ ವಾಲಗಗೊಂಬುವ ಚರಣ
ಒಂದೊಂದು ರೂಪ ಗುಣ ಕ್ರಿಯ ಸಮೂಹಗಳು ಅ
ತೀಂದ್ರಿಯವಾಗಿ ಮನಕೆ ತೋರುವ ಶ್ರೀ ಚರಣ
ಸುಂದರ ಭಾರತಿ ದೇವಿ ಏಕಾಂತದಲಿ ನೋಡಿ
ಗಂಧ ಪರಿಮಳ ಪೂಸಿ ಅಪ್ಪಿಕೊಂಬುವ ಚರಣ
ತಂದೆ ತಾಯಿಗಳಂತೆ ತಪ್ಪದೆ ಅನುದಿನ
ಅಂದದಭಿಲಾಷೆ ಕೊಡುವ ಕಮನೀಯ ಚರಣ
ಅಂದಿಗಂದಿಗೆ ಸಮನಾಗಿ ಸಾಧ್ಯವಾಗಿ
ಒಂದೇ ಪ್ರಕಾರದಲ್ಲಿ ಭಕ್ತರಿಗೆ ಒಲಿವ ಚರಣ
ಪೊಂದಿದವರಲ್ಲಿ ವಿಶ್ವಾಸ ಮಾಡುವ ಜನರ
ಬಂಧನ ಪರಿಹರಿಸಿ ಪಾಲಿಸುವುದೀ ಚರಣ
ಇಂದು ಹೃತ್ಕಮಲ ಮಧ್ಯದಹರಾಕಾಶದಲ್ಲಿ
ನಿಂದು ಪೂಜೆ ಮಾಡಲ್ಪಟ್ಟ ಮಂಗಳ ಚರಣ
ಕಂದರ್ಪ ಪಿತ ನಮ್ಮ ವಿಜಯ ವಿಠ್ಠಲಗೆ ಶರ
ಣೆಂದು ಬಾಗುವ ಸೂತ್ರ ಪ್ರಾಣನ ಪರಮ ಚರಣ ೧

ಮಟ್ಟತಾಳ

ಅಂಜನೆ ದೇವಿಯಲಿ ಉದ್ಭವಿಸಿ ಬಂದು
ಕಂಜಸಖನೆಡೆಗೆ ಹಾರಿದುದೀ ಚರಣ
ಕಂಜ ಮಿತ್ರನ ಸುತನ ಕರೆದು ಮನ್ನಿಸಿ ಅವನ

ಅಂಜಿಕೆಯನು ಬಿಡಿಸಿ ಎರಗಿಸಿಕೊಂಡ ಚರಣ
ಕಂಜನಾಭನ ಕಂಡು ಪರವಶದಲಿ ಹಾ ಹಾ
ರಂಜಿಸುತಲಿ ವೇಗ ಜಿಗದ್ಹಾರಿದ ಚರಣ
ಕುಂಜರನಾಥನ ಮಗನ ಮಹಾಗರ್ವ
ಭಂಜನೆ ಮಾಳ್ಪುದಕೆ ನಡೆದಾಡಿದ ಚರಣ
ಮಂಜುಭಾಷಣ ರಾಮ ಪೇಳ್ದಾಕ್ಷಣ ಕಪಿ
ಪುಂಜರರೊಳಗೊಂಡು ತೆರಳಿದುದೀ ಚರಣ
ನಂಜುಸವಿದ ಧೀರ ಗಿರಿಯ ಜಿಗಿದು ನೋಡಿ
ಅಂಜಿದ ಜಲನಿಧಿಯ ಲಂಘಿಸಿದ ಚರಣ
ಝುಂಝೂನಿಳನಂತೆ ದೈತ್ಯ ಪಟ್ಟಣಪೊಕ್ಕು
ಕಂಜಮುಖಿಗೋಸುಗ ಸಂಚರಿಸಿದ ಚರಣ
ಗುಂಜಿ ತೂಕದಿನಿತು ಭಯವಿಲ್ಲದೆ ಪುರ
ನಂಜಯಗೆಡೆಣಿಸುತ ಓಡ್ಯಾಡಿದ ಚರಣ
ವ್ಯಂಜಕೆ ತಾನಾಗಿ ಸ್ವಾಮಿ ಕಾರ್ಯದಲ್ಲಿ ಮೃ
ತ್ಯುಂಜಯ ಶಿಷ್ಯರ ಸವರಿಸಿದ ಬಲು ಚರಣಾ
ಭುಂಜಿಪ ಎಡೆಗೊಂಡು ದೇವನಲ್ಲಿ ಇಡಲು
ಎಂಜಲವೈದೊಂದು ಮರವೇರಿದ ಚರಣ
ಅಂಜಲಿಪುಟಬಿಟ್ಟು ಬಿಂಕದಲಿ ಧ
ನಂಜಯನ ರಥಕ್ಕೆ ಬಂದೇರಿದ ಚರಣ
ಕಿಂಜಲ್ಕವಾಸ ವಿಜಯವಿಠ್ಠಲನಂಘ್ರಿ
ಕಂಜ ಪೂಜಿಪ ಹನುಮನ ನಾನಾ ವರ್ಣವಾದ ಚರಣ ೨

ತ್ರಿವಿಡಿತಾಳ

ಗಿರಿಯ ಮಧ್ಯದಿ ಜಿಗುಳಿ ಒದ್ದಾಡಿದ್ದ ಚರಣ
ಗಿರಿಯ ಮಧ್ಯದಿ ದ್ವಿಜ ಗೂಳೆ ಒದ್ದ ಚರಣ
ಮರದ ಮೇಲೆ ಇದ್ದವರ ಕೆಡಹಿದಾ ಚರಣ
ಸುರನದಿಯೊಳು ಬಿದ್ದ ಅಹಿಗಳ ಕುಟ್ಟಿದ ಚರಣ
ನಿರುತ ಪರಿಪರಿಯಿಂದ ನಲಿದಾಡಿದ ಚರಣ
ಅರಗಿನ ಮನೆ ಗೆದ್ದು ಬಂದು ರಾತ್ರೆ ಹಿಡಿಂಬನ

ವರಿಸಿ ಸತಿಯಳಿಂದ ಅರ್ಚನೆಗೊಂಡ ಚರಣ
ಪುರದೊಳು ಭಿಕ್ಷವ ಬೇಡುತ ತಿರುಗಿದ ಚರಣ
ದುರುಳ ಬಕನ ಒದ್ದ ದುಸ್ತರದಾ ಚರಣ
ಅರಸಿನ ಸಭೆಯಲ್ಲಿ ಹುಂಕರಿಸಿ
ಹರುಷದಲಿ ನೆನೆದು ದ್ರೌಪದಿ ಬಂದು ಕಂಡ ಚರಣ
ನರನಾಥ ರಾಜಸುಯಾಗವ ಮಾಡಲು ಪೋಗಿ
ಧರೆಯಲ್ಲಿ ತಿರುಗಿ ವಂದಿಸಿಕೊಂಡ ಚರಣ
ಸುರರೊಳು ಅಧಿ ಕಾದಾ ಭೀಮನ ಚರಣ
ತೆರಳಿವನದಲ್ಲಿ ಕುಸುಮ, ಘೋಷಯಾತ್ರೆ ಮತ್ಸ್ಯನ
ಪುರದಲ್ಲಿ ಮೆರೆದ ಮಂದಾರ ಚರಣ
ಧುರದೊಳು ನಿಂದು ಬಲ್ಲಿದ ಅನ್ಯೋ
ನ್ಯರನ್ನು ನೆಲಕಿಕ್ಕಿ ದುರುಳ ಸೈನ್ಯವೆಲ್ಲ
ಪರಿಹರಿಸಿದ ಚರಣ ಅಪ್ರತಿ ಚರಣ
ತರುಣಿ ಪಾಂಚಾಲಿಯ ಎಳೆದ ಖಳನ ಭಂಗಿಸಿ
ಉರದ ಮೇಲೆ ನಿಂತು ಕುಣಿದಾಡಿದ ಚರಣ
ದುರ್ಯೋಧನನು ಬಂದು ತರುಬಲಾ ಕ್ಷಣಕೆ ಅವನ
ತರಿದು ಬಿಸಾಟಿ ಶಿರವ ಮೆಟ್ಟಿದ ಮಹಾ ಚರಣ
ಹರಿಗೆ ಸಮ್ಮೊಗವಾಗಿ ಅಟ್ಟಹಾಸದಲಿ ನಿಂದಿರದೆ
ನಿದಾನದಲಿ ನಾಟ್ಯವಾಡಿದ ಚರಣ
ಹರನ ಕಡಿಯಿಂದ ಪರಿಯ ಅಸ್ತ್ರ ಬರಲು
ಶಿರವ ಬಾಗದೆ ಧರಣಿಯ ಮೇಲೆ ಕುಣಿದ ಚರಣ
ವರ ವೃಕೋದರನ ಚರಣ ಶರಣ ಪಾಲಕ ಚರಣ
ಪರಮ ಪುರುಷ ಕೃಷ್ಣ ವಿಜಯ ವಿಠ್ಠಲರೇಯನ
ಶರಣರೊಳಧಿಕನಾದ ಭೀಮಸೇನನ ಚರಣ ಅಪ್ರತಿ ಚರಣ ೩

ಅಟ್ಟತಾಳ

ವಿಪ್ರನ ಮನೆಯನ್ನು ಪಾವನ ಮಾಡಿದ ಚರಣ
ಸ್ವಪ್ರಕಾಶದಿಂದ ಪೊಳೆವುದೀ ಶಿರಿ ಚರಣ
ಸುಪ್ರೇಮದಿಂದ ಜನನಿಯು ಕರೆಯಲು

ಕ್ಷಿ ಪ್ರತನದಲ್ಲಿ ಧುಮುಕಿದ ಚರಣ
ಸರ್ಪನ ವರಿಸಿದ ಚರಣ ದಿವ್ಯ ಚರಣ
ತಪ್ಪದೆ ಹೆಬ್ಬುಲಿ ಕೂಡ ಚರಿಸಿದ ಚರಣ
ಅಪ್ಪನ ಮಾತಿಗೆ ಯತಿಯಾಗಿ ಮುನಿಯಾಗಿ ಲೇಸಾಗಿ
ಒಪ್ಪದಿಂದ ತೀರ್ಥಯಾತ್ರೆ ಮಾಡಿದ ಚರಣ
ಗುಪ್ತಮಾರ್ಗದಿಂದ ನದಿಯ ದಾಟಿದ ಚರಣ
ತೃಪ್ತಿಯ ಕೊಡುವುದು ನಮಗೆ ಇದೇ ಚರಣ
ದರ್ಪವುಳ್ಳ ಮಹಾಮಯಿ ಅರಣ್ಯಕ್ಕೆ
ಚಪ್ಪಗೊಡಲಿಯಾಗಿ ಇರುತಿಪ್ಪದೀ ಚರಣ
ಪುಷ್ಪದೋಪಾದೇಲಿ ಬದರಿಕಾಶ್ರಮದಲ್ಲಿ
ಸುಪ್ರೇಮದಿಂದಲಿ ಪೂಜೆಗೊಂಬ ಚರಣ
ತುಪ್ಪಸಕ್ಕರಿ ಪಾಲು ಉಣಿಸುವುದೀ ಚರಣ
ಕಪ್ಪು ಕಲುಷವಿಲ್ಲ ರಾತ್ರಿಲಿ ಓದುವ
ಅಪ್ಪಾರ ಜನಕ್ಕೆ ಬೆಳಕು ಮಾಡಿದ ಚರಣ
ಮುಪ್ಪು ಇಲ್ಲದೆ ಜೀವನ ಸಾಧನಗಳ
ದರ್ಪಣದಂತೆ ತೋರಿಕೊಡುವುದೀ ಚರಣ
ಒಪ್ಪ ಪೋಗುವ ಶಕುತಿ ಏನು ಪೇಳಲಿ ಕಂ
ದರ್ಪ ಎಣಿಸಲಾಗಿ ನೆಲೆದೋರದಾ ಚರಣ ಕಂ
ದರ್ಪನಯ್ಯನ ನೆನಸಲಾಗಿ ನೆಲೆದೋರುವುದೀ ಚರಣ
ಕಪ್ಪುಗೊರಳನಂದ ವಂದಿತ ಚರಣ
ಸುಪ್ತಭುವನೇಶ ವಿಜಯ ವಿಠ್ಠಲಗೆ
ಆಪ್ತವಾದ ಆನಂದತೀರ್ಥರ ಚರಣ ೪

ಆದಿತಾಳ

ಚತುರಯುಗದೊಳು ಮಹಿಮೆ ತೋರಿದ
ಚತುರವಿಂಶತಿ ತತ್ವವ್ಯಾಪಿಸಿ ಇದ್ದ ಚರಣ
ಸ್ತುತಿಸಿದ ಜನರಿಗೆ ಭೇದ ಜ್ಞಾನಕೊಟ್ಟು
ಗತಿಗೆ ಸತ್ಪಂಥಕ್ಕೆ ತೋರುವ ಶ್ರೀ ಚರಣ

ಪತಿತನಾದರೆ ಒಂದೇ ಸಾರಿ ಶ್ರೀ ನಾರಾಯಣನಿಗೆ ಮುಖ್ಯ
ಪ್ರತಿಬಿಂಬ ಎಂತೆಂದೆನಲು ಪಾಲಿಸುವುದೀ ಚರಣ
ಸತತ ಈತನೆ ಮುಖ್ಯ ಗುರುವೆಂದು ತಿಳಿದು ಅನವ
ರತದಲ್ಲಿ ಇದ್ದವಗೆ ವಜ್ರ ಪಂಜರ ಈ ಚರಣ
ಕ್ಷಿತಿಯೊಳಗೆ ಎನಗಿದು ಸುರಧೇನು ಈ ಚರಣ
ಪ್ರತಿಗಾಣೆನೊ ಎನಗಿದೆ ಇದೇ ಸುರತರು ಚರಣ
ಮತ್ತೊಂದೆನಗಿಲ್ಲ ಇದೇ ಚಿಂತಾಮಣಿ ಚರಣ
ಮಿತಿಯಿಲ್ಲದ ಜನ್ಮ ಬರಲಿ ಬಂದಿರಲಿ ಶಾ
ಶ್ವತವಹುದೋ ಲೇಶಮಾತ್ರ ಅನುಮಾನವಿಲ್ಲ ವಿ
ಹಿತವಾಗಿ ನಂಬಿದೆ ಈ ಚರಣ ಈ ಚರಣ
ಅತಿಶಯದಿ ಜನ್ಮ ಜನ್ಮಾಂತರದಿಂದ ನಂಬಿದದೀ ಚರಣ
ಅರ್ತಿಯಿಂದಲಿ ತಂದೆ ತಾಯಿಯಂತೆ ಪೊರೆದು ಸ
ದ್ಗತಿಯನಿತ್ತು ನಿಜಸುಖ ಉಣಿಸುವುದೀ ಚರಣ
ಆರ್ತಜನರ ಸಂತಾಪ ಕಳೆವುದೀ ಚರಣ
ಉತ್ತಮ ಶ್ಲೋಕನ ಉತ್ತಮನ ಮಾಡುವುದೀ ಚರಣ
ಕತ್ತಲೆ ಹರಿಸಿ ಅರ್ತಿಯಿಂದಲಿ ಸುಜ್ಞಾನ ಭಕುತಿ
ಇತ್ತು ಸುಖ ಬಡಿಸುವದೀ ಚರಣ
ಭೃತ್ಯರೆನಿಸಿ ಸತತ ಪಾಲಿಸುವುದೀ ಚರಣ
ಚ್ಯುತ ದೂರ ನಮ್ಮ ವಿಜಯವಿಠ್ಠಲನ ರ
ಜತ ಪೀಠದಲ್ಲಿ ಧ್ಯಾನ ಮಾಡುತಿಪ್ಪ
ಮಧ್ವಮುನಿಯ ಮುದ್ದು ಚರಣ ೫

ಜತೆ

ಚಿತ್ತದಲ್ಲೀ ಚರಣ ಭಜಿಸಿದ ಜೀವಿಗೆ
ನಿತ್ಯಾಯು ಉತ್ಸಹ ವಿಜಯ ವಿಠ್ಠಲ ಕೊಡುವ ೬

ಆರನ್ನ ಕಾಣೆನೊ ನಿನ್ನ ವಿನಾ
ಕೀರುತಿ ಅಪಕೀರ್ತಿ ನಿನ್ನದಯ್ಯಾ
ವಾರಣಾವರ ವಂದ್ಯ ವಿಜಯವಿಠ್ಠಲರೇಯನ
ಸೇರುವ ಪರಿಮಾಡೋ ತಾರತಮ್ಯ ಭಾವದಲಿ ೩

ಅಟ್ಟತಾಳ

ನೀನು ಒಲಿಯೇ ಹರಿ ತಾನೆ ಒಲಿವನಯ್ಯ
ನೀನು ಮುನಿದಡೆ ಹರಿ ತಾನೆ ಮುನಿವನು
ಏನೆಂಬೆ ನಿನ್ನ ಮೇಲಣ ಹರಿ ಕಾರುಣ್ಯ
ನೀನಲ್ಲದಿಲ್ಲದ ಸ್ಥಾನವೆ ತಾನಿಲ್ಲಾ
ಪ್ರಾಣೇಶ ನಮೋ ನಮೋ ನಿನ್ನ ಪಾದಾಬ್ಜಕೆ
ವಾನರೇಶ ಸುಗ್ರೀವ ವಾಲಿ ಸಾಕ್ಷಿ
ಜ್ಞಾನೇಶ ಭಕ್ತಿ ವಿರಕ್ತೇಶ ಅಮರೇಶ
ಆನಂದ ಆನಂದ ಮೂರುತಿ ಗುರುರಾಯ
ಪಾಣಿಗ್ರಹಣ ಮಾಡು ಪತಿತ ಪಾವನ ದೇವ
ಪ್ರಾಣೇಂದ್ರಿಯಗಳು ದೇಹ ಚೇತನ ಚಿತ್ತವ
ಧಾನ ಮಾಡಲಿ ಸರ್ವ ನಿನ್ನಾಧೀನವೆಂದು
ನೀನಿರಲಾವಾಗ ಅನ್ಯ ಜನರಿಗೆ ಮತ್ತಾನು
ಬಿನ್ನೈಪನೆ ದೇಹ ತ್ಯಾಗವಾಗಿ
ಶ್ರೀನಾಥ ವಿಜಯವಿಠ್ಠಲರೇಯನ ಪಾದ
ರೇಣು ಧರಿಸುವ ಸರ್ವರುದ್ಧಾರೀ ೪

ಆದಿತಾಳ

ಎಲ್ಲ ಕಾಲದಲ್ಲಿ ನಿನ್ನಲ್ಲಿ ಭಕ್ತಿ ಇಪ್ಪ
ಸಲ್ಲಲಿತ ಮನುಜರ ಪದಪಾಂಸ ಶಿರ
ದಲ್ಲಿ ಧರಿಸುವಂತೆ ಸತತ ಮತಿ ಇತ್ತು
ಬಲ್ಲಿದ ಕಾಮ ಬಿಡಿಸು ಬಲವಂತ ಗುಣವಂತ

ಬಲ್ಲವ ಭವದೂರ ನೀನೇ ಗತಿಯೋ ಜಗ
ದೊಲ್ಲಭ ಮುಂದಣ ವಾಣೀಶ ಸುಖಪೂರ್ಣ
ಅಲ್ಲದಿದ್ದರೆ ಎನ್ನ ಕಾವ ಕರುಣಿಯ ಕಾಣೆ
ಮಲ್ಲಮರ್ದನ ನಮ್ಮ ವಿಜಯ ವಿಠ್ಠಲರೇಯನ
ನಿಲ್ಲಿಸಿ ಮನದಲ್ಲಿ ಪ್ರತಿಕೂಲವಾಗದೆ ೫

ಜತೆ

ಅನಂತ ಜನುಮಕ್ಕೆ ನೀನೆ ಗುರು ಎಂಬ
ಜ್ಞಾನವೇ ಕೊಡು ಜೀಯಾ ವಿಜಯವಿಠ್ಠಲನ ದಾಸಾ ೬

ಭೀಮಸೇನ ಸ್ತೋತ್ರ

೧೫೪

ಧ್ರುವತಾಳ

ಭೀಮಸೇನನೆ ಪೂರ್ಣ ಕಾಮನೆ ಸುರಸಾರ್ವ
ಭೌಮನೆ ಸತತ ಭೂಮಿಭಾರವ ಹರಣಾ
ಸೀಮಾರಹಿತ ಗುಣ ಮಹೋದಧಿಯೇ ನಿ
ಷ್ಕಾಮ ಫಲವನೀವ ಭಾವಿ ಬೊಮ್ಮ
ಭೀಮಾವತಾರ ಸ್ಮರಾನನ ಪ
ರಮ ರಾಜೇಶ್ವರ ರಣರಂಗ ಧೀರ
ಕೋಮಲ ಕಾಯ ಮೂಲಾವತಾರ ಭಿನ್ನ
ಸೋಮ ಕುಲೋದುಭವ ಪಾಂಡವ ಕುವರು
ತ್ತಮಾಂಗ ಮರಕತ ಮಕುಟಧರಾ
ಕಾಮಿನಿಗೆ ಸೌಗಂಧಿಕ ಕುಸುಮವನಿತ್ತ
ಸಾಮ ವಿಖ್ಯಾತರಿಪು ಸಾಮಜ ಬಲವ
ವ್ಯೋಮಕ್ಕೆ ತೆಗಿದಿಟ್ಟ ಎಲ್ಲರೊಳಗೆ ಧಿಟ್ಟ
ಶ್ರೀ ಮರುತನೆ ದ್ವಾಪರದ ಚರಿತ

ತಾಮಸ ಲೋಕಕ್ಕೆ ಕೆಡಹುವ ವೀರ್ಯಾ
ಕುಮತಿ ಕೀಚಕ ಕಿರ್ಮೀರ ಬಕ ಹಿಡಿಂ
ಬ ಮಣಿಮ ಮಾಗಧ ವೈರಿ
ಮಾಮನೋವಲ್ಲಭ ವಿಜಯ ವಿಠ್ಠಲ ಕೃಷ್ಣನ
ನಾಮವನೆನಿಪ ಪೂರ್ಣಾನಂದ ಮಹಿಮಾ ೧

ಮಟ್ಟತಾಳ

ಗುರುವೆ ಮೂಲ ಗುರುವೆ, ಗುರುವೆ ಪರಮ ಗುರುವೆ
ಗುರುವೆ ಜಗದ್ಗುರುವೆ, ಗುರು ವಿಶ್ವ ಗುರುವೆ
ಗುರುವೆ ನಿತ್ಯ ಗುರುವೆ ಗುರುವೆ ಲಕ್ಷಣ ಗುರುವೆ
ಗುರುವೆ ಶಾಂತ ಗುರುವೆ ಗುರುವೆ ಎನ್ನ ಗುರುವೆ
ಗುರುಗಳಿಗೆ ಗುರುವೆ ಗುರುರಾಜವರ್ಯಾ
ಗುರುಕುಲೋತ್ತುಂಗ ಗುರುಶಿರೋಮಣಿ
ಗುರುದಾತ ನಮ್ಮ ವಿಜಯ ವಿಠ್ಠಲನ್ನ
ಗುರುಲಘು ಮೂರ್ತಿಯ ಗುರು ಎಣಿಪ ಗುರುವೇ ೨

ತ್ರಿವಿಡಿತಾಳ

ವಿಷದ ಲಡ್ಡಗಿ ಸವಿದು ದಕ್ಕಿಸಿಕೊಂಡ ಮಹಬಲ ಎನ್ನ
ವಶವೇ ಪೊಗಳಲು ನಿನ್ನ ಅಸಮಶೌರ್ಯ
ವಸುಧಿಯೊಳಗೆ ನಿನ್ನ ಪೆಸರೇ ಅನ್ಯರಿಗೆ ಕ
ರ್ಕಶವಾಗಿದೆ ನೋಡು ಅಸುಗ ದೈವಾ
ಕುಶಲ ಮತಿಯಲಿ ಅರ್ಚಿಸಿದ ಜನಕೆ ಪೀ
ಯೂಷ ಪಾನದಧಿಕ ಸಂತಸವಾಗೋದು
ಬೆಸಸ ಬಲ್ಲೆನೆ ರಕ್ಕಸರೆದೆ ಶೂಲನೇ
ಹಸನಾಗಿ ಎನ್ನ ಪಾಲಿಸಬೇಕೋ ಜೀವೇಶ
ಅಸುರಧ್ವಂಸಿ ನಮ್ಮ ವಿಜಯವಿಠಲನಂಘ್ರಿ
ಎಸಳು ಬಿಡದೆ ನೆನೆಸುವ ವೃಕೋದರಾ ೩

ಅಟ್ಟತಾಳ

ರೋಷದಿಂದಲಿ ದುಃಶ್ಯಾಸನ್ನ ಸಂಗಡ
ನೀ ಸಮರದಿ ವೀರ ವೇಷವ ಧರಿಸಿ ದು
ಮೋಸದ ಗುಣ ಕುಲನಾಶಿಕ ಕರ್ಮಿಯಾ
ಬೀಸಿ ಗದೆಯಿಂದ ಲೇಸಾಗಿ ಹೊಡೆದಪ್ಪ
ಳಿಸಿ ನೆಲಕೆ ಬೀಳಲೀಸಿದ ಈಗವನ ಭಂ
ಗಿಸಿ ಮುಂದುರವಣಿಸಿ ಅಂದಿನ ಮಾತೆ
ಣಿಸಿ ರೋಷಗಡಿ ಸಂತೋಷದ ಕೇಳಿಕೆ
ಈ ಸಮಸ್ತರು ಒಪ್ಪಿಸಿ ಕೊಟ್ಟರು ನಿನ್ನ
ಬೀಸರಕ್ಕೆ ಒಬ್ಬ ಆಶೆಯಾಗುವನಲ್ಲ
ದೇಶವೆಲ್ಲಿದೊ ರಾಣಿವಾಸವೆಲ್ಲಿದೊ ಬಹು
ಕೋಶವೆಲ್ಲಿದೊ ವಾದ್ಯ ಘೋಷವೆಲ್ಲಿದೊ ಇಂದು
ದ್ವೇಷಿಗ ಮಾರಿಗೆ ಗ್ರಾಸವಾಗು ಪೋಗು
ಈ ಸಮಯದಲ್ಲಿ ಬಿಡಿಸುವರಾರೆಂತೊ
ವಾಸುದೇವ ಕೃಷ್ಣ ವಿಜಯ ವಿಠ್ಠಲನಂಘ್ರಿ
ದಾಸನು ಅವನ ಆಭಾಸ ಮಾಡುತಲಿಪ್ಪ ೪

ಆದಿತಾಳ

ಪದತಳದಿಂದ ಒರೆಸಿ ಕದನದಲ್ಲಿ ವೈರಿಯ
ಬದಿ ಬಗಲನು ತಿವಿದು ವದನದೊಳಗೆ ಉಗಳಿ
ರದನದ ಮುರಿದಿಟ್ಟು ಕುಟ್ಟಿ ಮ್ಯಾಲೊದದು ಅಟ್ಟಹಾಸದಲಿ
ಎದಿಯ ಮೇಲೆ ಕುಣಿದು ಉದರವನ್ನೇ ಬಗೆದು
ಮಿಂದು ಕರುಳ ತೆಗೆದು ಭೂಮಿಗೆ ಈಡಾ
ಡಿದನು ಅರ್ಥಿಯಲ್ಲಿ ಸುದತಿ ನೋಡುತಿರೆ
ಅದುಭುತ ಚರಿತ ಅವನ ರುಧಿರವ ಪಿಡಿದು ಸವ
ರಿದ ಸರ್ವರು ನೋಡಲು ಸದಮಲ ದೇವಿಯ
ಹೃದಯ ತಾಪವೆ ಕಳೆದು ಪದೋಪದಿಗಾನಂದ

ಉದಧಿಯೊಳಗೆ ನೋಡೆ ಎದಿರಾರೀತಗೆ
ತ್ರಿದಶರೊಳಗೆ ಇಲ್ಲ ಕದನ ಮಧ್ಯದಲ್ಲಿ ಮೌ
ನದಲ್ಲಿ ಎಲ್ಲರೂ ಇರೆ ಹೃದಯನಿರ್ಮಳ
ನಮ್ಮ ವಿಜಯವಿಠ್ಠಲಗರ್ಪಿ
ಸಿದ ತನ್ನ ಸಾಹಸವ ಮುದದಿಂದ ನಲಿಯುತಾ ೫

ಜತೆ

ಅರಿ ಭಯಂಕರ ಭೀಮ ವಿಜಯವಿಠ್ಠಲ
ನರಹರಿ ಮನಮೆಚ್ಚಿ ನಡೆದಾ ಭೀಮಾವತಾರಾ ೬

ಶ್ರೀಮಧ್ವಾಚಾರ್ಯರ ಸ್ತೋತ್ರ

೧೫೫

ಧ್ರುವತಾಳ

ಶ್ರೀಮದ್ವಿಠಲ ಪಾದಾಂಬುಜ ಮಧುಪ ರಾಜಾ
ಶ್ರೀಮದಾಚಾರ್ಯ ಧೈರ್ಯ ಯೋಗ ಧುರ್ಯಾ
ಕಾಮವರ್ಜಿತ ಕೃಪಾಸಾಗರ ಯತಿರೂಪಾ
ರೋಮ ರೋಮ ಗುಣಪೂರ್ಣ ಪರಣಾ
ಸಾಮ ವಿಖ್ಯಾತ ಸಿದ್ಧ ಸುರರೊಳಗೆ ಪ್ರಸಿದ್ಧ
ಸೀಮರಹಿತ ಮಹಿಮ ಭುವನ ಪ್ರೇಮ
ತಾಮಸಜನದೂರ ದಂಡಕಮಂಡಲಧರ
ಶ್ರೀ ಮಧ್ವ ಮುನಿರಾಯ ಶೋಭನ ಕಾಯ
ಆ ಮಹಾ ಜ್ಞಾನದಾತ ಅನುಮಾನ ತೀರಥ
ಕೋಮಲಮತಿಧಾರ್ಯ ವೈಷ್ಣವಾರ್ಯ
ಕಾಮ ಸುತ್ರಾಮ ಶರ್ವ ಸುರನುತ ಗುರುಸಾರ್ವ
ಭೌಮಾತಿ ಭಯನಾಶ ಭಾರತೀಶಾ
ರಾಮಕೃಷ್ಣ ವ್ಯಾಸ ವಿಜಯ ವಿಠ್ಠಲನ ಹೃದಯ
ಧಾಮದೊಳಗಿಟ್ಟ ಸತತ ಧಿಟ್ಟಾ ೧

ಮಟ್ಟತಾಳ

ಹರಿಯೆ ಗುಣಶೂನ್ಯ ಹರಿಯ ನಿರಾಕಾರ
ಹರಿಯು ದೊರೆಯು ಅಲ್ಲ ಹರಿ ಪರತಂತ್ರ
ಹರಿಯು ದುರ್ಬಲನು ಹರಿಗೆ ಎಂಟುಗುಣ
ಹರಿಯು ತಾನೆಂದು ತಾರತಮ್ಯವೆನದೆ
ಧರೆಗೆಲ್ಲ ಮಿಥ್ಯಾ ಪರಿ ಪರಿ ಕರ್ಮಗಳು
ಹರಿತಾನೇ ಪುಟ್ಟಿ ಚರಿಸುವ ಲೀಲೆಯಲಿ
ನರ ನಾನಾ ಜನ್ಮ ಧರಿಸಿ ತೋರುವನೆಂದು
ದುರುಳ ದುರ್ಮತದವರು ಸರಿ ಸರಿ ಬಂದಂತೆ
ಒರಲಿ ಸಜ್ಜನರನ್ನು ತಿರಸ್ಕಾರವನೆ ಮಾಡಿ
ತಿರುಗುತಿರೆ ಇತ್ತ ಸುರರು ಕಳವಳಿಸಿ
ಪರಮೇಷ್ಠಿಗೆ ಪೇಳೆ ಹರಿಗೆ ಬಿನ್ನೈಸಲು
ಮರುತ ದೇವನೆ ಅವತರಿಸಿದ ಹರುಷದಲ್ಲಿ
ಕರುಣಾಕರ ಮೂರ್ತಿ ವಿಜಯ ವಿಠ್ಠಲರೇಯ
ಪರನೆಂದು ಸಾರಿ ಧರೆಯೊಳಗೆ ಮೆರೆದಾ ೨

ತ್ರಿವಿಡಿತಾಳ

ಶೂನ್ಯವಾದ ಮಿಕ್ಕ ದುರ್ಮತದವರೆಲ್ಲ
ಸನ್ಯಾಯವಿಲ್ಲದ ವಚನದಿಂದ
ಸನ್ಯಾಸಿಗಳೆಂಬೊ ಗರ್ವವಲ್ಲದೆ ವೇದ
ಸನ್ಮತವಾಗದ ದುರ್ಲಕ್ಷಣ
ವನ್ನು ಕಲ್ಪಿಸಿ ಶುದ್ಧ ಆಚಾರವನೆ ಕೆಡಿಸಿ
ಭಿನ್ನವಿಲ್ಲವೆಂದು ತಿರುಗುತಿರೆ
ಪುಣ್ಯಶ್ಲೋಕ ನಮ್ಮ ವಿಜಯವಿಠ್ಠಲನ
ಸನ್ನುತಿಸದೆ ದ್ವೇಷವ ತಾಳಿರೆ ೩

ಅಟ್ಟತಾಳ

ಇಪ್ಪತ್ತು ಒಂದು ಕುಭಾಷ್ಯವ ರಚಿಸಿರೆ
ಒಪ್ಪದಿಂದಲಿ ಗೆದ್ದು ಅವರವರ ಮಹಾ
ದರ್ಪವ ತಗ್ಗಿಸಿ ದಶದಿಕ್ಕು ಪೊಗಿಸಿ ಕಂ
ದರ್ಪ ಜನಕನು ಸ್ವತಂತ್ರ ಗುಣಪೂರ್ಣ
ಅಪ್ಪಾರ ಮಹಿಮನು ಸಾಕಾರ ಸತ್ಪುರುಷ
ತಪ್ಪದೆ ತ್ರಿಲೋಕಕ್ಕೊಡೆಯ ಜಗಜೀವ
ನಪ್ಪನು ಸರ್ವಾಂತರಂಗದೊಳಗೆ ಬಿಡ
ದಿಪ್ಪ ವಿಶ್ವಮೂರುತಿ ವಿಲಕ್ಷಣ ರೂಪ
ಸರ್ಪಶಯನ ನಮ್ಮ ವಿಜಯವಿಠ್ಠಲರೇಯ
ಮುಪ್ಪಿಲ್ಲದ ದೈವ ಅಜಭವ ಸುರವಂದ್ಯಾ ೪

ಆದಿತಾಳ

ದರುಶನ ಗ್ರಂಥವ ರಚಿಸಿ ಸುಜನರಪಾಲಿಸಿ
ಮರುತಮತದ ಬಿರಿದೆತ್ತಿದೆ ಮಹಾಯತಿ
ಸರಿಗಾಣೆ ನಿಮಗೆಲ್ಲ ವರ್ಣಿಸಲೆನ್ನಳವೆ
ದುರುಳರ ಗಂಟಲಗಾಣ ವಿದ್ಯಾಪ್ರವೀಣಾ
ನೆರೆನಂಬಿದವರಿಗೆಲ್ಲ ಮನೋವ್ಯಥೆಗಳ ಬಿಡಿಸಿ
ಹರಸು ಜ್ಞಾನ ಭಕುತಿ ವಿರಕ್ತಿ ಮಾರ್ಗವ ತೋರಿಸಿ
ಪೊರೆವ ತತ್ವದ ವನಧಿ ಪೊಡವಿಯೊಳಗೆ
ಸುರನರೋರಗಾದಿಗೆ ಗುರುವೆ ಪರಮಗುರುವೆ
ಸರಸ ಸದ್ಗುಣ ಸಾಂದ್ರ ವಿಜಯ ವಿಠ್ಠಲರೇಯನ
ಚರಣವ ನಂಬಿದ ಪ್ರಧಾನ ವಾಯುದೇವಾ ೫

ಜತೆ

ಅದ್ವೈತ ಮತಾರಣ್ಯ ದಾವಾ ವ್ಯಾಸಶಿಷ್ಯ
ಮಧ್ವಮುನಿ ವಿಜಯ ವಿಠ್ಠಲನ ನಿಜದಾಸಾ ೬

ಜಯತೀರ್ಥರ ಸ್ತೋತ್ರ

೧೫೬

ಧ್ರುವತಾಳ

ಜಯರಾಯ ಜಯರಾಯ ಜಯದೇವಿ ಅರಸನ್ನಾ
ಶ್ರಯಮಾಡಿಕೊಂಡಿಪ್ಪ ತಪೋವಿತ್ತಪ
ಭಯವ ಪರಿಹರಿಸಿ ಭವದೂರರ ಹರಿಭ
ಕ್ತಿಯ ಕೊಡು ಜ್ಞಾನವೈರಾಗ್ಯದೊಡನೆ
ದಯದೃಷ್ಟಿಯಿಂದ ನೋಡು ಕಾಪಾಡು ಮತಿನೀಡು
ಲಯವಿವರ್ಜಿತವಾದ ವೈಕುಂಠಕೆ
ಸ್ವಯಮಾಗಿ ಮಾರ್ಗ ತೋರು ಸಜ್ಜನರೊಳಗಿಟ್ಟು
ಜಯವ ಪಾಲಿಸು ಎನಗೆ ಯತಿಕುಲರನ್ನ
ಅಯುತಕ್ಕಾದರು ನಾನು ಐಹಿಕ ಸೌಖ್ಯವನೊಲ್ಲೆ
ಬಯಸುವೆ ಸತತದಲ್ಲಿ ಹರಿಯನಾಮ
ತ್ರಯಗಳೆ ನಾಲಿಗೆಲಿ ನೆನೆದು ನೆನೆದು ಕರ್ಮ
ಕ್ಷಯವಾಗುವಂತೆ ಕ್ಷಿ ಪ್ರದಲ್ಲಿ ಬಿಡದೆ
ಪ್ರಯತ್ನವೆಂಬೋದಿದಕೆ ಸಾರ್ಥಕವಾಗಲಿ
ಪಯೋನಿಧಿಸುತೆ ರಮಣ ಮನದೊಳು ನಿಲ್ಲಲು
ಪಯಃ ಪಾನದಿಂದಧಿಕ ನಿಮ್ಮ ದರುಶನ ಎನಗೆ
ಪ್ರೀಯ ಮತ್ತೊಂದಾವುದಿಲ್ಲ ಇದೇ ಬಲು ಲಾಭ
ಗಯ ಕಾಶಿ ತ್ರಿ ಸಂಗಮ ಮೊದಲಾದ ತೀರ್ಥಕ್ಷೇತ್ರ
ನಯದಿಂದ ಮಾಡಿದ ಫಲವಪ್ಪುದು
ಪಯೋಧರಗಳ ತಿನದಂತೆ ಮಾಳ್ಪುದು ಹೃ
ದಯದೊಳಗಿಪ್ಪದೆನೆಗೆ ಇದೇ ಏಕಾಂತ
ಭಯ ಕೃದ್ಭಯನಾಶ ವಿಜಯ ವಿಠ್ಠಲನ ಸೇ
ವೆಯ ಮಾಡುವ ಸದ್ಗುಣ ಶೀಲ ಸುಜನ ಪಾಲಾ ೧

ಮಟ್ಟತಾಳ

ಆವ ಜನುಮದ ಪುಣ್ಯ ಫಲಿಸಿತು ಎನಗಿಂದು

ರಾವುತನಾಗಿದ್ದ ಜಯತೀರ್ಥರ ಕಂಡೆ
ದೇವಾಂಶರು ಇವರ ಸ್ವರೂಪವನ್ನು
ಭಾವದಿಂದಲಿ ತಿಳಿದು ಕೊಂಡಾಡುವ ಬಲುಧನ್ಯ
ಪಾವಿನ ಪರಿಯಿಂದ ಇಲ್ಲಿ ಇರುತಿಪ್ಪ
ಕಾವುತ ಭಕುತರ ಪಾವನಗೈಸುವ
ದೇವ ದೇವೇಶ ಸಿರಿ ವಿಜಯ ವಿಠ್ಠಲನಂಘ್ರಿ
ತಾವರೆ ಭಜಿಸುವ ನಿಷ್ಕಾಮಕ ಮೌನಿ ೨

ತ್ರಿವಿಡಿತಾಳ

ವೈಷ್ಣವ ಜನ್ಮ ಬಂದುದಕಿದೇ ಸಾಧನ
ವಿಷ್ಣುವಿನ ಭಕುತಿ ದೊರಕಿದುದಕೆ
ನಷ್ಟವಾಯಿತು ಎನ್ನ ಸಂಚಿತಾಗಾಮಿ ಕರ್ಮ
ಕಷ್ಟ ದಾರಿದ್ರಗಳು ಹಿಂದಾದವೋ
ತುಷ್ಟನಾದೆನು ಎನ್ನ ಕಲಕೋಟಿ ಅಹಿತ ಅ
ರಿಷ್ಟಮಾರ್ಗದಿ ಇನ್ನು ಪೋಗೆ ನಾನು
ಸೃಷ್ಟಿಯೊಳಗೆ ಇವರ ದರ್ಶನವಾಗದಲೆ
ಸ್ಪಷ್ಟವಾದ ಜ್ಞಾನ ಪುಟ್ಟದಯ್ಯಾ
ಇಷ್ಟುಕಾಲ ಬಿಡದೆ ಮುಂದೆ ಮಾಡುವ ಬಲು
ನಿಷ್ಟಗೆ ಅನುಕೂಲ ತಾತ್ವಿಕರು
ಶಿಷ್ಟಾಚಾರವನ್ನು ಮೀರದಲೆ ನಿಮ್ಮ
ಇಷ್ಟಾರ್ಥ ಬಯಸುವುದು ಉಚಿತದಲ್ಲಿ
ವೈಷ್ಣವಾಚಾರ್ಯರ ಮತ ಉದ್ಧಾರ ಕರ್ತ
ಭ್ರಷ್ಟವಾದಿಗಳನ್ನು ನುಗ್ಗಲೊತ್ತಿ
ಕೃಷ್ಣವಂದಿತ ನಮ್ಮ ವಿಜಯವಿಠ್ಠಲರೇಯನ
ಅಷ್ಟ ಕರ್ತೃತ್ವ ಸ್ಥಾಪಿಸಿದ ಧೀರಾ ೩

ಅಟ್ಟತಾಳ

ಕುಶರಾಯ ಇಲ್ಲಿ ತಪಸು ಮಾಡಿದಂಥ
ವಸತಿಯ ನೋಡಿ ದಿಗ್ದೇಶ ಜಯಿಸಿ ಮಾ

ನಸದಲ್ಲಿ ತಿಳಿದು ಅಕ್ಷೋಭ್ಯ ತೀರ್ಥರು ಇಲ್ಲಿ
ನಸುನಗುತಲೆ ವಾಸವಾದರು ಬಿಡದಲೆ
ಋಷಿ ಕುಲೋತ್ತಮನಾದ ಜಯರಾಯರು ನಿತ್ಯ
ಬೆಸನೆ ಬೆಸನೆ ಬಂದು ಗುಪ್ತದಲ್ಲಿ ಪೂ
ಜಿಸುವರು ಪ್ರೀತಿಲೆ ಏನೆಂಬೆನಾ ಚರ್ಯ
ಶಶಿ ವರ್ಣದಂತೆ ಪೊಳೆವ ದರುಶನ ಗ್ರಂಥ
ರಸ ಪೂರಿತವಾಗಿ ವಿಸ್ತರಿಸಿದರು ವಿ
ಕಸಿತವ ಮಾಡಿ ಕರದ ಕನ್ನಡಿಯಂತೆ
ಕುಶಲ ಮಾನವರಿಗೆ ಜ್ಞಾನ ಹೆಚ್ಚುವಂತೆ
ವಸುಧೆಯೊಳಗೆ ನಮ್ಮ ವಿಜಯ ವಿಠ್ಠಲರೇಯನ
ವಶವಾಗುವುದಕ್ಕೆ ಪ್ರಸಾದ ಮಾಡಿದರು ೪

ಆದಿತಾಳ

ಈ ಮುನಿ ಒಲಿದರೆ ಅವನೆ ಭಾಗ್ಯವಂತ
ಭೂಮಿಯೊಳಗೆ ಮುಕ್ತಿ ಯೋಗ್ಯನೆನಿಸುವನು
ಭೀಮ ಭವಾಂಬುಧಿ ಬತ್ತಿ ಪೋಗುವುದು ನಿ
ಸ್ಸೀಮನಾಗುವ ಪಂಚ ಭೇದಾರ್ಥ ಪ್ರಮೇಯದಲ್ಲಿ
ತಾಮಸ ಜನರಿಗೆ ಭಕ್ತಿಪುಟ್ಟದು ದುಃ
ಖ ಮಹೋದಧಿಯೊಳು ಸೂಸುತಲಿಪ್ಪರು
ಸ್ವಾಮಿ ಈಗಲೆ ಬಂದು ದುರುಳ ಮನುಜನ ನೋಡಿ
ನಾ ಮೊರೆ ಇಡುವೆನು ಕಾಯೊ ಕರುಣದಲ್ಲಿ
ಯಾಮ ಯಾಮಕೆ ನಿಮ್ಮ ಸ್ಮರಣೆ ಪಾಲಿಸಿ ಉ
ತ್ತಮ ಬುದ್ಧಿಕೊಟ್ಟು ಕೃತಾರ್ಥನ್ನ ಮಾಡು
ರಾಮ ಸುಗುಣಧಾಮ ವಿಜಯ ವಿಠ್ಠರೇಯನ್ನ
ನಾಮ ಕೊಂಡಾಡುವ ಟೀಕಾಚಾರ್ಯ ೫

ಜತೆ

ಮೇಘನಾಥಪುರ ಕಕುರ ವೇಣಿವಾಸ
ರಾಘವೇಶ ವಿಜಯವಿಠ್ಠಲನ್ನ ನಿಜದಾಸ ೬

ಶ್ರೀಪಾದರಾಯರ ಸ್ತೋತ್ರ

೧೫೭

ಧ್ರುವತಾಳ

ಶ್ರೀ ಪಾದರಾಯ ಗರುವೆ ಧೃಢಭಕುತಿಯಿಂದ ನಿಮ್ಮ
ಶ್ರೀಪಾದ ದ್ರುಮವನ್ನು ನೆರೆನಂಬಿದವನ ಭಾಗ್ಯ
ಅಪಾರವಲ್ಲದೆ ಲೇಶ ಕೊರತೆ ಇಲ್ಲ
ಗೋಪಾದ ಉದಕದೊಳು ರತುನ ದೊರಕಿದಂತೆ
ಪ್ರಾಪುತವಾಗುವುದು ಬಾಹೀರಂತರ ಸೌಖ್ಯ
ಲೋಪವಾಗದು ಒಂದು ಇಷ್ಟಾರ್ಥ ಪ್ರತಿದಿನ
ಅಪಾರ್ಥ ಎನಿಸದು ಪೇಳಿದ ವಚನಂಗಳು
ಅಪವರ್ಗಕೆ ಮಾರ್ಗ ಕೇವಲ ಖ್ಯಾತಿಯಾಗಿ
ತಾಪಸಿಯಾಗುವನು ಜನುಮಜನುಮದವು ಬಿಡದೆ
ಗೋಪಾಲಕೃಷ್ಣನ ಗುಣವೆ ಕೊಂಡಾಡುತ
ಆಪಾದಮೌಳಿ ಪರಿಯಂತ ನೋಡುವ ಮಹ
ಪಾಪರಹಿತರಾಗಿ ಸಂಚರಿಸುವರು ನಿತ್ಯ
ಪ್ರಾಪುತವಲ್ಲದೆ ಒಂದಾದರವರಿಗೆ
ಭೂಪಾರ ಬೇಡಿದ ಮನೋರಥಂಗಳು
ಶ್ರೀಪಾದರಾಯ ಶಿರಿ ನಾರಾಯಣಯೋಗಿ
ಈಪರಿ ಸ್ಮರಿಸಿದ ಜನರ ಸಂಗದಲ್ಲಿದ್ದ
ಆ ಪುಣ್ಯಪುರುಷನಿಗೆ ಕೈವಲ್ಯ ಇದ್ದಲ್ಲಿಗೆ
ಪೋಪಾದಲ್ಲದೆ ಅವನ ಆಯುಷ್ಯ ವ್ಯರ್ಥವಾಗಿ
ಭಾಪು ಇವರ ಬಿರುದು ಪೊತ್ತು ತಿರುಗಿದರೆ
ಶಾಪಾದಪಿಶರಾದಪಿ ಎನಿಸಿಕೊಂಬ
ದೀಪದ ಬೆಳಕಿನಲ್ಲಿ ಸರ್ವವು ಕಂಡಂತೆ
ವ್ಯಾಪುತದರ್ಶಿಯಾಗಿ ಯೋಗ್ಯತದಂತೆ ಕಾಂಬ

ದ್ವಿಪಾದ ಪಶುಗಾಣೊ ಈ ಮುನಿಯ ನಂಬದವ
ಕೂಪಾರವೆಂಬ ಮಹ ಘೋರದೊಳಗೆ ಇಪ್ಪ
ಆಪತ್ಕಾಲ ಬತ್ತಿ ವಿಜಯ ವಿಠ್ಠಲರೇಯನ
ವ್ಯಾಪಾರವನ್ನೆ ನೆನೆದು ನಲಿನಲಿದಾಡುವ ೧

ಮಟ್ಟತಾಳ

ಭಕುತಿ ಬೇಕಾದವರು ಇವರ ಪಾದದಲ್ಲಿ
ಸಕಲಕಾಗಿ ಇದೇ ಸಾಧ್ಯವೆ ನಮಗೆಂದು
ಸಕುತನಾಗಲಿ ಬೇಕು ರಾಗಂಗಳ ತೊರೆದು
ಮುಕುತಿ ಮಾರ್ಗಕೆ ಇನ್ನು ಯಾತಕೆ ಅನುಮಾನ
ಕಕುಲಾತಿಯಿಂದ ಕಂಡಲ್ಲಿ ತಿರುಗಿ
ಹಕ್ಕಲ ಮನಸಿನಲ್ಲಿ ಕೆಟ್ಟುಪೋಗದಿರಿ
ಲಕುಮಿರಮಣ ನಮ್ಮ ವಿಜಯವಿಠಲರೇಯನ
ಭಕುತರೊಳಗೆ ಮಹಮಹಿಮ ಎನಿಸಿಕೊಂಬ ೨

ತ್ರಿವಿಡಿತಾಳ

ನಂಬಿರೋ ಶ್ರೀಪಾದರಾಯರ ಚರಣವ
ಹಂಬಲಿಸದಿರಿ ಅನ್ಯಮಾರ್ಗ
ತುಂಬಿ ತುಳುಕುತಿಪ್ಪುದು ಇಹಪರದ ಭಾಗ್ಯ
ಉಂಬುವುದುಡುವದು ಅಡಿಗಡಿಗೆ
ಡಿಂಬದೊಳಗೆ ಹರಿಯ ಧ್ಯಾನಂಗತವಾಗಿ
ಕಾಂಬುವ ಲೇಶ ಪಾಪಂಗಳಿಲ್ಲದೆ
ಗಂಭೀರ ಸಂಸಾರವಾದುದು ಅದೆ ಅವಗೆ
ಇಂಬುಗೊಡುವುದು ವೈದೀಕವೆನಿಸಿ
ಅಂಬುಜಸಖ ತೇಜ ವಿಜಯವಿಠ್ಠಲರೇಯ
ಬೆಂಬಿಡದೆ ಭಜಿಸಬೇಕು ಈ ಪರಿಯಲ್ಲಿ ೩

ಅಟ್ಟತಾಳ

ಇವರ ಪ್ರಸಾದವಾದರೆ ವ್ಯಾಸ ಮುನಿರಾಯ
ಕವಿರಾಯ ಪುರಂದರದಾಸರು ಮೊದಲಾ
ದವರ ಕರುಣವದು ಸಿದ್ಧಿಸುವುದು ಕೇಳಿ
ನವಭಕುತಿ ಪುಟ್ಟುವುದು ವ್ಯಕ್ತವಾಗಿ
ತವಕದಿಂದಲಿ ಚರಮ ದೇಹ ಬರುವುದು
ದಿವಿಜರು ಒಲಿದು ಸತ್ಕರ್ಮ ಮಾಡಿಸುವರು
ಸುವಿರುದ್ಧವಾದ ಜನರೆಲ್ಲ ನೆರೆದು ಭಾ
ಗ್ಯವನು ಬರಲಿ ಎಂದು ಕೊಂಡಾಡುವರು ನಿತ್ಯ
ಶ್ರವಣಕ್ಕೆ ತೋರುವ ವಿಜಯವಿಠ್ಠಲರೇಯನ
ದಿವಾರಾತ್ರಿಯಲಿ ನೊಡಿ ಸುಜನರ ಕೊಡುವಾ ೪

ಆದಿತಾಳ

ನರಕ ನರಕದಲ್ಲಿ ಹೊರಳುವ ಆ ಮನುಜ
ಧರೆಯೊಳು ಇವರ ಚರಿತೆ ಒಂದೊಂದದ್ಭುತವಾಗಿ
ನಿರುತದಲ್ಲಿ ನೋಡೆ ತುಂಬಿ ಸೂಸುತಲಿದೆ
ಅರುಣೋದಯದಲೆದ್ದು ಶ್ರೀ ಪಾದರಾಯರೆಂದು
ಸ್ಮರಿಸಿದ ಮಾನವಂಗೆ ಸರ್ವಸಾಧನದಿಂದ
ಮರಮಗತಿಯಾದಂತೆ ಆಗುವದು ಸಿದ್ಧ
ಪರಿಹಾಸವಲ್ಲ ಕೇಳಿ ಪ್ರೀಯ ವಿಜಯ ವಿಠಲನೆ
ಕರುಣದಿಂದಲಿ ಮಹ ಉನ್ನತದಲ್ಲಿಪ್ಪರೊ ೫

ಜತೆ

ಧ್ರುವ ಮರಿಯದಲೆ ಇದನೆ ಓದಿದವಗೆ ಬಂದ
ಭವರೋಗ ಪರಿಪಾರ ವಿಜಯವಿಠಲ ಒಲಿವಾ ೬

ಶ್ರೀವ್ಯಾಸರಾಯರ ಸ್ತೋತ್ರ

೧೫೮

ಧ್ರುವತಾಳ

ಬಂದು ದಿವಸ ನಾರಂದ ಮುನೀಶ್ವರ
ನಂದ ಗೋಪನ ಕಂದ ಇಂದಿರಾರಮಣನ
ಸಂದರುಶನ ಮಾಡಿ ಬಂದ ಹರಿವರ್ಷ
ವೆಂದೆಂಬೊ ಖಂಡದೊಳಾನಂದ ಗಾಯನದಿಂದ
ನಿಂದು ನರ ಮೃಗಗೆ ವಂದಿಸಿ ತೆರಳುತಿರೆ
ಅಂದು ಪ್ರಹ್ಲಾದನು ದ್ವಂದ್ವ ಪಾದಕೆರಗಿ
ಇಂದು ದ್ವಾರಕೆ ಪುರದಿಂದ ಪೊರಟು ನಡೆ
ತಂದ ವಾರ್ತೆ ಎನಗೊಂದುಸರಲಿಲ್ಲ ದೀನ
ಬಂಧು ಎನಿಸಿ ಕೊಂಬ ವೃಂದಾರಕ ಮುನಿ
ಮುಂದುಗಾಣದಲೆ ಕಣ್ಣಿಂದ ಬಾಷ್ಪೋದಕ
ಬಿಂದುಗಳುದರಿಸುತ ನಂದನಂದನ ಚರಿತೆ
ಒಂದೊಂದು ಪೇಳಲದರಿಂದ ಮೈಮರೆದು ಹೋ
ಎಂದು ಶಿರವದೂಗಿ ಮುನಿಗೆ ಎರಗಿ
ಕಂಧರ ಬಾಗಿ ನಾನೆಂದಿಗೆ ಕೃಷ್ಣನ
ವಂದಿಸುವೆನೆನಲು ಮಂದಹಾಸದಿಂದ
ಮಂದರೋದ್ಧರ ವಿಜಯವಿಠ್ಠಲ ಯಶೋದೆ
ಕಂದನ ಲೀಲೆಯಾನಂದ ಪೇಳೆನ್ನ ಮುನಿ
ಅಂದು ವಿವರಿಸಿದ ಅಂದವಾಗಿ ನಲಿದು ೧

ಮಟ್ಟತಾಳ

ಸಕಲದೇವರೊಳು ರುಕ್ಮಿಣಿ ಅರಸನ್ನ
ಸುಖಸಮುದಾಯಕೆ ಅಕಟ ನಾನೇನೆಂಬೆ
ಸಕಲಭೂಷಣ ಸುರನಿಕರ ಸಂದಣಿಯಲ್ಲಿ

ಮುಕುತಾಮುಕುತರ ಸೇವಕರ ಕರದಿಂದ
ಅಕಳಂಕನಾಗಿ ಸಕಲ ಸೇವಿಯಗೊಂಬ
ಮಕ್ಕಳಮಾಣಿಕ ರಂಗ ವಿಜಯ ವಿಠ್ಠಲನ್ನ
ಭಕುತರೊಳಗ್ರಣಿ ಯುಕುತಿಯಲಿ ಪೇಳಿದನು ೨

ತ್ರಿವಿಡಿತಾಳ

ಹರಿಯ ಪಾದಕ್ಕೆರಗಿ ವರಪ್ರಹ್ಲಾದನು
ಎರಡೊಂದು ಮಾರ್ಗದಲ್ಲಿ ಕೃಷ್ಣನ ಮೂರುತಿಯ
ಪರಿಪರಿಯಲ್ಲಿ ಭಜಿಸಿ ಧನ್ಯನಾಗುವೆನೆಂದು
ಸುರ ಮುನಿಗೆರಗಿ ನಿಂದಿರಲಾಗಿ ನಾರದ
ಕರುಣದಿಂದಲಿ ಉತ್ತರವ ಪೇಳಿದ ನಾನೀ
ಧರೆಯೊಳು ಜನಿಸುವ ವರವ ಪಡೆದು ಇಪ್ಪೆ
ಪರಮ ಭಾಗವತರ ರಮಣಿಯೆ ನೀನು
ಧಾರುಣಿಯೊಳಗವತರಿಸಿ ಅಧಿಕವಾದ
ಮಾರುತ ಮತದೊಳಗೆ ಚರಿಸಿ ಕೃಷ್ಣನ ಪೂಜೆ
ನಿರುತ ಬಿಡದೆ ಮಾಡಿ ಹರುಷ ಬಡೆಂದೆನಲು
ಕರುಣವಾರಿಧಿ ನರಹರಿ ವಿಜಯ ವಿಠಲನ್ನ
ಸ್ಮರಿಸಿ ಶೇಷಾಂಶ ಧರಿಸಿ ದೇಹವ ತಾಳ್ದಾ ೩

ಅಟ್ಟತಾಳ

ಬನ್ನೂರು ಸ್ಥಳದಲ್ಲಿ ಜನಿಸಿದರು ಬ್ರ
ಹ್ಮಣ್ಯ ತೀರ್ಥರಪಾವನ್ನ ಕರದಲ್ಲಿ
ಸನ್ಮನವಾಗಿ ಪಾಲನವಾದರು ಮುನಿ
ರನ್ನ ಶ್ರೀ ಪಾದರಾಯನ್ನ ಬಳಿಯಲ್ಲಿ
ಚನ್ನಾಗಿ ವಿದ್ಯಾ ಸಂಪನ್ನವಾದರು ಬಲು
ಅನ್ಯಮತವ ಬೇವಾಟನ್ನ ಮಾಡಿ ಸುಪ್ರ
ಸನ್ನ ಹರಿಯ ಕಾರುಣ್ಯವ ಪಡೆದರು
ಚನ್ನಾಗಿ ಕೃಷ್ಣ ಶ್ರೀ ವಿಜಯ ವಿಠಲನ್ನ
ಸನ್ನುತಿಸಿ ಧ್ಯಾನವನ್ನೆ ಕೈಕೊಂಡ ೪

ಆದಿತಾಳ

ಗುರು ವ್ಯಾಸಮುನಿಯೆಂದು ಧರಣಿಯೊಳಗೆ ಪೆಸರಾಗಿ
ನೆರದು ಸಜ್ಜನರಿಗೆರೆದು ನ್ಯಾಯಶಾಸ್ತ್ರ
ಅರುಹಿ ವೈಷ್ಣವಮತ ಅದರಿಂದ ಉದ್ಧರಿಸಿ
ಪೊರೆದು ನಂಬಿದವರ ಎರಡೊಂದು ಜನ್ಮ
ಸುಂದರ ಗರ್ಭದಲಿ ಬಂದು
ಪರಿಪೂರ್ಣ ಜ್ಞಾನಭಕ್ತಿ ವೈರಾಗ್ಯದಲ್ಲಿ ನಡೆದು
ಎರಡೊಂದು ಉತ್ತಮ ಗುರುಸಂತತಿಯೊಳಗೆ
ಚರಿಸಿ ಚತುರಾಶ್ರಮ ಧರಿಸಿ ಚತುರರಾಗಿ
ಭರತ ಖಂಡದೊಳು ಪಸರಿಸಿ ಕೀರ್ತಿಯ ಪಡೆದು
ಭರದಿಂದ ವಾಲಗವ ಸುರರಿಂದ ಕೈಕೊಳುತ
ಪರಲೋಕದಲಿ ಒಪ್ಪಿ ನಿರಾಮಯ
ಗುಣನಿಧಿ ವಿಜಯವಿಠ್ಠಲರೇಯನ
ನೆರೆನಂಬಿ ಪ್ರತಿದಿನ ಮೆರೆದು ಮೂರ್ಧನ್ಯರಾಗಿ ೫

ಜತೆ

ಪ್ರಹ್ಲಾದನೇ ವ್ಯಾಸಮುನಿಯೇ ರಾಘವೇಂದ್ರ
ಅಹುದೆಂದು ಭಜಿಸಿರೋ ವಿಜಯ ವಿಠ್ಠಲ ಒಲಿವಾ ೬

ಶ್ರೀವಾದಿರಾಜರ ಸ್ತೋತ್ರ

೧೫೯

ಧ್ರುವತಾಳ

ಮಾಧವನಂಘ್ರಿ ನಿತ್ಯ ಮೋದದಲ್ಲಿ ಭಜಿಪ
ಸಾಧು ಸನ್ಮುನಿವರ್ಯ ಸಮ್ಮೋದ ತೀರ್ಥಕರಪಾದ
ಸಾದರದಿಂದ ಭಜಿಸಿ ಮೇದಿನಿಗೆ ಭಾರ
ವಾದ ಮಾಯಾವಾದಿಗಳ ಗೆದ್ದೆ
ವಾದಿರಾಜರ ಮಹಿಮೆ ವರ್ಣಿಸಲರ್ಹನಲ್ಲಾ
ಮಾಧವ ವೇದವೇದ್ಯ ವಿಜಯವಿಠ್ಠಲ ತಾನು

ಆದರದಿಂದವರ ಭುಜದಿ ಹಯವಕ್ತ್ರನಾಗಿ
ಪಾದವನ್ನು ಇಟ್ಟು ಸ್ವಾದುವಾದ
ಕಡಲಿ ಹೂರಣವನು ಉಂಡ
ಶ್ರೀಧರನ ಮಹಿಮೆ ಸಾಧುಜನರು ಕೇಳಿ ೧।

ಮಟ್ಟತಾಳ

ಕಡಲಲ್ಲಿ ಪವಡಿಸಿದ ಒಡಿಯ ತಾ ಪೊಡವಿಯಲಿ
ಮೃಡನುತ ಗೋವಿಂದ ಜಡದ ಹರಿವಾಣದಲ್ಲಿ
ಕಡಲಿ ಸಕ್ಕರೆ ಬೆರಿಸಿ ಲಡ್ಡುಗೆಯ ಮಾಡಿದ
ಸಡಗರದ ಭಕ್ಷ ಪಾಯಸ ಘೃತ ನೀಡೆ
ಒಡೆಯನು ಬ್ರಹ್ಮಾದಿ ಪರಿವಾರ ಸಹಿತುಂಡು
ಕಡಗೋಲು ನೇಣು ಪಿಡಿದುಡುಪಿಲಿ ನಿಂದ
ಉಡುರಾಜಮುಖ ನಮ್ಮ ವಿಜಯ ವಿಠ್ಠಲನು
ಬೆಡಗು ಕಾರ್ಯವನ್ನು ನಡೆಸಿದ ಬಗೆ ಕೇಳಿ ೨

ತ್ರಿವಿಡಿತಾಳ

ತಾಮಸಗುಣವುಳ್ಳ ಪಾಮರ ಜನರಿಗೆ
ಈ ಮಹಿಮೆ ದೊರಕುವುದೇ ಸ್ವಾಮಿ ಸಿಲಕುವನೆ
ಕಾಮಿಸಿ ಕೋಟಿ ವರುಷ ನಾಮನುಡಿಯೆ ಪರಂ
ಧಾಮ ದೊರಿಯದು ಭೂಮಿಯೊಳಗಿದ್ದ
ಭ್ರಾಮಕ ಜನರಿಗೆ ವಾಮದೇವನೆ
ಹಿರಿಯನೆಂದು ಬುದ್ಧಿಯಕೊಡುವ
ಕಾಮಾರಿ ವಂದ್ಯ ನಮ್ಮ ವಿಜಯ ವಿಠ್ಠಲನು
ಸಾಮಾನ್ಯ ಜನರಿಗೆ ದೊರಕುವನೆ ಕೇಳಿ ೩

ಅಟ್ಟತಾಳ

ಅಜ ಸತ್ಯಲೋಕಾಧಿಪತ್ಯವನ್ನು ಮಾಡಿ ದಿ
ಗ್ವಿಜಯ ಮಾಡಲು ಪುರಕೆ
ನಿಜಸುಜ್ಞಾನ ಪೂರ್ಣಪ್ರಜ್ಞರೆಂಬೋ ಮುನಿಯು

ಅಜಪದಕೆ ಬಂದು ಅಖಿಳರನಾಳಿದಾ
ನಿಜವಾಯು ಹನುಮ ಭೀಮ ಮಧ್ವನೆನಿಸಿದ
ವಿಜಯಸಾರಥಿ ಪಾದರಜದ ಮಹಾತ್ಮೆಯಿಂದ
ಗಜವೈರಿ ಭಂಜನ ವಿಜಯವಿಠಲನ್ನ
ಭಜನಿಯ ಗೈಯುತ ಬಹುಕಾಲದಿ
ಋಜುಗಣ ಪಂಕ್ತಿಯೊಳಗೆ ಕುಳಿತಾ
ನಿಜ ನಿರ್ಮಲ ಸುಜ್ಞಾನ ಧ್ಯಾನದಿಂದ
ಜ್ಞಾನಪಕ್ವಾದ ಮಾನವುಳ್ಳ
ಸುಜನ ಶಿರೋಮಣಿ ವಾದಿರಾಜನು ತಾ
ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ
ಅಜಪದ ಸಲ್ವದು ಲೇಶ ಸಂಶಯಬೇಡಿ
ನಿಜ ನಿಜ ನಿಜವೆಂದು ನಿತ್ಯದಿ ಕೊಂಡಾಡಿ ೪

ಆದಿತಾಳ

ಮನಶುದ್ಧರಾಗಿ ಮಾಧವನಂಘ್ರಿಯನು
ದಿನ ದಿನದಲ್ಲಿ ನಂಬಿ ಕೊಂಡಿಪ್ಪರೆ
ಅನವರತಾನಂದ ಗುರು ಮಧ್ವರಾಯರ ದಿವ್ಯ
ವನಜ ಪಾದಂಗಳ ಸ್ಮರಿಸಲು
ಹನುಮೇಶ ನಮ್ಮ ಸಿರಿ ವಿಜಯವಿಠ್ಠಲ ತಾನು
ಮುನಿವಾದಿರಾಜರು ಸಾಮಾನ್ಯರೆಂತೆಂದು
ಎಣಿಸಿದವರನ್ನು ಘನವಾಗಿ ಶಿಕ್ಷಿಪ
ಇನತನೂಧ್ಭವ ಕೋಪದಿಂದೀ ಕಾರಣ ಮಹಿಮೆ
ಯನು ಕೊಂಡಾಡಿ ಅನುದಿನ ಸುಜನರು ೫

ಜತೆ

ಮೋದ ತೀರ್ಥ ಮತ ಸೇನಾಧಿಪತಿಯಾದ
ವಾದಿರಾಜ ಮುನಿಯು ವಿಜಯವಿಠ್ಠಲದಾಸಾ ೬

ಪುರಂದರ ದಾಸರ ಸ್ತೋತ್ರ

೧೬೦

ಧ್ರುವತಾಳ

ಗುರುಗಳೆಂದರೆ ಇವರೆ ಗುರುಗಳು ಎನಗೆ ಕಾಣೊ
ಧರೆಯೊಳು ಪುರಂದರದಾಸರೆ ಗುರುಗಳು
ಮರಳೆ ಮತ್ತೊಬ್ಬರುಂಟೆ ಕರುಣಿಸಿ ನೆನೆದಂತೆ
ವರಗಳ ಇತ್ತು ನಿತ್ಯ ಪರಿಪಾಲಿಸುವ ಹರಿ
ಮರುತನ್ನ ಲೀಲೆಗಳು ಹಿರಿದಾಗಿ ತಿಳಿಪಿ ವಿ
ಸ್ತರವಾಗಿ ಎನ್ನಿಂದಾ ಬರೆಸಿದರು ಹರಿಚರಿತೆ
ದುರಿತ ಸಂದಣಿಯಲ್ಲಿ ಶೆರೆಬಿದ್ದು ತಪಿಸುತ
ಲಿರೆ ನೋಡಿ ಲಾಲಿಸಿದರು ತಮ್ಮ ಕರುಣದಿಂದ
ಹರಿಯೆಳೆಮರಿ ತರಕ್ಷುವಿನ ವನದೊಳು
ಇರಲು ಸೆಳದು ಕಡಿಗೆ ತೆಗೆದಂತೆ ಇಂದಿಗಾ
ಗುರು ಶಿರೋಮಣಿ ಎನ್ನ ದುರಿತದಿಂದ ಸೆಳೆದು
ಪರಮಾರ್ಥದ ಮಾರ್ಗ ಅರಪುಮಾಡೀ
ಕರುಣಾಸಾಗರ ನಮ್ಮ ವಿಜಯ ವಿಠ್ಠಲನ್ನ
ಸ್ಮರಿಸುವುದಕೆ ಜ್ಞಾನವನ್ನೆ ತೋರಿದರೂ ೧

ಮಟ್ಟತಾಳ

ಅಡವಿಗೆ ಬಿದ್ದವನ ದಾರಿಗೆ ತಂದಂತೆ
ಒಡಲಿಗೆ ಇಲ್ಲದವನ ಸುಧೆಯೊಳಗಿಟ್ಟಂತೆ
ಕೊಡೆ ಇಲ್ಲಾದವಗೆ ಸುರತರು ಒಲಿದಂತೆ
ನಡಿಯಲರಿಯದವಗೆ ನಡಿಯ ಕಲಿಸಿದಂತೆ
ನುಡಿಯಲರಿಯದವಗೆ ನಿಗಮತಿಳಿಸಿದಂತೆ
ಮಡುವಿನೊಳು ಬಿದ್ದವಗೆ ನಾವಿದೊರಕಿದಂತೆ
ಪೊಡವಿ ಎಡೆಯುವಗೆ ಹರಿವಾಣ ದೊರೆತಂತೆ

ಮುಡಿಯಪೊತ್ತು ಪೋಪಗೆ ಊಟವು ಸಿಕ್ಕಿದಂತೆ
ಕಡುರೋಗಾದವಗೆ ಸಂಜೀವನದಂತೆ
ಜಡಮತಿ ನಾನಾಗಿ ಪೊಡವಿಯೊಳಗೆ ಭವದ
ಒಡನೊಡನೆ ನಿತ್ಯ ಎಡೆಬಿಡದೆ ಇರಲೂ
ಕೆಡಿಸುವ ಕಳ್ಳರ ನಡುಪಿ ನುಡಿಯಾ
ತೊಡಕಿಸದಾನೆ ಕೈಪಿಡಿದು ಪಾಲಿಸುವಂತೆ
ಮೃಢಬಾಂಧವನಾದ ವಿಜಯ ವಿಠ್ಠಲರೇಯನ
ಅಡಿಗಳ ನಾಮವನು ನುಡಿಸಿದರು ಒಲಿದೂ ೨

ತ್ರಿವಿಡಿತಾಳ

ಏನು ಕರುಣಿಗಳೋ ಎಮ್ಮಾ ಗುರುಗಳು
ಏನು ಸ್ವಾಭಾವಿತಾನಂದವು ತಿಳಿಯದೂ
ಮಾನವ ಯೋನಿಯಲ್ಲಿ ಬಂದು ಬಾಳುವ ಎನ್ನಾ
ಮೀನು ಉದಕದೊಳಗಿದ್ದಂತೆ ಮಾಳ್ಪರು
ಆನವರಿಗೆ ಲೇಶ ಅಧಿಕರ ಕಾಣೆನೊ
ಅನಂತ ಜನ್ಮವ ಧರಿಸಲು
ಈ ನಾಡಿನೊಳು ಎನಗೆ ಪ್ರಾಣಕೆ ಬಲುಪರಿ
ಏನೇನು ದುರಿತಗಳು ಬಂದಟ್ಟಲೂ
ಮಾಣಗಳದು ಎನ್ನಾ ಮಾನಸದರ್ಪಣ
ವನು ಇತ್ತರು ಮುದದಿಂದ ಕರುಣಿಸೀ
ಶ್ವಾನ ಛಳಿಯೊಳಿರೆ ವಜ್ರಕವಚವನ್ನು
ಮೇಣು ದೊರತದ್ದು ನೋಡು ಎನ್ನಾಭಾಗ್ಯಾ
ನಾನಾರಿಗಂಜೆನೊ ವಿಜಯ ವಿಠ್ಠಲರೇಯಾ
ಧ್ಯಾನವನು ಮಾಳ್ಪಂಥ ಜ್ಞಾನಿಗಳನು ಕಂಡೆ ೩

ಅಟ್ಟತಾಳ

ಗಾನ ಮಾಡಿದರೇನು, ಧ್ಯಾನ ಮಾಡಿದರೇನೊ
ಕಾನನದೊಳು ಪೋಗಿ ತಪವ ಸೇರಾಲೇನು

ಮಾನವನು ಪವಮಾನ ಮತವ ನಂಬಿ
ಜ್ಞಾನ ಉಪದೇಶವಾಗದಲೆ
ತಾನು ಏಸುಕಾಲ ಬದುಕಿದ ಫಲವೇನು
ಬಾಣ ಇಲ್ಲದ ಬಿಲ್ಲಿನಂತೆ ಕಾಣೊ
ಮಾನವಂತರಾದ ಗುರುಗಳ ಉಪದೇಶ
ವನು ಪಡೆದರೆ ಸ್ನಾನಾದಿ ವ್ಯಾಪಾರವೇನು
ವಾಣೀಪತಿ ಜನಕ ವಿಜಯ ವಿಠ್ಠಲರೇಯಾ
ತಾನಾಗಿ ಒಲಿವಾ ಗುರುಭಕ್ತಿ ಉಳ್ಳವಂಗೆ ೪

ಆದಿತಾಳ

ಏಸುಬಲ ಇದ್ದರೇನು, ತನ್ನ ಗುರುಗಳ ಬಲಾ
ಲೇಸಾಗಿ ಇಲ್ಲದಿರೆ ಒಂದು ಫಲನೀಯವೊ
ದೇಶದೊಳಗೆ ಉಳ್ಳವರು ಲೇಸು ತಪ್ಪಿದರೇನೊ
ದೋಷವರ್ಜಿತರಾದ ಗುರುಗಳ ದಯವಿರೆ
ಮೋಸವೆಂಬೋದೆಂದಿಗಿಲ್ಲ ದಿನಪ್ರತಿದಿನ ಬಿಡದೆ
ಈಶಾನುಗ್ರಹ ಉಂಟು ಸಿದ್ಧಾರ್ಥವೆನ್ನಿರೋ
ಕಾಶಿ ಮೊದಲಾದ ಸರ್ವಯಾತ್ರಿ ತೀರಥಾ ಮಿಂದು
ರಾಶಿ ಹಣ ಕೂಡಿಸಿ ದಾನವಿತ್ತರನೇಕಾ ಸಮಾನವಲ್ಲ ಸುಲ
ಭಾ ಸುಲಭ ಗುರುಗಳ ಸ್ಮರಣೆಗೆ ಸರಿ ಉಂಟೆ
ಕ್ಲೇಶಬಡದೆ ನಿತ್ಯ ಶುದ್ಧಮನದಿ ನಂಬಿರೊ
ದಾಸರ ಪ್ರೀಯ ನಮ್ಮ ವಿಜಯ ವಿಠ್ಠಲರೇಯಾ
ಲೇಸು ತೋರಿಸುವ ಬಿಡದೆ ಇನಿತು ನಡೆದವಗೆ ೫

ಗುರು ಪುರಂದರದಾಸರ ನೆರೆ ನಂಬಲೂ
ನಿರುತ ಕಲಿತು ವಿಜಯ ವಿಠ್ಠಲ ಒಲಿವಾ ೬

೧೬೧

ಧ್ರುವತಾಳ

ದಾಸರ ಮಹಿಮೆಗೆ ಅನಂತ ನಮೋ ನಮೋ
ದೇಶದೊಳಗೆಲ್ಲಿ ಸರಿಗಾಣೆನೋ
ವಾಸುದೇವನ ಪಾದ ಹೃದಯಮಧ್ಯದಲಿಟ್ಟು
ಲೇಸಾಗಿ ಪೂಜಿಪರು ಭಕುತಿಯಲ್ಲೀ
ಲೇಶವಾದರು ಕಾಮಕ್ರೋಧಾದಿಗಳು ಇಲ್ಲಾ
ಸಾಸಿರ ಜನ್ಮವೆತ್ತಿ ಬಂದ ಕಾಲಕ್ಕೂ ನಾನು
ಈ ಸುಲಭ ಗುರುಗಳಿಗೆ ಆವಲ್ಲಿ ಸರಿಗಾಣೆ
ಏಸುಬಗೆಯಿಂದ ಕರುಣವ ಮಾಡುವರು
ಈ ಶರೀರವೆ ಅವರ ಸದನದಲ್ಲಿ ಇಪ್ಪ
ದಾಸನು ದಾಸರ ಯುಗಳಪಾದಕ್ಕೆ ನಿವಾ
ಳಿಸಿ ಬಿಸುಟುವೆನು ಅನಂತ ಜನುಮದಲ್ಲಿ
ಈ ಸುಖ ತಪ್ಪದೆ ಎನಗಾಗಲಿ ಬಿಡದೇ
ಕೇಶವ ವಿಜಯ ವಿಠ್ಠಲ ದಯದಿಂದ
ದಾಸ ಪುರಂದರ ಗುರುಗಳು ಒಲಿಯೇ ೧

ಮಟ್ಟತಾಳ

ಕೇವಲ ದೃಢವಾಗಿ ಶ್ರೀ ವಲ್ಲಭನ ರಾ
ಜೀವ ಪಾದವನ್ನು ಭಾವದಲ್ಲಿ ನಿಲಿಸಿ
ಪಾವನವಾಗಿಪ್ಪ ಪಾವಮಾನಿ ಮತದ
ಕೋವಿದರನುಸರಿಸಿ ಹೇವ ವಿಜಯ ವಿಠ್ಠಲ ಒಡೆಯನೆ
ಸರ್ವಜೀವರಿಗೆ ಭಿನ್ನಾ ದೇವರೆ ಜಗಕೆಂದು
ದೇವರೆ ಜಗಕೆಂದೂ ೨

ತ್ರಿವಿಡಿತಾಳ

ಈ ಪರಿಯಲಿ ವಿಜಯನಗರದಲ್ಲಿ ಇದ್ದು
ತಪಸಿಗಾರಗುರುವ ಗುರು ವ್ಯಾಸರಾಯ ಮು
ನಿಪನ್ನ ಮನಮೆಚ್ಚುವಂತೆ ಸೋಜಿಗ ತೋರಿ

ಭೂಪಾಲಕರ ಮಿಗಿಲಾದವರ ತೃಣವೆಂ
ದಾ ಪತಿಕರಿಸದೆ ತುಚ್ಛಮಾಡಿ
ಅಪಾರ ಮಹಿಮೆಯ ತೋರುವ ಶ್ರೀ ಹರಿಯ
ರೂಪವ ಮನದೊಳಗಿಟ್ಟು ನಲಿವಾ
ಗೋಪಾಲ ವಿಜಯ ವಿಠ್ಠಲನ ದಾಸರೊಳು
ಈ ಪುರಂದರ ದಾಸರಿಗೆ ಸಮನುಂಟೆ ೩

ಅಟ್ಟತಾಳ

ಇವರಾಡಿದ ಭೂಮಿ ಎನಗದು ವೈಕುಂಠ
ಇವರಿದ್ದ ಸ್ಥಾನ ಎನಗೆ ಶ್ವೇತದ್ವೀಪ
ಇವರಿದ್ದದೆ ಎನಗೆ ಅನಂತಾಸನ
ಇವರಿದ್ದ ಅವನಿ ಎನಗೆ ತ್ರೈಲೋಕ
ಇವರು ಮಾಡಿದ ಲೀಲೆ ಎನಗೆ ವೇದೋಕ್ತಿಯು
ಇವರ ಚರಿತೆ ಎಲ್ಲಾ ಎನಗದು ಪುರಾಣ
ಇವರ ಪಾದಾಂಗುಟದಲ್ಲಿ ಸರ್ವ ತೀರ್ಥಾ
ಇವರ ಪಾದಾಂಗುಟದಲ್ಲಿ ಸರ್ವಕ್ಷೇತ್ರಾ
ಇವರ ಪಾದರೇಣು ಎನಗೆವಜ್ರ ಪಂಜರ
ಇವರಿಂದಲಿ ದೇಹ ಉದ್ಧಾರವಾಗೋದು
ಇವರ ಪಾದ ಹೆಜ್ಜೆ ಬಿದ್ದಲ್ಲಿ ಈ ಕಾ
ಯವನು ಮಾಡೆ ಹೊರಳಿಸಿ ತೆಗೆವೆನೊ
ಅವನೀಶ ವಿಜಯ ವಿಠ್ಠಲನ್ನ ನಂಬಿದಾ
ಹವಣರಾ ಪೊಳೆವ ಪಾದವನು ಸೇರುವೆನೊ ೪

ಆದಿತಾಳ

ತಂದೆ ತಾಯಿಗಳೆ ದಾಸರು, ಬಂಧು ಬಳಗವೆ ದಾಸರು
ಹಿಂದೆ ಮುಂದೆ ಕಟ್ಟು ಕಾವಲಿಯಿಂದ ಸಾಕುವರೆ ದಾಸರು
ಅಂದು ಇಂದು ಬಿಡದಲೆ ಬಂದ ಬಂಧನಗಳೆಲ್ಲಾ
ಪೊಂದದಂತೆ ಮಾಡೆ ಪುಣ್ಯ ತಂದು ಕೊಡುವರೆ ದಾಸರು
ಸಂದಿದೆನೊ ಸಂದಿದೆನೊ ಎನ್ನ ಕುಲಸಹಿತ ಪು

ರಂದರ ದಾಸರ ಪಾದ ದ್ವಂದ್ವದಲ್ಲಿಗೆ ಪೋಗಿ
ಮಂದರಾದ್ರಿ ಧರ ನಮ್ಮ ವಿಜಯ ವಿಠ್ಠಲ ಹರಿಯಾ
ಮಂದಿರಕೆ ಸೋಪಾನ ಸಂದೇಹ ತೊಲಗಿತು ೫

ಜತೆ

ದಾಸರೆ ಮನೆದೈವ, ದಾಸರೆ ಮನದೈವಾ
ದಾಸರಲ್ಲದೆ ಇಲ್ಲಾ ವಿಜಯ ವಿಠ್ಠಲ ಬಲ್ಲಾ ೬

ಹರಿದಾಸರ ಸ್ತೋತ್ರ

೧೬೨

ಧ್ರುವತಾಳ

ಯಾತರೊಳಗೆ ಗಣನೆ ಎನ್ನಯ ಸ್ವರೂಪ ಬಲು
ಜಾತಿಯಲ್ಲಿ ಪುಟ್ಟಿ ಬಂದದಿದಕೋ
ಪಾತಕ ಪುಂಜವಾದ ಪಾಮರ ನಾನಾಗಿ
ಪೋತತನದಾರಭ್ಯ ಪುಣ್ಯವರಿಯೇ
ಯಾತಕ್ಕೆ ಬಾತಿಯಲ್ಲ ಮೂರಕ್ಕೆ ವಶವಾಗಿ
ಸೋತು ತಿರುಗುತಿಪ್ಪೆ ಜಾತುರದಲ್ಲಿ
ಚೇತನ ಮತ್ತಾವುದೋ ಅವಿದ್ಯಾವರ್ಕವಾಗಿ
ಈ ತೆರದಲ್ಲಿ ಬಿಡದೆ ಸುತ್ತಿಪ್ಪದದಕೊ
ಮಾತು ಒಂದು ಪೇಳುವ ಸ್ವಾತಂತ್ರ್ಯತನ ಕ್ಷಣ
ಮಾತುರ ಎನಗುಂಟೆ ಪೇಳಿರಯ್ಯಾ
ಭೂತಳದೊಳಗಾನು ಜನುಮಜನುಮ ಪಂ
ಡಿತ ವ್ಯಾಖ್ಯಾನ ವಿದ್ಯಾವಂತನಲ್ಲಾ
ನೀತ ಗಾಯಕನಲ್ಲಾ ಧರ್ಮದಾನಗಳಿಲ್ಲ
ಗಾತುರ ದಂಡಿಸಿ ಯಾತ್ರೆ ತೀರ್ಥ
ವಾ ತಿರುಗಲಿಲ್ಲ ಆಚಾರವಂತನಲ್ಲ
ಚಾತುರ್ಮಾಸಾದಿ ವ್ರತಗಳೊಂದು ಇಲ್ಲ
ಯಾತಕ್ಕೆ ಹೊಂದದ ಕೇವಲ ಮೂಢ ನಾನು

ಆತುಮ ಯಾತರದೂ ಆದಿಯಲ್ಲಿ
ಮಾತಿಗುತ್ತರವರಿಯೆ ಆರಾರರ್ಚಿಸುವ ಮೂ
ರುತಿಯನೀಕ್ಷಿಸಿ ಪೇಳಲೊಶವೇ
ಸೋತ್ತಮನವನಯ್ಯಾ ಈ ಪರಿ ನಿರ್ಣಯ
ವಾರ್ತೆ ತಿಳಿದು ಪೇಳುವನಾಗೆ ಗು
ಪುತದಲ್ಲಿಪ್ಪನು ಬಾಹಿರಕ್ಕೆ ಬಾರದು
ಖ್ಯಾತಿ ಆಗನು ಕಾಣೊ ಜಗದೊಳಗೆ
ಆತುಮಸ್ತುತಿ ಇಲ್ಲ ಒಬ್ಬರ ನಿಂದಿಸನು
ವಾತದೇವನ ಮತ ಸಾರಿಯಿಪ್ಪಾ
ಈ ತೆರದಲ್ಲಿ ಕಾಲ ಕಳೆದವನೇ ಧನ್ಯಾ
ದಾತನು ಅವ ನಮ್ಮ ಕುಲಕೋಟಿಗೆ
ಶಾತಕುಂಭವರ್ನವಿಜಯ ವಿಠ್ಠಲ ಬೆ
ನ್ನಾತು ಕಾವುತಲಿಪ್ಪ ಈ ಪರಿ ಉಳ್ಳವರ ೧

ಮಟ್ಟತಾಳ

ಮೇದಿನಿಯೊಳಗೆಂದು ವ್ಯಾಸಮುನಿ ನಿತ್ಯ
ಮೋದ ಮನಸುಉಳ್ಳ ಪುರಂದರದಾಸರು
ವಾದಿರಾಜ ಸ್ವಾಮಿ ಬಲುಜನ ಆದ್ಯರು
ಭೇದ ಸಿದ್ಧರು ಶ್ರೀ ನಾರಾಯಣ ಯೋಗಿ
ವೇದ ವೇದಾಂತರು ಇವರು ಕಾಣೊ
ಸಾಧು ಜನರು ಎನ್ನಿ ಇವರವರಿಂದಲಿ
ಆದ ಶಿಷ್ಯರು ಮತ್ತೆ ಕೆಲವರು ನಂದನರು
ಮೇಧಾದಿಗೆ ಅಧಿಕ ಎನಿಸುವ ಶ್ರೀ ಹರಿಯ
ಪಾದ ಸ್ಮರಣೆ ಎಂಬೊ ಪರಿ ಪರಿ ಬಗೆಯಾ
ಸಾಧನಮಾಡಿ ಭಕುತಿಯಿಂದಲಿ ಬೇ
ಕಾದುದನೆ ಸವಿದು ಮಿಕ್ಕ ಪದಾರ್ಥ
ಈ ಧರೆ ಮೇಲಿಟ್ಟು ಮುಂದಣಗತಿ ತಿಳಿದು
ಪೋದರು ಸದ್ಗತಿಗೆ
ಮಾಧವ ಮೂರುತಿ ವಿಜಯ ವಿಠ್ಠಲ ಜಗಕೆ
ಆದಿದೈವವೆಂದು ಕೊಂಡಾಡಿ ನಗುತಾ ೨

ತ್ರಿವಿಡಿತಾಳ

ಹರಿನಾಮ ರಸವೆಂಬೋ ರುಚಿ ಪದಾರ್ಥಂಗಳು
ಗುರುವ್ಯಾಸಮುನಿ ಮಿಕ್ಕಾದ ಸುಜನರು
ಮರುತ ಪ್ರೇರಣೆಯಿಂದ ಸುರಿದು ಮದವೇರಿದ
ಕರುವಿಂಡಿನಂತೆ ಚರಿಸಿದರು ಕಾಣೊ
ದುರುಳರೆದಿಯ ಮೆಟ್ಟಿ ದುಸ್ಸಂಗವನು ಜರಿದು
ಹರಿ ಸರ್ವೋತ್ತಮನೆಂದು ಕೂಗುತಲಿ
ಹರಿದಾಡಿ ಓಡ್ಯಾಡಿ ಬೀದಿ ಬೀದಿಯೊಳಗೆ
ತಿರುಗುತಲಿಪ್ಪ ಕರಿಗಳಂದದಲಿ
ಧರೆ ಮೇಲೆ ಸುರಿದ ಆ ಪದಾರ್ಥದ ಚೂರು
ಇರುವು ಮೊದಲಾದ ಜೀವರಾಶೀ
ಹರಿದು ಪೋಗುತ ನಿಂದಿರಿಸಿಕೊಂಡು ಸವಿದುಂಡು
ಪರಮ ತೃಪ್ತಿಯಾಗಿ ಬಾಳಿದಂತೆ
ಧರೆ ಮೇಲೆ ಕವನ ಪೇಳುವ ಬಲುಜಾಣರು
ಅರಿಯರು ಹೊಸಬಗೆ ಮಾತುಗಳು
ಪರಪರಿ ಚಾತುರ್ಯದಿಂದ ಪೇಳಿದರೇನು
ಹಿರಿಯರಂದದರೊಳಗಿದು ಸಿದ್ಧವೋ
ಇರುವೆ ಮೆದ್ದದರಿಂದ ಕರಿವಿಂಡಿಗೇನು
ಕೊರತೆಯಾಗದು ಕೇಳಿ ಜ್ಞಾನಿಗಳು
ಶರಣರ ಪರಿಪಾಲ ವಿಜಯ ವಿಠ್ಠಲರೇಯ
ಎರವು ಮಾಡದೆ ಕಾವಾ ಹಿರಿಯರ ಪೊಗಳಲು ೩

ಅಟ್ಟತಾಳ

ವ್ಯಾಸ ಮುನಿ ಮಿಕ್ಕಾದ ಹರಿದಾಸರು
ಬೀಸೂರಿಗೆ ಎಣ್ಣುರಿಗೆ ಶಾವಿಗೆ
ಸೂಸಲಗಡಬು ಮಂಡಿಗೆ ಭಕ್ಷ ಅಪ್ಪಾಲು
ಲೇಸಾದ ಗುಳ್ಳೋರಿಗೆ ಮೆತ್ತನ ದೋಸೆ

ರಾಸಿ ದಧ್ಯನ್ನ ಪರಮಾನ್ನಾ ವಾರನ್ನ
ಆಸರಾಳಿಗೆ ಮತ್ತೆ ಗವಲಿ ಪರಡಿ ಫೇಣೆ
ಸೀ ಶಾಖಾ ಮಿಕ್ಕಾದ ಮೊದಲಾದ ಪದಾರ್ಥಂಗಳು ಎಲ್ಲ
ತಾ ಸವಿದರು ಅದರೊಳಗೆ ಪುರಂದರ
ದಾಸರು ಗೋಘೃತವೆಂಬೊದೆ ತೃಪ್ತಿಯಾಗಿ
ದೇಶದೊಳಗಿದ್ದು ಹೆಚ್ಚಾದವರ ಪೀ
ಯೂಷ ಹರಿನಾಮವೆಂಬೊ ಪದಾರ್ಥ ಉ
ಳಿಸಿ ಪೋದರು ಕಾಣೊ ಭೇದ ಬಲ್ಲವರಿಗೆ
ಲೇಶ ನಾನದರೊಳಗವರವ ಉಂಡದ್ದು
ಮೀಸಲವಾಗಿರೆ ನೋಡಿ ತೆಗೆದುಕೊಂಡು
ಲೇಸಾಗಿ ಘೃತದ ಸಂಗಡ ಭುಂಜಿಸುವೆನಯ್ಯಾ
ಈ ಸುಖ ಕಂಡವರಿಗೆ ದೊರಕುವುದೇನೋ
ಶಾಶ್ವತ ಮೂರುತಿ ವಿಜಯ ವಿಠ್ಠಲರೇಯ
ನಾಶವಿಲ್ಲದ ಜ್ಞಾನಕೊಟ್ಟು ರಕ್ಷಿಸುವ ೪

ಆದಿತಾಳ

ಇಂಥ ಹರಿದಾಸರು ಮಿಗಿಸಿದ್ಧ ಪ್ರಸಾದ
ಇಂತು ಎನಗೆ ಬಂದು ಪ್ರಾಪುತವಾದಮೇಲೆ
ಚಿಂತಿ ಯಾತಕೆ ಮನವೇ ಆನಂದ ತೀರ್ಥರ
ಗ್ರಂಥದಲ್ಲಿಗೆ ಸಮ್ಮತವಾಗಿ ಇಪ್ಪದು
ಪಂಥವಾಡುವ ಜನರು ಆಡಿಕೊಳ್ಳಲವರ
ಪಂಥ ಪೋಗದಲಿರು ಕಂಡರೆ ಕೆಲಸಾರು
ಕಂತು ಜನಕ ರಂಗ ವಿಜಯ ವಿಠ್ಠಲ ತಾನೆ
ಚಿಂತಿ ಮಾಡುವ ತನ್ನ ನೆನೆಸಿದ ಭಕ್ತನಿಗೆ ೫

ಜತೆ

ಹರಿ ಪ್ರಸಾದವಾದವಗೆ ಆವುದಾದರು ಕಡಿಮೆ
ನರರಿಗೆ ಆಗುವುದೆ ವಿಜಯ ವಿಠ್ಠಲ ಪೊಳೆವಾ ೬

ಕೃಪಣ ವತ್ಸಲ – ಪುಣ್ಯ ನಷ್ಟವಾಗದಂತೆ ಜೀವಿಸುವ ಭಕ್ತರನ್ನು ಪ್ರೀತಿಸುವವರು ಶ್ರೀಹರಿ
ಕೇಣಿ – ತೊಂದರೆ
ಕ್ಲೇಶ – ತೊಂದರೆ
ಕೈಟಭಾರಿ – ಕೃಷ್ಣ
ಕೈಟಭಾಸುರ
ವೈರಿ – ಕೃಷ್ಣ
ಕ್ರತು – ಯಜ್ಞ
ಕ್ಷಿತಿ – ಭೂಮಿ
ಕೋಕನ – ಕಮಲ
ಕ್ರೋಢ – ವರಾಹ, ಹಂದಿ
ಖರೆ – ಸತ್ಯ
ಖತಿ – ಕೋಪ
ಖದ್ಯೋತ – ಮಿಂಚುಹುಳ (ಇಂದ್ರಗೋಸ)
ಗತಲೋಚನ – ಕಣ್ಣಿಲ್ಲದವನು
ಗರಳ – ವಿಷ
ಗೀರ್ವಾಣ – ದೇವತೆ
ಗುಪುತ – ರಹಸ್ಯ
ಗೌಣಾಂಡ – ಸಾಮಾನ್ಯವಾದ ಬ್ರಹ್ಮಾಂಡ
ಚತುರ
ಮೂರ್ತಿ – ರಾಮಕೃಷ್ಣ, ನರಹರಿ, ದೇವವ್ಯಾಸ ಎಂಬ ವಿಷ್ಣುವಿನ ನಾಲ್ಕು ರೂಪಗಳು

ಚಚ್ಚರ – ಎಚ್ಚರಿಕೆ
ಚಾಪಧರಾಗ್ರಣಿ– ಕೋದಂಡ ರಾಮ
ಚಾಪ – ಬಿಲ್ಲು
ಚಾರು – ಸುಂದರ
ಚಿದುಕು – ಸತಾಯಿಸು
ಛವಿಗೆ – ಕಾಂತಿಗೆ
ಜಂಭಾರಿ – ಇಂದ್ರ
ಜತನವ – ಜೋಪಾನ
ಜಾತವೇದಪ – ಅಗ್ನಿ
ಜಿಹ್ವಾಗ್ರ – ನಾಲಗೆಯ ತುದಿ
ಜ್ಯೋತ್ಸ್ನ – ಬೆಳದಿಂಗಳು
ಠವಳಿ – ಸುಳ್ಳು
ಡಾವಣಿ – ಅನೇಕ ಕುರಿಗಳನ್ನು ಒಂದೇ ಹಗ್ಗದಿಂದ ಕಟ್ಟಿ ಹಾಕುವ ಹಗ್ಗ
ಡಿಂಬ – ದೇಹ
ತಟಿತ್ – ಮಿಂಚು
ತಟಿತ್ಕೋಟಿ – ಕೋಟಿ ಮಿಂಚು
ತಲ್ಲಣಿಸು – ಹೆದರು
ತತ್ತಳ – ಚಿಂತೆ
ತರಕ್ಷು – ಹುಲಿ
ತರಿಗಂಡ – ಚೆನ್ನಾಗಿ ಉರಿಯುವ ಕೆಂಡ
ತರುಣಗಾತುರ– ಯೌವ್ವನದೇಹಿ
ತಾಮರಸಸುತ– ಬ್ರಹ್ಮ
ತಿಮಿರ – ಕತ್ತಲು

ತಿರೆ – ಭೂಮಿ
ತ್ರಿದಶವಂದಿತ – ದೇವತೆಗಳಿಂದ ವಂದನೆಯನ್ನು ಪಡೆದವನು
ತುರಗಾಸ್ಯ – ಹಯಗ್ರೀವ
ತುರಿಯಾಶ್ರಮ
ಮಣಿ – ಸಂನ್ಯಾಸಿಗಳಲ್ಲಿ ರತ್ನದಂತಿರುವವರು (ವಾದಿರಾಜರು)
ತೂಲ – ಹತ್ತಿ
ತೃಣಿ – ಕ್ಷಣ ಕಾಲ
ತೆತ್ತಿಸ – ಮೂವತ್ತಮೂರು
ತೆವರಾನು – ದಿಣ್ಣೆಯನ್ನು
ತೋಂಡ – ಭಕ್ತ
ತೌತ್ಯ – ಭೂಭಾರವೆಂಬ ವನಕ್ಕೆ ಕೊಡಲಿಯಂತಿರುವವನು
ದಗ್ಧಪಟ – ಬೆಂಕಿಗೆ ಸಿಕ್ಕ ಬಟ್ಟೆ
ದಶದಿಕ್ಕು – ಹತ್ತು ದಿಕ್ಕು
ದಶಶಿರ – ರಾವಣ
ದಾರಿಂದಲೆ – ಯಾರಿಂದ
ದಿವಾಕರ ಕುಲ – ಸೂರ್ಯವಂಶ
ದ್ವಿಜಪತಿ ಸ್ಯಂದನ – ಗುರುಡನ್ನೆ ವಾಹವನ್ನಾಗಿ ಮಾಡಿಕೊಂಡವನು ಶ್ರೀಹರಿ
ದ್ವಿತೀಯೇಶ – ಎರಡನೆಯ ದೇವರು
ದುರಿತ – ಪಾಪ
ಧಡಿಗೆ – ದಂಡೆಗೆ
ಧೀಶಾ – ಒಡೆಯ
ಧುರ – ಯುದ್ಧ
ನಖ – ಉಗುರು
ನಖಶಿಖ
ಪರಿಯಂತ – ಕಾಲಿನಿಂದ ತಲೆಯವರೆಗೆ
ನಗ – ಬೆಟ್ಟ
ನದ – ಗಂಡು ನದಿ (ಉದಾ: ಬ್ರಹ್ಮಪುತ್ರ)
ನಭ – ಆಕಾಶ
ನರಮೃಗ – ನರಸಿಂಹ
ನರಸಖ – ಅರ್ಜುನನ ಗೆಳೆಯ ಕೃಷ್ಣ
ನಾಕ – ಸ್ವರ್ಗ
ನಾಗಾರಿ – ಗರುಡ
ನಾಗಾರಿ ಗಮನ – ವಿಷ್ಣು, ಗರುಡನ ಮೇಲೆ ಪ್ರಯಾಣಿಸುವವನು
ನಾವಾ – ಹಡಗು
ನಿಕಾಯ – ಗುಂಪು
ನಿಗಳವ – ಸರಪಣಿಯ ಬಂಧನ
ನಿಚ್ಚ – ನಿತ್ಯ
ನಿಟಿಲನೇತ್ರ – ಶಿವ
ನಿರಯ – ಪಾಪ

ನಿಲಲಾಪರೆ – ನಿಲ್ಲಲು ಸಾಧ್ಯವೆ
ನೀರೇರುಹ – ಕಮಲ
ನುತಿಸಿ – ಹೊಗಳಿ
ನೃತ – ಸತ್ಯ
ನೆಗಳೆ – ಮೊಸಳೆ
ನೊರಜು – ಸೊಳ್ಳೆ
ಪಂಕಾಲಯ – ಕೆಸರಿನ ಮನೆ
ಪಂಚಜನ್ಯ – ಪಂಚಪ್ರಾಣ
ಪಂಚವತಾಳಿ
ಮಾನವ – ನರಸಿಂಹ
ಪರ್ಜನ್ಯ – ಮಳೆ
ಪಡಿಗಾಣೆ – ಸಮರಾಗಿರುವವರು ಕಾಣರು
ಪಡುವಲ
ಗಡಲವಾಸ – ಕೃಷ್ಣ
ಪದಪಾಂಸ – ಪಾದಧೂಳಿ
ಪದುಮಗರ್ಭ– ವಿಷ್ಣು
ಪನ್ನಗ – ಹಾವು
ಪಯೋಧರಗಳ
ತಿನವಂತೆ
ಮಾಳ್ಪದು – ಪುನರ್ಜನ್ಮ ವಿಲ್ಲದಂತೆ ಮಾಡುವುದು (ತಾಯಿಯ ಹಾಲನ್ನು ಕುಡಿಯುವ ಸ್ಥಿತಿ ಬರದಂತೆ ಮಾಡುವುದು)
ಪಯೋನಿಧಿಸುತೆ – ಕ್ಷೀರಸಮುದ್ರದಲ್ಲಿ ಹುಟ್ಟಿದವಳು ಲಕ್ಷ್ಮಿ
ಪರಮೇಷ್ಟಿ – ಬ್ರಹ್ಮ
ಪರಾಭವ – ಸೋಲು
ಪರಿಘ – ಗದೆ
ಪ್ರತಿಬಂಧಕ – ತೊಂದರೆ
ಪನ್ನಗ – ಹಾವು
ಪನ್ನೀರಾಧೀಷ್ಟಾ – ಸಾಗರದಲ್ಲಿರುವ ಸಿಹಿನೀರು
ಪರಾಕು – ಹೊಗಳು (ನಿಂದಿಸು ಎಂಬ ವ್ಯಂಗ್ಯಾರ್ಥವಿದೆ)
ಪಲ್ಲವಾರುಣ – ಚಿಗುರಿನಂತೆ ಕೆಂಪಾದ
ಪಲ್ಯ – ತರಕಾರಿ
ಪಶುಪ – ಶಿವ
ಪಳ್ಳಿಗಾರ್ಧಟಿ – ಹಳ್ಳಿಯ ವೀರ, ಕೃಷ್ಣ
ಪ್ರಣತಜನ – ಭಕ್ತರು
ಪ್ರಪನ್ನಪಾಲಾ – ಭಕ್ತರನ್ನು ಪಾಲಿಸು–ವವನು, ವಿಷ್ಣು
ಪಾಗಾಣತಿಯರು – ಕಸಗುಡಿಸುವವರು
ಪಾಯಿ ಪೋಸು – ಚಪ್ಪಲಿ
ಪುನರೇವ – ಮತ್ತೆ ಮತ್ತೆ
ಪಾಂಸ – ಧೂಳು
ಪಾವಕಾಹುತಿ – ಯಜ್ಞ
ಪಾಷಾಣ – ಕಲ್ಲು
ಪಿನಾಕಿ – ಶಿವ
ಪೀಯೂಷ – ಅಮೃತ
ಘಟ – ಅಮೃತ ಕಲಶ

ಪುರಂದರ – ಇಂದ್ರ
ಪುರುಷ
ಪ್ರಧಾನ – ಬ್ರಹ್ಮ
ಪುರುಹೂತ – ಇಂದ್ರ
ಪುರುಹೂತವೈರಿ – ರಾವಣ
ಪೂವಿಲ್ಲನಯ್ಯ – ಮನ್ಮಥನ ತಂದೆ ವಿಷ್ಣು
ಪೊಡಮಾಡು – ನಮಸ್ಕರಿಸು
ಪೋಪದೆ – ನಿಲ್ಲದೆ
ಪೇಣ – ಪ್ರಯಾಣ
ಫಾಲ – ಹಗೆ
ಬಂಟ – ಸೇವಕ
ಬಡಸಲಾಪಪೆ – ಉಂಟು ಮಾಡಲು ಸಾಧ್ಯವೆ
ಬಡಿವಾರ – ಜಂಭ
ಬತ್ತಲಚ್ಚಂದಿಯಾಡೆ – ಬತ್ತಲೆಯಾಗಿ ಕುಣಿದರೆ
ಬಲಿಪ್ರಕ್ಷಾಲಿತ ಪಾದ – ಬಲಿ ಚಕ್ರವರ್ತಿಯಿಂದ ಪಾದಗಳನ್ನು ತುಳಿಸಿಕೊಂಡವನು
ಬಾಕುಳಿಗ – ಚಾಡಿಹೇಳುವವ
ಬಾತಿಯಿಲ್ಲ – ಪ್ರಯೋಜನವಿಲ್ಲ
ಬಿಡಾಲ – ಕೋತಿ
ಬಿಸಜ – ಕಮಲ
ಬೊಬ್ಬುಳಿ – ನೀರುಗುಳ್ಳೆ
ಬೋನಗಾರ್ತಿಯರು – ಅಡಿಗೆ ಮಾಡುವವರು
ಭಂಜನ – ನಾಶಕ
ಭವ – ಜನ್ಮ
ಭವಾಬ್ಧಿ – ಜನ್ಮ ಜನ್ಮಾಂತರಗಳೆಂಬ ಸಮುದ್ರ
ಭ್ರಮರ – ದುಂಬಿ
ಭಾರ – ಜವಾಬ್ದಾರಿ
ಭಿಡಿಯಾ – ದಾಕ್ಷಿಣ್ಯ
ಭಿಷಕ್ಕ – ವೈದ್ಯ
ಭುಜಗ ಶಯ್ಯ – ಹಾವನ್ನು ಹಾಸಿಗೆಯನ್ನಾಗಿ ಮಾಡಿಕೊಂಡವನು
ಭೃಕುಟಿ – ಹುಬ್ಬುಗಂಟಿಕ್ಕುವುದು
ಭೂಚೋರಹರ – ವರಾಹ
ಭೂಭೂಜ ರತ್ನ – ಕಲ್ಪವೃಕ್ಷ
ಭೇಕ – ಕಾಗೆ
ಭೇಷಜ – ಔಷಧಿ
ಮಂಡೆ – ತಲೆ
ಮಂಜೀರ – ಸರಪಳಿ
ಮಕರ – ಮೊಸಳೆ
ಮಖಶತ – ಬಲಿಚಕ್ರವರ್ತಿ
ಮಜ್ಜನ – ಸ್ನಾನ
ಮಬ್ಬುಚರ – ರಾಕ್ಷಸ
ಮಯದುನ – ಅರ್ಜುನ (ಕೃಷ್ಣನ ಭಾವ ಮೈದುನ)

ಮಲ್ಲಾನೆ – ಕೊಳೆಯನ್ನು
ಮಸಕರಿ – ಸಂನ್ಯಾಸಿ
ಮಹಿಷಿ – ರಾಣಿ
ಮಾಯಾ – ಭಗವಂತನ ಚಿಂತನೆಯನ್ನು ಮರೆಸುವಂತಹ ಲೋಕದ ಆಕರ್ಷಣೆ
ಮಾರ್ಗಣ – ಬಾಣ
ಮೀನಾಂಕನಯ್ಯ – ವಿಷ್ಣು
ಮೀನಾಂಕ – ಮನ್ಮಥ
ಮುಜೋಣಿ – ಮುಂಭಾಗ
ಮುಖಜ – ಬ್ರಾಹ್ಮಣ
ಮೂರುಗುಣ – ಸಾತ್ವಿಕ,ರಾಜಸ, ತಾಮಸ
ಮೃಡ – ಶಿವ
ಮೃಡನೊಡೆಯ – ವಿಷ್ಣು
ಮೆದಿಯಬೇಕು– ಮೃದು ಮಾಡಬೇಕು
ಯೋಮಾ – ಆಕಾಶ
ರಜತ ಪೀಠಪುರ – ಉಡುಪಿ
ರಾಕಾಬ್ಜ – ಚಂದ್ರ
ರಾಜೀವ – ಕಮಲ
ರುಧಿರ – ರಕ್ತ
ಲಂಕಾಧೀಶ – ವಿಭೀಷಣ
ಲಾಂಗುಲಿ ರಮಣ – ಜಾಂಬುವತಿಯ ಪತಿ ಕೃಷ್ಣ
ಲಾವಕ – ಹಾನಿಮಾಡುವವ
ಲೆಂಕಿಗ – ಸೇವಕ
ವಡಬಾನಲನ– ಸಮುದ್ರದೊಳಗಿರುವ ಬೆಂಕಿ

ವತ್ಸರ – ವರ್ಷ
ವನಧಿ – ಸಮುದ್ರ
ವರುಷಾ – ಮಳೆ
ವಯನಾಯಕಾದ್ಯರು – ಗರುಡಾದಿಗಳು
ವಲಿಮುಖ – ಕಪಿ
ವಲ್ಪಿಗೆ – ಕಪಟತನಕ್ಕೆ
ವಸುಧೆ – ಭೂಮಿ
ವಾತ – ವಾಯು
ವಾಮದಿಕ್ಕು – ದಕ್ಷಿಣ
ವಾರಿಗೆಯವರ – ಜೊತೆಯವರ
ವಾಲಗ – ಗೌರವ – ಸೇವೆ
ವಾಸರ – ನಿತ್ಯ
ವಾಸವಸುತ – ಅರ್ಜುನ
ವಾರುಧಿತನುಜೆ– ಲಕ್ಷ್ಮಿ
ವಿತ್ತ – ಹಣ
ವಿತ್ತಪತಿ – ಕುಬೇರ
ವಿಧುವದನ – ಚಂದ್ರನಂತೆ ಮುಖವುಳ್ಳ
ವಿಹಂಗ – ಪಕ್ಷಿ
ವಿಹಂಗನ – ಜಟಾಯು
ವ್ರಜಿನ – ಗೋಕುಲ
ವೃಷ್ಟಿ – ಮಳೆ
ವೃಷ್ಣಿಕುಲೋದ್ಭವ – ಯಾದವಜ ವಂಶದಲ್ಲಿ ಹುಟ್ಟಿದವನು
ವೆಗ್ಗಳ – ಹೆಚ್ಚು
ವೈಧಾತ್ರ – ಬ್ರಹ್ಮ
ಶರಿತೌಡಿದೆ – ಒಂದು ಹಿಡಿ ಭತ್ತದ ಹೊಟ್ಟಿಗೆ

ಶ್ವಸನದೇವಿ – ವಾಯುದೇವ
ಶಂಬರವೈರಿ – ಪ್ರದ್ಯುಮ್ನ
ಶಿಂಗಾಡಿ – ಬಿಲ್ಲು
ಶಿತವರ್ಣ – ಬಿಳಿಯಬಣ್ಣ
ಶಾಮಗಾತ್ರ – ಕಪ್ಪು ದೇಹವುಳ್ಳವನು ಕೃಷ್ಣ
ಶ್ವೇತಾಂಶು – ಚಂದ್ರಕಿರಣ
ಶೋಣಿತ – ರಕ್ತ
ಸಕಲಕಾಗೆ – ಎಲ್ಲಕ್ಕೂ
ಸಟೆ – ಸುಳ್ಳು
ಸತ್ರಾಣ – ಸಶಕ್ತ
ಸಮುತಸಾರಿಗೆಲಿ – ಏಳುಬಾರಿ
ಸಾರಿದಲ್ಲದೆ – ಹತ್ತಿರಬರದೆ
ಸಾಸಿರಾಕ್ಷನಸುತ – ಅರ್ಜುನ
ಸ್ಥಾಯ – ಅಚಲ
ಸ್ಥಾಣು – ಶಿವ
ಸುಧಾಗಡಲತಲ್ಪ – ಹಾಲಿನ ಸಮುದ್ರವನ್ನು ಹಾಸಿಗೆಯನ್ನಾಗಿ ಮಾಡಿಕೊಂಡವನು ವಿಷ್ಣು
ಸುಮನತರು – ದೇವತೆಗಳು
ಸುರತರು – ಕಲ್ಪವೃಕ್ಷ
ಸೂಕರ – ಹಂದಿ
ಸೋನೆ – ಮಳೆ
ಸೋಮ ಸನ್ನಿಭ – ಚಂದ್ರನಂತೆ ಇರುವವನು
ಹಕ್ಕಲವಾಗಿ – ಒಣಗಿ
ಹರಿಣೆಳೆಮರಿ – ಜಿಂಕೆಮರಿ
ಹರಿಬ – ಕೆಲಸ
ಹರಿವು – ದೋಣಿ
ಹಲವಾರಿವಾಯಾಗಿ – ಸುತ್ತಾಡಿ
ಹಳಿಯೂರು – ಬಯ್ಯುವುದಿಲ್ಲ
ಹಳವು – ಕಾಡು
ಹೃದದೊಳಗೆ – ಹುತ್ತದೊಳಗೆ
ಹೃಷ – ಇಂದ್ರಿಯ
ಹಾವುಗೆ – ಮರದ ಪಾದರಕ್ಷೆ
ಹೆದ್ದೊರೆ – ದೊಡ್ಡನದಿ
ಹೇಳನ – ಅವಹೇಳನ–ನಿರಾಕರಣೆ
ಹೊಗರು – ಕಾಂತಿ

ಅನುಬಂಧ–೨

ಟಿಪ್ಪಣಿಗಳು

೧

ವಿಜಯದಾಸರು ಸಾಧನೆಯನ್ನು ಮಾಡಿಕೊಳ್ಳುವಂತಹ ವಾತಾವರಣ ತಮಗೆ ಸಹಜವಾಗಿ ದೊರಕುವಂತಾಗಬೇಕೆಂದು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

ಮುಂಜಿಯಾಗದ ಮುನ್ನ ಮಕ್ಕಳ ಪಡೆದೆ– ಮುಂಜಿಯಾದ ಮೇಲೆ ಮದುವೆಯಾಗಿ ಅನಂತರ ಮಕ್ಕಳನ್ನು ಪಡೆಯುವುದು ಶಾಸ್ತ್ರ ವಿಹಿತವಾದುದು. ಆದರೆ ವಿಷ್ಣುವು ಮುಂಜಿಯಾಗುವ ಮುನ್ನವೇ ಬ್ರಹ್ಮನಿಗೆ ತಂದೆ ಎನಿಸಿ ಕೊಂಡನೆಂದು ದಾಸರು ಲೇವಡಿ ಮಾಡಿದ್ದಾರೆ.

ಸಂಜೆಯ ಮಾಡಿ ಸೈಂಧವನ ಕೊಂದು : ಕುರುಕ್ಷೇತ್ರದ ಯುದ್ಧದಲ್ಲಿ ಸೈಂಧವನು ಅಭಿಮನ್ಯುವನ್ನು ಕೊಂದನು. ಆದ್ದರಿಂದ ಅರ್ಜುನನು ಸೈಂಧವನನ್ನು ಮಾರನೆಯ ದಿನ ಸೂರ್ಯಾಸ್ತವಾಗುವುದರೊಳಗೆ ಕೊಲ್ಲುವುದಾಗಿಯೂ ಇಲ್ಲದಿದ್ದರೆ ಅಗ್ನಿ ಪ್ರವೇಶ ಮಾಡುವುದಾಗಿಯೂ ಪ್ರತಿಜ್ಞೆ ಮಾಡಿದರು. ಈ ವಿಚಾರವನ್ನು ತಿಳಿದ ದುರ್ಯೋಧನನು ಮಾರನೆಯ ದಿನ ಸೈಂಧವನನ್ನು ಮುಚ್ಚಿಟ್ಟನು. ಆಗ ಕೃಷ್ಣನು ಚಕ್ರವನ್ನು ಸೂರ್ಯನಿಗೆ ಅಡ್ಡವಾಗಿಟ್ಟನು. ಸೂರ್ಯಾಸ್ತವಾಯಿತೆಂದು ಭಾವಿಸಿ ದುರ್ಯೋಧನನು ಸೈಂಧವನೊಡನೆ ಬಂದು ಅರ್ಜುನನ ಪ್ರತಿಜ್ಞೆ ಮುರಿದಿರುವುದರಿಂದ ಅವನು ಅಗ್ನಿ ಪ್ರವೇಶ ಮಾಡಬೇಕೆಂದು ಹೇಳಿದಾಗ ಕೃಷ್ಣನು ಚಕ್ರವನ್ನು ಹಿಂದಕ್ಕೆ ಪಡೆದು ಸೂರ್ಯನನ್ನು ತೋರಿಸಿದನು. ಅರ್ಜುನನು ಸೈಂಧವನನ್ನು ಕೊಂದನು. ಸೈಂಧವನ ಮತ್ತೊಂದು ಹೆಸರು ಜಯದ್ರಥ. ಇವನು ದುರ್ಯೋಧನನ ತಂಗಿಯಾದ ದುಶ್ಶಲೆಯ ಗಂಡ.

೨

ಹರಿದಾಸರ ಮೊರೆಗೆ ಭಗವಂತನು ಕಿವಿಗೊಡದೆ ಹತಾಶೆಯನ್ನುಂಟು ಮಾಡಿದರೆ ಭಗವಂತನ ಘನತೆಗೆ ಕುಂದುಂಟಾಗುವುದೆಂದು, ಈ ನಿಮಿತ್ತ ತಮ್ಮನ್ನು ರಕ್ಷಿಸಬೇಕೆಂದು ಕೈಯ್ಯಾ ಬಿಡದಿರೂ ಎಂದು ವಿಜಯವಿಠಲನನ್ನು ದಾಸರು ಪ್ರಾರ್ಥಿಸಿದ್ದಾರೆ.

೩

ಭಕ್ತರು ಎಂದರೆ ಲೌಕಿಕವಾದ ಕಷ್ಟಗಳನ್ನು ಪರಿಹರಿಸೆಂದು ಬೇಡುವವರು ಎಂಬರ್ಥ ಜನಜನಿತವಾಗಿದೆ. ಇದು ಮನೋದೌರ್ಬಲ್ಯವಷ್ಟೆ. ತತ್ವಶಾಸ್ತ್ರವನ್ನು ಸರಿಯಾಗಿ ತಿಳಿದವರು ಭಗವಂತನಲ್ಲಿ ಮಾಡುವ ಪೂಜಾದಿಗಳಿಂದ ಭಗವಂತನ ದರ್ಶನವನ್ನು ಬಯಸುವರೇ ವಿನಾ ಕಷ್ಟಗಳನ್ನ ಪರಿಹರಿಸಬೇಕೆಂದು ಬೇಡಿಕೆಯನ್ನಿಡುವುದಿಲ್ಲ. ಲೌಕಿಕ ಜೀವನವನ್ನು ಪ್ರೀತಿಸುವ, ತಾಪತ್ರಯಗಳನ್ನು ತಾಳುವ ಶಕ್ತಿಯನ್ನು ಕೊಡು ಎಂದು ದಾಸರು ಪ್ರಾರ್ಥಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಹರಿಯ ಕೃಪೆಗಾಗಿ ಹರಿದಾಸರ ಕೃಪೆಯನ್ನು ದಾಸರು ಯಾಚಿಸಿದ್ದಾರೆ.

೪

ವಿಜಯದಾಸರಿಗೆ ಅಂತರ್ನಿರೀಕ್ಷೆ ಇತ್ತು, ತಮ್ಮ ಮನಸ್ಸಿನ ಇತಿಮಿತಿಯನ್ನು ಪರಾಮರ್ಶಿಸುವ ತಾಳ್ಮೆ ಇತ್ತು. ಸಾಧನೆಗೆ ವಿರೋಧವಾದ ಕಾರ್ಯಗಳು ತಮ್ಮಿಂದ ನಡೆಯುತ್ತಿದೆಯೆಂದು ತುಂಬ ದುಃಖಿತರಾಗಿ ತಮ್ಮನ್ನು ಕ್ಷಮಿಸಿ ಕಾಯಬೇಕೆಂದು ದಾಸರು ಭಗವಂತನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದ್ದಾರೆ.

೫

ಕಾಮ, ಕ್ರೋಧಾದಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಮಹಾ ಸಾಹಸ ಕಾರ್ಯ, ಆದರೆ ಅವುಗಳನ್ನು ನಿಯಂತ್ರಿಸದಿದ್ದರೆ ಮನುಷ್ಯ ಹುಚ್ಚ ನಾಗುತ್ತಾನೆ. ಆದ್ದರಿಂದ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಮನುಷ್ಯ ಮಾಡುವುದಕ್ಕೆ ಮೂಲಕಾರಣ ಮನಸ್ಸು. ಆ ಮನಸ್ಸಿನ ಮೇಲೆ ಪ್ರತಿಯೊಬ್ಬರೂ ನಿಯಂತ್ರಣವನ್ನು ಸಾಧಿಸಬೇಕೆಂದು ದಾಸರು ಒತ್ತಿ ಹೇಳಿದ್ದಾರೆ.

೬

ಶಾಸ್ತ್ರ ಮತ್ತು ಸಂಪ್ರದಾಯಗಳನ್ನನುಸರಿಸಿ ಜಪತಪ ವ್ರತಾನುಷ್ಠಾನ ಗಳನ್ನಾಚರಿಸಿ ಭಗವಂತನನ್ನು ಒಲಿಸಿಕೊಳ್ಳುತ್ತೇನೆಂಬ ಹಟದಿಂದ ಮೋಕ್ಷವನ್ನು ಸಾಧಿಸಲಾಗದೆಂಬುದನ್ನು ದಾಸರು ಈ ಸುಳಾದಿಯಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಗಂಗಾಜನಕ : ಗಂಗೆಯನ್ನು ಹುಟ್ಟಿಸಿದವನೆಂದು ವಿಷ್ಣುವಿಗೆ ಹೇಳುತ್ತಾರೆ. ಏಕೆಂದರೆ ತ್ರಿವಿಕ್ರಮಾವತಾರ ತಾಳಿದಾಗ ತ್ರಿವಿಕ್ರಮನ ಪಾದದ ಹೆಬ್ಬೆಟ್ಟಿನ ತುದಿಯ ಉಗುರು ಬ್ರಹ್ಮಾಂಡವನ್ನು ಸೀಳಿದ ನಿಮಿತ್ತ ಬ್ರಹ್ಮಾಂಡದ ಹೊರ ಆವರಣದಲ್ಲಿದ್ದ ಗಂಗೆ ಭೂಲೋಕ ಕ್ಕೆ ಧುಮುಕುವಂತಾಯಿತೆಂದು ಪುರಾಣ ಕಥೆಯುಂಟು.

೭

ಪರಮಾತ್ಮನ ಸಾಕ್ಷಾತ್ಕಾರವನ್ನು ಬಯಸುವವರು ಹಾಗು ಲೋಕದಲ್ಲಿ ಗೌರವಾನ್ವಿತರಾಗಿ ಘನತೆಯಿಂದ ಜೀವನಮಾಡ ಬಯಸುವುದು ಯದೃಚ್ಛಾಲಾಭ ಸಂತುಷ್ಟರಾಗಿರಬೇಕೆಂದು ದಾಸರು ಇಲ್ಲಿ ಕರೆನೀಡಿದ್ದಾರೆ. ಹೀಗೆಂದರೆ ನ್ಯಾಯ ಮಾರ್ಗದಲ್ಲಿ ದೊರಕುವ ಸಂಪಾದನೆಯಿಂದ ತೃಪ್ತನಾಗಿದ್ದುಕೊಂಡು ಜೀವನ ಮಾಡುವುದನ್ನು ರೂಢಿಸಿಕೊಳ್ಳಬೇಕೆಂದು ದಾಸರು ಹೇಳಿದ್ದಾರೆ. ಹೀಗೆ ಬದುಕುವುದರೊಡನೆ ಬಳ್ಳಿಯು ಚಪ್ಪರದ ಕೋಲು–ತಂತಿಗಳನ್ನು ಬಿಗಿಯಾಗಿ ಹಿಡಿದು ಸುತ್ತಿಕೊಳ್ಳುವಂತೆ ಭಗವಂತನ ಪಾದಕ್ಕೆ ಭಕ್ತಿಯ ಬಳ್ಳಿಯಿಂದ ಮನಸ್ಸು ಸುತ್ತಿ ಕೊಳ್ಳುವಂತಾಗಬೇಕೆಂದು ದಾಸರು ಹಾರೈಸಿದ್ದಾರೆ.

೮

ನಿರ್ಮಲವಾದ ಮನಸ್ಸನ್ನು ಎಲ್ಲ ಕಾಲಗಳಲ್ಲೂ ರಕ್ಷಿಸಿಟ್ಟುಕೊಳ್ಳುವುದು ಸುಲಭ ಸಾಧ್ಯವಿಲ್ಲವೆಂದೂ, ಪ್ರತಿಯೊಬ್ಬ ಸಾಧಕನೂ ಒಂದಲ್ಲ ಒಂದು ಬಗೆಯ ಅಪರಾಧವನ್ನು ಪ್ರತಿನಿತ್ಯ ಮಾಡುತ್ತಿರುವನೆಂದೂ, ಅದನ್ನು ಭಗವಂತನು ಕ್ಷಮಿಸಬೇಕೆಂದು ದಾಸರು ಇಲ್ಲಿ ಬೇಡಿದ್ದಾರೆ. ಇಲ್ಲಿ ಭಗವಂತನ ಮರೆವನ್ನೇ ಅಪರಾಧವೆಂದು ದಾಸರು ಭಾವಿಸಿದ್ದಾರೆ. ಜ್ಞಾನ, ಭಕ್ತಿ, ವೈರಾಗ್ಯಗಳ ಕೊರತೆಯನ್ನೇ ದೋಷವೆಂದಿದ್ದಾರೆ.

೯

ಇದು ಒಂದು ಐತಿಹಾಸಿಕ ವಿಚಾರವನ್ನು ತಿಳಿಸುವ ಸುಳಾದಿಯಾಗಿದೆ. ಮಾಳಗಿ ಶ್ರೀನಿವಾಸಾಚಾರ್ಯರೆಂಬುವವರಿಗೆ ಅವರಲ್ಲಿದ್ದ ವಿಜಯವಿಠ್ಠಲ ವಿಗ್ರಹವನ್ನು ವಿಜಯದಾಸರಿಗೆ ಕೊಡಬೇಕೆಂದು ಸ್ವಪ್ನವಾಯಿತೆಂದು, ಶ್ರೀನಿವಾಸಾಚಾರ್ಯರು ಸ್ವಪ್ನ ಸೂಚನೆಯಂತೆ ವಿಜಯವಿಠ್ಠಲ ವಿಗ್ರಹವನ್ನ ವಿಜಯದಾಸರಿಗೆ ಒಪ್ಪಿಸಿದಾಗ ವಿಜಯದಾಸರು ಆನಂದಬಾಷ್ಪವನ್ನು ಸುರಿಸುತ್ತಾ ಭಕ್ತಿಯಲ್ಲಿ ಕೊರತೆ ಇದ್ದರೂ ಭಗವಂತನು ತಮ್ಮನ್ನು

ಅನುಗ್ರಹಿಸಿದನೆಂಬ ಕೃತಾರ್ಥ ಭಾವವನ್ನು ಈ ಸುಳಾದಿಯಲ್ಲಿ ಪ್ರಕಟಿಸಿದ್ದಾರೆ. ವಿಜಯದಾಸರ ಶಿಷ್ಯರಾದ ಮೋಹನದಾಸರು ವಿಜಯರಾಯರ ಪಾದ ನಿಜವಾಗಿ ನಂಬಲು ಅಜನಪಿತ ತಾನೆ ಒಲಿವಾ ಎಂದು ಆರಂಭವಾಗುವ ಕೀರ್ತನೆಯಲ್ಲಿ ಸಿರಿ ವಿಜಯವಿಠಲನ ಶ್ರೀನಿವಾಸಾಚಾರ್ಯರು ಹರಿಯಾಜ್ಞೆಯಿಂದ ಕೊಟ್ಟರು ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

೧೦

ಭಗವಂತನ ಸಾಕ್ಷಾತ್ಕಾರ ಅತಿ ಕಠಿಣವಾದುದೆಂಬುದನ್ನು ದಾಸರು ಒಪ್ಪುವುದಿಲ್ಲ. ಏಕೆಂದರೆ ಭಗವಂತನಿಗೆ ಭಕ್ತರ ಮೇಲೆ ಕರುಣೆ ಅಪಾರವಾಗಿರುವುದರಿಂದ ಭಕ್ತಿ ಮಾರ್ಗದಲ್ಲಿ ನಡೆದವರಿಗೆ ಆಧ್ಯಾತ್ಮಿಕ ಅನುಭವ ಆಗಿಯೇ ಆಗುವುದೆಂಬುದನ್ನ ವಿಜಯದಾಸರು ಈ ಸುಳಾದಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಭಗವಂತನ ಪೂಜೆಯನ್ನ ನಾವು ಮಾಡಲು ಸಾಧ್ಯವಾಗದಿದ್ದರೂ ಬೇರೆಯವರು ಮಾಡುವ ಪೂಜೆಯನ್ನು ಭಕ್ತಿಯಿಂದ ನೋಡಿದರೆ ನಾವೇ ಪೂಜಿಸಿದಷ್ಟು ಫಲ ದೊರಕುವುದೆಂದು ದಾಸರಾಯರು ಸ್ಪಷ್ಟಪಡಿಸಿದ್ದಾರೆ.

೧೧

ಮನುಷ್ಯ ಹುಟ್ಟಿದ ಮೇಲೆ ಬದುಕಲು ಅನ್ನ, ನೀರು ಅಗತ್ಯ. ಇದನ್ನು ಪಡೆಯಲು ಉದ್ಯೋಗ ಅನಿವಾರ್ಯ. ಈ ಉದ್ಯೋಗವನ್ನ ಪ್ರಾಮಾಣಿಕವಾಗಿ ಮಾಡಿ ಭಗವಂತನ ಸೇವೆ ಎಂದು ಭಾವಿಸಿದರೆ ಭಗವಂತನ ಕೃಪಾ ಕಟಾಕ್ಷವಾಗುವುದೆಂದು ದಾಸರು ಇಲ್ಲಿ ಹೇಳಿದ್ದಾರೆ. 'work is worship' ಎಂಬದನ್ನು ದಾಸರು ಪುರಸ್ಕರಿಸಿದ್ದಾರೆ. ಉಂಬುವುದು, ಉಡುವುದು, ತೊಡವುದು ಎಲ್ಲ ಅಂಬುಜಾಂಬಕನ ಸೇವೆಯೆಂದು ನೆನೆವುತಿರು, ಎಂದು ಜಗನ್ನಾಥ ದಾಸರು ಹರಿಕಥಾಮೃತಸಾರದಲ್ಲಿ ಹೇಳಿರುವುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು. ಆತ್ಮಗೌರವವನ್ನು ಬಲಿಕೊಟ್ಟು ದೇಹಿ ಎಂದು ಬದುಕುವ ಪರಿಸ್ಥಿತಿಯನ್ನುಂಟು ಮಾಡಬಾರದೆಂದು ದಾಸರು ಕೇಳಿ ಕೊಂಡಿದ್ದಾರೆ.

೧೨

ಕಾಮವನ್ನು ವಿಜಯದಾಸರು ಈ ಸುಳಾದಿಯಲ್ಲಿ ಹೆಬ್ಬುಲಿ ಎಂದು ಕರೆದಿದ್ದಾರೆ. ಹೆಬ್ಬುಲಿಯ ಕೈಗೆ ಸಿಕ್ಕವರು ಹೇಗೆ ಅದರ ಹಿಡಿತದಿಂದ ಪಾರಾಗಲಾರದೆ ಪ್ರಾಣ ಬಿಡುವರೋ

ಅದರಂತೆ ಆಸೆಗೊಳಗಾದವರು ದುರಾಸೆಗೊಳಗಾದವರು ಅನರ್ಥ ಪರಂಪರೆಗಳನ್ನನುಭವಿಸಿ ಪ್ರಾಣ ತೆರುವರೆಂದು ದಾಸರು ಹೇಳಿದ್ದಾರೆ. ನಮಗೆ ಸಂಬಂಧ ಪಡದ ಯಾವುದೇ ವಸ್ತುವನ್ನು ಪಡೆಯಲು ಬಯಸುವುದೇ ಆಸೆ ಎನಿಸಿ ಕೊಳ್ಳುತ್ತದೆ. ಇದರಲ್ಲಿ ಹೆಣ್ಣು, ಹೊನ್ನು, ಮಣ್ಣು ಕೀರ್ತಿ ಎಲ್ಲವೂ ಸೇರುತ್ತದೆ. ನ್ಯಾಯಯುತವಾದ ಸಂಪಾದನೆಯ ಹಣದಿಂದ ಧರ್ಮಮಾರ್ಗದಲ್ಲಿ ಸುಖವನ್ನನುಭವಿಸುವುದು ವಿಹಿತವೆಂದು ಇದರ ತಾತ್ಪರ್ಯ.

೧೩

ಸಾಂಸಾರಿಕ ಜೀವನದಲ್ಲಿ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸುವುದರೊಡನೆ ಎಲ್ಲ ಬಂಧುಮಿತ್ರರೊಡನೆ ಅಂಟಿಯೂ ಅಂಟದಂತೆ ಸಂಬಂಧವನ್ನಿಟ್ಟುಕೊಂಡು ಭಗವಂತನಲ್ಲಿ ಭಕ್ತಿಯನ್ನು ಬೆಳೆಸಿಕೊಂಡು ಲೌಕಿಕ–ಆಧ್ಯಾತ್ಮಿಕಗಳೆರಡನ್ನು ತೂಗಿಸಿಕೊಂಡು ಹೋಗುವುದು ಸುಲಭ ಸಾಧ್ಯವಲ್ಲವೆಂಬುದನ್ನು ವಿಜಯದಾಸರು ಈ ಸುಳಾದಿಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಸಾಂಸಾರಿಕ ಜೀವನದಲ್ಲಿ ಒಂದಲ್ಲ ಒಂದು ಸಮಸ್ಯೆ ಎಲ್ಲ ಕಾಲದಲ್ಲಿ ಇದ್ದೇ ಇರುವುದೆಂದು ದಾಸರು ಹೇಳಿದ್ದಾರೆ.

೧೪

ಋಣವಿಚಾರವನ್ನು ದಾಸರು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ಯಾರೇ ಆಗಲಿ ನಮಗೆ ಕಿಂಚಿತ್ ಉಪಕರಿಸಿದರೂ ಆ ಋಣವನ್ನು ತೀರಿಸುವ ಅವಕಾಶವನ್ನು ನಾವು ಕಾಯುತ್ತಿರಬೇಕೆಂದು, ಇಲ್ಲದಿದ್ದರೆ ಋಣವು ಜನ್ಮ ಜನ್ಮಾಂತರಗಳಿಗೆ ಬಡ್ಡಿ ಸಹಿತ ಗಂಟು ಬೀಳುವುದೆಂದು ದಾಸರು ಹೇಳಿದ್ದಾರೆ. ಅಲ್ಲದೆ ಮನುಷ್ಯ ಪಿತೃ ಋಣ, ಋಷಿ ಋಣಾದಿಗಳನ್ನು ತೀರಿಸುವ ಜವಾಬ್ದಾರಿಯಿಂದ ಜಾರಿಕೊಳ್ಳಬಾರದೆಂದು ದಾಸರು ಎಚ್ಚರಿಸಿದ್ದಾರೆ. ಋಣಭಾರವನ್ನು ಹೊಂದಿದವನು ಮೈಲಿಗೆಯವನೆಂದು ಖಂಡಿಸಿದ್ದಾರೆ.

೧೫

ಭಗವಂತನ ಗುಣವಿಶೇಷಗಳನ್ನು ವಿಜಯದಾಸರು ಈ ಸುಳಾದಿಯಲ್ಲಿ ಮೆಲುಕು ಹಾಕಿದ್ದಾರೆ. ಪ್ರತಿ ನಿತ್ಯ ಭಗವಂತನನ್ನು ಸ್ಮರಣೆ ಮಾಡುತ್ತಿದ್ದರಾಯಿತು. ಆ ವ್ಯಕ್ತಿಯ ಜವಾಬ್ದಾರಿಯನ್ನು ಭಗವಂತನು ಸ್ವೀಕರಿಸಿ ಇಹಪರಗಳಲ್ಲಿ ಸುಖವನ್ನು ಕೊಡುವನೆಂದು ವಿಜಯದಾಸರು ಹೇಳಿದ್ದಾರೆ. ಭಗವಂತನ ಪ್ರಸಾದ ಲಾಭಕ್ಕಾಗಿ ಯಾಚಿಸಿದ್ದಾರೆ.

೧೬

ಎಲ್ಲಿಯವರೆಗೆ ಒಂದು ಆತ್ಮ ಈ ಲೋಕದಲ್ಲಿ ಮತ್ತೆ ಮತ್ತೆ ಜನ್ಮಗಳನ್ನು ಪಡೆಯುತ್ತಿರುವುದೆಂಬುದನ್ನು ವಿಜಯದಾಸರು ಲೆಕ್ಕಹಾಕಿ ಮತ್ತೆ ಹುಟ್ಟದಿರುವ ಪರಿಸ್ಥಿತಿಯನ್ನುಂಟು ಮಾಡಬೇಕೆಂದು ಭಗವಂತನನ್ನು ಪ್ರಾರ್ಥಿಸಿದ್ದಾರೆ.

ಲಿಂಗದೇಹ : ಅಣುರೂಪವಾದ ಜೀವದ ಮೇಲೆ ಸ್ವರೂಪ ಶರೀರ ಲಿಂಗಶರೀರ, ಅನಿರುದ್ಧ ಶರೀರ, ಸ್ಥೂಲ ಶರೀರಗಳೆಂದು ನಾಲ್ಕು ಬಗೆಯ ಶರೀರಗಳಿರುತ್ತವೆ. ಲಿಂಗ ಶರೀರವು ಮೋಕ್ಷಲೋಕ ಪ್ರವೇಶದ ಮುನ್ನ ವಿರಜಾನದಿಯಲ್ಲಿ ಸ್ನಾನಮಾಡಿದಾಗ ನಾಶವಾಗುವುದು. ಅಕ್ಕಿಯ ಮೇಲೆ ಹೊಟ್ಟು ಇರುವಂತೆ ಸ್ವರೂಪದೇಹದ ಮೇಲೆ ಲಿಂಗಶರೀರವಿರುವುದೆಂದು ಶಾಸ್ತ್ರಗಳು ಹೇಳುತ್ತವೆ.

ವಿರಜೆ : ಮೋಕ್ಷ ಲೋಕವನ್ನು ಪ್ರವೇಶ ಮಾಡಲು ಈ ನದಿಯನ್ನು ದಾಟ ಬೇಕಾಗುತ್ತದೆ. ಈ ನದಿಯಲ್ಲಿ ಸ್ನಾನ ಮಾಡುವ ಅವಕಾಶವನ್ನು ಪಡೆದ ಜೀವ ಮತ್ತೆ ಯಾವ ದುಃಖವನ್ನು ಅನುಭವಿಸಲು ಅವಕಾಶವಿರುವುದಿಲ್ಲ. ವಿರಜಾನದಿಯ ಸ್ನಾನ ಮಾಡಿದಾಗ ಲಿಂಗದೇಹ ನಾಶವಾಗಿ ಸ್ವರೂಪಾನಂದ ವನ್ನು ಆತ್ಮ ಶಾಶ್ವತವಾಗಿ ಅನುಭವಿಸಲಾರಂಭ ವಾಗುವುದೆಂದು ಶಾಸ್ತ್ರಗಳು ತಿಳಿಸಿವೆ.

೧೭

ವಿಜಯದಾಸರು ವಿಜಯವಿಠಲನ ಬಿಂಬ ದರ್ಶನಾಕಾಂಕ್ಷಿಯಾಗಿ ಅನನ್ಯವಾಗಿ ಪ್ರಾರ್ಥಿಸಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಅತ್ಯಂತ ಕಡುಬಡವನು ಚಿಂತಾರತ್ನವನ್ನೇ ಪಡೆದಾಗ ಅನುಭವಿಸಬಹುದಾದ ಆನಂದ ಭಗವಂತನ ದರ್ಶನದಿಂದ ತಮಗುಂಟಾಗುವುದೆಂದು ದಾಸರು ಹೇಳಿದ್ದಾರೆ.

ಚಿಂತಾರತುನ : ಸ್ವರ್ಗದಲ್ಲಿದೆ ಎನ್ನಲಾಗುವ ಮೂರು ಅನರ್ಘ್ಯ ವಸ್ತುಗಳಲ್ಲಿ ಚಿಂತಾರತುನವೂ ಒಂದಾಗಿದೆ. ಇದನ್ನು ಚಿಂತಾಮಣಿ ಎಂದು ಕರೆಯುವುದುಂಟು ಈ ಚಿಂತಾರತ್ನವನ್ನು ಹೊಂದಿರುವವರು, ಮನಸ್ಸಿನಲ್ಲಿ ಬೇಕೆಂದು ಬಯಸಿದುದನ್ನು ತಕ್ಷಣ ಪಡೆಯುವರೆಂದು ಹೇಳುತ್ತಾರೆ. ಇದೇ ಸುಳಾದಿಯಲ್ಲಿ ಚಿಂತಾರತ್ನವನ್ನು ವಿಜಯದಾಸರು ಸುರಮಣಿ ಎಂದು ಕರೆದಿದ್ದಾರೆ. ಕಾಮಧೇನು ಕಲ್ಪವೃಕ್ಷ ಮತ್ತು ಚಿಂತಾಮಣಿಗಳು ಸ್ವರ್ಗ ಲೋಕದ ಅನರ್ಘ್ಯ ವಸ್ತುಗಳು.

ಸುರಮಣಿ : ಚಿಂತಾರತುನ.

೧೮

ಭಕ್ತರಾದವರು ಭಕ್ತಿ ವಿಶೇಷದಿಂದ ಭಗವಂತನನ್ನು ಪ್ರಾರ್ಥಿಸಿ ಅವನ ದರ್ಶನ ದೊರಕದೆ ರೋಸಿ ಹೋಗಿ ಬೈದರೆ ಅದು ಭಗವಂತನಿಗೆ ಪ್ರಿಯವೇ ಆಗುವುದೆಂದು ವಿಜಯದಾಸರು ಹೇಳುತ್ತಾ ನಿಂದಾಸ್ತುತಿಯ ಛಾಯೆಯುಳ್ಳ ಸುಳಾದಿಯನ್ನು ಇಲ್ಲಿ ರಚಿಸಿರುವುದನ್ನು ಗಮನಿಸಬಹುದಾಗಿದೆ.

ಕರಡಿಯ ಸುತೆಗೆ ಮುದ್ದು ಕೊಟ್ಟದ್ದು : ಜಾಂಬುವತಿಯನ್ನು ಕೃಷ್ಣನು ಮದುವೆ ಮಾಡಿಕೊಂಡ ಪ್ರಸಂಗವನ್ನ ಈ ವಾಕ್ಯ ತಿಳಿಸುತ್ತಿದೆ.

ಆದ್ರಿಕೆಳಗೆ ಹೋಗಿ ಅಡ್ಡಾಗಿದ್ದಾತ : ಗೋವರ್ಧನ ಗಿರಿಯನ್ನ ಎತ್ತಿದ ಪ್ರಸಂಗವನ್ನ ಈ ವಾಕ್ಯ ಸೂಚಿಸುತ್ತಿದೆ.

೧೯

ಭಕ್ತರಾದವರು ತಾವೊಬ್ಬರೆ ಹರಿಯ ಸೇವಕರೆಂದು, ಭಾವಿಸುವುದಿಲ್ಲ. ತಮ್ಮ ಕುಟುಂಬ ವರ್ಗದ ಹಿರಿಯರು, ಕಿರಿಯರು, ಭಗವಂತನ ಸೇವಕರೆಂದು ಭಾವಿಸುತ್ತಾರೆ. ತಮ್ಮ ಬದುಕಿನ ಎಲ್ಲ ಜವಾಬ್ದಾರಿಗಳನ್ನು ಭಗವಂತನಲ್ಲಿ ಸಮರ್ಪಿಸಿ ದಾಸರು ಪರೀಕ್ಷಿತನೇ ಮೊದಲಾದ ಭಕ್ತರನ್ನು ರಕ್ಷಿಸಿದಂತೆ ತಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಂಡಿದ್ದಾರೆ.

ಬಸುರೊಳು ಪರೀಕ್ಷಿತನ ಪುಸಿಯಾದೆ ಕಾಯ್ದೆ : ಅರ್ಜುನನ ಮಗನಾದ ಅಭಿಮನ್ಯುವಿನ ಮಗ; ಪರೀಕ್ಷಿತನ ತಾಯಿ ಉತ್ತರೆ– ವಿರಾಟರಾಜನ ಪುತ್ರಿ. ಪರೀಕ್ಷಿತನು ಉತ್ತರೆಯ ಗರ್ಭದಲ್ಲಿರುವಾಗ ಅಶ್ವತ್ಥಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ ಆದರೆ ಕೃಷ್ಣನ ಕೃಪೆಯಿಂದ ಪರೀಕ್ಷಿತ ಸಾಯದೆ ಬದುಕಿಕೊಳ್ಳುವನು.

೨೦

ವಿಜಯವಿಠಲನ ಕರುಣಾಸಾಗರತ್ವವನ್ನು ದಾಸರು ಪ್ರಶಂಸಿಸುತ್ತಾ ತಮ್ಮ ಸಕಲ ಪಾಪಗಳನ್ನು ದೂರಮಾಡಿ ರಕ್ಷಿಸ ಬೇಕೆಂದು ದಾಸರು ಪ್ರಾರ್ಥಿಸಿದ್ದಾರೆ. ಶರಣರನ್ನು ರಕ್ಷಿಸುತ್ತೇನೆ, ಎಂಬುದೇ ಭಗವಂತನ ಪ್ರತಿಜ್ಞೆಯಾಗಿದೆ ಎಂಬುದಕ್ಕೆ ದಾಸರು ಒತ್ತು ಕೊಟ್ಟಿದ್ದಾರೆ.

೨೧

ಕೃಷ್ಣನ ಪ್ರಾರ್ಥನೆ ಹಾಗೂ ಕೃಷ್ಣನ ರೂಪ ವರ್ಣನೆಯೊಂದಿಗೆ ಆರಂಭವಾಗುವ ಈ ಸುಳಾದಿಯಲ್ಲಿ ಸಾಲುಗಳು ಮುಂದುವರಿದಂತೆ ದಾಸರ ಪ್ರಾರ್ಥನೆ ಸಾಂದ್ರವಾಗುವುದನ್ನು ಕಾಣುತ್ತೇವೆ. ಮಾನವನ ಮನಸ್ಸಿನಲ್ಲಿಯೇ ಮನೆ ಮಾಡಿರುವ ದೈತ್ಯರು ದುಷ್ಟ ಕಾರ್ಯಕ್ಕೆ ಪ್ರೇರಣೆಯನ್ನೊದಗಿಸದಂತೆ ನೋಡಿಕೊಳ್ಳಬೇಕೆಂದು ದಾಸರು ಪ್ರಾರ್ಥಿಸಿದ್ದಾರೆ.

> **ಒಳಗಿದ್ದ ಖಳರು ತುಳಿದಾಡುತಲಿರೆ** : ಪ್ರತಿಯೊಬ್ಬ ಮನುಷ್ಯನ ದೇಹದ ಎಡಭಾಗದಲ್ಲಿ ದೈತ್ಯರು ಸನ್ನಿಹಿತರಾಗಿದ್ದು ಕೆಟ್ಟ ಕೆಲಸಗಳನ್ನು ಮಾಡುವಂತೆ ಮನಸ್ಸಿಗೆ ಪ್ರೇರಣೆಯನ್ನೊದಗಿಸುವರೆಂದು ತತ್ವ ಶಾಸ್ತ್ರಗಳು ತಿಳಿಸುತ್ತವೆ. ಆದ್ದರಿಂದ ಒಂದು ಒಳ್ಳೆಯ ಕೆಲಸವನ್ನು ಮಾಡುವ ನಿರ್ಧಾರ ಕೈಗೊಳ್ಳುವ ಸಂದರ್ಭದಲ್ಲಿ ಮನಸ್ಸು ಡೋಲಾಯಮಾನವಾಗುತ್ತದೆ.

೨೨

ಭಕ್ತರಾದವರು ಭಗವಂತನಲ್ಲಿ ಎಷ್ಟು ಭಕ್ತಿ ಮಾಡಬೇಕೆಂದು ಆಶಿಸುವರೋ ಅಷ್ಟು ಭಕ್ತಿಯನ್ನ ಮಾಡಲಾಗಲಿಲ್ಲವೆಂದು ದುಃಖಿಸುವುದು ಅವರ ಅಂತರಂಗದ ಧ್ಯೇಯವನ್ನ ಸಾಬೀತು ಪಡಿಸುವಂತಹುದಾಗಿದೆ. ಈ ಬಗೆಯ ಪಶ್ಚಾತ್ತಾಪವೇ ಉನ್ನತ ಭಕ್ತಿಯ ದ್ಯೋತಕವಾಗಿದೆ.

> **ನರನ ಬೀಯನೆ ಕೇಳು** :ಅರ್ಜುನನ ಸಂಬಂಧಿಯಾದವನು – ಕೃಷ್ಣ.

೨೩

ಭಕ್ತಿಯು ಆಳವಾಗಿ ಒಬ್ಬ ವ್ಯಕ್ತಿ ಹೊಂದಿರುವನೆಂಬುದು ಸಾಬೀತಾಗಲು ಆ ವ್ಯಕ್ತಿಯ ಬದುಕಿನಲ್ಲಿ ಕಷ್ಟಗಳ ಪರಂಪರೆಯನ್ನನುಭವಿಸುವಾಗ ಭಗವಂತನನ್ನು ಎಷ್ಟರ ಮಟ್ಟಿಗೆ ಸ್ತೋತ್ರ ಮಾಡುವನೆಂಬುದನ್ನ ಅವಲಂಬಿಸಿದೆ. ಆದ್ದರಿಂದ ವಿಜಯದಾಸರು ಲೋಕದಲ್ಲಿರುವ ಎಲ್ಲ ಬಗೆಯ ಕಷ್ಟಗಳು ತಮಗೆ ಉಂಟಾಗಲೆಂದು ಬಯಸಿದ್ದಾರೆ– ಹಾರೈಸಿದ್ದಾರೆ. ಆ ಸಂದರ್ಭದಲ್ಲಿ ಭಕ್ತಿಯ ಭಾವ ಕಡಿಮೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಭಗವಂತನ ಮೇಲೆ ಹೊರಿಸಿದ್ದಾರೆ.

ಕಂಡವರ ಮನೆಯ ದುಷ್ಟಾನ್ನವನು ಬಿಡದೆ: ಯಾವುದೇ ವ್ಯಕ್ತಿ ಕೊಡುವ ಆಹಾರ ಸ್ವೀಕಾರದಿಂದ ಕೊಟ್ಟವನ ಪಾಪವನ್ನು ಸ್ವೀಕರಿಸಿದವನು ಪಡೆಯ ಬೇಕಾಗುವುದೆಂದು ಶಾಸ್ತ್ರಗಳು ತಿಳಿಸುತ್ತವೆ. ಅದರಲ್ಲಿಯೂ ಸಮಾಜಕ್ಕೆ ಅನ್ಯಾಯ ಮಾಡಿ ಹಣ ಸಂಪಾದಿಸಿದವನ ಮನೆಯಲ್ಲಿ ಊಟ ಮಾಡಿದರೆ ಮಹಾ ಪಾಪವನ್ನು ಹೊಂದಬೇಕಾಗುವುದು. ಆದರೆ ಉಚಿತವಾಗಿ ಆಹಾರ, ಉಡುಗೊರೆ ಸಿಗುವುದಾದರೆ ಅದರ ಪರಿಣಾಮವನ್ನು ಯೋಚಿಸಿ ನಿರಾಕರಿಸುವ ಮನಸ್ಸುಂಟಾಗುವುದು ವಿರಳ. ಆದ್ದರಿಂದ ವಿಜಯದಾಸರು ದುಷ್ಟಾನ್ನಾವನ್ನು ತಿಂದು ಅಹಂಕಾರ ಉಂಟಾಯಿತೆಂದಿದ್ದಾರೆ.

ರೋಮ ರೋಮದಲ್ಲಿ ಬೊಮ್ಮಾಂಡವಿಟ್ಟ: ಭಗವಂತನ ವಿರಾಡ್ರೂಪವನ್ನ ಹಾಗೂ ಈ ವಿಶ್ವದ ಅಗಾಧತೆಯನ್ನು ತಿಳಿಸುವ ವಾಕ್ಯವಿದು. ವಿಜ್ಞಾನಕ್ಕೆ ಒಂದು ಬ್ರಹ್ಮಾಂಡದ ಪೂರ್ಣದರ್ಶನವೇ ಇನ್ನು ಆಗಿಲ್ಲ. ಶಾಸ್ತ್ರಗಳು ವಿಷ್ಣುವನ್ನು ಅಖಿಳಾಂಡ ಕೋಟಿ ಬ್ರಹ್ಮಾಂಡ ನಾಯಕ ಎಂದು ಕರೆದಿವೆ. ವಿಷ್ಣುವಿನ ದೇಹದ ಮೇಲಿರುವ ಒಂದೊಂದು ಕೂದಲಿನ ಮೇಲೆ ಅನೇಕ ಬ್ರಹ್ಮಾಂಡಗಳುಂಟೆಂದು ಈ ವಾಕ್ಯ ಹೇಳುತ್ತದೆ.

೨೪

ಪಂಚೇಂದ್ರಿಯಗಳು ಯಾವಾಗಲೂ ತನ್ನ ಸುಖಕ್ಕೆ ಅಗತ್ಯವಾದುದನ್ನು ಬಯಸುತ್ತಿರುತ್ತವೆ. ಇವುಗಳ ಚಾಪಲ್ಯವನ್ನು ನಿಗ್ರಹಿಸದಿದ್ದರೆ ಭಗವಂತನ ಪೂಜೆ, ಜಪ, ತಪ, ವ್ರತಾನುಷ್ಠಾನಗಳನ್ನು ಮಾಡಲು ಸಾಧ್ಯವಿಲ್ಲ. ದಾಸರು ಈ ಪಂಚೇಂದ್ರಿಯಗಳ ಚಾಪಲ್ಯವನ್ನ ತಡೆಯುವಂತಹ ಮನಸ್ಸನ್ನು ತಮಗುಂಟು ಮಾಡಬೇಕೆಂದು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

೨೫

ಭಕ್ತಿ ಎಂಬುದು ಛಲವಾಗಬೇಕೆಂಬುದು ಈ ಸುಳಾದಿಯ ಆಶಯವಾಗಿದೆ. ಬದುಕಿನಲ್ಲಿ ಎಂತಹ ಕಷ್ಟಗಳು ಬಂದರೂ ಶ್ರೀಹರಿ ಪಾದದಲ್ಲಿ ಭಕ್ತಿಯನ್ನು ಬಿಡೆನೆಂಬ ಹಟದಿಂದಲೇ ಬಿಂಬಾಪರೋಕ್ಷವನ್ನು ಸಾಧಿಸಬೇಕೆಂಬುದು ದಾಸರ ನೀತಿಯಾಗಿದೆ. ಭಗವಂತನ ದಯೆ ಎಂಬುದೊಂದಿದ್ದರೆ ಬದುಕಿನಲ್ಲಿ ಬರುವ ಎಲ್ಲ ಕಷ್ಟಗಳನ್ನು ಎದುರಿಸಬಹುದೆಂದು ದಾಸರು ಹೇಳುತ್ತಾರೆ.

೨೬

ಭಗವಂತನಾದ ವಿಷ್ಣುವನ್ನಲ್ಲದೆ ಅನ್ಯರನ್ನು ಆರಾಧಿಸುವುದಿಲ್ಲವೆಂಬ ಛಲದೊಡನೆ, ಶ್ರೀಹರಿಯ ದಶಾವತಾರಗಳನ್ನು ಜ್ಞಾಪಿಸಿಕೊಂಡು ಭಗವಂತನು ತಮ್ಮ ಕೈಗೆ ದೊರಕದಂತೆ ಎಷ್ಟೇ ಜಾರಿಕೊಂಡರೂ ಅವನನ್ನು ಹೇಗಾದರೂ ಮಾಡಿ ದರ್ಶನ ಪಡೆಯುವುದಾಗಿ ಪಣ ತೊಟ್ಟಿರುವುದನ್ನ ಇಲ್ಲಿ ಕಾಣಬಹುದಾಗಿದೆ.

ಕಣ್ಣಾಬಿಟ್ಟರೆ ಬಿಡೆನೊ: ಮತ್ಸ್ಯಾವತಾರದ ಸೂಚನೆ

ಜಲವನ್ನ ಪೊಕ್ಕರೆ ಬಿಡೆನೊ: ಕೂರ್ಮಾವತಾರದ ಸೂಚನೆ

ಮಣ್ಣುತೂರಿ ಕಿಡಿಯಾದರೆ: ವರಾಹಾವತಾರದ ಸೂಚನೆ

ಸಣ್ಣನಾಗಿ ಹೆಣ್ಣುತೊರೆದರೆ: ವಾಮನಾವತಾರ

ರಾಹುತಾದರೆ ಬಿಡೆನೊ: ಕಲ್ಕಿ ಅವತಾರ

೨೭

ಮನುಷ್ಯನಾಗಿ ಹುಟ್ಟಿ ಭಗವಂತನ ಆರಾಧನೆಯಿಂದ ದೂರನಾಗಿ ಬಾಳುವುದಕ್ಕಿಂತ ಕ್ರಿಮಿಯೋ? ಹೂವೊ? ಬಿಲ್ಲೊ? ಶಂಖವೊ? ಆಗಿ ಜನ್ಮ ತಾಳಿದ್ದರೆ ತಮ್ಮನ್ನೂ ಭಗವಂತನ ಅಂಗಾಗಗಳಿಗೆ ಹೋಲಿಸುತ್ತಿದ್ದರೆಂದೂ. ಆಗ ತಮ್ಮ ಜನ್ಮ ಸಾರ್ಥಕವಾಗುತ್ತಿತ್ತೆಂದು ದಾಸರು ಭಾವಿಸುತ್ತಾರೆ. ಮಾನವನ ಮನಸ್ಸಿನ ಇತಿ ಮಿತಿಗಳ ಅರಿವನ್ನು ಈ ಕಲ್ಪನೆ ಬಯಕೆಗಳಲ್ಲಿ ಗುರುತಿಸ ಬಹುದಾಗಿದೆ. ಇಡೀ ಸುಳಾದಿಯಲ್ಲಿ ದಾಸರ ಸೌಂದರ್ಯ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ.

೨೮

ಹಲವು ದೇವತೆಗಳನ್ನು ಪೂಜಿಸಿ ಕಾಲವನ್ನು ವ್ಯರ್ಥ ಮಾಡಿಕೊಳ್ಳುವುದಕ್ಕಿಂತ ಮೂವತ್ತು ಮೂರು ಕೋಟಿ ದೇವತೆಗಳಿಗೊಡೆಯನಾದ ಶ್ರೀಹರಿಯನ್ನು ಪೂಜಿಸಿ ಬದುಕನ್ನು ಸಾರ್ಥಕ ಮಾಡಿಕೊಳ್ಳ ಬೇಕೆಂದು ವಿಜಯದಾಸರು ಈ ಸುಳಾದಿಯಲ್ಲಿ ಕರೆ ನೀಡಿದ್ದಾರೆ ಎಲ್ಲಿಯವರೆಗೆ ದೃಢ ಭಕುತಿಯನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಭಗವಂತನಲ್ಲಿ ಮೊರೆ ಇಡುವುದನ್ನು ನಿಲ್ಲಿಸುವುದಿಲ್ಲವೆಂದು ದಾಸರು ಶಪಥಗೈದಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕರಿಮೊರೆಯಿಡಲು ಮಕರಿಯ ಸಂಹರಿಸಿ : ಆನೆಯೊಂದು ಮೊಸಳೆ ಹಿಡಿತಕ್ಕೆ ಸಿಲುಕಿದಾಗ ಎಷ್ಟೇ ಪ್ರಯತ್ನಿಸಿದರೂ ಮೊಸಳೆಯ ಹಿಡಿತದಿಂದ ಆನೆ ಬಿಡಿಸಿಕೊಳ್ಳಲಾಗಲಿಲ್ಲ. ಆಗ ಆನೆಗೆ ಜ್ಞಾನೋದಯವಾಗಿ ನಾರಾಯಣನನ್ನು ಅನನ್ಯವಾಗಿ ಪ್ರಾರ್ಥಿಸುತ್ತಾ ಸೊಂಡಿಲಿನ ತುದಿಯಿಂದ ಕಮಲವೊಂದನ್ನು ಕಿತ್ತಿ ಭಗವಂತನಿಗೆ ಅರ್ಪಿಸುತ್ತದೆ. ಆಗ ವಿಷ್ಣುವು ಪ್ರತ್ಯಕ್ಷನಾಗಿ ಚಕ್ರಾಯುಧದಿಂದ ಮೊಸಳೆಯನ್ನ ಕತ್ತರಿಸುವುದರ ಜೊತೆಗೆ ಆ ಗಜೇಂದ್ರನಿಗೆ ಮೋಕ್ಷವನ್ನು ಕರುಣಿಸಿದನು.

೨೯

ಶಾಸ್ತ್ರಗಳಲ್ಲಿ ಭಗವಂತನೊಲುಮೆಯನ್ನು ಗಳಿಸಿಕೊಳ್ಳಲು ಅನೇಕ ಕಠಿಣ ವ್ರತಗಳನ್ನು ಮಾಡಬೇಕೆಂದು ಶಾಸ್ತ್ರಗಳು ತಿಳಿಸಿದೆ ; ಆದರೆ ಈ ಕಠಿಣ ವ್ರತಾಚರಣೆ ಗೈಯುವಾಗ ಭಗವಂತನ ಸ್ಮರಣೆ, ಭಜನೆ ಇತ್ಯಾದಿಯನ್ನು ಶ್ರದ್ಧೆಯಿಂದ ಮನಸ್ಸಿನಲ್ಲಿ ಮಾಡಲಾಗದಿದ್ದರೆ ಅಂತಹವರನ್ನು ಕರ್ಮಠರು ಎನ್ನುತ್ತಾರೆ. ಕರ್ಮಠರಾಗುವುದರಿಂದ ಹರಿಯ ಪ್ರಸಾದವಾಗದೆಂದು ದಾಸರು ಈ ಸುಳಾದಿಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ಜಲಕ್ರೀಡೆ ಕರಿಯೊಡೆ: ಗಜೇಂದ್ರ ಮೋಕ್ಷದ ಕಥೆಯನ್ನು ಜ್ಞಾಪಿಸಿಕೊಳ್ಳಿ.

೩೦

ಭಕ್ತನಾದವನು ಎಷ್ಟೇ ಭಕ್ತಿಯಿಂದ ಭಗವಂತನ ಆರಾಧನೆಯನ್ನು ನಾನಾ ಪರಿಗಳಲ್ಲಿ ಮಾಡಿದರೂ ಭಗವಂತನ ಕರುಣೆಯಿಲ್ಲದೆ ಸಾಧನೆಯಲ್ಲಿ ಫಲಕಾಣದೆಂದು ವಿಜಯದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ. ತಂಬೂರಿ ಹಿಡಿದು, ಕಾಲಿಗೆ ಗೆಜ್ಜೆಯನ್ನ ಕಟ್ಟಿಕೊಂಡು, ಉಚ್ಛಸ್ವರದಿಂದ ನೂರಾರು ಕೀರ್ತನೆಗಳನ್ನು ಹೇಳಿ ಅಖಂಡ ಭಜನೆ ಮಾಡಿದಾಕ್ಷಣ ಭಗವಂತನು ತನ್ನ ದರ್ಶನವನ್ನು ಕೊಟ್ಟೇ ತೀರಬೇಕೆಂದು ಒತ್ತಾಯ ಮಾಡುವಂತಿಲ್ಲವೆಂಬುದನ್ನು ದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಒಂದು ಹನಿ ನೀರಿನಿಂದ ಮಾಡುವ ಅರ್ಚನೆಯಿಂದಲೇ ಭಗವಂತನು ಒಲಿಯಬಹುದೆಂಬುದನ್ನು ಹೇಳಿದ್ದಾರೆ.

೩೧

ಶ್ರೀ ಹರಿಯ ಪ್ರಸಾದಕ್ಕೆ ದುಷ್ಟ ಮಾರ್ಗದ ಜೀವನವನ್ನು ಮೊದಲು ತ್ಯಜಿಸುವಂತಾಗಬೇಕೆಂಬುದನ್ನು ವಿಜಯದಾಸರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಕಾಮ, ಕ್ರೋಧ,

ಲೋಭಾದಿಗಳಿಂದ ಮನುಷ್ಯ ಮಾಡಬಾರದ ಅನೇಕ ಅಕೃತ್ಯಗಳನ್ನು ಮಾಡುವಂತಾಗುವುದೆಂಬುದನ್ನು ವಿಜಯದಾಸರು ಒಪ್ಪುವರಲ್ಲದೆ ಸಾಧಕರು ತಮ್ಮ ದೋಷಗಳನ್ನು ತಾವೆ ಗುರುತಿಸಿ ತಿದ್ದಿಕೊಳ್ಳಲು ಮನಸ್ಸಿನೊಡನೆ ಹೋರಾಡಿ ಯಶರಾಗಬೇಕೆಂಬುದನ್ನು ಇಲ್ಲಿ ಸೂಚಿಸಿದ್ದಾರೆ.

೩.೨

ಭಕ್ತರಾದವರು – ಭಕ್ತರಾಗುವವರು ಆತ್ಮ ಶೋಧನಾತ್ಮಕವಾದ ಅಂಶಗಳನ್ನು ತಮ್ಮ ಸಾಹಿತ್ಯದಲ್ಲಿ ಅನಿವಾರ್ಯವಾಗಿ ಅಭಿವ್ಯಕ್ತಗೊಳಿಸುತ್ತಾರೆ. ತಮ್ಮ ತಮ್ಮ ಮನಸ್ಸಿನ ದೋಷಗಳನ್ನು ತಾವೇ ಅರಿತು ತಿದ್ದಿಕೊಳ್ಳುವ ದೃಷ್ಟಿಯಿಂದಾಡಬಹುದಾದ ವಿಚಾರವೇ ಆತ್ಮ ಶೋಧನಾತ್ಮಕ ಸಾಹಿತ್ಯವೆನಿಸಿಕೊಳ್ಳುತ್ತವೆ. ಏಕಾದಶೇಂದ್ರಿಯಗಳೂ ಭಗವಂತನ ಪರವಾದ ಕಾರ್ಯಗಳನ್ನು ಮಾಡುತ್ತಿಲ್ಲವೆಂಬ ವ್ಯಥೆ ಇಲ್ಲಿ ಅಭಿವ್ಯಕ್ತವಾಗಿದೆ.

ಪಾಪಪುರುಷನ ಸೇರಿತು : ಕಲಿಯನ್ನು ಪಾಪ ಪುರುಷ ಎನ್ನಲಾಗಿದೆ. ಇವನು ಹಿರಿಯ ದೇವತೆಗಳಂತೆ ಮನಸ್ಸಿನಲ್ಲಿ ಪ್ರವೇಶಿಸಿ ದುಷ್ಟ ಕಾರ್ಯಗಳನ್ನು ಪ್ರೇರಿಸುವ ಶಕ್ತಿಯನ್ನ ಪಡೆದಿರುವನು. ಆದ್ದರಿಂದ ಭಕ್ತಿಸಾಧನೆಗೆ ಅಡ್ಡಿ ಎಂದು ದಾಸರು ಭಾವಿಸಿದ್ದಾರೆ.

ಈರೈದು ಮ್ಯಾಲೊಂದು ಇಂದ್ರಿಯಗಳ ಕರ್ಮ : ಹನ್ನೊಂದು ಇಂದ್ರಿಯಗಳು ಮಾಡುವ ಕರ್ಮವೆಂದರ್ಥ; ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಮನಸ್ಸು – ಹೀಗೆ ಒಟ್ಟು ಹನ್ನೊಂದು ಇಂದ್ರಿಯಗಳು.

೩.೩

ಭಗವಂತನನ್ನು ವಿಜಯದಾಸರು ಅನನ್ಯ ಭಕ್ತಿಯಿಂದ ಪೂಜಿಸಿರುವುದನ್ನು ಈ ಸುಳಾದಿಯಲ್ಲಿ ಗುರುತಿಸಬಹುದಾಗಿದೆ. ನವಗ್ರಹಾದಿಗಳೆಲ್ಲವನ್ನು ನಿಗ್ರಹಿಸಿರುವ ವಿಷ್ಣುವಿನ ಒಲವೊಂದಿದ್ದರೆ ಬದುಕಿನಲ್ಲಿ ಬರುವ ಎಲ್ಲ ತೊಂದರೆಗಳನ್ನು ಸುಲಭವಾಗಿ ದಾಟಬಹುದೆಂಬ ಭರವಸೆಯನ್ನು ದಾಸರು ವ್ಯಕ್ತಪಡಿಸಿದ್ದಾರೆ. ಆದರೆ ದಾಸರು ತಮ್ಮ ಬದುಕಿನ ತೊಂದರೆಗಳನ್ನು ನಿವಾರಿಸೆಂದು ಪ್ರಾರ್ಥಿಸದೆ ಏನಿದ್ದ ಪ್ರಾರಬ್ಧ ಎಣಿಸಿ ಕಡೆಗೆ ಕಾಯೊ ಎಂದು ಪ್ರಾರ್ಥಿಸಿರುವುದು ಗಮನಾರ್ಹ.

ಅನಿರ್ದೇಶ ವಪು : ಯಾರಿಂದಲೂ ಆಜ್ಞಾಪನೆಗೆ ಒಳಗಾಗದವನು. ಸರ್ವರಿಗೂ ಅಧಿಕನಾಗಿರುವವನು, ಶಾಸ್ತ್ರಗಳನ್ನು ರಕ್ಷಿಸುವವನು, ವಿಷ್ಣು ಸಹಸ್ರನಾಮದಲ್ಲಿ ಈ ಶಬ್ದವಿದೆ.

೩೪

ವಿಷ್ಣುವಿನ ಕೆಲವು ಗುಣಗಳನ್ನು ಸ್ಮರಿಸಿ ಹರಿಯನ್ನು ಸದಾ ಕಾಲ ಸ್ಮರಿಸುವ ಸೌಭಾಗ್ಯವನ್ನು ಕರುಣಿಸಬೇಕೆಂದು ದಾಸರು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ. ಶ್ರೀಹರಿಯನ್ನು ಶರಣರಕ್ಷಾಮಣಿ, ಸತ್ಯಸಂಕಲ್ಪ; ಕಾಲಪುರುಷ: ನಿತ್ಯ ಕೃತು ಎಂದೆಲ್ಲ ಸಂಬೋಧಿಸಲಾಗಿದೆ.

ಕಾಲಯವನ ವೈರಿ : ಕಾಲಯವ ಎಂಬುವವನು ಒಬ್ಬ ರಾಕ್ಷಸ. ಇವನು ಗರ್ಗ ಎಂಬ ಮಹರ್ಷಿಯ ಮಗ; ಯಾದವರು ಒಂದು ಸಲ ಗರ್ಗ ಮಹರ್ಷಿಯನ್ನ ಹಾಸ್ಯ ಮಾಡಿದರು. ಆದ್ದರಿಂದ ಯಾದವರನ್ನು ನಾಶಮಾಡಬಲ್ಲ ಮಗನನ್ನು ಪಡೆಯಲು ಶಿವನನ್ನು ಕುರಿತು ಗರ್ಗ ಮಹರ್ಷಿಯು ತಪಸ್ಸು ಮಾಡಿ ವರ ಪಡೆದು ಕಾಲಯವನನ್ನು ಮಗನನ್ನಾಗಿ ಪಡೆದನು. ಯಾದವರ ಮೇಲೆ ಯುದ್ಧ ಮಾಡಿ ಯಾದವರನ್ನು ನಾಶಮಾಡಿ ಕೃಷ್ಣನ ಹಲವು ಬಾರಿ ಯುಕ್ತಿಯಿಂದ ಹತನಾದನು. ಕೃಷ್ಣನನ್ನು ಕಾಲಯವ ಅಟ್ಟಿಸಿಕೊಂಡು ಬಂದಾಗ ಕೃಷ್ಣನು ಒಂದು ಗುಹೆಯನ್ನು ಪ್ರವೇಶಿಸಿ ಅಲ್ಲ ಮಲಗಿದ್ದ ಮುಚುಕುಂದನ ಮೇಲೆ ತನ್ನ ಶಾಲನ್ನು ಹೊದಿಸಿದನು. ಕಾಲಯವನು ಕೃಷ್ಣನೆಂದು ಭಾವಿಸಿ ಮುಚುಕುಂದನನ್ನು ಒದ್ದನು. ಮುಚುಕುಂದ ಕಣ್ಣು ಬಿಟ್ಟಾಗ ಹೊರಟ ಬೆಂಕಿಯಿಂದ ಕಾಲಯವ ದಹಿಸಿ ಹೋದನು.

ಅಜಾಮಿಳ : ಇವನು ಒಬ್ಬ ಬ್ರಾಹ್ಮಣ. ಇವನು ದುರಭ್ಯಾಸಗಳನ್ನು ಹೊಂದಿದ್ದುದರ ಜೊತೆಗೆ ತಾಯಿ ತಂದೆಯರ ಸೇವೆಯನ್ನು ಮಾಡದೆ ಧರ್ಮಪತ್ನಿಯನ್ನು ಮನೆಯಿಂದ ಓಡಿಸಿದ್ದನು. ಆದರೆ ಸಾಯುವ ಕಾಲದಲ್ಲಿ ತನ್ನ ಮಗನಾದ ನಾರಾಯಣನನ್ನು ಕೂಗುವುದರೊಡನೆ ವಿಷ್ಣುವಿನ ನಾಮಸ್ಮರಣ ಮಹಿಮೆಯಿಂದ ಸದ್ಗತಿಯನ್ನು ಪಡೆದನೆಂದು ಕಥೆಯುಂಟು. ಇದು ಭಗವಂತನ ಕಾರುಣ್ಯಕ್ಕೆ ಸಂಕೇತವೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ.

೩೫

ಭಕ್ತಿಸಾಧನೆಗೆ ಉತ್ತಮ ವಾತಾವರಣ ಅತ್ಯಾವಶ್ಯಕ. ಒಬ್ಬ ಭಕ್ತನ ಭಕ್ತ್ಯಾತಿಶಯವನ್ನು ಕಣ್ಣಾರೆ ಕಂಡು ಮತ್ತೊಬ್ಬ ಭಕ್ತನೂ ಅವನಂತೆ ಭಕ್ತಿಯನ್ನು ಶ್ರದ್ಧೆಯಿಂದ ಆಚರಿಸಲು ಸಾಧ್ಯವಾಗುವುದೆಂಬ ವಾದದಲ್ಲಿ ಸತ್ಯಾಂಶವಿದೆ. ಆದ್ದರಿಂದ ಸ್ನಾನ ಮೌನದಾನಾದಿ ವ್ರತಾಚರಣೆನಿರತ ಜ್ಞಾನಿಗಳ ಪಾದರೇಣು ದೊರಕಲಿ ಎಂದು ವಿಜಯದಾಸರು ಪ್ರಾರ್ಥಿಸಿದ್ದಾರೆ.

೩೬

ಈ ರಚನೆಯನ್ನು ಚರಣ ಸುಳಾದಿ ಎನ್ನಬಹುದು. ಏಕೆಂದರೆ ವಿಜಯದಾಸರು ಶ್ರೀಹರಿಯ ಚರಣವನ್ನು ನಾನಾ ರೀತಿಗಳಲ್ಲಿ ಸ್ತೋತ್ರ ಮೊಡಿದ್ದಾರೆ. ಪುರಾಣ ಪ್ರಸಿದ್ಧರಾದ ಅಂಬರೀಷ, ಪ್ರಹ್ಲಾದ, ಪುಂಡರೀಕ, ಅಹಲ್ಯ, ಶ್ವೇತವಾಹನ ಅರ್ಜುನ ಧ್ರುವನೇ ಮೊದಲಾದವರು ಶ್ರೀಹರಿಯ ಚರಣವನ್ನೇ ನಂಬಿ ಉದ್ಧಾರರಾದರೆಂಬುದನ್ನು ವಿಜಯದಾಸರು ಈ ಸುಳಾದಿಯಲ್ಲಿ ಸೂಚಿಸಿ ತಮ್ಮನ್ನ ಉದ್ಧರಿಸಬೇಕೆಂದು ಕೇಳಿಕೊಂಡಿರುವರು.

ಅಂಬರೀಷ : ಇವನೊಬ್ಬ ರಾಜ, ಇವನು ವಿಷ್ಣು ಭಕ್ತ. ಇವನ ಮಗಳು ಲಕ್ಷ್ಮಿಯ ಅವತಾರವಾಗಿದ್ದಳು. ಅಂಬರೀಷನಿಗೆ ಶಾಪ ಕೊಡಲೆಂದು ಬಂದ ದೂರ್ವಾಸರು ವಿಷ್ಣುವಿನ ಚಕ್ರದ ಏಟಿನಿಂದ ತಪ್ಪಿಸಿಕೊಳ್ಳಲು ಅಂಬರೀಷನನ್ನೇ ಕೇಳಿಕೊಳ್ಳಬೇಕಾಯಿತು.

ಧ್ರುವರಾಯ : ರಾಜ ಪುತ್ರನಾಗಿದ್ದ ಧ್ರುವ ಕೇವಲ ಐದನೆಯ ವಯಸ್ಸಿನಲ್ಲಿ ತಪಸ್ಸು ಮಾಡಿ ವಿಷ್ಣುವನ್ನು ಪ್ರತ್ಯಕ್ಷ ಮಾಡಿಕೊಂಡನು.

೩೭

ಹರಿಭಕ್ತನಾಗಿ ಬೆಳೆಯುವ ಅವಕಾಶ ಭಗವಂತನಿಂದ ಪ್ರಾಪ್ತಿಯಾಯಿತೆಂಬ ತೃಪ್ತಿ ಭಾವವನ್ನು ದಾಸರು ಈ ಸುಳಾದಿಯಲ್ಲಿ ವ್ಯಕ್ತಪಡಿಸಿದ್ದಾರೆ ಆದ್ದರಿಂದ ಭಗವಂತನ ಗುಣವಿಶೇಷಗಳನ್ನು ಮುಕ್ತವಾಗಿ ಹೊಗಳಿದ್ದಾರೆ.

ಬಾಣ ದಾನವನ ಹರಣವನು ಹಾನಿ ಮಾಡಿದ : ಬಾಣನು ಬಲಿಚಕ್ರವರ್ತಿಯ ಮಗ. ಇವನಿಗೆ ಸಾವಿರತೋಳುಗಳಿದ್ದವು. ಇವನ ಮಗಳಾದ ಉಷೆಯನ್ನು ಕೃಷ್ಣನ ಮೊಮ್ಮಗನಾದ ಅನಿರುದ್ಧ ಕದ್ದು ಮದುವೆಯಾಗುವನು.

೩೮

ಅಂದಂದು ಮಾಡಲೇಬೇಕಾದ ವಿಹಿತಕರ್ಮಗಳನ್ನು ಮಾಡಲಾಗದ ಸ್ಥಿತಿ ಬಂದಾಗ ಅದರ ಕರ್ಮ ಫಲಗಳನ್ನು ಬದುಕಿರುವಾಗ ಈ ಲೋಕದಲ್ಲಿಯೂ ಸತ್ತ ಮೇಲೆ ನರಕದಲ್ಲಿಯೂ ಅನುಭವಿಸಬೇಕಾದ ಸ್ಥಿತಿ ಒದಗುವುದೆಂಬ ಚಿಂತೆ ದಾಸರ ಮನಸ್ಸನ್ನು ಕಾಡಿದ ಸಂದರ್ಭದಲ್ಲಿ ಈ ಸುಳಾದಿ ರಚನೆಗೊಂಡಂತಿದೆ.

ಶಂಬರಕವೈರಿ : ಶಂಬರಾಸುರನು ದಕ್ಷನ ಪುತ್ರ. ಶ್ರೀ ಕೃಷ್ಣನ ಮಗನಾದ ಪ್ರದ್ಯುಮ್ನನಿಂದ ತಾನು ಸಾಯುವುದಾಗಿ ತಿಳಿದಾಗ ತಾನಾಗಿಯೇ ಪ್ರದ್ಯುಮ್ನನನ್ನು ಕೊಲ್ಲಲೆಂದು ಯುಧ್ಧ ಮಾಡಿ ಹತನಾಗುವನು. ಶಂಬರ ವೈರಿ ಎಂಬ ಮಾತು ಕೃಷ್ಣನಿಗೆ ಅನ್ವಯವಾಗುತ್ತದೆ.

೩೯

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳನ್ನು ಅರಿಷಡ್ವರ್ಗಗಳೆಂದು ಕರೆಯಲಾಗುತ್ತದೆ. ಇದನ್ನು ಎಂತಹ ವಿರಕ್ತರಾಗಲೀ ಭಕ್ತರಾಗಲೀ ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಿಲ್ಲ. ಇದನ್ನರಿತ ದಾಸರು ಈ ಅರಿಷಡ್ವರ್ಗಗಳಲ್ಲ ಹರಿ ಭಕ್ತಿ ಸಾಧನೆಗೆ ಪೂರಕವಾಗುವಂತೆ ದಯಗೈಯಬೇಕೆಂದು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

೪೦

ತತ್ವಶಾಸ್ತ್ರಗಳನ್ನು ಅರಿತು ಭಕ್ತರೆನಿಸಿಕೊಂಡವರು ಈ ಲೋಕದ ಬದುಕಿಗೆ ಪ್ರಾಶಸ್ತ್ಯವನ್ನು ಸಾಮಾನ್ಯವಾಗಿ ನೀಡಲಾರರೆಂಬ ಹೇಳಿಕೆಗೆ ವಿರುದ್ಧವಾದ ವಿಷಯ ಮಂಡನೆ ಈ ಸುಳಾದಿಯಲ್ಲಿದೆ. ಯಾವ ಜೀವಕ್ಕೆ ಮನುಷ್ಯನಾಗಿ ಹುಟ್ಟುವ ಅವಕಾಶ ದೊರಕುವುದೋ ಆ ಜೀವ ಮಾತ್ರ ಸತ್ಸಾಧನೆಯನ್ನು ಮಾಡಿಕೊಂಡು ಶ್ರೀ ಹರಿಯ ಕೃಪಾಕಟಾಕ್ಷಕ್ಕೊಳಗಾಗುವ ಸಾಧ್ಯತೆ ಇದೆ ಎಂಬುದನ್ನ ದಾಸರು ಇಲ್ಲಿ ಒತ್ತಿ ಹೇಳಿದ್ದಾರೆ.

೪೧

ಸುಖ ಬಂದಾಗ ಹಿಗ್ಗದೆ ದುಃಖ ಬಂದಾಗ ಕುಗ್ಗದೆ ಇದ್ದಾಗ ಮಾತ್ರ ತತ್ವಶಾಸ್ತ್ರಾಧ್ಯಯನ ಮತ್ತು ಹರಿಭಕ್ತಿಯಿಂದ ಸಾರ್ಥಕವಾಗುತ್ತದೆ. ಜೀವನದಲ್ಲಿ ಒದಗುವ ಸನ್ಮಾನವೆಲ್ಲವೂ ಭಗವಂತನಿಗೆ ಸಲ್ಲುತ್ತಿದೆ ಎಂಬ ಭಾವನೆಯನ್ನು ಹೊಂದಿದಾಗ ಮಾತ್ರ ನಿರಹಂಕಾರದಿಂದ ವರ್ತಿಸಲು ಸಾಧ್ಯವೆಂಬ ಚಿಂತನೆ ಇಲ್ಲಿದೆ.

೪೨

ಭಗವಂತನ ಸ್ಮರಣೆ, ಅರ್ಚನೆ, ವಂದನೆ, ಕೀರ್ತನೆ, ತೀರ್ಥಯಾತ್ರಾ ಪರ್ಯಟನಾದಿಗಳಿಂದ ಬರುವ ಪುಣ್ಯವನ್ನು ಬಿಂಬಾ ಪರೋಕ್ಷಕ್ಕೆ ಮೀಸಲಿಡದೆ ಈ ಲೋಕದ ಐಶ್ವರ್ಯ, ಸುಖ, ಕೀರ್ತಿ, ಅಧಿಕಾರವೇ ಮೊದಲಾದುವುಗಳಿಗೆ ವಿನಿಯೋಗವಾಗುವಂತೆ ಭಗವಂತನಲ್ಲಿ ಅರಿಕೆ ಮಾಡಿ ಪಡೆಯುವುದು ನವರತ್ನಗಳನ್ನು ಕೊಟ್ಟು ತರಕಾರಿಯನ್ನು ಕೊಂಡಂತೆಂದು ದಾಸರು ಈ ಸುಳಾದಿಯಲ್ಲಿ ಸ್ಪಷ್ಟ ಪಡಿಸಿದ್ದಾರೆ.

೪೩

ವಿಜಯದಾಸರು ತಮ್ಮ ಧರ್ಮ ಪತ್ನಿಯಾದ ಅರಳಮ್ಮನವರಿಗೆ ಜ್ವರ ಬಂದ ಸಂದರ್ಭದಲಿ ಅದರ ಪರಿಹಾರಾರ್ಥವಾಗಿ ಈ ಸುಳಾದಿಯನ್ನು ರಚಿಸಿದರೆಂದು ಐತಿಹ್ಯವಿದೆ. ಉಡುಪಿಯಲ್ಲಿ ದಾಸರಿಗೆ ಭಗವಂತನಿಂದ ಇವರು ಪ್ರಾರ್ಥಿಸಿದಂತೆ ನಡೆದು ಕೊಳ್ಳುವುದಾಗಿ ಆಶ್ವಾಸನೆ ಕೊಟ್ಟಿದ್ದರೆಂಬುದನ್ನು ಈ ಸುಳಾದಿಯಲ್ಲಿ ಸೂಚಿಸಲಾಗಿದೆ.

ಅಪಗಾಯಾತ್ರಿಗೆ ಈರ್ವರನ ಕರೆದೂಯ್ದು : ಕಾಶಿಯ ಯಾತ್ರೆಗೆ ವಿಜಯ ದಾಸರು ಪತ್ನಿಯೊಡನೆ ಪೂರೈಸುವ ಅವಕಾಶವನ್ನು ಭಗವಂತ ಕರುಣಿಸಬೇಕೆಂಬ ಬೇಡಿಕೆಯನ್ನ ದಾಸರು ಭಗವಂತನಲ್ಲಿ ಕೇಳಿಕೊಂಡಿದ್ದಾರೆ.

೪೪

ನೈಚ್ಯಾಮಸಂಧಾನ ಭಕ್ತಿಯ ಒಂದು ಬಗೆ ಎನ್ನಬಹುದು. ಭಕ್ತನು ತನಗೆ ಭಕ್ತಿಯು ಲವಲೇಶವೂ ಇಲ್ಲವೆಂದು ಹೇಳಿಕೊಳ್ಳುವುದರಲ್ಲಿ ಭಕ್ತಿಯ ಅತಿಶಯತೆಯನ್ನು ಗುರುತಿಸಲು ಅವಕಾಶವಿದೆ. ಇದರೊಡನೆ ಲೋಕದಲ್ಲಿ ಭಗವದ್ ಭಕ್ತಿಯನ್ನು ಹೊಂದಿದವರು ಅಹಂಕಾರದಿಂದ ವರ್ತಿಸುವ ರೀತಿಯ ಬಗ್ಗೆ ದಾಸರು ಬೊಟ್ಟು ಮಾಡಿ ಟೀಕಿಸಿರುವುದನ್ನು ಈ ಸುಳಾದಿಯಲ್ಲಿ ಗುರುತಿಸಬಹುದಾಗಿದೆ.

೪೫

ಈ ಸುಳಾದಿಯಲ್ಲಿಯೂ ದಾಸರ ನೈಚ್ಯನುಸಂಧಾನ ಮುಂದುವರಿದಿದೆ. ಮಾನವರ ಪ್ರಯತ್ನವೆಲ್ಲ ವ್ಯರ್ಥವೆಂಬುದರ ಕಡೆಗೆ ಸುಳಾದಿಯ ತುಯ್ತವಿದೆ. ಬದುಕೆಲ್ಲವೂ ಕೇವಲ ಹೊಟ್ಟೆ ಹೊರೆಯುವುದರಲ್ಲಿಯೇ ಕೊನೆಗಾಣುತ್ತಿದೆ ಎಂದು ದಾಸರು ಬೇಸರಿಸಿಕೊಂಡಿದ್ದಾರೆ.

೪೬

ನೈಚ್ಯಾನುಸಂಧಾನದಿಂದ ಆರಂಭಗೊಳ್ಳುವ ಈ ಸುಳಾದಿಯಲ್ಲಿ ಭಕ್ತಿಯ ಬೇಡಿಕೆಯನ್ನು ದಾಸರು ಮಂಡಿಸಿದ್ದಾರೆ. ಭಗವಂತನ ಸೇವೆ ಮಾಡದಿದ್ದರೆ ದೇಹೇಂದ್ರಿಯಗಳನ್ನ ಪಡೆದದ್ದು ನಿರರ್ಥಕವೆಂದಿದ್ದಾರೆ. ದಾಸರ ಸರ್ವಾರ್ಪಣ ಮನೋಭಾವ ಇಲ್ಲಿ ಮೇಲುಗೈಯನ್ನು ಪಡೆದಿದೆ.

ಕುಬುಜಿ ಡೊಂಕನು ತಿದ್ದಿ : ಕುಬುಜೆಯು ಯಾದವ ವಂಶದ ಅರಸನಾದ ಕಂಸನ ದಾಸಿಯಾಗಿದ್ದಳು ಪ್ರತಿನಿತ್ಯ ಶ್ರೀಗಂಧವನ್ನ ಕಂಸನಿಗೆ ಕೊಡುವುದು ಇವಳ ಕೆಲಸವಾಗಿತ್ತು. ಬಲರಾಮ ಕೃಷ್ಣರು ಕಂಸನ ಆಹ್ವಾನದಂತೆ ಮಧುರೆಗೆ

ಬರುತ್ತಿರುವಾಗ ಕೃಷ್ಣನು ಕುಬುಜೆಯ ಬಳಿ ಇದ್ದ ಶ್ರೀಗಂಧವೆಲ್ಲವನ್ನು ತಾನೇ ಪಡೆದು ಈಕೆಯ ಗೂನು ಬೆನ್ನನ್ನು ನೇರ ಮಾಡಿದನಲ್ಲದೆ ಈಕೆ ಅತ್ಯಂತ ಸುಂದರಿಯಾಗುವಂತೆ ಮಾಡಿದನು.

ವೃಕೋದರನೊಡೆಯಾ : ವೃಕೋದರ ಎಂದರೆ ಭೀಮ ಎಂದರ್ಥ ವೃಕೋದರನೊಡೆಯ ಎಂದರೆ ಕೃಷ್ಣ. ವೃಕ ಎಂದರೆ ಹೆಬ್ಬೆಟ್ಟು ಎಂದು ಅರ್ಥ. ಭೀಮಸೇನನ ಜಠರಾಗ್ನಿಯು ಹೆಬ್ಬೆಟ್ಟಿನ ಗಾತ್ರದಷ್ಟಿದ್ದುದರಿಂದ ಅವನು ಯಥೇಚ್ಛವಾಗಿ ತಿಂದು ಅರಗಿಸಿಕೊಳ್ಳುವ ಶಕ್ತಿಯನ್ನು ಪಡೆದಿದ್ದನಂತೆ. ಸಾಮಾನ್ಯ ಮನುಷ್ಯನ ಜಠರದಲ್ಲಿ ಜಠರಾಗ್ನಿಯು ಕೇವಲ ಒಂದು ಬಿಂದುವಿನಷ್ಟಿರುವುದೆನ್ನುತ್ತಾರೆ.

೪೭

ದುಸ್ಸಂಗವನ್ನು ಬಿಡಿಸಿ ಪಾಪದೂರನನ್ನಾಗಿ ಮಾಡಬೇಕೆಂದು ಅನನ್ಯವಾಗಿ ಪ್ರಾರ್ಥಿಸುವುದನ್ನು ಈ ಸುಳಾದಿಯಲ್ಲಿ ಕಾಣಬಹುದಾಗಿದೆ. ಜನ್ಮ ಜನ್ಮಾಂತರಗಳನ್ನು ಅನಂತ ಸಂಖ್ಯೆಯಲ್ಲಿ ಪಡೆದು ನಾನಾ ಬಗೆಯ ಯಮ ಯಾತನೆಗಳನ್ನು ಅನುಭವಿಸಿ ಸಾಕಾಗಿದೆ ಎಂದೂ, ಮೋಕ್ಷವನ್ನ ಕರುಣಿಸಬೇಕೆಂದೂ, ದಾಸರು ಬೇಡಿದ್ದಾರೆ.

೪೮

ವಿಜಯದಾಸರ ಭಕ್ತಿಯ ಛಲ ಇಲ್ಲಿ ಪ್ರಕಟವಾಗಿದೆ. ಅನವರತ ಭಗವಂತನನ್ನೊಲಿಸಿಕೊಳ್ಳಲು ನಾನಾ ಬಗೆಯ ಪ್ರಯತ್ನಗಳನ್ನು ಮಾಡಿದರೂ ಭಗವಂತನ ದರ್ಶನ ದೊರಕದಿದ್ದರೆ ಹತಾಶರಾಗಿ ಕೈಕಟ್ಟಿ ಕುಳಿತುಕೊಳ್ಳದೆ ಪ್ರಯತ್ನವನ್ನು ಗುರಿ ಮುಟ್ಟುವ ತನಕ ಮುಂದುವರಿಸುವುದಾಗಿ ಇಲ್ಲಿ ಹೇಳಿದ್ದಾರೆ.

ಕಣ್ಣುಬಿಚ್ಚಲು ಬಿಡೆ : ಮತ್ಸ್ಯಾವತಾರದ ಸೂಚನೆ. ಮೀನಿಗೆ ರೆಪ್ಪೆಯೇ ಇಲ್ಲದಿರುವುದನ್ನು ದಾಸರು ಗುರುತಿಸಿದ್ದಾರೆ.

ಕಲ್ಲಡಿಯಾ ಸೇರಿ ಮಣ್ಣುಕಚ್ಚಲು : ಕೂರ್ಮಾವತಾರದ ಸೂಚನೆ ಇಲ್ಲಿದೆ.

ಅಲಗು ಕರದಿ ಪಿಡಿದು ಎನ್ನನಂಜಿಸಿದರೆ : ಪರಶುರಾಮನು ಖಡ್ಗಧಾರಿಯಾಗಿದ್ದುದರ ಸೂಚನೆ ಇಲ್ಲಿದೆ.

ಷೋಡಶಾತ್ಮಕವಾದ ಲಿಂಗದೇಹ : ಜೀವನ ಸ್ವರೂಪ ದೇಹದ ಮೇಲಿರುವ ಲಿಂಗದೇಹವು ಷೋಡಶ ಕಲಾತ್ಮಕವಾದದು. ಷೋಡಶ ಎಂದರೆ ಹದಿನಾರು; ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಪಂಚಭೂತಗಳು. ಐದು ಮತ್ತು ಮನಸ್ಸು ಸೇರಿ ಹದಿನಾರಾಗುತ್ತದೆ.

೪೯

ಒಮ್ಮೆ ತಾವು ಮಹಾಪಾಪಿ : ಭಗವಂತನ ದರ್ಶನವಾಗಲಿಲ್ಲವೆಂದು ಮನಸ್ಸು ದುಃಖಿಸಿದರೆ ಮತ್ತೊಮ್ಮೆ ಯಾವಾಗಲೂ ಭಗವದಾರಾಧನೆ ಮಾಡುತ್ತಿರುವ ತಾವು ಧನ್ಯರೆಂಬ ಭರವಸೆ ದಾಸರಿಗುಂಟಾಗುತ್ತಿತ್ತು. ಈ ಆತ್ಮವಿಶ್ವಾಸದ ಪ್ರಕಟನೆಯೊಡನೆ ಸುಖ ದುಃಖಗಳು ಬದುಕಿನಲ್ಲಿ ಎಷ್ಟೇ ಪ್ರಮಾಣದಲ್ಲುಂಟಾದರೂ ಅದನ್ನು ನಗುನಗುತ್ತಾ ಸ್ವೀಕರಿಸುವ ಛಲದ ಪ್ರಕಟನೆ ಇಲ್ಲಿದೆ.

೫೦

ಮಾನವನಿಗೆ ದೇಹವನ್ನು ಭಗವಂತನು ಕೊಟ್ಟಿರುವುದೇ ಆಧ್ಯಾತ್ಮಿಕ ಸಾಧನೆ ಮಾಡಿಕೊಳ್ಳಲೆಂದು. ಈ ಧ್ಯೇಯದಿಂದ ವಿಚಲಿತನಾದವನು ಒಂದು ದಿನ ಮಾಡಬೇಕಾದ ಸತ್ಕರ್ಮಗಳನ್ನು ಮಾಡದೆ, ಮಾಡಬಾರದ ದುಷ್ಕರ್ಮಗಳನ್ನು ಮಾಡಿದರೆ ದಿನವೊಂದಕ್ಕೆ ಹತ್ತುಸಾವಿರ ಕ್ರಿಮಿಕೀಟಾದಿ ಜನ್ಮಗಳನ್ನು ಪಡೆಯುವಂತಾಗುವುದೆಂದು ಶಾಸ್ತ್ರ ಹೇಳುತ್ತಿರುವುದನ್ನು ದಾಸರು ಜ್ಞಾಪಿಸಿಕೊಂಡು ಭಗವಂತನೊಲುಮೆಯಿಲ್ಲದೆ ಮಾಡಿದ ಯಾವ ಕರ್ಮಗಳು ಫಲಪ್ರದ ವಾಗದೆಂದಿದ್ದಾರೆ.

೫೧

ಪ್ರಪತ್ತಿ ಮಾರ್ಗದಲ್ಲಿ ಕ್ರಮಿಸುವುದೇ ಆಧ್ಯಾತ್ಮಿಕ ಸಾಧನೆಗೆ ಸುಲಭ ಮಾರ್ಗವೆಂಬ ಪ್ರತಿಪಾದನೆ ಇಲ್ಲಿದೆ. ಬದುಕಿನಲ್ಲಿ ಉಂಟಾಗುವ ಲೌಕಿಕ ಆಧ್ಯಾತ್ಮಿಕ ಅನುಭವಗಳೆಲ್ಲವೂ ಭಗವಂತನ ಸಂಕಲ್ಪದಂತೆಯೇ ನಡೆಯುವುದೆಂಬ ದೃಢ ನಿರ್ಧಾರವನ್ನು ಮನಸ್ಸಿನಲ್ಲಿ ನಾಟಿಸಿಕೊಂಡು ಬುದ್ಧಿ ಪೂರ್ವಕವಾಗಿ ಉತ್ತಮ ಕಾರ್ಯಗಳನ್ನು ಮಾಡಲು ಯತ್ನಿಸುವುದಷ್ಟೇ ಮಾನವನ ಕರ್ತವ್ಯವೆಂಬುದನ್ನ ದಾಸರು ಇಲ್ಲಿ ವಿವರಿಸಿದ್ದಾರೆ.

ಸಿರಿಗಗೋಚರನೆ : ಸಿರಿ ಎಂದರೆ ಲಕ್ಷ್ಮಿ, ಸಿರಿಗೆ, ಅಗೋಚರನೆ ಎಂಬ ಮಾತು ಸಾಮಾನ್ಯ ತಿಳುವಳಿಕೆಗೆ ವಿರೋಧವಾಗುತ್ತದೆ. ಏಕೆಂದರೆ ಲಕ್ಷ್ಮಿ ಹಾಗು ವಿಷ್ಣುವು ಯಾವ ಸಂದರ್ಭದಲ್ಲಿಯೂ ಬೇರೆ ಬೇರೆಯಾಗಲಾರರು. ಆದ್ದರಿಂದ ಲಕ್ಷ್ಮಿಗೆ ನಿತ್ಯಾವಿಯೋಗಿನಿ ಎಂದೇ ಹೆಸರು. ಆದರೆ ವಿಷ್ಣುವಿನ ಗುಣಸಾಗರವನ್ನು

ಆಕೆಯೂ ಸಂಪೂರ್ಣವಾಗಿ ತಿಳಿಯಲಾರಳಾದುದರಿಂದ ವಿಷ್ಣುವನ್ನು ಸಿರಿಗಗೋಚರ – ಲಕ್ಷ್ಮಿ ಪೂರ್ಣವಾಗಿ ಗುಣಗ್ರಹಿಸಲಾರದಷ್ಟು ಅನಂತ ಗುಣ ಪರಿಪೂರ್ಣನೆಂದು ಹೇಳಲಾಗಿದೆ.

೫೨

ಆಸೆಯನ್ನು ಜಯಿಸುವುದು ಸುಲಭವಲ್ಲ. ಒಬ್ಬ ವ್ಯಕ್ತಿ ನಡೆಸುವ ಪೂಜೆ, ಆಡುವ ಮಾತು, ಮಾಡುವ ದಾನ ಧರ್ಮಾದಿಗಳಿಂದ ಅವರ ಮನಸ್ಸು, ಎಲ್ಲ ಸಂದರ್ಭಗಳಲ್ಲಿ ಶುಚಿಯಾಗಿಯೇ ಇರುವುದೆಂದು ಭಾವಿಸಲಾಗದು. ಮನಸ್ಸು ಯಾರಿಗೂ ಕಾಣದೆ ಇರುವುದರಿಂದ ಅವರವರ ಮನಸ್ಸಿನ ಸ್ವರೂಪ ಅವರಿಗೇ ತಿಳಿಯುವುದೆಂದು ದಾಸರು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ಶುದ್ಧಮತಿಗಾಗಿ ದಾಸರು ಭಗವಂತನನ್ನು ಪ್ರಾರ್ಥಿಸಿದ್ದಾರೆ.

೫೩

ದಾಸತ್ವವನ್ನು ಪಡೆದಿರುವುದೇ ಪರಮ ಲಾಭವೆಂಬ ತೃಪ್ತಿಯನ್ನು ವಿಜಯದಾಸರು ಈ ಸುಳಾದಿಯಲ್ಲಿ ವ್ಯಕ್ತ ಪಡಿಸಿದ್ದಾರೆ.

೫೪

ಸ್ವತಂತ್ರನಾದವನು ಭಗವಂತ ; ಜೀವರಿಗೆ ಸ್ವಾತಂತ್ರ್ಯ ಲವಲೇಶವೂ ಇಲ್ಲ. ಬದುಕಿನಲ್ಲಿ ಬರುವ ಸುಖ ದುಃಖಗಳೆಲ್ಲ ಭಗವಂತನ ಇಚ್ಛೆಯನ್ನವಲಂಬಿಸಿದೆ ಎಂಬ ತತ್ವ ನಿರೂಪಣೆ ಈ ಸುಳಾದಿಯಲ್ಲಿದೆ.

೫೫

ಭಗವಂತನ ಕೃಪೆಗೆ ಪಾತ್ರರಾದವರು ಬದುಕಿನಲ್ಲಿ ಎಲ್ಲ ಬಗೆಯ ಸುಖಗಳನ್ನು ನಿರಾತಂಕವಾಗಿ ಅನುಭವಿಸುವಂತಾಗುವುದೆಂದೂ ಆದ್ದರಿಂದ ಭಗವದಾರಾಧನೆಯನ್ನು ಎಲ್ಲರೂ ಮಾಡಬೇಕೆಂಬುದನ್ನು ದಾಸರು ಈ ಸುಳಾದಿಯಲ್ಲಿ ಒತ್ತಿ ಹೇಳಿದ್ದಾರೆ.

೫೬

ಈ ಮಾನವದೇಹ ಸಾರ್ಥಕವಾಯಿತೆನಿಸಿ ಕೊಳ್ಳಬೇಕಾದರೆ ಭಗವಂತನ ಬಿಂಬಾಪರೋಕ್ಷವಾಗಲೇಬೇಕೆಂಬುದನ್ನು ದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ. ಇದಕ್ಕಾಗಿ ಕರಗಳನ್ನು ಜೋಡಿಸಿ ಭಗವದಾರಾಧನೆಯನ್ನು ಅನವರತವೂ ಮಾಡುವುದಾಗಿ ಹೇಳಿದ್ದಾರೆ.

೫೭

ಮನುಷ್ಯನನ್ನು ಆಹಾರದಿಂದ ತೃಪ್ತಿ ಪಡಿಸಬಹುದೇ ವಿನಾ ಐಶ್ವರ್ಯದಿಂದ ತೃಪ್ತಿ ಪಡಿಸಲು ಸಾಧ್ಯವಾಗದು. ಹಣವನ್ನು ಹೇಗಾದರೂ ಮಾಡಿ ಅತ್ಯಧಿಕವಾಗಿ ಸಂಪಾದಿಸುವ ದೃಷ್ಟಿಯನ್ನಿಟ್ಟುಕೊಳ್ಳುವುದರ ಜತೆಗೆ ಅನ್ಯರ ಹಣವನ್ನು ಲಪಟಾಯಿಸುವ ಬುದ್ಧಿಯನ್ನು ಮನುಷ್ಯ ಬೆಳೆಸಿಕೊಳ್ಳುತ್ತಾನೆ, ತಾನೇ ಉತ್ತಮನೆಂಬ ಅಹಂಕಾರವನ್ನು ಹೊಂದಿ ಪರರ ಮನ ನೋಯುವಂತೆ ವರ್ತಿಸುವನೆಂದು ದಾಸರು ಈ ಸುಳಾದಿಯಲ್ಲಿ ವಿವರಿಸಿ ಅಂತಹ ಬುದ್ಧಿಯನ್ನು ತಮಗೆ ಕೊಡಬಾರದೆಂದು ಕೇಳಿಕೊಂಡಿದ್ದಾರೆ.

೫೮

ಆಸೆಯನ್ನು ನಿಯಂತ್ರಿಸಿಕೊಳ್ಳುವ ಶಕ್ತಿಯನ್ನು ದಯಪಾಲಿಸಬೇಕೆಂಬ ಪ್ರಾರ್ಥನೆಯನ್ನು ಈ ಸುಳಾದಿಯಲ್ಲಿ ಮುಂದುವರಿಸಲಾಗಿ ಭಕ್ತಿಯನ್ನು ಬೆಳಸಿಕೊಂಡವರು ತಮ್ಮ ಸಾಧನೆಗೆ ಮೀರಿದ ಸಾಧನೆ ಮಾಡಿರುವುದಾಗಿ ಜಂಭ ಹೊಡೆಯುವ ಪರಿಯನ್ನು ಈ ಸುಳಾದಿಯಲ್ಲಿ ವಿವರಿಸಿದ್ದಾರೆ.

ವೃತ್ರಾರಿ : ವೃತ್ತಾಸುರನ ವೈರಿಯೆನಿಸಿಕೊಂಡವನು ಇಂದ್ರ. ಮೃತ್ರಾಸುರನು ಇಂದ್ರನೊಡನೆ ಯುದ್ಧ ಮಾಡಿ ಪ್ರಾಣ ಬಿಟ್ಟನು.

೫೯

ಮನುಷ್ಯನು ತಾನು ಸುಖವಾಗಿರುವುದರೊಡನೆ ತನ್ನ ಮಡದಿ ಮಕ್ಕಳನ್ನು ಸುಖವಾಗಿಡುವುದಕ್ಕೆ ಐಶ್ವರ್ಯವನ್ನು ಹೇಗಾದರೂ ಮಾಡಿ ಸಂಪಾದಿಸಬೇಕೆಂದು ನಾನಾ ಬಗೆಯ ಅನ್ಯಾಯಗಳನ್ನು ಮಾಡುತ್ತಾನೆ. ಈ ಬಗೆಯ ಬುದ್ಧಿಯನ್ನು ಕೊಡಬಾರದೆಂದು ದಾಸರು ಈ ಸುಳಾದಿಯಲ್ಲಿ ಬೇಡಿದ್ದಾರೆ.

೬೦

ಯಾವ ಬಗೆಯಾದ ಪೂಜೆಯನ್ನು ಮಾಡಬೇಕೆಂಬ ಜಿಜ್ಞಾಸೆಯನ್ನು ದಾಸರು ಈ ಸುಳಾದಿಯಲ್ಲಿ ನಡೆಸಿ ಭೀಷ್ಮ, ಧ್ರುವ, ಪ್ರಹ್ಲಾದ ಮೊದಲಾದವರ ಭಕ್ತಿಯನ್ನು ಉದಾಹರಿಸಿ ಆ ಬಗೆಯ ಭಕ್ತಿಯನ್ನು ತಮಗೆ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಪೂಜಿಸಲು ಉಪಯೋಗಿಸುವ ಹೂವು, ನೀರು, ತುಳಸಿ, ಆಹಾರ ಪದಾರ್ಥಗಳನ್ನು ಶುದ್ಧವಾಗಿಡುವುದರಲ್ಲಾಗುವ ವೈಫಲ್ಯವನ್ನು ದಾಸರು ಚಿಂತನೆಗೊಳ ಪಡಿಸಿದ್ದಾರೆ.

೬೧

ಎಲ್ಲ ಅನರ್ಥಗಳಿಗೂ ಮಾನವನ ಅಹಾಕಾರವೇ ಕಾರಣವೆಂಬುದು ದಾಸರ ನಿಲುವಾಗಿದೆ. ಅಹಂಕಾರವೆಂಬ ಬೇರನ್ನು ಕೊಯ್ದರೆ ಇತರ ಅರಿಷಡ್ವರ್ಗಗಳೆಂಬ ವೃಕ್ಷವು ತಾನಾಗಿಯೇ ಒಣಗಿ ಹೋಗುವುದೆಂದು ದಾಸರು ಹೇಳಿದ್ದಾರೆ.

೬೨

ಶ್ರೀಹರಿಯು ಕೃಪಾಕಟಾಕ್ಷವನ್ನು ಬೀರಿ ಕಾಪಾಡಬೇಕೆಂದು ಅನನ್ಯವಾಗಿ ದಾಸರು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

೬೩

ಚಿತ್ತ ಚಾಂಚಲ್ಯವನ್ನು ದೂರಮಾಡಿ ನಂಬಿದ ಭಕ್ತನನ್ನು ಕಾಪಾಡ ಬೇಕೆಂಬ ಪ್ರಾರ್ಥನೆ ಈ ಸುಳಾದಿಯಲ್ಲಿದೆ. ಜೊತೆಗೆ ತಮ್ಮ ಕರ್ಮ ಬಂಧನವೆಲ್ಲ ಕಳಚಿಹೋದ ನಿಮಿತ್ತ ವಿಜಯವಿಠಲನ ದರ್ಶನವಾಯಿತೆಂದು ತೃಪ್ತ ಭಾವವನ್ನ ವ್ಯಕ್ತಪಡಿಸಿದ್ದಾರೆ.

೬೪

ನಾನಾ ಬಗೆಯ ಪಶು, ಕ್ರಿಮಿ, ಕೀಟಾದಿಗಳ ಜನ್ಮಗಳನ್ನು ಹಿಂದೆ ಪಡೆದು ನಾನಾ ಬಗೆಯ ಯಾತನೆಗಳನ್ನನುಭವಿಸಿ ಮಾನವ ಜನ್ಮವನ್ನು ಪಡೆಯುವ ಅವಕಾಶವನ್ನು ಈಗ ಪಡೆದರೂ ಜ್ಞಾನಾನುಸಂಧಾನ ಹೊಂದಲಾಗಲಿಲ್ಲವೆಂಬ ವ್ಯಥೆಯನ್ನು ಈ ಸುಳಾದಿಯಲ್ಲಿ ವ್ಯಕ್ತ ಪಡಿಸಲಾಗಿದೆ.

೬೫

ಭವವನ್ನು ಬಂಧನ ವೆಂದು ಹರಿದಾಸರು ಯಾವಾಗ ಭಾವಿಸುವರೆಂದರೆ, ಯಾವಾಗ ಅವರಿಗೆ ಭಗವಂತನ ಸೇವೆಗೆ ಅಡ್ಡಿಯಾಗುವುದೊ ಆವಾಗ ಮಾತ್ರ. ಆಸೆ ಮತ್ತು ವೈರಾಗ್ಯಗಳ ನಡುವೆ ಮನಸ್ಸಿನಲ್ಲಿ ದೊಡ್ಡ ಹೋರಾಟವೇ ನಡೆಯುವುದೆಂದು ದಾಸರು ಈ ಸುಳಾದಿಯಲ್ಲಿ ವಿವರಿಸಿ ದಾಸರವೇಷ ಕೇವಲ ನಾಟಕವಾಗುತ್ತಿದೆ ಎಂಬ ಭಾವನೆಯನ್ನು ದಾಸರು ವ್ಯಕ್ತಪಡಿಸಿದ್ದಾರೆ.

೬೬

ಭಗವಂತನಿಗೆ ಅಭಿಷೇಕ, ಅರ್ಚನೆ, ಗಂಧ ಸಮರ್ಪಣೆ ಇತ್ಯಾದಿ ಕಾರ್ಯಗಳನ್ನು ಮಾಡಿ ಮೆಚ್ಚಿಸಲು ಹೋದರೆ ಆ ಎಲ್ಲ ವಸ್ತುಗಳೂ ಅತ್ಯುತ್ಕೃಷ್ಟ ದರ್ಜೆಯದನ್ನು ಭಗವಂತನು ಮೊದಲಿನಿಂದಲೇ ಹೊಂದಿರುವನೆಂದೂ ದಾಸರು ತರ್ಕಮಾಡಿ ತಮ್ಮ ಪೂಜೆ ಕೇವಲ ಔಪಚಾರಿಕವೆಂದು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ದೇಹ ದಂಡನೆಯಿಂದ ಭಗವಂತನೊಲುಮೆ ಸಾಧ್ಯವಿಲ್ಲವೆಂದೂ, ಭಕ್ತಿಯೇ ಇದಕ್ಕೆ ಮಾರ್ಗವೆಂದು ದಾಸರು ತಿಳಿಸಿರುವರು.

೬೭

ಭಗವಂತನ ಸ್ತೋತ್ರವನ್ನು ಸಾವಿರಾರು ಬಾರಿ ಮಾಡಿ ಬಳಲಿದರೂ ಭಗವಂತನ ಕರುಣೆಯಾಗಲಿಲ್ಲವೆಂಬ ದುಃಖದಿಂದ ರಚನೆಯಾಗಿರುವ ಸುಳಾದಿ ಇದು. ಕೃಷ್ಣನ ಲೀಲಾ ವಿನೋದಗಳನ್ನ ಚಿತ್ರಿಸಿ ಭಕ್ತರನ್ನು ಬಳಲಿಸದೆ ಉದ್ಧರಿಸಬೇಕೆಂದು ವಿಜಯದಾಸರು ಪ್ರಾರ್ಥಿಸಿದ್ದಾರೆ.

೬೮

ಭಗವಂತನನ್ನು ತಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಬೇಕೆಂದು ಅನನ್ಯವಾಗಿ ಪ್ರಾರ್ಥಿಸಿರುವುದು ಈ ಸುಳಾದಿಯಲ್ಲಿ ಇರುವುದನ್ನು ಗುರುತಿಸಬಹುದಾಗಿದೆ.

ಚಂದ್ರಾಯಣ : ಚಂದ್ರನ ವೃದ್ಧಿ ಮತ್ತು ಕ್ಷಯಗಳಿಗನುಸಾರವಾಗಿ ಆಹಾರಗಳನ್ನು ಸ್ವೀಕರಿಸುವ ಒಂದು ವ್ರತ.

೬೯

ಆಗಬೇಕಾದ ಕಾರ್ಯ ಆಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆಯನ್ನು ಹಾಕುವುದು ಲೋಕದಲ್ಲಿ ಸಾಮಾನ್ಯ ಸಂಗತಿಯಾಗಿದೆ. ಇದನ್ನು ಎಷ್ಟೋ ವೇಳೆ ಭಕ್ತರೂ ಅನುಸರಿಸುವುದುಂಟು. ಭಗವಂತನ ದರ್ಶನವಾಗದಿದ್ದರೆ ಪ್ರಾಣ ಬಿಡುವ ಬೆದರಿಕೆಯನ್ನ ದಾಸರು ವ್ಯಕ್ತಪಡಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಮುಚುಕುಂದ : ಮುಚುಕುಂದನು ತಪಸ್ಸು ಮಾಡಿ ತನಗೆ ದೀರ್ಘಕಾಲ ನಿದ್ರೆ ಮಾಡುವ ಬಯಕೆ ಉಂಟೆಂದ. ತಾನು ಮಲಗಿರುವಾಗ ಯಾರೇ ಎಬ್ಬಿಸಿದರೂ

ಅವರನ್ನ ತಾನು ನೋಡಿದಾಕ್ಷಣ ಸುಟ್ಟು ಹೋಗುವಂತಾಗಬೇಕೆಂದು ವರವನ್ನು ಪಡೆದು ಗುಹೆಯೊಂದರಲ್ಲಿ ಮಲಗಿದ್ದನು. ಕಾಲಯವ ಎಂಬ ದೈತ್ಯನು ಕೃಷ್ಣನನ್ನು ಸಂಹಾರ ಮಾಡಲೆಂದು ಬಂದಾಗ ಕೃಷ್ಣನು ಮುಚುಕುಂದನು ಮಲಗಿದ್ದ ಗುಹೆಗೆ ಓಡಿ ಬಂದು ತಾನು ಹೊದೆದ ವಸ್ತ್ರವನ್ನು ಮುಚುಕುಂದನಿಗೆ ಹೊದಿಸಿದನು. ಕಾಲಯವನು ಮುಚುಕುಂದನನ್ನೇ ಕೃಷ್ಣನೆಂದು ತಿಳಿದು ಒದ್ದಾಗ ಮುಚುಕುಂದ ಕಣ್ಣು ಬಿಡುವನು. ಆಗ ಕಾಲಯವ ಸುಟ್ಟು ಹೋದನು.

೭೦

ಭಕ್ತರಿಗೂ ಭಗವಂತನಿಗೂ ಇರುವ ಸಂಬಂಧದ ಕೊಂಡಿಯು ಭಗವಂತನ ಕಾರುಣ್ಯ ಗುಣದಲ್ಲಿ ಗುರುತಿಸಬಹುದಾಗಿದೆ. ಭೃಗುಮುನಿಯು ಮಾಡಿದ ಅಪರಾಧವನ್ನು, ಅದನ್ನು ಶ್ರೀ ಹರಿಯು ಕ್ಷಮಿಸಿದ ಬಗೆಯನ್ನು, ದಾಸರು ಸೂಚಿಸಿ ಅಹಂಕಾರದಿಂದ ಭಕ್ತರು ವರ್ತಿಸಿದರು ಭಗವಂತನು ಭಕ್ತನ ಭಕ್ತಿಗೆ ಬೆಲೆಕೊಟ್ಟು ಅವನನ್ನು ಕ್ಷಮಿಸುವನೆಂದು ಹೇಳಿದ್ದಾರೆ.

ಭೃಗುಮುನಿ ಬಂದು ನೋವುಮಾಡಲು ಮೆಚ್ಚಿ ಅರ್ಚಿಸಿದೆ: ಒಮ್ಮೆ ದೇವತೆಗಳಲ್ಲಿ ಸರ್ವ ಶ್ರೇಷ್ಠನಾದ ದೇವರು ಯಾರೆಂಬುದರ ಬಗ್ಗೆ ಚರ್ಚೆ ನಡೆಯಿತು. ಆಗ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾರು ಶ್ರೇಷ್ಠರೆಂಬುದನ್ನು ಪರೀಕ್ಷಿಸಿಕೊಂಡು ಬರುವ ಜವಾಬ್ದಾರಿಯನ್ನು ದೇವತೆಗಳು ಭೃಗು ಮಹರ್ಷಿಗೆ ವಹಿಸಿಕೊಟ್ಟರು. ಭೃಗುವು ವಿಷ್ಣು ಲೋಕಕ್ಕೆ ಬಂದು ಮಲಗಿದ್ದ ವಿಷ್ಣುವಿನ ಎದೆಗೆ ಕೋಪದಿಂದ ಕಾಲನ್ನು ತಾಗಿಸಲು ವಜ್ರಶರೀರಕ್ಕೆ ಭೃಗು ಒದ್ದ ನಿಮಿತ್ತ ಅವನ ಕಾಲಿಗೆ ನೋವಾಗಿಂಬೇಕೆಂದು ಭಾವಿಸಿ ವಿಷ್ಣುವು ಭೃಗು ಮಹರ್ಷಿಯ ಕಾಲನ್ನು ತೊಳೆದು ಉಪಚರಿಸಿದನಂತೆ.

೭೧

ವಿಜಯದಾಸರು ತಮ್ಮ ಎದುರು ಭಗವಂತನಿರುವನೆಂದೇ ಭಾವಿಸಿ ಅವನೊಡನೆ ನೇರವಾಗಿ ಮಾತನಾಡುತ್ತಿರುವ ಶೈಲಿಯಲ್ಲಿ ಅನೇಕ ಸುಳಾದಿಗಳನ್ನು ರಚಿಸಿರುವರು. ಅಂತಹ ಒಂದು ಸುಳಾದಿ ಇದು. ಜೀವನದಲ್ಲಿ ಎಂತಹ ಕಷ್ಟ – ಸುಖಗಳು ಬಂದರೂ ತಾವು ಭಗವಂತನಾದ ವಿಜಯವಿಠಲನ ಮುಂದೆ ಮಾತ್ರ ಅದರ ಬಗ್ಗೆ ಹೇಳಿಕೊಳ್ಳುವ ಛಲವನ್ನು ಈ ಸುಳಾದಿಯಲ್ಲಿ ವ್ಯಕ್ತಪಡಿಸಿದ್ದಾರೆ.

೭೨

ಭಗವಂತನ ದರ್ಶನಕ್ಕಾಗಿ ಹಲವು ವರ್ಷಗಳ ಕಾಲ ಸತತವಾಗಿ ಪೂಜಿಸಿದರೂ ಅವನ ದರ್ಶನ ದೊರಕದೆ ಹತಾಶ ಸ್ಥಿತಿಯನ್ನು ಮುಟ್ಟಿದಾಗ ದಾಸರು ಸ್ಟೈರಣೆ ಮೀರಿ ಭಗವಂತನು ಇತರರಿಗೊಲಿದುದನ್ನು ಪ್ರಶ್ನಿಸುತ್ತಾ ತಮಗೆ ಕೃಪೆದೋರಬೇಕೆಂದು ಪ್ರಾರ್ಥಿಸುವುದನ್ನು ಈ ಸುಳಾದಿಯಲ್ಲಿ ಕಾಣಬಹುದಾಗಿದೆ. ಪ್ರಹ್ಲಾದ, ನಾರದ, ರುಕುಮಾಂಗದ, ಭೀಷ್ಮ ಮೊದಲಾದವರ ಭಕ್ತಿಯ ಬಗೆಯ ಸೂಚನೆ ಇಲ್ಲಿದೆ.

೭೩

ಭಗವಂತನು ಭಕ್ತನಿಗೆ ಒಲಿಯುವನೊ? ಇಲ್ಲವೊ? ಎಂಬ ಭಯ ಎಲ್ಲ ಕಾಲಗಳಲ್ಲೂ ದಾಸರನ್ನು ಕಾಡುವುದೆಂದು ಈ ಸುಳಾದಿಯಲ್ಲಿ ತಿಳಿಸಿ ಹರಿದಾಸರು ಭಕ್ತಿಯಲ್ಲಿ ಬಲ್ಲಿದರೆಂದೂ ಅವರನ್ನು ಪರೀಕ್ಷಿಸಿದರೆ ಅವರು ಸೋಲುವುದಿಲ್ಲವೆಂದೂ ಹೇಳಿ ಪುರಾಣ ಪ್ರಸಿದ್ಧರಾದ ಭಕ್ತರ ದುಷ್ಟಾಂತಗಳನ್ನು ಕೊಟ್ಟು ಬಿಂಬಾಪರೋಕ್ಷವನ್ನು ಕರುಣಿಸಬೇಕೆಂದು ದಾಸರು ಬೇಡಿದ್ದಾರೆ.

೧. **ಹುಬ್ಬಿನ ನಡುವೆ ಪುಟ್ಟಿದ ಭಕ್ತರು ನಿನ್ನ ಗಬ್ಬಿ ನಾರಿಯ ರೂಪ ಬಯಿಸೀದರರೆದಕೊ** : ಬ್ರಹ್ಮನ ಹುಬ್ಬುಗಳ ನಡುವಿನ ಭಾಗದಿಂದ ಹುಟ್ಟಿದವನು ಶಿವ. ಶಿವನು ಭಸ್ಮಾಸುರನಿಗೆ ನೀನು ಯಾರ ತಲೆಯ ಮೇಲೆ ಕೈ ಇಡುವೆಯೋ ಅವರು ಉರಿದು ಭಸ್ಮವಾಗಲಿ ಎಂದು ವರವನ್ನು ಕೊಟ್ಟನು. ದುಷ್ಟನಾದ ಭಸ್ಮಾಸುರನು ವರದ ಸತ್ವವನ್ನು ಪರೀಕ್ಷಿಸಲು ಶಿವನ ತಲೆಯ ಮೇಲೆ ಕೈ ಇಡಲು ಪ್ರಯತ್ನಿಸಿದನು. ಆಗ ಶಿವನು ಹರಿಭಜನೆ ಮಾಡಿದಾಗ ಹರಿಯು, ಮೋಹಿನೀರೂಪದಿಂದ ಭಸ್ಮಾಸುರನಿಗೆ ಕಾಣಿಸಿ ಕೊಳ್ಳುವನು. ಆಗ ಭಸ್ಮಾಸುರನು ಶಿವನನ್ನು ಬಿಟ್ಟು ಮೋಹಿನಿಯನ್ನು ಒಲಿಸಿಕೊಳ್ಳಲು ಆಕೆಯನ್ನು ಹಿಂಬಾಲಿಸಿ ಆಕೆ ಹೇಳಿದಂತೆ ನೃತ್ಯಮಾಡಿ ಭಸ್ಮವಾದನು.

೨. **ಅಬ್ದಿಯೊಳಗೆ ಸುರರು ಕುದಿ ನಿನ್ನ ಕರೆದು ಅಬ್ಬರದಿಂದಲಿ ಬೆಟ್ಟ ಹೊರೆಸಿದರರದೆಕೊ** : ದೇವತೆಗಳು ಅಮೃತವನ್ನು ಪಡೆಯಲೆಂದು ಪರ್ವತವನ್ನು ಸಮುದ್ರದೊಳಗೆ ಹಾಕಿದಾಗ ಅದು ತೇಲಲಿಲ್ಲ. ಆಗ ವಿಷ್ಣುವನ್ನು ಪ್ರಾರ್ಥಿಸುವರು. ವಿಷ್ಣುವು ಕೂರ್ಮನಾಗಿ ಪರ್ವತದ ಕೆಳಗೆ ಇದ್ದು ಬೆಟ್ಟವನ್ನು ಕಡೆಯುವ ಹಾಗೆ ಸಹಾಯ ಮಾಡುವನು.

೩. ಶಬ್ದದ ಬಿಗಿವಿಲಿ ಹೆಣ್ಣಿಗೋಸುಗ ತಬ್ಬಿಬ್ಬಿ ಭೀಷ್ಮನು ಗೋಳಿಸಿದನದೆಕೊ : ಅಂಬೆಯನ್ನು ಭೀಷ್ಮ ಮದುವೆ ಮಾಡಿಕೊಳ್ಳಲಿಲ್ಲವೆಂದು ಆಕೆ ಪರುಶುರಾಮರಲ್ಲಿ ಹೋಗಿ ಚಾಡಿ ಹೇಳಿ ಭೀಷ್ಮನು ಪರುಶುರಾಮನೊಡನೆ ಇಪ್ಪತ್ತೆಂಟು ದಿನಗಳ ಕಾಲ ಯುದ್ಧ ಮಾಡುವಂತಾದ ಪ್ರಕರಣದ ಉಲ್ಲೇಖ ಇಲ್ಲಿದೆ.

೪. ಮಬ್ಬುಚರನು ಅಲ್ಪದಾನವನ್ನೇ ಇತ್ತು ಹೆಬ್ಬಾಗಿಲ ಮುಂದೆ ಇಟ್ಟನದಕೊ : ಮಬ್ಬುಚರ ಎಂದರೆ ರಾಕ್ಷಸ ಎಂದರ್ಥ. ದೈತ್ಯರ ವಂಶದಲ್ಲಿ ಹುಟ್ಟಿದ ಬಲಿ ಚಕ್ರವರ್ತಿಯಿಂದ ಭೂದಾನವನ್ನು ಪಡೆದ ವಾಮನನು ಬಲಿಯ ಅರಮನೆಯ ಬಾಗಿಲನ್ನಯ ಕಾಯುವ ಕೆಲಸವನ್ನು ಸ್ವೀಕರಿಸುತ್ತಾನೆ.

೭೪

ಮನುಷ್ಯ ತನ್ನ ಬಾಳಿನ ಬಹು ಸಮಯವನ್ನು ಊರವಾರ್ತೆಯ ಚರ್ಚೆಯಲ್ಲಿ ಕಳೆಯುವನು: ಇದರಂತೆ ಪಂಚೇಂದ್ರಿಯಗಳ ಚಪಲಗಳನ್ನು ತೀರಿಸಲು ಸಮಯವನ್ನು ಹಾಳು ಮಾಡಿಕೊಳ್ಳವನೇ ಲೋಕೋಪಕಾರಕ್ಕಾಗಲಿ, ತನ್ನ ಕರ್ತವ್ಯ ನಿರ್ವಹಣೆಗಾಗಲಿ, ಭಗವಂತನ ಆರಾಧನೆಗಾಗಲಿ ವಿನಿಯೋಗಿಸು ವುದಿಲ್ಲವೆಂಬುದನ್ನು ದಾಸರು ಈ ಸುಳಾದಿಯಲ್ಲಿ ಗುರುತಿಸಿ ಮಾನವನ ಬೇಕುಗಳಿಗೆ ಹೇಗೆ ಬ್ರೇಕಿಲ್ಲವೆಂಬುದನ್ನು ಈ ಸುಳಾದಿಯಲ್ಲಿ ಮನವರಿಕೆ ಮಾಡಿಕೊಟ್ಟಿರುವರು.

೭೫

ಕಾಲಮಾನಗಳಿಗೆ ತಕ್ಕಂತೆ ಭಗವದುಪಾಸನೆಯ ರೀತಿನೀತಿ ಗಳು ಬದಲಾಗಿರುವುದನ್ನು ದಾಸರು ಗುರುತಿಸಿ ಕೃತ, ತ್ರೇತಾ, ದ್ವಾಪರ ಯುಗಗಳಗಿಂತ ಕಲಿಯುಗದಲ್ಲಿ ಭಗವಂತನೊಲುಮೆಯನ್ನು ಸುಲಭವಾಗಿ ಗಳಿಸಿಕೊಳ್ಳಬಹುದೆಂಬುದನ್ನು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ಕಠಿಣವಾದ ತಪಸ್ಸನ್ನು ಹಲವು ದಶಕಗಳವರಗೆ ನಡೆಸುವುದಕ್ಕಿಂತ ಭಕ್ತಿ ಭಾವದಿಂದ ಕಲಿಯುಗದಲ್ಲಿ ಭಜನೆ ಮಾಡಿ ಬಿಂಬಾಪರೋಕ್ಷ ಪಡೆಯಬಹುದೆಂದು ದಾಸರು ಅಭಿಪ್ರಾಯವಾಗಿದೆ.

೭೬

ಭಕ್ತನನ್ನು ಸನ್ಮಾರ್ಗದಲ್ಲಿ ನಡೆಸಿ ಕಾಲಕಾಲಕ್ಕೆ ತಿದ್ದಿ ಅವನ ಭಕ್ತಿಯ ಉತ್ಕರ್ಷವನ್ನು ಗುರುತಿಸಿ ಸಂತೋಷಪಡುವುದು ಭಗವಂತನ ಕರ್ತವ್ಯವೇ ಆಗಿದೆ ಎಂದು ದಾಸರು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ದೇವರನ್ನು ತಾಯಿಗೆ ಹೋಲಿಸುವುದು ಅನುಭಾವ

ಸಾಹಿತ್ಯದಲ್ಲಿ ಒಂದು ಕ್ರಮವೇ ಆಗಿದೆ. ಹುಚ್ಚು ಹಿಡಿದ ಮಗನ ರಕ್ಷಣೆಯ ಜವಾಬ್ದಾರಿಯನ್ನು ತಾಯಿ ನಿರ್ವಹಿಸುವಂತೆ ದೋಷಯುಕ್ತನಾದ ಭಕ್ತನನ್ನು ಸಂರಕ್ಷಿಸುವುದು ಭಗವಂತನ ಕರ್ತವ್ಯವೆಂದು ದಾಸರು ಹೇಳಿದ್ದಾರೆ.

೭೭

ಹರಿದಾಸತ್ವ ಸಾಂದ್ರಗೊಳ್ಳಲಿಲ್ಲವೆಂಬ ದುಃಖವನ್ನು ದಾಸರು ಈ ಸುಳಾದಿಯಲ್ಲಿ ತೋಡಿಕೊಂಡಿದ್ದಾರೆ. ನಾಮ ನಿನ್ನದು, ಎಂಬ ಅಹಂಕಾರವನ್ನು ನೀಗಿಕೊಳ್ಳದ ತಮ್ಮ ಸ್ಥಿತಿಯ ಬಗ್ಗೆ ಪಶ್ಚಾತ್ತಾಪ ಪಟ್ಟಿರುವುದನ್ನ ಇಲ್ಲಿ ಗುರುತಿಸಬಹುದಾಗಿದೆ.

ಯಜ್ಞ : ಯಜ್ಞಕ್ಕೆ ಸಂಪೂರ್ಣ ಒಡೆಯನಾಗಿರುವವನು ಯಜ್ಞಗಳಿಂದ ಆರಾಧಿತನು ವಿಷ್ಣು.

೭೮

ಭಗವಂತನನ್ನು ಒಲಿಸಿಕೊಳ್ಳಲು ಉಪಾಯಗಳನ್ನು ದಾಸರು ಆಲೋಚಿಸಿರುವುದನ್ನು ಈ ಸುಳಾದಿಯಲ್ಲಿ ಗುರುತಿಸಬಹುದಾಗಿದೆ. ಪತಿತ ಪಾವನ ಎಂಬ ಹೆಸರನ್ನು ಭಗವಂತ ಪಡೆದ ಮೇಲೆ ಪತಿತರಾದ ತಮ್ಮನ್ನು ಕಾಪಾಡಲೇ ಬೇಕೆಂಬ ಆಗ್ರಹ ಇಲ್ಲಿದೆ.

ಭೂತಭಾವನ : ಚೇತನರನ್ನು, ಮುಕ್ತಾತ್ಮರನ್ನು ಯಾವಾಗಲೂ ರಕ್ಷಿಸುತ್ತಿರುವನು.

೭೯

ಭಗವಂತನ ದರ್ಶನವೆಂದರೆ ಕುಮುದ ಪುಷ್ಪಗಳು ಚಂದ್ರೋದಯದಿಂದ ಅರಳುವಂತೆಂದು ದಾಸರು ವಿವರಿಸಿ ಇಂತಹ ಸಂತೋಷವನ್ನು ಅನುಭವಿಸುವ ಯೋಗವನ್ನು ಪಡೆಯದೆ ಮತ್ತೆ ಮತ್ತೆ ಈ ಪ್ರಪಂಚದಲ್ಲಿ ಹುಟ್ಟುವ ಸಾಯುವ ಸ್ಥಿತಿ ತಪ್ಪುವಂತಾಗಬೇಕೆಂಬ ಬೇಡಿಕೆಯನ್ನು ದಾಸರು ಭಗವಂತನಲ್ಲಿ ಮಂಡಿಸಿದ್ದಾರೆ.

೮೦

ಹರಿದಾಸರು ಭಗವಂತನ ದರ್ಶನವಾಗಲಿಲ್ಲವೆಂಬ ದುಃಖದಿಂದ ಭಗವಂತನನ್ನು ನಿಂದಿಸಿದ ಪ್ರಸಂಗಗಳನ್ನು ಜ್ಞಾಪಿಸಿಕೊಂಡು ಪಶ್ಚಾತ್ತಾಪ ಪಟ್ಟು ಈ ಸುಳಾದಿಯನ್ನು ರಚಿಸಿರುವಂತಿದೆ. ಆಕಾಶದಿಂದ ಮಳೆ ಹೊಯ್ದಾದ ಇಡೀ ಭೂಮಂಡಲೇ ನೆನೆದು ತೃಪ್ತಿಯಾಗುವಂತೆ ಭಗವತ್ ಪ್ರಸಾದದಿಂದ ಜೀವರಾಶಿಗಳು ತೃಪ್ತಿಯಾಗುವುದೆಂದು ದಾಸರು ಹೇಳಿದ್ದಾರೆ.

೮೧

ಮಾನವನಾಗಿ ಹುಟ್ಟಿದ ಮೇಲೆ ಜನ್ಮ ಸಾರ್ಥಕವಾಗುವ ರೀತಿಯಲ್ಲಿ ಜೀವಿಸಲಾಗಲಿಲ್ಲ ವೆಂಬ ಕೊರಗು ದಾಸರನ್ನು ಕಾಡಿದಾಗ ಈ ಸುಳಾದಿಯನ್ನು ರಚಿಸಿದಂತಿದೆ. ಮನಸ್ಸನ್ನು ದಾಸರು ಒಣಗಿದೆಲೆಗೆ ಹೋಲಿಸಿದ್ದಾರೆ. ಈ ಪ್ರಪಂಚದ ಸುಖಾಪೇಕ್ಷೆ ಎಂಬ ಕೆಟ್ಟ ಬಿರುಗಾಳಿ ಬೀಸಿದಾಗ ಮನವೆಂಬ ತರಗೆಲೆ ಭಗವಂತನ ಧ್ಯಾನದಿಂದ ಬಲು ದೂರವಾಗಿ ಹೋಗುವುದೆಂಬ ಭಯವನ್ನು ದಾಸರು ವ್ಯಕ್ತಪಡಿಸಿದ್ದಾರೆ.

ಈರಾರು ದ್ವಿಗುಣ ಪರಿವಾರ : ಇಪ್ಪತ್ತ ನಾಲ್ಕು ತತ್ವಾಭಿಮಾನಿ ದೇವತೆಗಳ ಸಮೂಹ ಎಂದು ಇದರರ್ಥ.

೮೨

ಭಗವಂತನ ವೇಷ ಭೂಷಣಗಳನ್ನು ವರ್ಣಿಸಿ, ತಮ್ಮನ್ನು ಗುಣಹೀನದವನೆಂದು ಕಾಣದೆ ಅಜಾಮಿಳನು ಮಗನನ್ನು ಕರೆಯುವ ನೆಪದಿಂದ ನಾರಗ ಎಂದಾಗ ನಾರಾಯಣನೇ ಪ್ರತ್ಯಕ್ಷನಾದ ಪ್ರಸಂಗವನ್ನ ಜ್ಞಾಪಿಸಿ ತಮ್ಮನ್ನು ಅದೇ ರೀತಿಯಲ್ಲಿ ಕಾಪಾಡ ಬೇಕೆಂದು ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

ಮರಣಕಾಲದಲ್ಲಿ ನಂದನ ನಾರಗನೆಂದು ನೆನದರಿದಂತೆ : ಅಜಮಿಳನು ಬದುಕಿನಲ್ಲಿ ತಾಯಿ ತಂದೆಯರ ಸೇವೆ ಮಾಡದೆ, ಹೆಂಡತಿಯನ್ನು ಹೊಡೆದೋಡಿಸಿ ಸಾಯುವ ಕಾಲಕ್ಕೆ ಮಗನಾದ ನಾರಾಯಣನನ್ನು ನಾರಗ ಎಂದು ಕರೆದ ಪ್ರಸಂಗದ ಉಲ್ಲೇಖ ಇಲ್ಲಿದೆ.

೮೩

ಭಕ್ತಿ ಸಾಧನೆಯಲ್ಲಿ ಕರ್ಮ, ಜ್ಞಾನ, ಭಕ್ತಿಮಾರ್ಗ ಗಳೆಂಬುದುಂಟು. ಭಕ್ತಿ-ಮಾರ್ಗಾವಲಂಬಿಗಳು ಕರ್ಮಮಾರ್ಗದಿಂದ ಭಗವದಪರೋಕ್ಷ ಸಾಧ್ಯವಿಲ್ಲವೆಂದು ಕರ್ಮಮಾರ್ಗವು ಜ್ಞಾನ ಮಾರ್ಗಕ್ಕೆ ದಾರಿಯನ್ನು, ಜ್ಞಾನಮಾರ್ಗ ಭಕ್ತಿಮಾರ್ಗಕ್ಕೆ ಮಾರ್ಗದರ್ಶನವನ್ನು ಮಾಡುವುದೆಂದು ಭಾವಿಸುತ್ತಾರೆ. ಆದ್ದರಿಂದ ದಾಸರು ಈ ಸುಳಾದಿಯಲ್ಲಿ ಕರ್ಮ, ಹಾಗು ಜ್ಞಾನಾಚರಣೆಯಲ್ಲಿ ಭಕ್ತಿಲೇಪನ ಹೊಂದುವಂತಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

೮೪

ಭಗವಂತನ ನಾಮಸ್ಮರಣೆಯನ್ನು ಸತತವಾಗಿ ಮಾಡುವುದರಿಂದಲೇ ಬಿಂಬಾಪರೋಕ್ಷ ಸಾಧ್ಯವೆಂಬುದು ದಾಸರ ತರ್ಕವಾಗಿದೆ ಎಂದು ಈ ಸುಳಾದಿಯಿಂದ ಅರಿವಾಗುತ್ತದೆ. ಕೇವಲ ನಾಮಸ್ಮರಣೆಯಿಂದ ಸಕಲ ಪಾಪ ನಾಶವಾಗುವುದೆಂಬ ಧೃಢ ನಂಬಿಕೆ ದಾಸರಿಗುಂಟೆಂದು ಈ ಸುಳಾದಿಯಿಂದ ಮನವರಿಕೆಯಾಗುತ್ತದೆ.

೮೫

ಸಿಂಧು ಶಬ್ದವನ್ನು ಈ ಸುಳಾದಿಯ ಧ್ರುವತಾಳದ ಸಾಹಿತ್ಯದ ಪ್ರತಿಯೊಂದು ಸಾಲಿನಲ್ಲಿ ಪ್ರಯೋಗ ಮಾಡುವುದರ ಮೂಲಕ ಅರ್ಥ ಪುಷ್ಟಿಯನ್ನು, ನಾದಮಾಧುರ್ಯವನ್ನು ಸುಳಾದಿಗೆ ಉಂಟು ಮಾಡಿರುವುದನ್ನ ಇಲ್ಲಿ ಕಾಣಬಹುದಾಗಿದೆ. ಅಂತರಂಗ ಶುಚಿಯಾಗಲಿಲ್ಲವೆಂಬ ಕೊರಗನ್ನು ದಾಸರು ಇಲ್ಲಿ ವ್ಯಕ್ತ ಪಡಿಸಿದ್ದಾರೆ.

ದಶ ಇಂದ್ರಿಯಗಳು : ಪಂಚ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ಸೇರಿ ಹತ್ತು ಇಂದ್ರಿಯಗಳು.

೮೬

ಸಾಂಸಾರಿಕ ಕ್ಲೇಶಗಳಿಂದ ತತ್ತರಿಸಿದ ಸಂದರ್ಭದಲ್ಲಿ ಅದರ ಬಗ್ಗೆ ಅಸಹ್ಯವೂ ತುಚ್ಛವೂ ಆದ ಭಾವನೆ ಉಂಟಾಗುವುದು ಸಹಜ. ಈ ಬಗೆಯ ಭಾವ ಈ ಸುಳಾದಿಯಲ್ಲಿ ಅಭಿವ್ಯಕ್ತಗೊಂಡಿದೆ. ಜನನಕ್ಕೆ ಮುನ್ನ ಗರ್ಭವಾಸದಲ್ಲಾಗುವ ದುಃಖಾನುಭವದ ಚಿತ್ರಣವನ್ನಿತ್ತು ಇಂತಹ ಜನನ ಮರಣಗಳಿಂದ ದೂರವಾಗುವ ದೃಷ್ಟಿಯನ್ನು ಜನ ಬೆಳೆಸಿಕೊಳ್ಳಬೇಕೆಂದು ಕರೆ ನೀಡಲಾಗಿದೆ.

೮೭

ದಾಸರು ಭಗವಂತನನ್ನು ಮತ್ತೆ ಮತ್ತೆ ತಾಯಿಗೆ ಸಮನೆಂದು ಭಾವಿಸಿ ತಾಯಿಯ ಕಾರ್ಯಗಳನ್ನು ವಿವರಿಸಿ ಅದೇ ಬಗೆಯ ವಾತ್ಸಲ್ಯವನ್ನು ತೋರಬೇಕೆಂದು ಭಗವಂತನಲ್ಲಿ ವಾದಿಸಿರುವುದುಂಟು. ತಾಯಿಯು ಹೇಗೆ ಮಕ್ಕಳನ್ನು ಕಾಪಾಡುವ ಕರ್ತವ್ಯವನ್ನು ಸ್ವೀಕರಿಸುವಳೋ ಹಾಗೆ ಭಗವಂತನು ಭಕ್ತರನ್ನು ಕಾಪಾಡುವ ಜವಾಬ್ದಾರಿಯನ್ನು ಸ್ವೀಕರಿಸಬೇಕೆಂದು ಈ ಸುಳಾದಿಯಲ್ಲಿ ಹೇಳಿದ್ದಾರೆ.

೮೮

ಒಂದು ಜೀವ ಈ ಲೋಕದಲ್ಲಿ ಎಷ್ಟು ಜನ್ಮಗಳನ್ನು ಪಡೆದು ಏನೇನು ಕೆಲಸ ಮಾಡಿತೆಂದು ಬರೆದರೆ, ಈ ಭೂಮಂಡಲವನ್ನೇ ಆ ಪತ್ರದಿಂದ ಹಾಸಿ ತುಂಬಿಸಬಹುದೆನ್ನುವ ದಾಸರು, ಭಗವಂತನ ಚರಣ ಕಮಲಗಳಲ್ಲಿ ಎಷ್ಟೇ ಭಕ್ತಿಯನ್ನು ಬೆಳೆಸಿಕೊಳ್ಳಲು ಯತ್ನಿಸಿದರೂ ಇಂದು- ನಾಳೆಯ ಅನ್ನ, ಆಹಾರ, ವಿಷಯ ಸುಖಗಳ ಆಸಕ್ತಿಯ ಕಡೆಗೆ ಮತ್ತೆ ಮತ್ತೆ ಮನಸ್ಸು ಹರಿಯುವುದೆಂದು ದಾಸರು ತಮ್ಮ ಅಂತರಂಗದ ಇತಿ ಮಿತಿಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ.

೮೯

ಹಲವು ದೈವಗಳುಪಾಸನೆಯಿಂದ ಯಾವ ಪ್ರಯೋಜನವೂ ಇಲ್ಲವೆಂದು, ಸರ್ವೋತ್ತಮನಾದ ಶ್ರೀ ಹರಿಯನ್ನೇ ಉಪಾಸಿಸಬೇಕೆಂದು ಒತ್ತಿ ಹೇಳುವ ಸುಳಾದಿ ಇದು. ಅಂತರಂಗದ ಸಂತಾಪಗಳು ಹೋಗಬೇಕಾದರೆ ಅಂತರಂಗದಲ್ಲಿ ಭಗವಂತನ ದರ್ಶನವಾಗ ಬೇಕೆಂದು, ಅದಕ್ಕಾಗಿ ಭಗವಂತನನ್ನು ಅನನ್ಯವಾಗಿ ಈ ಸುಳಾದಿಯಲ್ಲಿ ಪ್ರಾರ್ಥಿಸಿದ್ದಾರೆ.

ವಿಷಯಾದಿಗಳಗೆರಗದಂತೆ : ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮವೆಂಬ ಇಂದ್ರಿಯಗಳು ತಮಗೆ ಯಾವುದರಿಂದ ಸುಖವೋ ಅದು ಧರ್ಮವಿಹಿತವಾಗಿರಲಿ, ಇಲ್ಲದಿರಲಿ ಅದನ್ನು ಬಯಸುವುದು ; ಯಾವಾಗಲು ಅದನ್ನು ಹುಡುಕುವುದು. ಇದನ್ನು ವಿಷಯ ಸುಖ ಎನ್ನುತ್ತಾರೆ. ಈ ವಿಷಯ ಸುಖವನ್ನು ಹುಡುಕುವ ಮನಸ್ಸು ಕೊಡಬಾರದೆಂದು ದಾಸರು ಪ್ರಾರ್ಥಿಸಿದ್ದಾರೆ.

ಷಷಟ್ಕಾರ : ಸಮಗ್ರ ಪ್ರಭುತ್ವ, ಸಾಮರ್ಥ್ಯ, ಯಶಸ್ಸು, ಸ್ವರೂಪ ಸೌಂದರ್ಯ, ಜ್ಞಾನ ಮತ್ತು ಅಸಂಗಗಳೆಂಬ ಆರು ಗುಣಗಳನ್ನು ಶಾಶ್ವತವಾಗಿ ಹೊಂದಿರುವವನು – ವಿಷ್ಣು.

೯೦

ಲೋಕಜೀವನದ ಸುಖಪ್ರದ ವಸ್ತುಗಳು ಭಗವನ್ನಾಮಸ್ಮರಣೆ ಚಿಂತನೆ, ಪೂಜಾದಿಗಳಿಗೆ ಅಡ್ಡಿ ಪಡಿಸುವುದರಿಂದ ಮನಸ್ಸು ವಿಚಿತ್ರವಾದ ಸಂಕಟವನನ್ನುಭವಿಸುತ್ತದೆ ಎಂದು ದಾಸರು ಈ ಸುಳಾದಿಯಲ್ಲಿ ಹೇಳಿಕೊಂಡಿದ್ದಾರೆ. ಜ್ಞಾನ ಭಕ್ತಿ ವೈರಾಗ್ಯಗಳಿಗೆ ಅಗತ್ಯವಾದ ಅನುಸಂಧಾನಕ್ಕೆ ಚಾಲನೆ ದೊರೆತಿಲ್ಲವೆಂದು, ಪಶ್ಚಾತ್ತಾಪ ಪಟ್ಟಿದ್ದಾರೆ.

೯೧

ನಿವೇದನಾತ್ಮಕ ಸುಳಾದಿಗಳನ್ನು ಇಲ್ಲಿಂದ ಕಾಣಬಹುದಾಗಿದೆ. ಭಗವಂತನಲ್ಲಿ ತಮ್ಮ ಎಲ್ಲ ಬಗೆಯ ಸಂಕಟಗಳನ್ನು ಹೇಳಿಕೊಳ್ಳುವ ಬಗೆಯನ್ನು ಈ ಸುಳಾದಿಗಳಲ್ಲಿ ಕಾಣಬಹುದಾಗಿದೆ. ಭಕ್ತಜೀವರು ಮಾಡುವ ಸತ್ಕರ್ಮಗಳಲ್ಲಿ ಎಷ್ಟೇ ಕೊರತೆಗಳಿದ್ದರೂ ಅದನ್ನು ಮನಸ್ಸಿಗೆ ತಾರದೆ ಪುಣ್ಯವರ್ಷವನ್ನು ಸುರಿಸುವನೆಂದು, ಅಭಕ್ತರಾದವರು ಮಾಡುವ ಸತ್ಕರ್ಮಗಳಿಗೆ ಬೆಲೆಯನ್ನು ಕೊಡುವುದಿಲ್ಲವೆಂದೂ ದಾಸರು ಇಲ್ಲಿ ಹೇಳಿದ್ದಾರೆ.

೯೨

ಭಕ್ತರಲ್ಲಿ ಭಗವಂತನಿಗೆ ಇರುವ ವಾತ್ಸಲ್ಯ ಸ್ವರೂಪವನ್ನ ಸೂಚ್ಯವಾಗಿ ತಿಳಿಸುವ ಸುಳಾದಿ ಇದಾಗಿದೆ. ಭಕ್ತರಾದವರಿಗೆ ಭಗವಂತನು ಉಂಟು ಮಾಡುವ ಸುಖ ದುಃಖಗಳೆರಡರಲ್ಲಿಯೂ ಅವರ ಹಿತದೃಷ್ಟಿಯನ್ನೇ ಇಟ್ಟುಕೊಂಡಿರುವನೆಂದು ದಾಸರು ಇಲ್ಲಿ ಹೇಳಿದ್ದಾರೆ.

ಭಕುತರು ದೋಷ ಮಾಡಲು ಪುಣ್ಯವೆನಿಸುವೆ : ಭಕ್ತರಾದವರು ಅರಿಯದೆ ಅಥವಾ ಅನಿವಾರ್ಯವಾಗಿ ಮಾಡುವ ತಪ್ಪುಗಳಿಗೆ ಶಿಕ್ಷೆ ನೀಡುವುದರ ಬದಲು ಅದನ್ನ ಪುಣ್ಯರೂಪವಾಗಿ ಪರಿವರ್ತಿಸುವನೆಂಬ ತತ್ವವನ್ನು ದಾಸರು ಈ ಮಾತಿನ ಮೂಲಕ ತಿಳಿಸಿದ್ದಾರೆ. ಯಕ್ಷನ ಮಾತುಗಳನ್ನು ಅಲಕ್ಷಿಸಿ ಭೀಮಾದಿಗಳು ಸರೋವರದ ನೀರನ್ನು ಕುಡಿದು ಮಡಿದರೂ ಅದು ಶಾಪಕ್ಕೆ ಕಾರಣವಾಗದೆ ಅಜ್ಞಾತವಾಸವನ್ನು ಯಶಸ್ವಿಯಾಗಿ ಮುಗಿಸಲು ಸಹಾಯಕವಾದ ಸನ್ನಿವೇಶವನ್ನು ಒಂದು ಉದಾಹರಣೆಯೆಂದು ಸ್ವೀಕರಿಸಬಹುದು.

೯೩

ಭಗವಂತನನ್ನ ಅನಿಮಿತ್ತ ಬಂಧು ಎನ್ನುತ್ತಾರೆ. ಏಕೆಂದರೆ ಭಕ್ತರನ್ನು ಕಾಪಾಡಲು ಅವನು ಪ್ರತಿಫಲಾಪೇಕ್ಷೆಯನ್ನು ಹೊಂದಿರುವುದಿಲ್ಲ. ಈ ಸುಳಾದಿಯಲ್ಲಿ ದಾಸರು ನಾರಾಯಣ ಶಬ್ದದ ನಿರ್ವಚನಗೈದು ಭಗವಂತನ ನಾಮ ಸ್ಮರಣೆಯಿಂದ ಪಾಪರಾಶಿ ಎಂಬ ಹತ್ತಿಯ ಬೆಟ್ಟಕ್ಕೆ ಹರಿನಾಮ ಬೆಂಕಿಯಂತೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಪಂಚ ಪ್ರಾಣಾಹುತಿ : ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂದು ಪ್ರಾಣಾಹುತಿಗಳು ಐದೆಂದು ಶಾಸ್ತ್ರಗಳು ತಿಳಿಸಿವೆ.

೯೪

ಸಕಲವೂ ಶ್ರೀ ಹರಿಯ ನಿಯಂತ್ರಣದಲ್ಲಿದೆ ಎಂಬುದಾಗಿ ಭಾವಿಸುವವರೇ ನಿಜವಾದ ಭಕ್ತರೆಂಬ ತಿಳಿವಳಿಕೆ ಈ ಸುಳಾದಿಯಲ್ಲಿದೆ. ಈ ಧೃಢನಂಬಿಕೆಯಲ್ಲಿ ದೃಢವಾದಷ್ಟು ಭಕ್ತಿಯ ಬೆಳವಣಿಗೆಯಾಗುತ್ತದೆ ಎಂಬ ಚಿತ್ರಣ ಇಲ್ಲಿದೆ.

೧. **ಮೂರೊಂದು ಮೂರೊಂದು ....ಮೂರು ಮೂವತ್ತರ ಕೂಡೊ :** ಕೇಶವನಿಂದ ಹಿಡಿದು ಕೃಷ್ಣನವರೆಗಿರುವ ಇಪ್ಪತ್ತನಾಲ್ಕು ಶ್ರೀಹರಿಯ ರೂಪಗಳನ್ನು ಯಾವಾಗಲೂ ಧ್ಯಾನಿಸುತ್ತಾ ಘೃಣಿನಾಮಕ ಪರಮಾತ್ಮನ ಸುತ್ತಲಿರುವ ಶ್ರೀ ಭೂ ದುರ್ಗಾ ರೂಪಗಳ ಕ್ರಿಯೆಗಳನ್ನ ತಿಳಿಯುತ್ತಾ ಸಾತ್ವಿಕ ಮಾರ್ಗಾವಲಂಬಿಯಾಗಿ, ಹದಿನೆಂಟು ಪುರಾಣಗಳ ಸಾರವನ್ನು ತಿಳಿದು ಸಾರೂಪ್ಯ, ಸಾಮೀಪ್ಯ, ಸಾಯುಜ್ಯ, ಸಾರ್ಷ್ಣ್ಯಗಳಲ್ಲೊಂದಾದ ಮೋಕ್ಷ ಪದವಿಗೆ ದಾರಿ ಮಾಡಿಕೊಂಡು ಮೂವತ್ತ ಮೂರು ಕೋಟಿ ದೇವತೆಗಳ ಸಹವಾಸವನ್ನು ಪಡೆಯುವಂತಾಗ ಬೇಕೆಂದು ಈ ಸುಳಾದಿ ಸಂಖ್ಯಾ ಮುಂಡಿಗೆಯಲ್ಲಿ ದಾಸರು ತಿಳಿಸಿದ್ದಾರೆ.

೯೫

ಭಗವಂತನ ಗುಣಗಳು ಇಷ್ಟೆಂದು ಹೇಳಿ ಪೂರೈಸಲು ಸಾಧ್ಯವಿಲ್ಲವೆಂಬ ಮಾತಿನಿಂದ ಅವನ ಗುಣಗಳನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ ಶ್ರೀಹರಿಯ ಕೆಲವು ಗುಣ ಶಕ್ತಿ ಸ್ವರೂಪವನ್ನು ದಾಸರು ಈ ಸುಳಾದಿಯಲ್ಲಿ ಪರಿಚಯ ಮಾಡಿ ಕೊಟ್ಟಿದ್ದಾರೆ.

ಸ್ವರತಿ : ಶ್ರೀ ಹರಿಯು ಯಾವಾಗಲೂ ಎಲ್ಲ ಕಾಲಗಳಲ್ಲೂ ಲಕ್ಷ್ಮಿಯಿಂದ ಒಡಗೂಡಿದ್ದರೂ ಅವನು ಲಕ್ಷ್ಮಿಯ ಸಹಾಯವಿಲ್ಲದೆ ಸುಖವನ್ನನುಭವಿಸುವ ಸಾಮರ್ಥ್ಯವನ್ನು ಪಡೆದಿರುವನು. ಆದ್ದರಿಂದ ಅವನನ್ನು ಸ್ವರತಿ ಎನ್ನುತ್ತಾರೆ.

ಅರೂಪ : ಶ್ರೀ ಹರಿಯ ರೂಪ ಹೀಗೆಯೇ ಇದೆ ಎಂದು ಮಿತಿ ಗೊಳಪಡಿಸಲು ಸಾಧ್ಯವಿಲ್ಲ. ಅವನು ಯಾವುದೇ ರೂಪವನ್ನು ಸ್ವೀಕರಿಸಬಲ್ಲನಾದರಿಂದ ಅವನನ್ನ ಅರೂಪ ಎನ್ನುತ್ತಾರೆ.

ಸ್ವಪ್ರಕಾಶ : ಶ್ರೀ ಹರಿಯು ದೇಹ ಪ್ರಕಾಶಮಾನವಾಗಿದೆ. ಜೀವರಿಗೆ ಬಿಂಬಾಪರೋಕ್ಷವನ್ನುಂಟು ಮಾಡುವಾಗ ಅವರವರ ಯೋಗ್ಯತಾನುಸಾರಕ್ಕೆ ನಿಗದಿಯಾದ ಬೆಳಕಿನಲ್ಲಿ ಆತ್ಮಾಂತರ್ಗತವಾದ ತನ್ನ ರೂಪವನ್ನು ತೋರಿಸುವನು.

೯೬

ಭಗವಂತನ ನಾಮಸ್ಮರಣೆಗೆ ಇರುವ ಶಕ್ತಿಯ ವಿವರಣೆ ಈ ಸುಳಾದಿಯಲ್ಲಿ ಭಕ್ತಿ ಭಾವಭರಿತವಾಗಿ ಹರಿದಿದೆ. ಕಲಿಯುಗದಲ್ಲಿ ಹರಿನಾಮವ ನೆನೆಯಲು ಕುಲಕೋಟಿಗಳುದ್ಧಾರವಾಗುವುದೊ ಎಂಬ ಅಭಿಪ್ರಾಯ ಇಲ್ಲಿ ವಿಸ್ತೃತ ಗೊಂಡಿದೆ.

೯೭

ಭಕ್ತಿ ಮತ್ತು ವಿರಕ್ತಿ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಒಂದನ್ನು ಬಿಟ್ಟು ಮತ್ತೊಂದಿರಲು ಸಾಧ್ಯವಿಲ್ಲ. ದಾಸರು ಈ ಸುಳಾದಿಯಲ್ಲಿ ಹರಿಯನ್ನು ನಂಬಿದವರಿಗೆ ಸಮುದ್ರವನ್ನೇ ಆಪೋಷನ ತೆಗೆದುಕೊಳ್ಳುವಷ್ಟು ಶಕ್ತಿಯುಂಟಾಗುವುದಾಗಿ ಹೇಳಿದ್ದಾರೆ.

ಅಂಬುಧಿಯ ಅಪೋಷಣ್ಯಗೈದೇನೊ : ಅಗಸ್ತ್ಯ ಮಹರ್ಷಿಯು ಸಾಗರವನ್ನೇ ಒಂದು ಉದ್ಧರಣೆಯ ನೀರಿನಂತೆ ಕುಡಿದು ಒಣಗಿಸಿದ ಪ್ರಸಂಗದ ಉಲ್ಲೇಖವಿಲ್ಲಿದೆ.

ಪದ ಸೋಕಲು ಪಾಷಾಣ ಪೆಣ್ಣಾಗಿ ಮೆರೆದ : ಶ್ರೀ ರಾಮನ ಪಾದ ಸ್ಪರ್ಶದಿಂದ ಕಲ್ಲಾಗಿದ್ದ ಅಹಲ್ಯೆ ಹೆಣ್ಣಾಗಿ ಶಾಪವಿಮೋಚನೆ ಪಡೆದ ಕಥಾ ಸೂಚನೆ ಇಲ್ಲಿದೆ.

೯೮

ಹರಿದಾಸರಿಗೆ ಭಗವಂತನ ನಾಮಭಜನೆ ಅಮೃತಕ್ಕೆ ಸಮಾನವೆಂದು ಹಲವು ದಾಸರು ಹೇಳಿರುವಂತೆ ವಿಜಯದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ. ಯಾವ ಭಕ್ತ ಹರಿನಾಮಾಮೃತವನ್ನು ಸವಿಯುವುದರಲ್ಲಿ ಆನಂದವನ್ನು ಹೊಂದುವನೋ ಅಂತಹವನಿಗೆ ಹಸಿವು ನಿದ್ರೆ, ಬಾಯಾರಿಕೆಗಳುಂಟಾಗದೆಂದು ದಾಸರು ಈ ಸುಳಾದಿಯಲ್ಲಿ ವಿವರಿಸಿದ್ದಾರೆ.

೯೯

ಶ್ರೀಹರಿಯ ಗುಣ ವಿಶೇಷಗಳನ್ನು ಪುನಃ ಪುನಃ ಸ್ಮರಣೆ ಮಾಡುವುದರ ಮೂಲಕ ಭಗವಂತನ ಆರಾಧನೆ ಮಾಡುವುದನ್ನು ಈ ಸುಳಾದಿಯಲ್ಲಿ ಕಾಣಬಹುದಾಗಿದೆ. ಭಗವಂತನು ನಿತ್ಯ ತೃಪ್ತ, ನಿತ್ಯ ಭೂಷಿತ, ನಿತ್ಯ ವ್ಯಾಪಕ, ಇಂತಹವನಿಗೆ ಮಾಡುವ ಅಭಿಷೇಕ, ಅರ್ಚನೆ ಕೇವಲ ಸಾಂಕೇತಿಕವೆಂದು ದಾಸರು ಹೇಳಿದ್ದಾರೆ.

ಎರಡೈದು ಸಾಗರ ಪೋಷಣಗೊಂಬವಗೆ : ಏಳು ಸಾಗರಗಳಲ್ಲಿ ನಡುವೆ ಇರುವ ಭೂಭಾಗದಲ್ಲಿರುವೆಲ್ಲರಿಂದಲೂ ಪೂಜಿಸಿಕೊಳ್ಳುವವನು ಉಪ್ಪು, ನೀರು, ಹಾಲು, ಮೊಸರು, ತುಪ್ಪ, ಮದ್ಯ, ಕಬ್ಬಿನಹಾಲುಗಳೆಂಬ ಏಳು ಸಾಗರಗಳು.

೧೦೦

ಭಗವಂತನ ಶಕ್ತಿ, ಸಾಮರ್ಥ್ಯ, ಗುಣಾದಿಗಳ ಪಟ್ಟಿಯನ್ನು ಮಾಡಿ, ತತ್ವಾಭಿಮಾನಿದೇವತೆಗಳಿಂದ ಸಕಲ ಕಾರ್ಯಗಳನ್ನು ಮಾಡಿಸುವ ಶ್ರೀ ಹರಿಯ ಶಿಸ್ತಿನ ಕಾರ್ಯ ವೈಲಕ್ಷಣ್ಯಗಳನ್ನು ಈ ಸುಳಾದಿಯಲ್ಲಿ ವಿವರಿಸಿದ್ದಾರೆ.

೧೦೧

ಪ್ರತಿಯೊಂದು ತಾಳ ಸಾಹಿತ್ಯದ ಕೊನೆಯ ಚರಣದಲ್ಲಿಯೂ ಪುರಂದರ ದಾಸರ ಸ್ಮರಣೆ ಮಾಡಿರುವುದು ಈ ಸುಳಾದಿಯ ವೈಶಿಷ್ಟ್ಯವಾಗಿದೆ. ಪಂಢರಪುರ, ಉಡುಪಿ, ತಿರುಪತಿ, ಕಂಚಿ, ಕಾಶಿ ಮೊದಲಾದವುಗಳಲ್ಲಿ ವಿಷ್ಣುವು ಬೇರೆ ಬೇರೆ ರೂಪಗಳಿಂದ ಪೂರ್ಣ ವಿಭೂತಿಯಿಂದ ಕಂಗೊಳಿಸುತ್ತಿರುವನೆಂಬುದನ್ನು ದಾಸರು ಈ ಸುಳಾದಿಯಲ್ಲಿ ಸೂಚಿಸಿದ್ದಾರೆ.

೧೦೨

ಭಾರತದಲ್ಲಿ ಹಿಂದೂ ದೇವಾಲಯಗಳು ಅಸಂಖ್ಯಾತವಾಗಿವೆ. ಇದರಿಂದ ಆಯಾ ಸ್ಥಳಗಳಲ್ಲಿರುವ ಭಕ್ತರಿಗೆ ಭಗವನ್ಮೂರ್ತಿಗಳ ದರ್ಶನ ಪೂಜಾದಿಗಳಿಗೆ ಅನುಕೂಲವುಂಟಾಗಿದೆ ಎನ್ನಬಹುದು. ಇದರೊಡನೆ ಭಕ್ತರನ್ನುದ್ಧಾರ ಮಾಡಲೆಂದೇ ದಶಾವತಾರಗಳನ್ನೆತ್ತಿ ಆಗಾಗ್ಗೆ ಭಕ್ತರಿಗೆ ಪವಾಡಗಳನ್ನು ಮೆರೆಯುತ್ತಿರುವನೆಂದು ಈ ಸುಳಾದಿಯಲ್ಲಿ ದಾಸರಾಯರು ಹೇಳಿದ್ದಾರೆ.

೧೦೩

ಭಕ್ತರಾದವರಿಗೆ ನಾನಾ ಬಗೆಯ ದಾರಿದ್ರ್ಯ, ಕಷ್ಟ, ಚಿಂತೆಗಳು ಪ್ರಾಪ್ತಿಯಾಗುವುದು ಅಸಂಭವವಲ್ಲವಾದರು, ಇದರಿಂದ ಭಕ್ತನ ಸರ್ವನಾಶ ವಾಗದಂತೆಯೂ, ಭಕ್ತಿಯ ಬೆಳವಣಿಗೆಗೆ ಈ ದುಃಖಗಳು ಸಹಾಯಕವಾಗುವಂತೆಯೂ ನೋಡಿಕೊಳ್ಳುವುದು ಭಗವಂತನ ಚರ್ಯೆಯಾಗಿದೆ ಎಂಬುದನ್ನು ದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ. ಆದ್ದರಿಂದ ಭಕ್ತಾರಾದವರು ತಮ್ಮ ಬದುಕಿನ ಜವಾಬ್ದಾರಿಯನ್ನು ಭಗವಂತನಿಗರ್ಪಿಸಿ ತಾವು ನಿರಾತಂಕವಾಗಿರ ಬಹುದೆಂಬ ಭರವಸೆ ಇಲ್ಲಿ ವ್ಯಕ್ತವಾಗಿದೆ.

೧೦೪

ಬರಗಾಲ ಬಂದ ಸಂದರ್ಭವೊಂದರಲ್ಲಿ ದೇಶದ ಜನರ ಕಷ್ಟಗಳನ್ನ ಪರಿಹರಿಸಬೇಕೆಂದು ದಾಸರು ಈ ಸುಳಾದಿಯ ಮೂಲಕ ಪ್ರಾರ್ಥಿಸಿದ್ದಾರೆ. ಇದು ವಿಜಯದಾಸರಿಗೆ ಸಮಾಜದ

ಬಗ್ಗೆ ಇದ್ದ ಕಾಳಜಿ ದೇಶಭಕ್ತಿಯನ್ನು ಮನವರಿಕೆ ಮಾಡಿಕೊಡುತ್ತದೆ. ಪ್ರಜೆಗಳ ಕ್ಷೋಭೆಯ ನೋಡಲಾರದೆ ನಿನಗೆ ಭಜನೆಯಿಂದಲೆ ನಾನು ಮೊರೆಯಿಟ್ಟೆನಯ್ಯ ಎಂಬ ಈ ಸುಳಾದಿಯ ವಾಕ್ಯವು ಈ ವಿಷಯವನ್ನು ಸೂಚ್ಯವಾಗಿಯೇ ತಿಳಿಸಿದೆ.

> **ಪಿಂತೆರಾಯರಿಗೆ ಬಂದ ಕುಹು, ಯೋಗವ ಪರಿಹರಿಸಿ :** ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನಿಗೆ ಕುಹೂಯೋಗ ಉಂಟಾದ ಸಂದರ್ಭದಲ್ಲಿ ವ್ಯಾಸರಾಯರ ಪ್ರಾರ್ಥನೆಗೆ ಓಗೊಟ್ಟು ಆ ದುರ್ಯೋಗ ರಾಜನ ಮೇಲೆ ಪರಿಣಾಮ ಬೀರದಂತೆ ಭಗವಂತನು ಕಾಪಾಡಿದನು. ಈ ಪ್ರಸಂಗವನ್ನು ಸೂಚಿಸಿ ವಿಜಯದಾಸರು ಪ್ರಜೆಗಳ ಕ್ಷೇಮವನ್ನು ನೋಡಿ ಕೊಳ್ಳಬೇಕೆಂದು ಶ್ರೀ ಹರಿಯಲ್ಲಿ ಮೊರೆ ಇಟ್ಟಿದ್ದಾರೆ.

೧೦೫

ಭಗವಂತನ ಭಜನೆಯಿಂದ ಎಂತಹ ರೋಗವಾದರು, ನಿವಾರಣೆಯಾಗುವುದೆಂಬ ಧೃಢ ನಂಬಿಕೆ ವಿಜಯದಾಸರಿಗಿತ್ತು. ಸಂಸಾರವೆಂಬ ಬಿಸಿಲಿಗೆ ತಂಪನ್ನೆರೆಯುವ ಶಕ್ತಿ ನಾಮಸ್ಮರಣೆಯಿಂದ ದೊರಕುವುದಾಗಿಯೂ, ಕಡು ಬಡವರೂ ಹಣದ ಖರ್ಚಿಲ್ಲದೆ ನಾಮಸ್ಮರಣೆಯಿಂದ ತಮ್ಮ ಎಲ್ಲ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದೆಂದು ದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ.

೧೦೬

ಭಗವಂತನ ರಕ್ಷಕ ಗುಣ ಘನತೆಯ ವರ್ಣನೆ ಈ ಸುಳಾದಿಯಲ್ಲಿದೆ. ಪುರಂದರದಾಸರು ವೈಶ್ಯಳಾದ ಮಾದಮ್ಮನ ಕೋರಿಕೆಯಂತೆ ಆಕೆಯ ಮಗನಾದ ನಂಜುಂಡನನ್ನು ಬದುಕಿಸಿ ಕೊಟ್ಟ ಪ್ರಸಂಗವನ್ನು ದಾಸರು ಈ ಸುಳಾದಿಯಲ್ಲಿ ದಾಖಲಿಸಿದ್ದಾರೆ.

೧೦೭

ಹರಿದಾಸರೆಂಬ ಪಟ್ಟವನ್ನು ಸ್ವೀಕರಿಸಿದವರು ಅನವರತವೂ ಭಗವಂತನ ನಾಮಸ್ಮರಣೆ, ಭಜನೆ, ತೀರ್ಥಕ್ಷೇತ್ರ ಪರ್ಯಟನಾದಿಕಾರ್ಯಗಳಲ್ಲಿ ನಿರತವಾಗಿರಬೇಕು. ಆದರೆ ಇದನ್ನು ಸಾಧಿಸುವುದು ಸುಲಭವಲ್ಲ, ವಿಜಯದಾಸರು ದಾಸ ಜೀವನವನ್ನು ತೃಪ್ತಿಕರವಾಗಿ ಮಾಡಲು ಸಾಧ್ಯವಾಗಲಿಲ್ಲವೆಂಬ ದುಃಖವನ್ನು ಇಲ್ಲಿ ವ್ಯಕ್ತ ಪಡಿಸಿದ್ದಾರೆ. ಜೊತೆಗೆ ಅರ್ಜುನ, ಭೀಷ್ಮ, ರುಕುಮಾಂಗದನೇ ಮೊದಲಾದವರಿಗೆ ಒಲಿದ ಮೇಲೆ ತಮಗೇಕೆ ಒಲಿಯಬಾರದೆಂದು ಭಗವಂತನನ್ನು ಪ್ರಶ್ನಿಸಿದ್ದಾರೆ.

೧೦೮

ವಿಜಯದಾಸರಿಗಿದ್ದುದು ಏಕೈಕ ಪುತ್ರ. ಅವನ ಹೆಸರು ಶೇಷಗಿರಿದಾಸ. ಇವನಿಗೆ ಅಪಾರ ರೋಗವೊಂದು ಬಂದಾಗ ಅಪಮೃತ್ಯುವೇ ಉಂಟಾಯಿತೆಂದು ಹೆದರಿದರೂ ಧೈರ್ಯವನ್ನು ಪೂರ್ಣವಾಗಿ ಕಳೆದುಕೊಳ್ಳದೆ ಭಗವಂತನಲ್ಲಿ ಸ್ತೋತ್ರರೂಪದ ಪೂಜೆಯನ್ನು ಈ ಸುಳಾದಿಯ ರಚನೆಯ ಮೂಲಕ ಮಾಡಿರುವರು. ದಾಸರ ದೈನ್ಯತೆ ಇಲ್ಲಿ ಹಾಸು ಹೊಕ್ಕಾಗಿದೆ ಉದ್ದಂಡನಲ್ಲ ಕರ್ಮನಿಷ್ಟನಿವ ಇತ್ಯಾದಿ ಮಾತುಗಳಿಂದ ಶೇಷಗಿರಿದಾಸನದು ಸನ್ನಡತೆಯಾಗಿತ್ತೆಂದು ಊಹಿಸಲು ಅವಕಾಶವಿದೆ.

೧೦೯

ವಿಜಯದಾಸರು ಈ ಸುಳಾದಿಯಲ್ಲಿ ಭಗವನ್ನಾಮಸ್ಮರಣೆಯಿಂದ ಉಧ್ಧೃತರಾದವರ ದೊಡ್ಡ ಪಟ್ಟಿಯನ್ನು ಕೊಟ್ಟು ಹರಿ ಎಂಬ ಎರಡಕ್ಷರದ ಪುನರುಚ್ಚಾರಣೆಯಿಂದ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದೆಂಬ ಭರವಸೆಯನ್ನು ಕೊಟ್ಟಿದ್ದಾರೆ.

ಹರಿನಾಮ ಗುರುಪುತ್ರನ್ನ ತಿರುಗಿ ಬದುಕಿಸಿತು : ಅಶ್ವತ್ಥಾಮನನ್ನು ಕೊಂದು ಹಾಕಲು ಭೀಮ ನಿರ್ಧರಿಸಿದ್ದ ಸಂದರ್ಭದಲ್ಲಿ ಕೃಷ್ಣನು ಭೀಮನನ್ನು ಸಮಾಧಾನ ಮಾಡಿ ಅಶ್ವತ್ಥಾಮನನ್ನು ಬದುಕಿಸುತ್ತಾನೆ.

೧೧೦

ಭಗವಂತನು ಸರ್ವ ಕಾಲಗಳಲ್ಲಿ, ಸರ್ವ ವಸ್ತುಗಳಲ್ಲಿ ವ್ಯಾಪ್ತನಾಗಿದ್ದಾನೆ, ಅವನು ಅಣುವಾಗಬಲ್ಲ, ಮಹತ್ತಾಗಬಲ್ಲ, ಕೋಟಿ ಕೋಟಿ ರೂಪಗಳನ್ನು ಏಕಕಾಲದಲ್ಲಿ ಧರಿಸಬಲ್ಲ, ಅವನ ಶರೀರ ಜ್ಯೋತಿರ್ಮಯವಾಗಿರುವುದು, ಜೀವರಿಗೆ ಶ್ರೀಹರಿಯೇ ಗುರು, ತಾಯಿ, ತಂದೆ, ಬಂಧು ಬಳಗ, ಅವನ ರೂಪ ಮನ್ಮಥನಿಗೂ ಮಿಗಿಲಾದುದು, ರಾವಣನೇ ಮೊದಲಾದ ದುರುಹಂಕಾರಿಗಳನ್ನು ಶಕ್ತರನ್ನ ನಿಗ್ರಹಿಸಿದವನೆಂದು ಶ್ರೀಹರಿಯ ಅಪದೃಶಗುಣಗಳ ಸ್ತೋತ್ರ ಇಲ್ಲಿದೆ.

ಅಣುವೇ ಮಹತ್ತು ಘನವೇ ಅಣುವಾಗುವ : ಅಣೋರಣೀಯಾನ್ ಮಹತೋಮಹಿಮಾನ್ ಎಂಬ ಉಪನಿಷತ್ ವಾಕ್ಯದ ಕನ್ನಡ ರೂಪವಿದು. ಭಗವಂತನು ಅಣುವಿನಷ್ಟು ಚಿಕ್ಕದಾಗ ಬಲ್ಲ, ತ್ರಿವಿಕ್ರಮನಂತೆ ಆಕಾಶದೆತ್ತರಕ್ಕೆ ಬೆಳೆಯಬಲ್ಲ.

೧೧೧

ಹರಿನಾಮ ಮಹಾತ್ಮ್ಯೆಯನ್ನು ದಾಸರು ಭಾವಪರವಶರಾಗಿ ಈ ಸುಳಾದಿಯಲ್ಲಿ ಚಿತ್ರಿಸಿದ್ದಾರೆ. ಹರಿನಾಮ ಪುನಶ್ಚರಣೆಯಿಂದ ದಾರಿದ್ರ್ಯ, ಅಜ್ಞಾನ, ಅಲ್ಪಾಯುತ್ವ, ಪಾಪ, ದುಃಖ, ಮನವಾಲಿನ್ಯತ್ವ, ಅನಾಚಾರ, ಇಂದ್ರಿಯ ದೌರ್ಬಲ್ಯ, ಆಪತ್ತುಗಳನ್ನು ಕಳೆದುಕೊಳ್ಳಬಹುದೆಂದು ದಾಸರು ಹೇಳಿದ್ದಾರೆ.

೧೧೨

ಹರಿನಾಮ ಸ್ಮರಣೆಯ ಫಲಗಳ ವಿವರವನ್ನು ದಾಸರು ಈ ಸುಳಾದಿಯಲ್ಲಿಯೂ ಮುಂದುವರಿಸಿದ್ದಾರೆ. ಹರಿನಾಮಸ್ಮರಣೆಗೆ ಕಾಲ, ದೇಶ, ಮಡಿ, ಮೈಲಿಗೆ ಯಾವುದೂ ಇಲ್ಲವೆಂದೂ, ಹರಿನಾಮ ಸ್ಮರಣೆಯೇ ಮೌನ, ಧ್ಯಾನ, ಜಪ, ತಪ, ಯಜ್ಞ, ಯಾಗಾದಿಗಳ ಕರ್ಮಗಳಿಗಿಂತ ಮೊದಲಾದ ಫಲವನ್ನು ತಂದು ಕೊಡುವುದಾಗಿ ದಾಸರು ಈ ಸುಳಾದಿಯಲ್ಲಿ ಹೇಳಿದ್ದಾರೆ.

೧೧೩

ಭಗವಂತನ ಆರಾಧಕರಿಗೆ ಈ ಭೂಮಂಡಲದ ಯಾವುದೇ ಉನ್ನತವಾದ ಸುಖ ದೊರೆಯುವುದು ಹೆಚ್ಚಲ್ಲವೆಂದು, ದಾಸರು ಹೇಳುವುದರ ಮೂಲಕ ಹರಿಯ ಕಾರುಣ್ಯ, ಹರಿನಾಮಸ್ಮರಣೆಗೆ ಇರುವ ಶಕ್ತಿ, ಭಕ್ತರ ಭಕ್ತಿಗೆ ಇರುವ ಪ್ರಾಶಸ್ತ್ಯಗಳನ್ನು ದಾಸರಾಯರು ಈ ಸುಳಾದಿಯ ಮೂಲಕ ಮನವರಿಕೆ ಮಾಡಿ ಕೊಟ್ಟಿದ್ದಾರೆ.

೧೧೪

ಇದು ವರಹಾವತಾರವನ್ನು ವಿವರಿಸುವ ಸುಳಾದಿಯಾಗಿದೆ. ಹಿರಣ್ಯಾಕ್ಷನನ್ನು ಇಲ್ಲಿ ಕನಕಾಕ್ಷ ಎಂದು ಕರೆಯಲಾಗಿದೆ. ಈ ಹಿರಣ್ಯಾಕ್ಷನೆಂಬ ರಾಕ್ಷಸನು ಇಡೀ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ರಸಾತಳ ಲೋಕವನ್ನು ಸಮುದ್ರದ ಮೂಲಕ ಪ್ರವೇಶ ಮಾಡಿದನಂತೆ. ಆಗ ಭೂಮಿಯನ್ನ ತನ್ನ ಮೂಲ ಸ್ಥಳಕ್ಕೆ ತಂದಿರಿಸುವ ನಿಮಿತ್ತ ವಿಷ್ಣುವು ವರಾಹಾವತಾರವನ್ನು ತಾಳಿ ತನ್ನ ಕೋರೆದಾಡಿಯ ಮೇಲೆ ಭೂಮಿಯನ್ನು ಹೊತ್ತು ರಾಕ್ಷಸನನ್ನು ಸಂಹರಿಸಿ ಭೂಮಿಯನ್ನು ಸ್ವಸ್ಥಳಕ್ಕೆ ಸೇರಿಸಿದನೆಂಬ ಕಥೆ ಇಲ್ಲಿ ಉಕ್ತವಾಗಿದೆ.

ಸ್ವಾಮಿಪುಷ್ಕರಣಿಯ ವಾಸಿ : ತಿರುಮಲೆಯ ಶ್ರೀನಿವಾಸನ ದೇವಾಲಯದ ಮುಂಭಾಗದ ಎಡಮೂಲೆಯಲ್ಲಿರುವ ಸರೋವರಕ್ಕೆ ಸ್ವಾಮಿಪುಷ್ಕರಣಿ ಎಂದು

ಹೆಸರು. ಈ ಸರೋವರದ ದಂಡೆಯಲ್ಲಿ ವರಾಹದೇವರ ದೇವಾಲಯವಿದೆ. ವರಾಹದೇವರನ್ನು ಮೊದಲು ದರ್ಶನ ಪಡೆದ ಮೇಲೆಯೇ ಶ್ರೀನಿವಾಸನ ದರ್ಶನ ಪಡಯಬೇಕೆಂಬ ಸಂಪ್ರದಾಯವಿದೆ.

೧೧೫

ಕಪಿಲಾವತಾರಿಯಾದ ವಿಷ್ಣುವಿನ ಸ್ತೋತ್ರ ಈ ಸುಳಾದಿಯಲ್ಲಿದೆ. ಕಪಿಲ ಒಬ್ಬ ಮಹರ್ಷಿ. ಕರ್ದಮ ಮುನಿ ಮತ್ತು ದೇವಹೂತಿಯರ ಪುತ್ರನಾಗಿ ಹುಟ್ಟಿದವನೇ ಕಪಿಲ ಮಹರ್ಷಿ. ಕಪಿಲ ಮಹರ್ಷಿಯು ಸಾಂಖ್ಯ ಸೂತ್ರಗಳನ್ನು ಬರೆದಿರುವನು. ಈ ಸಾಂಖ್ಯ ತತ್ವಗಳನ್ನು ದೇವಹೂತಿಗೆ ಉಪದೇಶಿಸುವನು.

ಶುಕ್ಲ ಶೋಣಿತರಹಿತ : ವಿಷ್ಣುವು ಯಾವುದೇ ಅವತಾರ ಮಾಡಿ ಯಾರ ಮಗನಾಗಿಯೇ ಹುಟ್ಟಿದರೂ ಅವನ ದೇಹದಲ್ಲಿ ಪ್ರಾಕೃತವಾದ ರಕ್ತವಿರುವುದಿಲ್ಲವೆಂದು ಗರ್ಭವಾಸದ ದುಃಖ ಅವನಿಗಿಲ್ಲವೆಂದು ತತ್ವ ಶಾಸ್ತ್ರಗಳು ಹೇಳಿರುವುದನ್ನು ಈ ಮಾತಿನ ಮೂಲಕ ತಿಳಿಸಲಾಗಿದೆ.

೧೧೬

ಕಪಿಲನಾಮಕ ಪರಮಾತ್ಮನ ಸ್ತೋತ್ರವೇ ಈ ಸುಳಾದಿಯ ವಿಷಯವಾಗಿದೆ. ಪ್ರಾತಃ ಕಾಲದಲ್ಲಿ ಕಪಿಲನಾಮಕ ಪರಮಾತ್ಮನ ಸ್ಮರಣೆ ಮಾಡಿದವರಿಗೆ ಆದಿನ ಯಾವ ಕೇಡು ಸಂಭವಿಸುವುದಿಲ್ಲವೆಂದು ತಿಳಿಸಿ ಕಪಿಲನಾಮಕ ಪರಮಾತ್ಮನ ವಿಶೇಷ ಸನ್ನಿಧಾನವಿರುವ ವಸ್ತುಗಳ ಪಟ್ಟಿಯನ್ನು ಈ ಸುಳಾದಿಯಲ್ಲಿ ಕೊಡಲಾಗಿದೆ.

೧೧೭

ಈ ಸುಳಾದಿಯು ದತ್ತಾತ್ರೇಯ ಋಷಿಯನ್ನು ಕುರಿತ ಸ್ತೋತ್ರವಾಗಿದೆ. ದತ್ತಾತ್ರೇಯನು ವಿಷ್ಣುವಿನ ಅವತಾರಗಳಲ್ಲಿ ಒಂದೆನ್ನುತ್ತಾರೆ. ಈತನ ಹೆಸರು ದತ್ತ ಎಂದೇ ಇರುವುದು, ಅತ್ರಿ ಮಹರ್ಷಿಯ ಮಗನಾದ ನಿಮಿತ್ತ ದತ್ತಾತ್ರೇಯ ಎಂದು ಕರೆಯುವುದುಂಟು. ಅನಸೂಯೆ ದತ್ತನ ತಾಯಿ. ಪ್ರಹ್ಲಾದ, ಯದು, ಅಲರ್ಕ, ಕಾರ್ತವೀರ್ಯ ಮುಂತಾದವರಿಗೆ ತತ್ವೋಪದೇಶ ಮಾಡಿದನು

೧೧೮

ಈ ಸುಳಾದಿಯು ಹಯಗ್ರೀವ ರೂಪ ಪರಮಾತ್ಮನ ಸ್ತೋತ್ರವಾಗಿದೆ. ವಿಷ್ಣುವು ಹಯಗ್ರೀವ ರೂಪವನ್ನು ಧರಿಸಿ ವಾದಿರಾಜರಿಗೆ ಪ್ರತ್ಯಕ್ಷವಾದನೆಂದು ಐತಿಹ್ಯವಿದೆ. ಕುದುರೆಯ ಮುಖವನ್ನು ಪಡೆದ ರೂಪವಿದು. ವಾದಿರಾಜರು ದೇವರ ನೈವೇದ್ಯಕ್ಕೆಂದು ಕಡಲೆ, ಬೆಲ್ಲ, ದ್ರಾಕ್ಷಿ, ಕೊಬ್ಬರಿ, ಗೋಡಂಬಿ ಮತ್ತು ತುಪ್ಪ ಮಿಶ್ರಿತವಾದ ಆಹಾರವನ್ನು ತಯಾರಿಸಿ ದೇವರಿಗೆ ನೈವೇದ್ಯ ಮಾಡುತ್ತಿದ್ದರೆಂದೂ ಇದನ್ನು ವಿಷ್ಣುವು ಹಯಗ್ರೀವ ರೂಪದಿಂದ ಬಂದು ಸ್ವೀಕರಿಸುತ್ತಿದ್ದನೆಂದೂ, ಆದ್ದರಿಂದ ಈ ಆಹಾರಕ್ಕೆ ಹಯಗ್ರೀವ ಎಂದೇ ಹೆಸರಾಯಿತೆಂದು ಹೇಳುವುದುಂಟು.

ಹಯಗ್ರೀವ ಎಂಬ ರಾಕ್ಷಸನು ತನ್ನ ಹೆಸರಿನ ವ್ಯಕ್ತಿಯೆ ತನ್ನನ್ನು ಕೊಲ್ಲಬಹುದೆಂಬ ವರವನ್ನು ಪಡೆದಿದ್ದ ನಿಮಿತ್ತ ಅವನ ಉಪಟಳ ಮಿತಿ ಮೀರಿದಾಗ ವಿಷ್ಣುವು ಹಯವದನ ರೂಪದಿಂದ ಆ ರಾಕ್ಷಸನನ್ನು ಕೊಂದನೆಂದು ಪುರಾಣ ಕಥೆಯುಂಟು.

೧೧೯

ಋಷಭನಾಮಕ ಪರಮಾತ್ಮನ ಸ್ತೋತ್ರವಿರುವುದನ್ನು ಈ ಸುಳಾದಿಯಲ್ಲಿ ಕಾಣಬಹುದಾಗಿದೆ. ವಿಷ್ಣುವು ಋಷಭ ಎಂಬ ಹೆಸರಿನ ಮಹರ್ಷಿಯಾಗಿದ್ದನಂತೆ. ಸನ್ಯಾಸಿಯೂ ಅಹುದು ಎನ್ನುತ್ತಾರೆ. ಋಷಭದೇವನು ಅಜಗರ ವೃತ್ತಿಯಿಂದ ಜೀವಿಸಿದನೆನ್ನುತ್ತಾರೆ. ಅಜಗರ ಎಂದರೆ ಹೆಬ್ಬಾವು ಎಂದರ್ಥ. ಹೆಬ್ಬಾವು ಆಹಾರಕ್ಕಾಗಿ ಹುಡುಕಿಕೊಂಡು ಹೋಗುವುದಿಲ್ಲ. ತಾನಿದ್ದಲ್ಲಿಯೇ ಬಾಯನ್ನ ತೆರೆದು ಹತ್ತಿರ ಬಂದ ಪ್ರಾಣಿಗಳನ್ನ ತಿಂದು ತೇಗುವುದು ಇದರ ಸ್ವಭಾವ. ಇದರಂತೆ ಸನ್ಯಾಸಿಯಾದವನು ಆಹಾರಕ್ಕಾಗಿ ಎಲ್ಲಿಯೂ ಹೋಗದೆ ಯಾರನ್ನೂ ಬೇಡದೆ ತಾನಾಗಿ ಬಂದ ಆಹಾರವನ್ನು ಸ್ವೀಕರಿಸಿ ತಪಸ್ಸು ಮಾಡುವ ಸನ್ಯಾಸಿಯನ್ನು ಅಜಗರ ವೃತ್ತಿಯಲ್ಲಿರುವವನು ಎನ್ನುತ್ತಾರೆ.

೧೨೦

ಧನ್ವಂತರೀ ನಾಮಕ ಪರಮಾತ್ಮನ ಸ್ತೋತ್ರವನ್ನು ಈ ಸುಳಾದಿಯಲ್ಲಿ ಕಾಣಬಹುದಾಗಿದೆ. ಆರೋಗ್ಯ ಮತ್ತು ಆಯುರಭಿವೃದ್ಧಿಗಾಗಿ ಧನ್ವಂತರಿ ರೂಪಿಯಾದ ವಿಷ್ಣುವಿನ ಆರಾಧನೆ ಮಾಡುವ ಸಂಪ್ರದಾಯವಿದೆ. ಧನ್ವಂತರಿಯು ತನ್ನ ಕೈಯಲ್ಲಿ ಅಮೃತ ಕಲಶವನ್ನು ಹಿಡಿದಿರುವ ಚಿತ್ರವನ್ನು ಕಾಣುವುದು ಸಾಮಾನ್ಯ.

ಅಸಂಪೂರ್ಣಗೊಳಿಸಲು ವಾಮನನಾಗಿ ಹುಟ್ಟಿ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ದಾನಬೇಡಿ, ಬಲಿಚಕ್ರವರ್ತಿ ದಾನ ನೀಡಲು ಒಪ್ಪಿದ ಮೇಲೆ ತ್ರಿವಿಕ್ರಮನಾಗಿ ಆಕಾಶದೆತ್ತರಕ್ಕೆ ಬೆಳೆದು ಒಂದು ಹೆಜ್ಜೆಯಿಂದ ಭೂಮಂಡಲವನ್ನು, ಮತ್ತೊಂದು ಹೆಜ್ಜೆಯಿಂದ ಬಲಿಗೆದ್ದ ಸುರಲೋಕವನ್ನು ಅಳೆದುಕೊಂಡನು. ಮೂರನೆಯ ಹೆಜ್ಜೆಗೆ ಭೂಮಿ ಎಲ್ಲಿ? ಎಂದಾಗ ಬಲಿಯು ತನ್ನ ತಲೆಯ ಮೇಲೆ ಕಾಲನ್ನಿಡಬೇಕೆಂದು ಬಲಿಯು ಹೇಳುವನು. ತ್ರಿವಿಕ್ರಮನು ಬಲಿಯ ತಲೆಯ ಮೇಲೆ ಕಾಲಿಟ್ಟು ಅವನನ್ನು ಪಾತಾಳ ಲೋಕಕ್ಕೆ ತಳ್ಳಿ ಅಲ್ಲಿ ಅರಮನೆಯನ್ನು ನಿರ್ಮಿಸಿ ಅದರಲ್ಲಿ ಬಲಿಯನ್ನು ಇರಿಸಿದನು. ಬಲಿಗೆ ಇಂದ್ರಸೇನ ಎಂಬ ಮತ್ತೊಂದು ಹೆಸರುಂಟು.

೧೨೫

ಈ ಸುಳಾದಿಯು ಪರಶುರಾಮನನ್ನು ಕುರಿತ ಸ್ತೋತ್ರವಾಗಿದೆ. ವಿಷ್ಣುವಿನ ದಶಾವತಾರಗಳಲ್ಲಿ ಒಂದು ಪರಶುರಾಮಾವತಾರ. ಜಮದಗ್ನಿ ಮತ್ತು ರೇಣುಕೆಯರ ಪುತ್ರನಾಗಿ ಹುಟ್ಟಿ ಉನ್ಮತ್ತರಾದ ಕ್ಷತ್ರಿಯರನ್ನು ಸಂಹರಿಸುವನು. ಇಪ್ಪತ್ತೊಂದು ಬಾರಿ ಕ್ಷತ್ರಿಯರನನ್ನು ಸಂಹರಿಸಿ ಪಿತೃಗಳಿಗೆ ರಕ್ತತರ್ಪಣ ಕೊಟ್ಟನು. ತಂದೆಯ ಆಜ್ಞೆಯಂತೆ ತಾಯಿಯಾದ ರೇಣುಕಾದೇವಿಯನ್ನು ಕೊಂದು ತಂದೆಯನ್ನು ವರಕೊಡಬೇಕೆಂದು ಕೇಳಿ ತಾಯಿಯನ್ನು ಬದುಕಿಸಿಕೊಳ್ಳುವನು. ಕಾರ್ತವೀರ್ಯಾರ್ಜುನನ ಸಾವಿರ ತೋಳುಗಳನ್ನು ಕತ್ತರಿಸಿ ಹಾಕಿದನು. ಈ ಎಲ್ಲ ಕಥಾಂಶಗಳನ್ನು ಈ ಸುಳಾದಿಯಲ್ಲಿ ಸಂಗ್ರಹಿಸಲಾಗಿದೆ.

೧೨೬

ಶ್ರೀರಾಮಾವತಾರದ ಕಥೆಯನ್ನು ಸಂಗ್ರಹಿಸಿರುವ ಸುಳಾದಿ ಇದು. ಇದನ್ನು ಸಂಗ್ರಹರಾಮಾಯಣ ಎಂದೇ ಕರೆಯಬಹುದು. ರಾಮಾವತಾರದ ಅಗತ್ಯದಿಂದ ಆರಂಭಿಸಿ, ರಾಮನು ರಾವಣಾದಿಗಳನ್ನು ಕೊಂದು ಅಯೋಧ್ಯೆಗೆ ಪ್ರವೇಶಿಸುವ ತನಕ ಇರುವ ರಾಮಾಯಣ ಕಥೆಯನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಮೂರುಗುಣರಹಿತ : ಸತ್ವ, ರಜೋ ಮತ್ತು ತಮೋಗುಣಗಳಿಂದ ದೂರನಾದವನು ವಿಷ್ಣು – ರಾಮ.

ಅನಾಲಾಕ್ಷನ ಧನಸ್ಸು : ಶಿವನು ಜನಕ ಮಹಾರಾಜನಿಗೆ ಕೊಟ್ಟಿದ್ದ ಬಿಲ್ಲು ಇದನ್ನು. ಸೀತಾಸ್ವಯಂವರದಲ್ಲಿ ರಾಮನು ಹೆದೆಯೇರಿಸಲು ಯತ್ನಿಸಿದಾಗ ಮುರಿಯಿತು.

ಭೃಗುತನುಜನ್ನಾ ಪೊಕ್ಕುಳಲಿ ದನುಜಸೇರಿಯು : ಪರುಶುರಾಮನೊಡನೆ ರಾಮನು ಯುದ್ಧ ಮಾಡಿ ಪರಶುರಾಮನ ಹೊಕ್ಕುಳಲ್ಲಿ ಸೇರಿಕೊಂಡಿದ್ದ ರಾಕ್ಷಸನನ್ನು ಕೊಂದುಹಾಕಿದನು.

ಮೋಸದ ಅಸುರಿಯ ಮೂಗುಕೊಯ್ದು : ರಾವಣನ ತಂಗಿಯಾದ ಶೂರ್ಪನಖಿಯ ಮೂಗನ್ನು ಕೊಯ್ದದ್ದು.

ಪುರುಹೂತಿ ಮಗನ ಕೊಂದು : ಇಂದ್ರನ ಮಗನಾದ ವಾಲಿಯನ್ನು ರಾಮನು ಕೊಲ್ಲುವನು.

ರವಿಜಾತಗೆ ಪಟ್ಟಗಟ್ಟಿ : ಸೂರ್ಯಪುತ್ರನೆನಿಸಿದ ಸುಗ್ರೀವನಿಗೆ ಕಿಷ್ಕಂಧೆಯ ರಾಜ್ಯ ಪಟ್ಟವನ್ನು ರಾಮ ಕೊಡಿಸಿದನು.

೧೨೭

ಶ್ರೀರಾಮಾವತಾರದ ಸ್ತೋತ್ರವಾದ ಈ ಸುಳಾದಿಯಲ್ಲಿ ರಾಮನ ಮಹಿಮೆಯನ್ನು ಬಣ್ಣಿಸಲಾಗಿದೆ. ಭಗವಂತನ ವಿಶೇಷ ಗುಣಶಕ್ತಿಗಳ ಬಣ್ಣನೆ ಇದೆ. ರಾಮನಾಗಿ ಅವತರಿಸಿದ ವಿಷ್ಣುವು ತನ್ನ ಬದುಕಿನಲ್ಲಿ ನಡೆದು ತೋರಿದ್ದೆಲ್ಲ ಇತರರಿಗೆ ಮಾರ್ಗದರ್ಶನವಾಗಿದೆಯೇ ವಿನಾ ಬೇರೆಯಲ್ಲವೆಂಬುದನ್ನು ದಾಸರು ಸ್ಪಷ್ಟಪಡಿಸಿದ್ದಾರೆ.

ನೀನಾಡಿದ ಲೀಲೆ ತಿರೆಗೆವಶದಲ್ಲಿ : ರಾಮನಾಗಿ ಅವತರಿಸಿ ಮಾಡಿದ ಪ್ರತಿಂಯೊಂದು ಕಾರ್ಯವೂ ಅವನಿಗೆ ಆಟವಾಡಿದಂತೆ, ವನವಾಸ ಮಾಡಿದ್ದರಿಂದಾಗಲೀ, ಸೀತಾಪಹರಣದಿಂದಾಗಲಿ ಅವನಿಗೆ ದುಃಖವಾಗಲಿಲ್ಲ ; ಕಪಟ ನಾಟಕ ಸೂತ್ರಧಾರನ ನಾಟಕಗಳಿವೆಂದು ದಾಸರು ಹೇಳಿದ್ದಾರೆ.

ಹಲುಬಿದೆ ಹೆಂಡತಿಯ ಕಳಕೊಂಡವನಂತೆ : ಸೀತಾಪಹರಣ ವಾದ ಸಂದರ್ಭದಲ್ಲಿ ರಾಮನು ಒಂದೇ ಸಮನೆ ಅತ್ತಿದ್ದು, ದುಃಖಿಸಿದ್ದು ಕೇವಲ ನಾಟಕವಷ್ಟೆ. ನಿತ್ಯಾ ಅವಿಂಯೋಗಿನಿಂಯಾದ ಸೀತೆಯನ್ನು ರಾಮ ಕಳೆದುಕೊಂಡಿರಲಿಲ್ಲ, ರಾವಣ ಒಯ್ದದ್ದು ಸೀತೆಯ ಪ್ರತಿಕೃತಿಯನ್ನು, ನಾಟಕಾರ್ಥವಾಗಿ ರಾಮ ಅತ್ತನೆಂದು ತತ್ವಶಾಸ್ತ್ರ ಹೇಳುವುದನ್ನು ದಾಸರು ಈ ಮಾತಿನ ಮೂಲಕ ಹೇಳಿದ್ದಾರೆ.

೧೨೮

ಉತ್ತರಾದಿಮಠದ ಯತಿವರೇಣ್ಯರಿಂದ ಪೂಜೆಗೊಳ್ಳುತ್ತಿರುವ ದಿಗ್ವಿಜಯ ರಾಮ ವಿಗ್ರಹದ ಇತಿಹಾಸವನ್ನು ಈ ಸುಳಾದಿ ಚಿತ್ರಿಸಿದೆ. ಇದು ದೇವ ಲೋಕದಿಂದ ಮಾನವ ಲೋಕಕ್ಕೆ ಬಂದಿತೆಂದು ದಾಸರು ಹೇಳಿದ್ದಾರೆ. ಸಂಪ್ರದಾಯದಲ್ಲಿ ಹೇಳಲಾಗುವ ಈ ಪ್ರತಿಮೆಯ ಇತಿಹಾಸವನ್ನು ಇಲ್ಲಿ ಬಣ್ಣಿಸಲಾಗಿದೆ

೧೨೯

ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಪರಂಪರೆಯ ಯತಿಗಳಿಂದ ಪೂಜೆಗೊಳ್ಳುತಿರುವ ಮೂಲರಾಮನ ಸ್ತೋತ್ರ ಮಾಡುವ ಸುಳಾದಿ ಇದು. ವಿಜಯದಾಸರ ಕಾಲದಲ್ಲಿ ಮಂತ್ರಾಲಯದ ಮಠಕ್ಕೆ ವಸುಧೇಂದ್ರ ತೀರ್ಥರು ಪೀಠಾಧಿಪತಿಗಳಾಗಿದ್ದರು. ಆದ್ದರಿಂದ ಅವರಿಂದ ಪೂಜೆಗೊಳ್ಳುತ್ತಿದ್ದ ಮೂಲರಾಮನ ಬಣ್ಣನೆ ಇಲ್ಲಿದೆ.

೧೩೦

ವಿಜಯದಾಸರು ಈ ಸುಳಾದಿಯ ಮೂಲಕ ಶ್ರೀ ಕೃಷ್ಣನ ಸ್ತೋತ್ರ ಗೈದಿದ್ದಾರೆ. ಕೃಷ್ಣಾವತಾರದ ಅನೇಕ ಕಥೆಗಳನ್ನು ದೃಷ್ಟಾಂತವಾಗಿತ್ತು ಭಗವಂತನ ಶಕ್ತಿ, ಸಾಮರ್ಥ್ಯ, ಭಕ್ತಿ ವಾತ್ಸಲ್ಯಗಳನ್ನು ಬಣ್ಣಿಸಿದ್ದಾರೆ. ಈ ಸುಳಾದಿಯು ರೂಪಕತಾಳದ ಸಾಹಿತ್ಯ ನಿಂದಾಸ್ತುತಿಯಾಗಿರುವುದನ್ನು ಗುರುತಿಸಬಹುದಾಗಿದೆ.

ರಕ್ಕಸಗಂಜಿ ಸಾಗರದೊಳು ಪುರಬಿಗಿದೆ : ರಾಕ್ಷಸರ ಕಾಟವನ್ನು ತಪ್ಪಿಸಿಕೊಳ್ಳಲು ಕೃಷ್ಣನು ದ್ವಾರಕೆಯಲ್ಲಿ ಅರಮನೆ ಕಟ್ಟಿಕೊಂಡ ಪ್ರಸಂಗ.

ರಕ್ಕಸಗಾಗಿ ವಿಕಾರ ಮೊಗನಾದಿ : ಹಿರಣ್ಯಾಕ್ಷನ ಸಂಹಾರಕ್ಕಾಗಿ ವಿಷ್ಣುವು ವರಾಹಾವತಾರವನ್ನು ತಾಳಿ ವಿಕಾರ ಮುಖವನ್ನು ಹೊಂದಿದ.

ರಕ್ಕಸಗಾಗಿ ಕೋಡಗ ಬಲ ನೆರಹಿದೆ : ರಾಕ್ಷಸನಾದ ರಾವಣನ ಸಂಹಾರಕ್ಕಾಗಿ ರಾಮನು ಕೋತಿಯ ಸೈನ್ಯದ ಸಹಾಯವನ್ನು ಪಡೆದನು.

ಜೋಗಿಯಾಗಿ ಪಾರ್ಥ ಅನುಜೆಯ ಒಯ್ದು : ಅರ್ಜುನನು ಕೃಷ್ಣನ ತಂಗಿಯಾದ ಸುಭದ್ರೆಯನ್ನು ಅಪಹರಿಸಿ ಕೊಂಡು ಹೋಗಲು ಸಂನ್ಯಾಸಿ ವೇಷಧರಿಸಿದ ಪ್ರಸಂಗ.

೧೩೧

ಶ್ರೀಕೃಷ್ಣಾವತಾರದಲ್ಲಿ ಅವನಾಡಿದ ಲೀಲೆಗಳನ್ನು ಚಿತ್ರಿಸುವ ಸುಳಾದಿ ಇದು. ಗೋಪಾಲಕರೊಡನೆ ಕೃಷ್ಣನಾಡಿದ ಆಟಗಳನ್ನು ಇಲ್ಲಿ ವಿಶೇಷವಾಗಿ ವರ್ಣಿಸಲಾಗಿದೆ.

೧೩೨

ಕೃಷ್ಣನ ಚರಿತ್ರೆಯನ್ನು ನೆನೆದು ಸ್ತೋತ್ರಮಾಡುವ ಸುಳಾದಿ ಇದಾಗಿದೆ. ಕೃಷ್ಣ ಜನನ ಸಂದರ್ಭದ ವಿವರಗಳನ್ನು, ಕೃಷ್ಣನು ಬೆಳೆದ ಮೇಲೆ ತೋರಿದ ಸಾಹಸಗಳನ್ನು ಈ ಸುಳಾದಿಯಲ್ಲಿ ಚಿತ್ರಿಸಲಾಗಿದೆ. ಕಂಸನನ್ನು ಕೊಂದ ವಿಚಾರವನ್ನು ವಿಶೇಷವಾಗಿ ವರ್ಣಿಸಲಾಗಿದೆ.

೧೩೩

ಕೈಟಭ ಎಂಬ ರಾಕ್ಷಸನನ್ನು ಸಂಹಾರ ಮಾಡಿದ ಕೃಷ್ಣನ ಕಥೆಯನ್ನು ಜ್ಞಾಪಿಸಿ ಕೊಳ್ಳುವುದರ ಮೂಲಕ ಕೃಷ್ಣ ಸ್ತೋತ್ರ ಮಾಡಿರುವ ಸುಳಾದಿ ಇದು. ಕೃಷ್ಣನನ್ನು ಮೆಚ್ಚಿಸುವ ಪ್ರತಿಜ್ಞೆಯನ್ನು ಮಾಡಿದರೆ ಪ್ರಯೋಜನವಾಗದೆಂದು, ಕೃಷ್ಣನೇ ಕೃಪೆ ತೋರಿದರೆ ಮಾತ್ರ ಅವನ ದರ್ಶನ ಲಾಭವಾಗುವುದೆಂದು ದಾಸರು ಹೇಳಿದ್ದಾರೆ. ಭಗವಂತನ ಆರಾಧನೆ ಮಾಡುವುದರಿಂದ ಭಗವಂತನಿಗೆ ಲಾಭವಾಗಲಿ, ಸಂತೋಷವಾಗಲೀ ಆಗುವುದಿಲ್ಲವೆಂದು ಇದರ ಫಲಗಳನ್ನು ಕೇವಲ ಹರಿದಾಸರು ಮಾತ್ರ ಅನುಭವಿಸುವರೆಂಬುದನ್ನು ಇಲ್ಲಿ ಸ್ಪಷ್ಟ ಪಡಿಸಿದ್ದಾರೆ.

೧೩೪

ಶ್ರೀಕೃಷ್ಣನನ್ನು ಕುರಿತ ಈ ಸುಳಾದಿಯು ಆರಂಭದಲ್ಲಿ ಸ್ತೋತ್ರ ರೂಪವಾಗಿದ್ದರೂ ಎರಡನೆಯ ಚರಣದಲ್ಲಿ ನಿಂದಾಸ್ತುತಿಯಾಗಿ ಪರಿವರ್ತಿತವಾಗಿರುವುದನ್ನು ಕಾಣಬಹುದು. ಕೃಷ್ಣನ ನಡವಳಿಕೆಯಲ್ಲಿ ದೋಷವನ್ನು ಗುರುತಿಸಿ ಟೀಕಿಸುವ ಧೈರ್ಯವನ್ನು ದಾಸರು ಪ್ರಕಟಿಸುವುದರ ಮೂಲಕ ಭಗವಂತನೊಡನೆ ಅವರಿಗಿದ್ದ ಆತ್ಮೀಯತೆಯನ್ನು ವ್ಯಕ್ತಪಡಿಸಿರುವರು.

೧೩೫

ವಿಜಯದಾಸರು ಉಡುಪಿಯ ಶ್ರೀ ಕೃಷ್ಣನನ್ನು ಕುರಿತು ಸಲ್ಲಿಸಿರುವ ಪ್ರಾರ್ಥನಾ ರೂಪದ ಸುಳಾದಿ ಇದಾಗಿದೆ. ಉಡುಪಿಯನ್ನು ರಜತಪೀಠಪುರಿ ಎಂದು ಕರೆದಿರುವುದು ಗಮನಾರ್ಹ.

೧೩೬

ಶ್ರೀಕೃಷ್ಣನಿಗೆ ಮಾಡಿರುವ ಅಲಂಕಾರದ ವರ್ಣನೆ ಈ ಸುಳಾದಿಯಲ್ಲಿದೆ. ಇದರೊಡನೆ ಕೃಷ್ಣನ ಸಾಮರ್ಥ್ಯಗಳನ್ನು ದಾಸರು ಮನದುಂಬಿ ಹಾಡಿದ್ದಾರೆ.

೧೩೭

ಶ್ರೀಕೃಷ್ಣನನ್ನು ಕುರಿತ ಸ್ತೋತ್ರ ರೂಪದ ಸುಳಾದಿಯಾಗಿದ್ದರೂ ಈ ಸುಳಾದಿಯ ಅನೇಕ ಸಾಲುಗಳಲ್ಲಿ ಭಗವಂತನ ದರ್ಶನ ದೊರಕಲಿಲ್ಲವೆಂಬ ದುಃಖ ಘನೀಭೂತಗೊಂಡಿರುವುದನ್ನು ಕಾಣುತ್ತೇವೆ.

೧೩೮

ಗೋವಳೇಶ ಎಂದೇ ಪ್ರಸಿದ್ಧನಾದ ಕೃಷ್ಣನನ್ನು ಕುರಿತ ಸ್ತೋತ್ರವಿದು. ಗುರುರಾಯರೆಂಬುವವರಿಗೆ ಉಂಟಾದ ರೋಗ ನಿವಾರಣೆಗೆಂದು ಈ ಸುಳಾದಿಯನ್ನು ವಿಜಯದಾಸರು ರಚಿಸಿದರೆಂದು ಐತಿಹ್ಯವಿದೆ. ಗುರುರಾಯರು ಕೃಷ್ಣನ ಪರಮ ಭಕ್ತರಾಗಿದ್ದರೆಂಬ ಸೂಚನೆ ಇದರಲ್ಲಿದೆ.

ಮೃತನಾದ ಗುರುಸುತನ ಹಿತವಾಗಿ ತಂದುಯಿತ್ತೆ : ಕೃಷ್ಣನ ಗುರುಗಳಾಗಿದ್ದ ಸಾಂದೀಪನಿ ಆಚಾರ್ಯರ ಮಗನನ್ನು ಪಂಚಜನ ಎಂಬ ರಾಕ್ಷಸನು ಕದ್ದುಕೊಂಡು ಹೋಗಿದ್ದನು. ಕೃಷ್ಣನು ವಿದ್ಯಾಭ್ಯಾಸ ಮುಗಿಸಿದ ಮೇಲೆ ಏನು ಗುರುದಕ್ಷಿಣೆಯನ್ನು ಕೊಡಲಿ? ಎಂದು ಗುರುಗಳನ್ನು ಕೇಳಿದಾಗ ಅವರು ತಮ್ಮ ಮಗನನ್ನು ತಮಗೆ ಕೊಡಿಸಬೇಕೆಂದು ಕೇಳುವರು. ಕೃಷ್ಣನು ಪಂಚಜನ ಎಂಬ ರಾಕ್ಷಸನನ್ನು ಶೋಧಿಸಿ ಹುಡುಕಿ ಕೊಂದು ಹಾಕುವನು. ಆದರೆ ಸಾಂದೀಪನಿಯ ಮಗ ಆ ಹೊತ್ತಿಗೆ ಸತ್ತು ಹೋಗಿದ್ದನು. ಆದ್ದರಿಂದ ಕೃಷ್ಣ ಯಮಲೋಕಕ್ಕೆ ಹೋಗಿ ಗುರುಪುತ್ರನನ್ನು ಬಿಡಿಸಿಕೊಂಡು ಬಂದು ಗುರುಗಳಿಗೆ ಒಪ್ಪಿಸಿದನಂತೆ.

೧೩೯

ಶ್ರೀಕೃಷ್ಣನು ಗೋಪಾಲಕರೊಡನೆ ಹಾಗೂ ಗೋಪಿಕಾ ಸ್ತ್ರೀಯರೊಡನೆ ಆಟವಾಡಿದ ಪ್ರಸಂಗಗಳನ್ನು ದಾಸರು ಈ ಸುಳಾದಿಯಲ್ಲಿ ವಿವರಿಸಿದ್ದಾರೆ. ಆ ಕಾಲದ ಬಾಲಕರ ಆಟಗಳ ಸ್ವರೂಪದ ಬಗ್ಗೆ ಈ ಸುಳಾದಿ ಬೆಳಕು ಚೆಲ್ಲುತ್ತದೆ. ಗೋಪಾಲಕರು ಗೋವುಗಳನ್ನು ಮೇಯಿಸಲು ಹೇಗೆ ಸಿದ್ಧರಾಗುತ್ತಿದ್ದರೆಂಬ ದೃಶ್ಯವು ಇಲ್ಲಿದೆ.

೧೪೦

ಕೃಷ್ಣನನ್ನು ಕುರಿತ ಈ ಸುಳಾದಿಯಲ್ಲಿ ಕೃಷ್ಣನ ವೈಭವೋಪೇತವಾದ ಅಲಂಕಾರದ ವರ್ಣನೆಯೊಂದಿಗೆ ಪರಾತ್ಪರ ಪುರುಷನಾದ ಅವನು ಸಾಮಾನ್ಯ ಜನರೊಡನೆ ಹೇಗೆ ಬೆರೆತು ಸಾಮಾನ್ಯ ವ್ಯಕ್ತಿಯಾಗಿ ತೋರುತ್ತಿದ್ದನೆಂಬುದರ ಚಿತ್ರಣವಿದೆ.

ಕರಡಿಯ ಮಗಳನು ಕೂಡಿದ ಬಗೆ ಏನೊ : ಜಾಂಬುವತಿಯನ್ನು ಮದುವೆ ಮಾಡಿಕೊಂಡ ಪ್ರಸಂಗವನ್ನು ಈ ಸಾಲು ಸೂಚಿಸುತ್ತಿದೆ.

ವೇದಗಳ ಸೆರೆ ಬಿಡಿಸಿದ ಧೀರ : ಮಧುಕೈಟಭರೆಂಬ ರಾಕ್ಷಸರು ವೇದಗಳ ನಾಶಕ್ಕಾಗಿ ಪ್ರಯತ್ನಿಸಿದಾಗ ವಿಷ್ಣುವು ಅವರನ್ನು ಕೊಂದು ವೇದಗಳನ್ನು ರಕ್ಷಿಸಿದನು.

೧೪೧

ಕೃಷ್ಣನು ಹದಿನಾರು ಸಾವಿರ ಸ್ತ್ರೀಯರನ್ನು ವಿವಾಹವಾಗಿದ್ದರೂ ಸತತ ಬ್ರಹ್ಮಚಾರಿ ಎಂಬ ಹೆಸರನ್ನೇ ಪಡೆದಿರುವನು. ಈ ವಿಚಾರವನ್ನು ತಿಳಿಸಲಾರಂಭಿಸುವ ಈ ಸುಳಾದಿಯಲ್ಲಿ ವಿಷ್ಣುವಿನ ಮತ್ತು ಕೃಷ್ಣನ ಶಕ್ತಿಸಾಮರ್ಥ್ಯಗಳನ್ನು ಬಣ್ಣಿಸುವ ನಾನಾ ಪ್ರಸಂಗಗಳನ್ನು ಸೂಚಿಸಿ ಕೃಷ್ಣ ಸ್ತೋತ್ರವನ್ನು ಮಾಡಲಾಗಿದೆ.

ಶಿತವಾಹನಗೊಲಿದು ರಣದೊಳು ಸುಧನ್ವನ್ನ ಹತಮಾಡಿಸಿದ್ದು : ಅರ್ಜುನನ್ನು ಅಭಿವೃದ್ಧಿಗೆ ತರ ಬಯಸಿ ಮಹಾ ಪರಾಕ್ರಮಿಯಾದ ಸುಧನ್ವನು ಅರ್ಜುನನಿಂದ ಹತನಾಗುವ ಹಾಗೆ ಕೃಷ್ಣನು ಮಾಡುತ್ತಾನೆ. ಹಂಸಧ್ವಜನ ಮಗನಾದ ಸುಧನ್ವನು ಪಾಂಡವರ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿ ಹಾಕಿದ್ದನು.

೧೪೨

ಉಡುಪಿಯ ಕೃಷ್ಣನನ್ನು ಕುರಿತ ಸುಳಾದಿ ಇದಾಗಿದೆ. ಉಡುಪಿಯನ್ನು ವಿಧುಕ್ಷೇತ್ರ ಎಂದು ಕರೆಯಲಾಗಿದೆ. ಇದು ಒಂದು ಪ್ರಾರ್ಥನಾ ರೂಪದ ಸುಳಾದಿಯಾಗಿದೆ. ಹರಿಯಲ್ಲಿ ಮತ್ತು ಹರಿಭಕ್ತರಲ್ಲಿ ಭಕ್ತಿಯು ಸ್ಥಾಯಿಯಾಗುವಂತೆ ಕರುಣಿಸಬೇಕೆಂದು ಕೇಳಿ ಕೊಂಡಿದ್ದಾರೆ. ಇಲ್ಲಿ ಭಗವಂತನ ಸೇವೆಗಿಂತ ಭಕ್ತರ ಸೇವೆ ಮಾಡುವ ಹಂಬಲವನ್ನ ದಾಸರು ತೋಡಿಕೊಂಡಿದ್ದಾರೆ.

೧೪೭

ಲಕ್ಷ್ಮಿ ಮತ್ತು ವಿಠಲರನ್ನು ಕುರಿತ ಸ್ತೋತ್ರವಿದು. ಉರಿಯೊಳು ಬಿದ್ದ ಪತಂಗದಂತೆ ತಮ್ಮ ಸ್ಥಿತಿಯಾಗಿದೆ ಎಂದು ದಾಸರು ಹೇಳಿ ಭಕ್ತಿ ಭಿಕ್ಷೆಯನ್ನು ಬೇಡಿದ್ದಾರೆ.

೧೪೮

ವಾಯುದೇವರ ಸ್ತೋತ್ರವಿದು. ವಾಯುದೇವರು ಜಗತ್ತಿನಲ್ಲಿ ಹನುಮ, ಭೀಮ, ಮತ್ತು ಮಧ್ವಾಚಾರ್ಯನಾಗಿ ಮೂರು ಅವತಾರಗಳನ್ನೆತ್ತಿದರು. ಈ ಮೂರಾವತಾರಗಳಲ್ಲಿ ಮಾಡಿದ ಕೆಲವು ಪ್ರಸಂಗಗಳನ್ನು ದಾಸರು ಈ ಸುಳಾದಿಯಲ್ಲಿ ಸೂಚಿಸಿದ್ದಾರೆ.

ಕಾಳಕೂಟವ ಭುಂಜಿಸಿ: ದೇವತೆಗಳು ಮತ್ತು ರಾಕ್ಷಸರು ಅಮೃತವನ್ನು ಪಡೆಯಲು ಕ್ಷೀರ ಸಮುದ್ರವನ್ನು ಮಥಿಸಿದಾಗ ಉಂಟಾದ ವಿಷದಿಂದ ದೇವತೆಗಳು ಸಾಯುವ ಸ್ಥಿತಿ ಉಂಟಾಯಿತು. ಆಗ ವಾಯುದೇವ ಕಾಳಕೂಟ ವಿಷವನ್ನು ಕುಡಿದು ಜೀರ್ಣಿಸಿಕೊಂಡರು.

ವಾಯುರ್ವೈ ಬ್ರಹ್ಮಾ : ಇಂದಿನ ಕಲ್ಪದಲ್ಲಿ ಯಾರು ವಾಯುದೇವನಾಗಿರುವರೋ ಅವರು ಮುಂದಿನ ಕಲ್ಪದಲ್ಲಿ ಬ್ರಹ್ಮ ಪಟ್ಟವನ್ನು ಪಡೆಯುವರೆಂದು ಈ ವಾಕ್ಯ ಹೇಳುತ್ತಿದೆ.

ಹನುಮಗೆ ಮನಜಸಂಭವಗೆ ಅಭೇದ : ಹನುಮಂತ ವಾಯುದೇವರ ಅವತಾರವಾಗಿದ್ದು, ವಾಯುದೇವರು ಬ್ರಹ್ಮನಿಗೆ ಸಮಾನವಾದ ರಕ್ಷೆಯಲ್ಲಿರುವರೆಂದು ದ್ವೈತ ಸಿದ್ದಾಂತ ತಿಳಿಸಿರುವುದರಿಂದ ಇವರಿಬ್ಬರ ಸ್ಥಾನದಲ್ಲಿ ಭೇದವಿಲ್ಲ.

ಮಡಿದ ಕಪಿಗಳನೆಬ್ಬಿಸಿ : ರಾವಣನ ಸೈನ್ಯ ಕಪಿಗಳನ್ನು ಸಂಹಾರ ಮಾಡಿ ಲಕ್ಷ್ಮಣನು ಮೂರ್ಛಾಕ್ರಾಂತನಾದ ಸಂದರ್ಭದಲ್ಲಿ ಹನುಮಂತನು ಸಂಜೀವ ಪರ್ವತವನ್ನು ತಂದಾಗ ಎಲ್ಲ ಕಪಿಗಳು ಬದುಕಿಕೊಂಡವು.

೧೪೯

ಈ ಸುಳಾದಿಯು ವಾಯುದೇವರನ್ನು ಕುರಿತ ಸ್ತೋತ್ರ ವಾಗಿದೆ. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಪಂಚಪ್ರಾಣ ರೂಪಿಯಾಗಿರುವವರು ವಾಯುದೇವರೆಂಬುದನ್ನು ದಾಸರು ಇಲ್ಲಿ ವಿವರಿಸಿದ್ದಾರೆ ಕಣ್ಣು, ಕಿವಿ ಮೊದಲಾದ

ಇಂದ್ರಿಯಗಳು ತಟಸ್ಥವಾದರೂ ಮನುಷ್ಯ ಸಾಯುವುದಿಲ್ಲವೆಂದೂ, ಉಸಿರಾಟ ನಿಂತರೆ ಸತ್ತಂತೆಂಬುದನ್ನು ದಾಸರು ಹೇಳಿ ಪ್ರಾಣದೇವರು ಇತರ ತತ್ವಾಭಿಮಾನಿ ದೇವತೆಗಳಿಗಿಂತ ಹಿರಿಯರೆಂಬುದನ್ನು ವಿವರಿಸಿದ್ದಾರೆ.

೧೫೦

ಮುಖ್ಯವಾಗಿ ಹನುಮಂತನ ಸ್ತೋತ್ರ ರೂಪದ ಸುಳಾದಿ ಇದು. ಈ ಸುಳಾದಿಯಲ್ಲಿ ರಾಮಾಯಣದ ಕಥೆಯಲ್ಲಿ ಹನುಮಂತನು ತೋರಿದ ಪವಾಡ ಸದೃಶ ಕಥೆಗಳ ಸಂಗ್ರಹವಿದೆ. ಜೊತೆಗೆ ಮೂಲ ಮುಖ್ಯ ಪ್ರಾಣನ ಕಥಾ ಪ್ರಸಂಗಗಳನ್ನು, ಭೀಮಾವತಾರದ ಕಥೆಗಳನ್ನು ಸೂಚಿಸಿದ್ದಾರೆ.

ರೋಮರೋಮಕೆ ಕೋಟಿಲಿಂಗ ಉದುರಿಸಿದವನೆ : ಧರ್ಮರಾಯನು ರಾಜಸೂಯಯಾಗಕ್ಕೆಂದು ಪುರುಷಾಮೃಗವನ್ನು ತರಲು ಭೀಮನೊಡನೆ ಹೋದಾಗ ದಾರಿಯಲ್ಲಿ ಹನುಮಂತನಿಂದ ಅವನ ದೇಹದ ಕೂದಲುಗಳನ್ನು ಪಡೆದನೆಂದು, ಅದನ್ನು ಭೀಮನು ಹಸ್ತಿನಾವತಿಗೆ ತರುವಾಗ ದಾರಿಯಲ್ಲಿ ಕೂದಲು ಉದುರುತ್ತಾ ಬಂದಿತೆಂದು, ಹೀಗೆ ಉದುರಿದ ಒಂದೊಂದು ಕೂದಲಿನಿಂದಲೂ ಲಿಂಗಗಳು ಹುಟ್ಟಿ ಕೊಂಡವೆಂದು ಕಥೆಯುಂಟು. ಪುರುಷಾಮೃಗವು ಈ ಲಿಂಗಗಳಿಗೆ ಪೂಜಿಸುತ್ತಾ ಹಸ್ತಿನಾವತಿಗೆ ಬಂದಿತಂತೆ.

೧೫೧

ಮುಖ್ಯಪ್ರಾಣದೇವರು ಭೂಲೋಕದಲ್ಲಿ ಹನುಮ, ಭೀಮ, ಮಧ್ವಾಚಾರ್ಯರಾಗಿ ಅವತರಿಸಿದಾಗ ಮಾಡಿದ ಕಾರ್ಯಗಳ ಸ್ಮರಣೆಯೊಡನೆ ಸ್ತೋತ್ರ ಗೈದಿರುವ ಸುಳಾದಿ ಇದು.

ವನದೊಳು ಅಸುರೆಯ ಬಿಗಿದಪ್ಪಿದ ಹಸ್ತ : ಭೀಮ ಸೇನನು ಕಾಡಿನಲ್ಲಿ ಹಿಡಂಬಿಯನ್ನ ಪ್ರೇಮಿಸಿದ ಪ್ರಸಂಗವನ್ನು ಇಲ್ಲಿ ಸೂಚಿಸಲಾಗಿದೆ.

ಶಿಶುವಾಗಿ ಹುರುಳಿಗುಗ್ಗರಿ ಸವಿದ ಹಸ್ತ : ಮಧ್ವಾಚಾರ್ಯರಿಗೆ ಅವರ ತಾಯಿತಂದೆಗಳು ಇಟ್ಟ ಹೆಸರು ವಾಸುದೇವ ಎಂದು. ವಾಸುದೇವ ಮಗುವಾಗಿರುವಾಗ ಹಸಿವೆ ಎಂದು ಅತ್ತನು. ಆಗ ವಾಸುದೇವನ ಅಕ್ಕ ಆ ಮಗುವಿಗೆ ಹುರುಳಿಯಿಂದ ತಯಾರಿಸಿದ ಗುಗ್ಗರಿಯನ್ನು ಯಥೇಚ್ಚವಾಗಿ ತಿನ್ನಿಸಿದಳು. ಅದು ಜೀರ್ಣಗೊಂಡಿದ್ದು ಅಚ್ಚರಿಯ ಸಂಗತಿ.

ತಿಂತ್ರಣಿಬೀಜದಿ ಸಾಲ ತಿದ್ದಿದ ಹಸ್ತಾ : ವಾಸುದೇವನ (ಮಧ್ವಾಚಾರ್ಯ ಮೂಲ ಹೆಸರು) ತಂದೆ ಅಪಾರವಾಗಿ ಸಾಲಮಾಡಿದ್ದರು. ಸಾಲಕೊಟ್ಟವನು

ಒಂದು ದಿನ ಮನೆಗೆ ಬಂದು ಹಣವನ್ನು ಬಡ್ಡಿ ಸಮೇತ ಕೊಡಬೇಕೆಂದು ಗಲಾಟೆಮಾಡಿದಾಗ ವಾಸುದೇವ ಮನೆಯಲ್ಲಿದ್ದ ಹುಣಿಸೆ ಬೀಜವನ್ನು ಸಾಲಿಗನಿಗೆ ಕೊಟ್ಟನಂತೆ. ಅದು ಬಂಗಾರದ ನಾಣ್ಯಗಳಾಗಿ ಪರಿವರ್ತಿತಗೊಂಡ ನಿಮಿತ್ತ ಸಾಲ ತೀರಿತೆಂದು ತೃಪ್ತನಾಗಿ ತೆರಳಿದನೆಂದು ಮಧ್ವವಿಜಯದಲ್ಲಿ ಹೇಳಲಾಗಿದೆ

ಮಣಿಗಣದಿಂದ ರಾಮನ ಎಣಿಸುವ ಹಸ್ತಾ : ಹನುಮಂತನು ಹಗಲಿರುಳು ಶ್ರೀರಾಮನ ಜಪವನ್ನು ಮಾಡುತ್ತಿರುವನೆಂದು ಈ ವಾಕ್ಯ ಹೇಳುತ್ತಿದೆ.

೧೫೨

ವಾಯುದೇವರ ಸ್ತೋತ್ರವಾದ ಈ ಸುಳಾದಿಯಲ್ಲಿಯೂ ಮೂರಾವತಾರದ ಕಥಾ ಪ್ರಸಂಗಗಳನ್ನು ಉಲ್ಲೇಖಿಸಲಾಗಿದೆ.

ಕಂಜಸಖನೆಡೆಗೆ ಹಾರಿದುದೀ ಚರಣ : ಹನುಮಂತನು ಅಂಜನಾದೇವಿಯ ಮಗನಾಗಿ ಹುಟ್ಟಿದ ಮೇಲೆ ಸೂರ್ಯೋದಯವನ್ನು ಒಮ್ಮೆ ನೋಡಿ ಆಕಾಶದಲ್ಲಿ ಹಣ್ಣಿದೆ ಎಂದು ಭಾವಿಸಿ ಸೂರ್ಯನನ್ನು ಹಿಡಿಯಲು ಗಗನಕ್ಕೆ ಹಾರಿದನಂತೆ.

ಕಂಜಮಿತ್ರನ ಸುತನ ಕರೆದು ಮನ್ನಿಸಿ ಅವನ ಅಂಜಿಕೆಯನು ಬಿಡಿಸಿ ಎರಗಿಸಿಕೊಂಡ ಚರಣ : ಕಂಜಮಿತ್ರ ಎಂದರೆ ಸೂರ್ಯ. ಇವನ ಮಗ ಎಂದರೆ ಸುಗ್ರೀವನನ್ನು ಮನ್ನಿಸಿ ವಾಲಿಯಿಂದ ಸುಗ್ರೀವನಿಗೆ ಉಂಟಾದ ಭೀತಿಯನ್ನು ತಪ್ಪಿಸಿದವನು ಹನುಮಂತ.

ಝುಂಝಾನಿಲನಂತೆ ದೈತ್ಯ ಪಟ್ಟಣ ಪೊಕ್ಕು ಕಂಜಮುಖಿ ಗೋಸುಗ ಸಂಚರಿಸಿದ ಚರಣ : ಲಂಕಾಪಟ್ಟಣವನ್ನ ಗಾಳಿಯಂತೆ ಸುಲಭವಾಗಿ ಪ್ರವೇಶಿಸಿ ಸೀತೆಯನ್ನು ಪತ್ತೆ ಮಾಡಲು ಯತ್ನಿಸಿದ ಕಥಾ ಸೂಚನೆ ಇಲ್ಲಿದೆ.

೧೫೩

ಹನುಮ, ಭೀಮಾವತಾರಗಳ ಅನೇಕ ಪ್ರಸಂಗಳನ್ನು ಸೂಚಿಸುವ ಈ ಸುಳಾದಿಯಲ್ಲಿ ಸಕಲ ದೇವರಿಗೂ ಗುರುವೆನಿಸಿದ ವಾಯು ದೇವರ ಕೃಪೆಯಿಂದ ಹರಿಯ ಕೃಪೆಯನ್ನು ಪಡೆಯಲಾಗದಿರುವ ತತ್ವವನ್ನು ದಾಸರು ಮನಸ್ಸಿನಲ್ಲಿಟ್ಟುಕೊಂಡು ಏನೇ ಆದರೂ ಪ್ರಾಣದೇವರ ಪಾದಭಕ್ತಿಯನ್ನು ತೊರೆಯುವುದಿಲ್ಲವೆಂದು ಹೇಳಿದ್ದಾರೆ.

೧೫೪

ಇದು ಭೀಮಸೇನನ ಸ್ತೋತ್ರವಾಗಿದೆ. ಭೀಮನಾಗಿ ಅವತರಿಸಿದಾಗ ತೋರಿದ ಸಾಹಸಗಳ ಕಥಾ ಸೂಚನೆ ಇಲ್ಲಿದೆ.

ವಿಷದ ಲಡ್ಡುಗೆ ಸವಿದು ದಕ್ಕಿಸಿ ಕೊಂಡ : ದುರ್ಯೋಧನನು ಭೀಮನನ್ನು ಕೊಲ್ಲಿಸಲು ವಿಷಪೂರಿತವಾದ ಲಡ್ಡುಗಳನ್ನು ಭೀಮನಿಗೆ ತಿನ್ನಿಸುವನು. ಆದರೆ ಭೀಮನ ಇದರಿಂದ ಸಾಯಲಿಲ್ಲ.

ಪದತಳದಿಂದ ಒರಿಸಿ...............ಎದಿರಾರೀತಗೆ : ಭೀಮಸೇನನು ಕುರುಕ್ಷೇತ್ರದಲ್ಲಿ ದುಶ್ಯಾಸನನನ್ನು ಕೊಂದು ಅವನ ಕರುಳನ್ನ ಬಸಿದು ರಕ್ತವನ್ನು ಕುಡಿದು ಹಲ್ಲುಗಳನ್ನು ಕಿತ್ತಿ ದ್ರೌಪದಿಯ ಕೇಶವನ್ನು ಬಾಚಿ ರಕ್ತ ತೈಲವನ್ನು ಲೇಪಿಸಿದ ಕಥೆ ಇಲ್ಲಿದೆ.

೧೫೫

ವಾಯುದೇವರ ಅವತಾರರೆಂದೇ ಪ್ರಸಿದ್ಧರಾದ ಮಧ್ವಾಚಾರ್ಯರನ್ನು ಕುರಿತ ಸ್ತೋತ್ರವಿದು. ಮಧ್ವಾಚಾರ್ಯರು ಹರಿ ಸರ್ವೋತ್ತಮತ್ವವನ್ನು ಹೇಗೆ ಸ್ಥಾಪಿಸಿದರೆಂಬುದನ್ನು ವಿವರಿಸುವ ಉದ್ದೇಶದಿಂದ ಇತರ ಮತಗಳು ದೇವರ ಸ್ವರೂಪವನ್ನು ಹೇಗೆ ತಿಳಿಸಿವೆ ಎಂಬುದನ್ನ ದಾಸರು ಈ ಸುಳಾದಿಯಲ್ಲಿ ಸಂಗ್ರಹಿಸಿದ್ದಾರೆ.

ಇಪ್ಪತ್ತೊಂದು ಕುಭಾಷ್ಯವ ರಚಿಸಿರೆ : ಮಧ್ವಾಚಾರ್ಯರು ನಿರಾಕರಿಸಿದ್ದು ಇಪ್ಪತ್ತೊಂದು ಮತಗಳನ್ನು ; ಈ ಮತಗಳನ್ನು ಸ್ಥಾಪಿಸಿದವರು ಕ್ರಮವಾಗಿ ಭಾರತೀವಿಜಯ, ಸಂವಿದಾನಂದ, ಬ್ರಹ್ಮಘೋಷ, ಶತಾನಂದ, ಉದ್ವರ್ತವಿಜಯ, ರುದ್ರಭಟ್ಟ, ವಾಮನ, ಯಾದವ ಪ್ರಕಾಶ, ರಾಮಾನುಜ, ಭರ್ತ್ಯ ಪ್ರಪಂಚ, ಧ್ರವಿಡ, ಬ್ರಹ್ಮದತ್ತ, ಭಾಸ್ಕರ, ಪಿಶಾಚಿ, ವೃತ್ತಿಕಾರಕ, ವಿಜಯಭಟ್ಟ, ವಿಷ್ಣುಕ್ರಾಂತ, ವಾದೀಂದ್ರ, ಮಾಧವದಾಸ, ಶಂಕರ ಎಂಬ ಆಚಾರ್ಯರು.

೧೫೬

ಟೀಕಾಚಾರ್ಯರೆಂದೆ ಖ್ಯಾತರಾದ ಜಯತೀರ್ಥರನ್ನು ಕುರಿತ ಸ್ತೋತ್ರರೂಪದ ಸುಳಾದಿ ಇದು. ಉತ್ತರಾದಿ ಮಠದ ಪರಂಪರೆಯಲ್ಲಿ ಬಂದು ಯತಿವರೇಣ್ಯರಾದ ಜಯತೀರ್ಥರನ್ನು ಇಂದ್ರಾಂಶ ಸಂಭೂತರೆಂದು ಭಾವಿಸುವರು. ಮಳಖೇಡ (ಗುಲಬರ್ಗಾ ಜಿಲ್ಲೆ) ದಲ್ಲಿ ಇರುವ ಬೃಂದಾವನವಿದೆ. ಮಧ್ವಾಚಾರ್ಯರ ಎಲ್ಲ ಗ್ರಂಥಗಳಿಗೂ ಟೀಕೆಗಳನ್ನು ಇವರು ಬರೆದ ನಿಮಿತ್ತ ಇವರು ಟೀಕಾಚಾರ್ಯರೆಂದೇ ಖ್ಯಾತರಾಗಿದ್ದಾರೆ.

ರಾವುತರಾಗಿದ್ದ ಜಯತೀರ್ಥರ ಕಂಡೆ : ಜಯತೀರ್ಥರು ಪೂರ್ವಾಶ್ರಮದಲ್ಲಿ ಕುದುರೆಯ ಮೇಲೆ ಕುಳಿತು ಹೋಗುತ್ತಿರುವಾಗ ಬಾಯಾರಿಕೆಯಾಯಿತು. ಆಗ ಒಂದು ನದಿಯ ಬಳಿ ಕುದುರೆಯ ಮೇಲೆಯೇ ಸಾಗಿ ಕುದುರೆ ನೀರು ಕುಡಿಯುವಂತೆ ನದಿಗೆ ಬಾಯಿಹಚ್ಚಿ ನೀರು ಕುಡಿದರಂತೆ.

ಲಯವಿವರ್ಜಿತವಾದ ವೈಕುಂಠ : ಪ್ರಳಯ ಕಾಲದಲ್ಲಿ ವೈಕುಂಠ ಲೋಕ ನಾಶವಾಗದೆಂದು ತಾತ್ಪರ್ಯ.

ಪಾವಿನ ಪರಿಯಿಂದ ಇಲ್ಲಿ ಇರುತಿಪ್ಪ : ಜಯತೀರ್ಥರು ಇಂದ್ರಾಂಶ ಸುಭೂತರಾಗಿರುವುದರೊಡನೆ ಶೇಷಾವೇಶವನ್ನು ಹೊಂದಿರುವರೆಂಬದನ್ನು ಈ ವಾಕ್ಯ ತಿಳಿಸುತ್ತದೆ.

ಅಷ್ಟಕರ್ತೃತ್ವ ಸ್ಥಾಪಿಸಿದ ಧೀರಾ : ವಿಷ್ಣುವಿಗೆ ಅಷ್ಟಕರ್ತೃತ್ವ ಗಳುಂಟೆಂಬುದನ್ನು ಜಯತೀರ್ಥರು ವಿಶೇಷವಾಗಿ ಪ್ರಮಾಣಮಾಡಿ ತೋರಿಸಿದರೆಂದು ತಾತ್ಪರ್ಯ. ಸೃಷ್ಟಿ, ಸ್ಥಿತಿ, ಲಯ , ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳನ್ನುಂಟು ಮಾಡುವುದೇ ಅಷ್ಟಕರ್ತೃತ್ವ.

೧೫೭

ನರಹರಿತೀರ್ಥರಿಂದ ಕನ್ನಡದಲ್ಲಿ ಆರಂಭಗೊಂಡ ಸಂಕೀರ್ತನೆ ಸಾಹಿತ್ಯ (ದಾಸ ಸಾಹಿತ್ಯ) ತಾತ್ಕಾಲಿಕವಾಗಿ ಸ್ಥಗಿತ ಗೊಂಡಿದ್ದನ್ನು ಗುರುತಿಸಿ ದಾಸ ಸಾಹಿತ್ಯ ಪರಂಪರೆಯನ್ನು ಪುನಶ್ಚೇತನಗೊಳಿಸಿದ ಶ್ರೀಪಾದರಾಯರ ಸ್ತೋತ್ರವಿದು. ಶ್ರೀ ಪಾದರಾಜರನ್ನು ಧ್ರುವಾಂಶಸಂಭೂತರೆಂದು ಹೇಳುವುದುಂಟು. ಇವರು ಶ್ರೀರಂಗದಲ್ಲಿ ವಿದ್ಯಾಭ್ಯಾಸ ಮಾಡಿ ಕೋಲಾರದ ಬಳಿ ಇರುವ ಮುಳುಬಾಗಿಲಿನಲ್ಲಿ ನೆಲೆಸಿದರು. ಮುಳುಬಾಗಿಲಿನಲ್ಲಿ ಇವರ ಬೃಂದಾವನ ಇದೆ.

೧೫೮

ಶ್ರೀಪಾದರಾಜರ ಶಿಷ್ಯರಾರ ಶ್ರೀವ್ಯಾಸರಾಜರ ಸ್ತೋತ್ರವಿದು. ವ್ಯಾಸರಾಜರು ಬನ್ನೂರಿನಲ್ಲಿ ಹುಟ್ಟಿ, ಶ್ರೀಪಾದರಾಜರಲ್ಲಿ ವಿದ್ಯಾಭ್ಯಾಸ ಮಾಡಿದರಲ್ಲದೆ ಅಬ್ಬೂರಿನ ಬ್ರಹ್ಮಣ್ಯ ತೀರ್ಥರಿಂದ ಪಾಲನೆಯನ್ನು ಹೊಂದಿದರೆಂಬ ಐತಿಹಾಸಿಕ ವಿಚಾರಗಳನ್ನು ಈ ಸುಳಾದಿಯಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಪ್ರಹ್ಲಾದರೇ ವ್ಯಾಸರಾಜರಾಗಿಯೂ, ಅನಂತರ ಶ್ರೀ ರಾಘವೇಂದ್ರ ಸ್ವಾಮಿಗಳಾಗಿಯೂ ಜನ್ಮ ತಾಳಿದರೆಂಬುದನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

೧೫೯

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ವಾದಿರಾಜ ಮಠಕ್ಕೆ ಆ ಹೆಸರನ್ನು ತಂದಿತ್ತ ಶ್ರೀ ವಾದಿರಾಜರನ್ನು ಕುರಿತ ಸ್ತೋತ್ರವಿದು. ವಾದಿರಾಜರು ಸಂಸ್ಕೃತ ಭಾಷೆಯಲ್ಲಿ ಗ್ರಂಥಗಳನ್ನು ರಚಿಸುವುದರೊಡನೆ ಕನ್ನಡ ಹರಿದಾಸ ಸಾಹಿತ್ಯವನ್ನು ಮುಂದುವರಿಸಿದರು. ಇವರು ಸೋದೆಯಲ್ಲಿ ನೆಲೆಸಿದ್ದರು. ಮುಂದಿನ ಕಲ್ಪದಲ್ಲಿ ಇವರು ಬ್ರಹ್ಮ ಪಟ್ಟವನ್ನು ಹೊಂದುವರೆಂದು ಹೇಳುತ್ತಾರೆ. ಇವರು ಪ್ರತಿ ನಿತ್ಯ ದೇವರಿಗೆ ನಿವೇದಿಸುತ್ತಿದ್ದ ಹಯಗ್ರೀವವನ್ನು ಭಗವಂತನು ಸಾಕ್ಷಾತ್ತಾಗಿ ಕುದುರೆಯ ರೂಪದಲ್ಲಿ ತಿಂದುಹೋಗುತ್ತಿದ್ದನೆಂದು ಐತಿಹ್ಯವಿದೆ. ಇವರನ್ನು ಋಜಗಣಸ್ಥರು ಎನ್ನುತ್ತಾರೆ.

ಘನವಾಗಿ ಶಿಕ್ಷಿಪ ಇನಕುಲೋದ್ಭವ : ಯಾರು ವಾದಿರಾಜರನ್ನು ಸಾಮಾನ್ಯರೆಂದು ಭಾವಿಸುವರೋ ಅಂಹವರನ್ನು ಸೂರ್ಯನ ಪುತ್ರನಾದ ಶನಿಯು ಶಿಕ್ಷಿಸುವನೆಂದು ದಾಸರು ಹೇಳಿದ್ದಾರೆ.

೧೬೦

ಪುರಂದರದಾಸರನ್ನು ಕುರಿತ ಸ್ತೋತ್ರ ಸುಳಾದಿ ಇದು. ವಿಜಯದಾಸರು ಪುರಂದದಾಸರಿಂದ ಸ್ವಪ್ನದಲ್ಲಿ ಅಂಕಿತವನ್ನು ಪಡೆದು ಉಧ್ಧೃತರಾದರು ಅದ್ದರಿಂದ ದಾಸರು. ತಮ್ಮ ಕೃತಜ್ಞತೆಗಳನ್ನು ತುಂಬ ಭಕ್ತಿಯಿಂದ ವ್ಯಕ್ತಪಡಿಸಿರುವರು. ಪುರಂದರದಾಸರು ನಾರಾದಾಂಶ ಸಂಭೂತರೆಂದು ಪ್ರಸಿದ್ಧರಾಗಿದ್ದಾರೆ.

೧೬೧

ವಿಜಯದಾಸರು ತಮ್ಮ ಗುರುಗಳಾದ ಪುರಂದರದಾಸರನ್ನು ಕುರಿತು ಬರೆದಿರುವ ಮತ್ತೊಂದು ಸ್ತೋತ್ರ ರೂಪ ಸುಳಾದಿ ಇದಾಗಿದೆ. ಪುರಂದರ ದಾಸರ ಭಕ್ತಿಯನ್ನು ಇಲ್ಲಿ ಹೊಗಳಲಾಗಿದೆ. ಪುರಂದರದಾಸರು ವಿಜಯನಗರದ ಸಾರ್ವಭೌಮ ಕೃಷ್ಣದೇವರಾಯನಿಂದ ನಾನಾ ಬಗೆಯ ಸನ್ಮಾನಗಳನ್ನು ಪಡೆಯಬಹುದಾಗಿದ್ದರೂ ಅದನ್ನು ನಿರಾಕರಿಸಿ ಭಗವದ್ಭಕ್ತಿಯನ್ನು ಬೆಳೆಸಿಕೊಂಡ ಬಗೆಯನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ.

೧೬೨

ವಿಜಯದಾಸರು ಈ ಸುಳಾದಿಯಲ್ಲಿ ಎಲ್ಲ ಹರಿದಾಸರನ್ನು ಸ್ತೋತ್ರ ಮಾಡಿದ್ದಾರೆ. ಪುರಂದಾಸರ ಸಮಕಾಲೀನರೂ ಸ್ವಲ್ಪ ಪೂರ್ವದಲ್ಲಿದ್ದ ಹರಿದಾಸರಾದ ಆದ್ಯರನ್ನು ಸ್ಮರಿಸಿರುವುದು ಗಮನಾರ್ಹ. ಈ ಆದ್ಯರ ಗುಂಪಿಗೆ ಸೇರಿದ ಎಲ್ಲ ಹರಿದಾಸರು ಎಲ್ಲ ಕೃತಿಗಳೂ ನಮಗೆ ಇನ್ನು ದೊರೆತಿಲ್ಲ. ಈ ಹರಿದಾಸರೆಲ್ಲರ ಕೃಪೆ ಪ್ರಸಾದ ತಮಗೆ ದೊರಕುವಂತಾಗಲೆಂದು ದಾಸರು ಕೇಳಿಕೊಂಡಿದ್ದಾರೆ.

ಅನುಬಂಧ–೩

ಸುಳಾದಿಗಳ ಅಕಾರಾದಿ

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
	ಸುಳಾದಿಗಳು		
೧.	ಅಂಜಿಸುವುದೇನೊ	೧೩೦	೩೫೪
೨.	ಅಂಜುವೆವು ನಿನ್ನ ಕಪಟನಾಟಕ	೧	೩
೩.	ಅಕಳಾಂಕ ಚರಿತಾ	೯೧	೨೩೭
೪.	ಅಚ್ಯುತಾನಂತ ಕೃಷ್ಣ ಗೋವಿಂದ	೯೨	೨೩೯
೫.	ಅಂದಿಗೆ ಪೊಂಗೆಜ್ಜೆ	೧೫೨	೪೧೭
೬.	ಅಂದೆ ಹರಿಮೆರೆದರು	೨	೭
೭.	ಅನಾಥ ಬಂಧು ದೀನದಯಾಳು	೯೩	೨೪೨
೮.	ಅಪೇಕ್ಷೆ ಎನ್ನದಿದೆ	೩	೯
೯.	ಅಬ್ಬಾಪಾರಿಗ ನಾನು	೪	೧೨
೧೦.	ಆಟವಲ್ಲವು ಕಪಟನಾಟಕ	೫	೧೭
೧೧.	ಆ ಮಹಾ ಎರಡು ವರ್ಣಾಸಂಧಿ	೬	೨೦
೧೨.	ಆಯು ವೃದ್ಧಿಯಾಗೋದು	೧೨೦	೩೨೧
೧೩.	ಆವನ್ನ ದಯದಿಂದ	೯೪	೨೪೪
೧೪.	ಇತರ ಸ್ತೋತ್ರರ ಮಾಡಿ	೭	೨೩
೧೫.	ಇದನೆ ಬೇಡುವೆ ಇಂದು	೮	೨೫
೧೬.	ಇಂದಿರಾಪತಿ ಬಂದಾ	೧೩೧	೩೫೭
೧೭.	ಇಂದು ಎನ್ನ ಮನೆಗೆ ಬಂದ	೯	೨೯
೧೮.	ಇದು ನಿನಗೆ ಆರಾಧನೆ	೧೦	೩೧

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
೧೯.	ಈ ಭಾಗ್ಯವೇ ಸಾಕು ಇಹದಲ್ಲಿ	೧೧	೩೩
೨೦.	ಈ ಮಾಯಾ ಸಂಸಾರ	೧೨	೩೬
೨೧.	ಈಸಲಾರೆನು ನಾನು	೧೩	೩೮
೨೨.	ಉಪಜೀವ್ಯ ನಿಜಾನಂದ	೧೧೫	೩೦೬
೨೩.	ಋಣದಿಂದ ಕಡೆ ಮಾಡು	೧೪	೪೦
೨೪.	ಎಂತು ಪೇಳಲಿ ನೀನು	೧೫	೪೨
೨೫.	ಎಂಥಾದೊ ನಿನ್ನ ಮಹಿಮೆ	೫೯	೨೪೭
೨೬.	ಎಂದಿಗೆ ಕೋಟಲೆ ತಪ್ಪುವುದೊ	೧೬	೪೪
೨೭.	ಎಂದಿಗೆ ನಿನ್ನ ಪಾದ	೧೭	೪೯
೨೮.	ಎಂದಿನಂತಿರದೆನ್ನ	೧೮	೫೧
೨೯.	ಎನ್ನ ಮಾತಾಪಿತರು	೧೯	೫೪
೩೦.	ಎರಗುವೆನಯ್ಯ ಎನ್ನ	೨೦	೫೫
೩೧.	ಎಲ ಎಲ ಎಲ ಎಲ ಎಲ ಎಲವೊ	೨೧	೫೭
೩೨.	ಏನು ಪೇಳಲಿ ಎನ್ನ	೨೨	೫೯
೩೩.	ಒಂದು ದಿವಸ ನಾರಂದ ಮುನೀಶ್ವರ	೧೫೮	೪೩೮
೩೪.	ಕಂಡ ಕಂಡವರ ಮನೆಯ	೨೩	೬೨
೩೫.	ಕಂಡ ಸ್ತ್ರೀಯರ ನೋಡಿ	೨೪	೬೫
೩೬.	ಕಡಗ ಕಂಕಣದಿಂದ ಶೋಭಿತವಾದ	೧೫೧	೪೧೫
೩೭.	ಕಡಲೊಳಗದ್ದಿ ಮೇಲೆ ಶೈಲ	೨೫	೬೮
೩೮.	ಕಣ್ಣು ಬಿಟ್ಟರೆ ಬಿಡೆನೊ	೨೬	೭೧
೩೯.	ಕಮಲವಾದೆನೆ ನಿನ್ನ ಮುಖವ	೨೭	೭೩
೪೦.	ಕರವಿಡಿದು ಪಾಲಿಪುದು	೨೮	೭೬
೪೧.	ಕರ್ಮಠ ನಾನು ದೇವ	೨೯	೭೮
೪೨.	ಕರವಿಡಿದೆತ್ತುವುದು	೩೦	೮೧
೪೩.	ಕಾಮ ಕಡಿಮ್ಯಾಗದು	೩೧	೮೩
೪೪.	ಕಾಮ ವೆಗ್ಗಳಿಸಿತು	೩೨	೮೬
೪೫.	ಕಾಯಯ್ಯೋ ದೇವ	೩೩	೮೯
೪೬.	ಕಾಯೇ ಲಕುಮಿ ಕಾಯೊ ವಿಠ್ಠಲ	೧೪೭	೪೦೪

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
೪೭.	ಕಾಲ ಬಿಡುವನೆ ಹರಿ	೩೪	೯೧
೪೮.	ಕೃಷ್ಣಾ ಕಮಲನಾಭಾ	೧೩೨	೩೬೦
೪೯.	ಕೈಯ ಬಿಡದಿರೊ ಹರಿ	೧೩೩	೩೬೫
೫೦.	ಕೊಡು ನಿನ್ನವರ ಸಂಗ	೩೫	೯೩
೫೧.	ಕೋತಿಯಾದರೆ ಬಿಡೆನೋ	೧೫೩	೪೨೩
೫೨.	ಗುರುಗಳೆಂದರೆ ಇವರೆ	೧೬೦	೪೪೩
೫೩.	ಗೊಲ್ಲನಾದಕ್ಕಿದೇ ಗುಣಗಳ	೧೩೪	೩೬೬
೫೪.	ಚರಣವ ನಂಬಿದೆನೊ	೩೬	೯೬
೫೫.	ಚರಣವ ಬಿಡೆನೊ	೩೭	೯೮
೫೬.	ಚಿಂತೆ ವೆಗ್ಗಳಿಸಿತು	೩೮	೧೦೦
೫೭.	ಛಲವೆ ಎನ್ನದು ಇಂದು	೩೯	೧೦೪
೫೮.	ಜನಿಸಿದೆನೊ, ಹಿಂದೆ	೪೦	೧೦೭
೫೯.	ಜಯ ಜಯವೆಂದು	೧೨೩	೩೨೯
೬೦.	ಜಯಜಯ ಜಾನ್ಹವಿಜನಕ	೧೧೮	೩೧೪
೬೧.	ಜಯರಾಯ ಜಯರಾಯ	೧೫೬	೪೩೨
೬೨.	ಜಲಜಸಂಭವನ ಪಟ್ಟಕ್ಕೇರುವ	೧೫೦	೪೧೨
೬೩.	ಜ್ಞಾನಿಯೆ ನಾನಲ್ಲ	೪೧	೧೦೯
೬೪.	ತಡಿಯಾ ಕೊಡುವುದಿಂದು	೧೩೫	೩೭೦
೬೫.	ತಾತ್ಸಾರ ಮಾಡುವೆ ಎನಗಿಂತ ನೀಚರಲ್ಲಿ	೪೨	೧೧೧
೬೬.	ದತ್ತಾ ಯೋಗೀಶ ಯೋಗಿ	೧೧೭	೩೧೧
೬೭.	ದಯಮಾಡೊ ಎನ್ನೊಡೆಯಾ	೪೩	೧೧೪
೬೮.	ದಾಸ ನಿನಗೆ ನಾನು	೪೪	೧೧೭
೬೯.	ದಾಸನು ನಾನಲ್ಲ ದಾಸತ್ವ ಎನಗಿಲ್ಲ	೪೫	೧೧೯
೭೦.	ದಾಸರ ಮಹಿಮೆಗೆ ಅನಂತ ನಮೊ	೧೬೧	೪೪೬
೭೧.	ದುರ್ಗಾ ದುರ್ಗೆಯ ಮಹದುಷ್ಟ ಜನ	೧೪೬	೪೦೦
೭೨.	ದುರ್ಜನ ಶಿಖಾಮಣಿ ನಾನಯ್ಯ	೪೬	೧೨೨
೭೩.	ದುರಿತ ರಾಶಿಯ ಬಿಡಿಸು	೪೭	೧೨೫
೭೪.	ದೂರವಿದ್ದರೆ ಬಿಡೆನೊ	೪೮	೧೨೬

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
೭೫.	ದೊರಕುವುದೆ ಹರಿನಾಮಾ	೯೬	೨೫೦
೭೬.	ದೋಷ ಎನಗೆ ಉಂಟೆ	೪೯	೧೨೯
೭೭.	ದೋಷರಾಶಿಯ ಕಳೆದಮಲನ ಮಾಡು	೫೦	೧೩೧
೭೮.	ಧಾತ್ರಿತ್ರಯಕೆ ಗುರು	೧೪೮	೪೦೬
೭೯.	ನಂಬಿದೆ ಎಲೊ ಹರಿ	೯೭	೨೫೨
೮೦.	ನವ ರತುನದಿಂದಲೆಸೆವ	೧೩೬	೩೭೩
೮೧.	ನಮ್ಮಪ್ಪ ನಮ್ಮೊಡಿಯಾ ನಮ್ಮಣ್ಣ	೫೧	೧೩೩
೮೨.	ನಾಡೊಳಗೆ ಎನಗೆ ಈಡಾದ	೫೨	೧೩೬
೮೩.	ನ್ಯಾಯವ್ಯಾತಕೆ ದೇವ	೫೩	೧೪೦
೮೪.	ನಿನ್ನ ಇಚ್ಛೆಯಿಂದ ಬಂದ	೫೪	೧೪೩
೮೫.	ನಿನ್ನ ನಾಮ ಪೀಯೂಷಾನ್ನವೊ	೯೮	೨೫೪
೮೬.	ನೀ ಕಾಯದಿರೆ ಎನ್ನ ಕಾಯುವರಾರೋ	೧೩೭	೩೭೫
೮೭.	ನೀ ಕೈಯ ಕೃಪೆಯಿಂದ ಪಿಡಿದರೆ	೫೫	೧೪೬
೮೮.	ನೀ ಬಾರದಿರೆ ಈ ಕಳೇಬರ ವ್ಯರ್ಥ	೫೬	೧೪೯
೮೯.	ಪರರಾಧೀನವಾದ ದ್ರವ್ಯಂಗಳ ಬಯಸಿ	೫೭	೧೫೧
೯೦.	ಪರಿಪೂರ್ಣ ಕಾಮ ವಿಸ್ತರ ಮಹಿಮ	೯೯	೨೫೬
೯೧.	ಪಾದ ತೋರಿಸು ತೀರ್ಥಪಾದನೆ	೫೮	೧೫೪
೯೨.	ಪ್ರಾಣ ಅಪಾನ ವ್ಯಾನ ಸಮಾನ	೧೪೯	೪೦೯
೯೩.	ಪಿಂಡಾಂಡದಿಂದ ಪೊರಗಾಗಿ	೫೯	೧೫೬
೯೪.	ಪೂಜೆ ಯಾವುದು ನಿನಗೆ	೬೦	೧೫೮
೯೫.	ಪೂ ಬಾಡದಂತೆನ್ನ	೬೧	೧೬೧
೯೬.	ಪೂರ್ಣಗಣ್ಯಾ ಗುಣಾರ್ಣವ	೧೦೦	೨೬೦
೯೭.	ಪೊರೆಯೊ ಕರುಣದಲೆನ್ನ	೬೨	೧೬೩
೯೮.	ಬಂದು ನಿಂದವನಾರು	೧೦೧	೨೬೩
೯೯.	ಬಂದೆನೊ ಎಲೊ ಹರಿ	೬೩	೧೬೫
೧೦೦.	ಬಂದೆನೊ ಬಲು ತೊಳಲಿ	೬೪	೧೬೯
೧೦೧.	ಬಂದೆನೊ ಭವರೋಗ	೬೫	೧೭೧
೧೦೨.	ಬಂಧು ನಿನಗೆ ಎನದೊಂದಾದರೂ	೬೬	೧೭೪

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
೧೦೩.	ಬಳಲಿಪುದು ಸಲ್ಲ	೬೭	೧೭೬
೧೦೪.	ಬಾ ಎನ್ನ ಭಾಗ್ಯನಿಧಿ	೬೮	೧೮೦
೧೦೫.	ಬಾರದಿರೆ ನೋಡು	೬೯	೧೮೨
೧೦೬.	ಬಿಡದಹಂಕಾರ ಬಲು	೭೦	೧೮೪
೧೦೭.	ಬಿನ್ನಪ ಲಾಲಿಸಯ್ಯಾ	೧೩೮	೩೭೮
೧೦೮.	ಬೆಳಗಪ್ಪಾ ಝೂವದಲಿ	೧೩೯	೩೮೧
೧೦೯.	ಬೇಡುವೆನು ನಿನ್ನನಿದನೇ	೭೧	೧೮೭
೧೧೦.	ಭಕ್ತರಿಗೋಸುಗ	೧೦೨	೨೬೫
೧೧೧.	ಭಕುತರಿಗಾಪತ್ತು ಬರಲೀಸಾ	೧೦೩	೨೬೭
೧೧೨.	ಭವರೋಗ ಪರಿಹರಿಸೊ	೧೭೨	೧೯೦
೧೧೩.	ಭೀತಿಗೊಳಿಪುದೇನೊ	೭೩	೧೯೨
೧೧೪.	ಭೀಮಸೇನನೆ ಪೂರ್ಣ ಕಾಮನೆ	೧೫೪	೪೨೬
೧೧೫.	ಭೂವರಾಹ ಅವತಾರ ಶೃಂಗಾರ	೧೧೪	೩೦೩
೧೧೬.	ಮಂಜು ಕಿವಿ ಕಣ್ಣು	೭೪	೧೯೬
೧೧೭.	ಮಧ್ವವಲ್ಲಭ ಜಯ	೧೨೮	೩೪೭
೧೧೮.	ಮರುಳನ್ನ ಪರಿಹರಿಸೊ	೧೦೪	೨೭೨
೧೧೯.	ಮಾಧವನಂಘ್ರಿ ನಿತ್ಯ	೧೫೯	೪೪೦
೧೨೦.	ಮುತ್ತು ನವರತ್ನಮಯ	೧೪೦	೩೮೪
೧೨೧.	ಮುಸರಿಯಾ ಕರಣಿ ವಸುಧಿಯೊಳಗೆ	೭೫	೧೯೯
೧೨೨.	ಯತಿಗಳ ಶಿರೋರತುನಾ	೧೪೪	೩೯೫
೧೨೩.	ಯಾಕೆ ಸೇರಿದೆ ಎನ್ನ ಸಾಕುವ	೭೬	೨೦೧
೧೨೪.	ಯಾತರ ಶರಣನಯ	೭೭	೨೦೪
೧೨೫.	ಯಾತರಿಂದಲಿ ನಿನ್ನ ನಿಲಿಸಿಕೊಂಬೆನೊ	೭೮	೨೦೬
೧೨೬.	ಯಾತರೊಳಗೆ ಗಣನೆ ಎನ್ನಯ	೧೬೨	೪೪೮
೧೨೭.	ರಂಗ ನಿನ್ನ ಚರಣಂಗಳ ನಂಬಿದೆನೊ	೭೯	೨೦೯
೧೨೮.	ರಾಜ ರಾಜ ರಮಣಿ	೧೨೬	೩೪೦
೧೨೯.	ರುದ್ರಾಂತರ್ಗತ ನಾರಸಿಂಹ	೧೨೨	೩೨೭
೧೩೦.	ರೋಗ ನಿವಾರಣವಾಗುವುದಿದು	೧೦೫	೨೭೬

ಕ್ರಮ. ಸಂಖ್ಯೆ	ಸುಳಾದಿಯ ಪ್ರಾರಂಭದ ಸಾಲು	ಸುಳಾದಿಯ ಸಂಖ್ಯೆ	ಪುಟ ಸಂಖ್ಯೆ
೧೩೧.	ವಂದೆ ಮುಕುಂದ ಮುಚುಕುಂದ	೧೨೯	೩೫೦
೧೩೨.	ವಂದ್ಯಾನೆಂದರೆ ನೀನಿಂದು	೮೦	೨೧೧
೧೩೩.	ವ್ಯರ್ಥವಾಯಿತು ಜನನಾನರ್ಥ	೮೧	೨೧೩
೧೩೪.	ವಾಮನ ವಟು ಇಂದ್ರಾನುಜ	೧೨೪	೩೩೩
೧೩೫.	ವಿಜಯವಿಠ್ಠಲನೆ ಗಜರಾಜ ವರದನೆ	೮೨	೨೧೫
೧೩೬.	ವೀರಸಿಂಹನೆ ನಾರಸಿಂಹನೆ	೧೨೧	೩೨೪
೧೩೭.	ವೆಗ್ಗಳವಲ್ಲವಯ್ಯಾ	೧೧೩	೩೦೦
೧೩೮.	ಶರಣನಾಗುವೆ ಶರಣರ ಪರಿಪಾಲ	೮೩	೨೧೭
೧೩೯.	ಶ್ರೀ ಪಾದರಾಯ ಗುರುವೆ	೧೫೭	೪೩೫
೧೪೦.	ಶ್ರೀಮದ್ವಿಠಲ ಪಾದಾಂಬುಜ	೧೫೫	೪೨೯
೧೪೧.	ಶ್ರೀ ವಲ್ಲಭ ನಿನ್ನ ಕಾವೊ	೧೦೬	೨೭೮
೧೪೨.	ಸತತ ಬ್ರಹ್ಮಚಾರಿ ಎನಿಸಿಕೊಂಡು	೧೪೧	೩೮೭
೧೪೩.	ಸತ್ಯವತಿ ಪುತ್ರ ದುರ್ಗಾಕಳತ್ರ	೧೨೫	೩೩೭
೧೪೪.	ಸದಾ ನಿನ್ನ ಭಕುತರ ಚರಣಕ್ಕೆ	೧೪೨	೩೯೦
೧೪೫.	ಸ್ವರ್ಗತಿ ನಿರ್ಗತಿ ಸಕಲ ನಿಗಮ	೧೪೩	೩೯೩
೧೪೬.	ಸಾರಥಿಯಾಗಿ ಪಾರ್ಶ್ವದನಾಗಿ	೮೪	೨೧೯
೧೪೭.	ಸಿದ್ಧಿದಾಯಕ ಶಿಷ್ಯಜನ ಪರಿಪಾಲ	೧೧೬	೩೦೮
೧೪೮.	ಸಿಂಧುತನಯಳರಮಣ	೮೫	೨೨೩
೧೪೯.	ಸಿಕ್ಕಿದೆ ಸಂಸಾರ ಸಿಕ್ಕಿನೊಳಗೆ	೮೬	೨೨೫
೧೫೦.	ಸುಖದ ದೈವವೆಂದು ಸತತ	೮೭	೨೨೭
೧೫೧.	ಸುತ್ತ ವಿರಜಾನದಿ	೧೨೭	೩೪೩
೧೫೨.	ಸುತ್ತಿದೆ ಬಿಡದೆ ಈ ಮರ್ತ್ಯ ಲೋಕದಲ್ಲಿ	೮೮	೨೨೯
೧೫೩.	ಸುಳಿಕುಮಾಯನ ನಡುಸುಳಿಯಿಂದ	೧೦೭	೨೮೧
೧೫೪.	ಸುಳಿದವನಾರೆನ್ನ ಕಣ್ಣಮುಂದೆ	೧೪೫	೩೯೭
೧೫೫.	ಸುಳಿದು ಸುಳಿಯೊ ಎನ್ನ ಕಣ್ಣ ಮುಂದೆ	೮೯	೨೩೨
೧೫೬.	ಸೇರಿದೆನೊ ಬಂದು ಸಂಕಟದಲ್ಲಿ	೯೦	೨೩೪
೧೫೭.	ಸೌಭಾಗ್ಯವಂತ ಜಯತು	೧೧೯	೩೧೮
೧೫೮.	ಹಗರಣ ಮಾಡದಿರು ಹರಿಯೆ	೧೦೮	೨೮೪

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ
ದಾಸಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ ಜೆ.ಸಿ. ರಸ್ತೆ
ಬೆಂಗಳೂರು